ಸ್ತ್ರೀಶಕ್ತಿ ಗುಂಪುಗಳು–ಪರಿಶಿಷ್ಟ ಮಹಿಳೆಯರ ಆರ್ಥಿಕ ಸ್ಥಿತಿಗತಿ

(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

(ಅರ್ಥಶಾಸ್ತ್ರ ವಿಷಯದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕ
ಹನುಮಂತರಾಯುಡು ಬಿ

ಮಾರ್ಗದರ್ಶಕರು
ಡಾ. ಸಿದ್ಧಗಂಗಮ್ಮ
ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೮

ಸ್ತ್ರೀಶಕ್ತಿ ಗುಂಪುಗಳು–ಪರಿಶಿಷ್ಟ ಮಹಿಳೆಯರ ಆರ್ಥಿಕ ಸ್ಥಿತಿಗತಿ
(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

(ಅರ್ಥಶಾಸ್ತ್ರ ವಿಷಯದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕ
ಹನುಮಂತರಾಯಡು ಬಿ

ಮಾರ್ಗದರ್ಶಕರು
ಡಾ. ಸಿದ್ಧಗಂಗಮ್ಮ
ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

೨೦೧೮

ಪ್ರಮಾಣ ಪತ್ರ

ಸ್ತ್ರೀಶಕ್ತಿ ಗುಂಪುಗಳು–ಪರಿಶಿಷ್ಟ ಮಹಿಳೆಯರ ಆರ್ಥಿಕ ಸ್ಥಿತಿಗತಿ (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ನಿಬಂಧವನ್ನು ೨೦೧೮–೧೯ನೇ ಶೈಕ್ಷಣಿಕ ಸಾಲಿನಲ್ಲಿ ವಿಭಾಗದ ಪ್ರಾಧ್ಯಾಪಕರಾದ ಡಾ.ಸಿದ್ಧಗಂಗಮ್ಮ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ನಿಬಂಧವನ್ನು ಪೂರ್ಣವಾಗಿಯಾಗಲಿ, ಆಂಶಿಕವಾಗಿಯಾಗಲಿ ಯಾವುದೇ ಪದವಿಗಾಗಿ ಈ ಮೊದಲು ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 13/6/18
ಸ್ಥಳ : ವಿದ್ಯಾರಣ್ಯ

ಹನುಮಂತರಾಯುಡು ಬಿ.
ಪಿಎಚ್.ಡಿ ವಿದ್ಯಾರ್ಥಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಸ್ತ್ರೀಶಕ್ತಿ ಗುಂಪುಗಳು–ಪರಿಶಿಷ್ಟ ಮಹಿಳೆಯರ ಆರ್ಥಿಕ ಸ್ಥಿತಿಗತಿ (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಹನುಮಂತರಾಯಡು ಬಿ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಪ್ರಸ್ತುತ ನಿಬಂಧವಾಗಲೀ ಅಥವಾ ಯಾವುದೇ ಭಾಗವನ್ನಾಗಲೀ ಈ ಮೊದಲು ಬೇರೆ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 14/6/2018

ಸ್ಥಳ : ವಿದ್ಯಾರಣ್ಯ

ಡಾ. ಸಿದ್ಧಗಂಗಮ್ಮ
ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಡಾ. ಸಿದ್ಧಗಂಗಮ್ಮ
ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕ.ವಿ.ವಿ. ಹಂಪಿ

ಪರಿವಿಡಿ

ಅಧ್ಯಾಯ : ಒಂದು

ಪ್ರಸ್ತಾವನೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧. ಪ್ರಸ್ತಾವನೆ

ಸಾಮಾನ್ಯವಾಗಿ ಭಾರತವನ್ನೂ ಒಳಗೊಂಡಂತೆ ವಿಶ್ವದೆಲ್ಲೆಡೆ ಸಾಮಾಜಿಕ ಹಾಗೂ ಆರ್ಥಿಕ ವಲಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ರೂಪಿಸಲಾಗಿರುವ ಯೋಜನೆಗಳ ಉಪಯೋಗವನ್ನು ಪಡೆದುಕೊಳ್ಳುವಲ್ಲಿ ಬಹುತೇಕ ಮಹಿಳೆಯರು ವಂಚಿತರಾಗುತ್ತಿದ್ದಾರೆ. ಆದರೆ ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ ಪ್ರತೀ ಕುಟುಂಬದ ಆಧಾರ ಸ್ಥಂಭ ಮಹಿಳೆಯರೇ ಆಗಿದ್ದಾರೆ. ಇದನ್ನು ವ್ಯವಸ್ಥೆ ಒಪ್ಪದಿದ್ದರೂ ವಾಸ್ತವ ಸತ್ಯ. ಆದರೆ ಈ ಸತ್ಯ ಮರೆಯಾಗಿ ಪುರುಷವ್ಯವಸ್ಥೆಯ ಮೌಲ್ಯಗಳಡಿಯಲ್ಲಿ ಸಿಲುಕಿ ಮಹಿಳೆಯರು ಪರಾವಲಂಬಿಗಳಾಗಿದ್ದಾರೆ. ಹಾಗಾಗಿ ಅವರೂ ಸಹ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸ್ವಾವಲಂಬಿಗಳಾಗುವ ಅನಿವಾರ್ಯತೆ ಇದೆ. ಗಾಂಧೀಜಿಯವರು ಸಹ ಸಮಾಜವು ನಾಗರೀಕತೆಯ ಬಿಂಬವಿದ್ದಂತೆ, ಒಬ್ಬ ಮನುಷ್ಯನಿಗೆ ತರಬೇತಿ ನೀಡಿದರೆ ಕೇವಲ ಒಬ್ಬ ವ್ಯಕ್ತಿಗೆ ತರಬೇತಿ ನೀಡಿದಂತೆ, ಆದರೆ ಒಬ್ಬ ಮಹಿಳೆಗೆ ತರಬೇತಿ ನೀಡಿದರೆ ಒಂದು ರಾಷ್ಟ್ರವನ್ನು ಕಟ್ಟಿದಂತೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದುದರಿಂದ ಮಹಿಳೆಯರು ಸ್ವಾವಲಂಬಿಗಲಾದಾಗ ಮಾತ್ರ ಈ ಕನಸು ನನಸಾಗುವುದು.

ಹಳ್ಳಿಗಳಿಂದ ಕೂಡಿದ ಕರ್ನಾಟಕದಲ್ಲಿ ಮಹಿಳೆಯರು ಕೃಷಿ, ಕೈಗಾರಿಕೆ ಮೊದಲಾದ ವಲಯಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಮಹತ್ವದ ಪಾತ್ರವಹಿಸುತ್ತಿದ್ದಾರೆ. ಈ ಪಾಲ್ಗೊಳ್ಳುವಿಕೆ ಅವರ ಆರ್ಥಿಕ ಜೀವನಮಟ್ಟವನ್ನೇನೂ ಹೆಚ್ಚಿಸಿಲ್ಲ. ಬದಲಾಗಿ ಅವರ ಆರ್ಥಿಕ ಸ್ಥಿತಿ ಯಾಥಾಸ್ಥಿತಿಯಲ್ಲಿರುವುದನ್ನು ಕಾಣಬಹುದಾಗಿದೆ. ಹಾಗಾಗಿ ಅವರು ಆರ್ಥಿಕವಾಗಿ ಸದೃಡರಾಗಲು ಹಲವಾರು ಪ್ರಯತ್ನಗಳನ್ನು ಮಾಡುತ್ತಲೇ ಇದ್ದಾರೆ. ಅದರ ಒಂದು ಭಾಗವಾಗಿ ಸ್ತ್ರೀಶಕ್ತಿ ಸಂಘಗಳು, ಸ್ವ-ಸಹಾಯ ಗುಂಪುಗಳು ಹುಟ್ಟಿಕೊಂಡಿರುವುದನ್ನು ಕಾಣಬಹುದು. ಮೂಲಭೂತವಾಗಿ ಈ ಗುಂಪುಗಳು ಸಮಾನ ಮನಸ್ಕ ಜನರ ಒಂದು ಸಣ್ಣ ಗುಂಪಾಗಿದ್ದು, ಸದಸ್ಯರ ಆರ್ಥಿಕ ಆಶೋತ್ತರಗಳನ್ನು ಹಾಗೂ ಅವರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸುವ ಸಲುವಾಗಿ ಕಟ್ಟಿಕೊಂಡ ಸ್ವಾಯತ್ತ ಗುಂಪುಗಳಾಗಿವೆ. ಅವು ವಿವಿಧ ಕಾರ್ಯಗಳನ್ನು ಕೈಗೊಂಡರೂ ಪ್ರಮುಖವಾಗಿ ಉಳಿತಾಯ ಮತ್ತು ಸಾಲ ನಿರ್ವಹಣೆಯ ಮೇಲೆ ಹೆಚ್ಚು ಕೇಂದ್ರೀಕರಣಗೊಂಡಿವೆ. ಗ್ರಾಮೀಣ ಭಾಗಗಳಲ್ಲಿ ಸದಸ್ಯರೇ ತಾವಾಗಿ ಮಾಡಿಕೊಂಡ ನಿಯಮಗಳ ಆಧಾರದ ಮೇಲೆ ಇವು ಕೆಲಸ ನಿರ್ವಹಿಸುತ್ತಿವೆ. ಸಹಕಾರಿ ಸಂಘಗಳಲ್ಲಿ ಕಂಡುಬರುವ ಅದರ ವಿಭಿನ್ನ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಸ್ಥಿಗತಿಗಳಿಗೆ ಸಂಬಂಧಿಸಿದಂತೆ ಸ್ವ-ಸಹಾಯ ಗುಂಪುಗಳಲ್ಲಿ ಒಮ್ಮತವಿರುತ್ತದೆ. ಇವು ಸ್ವ-ಸಹಾಯ ಗುಂಪುಗಳಾಗಿ, ಸಾಹುಕಾರನಾಗಿ, ಅಭಿವೃದ್ಧಿ ಬ್ಯಾಂಕಾಗಿ ಸಹಕಾರಿ

ಸಂಸ್ಥೆಯಾಗಿ ಕೆಲಸ ಮಾಡುತ್ತಿವೆ. ಸದಸ್ಯರಲ್ಲಿ ಒಳ್ಳೆಯ ಹವ್ಯಾಸ ಹಾಗೂ ನೈತಿಕತೆಯನ್ನು ಬೆಳೆಸುತ್ತಾ ಸದಸ್ಯರ ಸರ್ವತೋಮುಖ ಅಭಿವೃದ್ಧಿಯಲ್ಲಿ ಕಾರ್ಯೋನ್ಮುಖವಾಗಿವೆ. ಹಾಗಾಗಿ ಗ್ರಾಮೀಣ ಪ್ರದೇಶಗಳಲ್ಲಿನ ಮಹಿಳೆಯರು ಆರ್ಥಿಕ ಅಸಮಾನತೆಯಿಂದ ಮುಕ್ತರಾಗಲು ಸ್ತ್ರೀಶಕ್ತಿ ಗುಂಪುಗಳನ್ನು ಕಟ್ಟಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ತ್ರೀಶಕ್ತಿ ಗುಂಪುಗಳಲ್ಲಿ ಎಲ್ಲ ಜಾತಿಯ ಮಹಿಳೆಯರು ಸೇರಿಕೊಂಡಿರುತ್ತಾರೆ. ಇದರಲ್ಲಿ ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳುವುದು ಪ್ರಸ್ತುತ ಅಧ್ಯಯನದ ಆಶಯ.

ಈ ದಿಸೆಯಲ್ಲಿ ಕರ್ನಾಟಕ ರಾಜ್ಯವು ಗ್ರಾಮೀಣ ಪ್ರದೇಶದ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸಬಲೀಕರಣಕ್ಕಾಗಿ ಸ್ತ್ರೀಶಕ್ತಿ ಯೋಜನೆಯನ್ನು ೨೦೦೦-೦೧ರಲ್ಲಿ ಜಾರಿಗೊಳಿಸಿದೆ. ಸ್ತ್ರೀಶಕ್ತಿ ಗುಂಪು ಎಂದರೆ "ಒಂದು ನಿರ್ದಿಷ್ಟ ಧ್ಯೇಯ ಮತ್ತು ಉದ್ದೇಶದೊಂದಿಗೆ ತಮಗೆ ತಾವೇ ಸಹಾಯವನ್ನು ಮಾಡಿಕೊಳ್ಳುವ ಸಮಾನ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯುಳ್ಳ ಮಹಿಳಾ ಸದಸ್ಯರನ್ನೊಳಗೊಂಡ ಒಂದು ಸಮೂಹವಾಗಿದೆ. ರಾಜ್ಯ ಸರಕಾರವು ಈವರೆಗೂ ೧.೪೦ಲಕ್ಷ ಗುಂಪುಗಳ ಮೂಲಕ ಮಹಿಳೆಯರ ಅಭಿವೃದ್ಧಿಗಾಗಿ ಹೆಚ್ಚಿನ ಅನುಧಾನವನ್ನು ಮೀಸಲಿಟ್ಟು ಬೃಹತ್ ಪ್ರಮಾಣದಲ್ಲಿ ಅವರನ್ನು ಸಂಘಟಿಸಲು ಪ್ರಯತ್ನಿಸಿರುವುದು ಒಂದು ಕ್ರಾಂತಿಕಾರಿ ಹೆಜ್ಜೆಯಾಗಿದೆ. ಅಲ್ಲದೇ ಸ್ತ್ರೀಶಕ್ತಿ ಯೋಜನೆಯ ಅನುಷ್ಠಾನದ ಬಗ್ಗೆ ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಗುಂಪಿನ ಸದಸ್ಯರಿಗೆ ಓರಿಯಂಟೇಶನ್, ನಾಯಕತ್ವ, ಸಂವಹನ, ಲೆಕ್ಕಪತ್ರ ನಿರ್ವಹಣೆ, ಸಾಲನಿರ್ವಹಣೆ ಹಾಗೂ ಸಾಮಾಜಿಕ ವಿಷಯಗಳ ಬಗ್ಗೆ ವಿವಿಧ ಹಂತಗಳಲ್ಲಿ ತರಬೇತಿ ನೀಡಲಾಗುತ್ತಿದೆ.

ಇಷ್ಟೆಲ್ಲಾ ಅವಕಾಶಗಳಿದ್ದರೂ ಗ್ರಾಮೀಣ ಭಾಗದ ಪರಿಶಿಷ್ಟ ಜಾತಿ/ಪಂಗಡದ ಮಹಿಳೆಯರು ಸ್ತ್ರೀಶಕ್ತಿ ಸಂಘಗಳ ಉಪಯೋಗಗಳನ್ನು ಸಕ್ರಿಯವಾಗಿ ಬಳಸಿಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ ಈ ವಿಫಲತೆಗೆ ಅವರು ಮಾತ್ರ ಹೊಣೆಗಾರರಲ್ಲ ಬದಲಾಗಿ ಸ್ತ್ರೀಶಕ್ತಿ ಗುಂಪುಗಳ ಹಿಂದೆ ಬಹುದೊಡ್ಡ ರಾಜಕಾರಣವಿರುವುದು ಸೂಕ್ಷ್ಮವಾಗಿ ಅವಲೋಕಿಸಿದಾಗ ತಿಳಿದುಬರುತ್ತದೆ. ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ಇಂತಹ ಸಂಘ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿರುವುದು ವಿಷಾದನೀಯ. ಜೊತೆಗೆ ಸರಕಾರದ ಯೋಜನೆಗಳು ಮತ್ತು ಜನರ ನಡುವೆ ಒಂದು ಅಂತರವನ್ನು ಈಗಾಗಲೇ ಸೃಷ್ಟಿಸಲಾಗಿದೆ. ಈ ಅಂತರ ಯೋಜನೆ ಸರಿಯಾಗಿ ಅನುಷ್ಠಾನಗೊಳ್ಳಲು ಸಾಧ್ಯವಾಗದ ರೀತಿಯಲ್ಲಿ ಇರುವುದನ್ನು ಕಾಣಬಹುದು. ಹಾಗಾಗಿ ಸ್ತ್ರೀಶಕ್ತಿ ಸಂಘಗಳ ಮೂಲ ಆಶಯ ಫಲಪ್ರದವಾಗುತ್ತಿಲ್ಲ. ಜೊತೆಗೆ ಪರಿಶಿಷ್ಟ ಮಹಿಳೆಯರೂ ಸಹ ಸಿಗುವಂತಹ ಆರ್ಥಿಕ ಧನಸಹಾಯವನ್ನು ಸಕ್ರಿಯವಾಗಿ ಬಳಸಿಕೊಳ್ಳುವ ಮನೋಭಾವನೆ ಬಹುತೇಕರಲ್ಲಿ

ಇಲ್ಲದಿರುವುದು ಸಹ ಇದರ ಮತ್ತೊಂದು ದೋಷ. ಇಷ್ಟೆಲ್ಲದರ ನಡುವೆಯೂ ಸ್ತ್ರೀಶಕ್ತಿ ಗುಂಪುಗಳನ್ನು ಸರಿಯಾದ ಹಾದಿಯಲ್ಲಿ ಸರಕಾರಗಳು ಮುನ್ನಡೆಸಿ ಅವುಗಳಿಂದ ಆಗುವ ಅನುಕೂಲಗಳನ್ನು ಮಹಿಳೆಯರಿಗೆ ತಿಳಿಹೇಳುವಂತೆ ಮಾಡಿದರೆ ದೇಶದ ಆರ್ಥಿಕ ವ್ಯವಸ್ಥೆಯೇ ಬದಲಾಗುತ್ತದೆ ಎಂಬ ಒಟ್ಟು ಆಶಯದಿಂದ ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೨.ಅಧ್ಯಯನದ ಸಮಿಕ್ಷೀಕರಣ

ರಿನ್‌ಝಿಮ್ ಮೌಸುಮಿದಾಸ್ (೨೦೦೪) ಅವರು ಸ್ವ-ಸಹಾಯ ಗುಂಪುಗಳ ಮೂಲಕ ಸೂಕ್ಷ್ಮ ಹಣಕಾಸು ಎಂಬ ಲೇಖನದಲ್ಲಿ ಬಡಜನರಿಗೆ ಬಡತನದಿಂದ ಮೇಲೆ ಬರಲು ಸ್ವ-ಸಹಾಯ ಗುಂಪುಗಳ ಮೂಲಕ ಸೂಕ್ಷ್ಮ ಹಣಕಾಸು ಒಂದು ನಿಚ್ಚಣಿಕೆಯಾಗಿದೆ. ಇದು ಕೇವಲ ಆರ್ಥಿಕವಾಗಿ ಅಲ್ಲದೇ ಸಾಮಾಜಿಕ, ಮಾನಸಿಕ ಮತ್ತು ಭಾವನಾತ್ಮಕವಾಗಿ ಸದೃಢರಾಗಲು ಸಹಾಯ ಮಾಡುತ್ತದೆ ಎಂದು ವಿಶ್ಲೇಷಿಸಿದ್ದಾರೆ. ಸೂಕ್ಷ್ಮ ಹಣಕಾಸು ಕೇವಲ ಸಾಲ ಕೊಡುವ ಭಾಗವಷ್ಟೇ ಅಲ್ಲ. ಇದರ ಜೊತೆಗೆ ಉಳಿತಾಯ ಮತ್ತು ವಿಮೆಯ ಭಾಗವು ಆಗಿರುತ್ತದೆ. ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕಾರ್ಲ್ (೧೯೯೫) ಅವರು ಸಬಲೀಕರಣ, ಮಹಿಳಾ ಭಾಗವಹಿಸುವಿಕೆ ಮತತ್ತು ನಿರ್ಧಾರ ಕೈಗೊಳ್ಳುವಿಕೆ ಎಂಬ ಲೆಖನದಲ್ಲಿ ಮಹಿಳೆಯರು ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರವನ್ನು ಮತ್ತು ಬಹುಮುಖಿ ಪ್ರಕ್ರಿಯೆಯನ್ನು ಸಬಲೀಕರಣ ಎಂದು ತೀರ್ಮಾನಿಸಿದರು. ಸಾಮೂಹಿಕ ಶಕ್ತಿಸಾಧಿಸಲು ಸಂಚಯನ ಒಳಗೊಂಡ ಸಂಪನ್ಮೂಲಗಳನ್ನು ಯೋಜನಾ ನಿರ್ಧಾರಗಳು, ನಿರ್ವಹಣೆ, ತಾಂತ್ರಿಕ ಕೌಶಲ್ಯಗಳು ಮತ್ತು ಸ್ಥಳೀಯ ಮಹಿಳೆಯರ ಪ್ರತಿಫಲಿತ ಸಾಮರ್ಥ್ಯ ಮತ್ತು ಸಹಕಾರ ಹೆಚ್ಚಾಗಿದೆ ಎಂದು ವಿಶ್ಲೇಷಿಸಿದ್ದಾರೆ.

ವೇಲುರಾಜ್ (೨೦೦೧) ಅವರು `Self Help groups an alternative apprpach to empower rural Women' ಎಂಬ ಲೇಖನದಲ್ಲಿ ನೋಬೆಲ್ ಪುರಸ್ಕೃತ ಮತ್ತು ಭಾರತದ ಅರ್ಥಶಾಸ್ತ್ರಜ್ಞ ಅಮಾರ್ತ್ಯಸೇನ್ ರವರ ಮಾತುಗಳಲ್ಲಿ "ಅಭಿವೃದ್ಧಿಶೀಲ ದೇಶಗಳಲ್ಲಿ ಮಹಿಳಾ ಸಬಲೀಕರಣವನ್ನು ಹೊರತುಪಡಿಸಿ, ಸಾಕ್ಷರತೆ, ಆರೋಗ್ಯ ಮತ್ತು ಜನಸಂಖ್ಯೆ ಸ್ಫೋಟದಂತಹ ಮುಂತಾದ ಪರಿಹರಿಸಲಾಗದ ಸಮಸ್ಯೆಗಳು ಇನ್ನು ಉಳಿದಿವೆ" ಭಾರತದಲ್ಲಿ ಇನ್ನೂ್ ಬಹುತೇಕ ಮಹಿಳೆಯರು ಮನೆಯಲ್ಲಿ ಮತ್ತು ಕೃಷಿಯಲ್ಲಿ ತಮ್ಮ ಸಾಂಪ್ರದಾಯಿಕ ಪಾತ್ರಗಳನ್ನು ಮುಂದುವರಿಸುತ್ತಿದ್ದಾರೆ. ಮಹಿಳೆಯರು ಪುರುಷರ ಪತ್ನಿಯರಾಗಿ, ಅವರನ್ನು ಪ್ರಸ್ತುತ ಸನ್ನಿವೇಶದಲ್ಲಿ ಪುರುಷರ ಮೆಲೆ ಅವಲಂಭಿಸಲು ಒತ್ತಾಯಿಸುತ್ತದೆ. ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯ ಶೇ.೮ ಮೀರಿ ಎಂದಿಗೂ ಇಲ್ಲ ರಾಜ್ಯ ಸಭೆಗಳಲ್ಲಿ ಶೇ.೧೦ರಷ್ಟು. ಶೇ.೧೬ರಷ್ಟು ಸರ್ಕಾರಿ ಆಡಳಿತಾತ್ಮಕ ಮತ್ತು ಹಿರಿಯ ನಿರ್ವಹಣಾ ಹುದ್ದೆಗಳಲ್ಲಿದ್ದಾರೆ. ಆದ್ದರಿಂದ ಇಲ್ಲಿ ಯಾವುದೇ ರೀತಿಯ ಸಮಾನ ಅವಕಾಶವಿಲ್ಲ ಎಂದು ಹೇಳಿದ್ದಾರೆ.

ಬಿನ ಅಗರವಾಲ್ (೨೦೦೧) ಅವರು ಭೂಮಿ ಹಕ್ಕುಗಳು ಮತ್ತು ಲಿಂಗ ಸಮಾನತೆ ಎಂಬ ಲೇಖನದಲ್ಲಿ ಮಹಿಳಾ ಕಲ್ಯಾಣ ಮತ್ತು ಸಬಲೀಕರಣಕ್ಕೆ ಸುರಕ್ಷಿತ ಮತ್ತು ಪರಿಣಾಮಕಾರಿ ಭೂಮಿ ಹಕ್ಕುಗಳಿಗೆ ನಿರ್ಣಾಯಕ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಆದರೆ ಈ ಅವಶ್ಯಕತೆಗಳನ್ನು ಸಾಧಿಸಲು ಲಿಂಗ ಪ್ರಗತಿಪರ ಸಂಘಟನೆಗಳು, ವಿಶೇಷವಾಗಿ ಮಹಿಳಾ ಗುಂಪುಗಳು ಸತತ ಪ್ರಯತ್ನಗಳ ಅಗತ್ಯವಿದೆ. ಯಾರು ಮಹಿಳೆಯರ ಸಬಲೀಕರಣ ಬಡತನ ಮತ್ತು ನ್ಯಾಯಸಮ್ಮತ ಅಭಿವೃದ್ಧಿಯ ಬಗ್ಗೆ ಶ್ರಮಿಸುತ್ತಾರೋ ಅವರಿಗೆ ಸರ್ಕಾರ ಬೆಂಬಲಿಸುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ರಾಜೀವ್ ಐ.ಎನ್ (೨೦೦೫) ಅವರು An alternative approach to micro credit lindages : An Exploration in to SHG Federation ಎಂಬ ಲೇಖನದಲ್ಲಿ ಬಡತನ ನಿರ್ಮೂಲನಾ ಕಾರ್ಯಕ್ರಮದಲ್ಲಿ ಮೈಕ್ರೋ ಕ್ರೆಡಿಟ್ ಅತ್ಯಂತ ಮಹತ್ವದ ಉಪಕರಣಗಳಲ್ಲಿ ಒಂದಾಗಿದೆ. ಕಳಪೆ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮೈಕ್ರೋ ಕ್ರೆಡಿಟ್ ಅವಕಾಶ ಮಾಡಿಕೊಡುತ್ತದೆ. ಮೈಕ್ರೋ ಕ್ರೆಡಿಟ್ ಅಲ್ಪಾವಧಿಯವರೆಗೆ ಮರುಪಾವತಿಸಲ್ಪಡುವಂತೆ ಚಿಕ್ಕ ಸಾಲ ಒದಗಿಸುತ್ತದೆ ಮತ್ತು ಮುಖ್ಯವಾಗಿ ಮೇಲಾಧಾರವಾಗಿ ಬಳಸಬಹುದಾದ ಕಡಿಮೆ ಆದಾಯದ ವ್ಯಕ್ತಿಗಳು ಮತ್ತು ಕೆಲವು ಸ್ವತ್ತುಗಳನ್ನು ಹೊಂದಿರುವ ಕುಟುಂಬಗಳು ಬಳಸಲ್ಪಡುತ್ತವೆ. ಹೊರತಾಗಿಯೂ ಹಣಕಾಸಿನ ಗುರಿಯನ್ನಿಟ್ಟುಕೊಂಡು ಗುಂಪು ಸಾಲಗಾರರಲ್ಲಿ ವಾಣಿಜ್ಯ ಬ್ಯಾಂಕುಗಳು ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮಾಡಿದ ಪ್ರಯತ್ನಗಳು ಶ್ಲಾಘನೀಯ. ಬ್ಯಾಂಕ್ ಆಫ್ ಫಾರ್ಮಲ್ ವ್ಯವಸ್ಥೆ ಅತಿ ಸಣ್ಣ ರೈತರು, ಸಣ್ಣ ರೈತರು, ಭೂರಹಿತ ಕೃಷಿ ಕಾರ್ಮಿಕರು ಮತ್ತು ಗ್ರಾಮೀಣ ಕುಶಲಕರ್ಮಿಗಳು ಮುಂತಾದ ಕಡುಬಡವರಿಗೆ ಸಾಲ ಕೊಡುವುದಕ್ಕೆ ಇನ್ನೂ ಅಸ್ತಿತ್ವದಲ್ಲಿವೆ. ಎಲ್ಲ ಬ್ಯಾಂಕುಗಳಿಂದ ಸಾಲ ಯೋಜನೆಯ ವಿಧಾನ ಅಳವಡಿಸಿಕೊಳ್ಳಲು ಕಷ್ಟವಾಗುತ್ತದೆದೆಯೋ ಮತ್ತು ಎಲ್ಲಿ ಅನುಭೋಗಕ್ಕಾಗಿ ಸಾಲ ಹಾಗೂ ಉತ್ಪಾದಕ ಉದ್ದೇಶಕ್ಕಾಗಿ ಪ್ರತ್ಯೇಕಿಸುವ ರೇಖೆ ಮುಸುಕಾಗಿರುವಂತಹ ಸಮಯದಲ್ಲಿ ಗ್ರಾಮೀಣ ಬಡಜನರು ಕ್ರೆಡಿಟ್ ಅಗತತ್ಯಗಳನ್ನು ಒಂದು ಸಂಕೀರ್ಣವಾದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯಲ್ಲಿ ನಿರ್ಧರಿಸಲಾಗುತ್ತದೆ. ಈ ಸಂದರ್ಭಗಳಲ್ಲಿ ಬಡವರಿಗೆ ಸಾಲದ ಪೂರೈಕೆ ಅಲ್ಲದೆ ಔಪಚಾರಿಕ ಸಂಸ್ಥೆ ಅಗತ್ಯ ಎಂದು ಪರಿಗಣಿಸಲಾಗಿದೆ. ಸ್ವ-ಸಹಾಯ ಗುಂಪುಗಳು ಸಾಮಾಜಿಕ, ಆರ್ಥಿಕ ಮತ್ತು ಹಣಕಾಸಿನ ಸಹಾಯವನ್ನು ಪಡೆದು ಆರ್ಥಿಕ ಸಬಲರಾಗಲು ಬೆಳಕಿಗೆ ಬಂದಿವೆ. ಈ ಎಲ್ಲಾ ಸಮಸ್ಯೆಗಳನ್ನು ಸ್ವಯಂ ಸೇವಾ ರೀತಿಯಲ್ಲಿ ಕ್ರೆಡಿಟ್ ಮೂಲಕ ಯಶಸ್ವಿ ಮಾರ್ಗಗಳನ್ನು ತಲುಪಿದೆ. ಗ್ರಾಮೀಣ ಸಾಲ ಒದಗಿಸುವಿಕೆಗೆ ಉತ್ತಮ ಗುಣಮಟ್ಟದ ನಿರ್ವಹಣೆಯ ರಚನೆಯನ್ನು ನಿರ್ಮಿಸಲು ತಳಮಟ್ಟದಿಂದ ಗುಂಪುಗಳು ಮಹತ್ವದ ಹೆಜ್ಜೆಯನ್ನು ಇಟ್ಟಿವೆ ಎಂದು ಗುರುತಿಸಿದ್ದಾರೆ. ರಶೀದಾ ಭಗತ್ (೨೦೦೪) ಅವರು ಇಂಡಿಯಾ ಇಂಟೀರಿಯರ್ ಎಂಬ ಲೇಖನದಲ್ಲಿ ಮಹಿಳಾ ಸ್ವ-ಸಹಾಯ ಗುಂಪುಗಳ ಮತ್ತು ಸೂಕ್ಷ್ಮ ಹಣಕಾಸಿನ ಬಗ್ಗೆ ಮಾನವನ

ಭಾವನೆಯಲ್ಲಿ ಒಂದು ಬೃಹತ್ ಮಟ್ಟದಲ್ಲಿ ಬದಲಾವಣೆಯಾಗಿದೆ ಎಂದು ಹೇಳಿದ್ದಾರೆ. ಕಳೆದ ೧೦ ವರ್ಷಗಳಲ್ಲಿ ಬ್ಯಾಂಕುಗಳ ಪ್ರವೃತ್ತಿ ಗಣನೀಯವಾಗಿ ಬದಲಾಗಿದ್ದು, ಅಲ್ಲಿ ಕಾಣಿಸಿಕೊಳ್ಳುವ ವ್ಯತ್ಯಾಸವೆಂದರೆ ಮಹಿಳಾ ಗುಂಪುಗಳನ್ನು ನೋಡುವ ದೃಷ್ಟಿಕೋನ ಬದಲಾವಣೆಯಾಗಿರುವುದರಿಂದ ಈ ಕಾರ್ಯಕ್ರಮ ಪ್ರಮುಖ ಯಶಸ್ವಿಯನ್ನು ಸಾಧಿಸಿದೆ ಎಂದು ಹೇಳಿದ್ದಾರೆ.

ಮನಿವೆಲ್ (೨೦೧೪) ಅವರು Women Entrepreneurs-problems and factors Influencing Enterprises ಎಂಬ ಲೇಖನದಲ್ಲಿ ಭಾರತದಲ್ಲಿ ಮಹಿಳೆಯರ ಉದ್ಯಮಶೀಲತೆ ಇನ್ನೂ ಬಾಲ್ಯವ್ಯವಸ್ಥೆಯಲ್ಲಿದ್ದು, ಇದು ದಿನದಿಂದ ದಿನಕ್ಕೆ ದುಃಸ್ಥಿತಿ ಪಡೆಯುತ್ತಿದೆ. ಇದನ್ನು ಎತ್ತಿ ತೋರಿಸುತ್ತಾ ಅವರು ಹೆಚ್ಚಾಗಿ ಬಳಲುತ್ತಿದ್ದಾರೆ. ಅವಳ ಒಳಗೊಳ್ಳುವಿಕೆ, ಕಡಿಮೆ ಕೆಲಸದ ಭಾಗವಹಿಸುವಿಕೆ ಪ್ರಮಾಣದಲ್ಲಿ ಗುರುತಿಸಲ್ಪಟ್ಟಿದ್ದು, ತುಂಬಾ ಕಡಿಮೆ ಕೌಶಲ್ಯ ಉದ್ಯೋಗಗಳು ಮತ್ತು ವಿಪರೀತವಾಗಿ ಆರ್ಥಿಕ ವಲಯದಲ್ಲಿ ಗುರುತಿಸಲಾಗದ ಸ್ಥಿತಿಯಲ್ಲಿದ್ದಾರೆ. ಇಂದು ಮಹಿಳೆಯರು ಶಿಕ್ಷಣದಲ್ಲಿ ಮತ್ತು ವೃತ್ತಿಪರ ಅಧ್ಯಯನಗಳಲ್ಲಿ ಪುರುಷರಿಗಿಂತ ಹೆಚ್ಚಿನ ಅವಕಾಶಗಳನ್ನು ಪಡೆಯುತ್ತಿರುವುದನ್ನು ಕಾಣಬಹುದು.

ಶಿವಕುಮಾರಸ್ವಾಮಿ ಸಿ. (೨೦೧೭) ಅವರು ಸ್ವ-ಸಹಾಯ ಸಂಘಗಳು ಮತ್ತು ಗ್ರಾಮೀಣ ಬಡತನ ಎಂಬ ಲೇಖನದಲ್ಲಿ ಭಾರತದಲ್ಲಿ ಸ್ವ-ಸಹಾಯ ಸಂಘಗಳ ಭೌಗೋಳಿಕ ಹಂಚಿಕೆಯಲ್ಲಿ ಏರುಪೇರುಗಳಿವೆ. ರಾಷ್ಟ್ರದ ಒಟ್ಟು ಸ್ವ-ಸಹಾಯ ಸಂಘಗಗಳಲ್ಲಿ ಆಂಧ್ರಪ್ರದೇಶದ ರಾಜ್ಯ ಒಂದೇ ಶೇ.೩೦.೫೮ರಷ್ಟು ಸಂಘಗಳನ್ನು ಹೊಂದಿದ ಮೊದಲ ರಾಜ್ಯವಾಗಿದೆ. ಅದೇ ರೀತಿ ಅತೀ ಕಡಿಮೆ ಸ್ವ-ಸಹಾಯ ಸಂಘಗಳನ್ನು ಹೊಂದುವುದರೊಂದಿಗೆ ಶೇ.೦.೧೯ರಷ್ಟು ಪಂಜಾಬ್ ಕೊನೆಯ ಸ್ಥಾನದಲ್ಲಿದೆ. ಅಸ್ಸಾಂ, ಬಿಹಾರ, ಜಾರ್ಖಂಡ್, ಮಧ್ಯಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ಸ್ವ-ಸಹಾಯ ಸಂಘಗಳ ಬೆಳವಣಿಗೆ ತೀರಾ ಕಡಿಮೆಯಿದೆ. ಅಂದರೆ ಈ ರಾಜ್ಯಗಳಲ್ಲಿ ಗ್ರಾಮೀಣ ಮಹಿಳಾ ಸಬಲೀಕರಣಕ್ಕೆ ಒಟ್ಟಾರೆಯಾಗಿ ಸಾಮಾಜಿಕ ಪರಿಸರ ಹಿತಕರವಾಗಿಲ್ಲ ಎಂದೆನಿಸುತ್ತದೆ. ಆದಾಗ್ಯೂ ಎಲ್ಲಾ ರಾಜ್ಯಗಳ ಹಾಗೆ ಕೇಂದ್ರಾಡಳಿತ ಪ್ರದೇಶಗಳ ಒಟ್ಟು ೪೮೮ ಜಿಲ್ಲೆಗಳು ಸ್ವ-ಸಹಾಯ ಸಂಘಗಳ ಬ್ಯಾಂಕು ಸಂಪರ್ಕ ಯೋಜನೆಗೆ ಒಳಪಟ್ಟಿವೆ. ೨೧೫೫ ಸರ್ಕಾರೇತರ ಸಂಸ್ಥೆಗಳೊಂದಿಗೆ ೨೦೯ ಸಹಕಾರಿ ಬ್ಯಾಂಕುಗಳು, ೧೯೧ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ೪೪ ವಾಣಿಜ್ಯ ಬ್ಯಾಂಕುಗಳು, ಒಟ್ಟು ೪೪೪ ಬ್ಯಾಂಕುಗಳು ಸ್ವ-ಸಹಾಯ ಸಂಘಗಳು ಬ್ಯಾಂಕ್ ಸಂಪರ್ಕ ಕಾರ್ಯಕ್ರಮದಲ್ಲಿ ಕೈಜೋಡಿಸಿವೆ.

ಕೇಂದ್ರ ಸರಕಾರ ತನ್ನ ವಿಶ್ಲೇಷಣೆಯನ್ನು ಕನಿಷ್ಟ ವಿಧಾನದಿಂದ ಸಮಗ್ರ ವಿಧಾನದತ್ತ ಬದಲಾಯಿಸಿದೆ. ಹಾಗಾಗಿ ೨೦೦೦-೦೧ರಂದು ನಬಾರ್ಡ್ ನೆರವಿನೊಂದಿಗೆ "ಕಿರು ಹಣಕಾಸು ಅಭಿವೃದ್ಧಿ ನಿಧಿ"ಯನ್ನು ಸ್ಥಾಪಿಸಿದೆ. ಹಾಗೆಯೇ ಕೇಂದ್ರ ಸರಕಾರ ಕಿರುಪತ್ತಿನ ಕೇಂದ್ರದಲ್ಲಿ ವಿದೇಶಿ ಹೂಡಿಕೆಯನ್ನು ಉತ್ತೇಜಿಸಿದೆ. ಹೀಗಾಗಿ ಸ್ವ-ಸಹಾಯ ಸಂಘಗಳು ಆದಾಯ ಮತ್ತು ಉದ್ಯೋಗ ಸೃಷ್ಟಿ ಚಟುವಟಿಕೆಗಳಲ್ಲಿ ನಿರೀಕ್ಷಿತ

ಫಲಿತಾಂಶವನ್ನು ನೀಡಿವೆ. ಅವುಗಳು ಉತ್ಪಾದಿತ ಚಟುವಟಿಕೆಗಳನ್ನು ಸಂಘಟಿಸಿವೆ ಮತ್ತು ಉಳಿತಾಯಗಳನ್ನು ಹಾಗೂ ಹೂಡಿಕೆಯ ಮಟ್ಟವನ್ನು ಹೆಚ್ಚಿಸಿವೆ. ಒಟ್ಟಾರೆಯಾಗಿ ಹೇಳುವುದಾದರೆ, ಸ್ವ-ಸಹಾಯ ಸಂಘಗಳು ಗ್ರಾಮೀಣ ಬಡಮಹಿಳೆಯರನ್ನು ಸಬಲೀಕರಣಗೊಳಿಸುವುದರೊಂದಿಗೆ ಬಡತನ ರೇಖೆಯಿಂದ ಮೇಲಕ್ಕೆ ಬರುವಲ್ಲಿ ಪ್ರಾಮೀಣಕ ಪ್ರಯತ್ನಗಳನ್ನು ಮಾಡಿವೆ ಎಂದು ತಿಳಿಸಿದ್ದಾರೆ.

ಕೆ. ಮಂಜಪ್ಪ ಮತ್ತು ಹನುಮಂತರಾಯುಡು ಬಿ. (೨೦೧೭) ಅವರು ಸ್ವ-ಸಹಾಯ ಗುಂಪುಗಳ ಮುಖಾಂತರ ಪರಿಶಿಷ್ಟ ಪಂಗಡದ ಮಹಿಳಾ ಸಬಲೀಕರಣ ಎಂಬ ಲೇಖನದಲ್ಲಿ ಪರಿಶಿಷ್ಟ ಪಂಗಡದ ಮಹಿಳೆಯರು ಸ್ವ-ಸಹಾಯ ಗುಂಪುಗಳಿಗೆ ಸದಸ್ಯರಾದ ನಂತರ ಮಹಿಳೆಯರ ಆದಾಯದಲ್ಲಿ ಹೆಚ್ಚಳವಾಗಿರುವುದು ತಿಳಿದುಬಂದಿದೆ. ಆದರೆ ಉಳಿತಾಯವು ನಿಧಾನಗತಿಯಲ್ಲಾಗಿದ್ದು, ವೆಚ್ಚವು ಅಧಿಕವಾಗಿರುವುದು ಮತ್ತು ಇದನ್ನು ಮನೆಯ ದಿನನಿತ್ಯ ಬಳಕೆಗಾಗಿ ಬಳಸಿರುವುದು ಕಂಡುಬಂದಿದೆ. ಸದಸ್ಯರುಗಳು ಇದನ್ನು ಉತ್ಪಾದನೆಗಾಗಿ ಉಪಯೋಗಿಸದಿದ್ದರೂ, ಅವಧಿಗೆ ಸರಿಯಾಗಿ ಸಾಲದ ಮರುಪಾವತಿ ಮಾಡಿರುವುದು ಕಂಡುಬಂದಿದೆ. ಕೆಲವು ಸದಸ್ಯರು ಸರಿಯಾದ ಸಮಯಕ್ಕೆ ಸಾಲವನ್ನು ಮರುಪಾವತಿಸಿಲ್ಲದಿದ್ದರೂ ಸ್ವ-ಸಹಾಯ ಗುಂಪುಗಳ ಮೇಲೆ ಯಾವುದೇ ರೀತಿಯಾದ ಪರಿಣಾಮವನ್ನು ಉಂಟುಮಾಡಿಲ್ಲ. ಹಾಗಾಗಿ ಇಲ್ಲಿ ನಿರ್ಧರಿಸಬಹುದಾದ ಅಂಶವೆಂದರೆ ಸ್ವ-ಸಹಾಯ ಗಂಪುಗಳು ಆರ್ಥಿಕ ಚಟುವಟಿಕೆಗಳು ಯಶಸ್ಸನ್ನು ಕಂಡಿವೆ. ಆದ್ದರಿಂದ ಬಳ್ಳಾರಿ ತಾಲ್ಲೂಕಿನ ನೆಲ್ಲೂಡಿ ಕೊಟ್ಟಾಲ ಗ್ರಾಮದ ಪರಿಶಿಷ್ಟ ಪಂಗಡದ ಸ್ವ-ಸಹಾಯ ಗುಂಪುಗಳು ಮಹಿಳಾ ಸಬಲೀಕರಣ ಮತ್ತು ಗ್ರಾಮೀಣ ಪ್ರದೇಶಗಳ ಬೆಳವಣಿಗೆಯಲ್ಲಿ ಯಶಸ್ಸನ್ನು ಸಾಧಿಸಿವೆ ಎಂಬ ತೀರ್ಮಾನಕ್ಕೆ ಬರಬಹುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಭಾಗ್ಯಮ್ಮ. ಎನ್ (೨೦೧೮) ಅವರು ಸ್ವ-ಸಹಾಯ ಸಂಘಗಳ ಮೂಲಕ ಮಹಿಳಾ ಸಶಕ್ತೀಕರಣ ಎಂಬ ಲೇಖನದಲ್ಲಿ ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪ್ರತಿವರ್ತಿಗಳು ಕುಟುಂಬದ ನಿರ್ವಹಣೆ ಮಾಡಲು ಶೇ.೮೮ರಷ್ಟು ಪ್ರತಿವರ್ತಿಗಳು ಬ್ಯಾಂಕಿನಿಂದ ಸಾಲವನ್ನು ಪಡೆಯುತ್ತಿದ್ದಾರೆ. ಬಹುತೇಕ ಸದಸ್ಯರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶೇ ೫೬ರಷ್ಟು ಪ್ರತಿವರ್ತಿಗಳು ಸಾಲ ಪಡೆಯುತ್ತಿರುವುದಾಗಿ ತಿಳಿಸಿದ್ದಾರೆ. ಶೇ.೮೪ರಷ್ಟು ಮಹಿಳೆಯರು ಕೌಟುಂಬಿಕ ಹಿಂಸೆ ಕಡಿಮೆಯಾಗಿದೆ ಎಂದು ತಿಳಿಸಿದ್ದಾರೆ. ಶೇ.೯೦ರಷ್ಟು ಪ್ರತಿವರ್ತಿಗಳು ಕುಟುಂಬವನ್ನು ನಡೆಸುವಂತಹ ಮನೋಸ್ಥೈರ್ಯವನ್ನು ಹೊಂದಿದ್ದಾರೆ. ಶೇ.೭೦ರಷ್ಟು ಪ್ರತಿವರ್ತಿಗಳು ಆರ್ಥಿಕ ಸ್ಥಿತಿ ಸುಧಾರಣೆಯಾಗಿದೆ ಎಂದು ತಿಳಿಸಿದ್ದಾರೆ. ಶೇ.೯೬ರಷ್ಟು ಪ್ರತಿವರ್ತಿಗಳು ಕೂಲಿ ಕೆಲಸವನ್ನು ಮಾಡುತ್ತಿರುವುಆಗಿ ತಿಳಿಸಿದ್ದಾರೆ. ಶೇ.೮೮ರಷ್ಟು ಸದಸ್ಯರು ಪ್ರಾಥರ್ಮಿಕ ಶಿಕ್ಷಣವನ್ನು, ಶೇ.೬ರಷ್ಟು ಸದಸ್ಯರು ಪ್ರೌಢಶಿಕ್ಷಣವನ್ನು ಮತ್ತು ಶೇ.೬ರಷ್ಟು ಸದಸ್ಯರು ಪದವಿಯನ್ನು ಪಡೆದಿರುವುದು ಕಂಡುಬಂದಿದೆ. ಶೇ.೯೬ರಷ್ಟು ಸದಸ್ಯರು ಸಾಮಾಜಿಕ ಸಮಸ್ಯೆಗಳಿಗೆ ಪ್ರತಿಭಟನೆ ನಡೆಸುವುದಾಗಿ ತಿಳಿಸಿದ್ದಾರೆ.

ಶೇ.೯೦ರಷ್ಟು ಸದಸ್ಯರು ಶಿಕ್ಷಣ ಪಡೆಯುತ್ತಿರುವುದರಿಂದ ಸಮಾಜದಲ್ಲಿ ಉತ್ತಮ ಸಾಧನೆ ಮಾಡಬಹುದು ಎಂದು ತಿಳಿಸಿದ್ದಾರೆ.

ಗ್ರಾಮೀಣ ಪ್ರದೇಶದ ಬಡಮಹಿಳೆಯರನ್ನು ಆರ್ಥಿಕ ಸಬಲರನ್ನಾಗಿಸುವ ಉದ್ದೇಶದಿಂದ ಸ್ತ್ರೀಶಕ್ತಿ ಯೋಜನೆಯನ್ನು ಜಾರಿಗೆ ತರಲಾಯಿತು. ಆದುದರಿಂದ ದೇಶದಾದ್ಯಂತ ಮಹಿಳೆಯರು ಸ್ತ್ರೀಶಕ್ತಿ ಗುಂಪುಗಳಲ್ಲಿ ಸದಸ್ಯತ್ವವನ್ನು ಪಡೆಯುತ್ತಿದ್ದಾರೆ. ಆದರೂ ಕೆಲವು ಕುಗ್ರಾಮಗಳಲ್ಲಿ ಸ್ತ್ರೀಶಕ್ತಿ ಗುಂಪುಗಳು ಇಲ್ಲದಿರುವುದು ಕಂಡುಬಂದಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಗ್ರಂಥಗಳನ್ನು ಅವಲೋಕನಗಳನ್ನು ಮಾಡಿದಾಗ ಒಂದೊಂದು ಗ್ರಂಥ ಒಂದೊಂದು ವಿಷಯದ ಬಗ್ಗೆ ಮಾಹಿತಿಯನ್ನು ಒದದಿಸುತ್ತವೆ. ಆದರೆ ಈ ಲೇಖನಗಳು ಒದಗಿಸುವ ಮಾಹಿತಿ ಸ್ಪಷ್ಟವಾಗಿಲ್ಲ. ಈ ಹಿನ್ನೆಲೆಯಲ್ಲಿ ಸ್ತ್ರೀಶಕ್ತಿ ಗುಂಪುಗಳ ಮೂಲಕ ಪರಿಶಿಷ್ಟ ಮಹಿಳೆಯರ ಆರ್ಥಿಕ ಸ್ಥಿತಿಗತಿಯನ್ನು ನೋಡುವುದು ಪ್ರಸ್ತುತ ಅಧ್ಯಯನದ ಆಶಯವಾಗಿದೆ.

ಸಂಶೋಧನಾ ಪ್ರಶ್ನೆಗಳು

೧. ಸ್ತ್ರೀಶಕ್ತಿ ಗುಂಪುಗಳಿಂದ ಇವರ ಆರ್ಥಿಕ ಜೀವನ ಮಟ್ಟ ಸುಧಾರಿಸುತ್ತದೆಯೇ?

೨. ಸ್ತ್ರೀಶಕ್ತಿ ಗುಂಪುಗಳಿಂದ ಸಮಾಜದಲ್ಲಿ ಇವರ ಜೀವನಮಟ್ಟ ಉತ್ತಮಗೊಳ್ಳಲು ಸಾಧ್ಯವಿದೆಯೇ?

೩. ಸ್ತ್ರೀಶಕ್ತಿ ಗುಂಪುಗಳಲ್ಲಿ ಪಾಲ್ಗೊಳ್ಳುವ ಮೂಲಕ ಪರಿಶಿಷ್ಟ ಮಹಿಳೆಯರು ರಾಜಕೀಯವಾಗಿ ಸಬಲರಾಗುತ್ತಿದ್ದಾರೆಯೇ?

೪. ಸ್ತ್ರೀಶಕ್ತಿ ಗುಂಪುಗಳಿಂದ ಇವರು ತಮ್ಮ ಜೀವನದಲ್ಲಿ ಉಂಟಾಗುವ ಏರಿಳಿತಗಳನ್ನು ನಿಭಾಯಿಸಲು ಸ್ವ-ಸಾಮರ್ಥ್ಯವನ್ನು ಹೊಂದಲು ಸಾಧ್ಯವಿದೆಯೇ?

ಹೀಗೆ ಒಟ್ಟಾರೆ ಈ ಮೇಲಿನ ಎಲ್ಲಾ ಅಂಶಗಳನ್ನು ಸಮಸ್ಯೀಕರಿಸಿಕೊಂಡು ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೩.ಉದ್ದೇಶಗಳು

ಸಾಮಾನ್ಯವಾಗಿ ಸ್ತ್ರೀಶಕ್ತಿ ಸಂಘಗಳು ಎಂದ ತಕ್ಷಣ ಆರ್ಥಿಕವಾಗಿ ಅಭಿವೃದ್ಧಿಯತ್ತ ಸಾಗುವ ಕಲ್ಪನೆ ಅಥವಾ ಸಿದ್ಧಾಂತ ಎಲ್ಲರಿಗೂ ಬಾಸವಾಗುತ್ತದೆ. ಆದರೆ ನೈಜವಾಗಿ ಸ್ತ್ರೀಶಕ್ತಿ ಸಂಘಗಳ ಕಾರ್ಯವೈಖರಿಯನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಔಚಿತ್ಯಪೂರ್ಣವಾದ ಸಂಗತಿಗಳು ಬೆಳಕಿಗೆ ಬರುತ್ತವೆ. ಅಂದರೆ ಸ್ತ್ರೀಶಕ್ತಿ ಗುಂಪುಗಳು ಕೇವಲ ಆರ್ಥಿಕ ವಿಚಾರವಾಗಿ ಮುಖ್ಯವಾಹಿನಿಗೆ ಸೇರುತ್ತವೆ ಎಂದು ಕಂಡುಬಂದರೂ, ಅದರ ಹಿಂದೆ ಸ್ತ್ರೀಶಕ್ತಿ ಸಂಘಗಳಲ್ಲಿ ತೊಡಗಿದಂತಹ ಮಹಿಳೆಯರು ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ವೈಚಾರಿಕತೆ ಹೀಗೆ ಹಲವು ಕ್ಷೇತ್ರಗಳಲ್ಲಿ ಪ್ರಗತಿಯತ್ತ ಸಾಗಲು ಪೂರಕವಾದ ವಾತಾವರಣವನ್ನು ಕಲ್ಪಿಸುತ್ತವೆ. ಹಾಗಾಗಿ ಪ್ರಸ್ತುತ ಮಹಾಪ್ರಬಂಧದಲ್ಲಿ ಸ್ತ್ರೀಶಕ್ತಿ ಸಂಘಗಳು

ಎಂದ ತಕ್ಷಣ ಆರ್ಥಿಕ ಕ್ಷೇತ್ರವೊಂದನ್ನೆ ಪರಿಗಣಿಸಿ ಅಧ್ಯಯನಕ್ಕೆ ಒಳಪಡಿಸುವುದರ ಜೊತೆಗೆ ಅದರಿಂದ ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಬದಲಾವಣೆಯನ್ನು ಸಾಧಿಸುವುದರೊಂದಿಗೆ ಸ್ವಸ್ತ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಿದೆ ಎಂಬ ಒಟ್ಟು ಆಶಯವನ್ನು ಇಟ್ಟುಕೊಂಡು ಸಿದ್ಧಪಡಿಸಲಾಗಿದೆ.

೧. ಸ್ತ್ರೀಶಕ್ತಿ ಗುಂಪುಗಳಲ್ಲಿ ಭಾಗವಹಿಸುವ ಪರಿಶಿಷ್ಟ ಮಹಿಳೆಯರ ಸಾಮಾಜಿಕ ಸ್ಥಾನವನ್ನು ಗುರುತಿಸುವ ಉದ್ದೇಶವನ್ನು ಹೊಂದಲಾಗಿದೆ.

೨. ಗುಂಪುಗಳಲ್ಲಿ ಭಾಗವಹಿಸುವ ಮಹಿಳೆಯರ ಆರ್ಥಿಕ ಸ್ಥಿತಿಗತಿಯನ್ನು ಅವಲೋಕಿಸುವ ಉದ್ದೇಶವನ್ನು ಹೊಂದಲಾಗಿದೆ.

೩. ಗುಂಪುಗಳಲ್ಲಿ ಪಾಲ್ಗೊಳ್ಳುವ ಪರಿಶಿಷ್ಟ ಮಹಿಳೆಯರ ರಾಜಕೀಯ ಸಬಲೀಕರಣವನ್ನು ಅರ್ಥೈಸಲು ಪ್ರಯತ್ನಿಸಲಾಗಿದೆ. ಈ ಎಲ್ಲಾ ಉದ್ದೇಶಗಳ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೪.ವ್ಯಾಪ್ತಿ

ಸ್ತ್ರೀಶಕ್ತಿ ಗುಂಪುಗಳ ವ್ಯಾಪ್ತಿ ತುಂಬಾ ವಿಶಾಲವಾಗಿದ್ದು, ಅಧ್ಯಯನದ ಅನುಕೂಲಕ್ಕಾಗಿ ಇದರ ವ್ಯಾಪ್ತಿಯನ್ನು ಬಳ್ಳಾರಿ ಜಿಲ್ಲೆಗೆ ಮಾತ್ರ ಸೀಮಿತಗೊಳಿಸಲಾಗಿದೆ. ಅದರಲ್ಲಿಯೂ ವಿಶೇಷವಾಗಿ ಪರಿಶಿಷ್ಟ ಮಹಿಳೆಯರ ಕುರಿತಾದ ಮಹತ್ವದ ಅಧ್ಯಯನವಾಗಿರುತ್ತದೆ. ಹೀಗಾಗಿ ಬಳ್ಳಾರಿ ಜಿಲ್ಲೆಯಲ್ಲಿರುವ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನ ಪರಿಶಿಷ್ಟ ಮಹಿಳೆಯರನ್ನು ಪರಿಗಣಿಸಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಗುಂಪುಗಳ ಮೂಲಕ ಸಾಮಾಜಿಕ ಮತ್ತು ಆರ್ಥಿಕವಾಗಿ ದುರ್ಬಲರಾದ ಈ ಭಾಗದ ಗ್ರಾಮೀಣ ಭೂರಹಿತ ಮಹಿಳೆಯರ ಪ್ರಗತಿಯನ್ನು ಕುರಿತು ಅಧ್ಯಯನ ಮಾಡಲಾಗಿದೆ. ೨೦೧೨ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ೫೨೨೦ರಷ್ಟು ಸ್ತ್ರೀಶಕ್ತಿ ಗುಂಪುಗಳಿದ್ದು, ಇವುಗ್ಗಳಿಂದ ೪,೬೫,೫೭೫ ಲಕ್ಷ ರೂ.ಗಳನ್ನು ಉಳಿತಾಯ ಮಾಡಲಾಗಿದೆ. ಸ್ವ-ಸಹಾಯ ಗುಂಪುಗಲ್ಲಿ ಮಹಿಳೆಯರು ಭಾಗವಹಿಸುವಿಕೆಯಿಂದ ಈ ಭಾಗದ ಪರಿಶಿಷ್ಟ ಮಹಿಳೆಯರ ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಸಬಲೀಕರಣದ ಸ್ಥೂಲ ಚಿತ್ರಣವನ್ನು ಅಧ್ಯಯನದ ವ್ಯಾಪ್ತಿಯಲ್ಲಿ ಪರಿಗಣಿಸಲಾಗಿದೆ.

ಮಿತಿಗಳು

೧. ಈ ಅಧ್ಯಯನವನ್ನು ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹಾಗೂ ಕೂಡ್ಲಿಗಿ ತಾಲೂಕುಗಳಲ್ಲಿನ ನಾಲ್ಕು ಗ್ರಾಮಪಂಚಾಯತಿಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.

೨. ಪ್ರಸ್ತುತ ಅಧ್ಯಯನದಲ್ಲಿ ಗ್ರಾಮೀಣ ಭಾಗದಲ್ಲಿ ಬರುವ ಪರಿಶಿಷ್ಟ (ಹರಿಜನ, ಮಾದಿಗ ಮತ್ತು ನಾಯಕ) ಮಹಿಳೆಯರನ್ನು ಅದರಲ್ಲಿಯೂ ವಿಶೇಷವಾಗಿ ಭೂರಹಿತ ಮಹಿಳಾ ಸದಸ್ಯರನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಮಹತ್ವ

ದಬ್ಬಾಳಿಕೆ ವಿರುದ್ಧ, ಧ್ವನಿ ಎತ್ತಲು, ಆತ್ಮ ವಿಶ್ವಾಸವನ್ನು ತುಂಬಲು ಹಾಗೂ ಗ್ರಾಮೀಣ ಜನರ ಆರ್ಥಿಕ ಸ್ವಾವಲಂಬನೆಯಾಗಲು ಸ್ತ್ರೀಶಕ್ತಿ ಗುಂಪುಗಳು ಮಹತ್ವದ ಪಾತ್ರವಹಿಸುತ್ತಿವೆ. ವಿಶೇಷವಾಗಿ ಸಾಮಾಜಿಕ ಚಿತ್ರಣದಿಂದ ಹೊರಗುಳಿದಿರುವ ಮಹಿಳೆಯರಿಗಾಗಿ ಗುಂಪುಗಳನ್ನು ಸ್ಥಾಪನೆ ಮಾಡಲಾಗಿದೆ. ಈ ಗುಂಪುಗಳೆಲ್ಲವೂ ಸಾಮಾನ್ಯ ಉದ್ದೇಶವನ್ನು ಹೊಂದಿದ್ದು, ಪರಸ್ಪರ ಬೆಂಬಲವನ್ನು ಹಲವಾರು ಅಡೆತಡೆಗಳ ವಿರುದ್ಧ ನಿಂತುಕೊಳ್ಳುತ್ತಿರುವುದು ಕಂಡುಬಂದಿದೆ.

ಈ ಗುಂಪುಗಳು ತ್ವರಿತ ಬೆಳವಣಿಗೆ ಹಾಗೂ ಬದಲಾವಣೆಗಳಿಗೆ ಒಂದು ತಳಪಾಯವೆನ್ನಬಹುದು. ಇಲ್ಲಿ ಪರಸ್ಪರ ಸಂಬಂಧಗಳ ಬೆಳವಣಿಗೆಯು ಉಂಟಾಗಿ ಪರಸ್ಪರ ನಂಬಿಕೆಯ ಮುಖಾಂತರ ಸಂಸ್ಥೆಯ ಬೆಳವಣಿಗೆಯನ್ನು ಕಾಣಬಹುದು. ಪ್ರಾಮಾಣಿಕ ಪ್ರಯತ್ನದಿಂದ ಗ್ರಾಮೀಣ ಬಡಜನರ ಪ್ರಗತಿಯನ್ನು ಸಾಧಿಸಬಹುದು. ಗ್ರಾಹಕರ ಸಾಲ ಹಾಗೂ ಉತ್ಪಾದನಾ ಸಾಲದ ನಡುವಿನ ಅಂತರವನ್ನು ತಿಳಿಸಿಕೊಡುತ್ತದೆ. ಇದಲ್ಲದೇ ಈ ಸಾಲ ಪದ್ಧತಿಯ ಮುಖಾಂತರ ಆರ್ಥಿಕ ಸಾಂಸ್ಕೃತಿಕ ಹಾಗೂ ಸಾಮಾಜಿಕ ಬದಲಾವಣೆಗಳನ್ನು ತಿಳಿದುಕೊಳ್ಳುವುದಲ್ಲದೇ ಸಾಲವನ್ನು ಸರಳ ವಿಧಾನದಲ್ಲಿ ಗುಂಪುಗಳಿಗೆ ತಲುಪಿಸಲಾಗುತ್ತಿದೆ ಹಾಗೂ ಗುಂಪಿನ ಕ್ರಿಯಾತ್ಮಕತೆಯ ಮೂಲಕ ಸಾಲದ ಮರುಪಾವತಿಯೂ ಆಗುತ್ತಿದೆ. ಇಲ್ಲಿ ಸಾಲದ ಬಡ್ಡಿಧರದ ನಿರ್ಧಾರ, ಮರುಪಾವತಿಯ ಅವಧಿ, ಸಾಲದ ಅವಧಿ, ವಿಸ್ತರಣೆ ಹಾಗೂ ಗುಂಪುಗಳಿಗೆ ಸಾಂಪ್ರದಾಯಿಕ ಸಾಲದ ಸಂಸ್ಥೆಗಳ ಬಗ್ಗೆ ಮಾರ್ಗದರ್ಶನ ನೀಡುವುದನ್ನು ಕಾಣಬಹುದು. ಆದಕಾರಣ ಸ್ವ-ಸಹಾಯ ಗುಂಪುಗಳು ಕಿರುಸಾಲವನ್ನು ಪ್ರಮುಖವಾಗಿ ಮಹಿಳೆಯರಿಗೆ ನೀಡುವುದರ ಮುಖಾಂತರ ಅವರಿಗೆ ಕಿರು ಉದ್ದಿಮೆಗಳನ್ನು ಆರಂಭಗೊಳಿಸಲು ಪ್ರೇರಣೆಯನ್ನು ನೀಡಿ ಕಿರು ಉದ್ದಿಮೆಗಳಲ್ಲಿ ತೊಡಗಿಸಿಕೊಳ್ಳಲು ಸ್ಫೂರ್ತಿ ನೀಡುತ್ತಿವೆ. ಗ್ರಾಮೀಣ ಹಾಗೂ ನಗರ ಬಡ ಮಹಿಳೆಯರ ಸಾಲದ ಅವಶ್ಯಕತೆಗಳನ್ನು ಸಂಪೂರ್ಣವಾಗಿ ಸ್ವ-ಸಹಾಯ ಗುಂಪುಗಳು ಪೂರೈಸುತ್ತಿವೆ. ಸ್ವ-ಸಹಾಯ ಗುಂಪುಗಳು ಮಹಿಳೆಯರಿಗೆ ಸಮಾನವಾದ ಸ್ಥಾನವನ್ನು ನೀಡಿ, ಆರ್ಥಿಕ, ಸಾಮಾಜಿಕ, ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಸಮಾನ ಸ್ಥಾನವನ್ನು ಕಲ್ಪಿಸುತ್ತಿವೆ.

ಗ್ರಾಮೀಣ ಬಡ ಮಹಿಳೆಯರ ಸಾಮರ್ಥ್ಯವು ಸರಿಯಾದ ನಿಟ್ಟಿನಲ್ಲಿ ಬಳಕೆಯಾಗದಿರಲು ಹಲವಾರು ಕಾರಣಗಳಿವೆ. ಸಾಮಾಜಿಕವಾಗಿ ಹಿಂದುಳಿದಿರುವುದು, ಶಿಕ್ಷಣದ ಕೊರತೆ, ಬಡತನ ಮೂಲ ಅಭಿಪ್ರಾಯವಿರುವುದರಿಂದ ಪ್ರೇರಣೆಯ ಕೊರತೆ, ವ್ಯಕ್ತಿಗತವಾಗಿ ಒಬ್ಬ ಬಡವನು ಆರ್ಥಿಕ, ಸಾಮಾಜಿಕವಾಗಿ

ಕೊರತೆಯುಳ್ಳವನಾಗಿರುವುದಿಲ್ಲದೆ ಸರಿಯಾದ ಜ್ಞಾನ ಮಾಹಿತಿಯ ಕೊರತೆ ಕಾಣಬಹುದು. ಆದಾಯವೇ ಇಲ್ಲದ ತೀರಾ ಬಡವರ್ಗದ ಮಹಿಳೆಯರು ಸ್ವ-ಸಹಾಯ ಗುಂಪುಗಳಿಂದ ಹೊರಗುಳಿದುಬಿಡುವ ಸಾಧ್ಯತೆಯೂ ಕೂಡ ಇದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಇಂತಹ ಯೋಜನೆಯಡಿಯಲ್ಲಿಯೂ ದುರ್ಬಲರು ಸಾಲ ಪಡೆಯುವುದು ಕಷ್ಟವೆಂದು ತೋರಿಸುತ್ತದೆ. ಅಲ್ಲದೇ ಮಹಿಳೆಯರು ಪಡೆದ ಸಾಲವನ್ನು ಕುಟುಂಬದ ಗಂಡಸರು ಬಳಸುತ್ತಾರೆ. ಅವರು ಗಳಿಸಿರುವ ಆರ್ಥಿಕ ಸ್ವಾತಂತ್ರ್ಯ ಗಮನಿಸಿ ಇಡೀ ಕುಟುಂಬದ ಜವಾಬ್ದಾರಿಯನ್ನು ಅವಳಿಗೆ ವಹಿಸುವ ಸಂದರ್ಭಗಳೂ ಉಂಟಾಗುತ್ತವೆ. ಸ್ವ-ಸಹಾಯ ಗುಂಪುಗಳಲ್ಲಿ ಚಿಕ್ಕ ಸಾಲ ಯೋಜನೆಗಳ ಸಹಕಾರ ಮತ್ತು ವಿಶಾಲ ತಳಹದಿಯ ಮೇಲೆ ರಚನೆಯಾಗಿರುವ ನಾಗರೀಕ ಸಮಾಜದ ಸಂಸ್ಥೆಗಳು, ಸಂಕುಚಿತ ತಳಹದಿಯ ಮೇಲೆ ನಿಂತಿರುವ ಸಂಸ್ಥೆಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿರುವಂತೆ ತಿಳಿದುಬರುತ್ತದೆ. ಒಟ್ಟಾರೆಯಾಗಿ ಈ ಪ್ರಬಂಧವು ಸ್ತ್ರೀಶಕ್ತಿ ಗುಂಪುಗಳಲ್ಲಿ ಇರುವ ಪರಿಶಿಷ್ಟ ಮಹಿಳೆಯರ ಸಾಮಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಯನ್ನು ತಿಳಿದುಕೊಂಡು ಮತ್ತು ವಿಶೇಷವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವವರಿಗೆ ಮಹತ್ವದ್ದಾಗಿರುತ್ತದೆ.

೫.ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನ ವಿಧಾನವು ಸಂಪೂರ್ಣವಾಗಿ ಕ್ಷೇತ್ರಕಾರ್ಯಧಾರಿತ ಹಾಗೂ ತೌಲನಿಕ ಮಾದರಿಯ ಅಧ್ಯಯನವಾಗಿದೆ. ಕರ್ನಾಟಕ ರಾಜ್ಯದ ಹೈದರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಒಂದಾದ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದ್ದಾಗಿರುತ್ತದೆ. ಈ ಜಿಲ್ಲೆಯು ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ಜಿಲ್ಲೆಗಳ ಪಟ್ಟಿಯಲ್ಲಿ ಇರುವುದರಿಂದ ಈ ಜಿಲ್ಲೆಯನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ. ನಂಜುಂಡಪ್ಪ ವರದಿ ಪ್ರಕಾರ ಜಿಲ್ಲೆಯಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕು ಹೊಸಪೇಟೆ ಹಾಗೂ ಅತೀ ಹಿಂದುಳಿದ ತಾಲೂಕು ಆಗಿರುವ ಕೂಡ್ಲಿಗಿ ತಾಲೂಕನ್ನು ಪ್ರಸ್ತುತ ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ. ೨೦೧೧ರ ಜನಗಣತಿಯ ಪ್ರಕಾರ ಜಿಲ್ಲೆಯ ಉಳಿದೆಲ್ಲಾ ತಾಲೂಕುಗಳಿಗೆ ಹೋಲಿಸಿದರೆ, ಈ ಎರಡು ತಾಲೂಕುಗಳ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಮಹಿಳೆಯರು ಅಧಿಕವಾಗಿದ್ದಾರೆ. ಆದ್ದರಿಂದ ಅಧ್ಯಯನಕ್ಕೆ ಈ ಎರಡೂ ತಾಲೂಕುಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಈ ಎರಡು ತಾಲೂಕಿನ ನಾಲ್ಕು ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಗ್ರಾಮೀಣ ಭಾಗದಲ್ಲಿ ಬರುವ ಸ್ತ್ರೀಶಕ್ತಿ ಗುಂಪುಗಳ ಪರಿಶಿಷ್ಟ ಮಹಿಳಾ ಸದಸ್ಯರನ್ನು ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರನ್ನು ಮಾತ್ರ ಆಯ್ಕೆಮಾಡಿಕೊಳ್ಳಲಾಗಿದೆ. ಕಾರಣ ಒಂದು. ಈ ಪ್ರದೇಶದ ಗ್ರಾಮೀಣ ಭಾಗದಲ್ಲಿ ಪರಿಶಿಷ್ಟ ಮಹಿಳೆಯರು ಅಧಿಕವಾಗಿದ್ದಾರೆ. ಎರಡು, ನಗರ ಪ್ರದೇಶಗಳಲ್ಲಿರುವ ಪರಿಶಿಷ್ಟ ಮಹಿಳೆಯರಿಗೆ ಬೇರೆ (ಶಿಕ್ಷಣ, ಉದ್ಯೋಗ, ಆದಾಯ ಮತ್ತು ಆರೋಗ್ಯ) ಅಂಶಗಳ ಪಾತ್ರ ಹೆಚ್ಚಾಗಿರುತ್ತದೆ. ಮೂರು, ಗ್ರಾಮೀಣ ಪ್ರದೇಶಗಳಲ್ಲಿ ಈ ಮಹಿಳೆಯರಿಗೆ ಮೇಲಿನ

ಅಂಶಗಳ ಪಾತ್ರ ಕಡಿಮೆ ಇರುತ್ತದೆ. ಆದಕಾರಣ ಪರಿಶಿಷ್ಟ ಮಹಿಳಾ ಸದಸ್ಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಂಶಗಳನ್ನು ತಿಳಿಯುವುದಕ್ಕೆ ಗ್ರಾಮೀಣ ಪ್ರದೇಶವನ್ನು ಆಯ್ಕೆಮಾಡಿಕೊಳ್ಳಲಾಗಿದೆ.

ಪ್ರಾಥಮಿಕ ಮತ್ತು ಆನುಷಂಗಿಕ ಮಾಹಿತಿ

ಸ್ತ್ರೀಶಕ್ತಿ ಗುಂಪುಗಳ ಪರಿಶಿಷ್ಟ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಚಾರಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲು ಸ್ಥೂಲವಾಗಿ ಎರಡು ಮಾದರಿಯ ಅಧ್ಯಯನವನ್ನು ಅಳವಡಿಸಿಕೊಳ್ಳಲಾಗಿದೆ. ಮೊದಲನೆಯದು, ಪ್ರಾಥಮಿಕ ಮಾಹಿತಿ, ಸಂಘಗಳ ಸದಸ್ಯರಿಗೆ ಪ್ರಶ್ನಾವಳಿಯ ಮುಖಾಂತರ ಸಂದರ್ಶನ ಹಾಗೂ ಗುಂಪು ಚರ್ಚೆ, ಅವಲೋಕನ ವಿಧಾನದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ. ಎರಡನೇಯದು, ಆನುಷಂಗಿಕ ಮಾಹಿತಿ, ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ಪ್ರಕಟಿತ ಲೇಖನಗಳು, ಸರಕಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು, ಸಂಶೋಧನಾ ಮಹಾಪ್ರಬಂಧಗಳು, ದಿನಪತ್ರಿಕೆಯ ವರದಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕೈಪಿಡಿಗಳು, ಎನ್.ಜಿ.ಓ.ಗಳಿಂದ ಪಡೆದ ಮಾಹಿತಿ, ದಿನಪತ್ರಿಕೆಗಳು ಮತ್ತು ಅಂತರ್ ಜಾಲದಲ್ಲಿ ಸಿಗುವಂತಹ ಮಾಹಿತಿಯಿಂದ ಸಂಗ್ರಹಿಸಲಾಗಿದೆ.

ಸ್ಯಾಪ್ಲಿಂಗ್ ಆಯ್ಕೆ ವಿಧಾನ

ಬಳ್ಳಾರಿ ಜಿಲ್ಲೆಯ ಎರಡು ತಾಲೂಕುಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಅವುಗಳೆಂದರೆ ಹೊಸಪೇಟೆ ಮತ್ತು ಕೂಡ್ಲಿಗಿ, ಇವುಗಳಲ್ಲಿ ಕ್ರಮವಾಗಿ ಎರಡೆರಡು ಗ್ರಾಮಪಂಚಾಯತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಒಟ್ಟು ೨೩ ಗ್ರಾಮ ಪಂಚಾಯತಿಗಳು ಇದ್ದು, ಈ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಹೋಲಿಸಿದರೆ ಸಣಾಪುರ ಮತ್ತು ಗರಗನಾಗಲಾಪುರ ಪಂಚಾಯತಿಗಳು ತಾಲೂಕಿನ ಕೇಂದ್ರ ಸ್ಥಾನಕ್ಕೆ ಅತ್ಯಂತ ದೂರದಲ್ಲಿವೆ. ಜೊತೆಗೆ ಈ ಎರಡು ಗ್ರಾಮಗಳಿಗೆ ಸಮರ್ಪಕವಾದ ಸಾರಿಗೆ ಸೌಲಭ್ಯದ ಕೊರತೆ ಇದೆ. ಅದೇ ರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ೩೩ ಗ್ರಾಮ ಪಂಚಾಯತಿಗಳಿದ್ದು, ಇವುಗಳಲ್ಲಿ ಚಿರತಗುಂಡು ಮತ್ತು ರಾಂಪುರ ಗ್ರಾಮಪಂಚಾಯತಿಗಳು ಈ ಮೇಲೆ ಹೇಳಿದಂತೆ ದೂರ ಹಾಗೂ ಸಾರಿಗೆ ಸೌಲಭ್ಯದ ಕೊರತೆ ಇರುವುದರಿಂದ ಈ ನಾಲ್ಕು ಗ್ರಾಮಪಂಚಾಯತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ನಾಲ್ಕು ಗ್ರಾಮ ಪಂಚಾಯತಿ (ಸಣಾಪುರ, ಗರಗನಾಗಲಾಪುರ, ಚಿರತಗುಂಡು ಮತ್ತು ರಾಂಪುರ)ಗಳ ವ್ಯಾಪ್ತಿಯಲ್ಲಿ ಒಟ್ಟು ೧೦೪ ಸ್ತ್ರೀಶಕ್ತಿ ಗುಂಪುಗಳಿವೆ. ಇವುಗಳಲ್ಲಿ ೧೫೭೬ರಷ್ಟು ಮಹಿಳಾ ಸದಸ್ಯರಿದ್ದು, ಅವರಲ್ಲಿ ಪರಿಶಿಷ್ಟ ಜಾತಿಯ ಮಹಿಳೆಯರು ೫೧೨ ಹಾಗೂ ಪರಿಶಿಷ್ಟ ಪಂಗಡದ ೪೦೨ ಮಹಿಳೆಯರಿದ್ದಾರೆ. ಈ ಮೇಲೆ ಹೇಳಿದಂತೆ ನಾಲ್ಕು ಪಂಚಾಯತಿಗಳಲ್ಲಿ ಪ್ರತಿಯೊಂದು ಗ್ರಾಮಪಂಚಾಯತಿಯಲ್ಲಿ ಪ.ಜಾತಿಯಿಂದ ೩೦ ಮಹಿಳೆಯರು ಮತ್ತು ಪ.ಪಂಗಡದಿಂದ ೩೦ ಮಹಿಳೆಯರನ್ನು ಸರಳ ಯಾದೃಚ್ಚಿಕ ನಮೂನೆ(Simple Random

Sampling)ಯ ಆಧಾರದ ಮೇಲೆ ಆಯ್ಕೆಮಾಡಿಕೊಳ್ಳಲಾಗಿದೆ. ಒಟ್ಟಾರೆಯಾಗಿ ಎರಡೂ ತಾಲೂಕುಗಳಲ್ಲಿ ನಾಲ್ಕು ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ೨೪೦ ಪರಿಶಿಷ್ಟ ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅದೇರೀತಿ ಗುಂಪಿಗೆ ಸೇರದ ೨೪೦ ಪರಿಶಿಷ್ಟ ಮಹಿಳೆಯರನ್ನು ಅನುಕೂಲವಾದ ನಮೂನೆ(Convinient Sampling)ಯ ಆಧಾರದ ಮೇಲೆ ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ. ಗುಂಪಿನ ಸದಸ್ಯರು ಹಾಗೂ ಗುಂಪಿಗೆ ಸೇರದ ಮಹಿಳೆಯರಿಗೆ ಪ್ರಶ್ನಾವಳಿಯ ಮೂಲಕ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಂಶಗಳಿಗೆ ಸಂಬಂಧಿಸಿದಂತೆ ಸಮಾಜದಲ್ಲಿ ಅವರ ಸ್ಥಾನಮಾನ, ಶಿಕ್ಷಣ, ಆರೋಗ್ಯ, ಉದ್ಯೋಗ, ವರಮಾನ ಕೂಲಿ ಮತ್ತು ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಿ ಮಾಹಿತಿಯನ್ನು ಸಂಗ್ರಹಿಸಿಲಾಗಿದೆ. ಈ ಕೆಳಗಿನ ವಿಧಾನದ ಮೂಲಕ ವಿಶ್ಲೇಷಣೆ ಮಾಡಲಾಗಿದೆ.

ವಿಶ್ಲೇಷಣೆ ಮತ್ತು ದತ್ತಾಂಶ ಇಂಟ್ರಪ್ರಿಟೇಷನ್

ಪ್ರಸ್ತುತ ಅಧ್ಯಯನವು ತುಲನಾತ್ಮಕ ಅಧ್ಯಯನವಾಗಿದೆ. ಸಂದರ್ಶನದ ಮೂಲಕ ಸಂಗ್ರಹಿಸಿದ ಪ್ರಾಥಮಿಕ ದತ್ತಾಂಶವನ್ನು ಕೋಷ್ಟಕಗಳ ರೂಪದಲ್ಲಿ ನಿರೂಪಿಸಲಾಗಿದೆ. ತುಲನಾತ್ಮಕ ಅಧ್ಯಯನವನ್ನು ಖಚಿತ ಪಡಿಸಿಕೊಳ್ಳುವ ಸಲುವಾಗಿ ಕೋಷ್ಟಕಗಳನ್ನು ಶೇಕಡಾವಾರಿನ ಜೊತೆಗೆ ವಿಶ್ಲೇಷಿಸಲಾಗಿದೆ. ಅಂಕಿ-ಅಂಶಗಳ ಮಧ್ಯಕಗಳು, ಸರಾಸರಿಕ ವಿಚಲನ ಸಂಬಂಧ ಮೂಲಕ ಅಗತ್ಯವಿದ್ದಲ್ಲಿ ಬಳಸಲಾಗಿದೆ. ಮತ್ತಷ್ಟು ಸಂಗ್ರಹಿಸಿದ ಕೆಲವು ಸಾಮಾನ್ಯ ಅಂಕಿ-ಅಂಶಗಳ ಆಧಾರದ ಮೇಲೆ ಸಂಶೋಧನೆಯ ಸಲಹೆಗಳನ್ನು ಮತ್ತು ತೀರ್ಮಾನಗಳನ್ನು ಪಡೆಯಲು ಇದರಿಂದ ಸಾಧ್ಯವಾಗಿದೆ. ಈ ರೀತಿಯಾಗಿ ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಬಳಸಿಕೊಂಡು ಸಂಗ್ರಹಿಸಿದ ಮಾಹಿತಿಯನ್ನು ಕಂಪ್ಯೂಟರ್ ಮೂಲಕ ಹಾಗೂ ಅಂಕಿ-ಅಂಶಗಳ ಆಧಾರದ ಮೇಲೆ ವಿಶ್ಲೇಷಿಸಲಾಗಿದೆ.

೬. ಅಧ್ಯಯನದ ಸ್ವರೂಪ

ಈ ಸಂಶೋಧನಾ ಮಹಾಪ್ರಬಂಧವು ಒಟ್ಟು ಒಂಭತ್ತು ಅಧ್ಯಾಯಗಳನ್ನು ಒಳಗೊಂಡಿದ್ದು, ಈ ಕೆಳಗಿನಂತೆ ಅವುಗಳ ಸ್ವರೂಪವನ್ನು ಸಂಕ್ಷಿಪ್ತಗೊಳಿಸಲಾಗಿದೆ. ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ, ಮಿತಿಗಳು ಹಾಗೂ ಮಹತ್ವವನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ.

ಎರಡನೆಯ ಅಧ್ಯಾಯ ಅಧ್ಯಯನಗಳ ಸಮೀಕ್ಷೆಯನ್ನು ನಡೆಸುತ್ತದೆ. ಈ ಅಧ್ಯಾಯದಲ್ಲಿ ಸ್ತ್ರೀಶಕ್ತಿ ಗುಂಪುಗಳಿಗೆ ಸಂಬಂಧಿಸಿದಂತೆ ಇದುವರೆಗೆ ನಡೆದಿರುವ ಅಧ್ಯಯನಗಳು, ವರದಿಗಳು, ಪ್ರಕಟಗೊಂಡ ಕೃತಿಗಳು, ಲೇಖನಗಳು, ಈಗಾಗಲೇ ಮಂಡನೆಗೊಂಡ ಸಂಶೋಧನೆಗಳನ್ನು ವಿಮರ್ಶಾತ್ಮಕವಾಗಿ ಸಮೀಕ್ಷೆಗೆ ಒಳಪಡಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಬಳ್ಳಾರಿ ಜಿಲ್ಲೆಯ ಕ್ಷೇತ್ರ ಪರಿಚಯದಲ್ಲಿ ಜಿಲ್ಲೆಯ ಚಾರಿತ್ರಿಕ, ಭೌಗೋಳಿಕ ಹಿನ್ನೆಲೆ, ಜನಸಂಖ್ಯೆ, ಜನಸಾಂದ್ರತೆ, ಕೃಷಿ ಭೂಹಿಡುವಳಿ, ಭೂ ಒಡೆತನ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಂಶಗಳನ್ನು ಹಾಗೂ ತಾಲೂಕು (ಹೊಸಪೇಟೆ ಮತ್ತು ಕೂಡ್ಲಿಗಿ)ಗಳ ಚಾರಿತ್ರಿಕ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ವಿವರಗಳನ್ನು ನೀಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಸ್ತ್ರೀಶಕ್ತಿ ಗುಂಪುಗಳ ಐತಿಹಾಸಿಕ ಹಿನ್ನೆಲೆಯನ್ನು ವಿಶ್ಲೇಷಿಸಲಾಗಿದೆ. ಜಾಗತಿಕ ಮಟ್ಟದಲ್ಲಿ, ಭಾರತದಲ್ಲಿ, ಕರ್ನಾಟಕದಲ್ಲಿ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಸ್ತ್ರೀಶಕ್ತಿ ಗುಂಪುಗಳ ಬೆಳೆದುಬಂದ ರೀತಿಯನ್ನು ಪರಿಶೀಲಿಸಲಾಗಿದೆ.

ಐದನೇಯ ಅಧ್ಯಾಯದಲ್ಲಿ ಸ್ತ್ರೀಶಕ್ತಿ ಗುಂಪುಗಳ ಪರಿಕಲ್ಪನೆಯನ್ನು ಪರಿಶೀಲಿಸಲಾಗಿದೆ. ಸ್ತ್ರೀಶಕ್ತಿ ಗುಂಪುಗಳ ಪರಿಕಲ್ಪನೆ ಹುಟ್ಟಿದ್ದೇ ಸೂಕ್ಷ್ಮ ಹಣಕಾಸುವಿನಿಂದ, ಆದ್ದರಿಂದ ಈ ಸೂಕ್ಷ್ಮ ಹಣಕಾಸುವಿನಿಂದ ಸ್ವ-ಸಹಾಯ ಗುಂಪುಗಳು ಯಾವ ರೀತಿ ಬೆಳವಣಿಗೆ ಕಂಡವು. ಸಮಸ್ಯೆ ಮತ್ತು ಸವಾಲುಗಳನ್ನು ಯಾವ ರೀತಿ ಎದುರಿಸುತ್ತಿವೆ. ಜೊತೆಗೆ ಇದರಿಂದ ಮಹಿಳಾ ಸಬಲೀಕರಣ ಹೇಗೆ ಆಯಿತು. ಹಾಗೂ ಈ ಗುಂಪುಗಳಿಗೆ ನಬಾರ್ಡ್ ಬ್ಯಾಂಕು ಯಾವ ಕಾರಣಕ್ಕಾಗಿ ಬ್ಯಾಂಕು ಸಂಪರ್ಕವನ್ನು ನೀಡಲಾಗಿದೆ ಎಂಬುದನ್ನು ಸ್ಥೂಲವಾಗಿ ವಿವರಿಸಲಾಗಿದೆ.

ಅಧ್ಯಾಯ ಆರರಲ್ಲಿ ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದಂತೆ ಸ್ತ್ರೀಶಕ್ತಿ ಗುಂಪುಗಳಿಗೆ ಸೇರಿದ ಮತ್ತು ಗುಂಪಿಗೆ ಸೇರದ ಮಹಿಳೆಯರ ಸಾಮಾಜಿಕ ಸ್ಥಾನವನ್ನು ಗುರುತಿಸಲಾಗಿದೆ. ಸಾಮಾಜಿಕ ಸಂಬಂಧಗಳ ಮೇಲೂ ಕೂಡ ಜಾತಿ ಪದ್ಧತಿಯ ನಿರ್ಬಂಧಗಳಿವೆ. ಈ ನಿರ್ಬಂಧಗಳ ಹಿನ್ನೆಲೆಯಲ್ಲಿ ಮಡಿ ಮತ್ತು ಮೈಲಿಗೆಗಳಿಗೆ ಸಂಬಂಧಿಸಿದ ಆಚರಣೆಯನ್ನು ಈ ಅಧ್ಯಾಯದಲ್ಲಿ ಅರ್ಥೈಸಿಕೊಳ್ಳಲಾಗಿದೆ.

ಅಧ್ಯಾಯ ಏಳರಲ್ಲಿ ಸ್ತ್ರೀಶಕ್ತಿ ಗುಂಪಿನ ಸದಸ್ಯರು ಮತ್ತು ಗುಂಪಿಗೆ ಸೇರದ ಮಹಿಳೆಯರ ಆರ್ಥಿಕ ಸ್ಥಿತಿಯನ್ನು ಅವಲೋಕಿಸಲಾಗಿದೆ. ಗುಂಪಿನ ಸದಸ್ಯರ ಹಾಗೂ ಗುಂಪಿಗೆ ಸೇರದ ಮಹಿಳೆಯರ ಕುಟುಂಬಕ್ಕೆ ಆದಾಯದ ಮೂಲ ಮತ್ತು ವ್ಯತ್ಯಾಸವನ್ನು ನಿರೂಪಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ಸ್ತ್ರೀಶಕ್ತಿ ಗುಂಪಿನ ಸದಸ್ಯರ ಮತ್ತು ಗುಂಪಿಗೆ ಸೇರದ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಹಾಗೂ ಅರಿವಿನ ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ಒಂಭತ್ತರಲ್ಲಿ ಸಮಾರೋಪ, ಅಧ್ಯಯನದ ಫಲಿತಗಳು, ಸಲಹೆ ಸೂಚನೆಗಳನ್ನು ನೀಡಲಾಗಿದೆ.

ಕೊನೆಯ ಟಿಪ್ಪಣಿಗಳು

೧. Karl Marilee, Women and Empowerment participation and Decisio-Making, Zed Books Ltd, London, 1995.

2. Veluraj (2001) ``Self Help groups an alternative approach to empower rural women'' Tamil nadu Journal of co-operation, Vol. 1, No. 8.

೩. ಬಿನ್ ಅಗರವಾಲ್ (೨೦೦೧) ಭೂಮಿ ಹಕ್ಕುಗಳು ಮತ್ತು ಲಿಂಗಸಮಾನತೆ ಯೋಜನಾ ಮಾಸಪತ್ರಿಕೆ ಆಗಸ್ಟ್ ೨೦೦೧, ವ್ಯಾ. ೪೫

೪. ರಶೀದಾ ಭಗತ್ (೨೦೦೪) ಇಂಡಿಯಾ ಇಂಟೀರಿಯರ್, ದಿ ಹಿಂದು, ಜುಲೈ ೨೦೦೪

೫. ರಿನ್‌ಝಿನ್ ಮೌಸುಮದಾಸ್ (೨೦೦೪), ಸ್ವ-ಸಹಾಯ ಗುಂಪುಗಳ ಮೂಲಕ ಸೂಕ್ಷ್ಮ ಹಣಕಾಸು, ಕುರುಕ್ಷೇತ್ರ, ಫೆಬ್ರವರಿ ೨೦೦೪, ವ್ಯಾ. ೫೨, ಸಂಖ್ಯೆ ೪

೬. Rajeev I.N. An altenative approach to micro credit linkages : An exploration in to SHG Federation. Journal of Karushetra stadies, May 2005, April 2006, Vol. 12, No. 2 and Vol 3, No 1.

ಅಧ್ಯಾಯ : ಎರಡು

ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಎರಡು

ಅಧ್ಯಯನಗಳ ಸಮೀಕ್ಷೆ

ಸೂಕ್ಷ್ಮ ಹಣಕಾಸು, ಸಬಲೀಕರಣ, ಸ್ವ-ಸಹಾಯ ಗುಂಪುಗಳು, ಸ್ತ್ರೀಶಕ್ತಿ ಯೋಜನೆ ಮತ್ತು ಮಹಿಳಾ ಉದ್ಯಮಶೀಲತೆ ಕುರಿತು ಇದುವರೆಗೆ ಆಗಿರುವ ಅಧ್ಯಯನಗಳನ್ನು ನೋಡಿದಾಗ ಪ್ರಸ್ತುತ ಮಹಿಳೆಯರ ಜೀವನ ಮಟ್ಟದಲ್ಲಿ ಬದಲಾವಣೆಯಾಗಿರುವುದನ್ನು ಕಾಣಬಹುದಾಗಿದೆ. ಇಂತಹ ಪರಿಕಲ್ಪನೆಗಳನ್ನು ಗಮನದಲ್ಲಿಟ್ಟುಕೊಂಡು ಇವುಗಳ ಹಿನ್ನೆಲೆಯನ್ನು ನೋಡಿದಾಗ ೧೯೨೧ರಲ್ಲಿ ಸಿಂಡಿಕೇಟ್ ಬ್ಯಾಂಕು ಆರಂಭವಾಯಿತು. ದಿನದ ಹಾಗೂ ವಾರದ ಉಳಿತಾಯ ಖಾತೆಯನ್ನು ಆರಂಭಿಸಿ ಕಿರು-ಠೇವಣಿಗಳಿಗೆ ಆದ್ಯತೆ ನೀಡಿತು ಹಾಗೂ ಸೂಕ್ಷ್ಮಸಾಲವನ್ನು ಗ್ರಾಹಕರಿಗೆ ತಲುಪಿಸಿತು. ೧೯೬೧ರಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣವಾದ ನಂತರ ಕಿರುಸಾಲದ ಪರಿಕಲ್ಪನೆಗೆ ಮರು ಆದ್ಯತೆಯನ್ನು ನೀಡಿತು. ಸೂಕ್ಷ್ಮಸಾಲ ವ್ಯವಸ್ಥೆಯ ಪರಿಕಲ್ಪನೆಯು ಯಾವುದೇ ಅಭಿವೃದ್ಧಿಯ ಕಾರ್ಯಕ್ರಮಗಳಿಗೆ ಅನ್ವಯವಾಗುತ್ತದೆ ಹಾಗೂ ಇದು ಕಿರು ಅವಧಿಯ ಸಾಲದ ವ್ಯವಸ್ಥೆಯಾಗಿದ್ದು, ಬಡಜನರ ಬದುಕಿನ ಶೈಲಿಯನ್ನು ಬೆಳವಣಿಗೆಗೊಳಿಸಲು ಸಹಕಾರಿಯಾಗಿದೆ. ಸೂಕ್ಷ್ಮ ಹಣಕಾಸಿನ ಸಹಾಯದ ಮುಖಾಂತರ ಮಹಿಳೆಯರಿಗೆ ತಮ್ಮ ಹಕ್ಕು ಹಾಗೂ ಸ್ವತಂತ್ರ ವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಅವಕಾಶ ನೀಡುತ್ತದೆ.

ಸಬಲೀಕರಣ ಎನ್ನುವ ಪದವನ್ನು ೧೯೭೦ರ ದಶಕದಲ್ಲಿ ಲ್ಯಾಟಿನ್ ಅಮೇರಿಕಾದಲ್ಲಿ ವ್ಯಾಪಕವಾಗಿ ಮೊದಲ ಬಾರಿಗೆ ಬಳಸಿರುವುದು ತಿಳಿದುಬರುತ್ತದೆ. ಸಬಲೀಕರಣ ಎಂದರೆ ಶಕ್ತಿಕೊಡು, ಅಧಿಕಾರ ವಹಿಸು ಹಾಗೂ ಕಾನೂನಿನ ಹಕ್ಕುಗಳನ್ನು ನೀಡು, ಪ್ರಾತಿನಿಧ್ಯ ಹಾಗೂ ಪಾಲ್ಗೊಳ್ಳುವಿಕೆಯ ಮೂಲಕ ಅಧಿಕಾರ ಪಡೆಯುವುದು ಎಂಬುದಾಗಿ ಅನೇಕ ಅರ್ಥಗಳನ್ನು ಹೊಂದಿದೆ. ವ್ಯಕ್ತಿಯನ್ನು ಸಶಕ್ತಗೊಳಿಸುವ ಕ್ರಿಯೆಯೇ ಸಬಲೀಕರಣ ಅಥವಾ ಸಶಕ್ತೀಕರಣವಾಗಿದೆ. "ಮಹಿಳಾ ಸಬಲೀಕರಣ"ವು ಮಹಿಳೆಯರನ್ನು ಸಶಕ್ತಗೊಳಿಸುವ ಕ್ರಿಯೆಯಾಗಿದೆ. ಇದು ಮಹಿಳಾ ಅಭಿವೃದ್ಧಿ, ಮಹಿಳಾ ಕಲ್ಯಾಣ, ಮಹಿಳಾ ಜಾಗೃತಿ, ಭಾಗವಹಿಸುವಿಕೆ, ಪ್ರಗತಿ ಮತ್ತು ಉದ್ಧಾರ ಎಂಬ ಅರ್ಥಗಳನ್ನು ನೀಡುತ್ತದೆ. ಮಹಿಳೆಯರ ಅವಲಂಬನೆಯನ್ನು ತೊಡೆದು ಹಾಕಿ ಸ್ವಾತಂತ್ರ್ಯ, ಸಮಾನತೆ ಪಡೆಯುವುದಕ್ಕೆ ಅವಕಾಶ ನೀಡುವುದು. ಮಹಿಳಾ ಸಬಲೀಕರಣವೆಂಬುದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಭಿವೃದ್ಧಿಯನ್ನು ಹೊಂದಿರಬೇಕಾದುದು ಮೂಲಭೂತ ಅಗತ್ಯ ಅಂಶಗಳಲ್ಲೊಂದಾಗಿದೆ. ಅಲ್ಲದೆ ಸ್ವಾತಂತ್ರ್ಯ ನಂತರ ಮಹಿಳಾ ತಾರತಮ್ಯ ವಿರೋಧಿಯಾದ ಅನೇಕ ನಿಯಮಗಳನ್ನು ಹಾಗೂ ಅನೇಕ ಯೋಜನೆಗಳನ್ನು ಹೊಂದಿ

ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಲಾಗಿದೆ. ವಿಶ್ವಸಂಸ್ಥೆಯ ಕರೆಯ ಮೇರೆಗೆ ೧೯೭೫ರಲ್ಲಿ ಅಂತರಾಷ್ಟ್ರೀಯ ಮಹಿಳಾ ವರ್ಷವನ್ನು ವಿಶ್ವದೆಲ್ಲೆಡೆ ಆಚರಿಸಲಾಯಿತು. ಲಿಂಗ ಸಮಾನತೆ ಮೂಲಭೂತ ಹಕ್ಕೆಂದು ಘೋಷಿಸಿತು. ಮಹಿಳಾ ದಿನದ ಆಚರಣೆಯ ಸಂದರ್ಭದಲ್ಲಿ ಹಲವಾರು ರಾಷ್ಟ್ರಗಳು ಮಹಿಳೆಯರಿಗೋಸ್ಕರ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಲಾಯಿತು. ನಮಗೆ ತಿಳಿದಿರುವ ಹಾಗೆ ಸ್ವ-ಸಹಾಯ ಗುಂಪುಗಳು ೧೯೩೦ರಲ್ಲಿ ಮೊಟ್ಟಮೊದಲು ಲ್ಯಾಟೀನ್ ಅಮೇರಿಕಾದಲ್ಲಿ ಮಧ್ಯ ವ್ಯಸನಿಗಳಿಂದ ಆರಂಭವಾಯಿತು. ತದನಂತರ ೧೯೭೬ರಲ್ಲಿ ಪ್ರೋ. ಮೊಹಮ್ಮದ್ ಯೂನಸ್ ಅವರು ಮಹಿಳಾ ಗುಂಪುಗಳನ್ನು ಬಾಂಗ್ಲಾದೇಶದಲ್ಲಿ ಪ್ರಾರಂಭಿಸಿದರು. ಇದರ ಪ್ರಮುಖ ಉದ್ದೇಶ ಬಡಜನತೆಗೆ ಉಳಿತಾಯವನ್ನು ಮಾಡಿಸುವುದು. ಇಂದು ಈ ಗುಂಪು "ಬಾಂಗ್ಲಾದೇಶದ ಗ್ರಾಮೀಣ ಬ್ಯಾಂಕಾಗಿ ಮಾರ್ಪಾಡಾಗಿದೆ. ಈ ಬಾಂಗ್ಲದೇಶ ಗ್ರಾಮೀಣ ಬ್ಯಾಂಕಿನ ಯಶಸ್ಸಿನಿಂದ ಪ್ರೇರಣೆಗೊಂಡು ೧೯೮೫ರಲ್ಲಿ 'ಮೈರಾಡವು ಮೊದಲ ಸ್ವ-ಸಹಾಯ ಗುಂಪುಗಳನ್ನು ಆರಂಭಿಸಿತು. ೧೯೮೬-೮೭ರಲ್ಲಿ ಮೈರಾಡ ಯೋಜನೆಯಡಿ ೩೦೦ ಸ್ವ-ಸಹಾಯ ಗುಂಪುಗಳು ಕಂಡುಬಂದವು. ಹಲವಾರು ಗುಂಪುಗಳು ಮೈರಾಡದಿಂದ ಕಟ್ಟಿದ ಕೋ-ಆಪರೇಟಿವ್ ಸಂಘಗಳ ವಿಭಜನೆಯಿಂದ ಆರಂಭವಾಯಿತು. ಇತ್ತೀಚಿಗೆ ಕರ್ನಾಟಕ ರಾಜ್ಯ ಸರ್ಕಾರವು ಗ್ರಾಮೀಣ ಪ್ರದೇಶದ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸಬಲೀಕರಣಕ್ಕಾಗಿ "ಸ್ತ್ರೀಶಕ್ತಿ" ಯೋಜನೆಯನ್ನು ೨೦೦೦-೦೧ನೇ ವರ್ಷದಿಂದ ಜಾರಿಗೊಳಿಸಲಾಗಿದೆ. ಸ್ತ್ರೀಶಕ್ತಿ ಗುಂಪು ಎಂದರೆ ಒಂದು ನಿರ್ದಿಷ್ಟವಾದ ಧ್ಯೇಯ ಮತ್ತು ಉದ್ದೇಶವನ್ನು ಹೊಂದಿದ್ದು, ತಮಗೆ ತಾವೇ ಸಹಾಯವನ್ನು ಮಾಡಿಕೊಳ್ಳುವ ಸಮಾನ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯುಳ್ಳ ಮಹಿಳಾ ಸದಸ್ಯರನ್ನೊಳಗೊಂಡ ಒಂದು ಸಮೂಹ.

ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಆರ್ಥಿಕ ಅಸಮಾನತೆಗೆ ಗುರಿಯಾಗಿದ್ದಾರೆ. ಈ ಅಸಮಾನತೆಯಿಂದ ಮುಕ್ತರಾಗಲು ಮಹಿಳೆಯರು ಸ್ತ್ರೀಶಕ್ತಿ ಗುಂಪುಗಳನ್ನು ಕಟ್ಟಿಕೊಂಡರು. ಈ ಗುಂಪುಗಳ ಮೂಲಕ ಆರ್ಥಿಕ ಅಸಮಾನತೆಯ ಆತಂಕದಿಂದ ಮಹಿಳೆಯರು ಪಾರಾಗಲು ಸಾಧ್ಯತೆಗಳಿವೆ. ಸ್ತ್ರೀಶಕ್ತಿ ಗುಂಪುಗಳ ಇತಿಹಾಸವನ್ನು ನೋಡುವುದಾದರೆ, ಸ್ತ್ರೀಶಕ್ತಿ ಗುಂಪುಗಳಲ್ಲಿ ಸೇರಲು ಮುಖ್ಯ ಕಾರಣ ಆರ್ಥಿಕ ಸಮಸ್ಯೆ. ಇಂತಹ ಮಹಿಳೆಯರಿಂದ ಸ್ತ್ರೀಶಕ್ತಿ ಗುಂಪುಗಳನ್ನು ಕಟ್ಟಿಕೊಂಡು ಪರಸ್ಪರ ಸಹಾಯದಿಂದ ಅವರ ಆರ್ಥಿಕ ಸಮಸ್ಯೆಯನ್ನು ಹೋಗಲಾಡಿಸುವ ಪ್ರಯತ್ನಗಳು ನಡೆಯುತ್ತಿವೆ.

ಲಲಿತಾ ಶಿವಕುಮಾರ (೧೯೯೫) ಅವರು ಸ್ವ-ಸಹಾಯ ಗುಂಪುಗಳು, ಸಾಮಾಜಿಕ ಕ್ಷೇಮಾಭ್ಯುದಯ ಎಂಬ ಪುಸ್ತಕದಲ್ಲಿ ಗ್ರಾಮೀಣ ಮಹಿಳೆಯರು ಸಣ್ಣ ಉಳಿತಾಯಗಳಿಂದ ಬೇಕಾದಂತಹ ಸಂಪನ್ಮೂಲಗಳನ್ನು ಉತ್ಪಾದಿಸಬಹುದಾಗಿದ್ದು, ಅದು ಜನರಿಗೆ ಸಾಲ ಕೊಡುವವರ ದುರುಪಯೋಗ ಪಡಿಸಿಕೊಳ್ಳುವ ಅಭ್ಯಾಸದಿಂದ ದೂರಕ್ಕೆ ಸರಿಸಬಹುದಾಗಿದೆ. ಉಳಿತಾಯಗಳ ಹವ್ಯಾಸ ಮತ್ತು ಐಚ್ಛಿಕ ಉಳಿತಾಯಗಳು

ಆರ್ಥಿಕ ಪ್ರಗತಿಗೆ ಒಂದು ಮಹತ್ವವಾದ ಪಾತ್ರವಹಿಸುತ್ತವೆ. ಇದು ಬಡಜನತೆಯ ಗುಂಪಿನ ಪ್ರಯತ್ನಗಳ ಮೂಲಕ ಹೆಚ್ಚಾಗಿ ಉಳಿತಾಯ ಮಾಡಬಹುದೆಂದು ನಿರೂಪಿಸಲ್ಪಟ್ಟಿದೆ. ಸ್ವ-ಸಹಾಯ ಗುಂಪುಗಳನ್ನು ಉತ್ತೇಜಿಸುವ ಮುಖಾಂತರ ಮಹಿಳೆಯರನ್ನು ಆರ್ಥಿಕ ಅಭಿವೃದ್ಧಿಯ ಮುಖ್ಯವಾಹಿನಿಗೆ ತರಬಹುದಾಗಿದ್ದು, ಸುಸ್ಥಿರ ಅಭಿವೃದ್ಧಿಗೆ ಮಾರ್ಗವಾಗಿದೆ ಎಂದು ನಿರೂಪಿಸಲಾಗಿದೆ. ಆರ್ಥಿಕ ಪ್ರಗತಿಗೆ ಉಳಿತಾಯಗಳು ಬಹುಮುಖ್ಯ.[೧] ಆದರೆ ಮಹಿಳೆಯರನ್ನು ಆರ್ಥಿಕ ಅಭಿವೃದ್ಧಿಯ ಮುಖ್ಯವಾಹಿನಿಗೆ ತರಬೇಕಾದರೆ ಅವರು ಗಳಿಸಿರುವಂತಹ ಆದಾಯವನ್ನು ತಮ್ಮ ಸ್ವಂತ ನಿರ್ಧಾರದಿಂದ ಖರ್ಚುಮಾಡಿದರೆ ಮಾತ್ರ ಅದು ಸಾಧ್ಯವಾಗುತ್ತದೆ. ಇದನ್ನು ಲೇಖಕರು ಗಮನಿಸಿಲ್ಲ.

ಕಾರ್ಲ್ ಮೇರಿಲೀ (೧೯೯೫) ಅವರು ವುಮೆನ್ ಅಂಡ್ ಎಂಪವರ್‌ಮೆಂಟ್ ಪಾರ್ಟಿಸಿಪೇಷನ್ ಅಂಡ್ ಡಿಸಿಶನ್ ಮೇಕಿಂಗ್ ಎಂಬ ಪುಸ್ತಕದಲ್ಲಿ ಮಹಿಳೆಯರು ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರವನ್ನು ಮತ್ತು ಬಹುಮುಖಿ ಪ್ರಕ್ರಿಯೆಯನ್ನು ಸಬಲೀಕರಣ ಎಂದು ತೀರ್ಮಾನಿಸಿದರು. ಸಾಮೂಹಿಕ ಶಕ್ತಿ ಸಾಧಿಸಲು ಸಂಚಯನ ಒಳಗೊಂಡ ಸಂಪನ್ಮೂಲಗಳನ್ನು ಯೋಜನಾ ನಿರ್ಧಾರಗಳು, ನಿರ್ವಹಣೆ, ತಾಂತ್ರಿಕ ಕೌಶಲ್ಯಗಳು ಮತ್ತು ಸ್ಥಳೀಯ ಮಹಿಳೆಯರ ಸಾಮರ್ಥ್ಯ ಹಾಗೂ ಸಹಕಾರ ಹೆಚ್ಚಾಗಿದೆ ಎಂದು ವಿಶ್ಲೇಷಿಸಿದ್ದಾರೆ.[೨]

ಡೊಕೀ ಎಮ್.ಡಿ. (೧೯೯೯) ಅವರು ಸಸ್ಟೈನಿಂಗ್ ರೂರಲ್ ವುಮೆನ್ ಎಂಬ ಲೇಖನದಲ್ಲಿ ಸ್ವ-ಸಹಾಯ ಗುಂಪುಗಳನ್ನು ವಿವರಿಸುತ್ತಾ ಇತ್ತೀಚಿನ ದಿನಗಳಲ್ಲಿ ಇವು ಒಂದು ಪರ್ಯಾಯ ಸಾಲ ಹಂಚುವ ಪದ್ಧತಿ ಎಂದು ಒಪ್ಪಿಗೆ ಪಡೆಯುತ್ತಿವೆ. ಸಾಲವು ಅವಶ್ಯಕತೆಗಳನ್ನು ಪೂರೈಸುತ್ತಿವೆ, ವಿಶೇಷವಾಗಿ ಅತ್ಯಂತ ಬಡವರಲ್ಲಿ. ಬಡವರಿಗೆ ಸಾಮಾನ್ಯವಾಗಿ ಸಣ್ಣ ಕೃಷಿಕರಿಕಗೆ, ಭೂರಹಿತ ಕೃಷಿ ಕೂಲಕಾರರು, ಗ್ರಾಮೀಣ ಕಲಾಕಾರರು, ಮಹಿಳಾ ಜನತೆ ಮತ್ತು ಬೇರೆ ಸಣ್ಣ ಉದ್ದಿಮೆಗಳು ಕೂಡಿಕೊಂಡಿವೆ. ಸ್ವ-ಸಹಾಯ ಗುಂಪುಗಳು ಅಸ್ತಿತ್ವದಲ್ಲಿರುವ ಬ್ಯಾಂಕಿಂಗ್ ಚಟುವಟಿಕೆಗಳಿಗೆ ಬೆಂಬಲ ನೀಡುತ್ತಿವೆ. ಸ್ವ-ಸಹಾಯ ಗುಂಪಿನ ಗುರಿ ಮಿತವ್ಯಯ ಉಳಿತಾಯ ಬ್ಯಾಂಕಿನ ಸಂಸ್ಕೃತಿಯನ್ನು ಒಳಪಡಿಸಿಕೊಳ್ಳುವುದಾಗಿವೆ. ಅದು ಸಾಲ ಪಡೆಯುವುದು ಮತ್ತು ಅದನ್ನೇ ಮರುಪಾವತಿ ಮಾಡುವಂತಹ ಆರ್ಥಿಕ ಅಭಿವೃದ್ಧಿಯು ಸಾಲದ ಮೂಲಕ ಆಗಿದೆ. ಇದರಲ್ಲಿ ಅಡಗಿರುವಂತಹ ಭಾರತದಲ್ಲಿ ಸ್ವ-ಸಹಾಯ ಮಾದರಿಯ ತತ್ವಗಳು ಹೆಚ್ಚು ಕಡಿಮೆ ಬಾಂಗ್ಲಾದೇಶದ ಪರಿಕಲ್ಪನೆಗೆ ಅನುಗುಣವಾಗಿದೆ. ಬಡವರಲ್ಲಿ ಅತಿ ಬಡವರಿಗೆ ಹಣಕಾಸು ಒದಗಿಸುವುದು, ಸಾಲ ಮತ್ತು ಮರುಪಾವತಿಯು ಮಹಿಳೆಯರನ್ನು ಶಕ್ತಿಯುತರನ್ನಾಗಿ ಮಾಡುತ್ತದೆ. ಅವರ ಅವಶ್ಯಕತೆಗಳಾದ ಬಳಕೆ ವಸ್ತುಗಳು ಮತ್ತು ಸಾಲಗಳಿಗಷ್ಟೇ ಮಾತ್ರವಲ್ಲದೆ ಹೆಚ್ಚು ಶೈಕ್ಷಣಿಕ ಕಾರ್ಯಕ್ರಮಗಳು ಆರೋಗ್ಯ, ಕುಟುಂಬ ಯೋಜನೆ, ನೈರ್ಮಲ್ಯ ಮುಂತಾದವುಗಳ ಮೇಲೆ ಕೆಟ್ಟ ಪರಿಣಾಮಗಳು ಬೀರದೆ ದೂರವಿರಿಸುವುದು ಆಗಿದೆ.[೩]

ಶಿವಸುಬ್ರಮನಿಯನ್ (೧೯೯೯) ಅವರು ಕ್ರೆಡಿಟ್-ಬೇಸಡ್ ಪಾವರ್ಟಿ ಅಲ್ಲಿವೇಷನ್ ಪ್ರೋಗ್ರಾಂ ಇನ್‌ನೋವೇಟಿವ್ ಅಪ್ರೋಚ್ ಎಂಬ ಲೇಖನದಲ್ಲಿ ಬಡತನವನ್ನು ನಿವಾರಿಸುವುದು. ಭಾರತದ ಅಭಿವೃದ್ಧಿ ಕೌಶಲ್ಯದ ಒಂದು ಮುಖ್ಯ ಗುರಿಯಾಗಿದೆ. ೧೯೯೩ರಲ್ಲಿ ಶೇ.೩೬ರಷ್ಟು ಜನರು ಬಡತನ ರೇಖೆಗಿಂತ ಕಡಿಮೆ ಇದ್ದರು. ೩೨೦ ಮಿಲಿಯನ್ ಜನರು ಬಡತನ ರೇಖೆಗಿಂತ ಕಡಿಮೆ ಇದ್ದು, ೨೭೪ ಮಿಲಿಯನ್ ಜನರು ಗ್ರಾಮೀಣ ಭಾಗದಲ್ಲಿ ನೆಲೆಸಿದ್ದಾರೆ. ೧೯೭೪ರಲ್ಲಿ ಬಡತನದ ಸ್ಥಿತಿ ಶೇ.೫೪೯ರಷ್ಟು ಇದ್ದಿದ್ದು, ೧೯೯೩-೯೪ರಲ್ಲಿ ಶೇ.೩೬ರಷ್ಟು ಕುಂಠಿತಗೊಂಡಿದೆ. ಅಭಿವೃದ್ಧಿ ಸಾಧಿಸಲು ಹಲವಾರು ಕಾರ್ಯಕ್ರಮಗಳು ಬಡತನದ ವಿರುದ್ಧ ಕಾರ್ಯಕ್ರಮಗಳಿವೆ. ೧೯೯೯ರಲ್ಲಿ ಪುನರ್‌ರಚಿಸಿದ ಸ್ವರ್ಣಜಯಂತಿ ಗ್ರಾಮ ಸ್ವರಾಜ್ಯ ಯೋಜನೆಯನ್ನು ಕೇಂದ್ರಿಕೃತ ಮಾಡಿಕೊಂಡು ಸ್ವ-ಸಹಾಯ ಗುಂಪುಗಳ ಪರಿಕಲ್ಪನೆಯ ಮೇಲೆ ಬಡತನವನ್ನು ನಿವಾರಿಸಲು ಒಂದು ಪರಿಣಾಮಕಾರಿ ವಾಹನವಾಗಿದೆ. ಇದರಿಂದ ಬಡತನವನ್ನು ಗಮನಾರ್ಹವಾಗಿ ತೆಗೆದುಹಾಕಬಹುದಾಗಿದೆ. ಅದು ಒಂದು ಸಾಮಾಜಿಕ ಒಟ್ಟು ಗೂಡಿವಿಕೆಯ ಕ್ರಿಯೆಯ ಮೂಲಕ ಬೆಳವಣಿಗೆ ಪ್ರಕ್ರಿಯೆಗೆ ಕೂಡಬಹುದಾದ ಪ್ರಾರಂಭ ಪ್ರಕ್ರಿಯೆ ಆಗಿದೆ. ಇದು ಭಾಗವಹಿಸತಕ್ಕಂತಹ ಮಾರ್ಗ ಮತ್ತು ಬಡವರನ್ನು ಶಕ್ತಿಯುತರನ್ನಾಗಿ ಮಾಡುವ ಮಾರ್ಗವಾಗಿದೆ.[೪] ಬಡತನವನ್ನು ನಿವಾರಿಸಬೇಕಾದರೆ ಮುಖ್ಯವಾಗಿ ಶಿಕ್ಷಣ, ಆರೋಗ್ಯ ಮತ್ತು ಗುಣಮಟ್ಟ ಜೀವನ ಇವುಗಳನ್ನು ಪೂರೈಸಿದರೆ ಕೌಶಲ್ಯ ತನ್ನಷ್ಟಕ್ಕೆ ತಾನೇ ಬರುತ್ತದೆ.

ರಾಜೇಶ್ವರಿ ಮತ್ತು ಸುಮಂಗಳಾ (೧೯೯೯) ಅವರು ವುಮೆನ್, ಎಂಟ್ರಪ್ರಿನ್ಯೂರ್ಸ್-ಎ ಸ್ಕ್ಯಾನ್ ಆನ್ ದೇರ್ ಪ್ರಾಬ್ಲಮ್ಸ್ ಅಂಡ್ ಪ್ರಾರ್ಸ್‌ಪೆಕ್ಟ್ಸ್ ಇನ್ ವುಮೆನ್ ಎಂಟ್ರಪ್ರಿನ್ಯೂರ್‌ಶಿಪ್ ಇಶ್ಯೂಸ್ ಅಂಡ್ ಸ್ಟ್ರಟಜೀಸ್ ಎಂಬ ಲೇಖನದಲ್ಲಿ ಮಹಿಳಾ ಉದ್ದಿಮೆಗಳ ಸಮಸ್ಯೆಗಳನ್ನು ಹೇಳಿದ್ದಾರೆ. ಮಹಿಳಾ ಉದ್ಯಮಶೀಲತ್ವ ಸಣ್ಣ ಬಂಡವಾಳ ಸಂಪನ್ಮೂಲಗಳನ್ನು ಸೇರಿಸುವ ಅರ್ಹತೆ ಬರುತ್ತದೆ ಮತ್ತು ಮಹಿಳೆಯರಿಗೆ ಕೌಶಲ್ಯ ದೊರೆಯುವ ಹಾಗೆ ಮಾಡುತ್ತದೆ. ಇದು ಬಂಡವಾಳವನ್ನು ಸಂಪೂರ್ಣವಾಗಿ ಉಪಯೋಗಿಸುವಂತೆ ಮಾಡಿ ಮತ್ತು ಮಹಿಳೆ ಮಾನವ ಸಾಮರ್ಥ್ಯ ಉಳ್ಳವರನ್ನಾಗಿ ಒಟ್ಟುಗೂಡಿಸುತ್ತದೆ. ಮಹಿಳಾ ಉದ್ಯಮಶೀಲತ್ವ ಸಣ್ಣ ಅಥವಾ ದೊಡ್ಡ ಪ್ರಮಾಣದಲ್ಲಿ ಬಂಡವಾಳವನ್ನು ಉತ್ಪಾದಿಸಬಹುದು. ಬಂಡವಾಳವನ್ನು ಉತ್ಪಾದಿಸಬೇಕಾದರೆ ಮಹಿಳೆಯರಿಗೆ ತಾಂತ್ರಿಕ ಕೌಶಲ್ಯ ಬೇಕಾಗುತ್ತದೆ ಹಾಗೂ ಇಂದಿನ ಜಾಗತೀಕರಣದಲ್ಲಿ ಉತ್ಪಾದನೆ ಆಗುತ್ತಿರುವಂತಹ ಸರಕು-ಸೇವೆಗಳಿಗೆ ಪೈಪೋಟಿ ನೀಡುವ ರೀತಿಯಲ್ಲಿ ತರಬೇತಿಯನ್ನು ಕೊಡಬೇಕಾಗುತ್ತದೆ.[೫] ಪ್ರಸ್ತುತ ಮಹಿಳಾ ಉದ್ಯಮಿಗಳು ಶಿಕ್ಷಣದ ಕೊರತೆಯಿಂದ ಇಂದಿನ ಜಾಗತೀಕರಣಕ್ಕೆ ಅನುಗುಣವಾಗಿ ವಸ್ತುಗಳನ್ನು ಉತ್ಪಾದಿಸುವಲ್ಲಿ ವಿಫಲರಾಗುತ್ತಿದ್ದಾರೆ. ಲೇಖಕರು ಇದನ್ನು ಗುರುತಿಸಿಲ್ಲ.

ಗುರುಮೂರ್ತಿ (೨೦೦೦) ಅವರು ಸೆಲ್ಫ್-ಹೆಲ್ಪ್ ಗ್ರೂಪ್ಸ್ ಎಂಪವರ್ ರೂರಲ್ ವುಮೆನ್ ಎಂಬ ಲೇಖನದಲ್ಲಿ ಮಹಿಳೆಯರ ಭಾಗವಹಿಸುವಿಕೆ ಗ್ರಾಮೀಣ ಉದ್ಯೋಗ ಚಟುವಟಿಕೆಗಳಲ್ಲಿ ಮಹತ್ವವಾದ ಪಾತ್ರವಹಿಸುತ್ತದೆ. ಸ್ವ-ಸಹಾಯ ಪ್ರಯೋಜನ ಸರ್ವತೋಮುಖ ಅಭಿವೃದ್ಧಿ ಮತ್ತು ಸಂಪೂರ್ಣವಾಗಿ ಅವರ ಹಳ್ಳಿಯ ಬಗ್ಗೆ ಗಮನ ಸೆಳೆಯುತ್ತದೆ. ಗುಂಪುಗಳು ಸಾಲ ರಹಿತ ಸೇವೆಗಳಾದ ಸಾಕ್ಷರತೆ, ಆರೋಗ್ಯ ಮತ್ತು ಪರಿಸರದಂತಹ ಸನ್ನಿವೇಶಗಳನ್ನು ಕಾರ್ಯಗತ ಮಾಡುವ ಜವಾಬ್ದಾರಿ ತೆಗೆದುಕೊಳ್ಳುತ್ತವೆ. ಸ್ವ-ಸಹಾಯ ಗುಂಪಿನ ಪರಿಕಲ್ಪನೆ ಮಹಿಳೆಯರನ್ನು ದೇಶದ ಒಂದು ಜವಾಬ್ದಾರಿಯುತ ಪ್ರಜೆಯನ್ನಾಗಿ ಮಾಡಿ ಆರ್ಥಿಕ ಮತ್ತು ಸಾಮಾಜಿಕ ಅಂತಸ್ತನ್ನು ಸಾಧಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಈ ಗುಂಪುಗಳು ಮುಂದೆ ಜವಾಬ್ದಾರಿ ಕೆಲಸ ನಿರ್ವಹಿಸುತ್ತಾ, ಸಾಂಪ್ರದಾಯಿಕ ಅವಿದ್ಯಾವಂತ ಗ್ರಾಮೀಣ ಮಹಿಳೆಯರಿಗೆ ಎಲ್ಲಾ ರೀತಿಯ ಸಹಾಯ ಮಾಡುತ್ತಿವೆ.[೬] ಪುರುಷ ಪ್ರಧಾನ ವ್ಯವಸ್ಥೆ ಇರುವವರೆಗೂ ಯಾವುದೇ ಮಹಿಳೆ ಸ್ವಂತ ಜವಾಬ್ದಾರಿಯಿಂದ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ.

ಕಾಮತ್ (೨೦೦೦) ಅವರು ರೂರಲ್ ಡೆವೆಲಪ್‌ಮೆಂಟ್ ಆ್ಯಕ್ಟಿವಿಟೀಸ್ ಎಂಬ ಪುಸ್ತಕದಲ್ಲಿ ನಮ್ಮ ದೇಶದಲ್ಲಿ ನಿರುದ್ಯೋಗ ಎಂಬ ಮುಖ್ಯವಾದಂತಹ ರೋಗದಿಂದ ಗ್ರಾಮೀಣ ಯುವಕರು ಅನುಭವಿಸುತ್ತಿರುವುದನ್ನು ಇವರು ಗಮನಿಸಿದ್ದಾರೆ. ನಿರುದ್ಯೋಗಿ ಯುವಕರಿಗೆ ಸೌಲಭ್ಯ ಒದಗಿಸಲು ಸ್ವ-ಉದ್ಯೋಗದ ಮೂಲಕ ಪ್ರೇರೇಪಿಸುತ್ತಿದೆ. ದಕ್ಷಿಣ ರಾಜ್ಯಗಳಲ್ಲಿ ಬ್ಯಾಂಕುಗಳು ಸ್ವ-ಉದ್ಯೋಗ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿವೆ. ರಾಷ್ಟ್ರೀಯ ಪ್ರಾಶಸ್ತ್ಯ (ನ್ಯಾಷನಲ್ ಪ್ರಾಯಾರಿಟೀಸ್)ಗಳನ್ನು ಮನದಲ್ಲಿಟ್ಟುಕೊಂಡು ಈ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಬ್ಯಾಂಕಿನಿಂದ ಮಹಿಳೆಯರು ಹಣಕಾಸಿನ ನೆರವನ್ನು ೧೨,೧೬ ಕೋಟಿಗಳಲ್ಲಿ ಆರು ಲಕ್ಷಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಪಡೆದುಕೊಂಡಿದ್ದಾರೆ. ಬ್ಯಾಂಕುಗಳು ೬೭೫೪ ಗುಂಪುಗಳಲ್ಲಿ ೫೩೦೪ ಗುಂಪುಗಳಿಗೆ ನೆರವನ್ನು ನೀಡಿವೆ. ಈ ಎಲ್ಲಾ ಗುಂಪುಗಳು ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕ್ರಾಂತಿಯನ್ನುಂಟು ಮಾಡುತ್ತಿವೆ.[೭] ಭಾರತದಲ್ಲಿ ಶೇ.೫೦ ರಿಂದ ೬೦ ರಷ್ಟು ಯುವಕರಿದ್ದಾರೆ ಹಾಗೂ ಇದರಲ್ಲಿ ಶೇ.೫೦ರಷ್ಟು ನಿರುದ್ಯೋಗಿ ಯುವಕರಿದ್ದಾರೆ ಇವರಿಗೆ ಸ್ವ-ಉದ್ಯೋಗ ತರಬೇತಿ ಕೊಡುವುದಕ್ಕಿಂತ ಪೂರ್ವದಲ್ಲಿ ಗ್ರಾಮೀಣ ಮಟ್ಟದಲ್ಲಿರುವಂತಹ ಜನರಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸಿದರೆ ನಿರುದ್ಯೋಗದ ಸಮಸ್ಯೆಯೇ ಉದ್ಭವಿಸುವುದಿಲ್ಲ.

ವಿಜಯ ಡಿ. ಕುಲಕರ್ಣಿ (೨೦೦೦) ಅವರು ಎಂಪವರ್‌ಮೆಂಟ್ ಆಫ್ ವುಮೆನ್ ಥ್ರೂ ಸೆಲ್ಫ್-ಹೆಲ್ಪ್ ಗ್ರೂಪ್ಸ್ ಎಂಬ ಲೇಖನದಲ್ಲಿ ಒಂದೇ ಗ್ರಾಮದಲ್ಲಿ ಸ್ವ-ಸಹಾಯ ಗುಂಪಿನ ಸದಸ್ಯರು ಮತ್ತು ಸದಸ್ಯರಲ್ಲದವರ ನಡುವೆ ಯಾವ ರೀತಿ ವ್ಯತ್ಯಾಸವಿದೆ ಎಂದು ವಿಶ್ಲೇಷಿಸಿದ್ದಾರೆ. ಸಬಲೀಕರಣವು ಜಾತಿ

ಮತ್ತು ವರ್ಣದ ಮೇಲೆ ಆಗಿದೆ. ಇದು ಸ್ವಲ್ಪಮಟ್ಟಿಗೆ ಜಾತಿರಾಜಕಾರಣ ಮಾಡುವುದಕ್ಕೆ ಮಹಿಳೆಯರನ್ನು ಒಂದು ಕಡೆ ಸೇರಲು ಅನುಕೂಲಕರವಾಗಿದೆ.[೮]

ಸುಮನ್ ಕೃಷ್ಣನ್‌ಕಾಂತ್ (೨೦೦೧) ಅವರು ವುಮೆನ್ ಎಂಪವರ್‌ಮೆಂಟ್ ಅಂಡ್ ಮ್ಯೂಚ್ವಲ್ ಕೋ-ಆಪರೇಷನ್ ಇನ್ ದಿ ಫ್ಯಾಮಿಲಿ ಎಂಬ ಲೇಖನದಲ್ಲಿ ಮಹಿಳಾ ಸಬಲೀಕರಣದ ಪ್ರಕ್ರಿಯೆಯು ವಿವಿಧ ಆಯಾಮಗಳಿಂದ ಕೂಡಿದೆ. ಇದು ಮಹಿಳೆಯರಿಗೆ ಜೀವನದ ಎಲ್ಲಾ ರಂಗಗಳಲ್ಲಿ ಸಂಪೂರ್ಣ ಅಧಿಕಾರವನ್ನು ಪಡೆಯುವುದಕ್ಕೆ ಸಹಕಾರಿಯಾಗಿದೆ. ಭಾರತದಲ್ಲಿ ಮಹಿಳೆ ಕಾರ್ಮಿಕ ಶಕ್ತಿಗೆ ಒಂದು ಮಹತ್ವವಾದ ಭಾಗವಾಗಿದ್ದರೂ ಸಹ ಅವರ ಕೊಡುಗೆಯನ್ನು ಗುರುತಿಸದೆ ಹಾಗೇ ಉಳಿದುಬಿಟ್ಟಿದೆ. ಮಹಿಳೆಯರು ಅಸಂಘಟಿತ ವಲಯದಲ್ಲಿ ಶೇ.೯೦ರಷ್ಟು ಇದ್ದಾರೆ, ಆದರೆ ದೇಶದ ಜನಗಣತಿಗೂ ಅಥವಾ ರಾಷ್ಟ್ರೀಯ ಲೆಕ್ಕದ ಖಾತೆಗೂ ಗಣನೆಗೆ ತೆಗೆದುಕೊಂಡಿಲ್ಲ. ಮಹಿಳಾ ಉತ್ಪಾದನಾ ಶಕ್ತಿ ಜನಸಂಖ್ಯೆಯ ಅರ್ಧದಷ್ಟಿದ್ದು, ಗಣನೆಗೆ ತೆಗೆದುಕೊಳ್ಳದೆ ಹಾಗೆಯೇ ಉಳಿದಿದೆ. ಆದ್ದರಿಂದ ತಮ್ಮ ಪಾತ್ರಗಳನ್ನು ಪುನಃ ವಿಮರ್ಶಿಸಲ್ಪರಡುತ್ತವೆ. ಜಗತ್ತಿನಲ್ಲಿ ಸುಮಾರು ೧೩೦೦ ಮಿಲಿಯನ್ ಜನಸಂಖ್ಯೆ ಬಡವರಾಗಿದ್ದಾರೆ. ಅವರಲ್ಲಿ ಶೇ.೨ರಷ್ಟು ಮಹಿಳೆಯರಿದ್ದಾರೆ. ಇತ್ತೀಚಿನ ದಿನಗಳಲ್ಲಿ ಶೇ.೩೦ರಿಂದ ೩೫ರಷ್ಟು ಗ್ರಾಮೀಣ ಕುಟುಂಬಗಳಿಗೆ ಮಹಿಳೆಯರೇ ಕುಟುಂಬದ ಮುಖ್ಯಸ್ಥರಾಗಿದ್ದು, ಅವರಿಗೆ ಕಡಿಮೆ ಆದಾಯ ಇದ್ದರೂ ಸಹ ಬಡತನದಿಂದ ದೂರವಿದ್ದಾರೆ.[೯]

ವೆಲುರಾಜ (೨೦೦೧) ಅವರ ಸೆಲ್ಫ್-ಹೆಲ್ಪ್ ಗ್ರೂಪ್ಸ್ ಆ್ಯನ್ ಆಲ್ಟರ್‌ನೇಟಿವ್ ಅಪ್ರೋಚ್ ಟು ಎಂಪವರ್ ರೂರಲ್ ವುಮೆನ್ ಎಂಬ ಲೇಖನದಲ್ಲಿ ನೋಬೆಲ್ ಪುರಸ್ಕೃತ ಮತ್ತು ಭಾರತದ ಅರ್ಥಶಾಸ್ತ್ರಜ್ಞ ಅಮಾರ್ತ್ಯಸೇನ್ ಅವರ ಮಾತುಗಳಲ್ಲಿ "ಅಭಿವೃದ್ಧಿಶೀಲ ದೇಶಗಳಲ್ಲಿ ಮಹಿಳಾ ಸಬಲೀಕರಣವನ್ನು ಹೊರತುಪಡಿಸಿ, ಸಾಕ್ಷರತೆ, ಆರೋಗ್ಯ ಮತ್ತು ಜನಸಂಖ್ಯಾ ಸ್ಫೋಟದಂತಹ ಮುಂತಾದ ಪರಿಹರಿಸಲಾಗದ ಸಮಸ್ಯೆಗಳು ಇನ್ನೂ ಉಳಿದಿವೆ." ಭಾರತದಲ್ಲಿ ಇನ್ನೂ ಬಹುತೇಕ ಮಹಿಳೆಯರು ಮನೆಯಲ್ಲಿ ಮತ್ತು ಕೃಷಿಯಲ್ಲಿ ತಮ್ಮ ಸಾಂಪ್ರದಾಯಿಕ ಪಾತ್ರಗಳನ್ನು ಮುಂದುವರಿಸುತ್ತಿದ್ದಾರೆ ಮಹಿಳೆಯ ಪುರುಷರ ಪತ್ನಿಯರಾಗಿ ಅವರನ್ನು ಪ್ರಸ್ತುತ ಸನ್ನಿವೇಶವು ಪುರುಷರ ಮೇಲೆ ಅವಲಂಭಿಸಲು ಒತ್ತಾಯಿಸುತ್ತದೆ. ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯ ಶೇ.೮ಅನ್ನು ಮೀರಿ ಎಂದಿಗೂ ಇಲ್ಲ, ರಾಜ್ಯ ಸಭೆಗಳಲ್ಲಿ ಶೇ.೧೦ರಷ್ಟು, ಶೇ.೧೨ರಷ್ಟು ಸರ್ಕಾರಿ ಆಡಳಿತಾತ್ಮಕ ಮತ್ತು ಹಿರಿಯ ನಿರ್ವಹಣಾ ಹುದ್ದೆಗಳಲ್ಲಿದ್ದಾರೆ. ಆದ್ದರಿಂದ ಇಲ್ಲಿ ಯಾವುದೇ ರೀತಿಯ ಸಮಾನ ಅವಕಾಶವಿಲ್ಲ.[೧೦]

ಪಟೇಲ್ (೨೦೦೧) ಅವರು ರೂರಲ್ ಕ್ರೆಡಿಟ್ ಸಿಸ್ಟಮ್ ಎಂಬ ಲೇಖನದಲ್ಲಿ ಭಾರತ ಸರಕಾರದಿಂದ ಇತ್ತೀಚೆಗೆ ರಾಷ್ಟ್ರೀಯ ಕೃಷಿ ನೀತಿಯ ಘೋಷಣೆಯನ್ನು ಸ್ವಾಗತಿಸಿದ್ದು, ಜಾಗತಿಕ ವ್ಯಾಪಾರ ಸಂಘಟನೆಯೊಂದಿಗೆ ಕೃಷಿಯ ಮೇಲೆ ಒಪ್ಪಂದವಾಗಿದೆ. ಅವರು ಗ್ರಾಮೀಣ ಸಾಲವ್ಯವಸ್ಥೆಯನ್ನು

ಪುನರ್‌ರಚಿಸಲು ಹೆಚ್ಚಿನ ಅವಶ್ಯಕತೆ ಇದೆ ಎಂದು ಒತ್ತುಕೊಟ್ಟಿದ್ದಾರೆ. ಹಾಗೆಯೇ ಕೃಷಿ ಅಭಿವೃದ್ಧಿಯನ್ನು ಸಾಧಿಸಲು ಕೃಷಿಯ ಸಂಶೋಧನೆ, ಶಿಕ್ಷಣದ ವ್ಯವಸ್ಥೆಯನ್ನು ವಿಸ್ತರಿಸುವಿಕೆ, ಗ್ರಾಮೀಣ ಮೂಲ ಸೌಕರ್ಯಗಳ ನಿರ್ಮಾಣಕ್ಕೆ ಸರ್ಕಾರಿ ಅಧಿಕಾರಿಗಳು ಒತ್ತುಕೊಟ್ಟಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿ ಗ್ರಾಮೀಣ ಸಾಲದ ರಚನೆಯಲ್ಲಿ ಬದಲಾವಣೆಯಾಗಿದ್ದು, ಸಾಲದ ಮರುಪಾವತಿಯು ಸಹ ಉತ್ತಮಗೊಳ್ಳುತ್ತಿದೆ ಮತ್ತು ಚಟುವಟಿಕೆ ಮಾಡದೆ ಇರುವ ಆಸ್ತಿ (ನಾನ್ ಪರ್‌ಫಾರ್‌ಮಿಂಗ್ ಅಸ್ಸೆಟ್ಸ್)ಗಳ ವಹಿವಾಟು ಕಡಿಮೆಯಾಗಿದೆ.[೧೧]

ಘೋಷ (೨೦೦೧) ಅವರು ಎನ್.ಜಿ.ಓ ಇಂಟರ್‌ವೆನ್ಷನ್ ಇನ್ ಪಾವರ್ಟಿ ಅಲ್ಲಿವೇಷನ್ ಎಂಬ ಲೇಖನದಲ್ಲಿ ಬಡತನವನ್ನು ಹೋಗಲಾಡಿಸಲು ಸರಕಾರ ಒಂದರಿಂದ ಮಾತ್ರ ಸಾಧ್ಯವಿಲ್ಲ ಎಂದು ತೋರಿಸಿಕೊಟ್ಟಿದ್ದಾರೆ. ಬಡವರಿಗೆ ಭದ್ರತೆಯನ್ನು ಒದಗಿಸಲು ಮತ್ತು ಸಬಲೀಕರಣಕ್ಕೆ ಅವಕಾಶಗಳನ್ನು ಕಲ್ಪಿಸಿಕೊಡಲು ಸರ್ಕಾರೇತರ ಸಂಸ್ಥೆಗಳ ಅವಶ್ಯಕತೆ ಸರ್ಕಾರಕ್ಕೆ ಇದೆ. ಸರ್ಕಾರವು ಸರ್ಕಾರೇತರ ಸಂಸ್ಥೆಗಳ ಮೂಲಕ ಕಾರ್ಯಕ್ರಮ ಅಭಿವೃದ್ಧಿಗೊಳಿಸುವಿಕೆಯಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ ಹೆಚ್ಚಿಸುತ್ತವೆ ಮತ್ತು ಬಡತನ ವಿರುದ್ಧ ಹೋರಾಡಲು ಈ ಸಂಸ್ಥೆಗಳ ಪಾತ್ರ ಬಹುಮುಖ್ಯವಾದುದಾಗಿದೆ.[೧೨]

ಬಿನ್ ಅಗರವಾಲ್ (೨೦೦೧) ಅವರು ಭೂಮಿಯ ಹಕ್ಕುಗಳು ಮತ್ತು ಲಿಂಗ ಸಮಾನತೆ ಎಂಬ ಲೇಖನದಲ್ಲಿ ಮಹಿಳಾ ಕಲ್ಯಾಣ ಮತ್ತು ಸಬಲೀಕರಣಕ್ಕೆ ಸುರಕ್ಷಿತ ಮತ್ತು ಪರಿಣಾಮಕಾರಿ ಭೂಮಿ ಹಕ್ಕುಗಳಿಗೆ ನಿರ್ಣಾಯಕ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಆದರೆ ಈ ಅವಶ್ಯಕತೆಗಳನ್ನು ಸಾಧಿಸಲು ಲಿಂಗ ಪ್ರಗತಿಪರ ಸಂಘಟನೆಗಳು, ವಿಶೇಷವಾಗಿ ಮಹಿಳಾ ಗುಂಪುಗಳ ಸತತ ಪ್ರಯತ್ನ ಅಗತ್ಯವಿದೆ. ಯಾರು ಮಹಿಳೆಯರ ಸಬಲೀಕರಣ ಬಡತನ ಮತ್ತು ನ್ಯಾಯ ಸಮ್ಮತ ಅಭಿವೃದ್ಧಿಯ ಬಗ್ಗೆ ಶ್ರಮಿಸುತ್ತಾರೋ ಅವರಿಗೆ ಸರ್ಕಾರ ಬೆಂಬಲಿಸುತ್ತಿದೆ.[೧೩]

ಸುಬ್ರಮನಿಯನ್ (೨೦೦೧) ಅವರು ರೂರಲ್ ಡೆವೆಲೆಪ್‌ಮೆಂಟ್ ಅಂಡ್ ಆ್ಯಸ್‌ಪೈರೇಷನ್ಸ್ ಇನ್ ತ್ರಿಪುರ ಎಂಬ ಲೇಖನದಲ್ಲಿ ಸರ್ಕಾರೇತರ ಸಂಸ್ಥೆಗಳು ಸ್ವ-ಸಹಾಯ ಗುಂಪುಗಳನ್ನು ಸಂಘಟಿಸಲು, ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಮತ್ತು ಸರ್ಕಾರದ ಸಂಪನ್ಮೂಲಗಳನ್ನು ಸಂಗ್ರಹಿಸಲು ಬಹಳ ಉಪಯುಕ್ತವಾಗಿವೆ. ಹಾಗಾದಾಗ್ಯೂ ಅಧಿಕಾರಿಗಳು ಸರ್ಕಾರೇತರ ಸಂಸ್ಥೆಗಳ ಬಗ್ಗೆ ಅನುಮಾನ ದೃಷ್ಟಿಹೊಂದಿದ್ದು, ಅವರ ಶಕ್ತಿ ಕಡಿಮೆಯಾಗುತ್ತದೆ ಎಂದು ತಿಳಿದುಕೊಂಡಿದೆ. ಸರಕಾರೇತರ ಸಂಸ್ಥೆಗಳಿಗೆ ಸರ್ಕಾರಿ ಯೋಜನೆಗಳನ್ನು ಜಾರಿಗೆ ತರಲು ಅನುಮತಿಸಿದಾಗ ಈ ಅಧಿಕಾರಿಗಳು ಮಧ್ಯಪ್ರವೇಶಿಸಿ ಅಡ್ಡಿಪಡಿಸಿದ್ದಾರೆ. ಇತ್ತೀಚೆಗೆ ಪುನಃರಚಿತವಾದ ಸ್ವರ್ಣಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆಯಲ್ಲಿ ಸ್ವಯಂ ಉದ್ಯೋಗ ಯೋಜನೆ ರಚನೆಯಲ್ಲಿ, ಗುಂಪುಗಳ ರಚನೆಯಲ್ಲಿ ಸ್ವ-ಸಹಾಯ ಗುಂಪುಗಳ

ಪರಿಕಲ್ಪನೆ ಹೆಚ್ಚು ಒಪ್ಪುವಂತಾಗಿದೆ. ಹೇಗಾದರೂ ಆಗಲಿ ಈಶಾನ್ಯ ರಾಜ್ಯಗಳಲ್ಲಿ ಸ್ವ-ಸಹಾಯ ಗುಂಪುಗಳ ಮೂಲಕ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ.[೧೪]

ಓಜಾ (೨೦೦೧) ಅವರು ಸೆಲ್ಫ್-ಹೆಲ್ಪ್ ಗ್ರೂಪ್ ಅಂಡ್ ರೂರಲ್ ಎಂಪ್ಲಾಯ್‌ಮೆಂಟ್ ಎಂಬ ಲೇಖನದಲ್ಲಿ ಸಂಬಂಧಿಸಿದಂತೆ ಸ್ವ-ಉದ್ಯೋಗದ ಮಾದರಿಯು ಕಾರ್ಯಗತ ನಮೂನೆಯಾಗಿ ಕಾಣಲ್ಪಡುವುದು. ಆದಾಗ್ಯೂ ಸಹ ಸ್ವ-ಸಹಾಯ ಗುಂಪುಗಳಿಗೆ ಅತಿ ಹೆಚ್ಚಿನ ಲಕ್ಷಣವಹಿಸಬೇಕಾದ ಅವಶ್ಯಕತೆ ಇದೆ. ಸ್ವ-ಸಹಾಯ ಮೇಲಿನ ಹುದ್ದೆಗೆ ಜನರಿಗೆ ಸಹಾಯ ಮಾಡುವುದನ್ನು ಕೂಡಿಕೊಂಡಂತೆ ಒಟ್ಟಾಗಿ ಸೇವೆಯ ಮತ್ತು ಒಂದು ಸಂಸ್ಥೆ ಪ್ರಾರಂಭಿಸಲು ಅದರ ವ್ಯಕ್ತಿಗಳ ಮೇಲ್ದರ್ಜೆ ಮತ್ತು ಒಟ್ಟಾರೆ ಕೌಶಲ್ಯ ಮತ್ತು ಅವರದೆ ಆದಂತಹ ಅವಕಾಶಗಳು ಅಭಿವೃದ್ಧಿಗೆ ಕಾರಣವಾಗಿವೆ. ಸ್ವ-ಸಹಾಯ ಗುಂಪುಗಳ ಸ್ವಂತ ನಿರ್ಧಾರಗಳ ಜೊತೆಗೆ ಸ್ವ-ಸುಸ್ಥಿರ ಅಭಿವೃದ್ಧಿಯು ಸ್ವ-ಸಹಾಯ ಉತ್ತೇಜನದ ಗುರಿಯಾಗಿದೆ.[೧೫]

ದೀಪೇಂದ್ರ ಬ್ಯಾನರ್ಜಿ (೨೦೦೧) ಅವರು ಮೈಕ್ರೋ-ಫೈನಾನ್ಸಿಂಗ್ ಎಂಬ ಪುಸ್ತಕದಲ್ಲಿ ಸೂಕ್ಷ್ಮ ಹಣಕಾಸಿನ ಬಗ್ಗೆ ಹೆಚ್ಚಿನ ಒಪ್ಪಿಗೆಯ ವಿವರಣೆಯನ್ನು ಕೊಟ್ಟಿದ್ದಾರೆ. ಇದು ಮಿತವ್ಯಯ ಸಾಲವನ್ನು ಒದಗಿಸಿಕೊಡುವುದಾಗಿದೆ. ಬೇರೆ ಹಣಕಾಸಿನ ಉತ್ಪನ್ನಗಳು, ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಿಗೆ ತಮ್ಮ ಆರ್ಥಿಕ ಮಟ್ಟ ಹೆಚ್ಚಿಸಿಕೊಳ್ಳುವ ಸಾಮರ್ಥ್ಯಕ್ಕೆ ಮತ್ತು ಜೀವನಮಟ್ಟ ಸುಧಾರಿಸಲು ಹಣಕಾಸಿನ ಸಹಾಯ ಒದಗಿಸುವುದಾಗಿದೆ. ಹಣಕಾಸಿನ ಸೇವೆ ಅಸಮರ್ಥ ಗುಂಪುಗಳಿಗೆ ನೇರವಾಗಿ ಕೊಡುವುದಲ್ಲದೆ ಮತ್ತು ಎಸ್.ಜಿ.ಎಸ್.ವೈ. ಅಡಿಯಲ್ಲಿ ಬ್ಯಾಂಕಿಂಗ್ ಸಂಸ್ಥೆಗಳು ಸೂಕ್ಷ ಸಾಲದ ಮೇಲೆ ಬಡ್ಡಿ ನಿರ್ಧರಿಸುವ ವಿಶೇಷ ಹಕ್ಕು ಹೊಂದಿರುತ್ತವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ನಿರುದ್ಯೋಗ ಮತ್ತು ಬಡತನ ನಿವಾರಣೆಗೆ ಹಣಕಾಸಿನ ಮಾರುಕಟ್ಟೆಯಲ್ಲಿ ಸೂಕ್ಷ್ಮಸಾಲದ ಮಹತ್ವದ ಪ್ರಗತಿಯಾಗಿದೆ. ಇದು ಎಲ್ಲವನ್ನು ಕಳೆದುಕೊಂಡಂತಹ ಜನಾಂಗ ವ್ಯವಹಾರ ಮಾಡಲು ಮತ್ತು ಸಬಲರಾಗಲು ಸಹಾಯ ಮಾಡುತ್ತದೆ. ಈ ತರಹದ ಕಷ್ಟ ಪಟ್ಟು ಕಷ್ಟದಿಂದ ಹೊರಬರುತ್ತಾರೆ. ಕೇಂದ್ರ ಬ್ಯಾಂಕು ಸೂಕ್ಷ್ಮ ಸಾಲದ ಸಂಸ್ಥೆಗಳ ಕಡಿಮೆ ಬಡ್ಡಿದರದಲ್ಲಿ ಸಾಲಕೊಡುವ ಮೂಲಕ ಸಹಾಯ ಮಾಡುತ್ತದೆ.[೧೬]

ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ (೨೦೦೧) ಮಹಿಳೆಯರ ಸಾಲಬಳಕೆ, ಉತ್ಪನ್ನಗಳ ಸಲುವಾಗಿ ಸ್ಥಿರಗೊಳಿಸಲು, ಹೊಸ ಸಂಸ್ಥೆಗಳನ್ನು ಸ್ಥಾಪಿಸಲು ಸೂಕ್ಷ್ಮ ಸಾಲ ಯಾಂತ್ರಿಕತೆಯನ್ನು ಬಲಗೊಳಿಸಲು ಸಣ್ಣ ಹಣಕಾಸಿನ ಸಂಸ್ಥೆಗಳು ಕೈಗೆ ತೆಗೆದುಕೊಳ್ಳಲಾಗುವುದು. ಇದರಿಂದ ಸಾಲದ ಮಿತಿ ಸಂಪೂರ್ಣವಾಗಿ ಹೆಚ್ಚಾಗುವುದು. ಬೇರೆ ರೀತಿಯ ಪರಿಹಾರಾತ್ಮಕ ವಿಧಾನಗಳನ್ನು ಸಮರ್ಥವಾಗಿ ಹಣಕಾಸಿನ ಸಂಸ್ಥೆಗಳಿಂದ ಮತ್ತು ಬ್ಯಾಂಕುಗಳಿಂದ ಸಾಲ ಪೂರೈಕೆಯಾಗಲು ಅವಕಾಶ ಕೊಟ್ಟಾಗ ಮಾತ್ರ ಬಡತನ ರೇಖೆಗಿಂತ ಕೆಳಗೆ ಇದ್ದಂತಹ ಮಹಿಳೆಯರಿಗೆ ಸರಳವಾಗಿ ಸಿಗುವಂತಾಗುತ್ತದೆ.[೧೭]

ಬಾರಿಕ್ ಮತ್ತು ವನ್ನನ್ (೨೦೦೧) ಅವರು ಪ್ರೊಮೋಟಿಂಗ್ ಸೆಲ್ಫ್-ಹೆಲ್ಪ್ ಗ್ರೂಪ್ಸ್ ಆ್ಯಸ್ ಸಬ್ ಸಿಸ್ಟಮ್ ಆಫ್ ಕ್ರೆಡಿಟ್ ಕೋ-ಆಪರೇಟಿವ್ಸ್ ಎಂಬ ಲೇಖನದಲ್ಲಿ ಸ್ವ-ಸಹಾಯ ಗುಂಪುಗಳು ಸಹಕಾರ ಸಾಲ ಪದ್ಧತಿಯ ಒಂದು ಉಪವಿಭಾಗ ಎಂದು ಹೇಳಿದ್ದಾರೆ. ಸ್ವ-ಸಹಾಯ ಗುಂಪುಗಳನ್ನು ಗ್ರಾಮೀಣ ಮಟ್ಟದಲ್ಲಿ ಕೃಷಿ ಪ್ರಾಥಮಿಕ ಸಹಕಾರ ಸಂಘಗಳಾಗಿ ಉಪವಿಭಾಗ ರೀತಿಯಲ್ಲಿ ಅಭಿವೃದ್ಧಿಪಡಿಸಬಹುದಾಗಿದೆ. ಅವರು ಹೆಚ್ಚಿನ ಸ್ವ-ಸಹಾಯ ಗುಂಪುಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ವಾಣಿಜ್ಯ ಬ್ಯಾಂಕುಗಳಿಗೆ ಜೋಡಿಸಿದ್ದಾರೆ. ಅದೇನಾದರೂ ಆಗಲಿ ಸಹಕಾರಿ ಸಾಲ ಜೊತೆಗಿನ ಜೋಡಣೆ ಬಹಳ ಹಿಂದುಳಿದೆ. ಸದ್ಯದ ಅವಶ್ಯಕತೆಯ ಪ್ರಕಾರ ಒಂದು ಅವಶ್ಯವಾದ ಪ್ರಯತ್ನವನ್ನು ಸಹಕಾರಿ ಸಂಘಗಳ ಜೊತೆಗೆ ಪರಿಣಾಮಕಾರಿ ಸಂಪರ್ಕವನ್ನು ತರಬೇಕಾಗಿದೆ.[೧೮]

ಮಣಿಸಿಂಗ್ (೨೦೦೧) ಅವರು ಸೆಲ್ಫ್-ಹೆಲ್ಪ್ ಗ್ರೂಪ್ಸ್ ಸಮ್ ಆರ್ಗನೈಜೆಷನಲ್ ಆಸ್ಪೆಕ್ಟ್ಸ್ ಎಂಬ ಲೇಖನದಲ್ಲಿ ಈ ರೀತಿಯಾಗಿ ವಿಶ್ಲೇಷಿಸಿದ್ದಾರೆ. ಸಂಘಟನಾತ್ಮಕ ಕಾರ್ಯಗಳಾದ ಪ್ರೇರಣೆ, ಸಭೆಗಳು ಮುಂತಾದ ಕಾರ್ಯಾಚರಣೆ ಗೊತ್ತಾದ ಪ್ರದೇಶವನ್ನು ದತ್ತು ತೆಗೆದುಕೊಳ್ಳುವಿಕೆ, ಮಾಸಿಕಸಭೆ, ತಿಂಗಳ ಉಳಿತಾಯದ ಗೊತ್ತುಪಡಿಸುವುದು ಮತ್ತು ಲೆಕ್ಕ ಪುಸ್ತಕ ವ್ಯವಸ್ಥೆ ಮಾಡುವುದು, ಕಾನೂನು ಮತ್ತು ನಿಯಮಗಳನ್ನು ರೂಪಿಸುವುದು, ಸದಸ್ಯತ್ವದಲ್ಲಿ ಹೆಚ್ಚಳ ಮತ್ತು ನೀತಿ ಕಾರ್ಯಕ್ರಮಗಳನ್ನು ರಚಿಸುವುದು. ಈ ರೀತಿಯಾಗಿ ಸಾಗಿದರೆ ಶಿಕ್ಷಣ, ಜ್ಞಾನ ಮತ್ತು ಮಾಹಿತಿ, ಆರೋಗ್ಯ ಸುಧಾರಣೆ, ಬಡತನ ನಿರ್ಮೂಲನೆ ಮತ್ತು ಸಾಮಾಜಿಕ ಉಪಯುಕ್ತವಾದ ಚಟುವಟಿಕೆಗಳನ್ನು ಬೇರೆ ಬೇರೆ ಸಂಸ್ಥೆಗಳೊಂದಿಗೆ ಸಂಪರ್ಕ ಕಲ್ಪಿಸಿಕೊಳ್ಳುವುದರ ಮೂಲಕ ಪರಿಹಾರಗಳನ್ನು ಕಂಡುಕೊಳ್ಳಬಹುದು.[೧೯]

ಎಸ್.ಎಲ್.ಟಂಡಮ್ (೨೦೦೧) ಅವರು ಸೆಲ್ಫ್ ಹೆಲ್ಪ್ ನ್ಯೂ ಮಂತ್ರ ಫಾರ್ ಎಂಪವರ್‌ಮೆಂಟ್ ಸ್ವ-ಸಹಾಯ ಗುಂಪುಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿ ಸಂಘಗಳಾಗಿ ಒಟ್ಟಾಗಿ ಬರಲು ಪ್ರೋತ್ಸಾಹಿಸಲಾಗುತ್ತಿದೆ. ಮತ್ತು ಸಹಕಾರ ಸಂಘಗಳ ಕಾಯ್ದೆ (೧೯೯೫)ಯ ಅಡಿಯಲ್ಲಿ ಮಂಡಲ ಮಟ್ಟದಲ್ಲಿ ಒಗ್ಗೂಡಿಸಲು ಪರಸ್ಪರ ಸಹಾಯಮಾಡುವುದು. ಈ ಸಂಸ್ಥೆಗಳು ಹಣಕಾಸಿನ ಸಂಸ್ಥೆಗಳು, ದಾನಿಗಳು, ಜಿಲ್ಲಾ ಗ್ರಾಮೀಣ ಅಭಿವೃದ್ಧಿ ನಿಗಮ, ಸ್ವ-ಸಂಘಗಳು ಮತ್ತು ಸ್ವ-ಸಹಾಯ ಗುಂಪುಗಳು ಆರ್ಥಿಕ ಚಟುವಟಿಕೆಗಳಿಗೆ ಹೆಚ್ಚಿನ ಸಾಲದ ಮೊತ್ತ ಪಡೆಯಲು ಸಹಾಯ ಮಾಡುತ್ತವೆ ಹಾಗೆಯೇ ಕಚ್ಚಾಪದಾರ್ಥಗಳನ್ನು ಕೊಳ್ಳಲು ಮಾರುಕಟ್ಟೆಗಳಿಗೆ ಉತ್ಪನ್ನಗಳನ್ನು ಪೂರೈಸಲು ಮತ್ತು ಇನ್ನಿತರ ಉಪಯುಕ್ತ ಕೆಲಸಗಳಿಗೆ ಸಹಾಯ ಮಾಡುತ್ತವೆ. ಈ ಒಂದು ದೊಡ್ಡ ಪ್ರಮಾಣದ ಸ್ವ-ಸಹಾಯ ಚಳುವಳಿಯಿಂದಾಗಿ ಗ್ರಾಮೀಣ ಮಹಿಳೆಯರ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಸುಧಾರಿಸಿದೆ.[೨೦]

[illegible] (೨೦೦೩) ಅವರು ಮೈಕ್ರೊ-ಕ್ರೆಡಿಟ್ ನಾಟ್ ಚಾರಿಟಿ ಎಂಬ ಲೇಖನದಲ್ಲಿ ಆದಾಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸೂಕ್ಷ್ಮ ಸಾಲ ಕಾರ್ಯಕ್ರಮವು ಬಡಜನರಿಗೆ ಸ್ವಯಂ ಉದ್ಯೋಗ ಕಾರ್ಯಕ್ರಮಗಳಿಗ

ಸಣ್ಣ ರೀತಿಯ ಸಾಲಗಳನ್ನು ವಿಸ್ತರಿಸಿದೆ, ಅವರನ್ನು ಮತ್ತು ಅವರ ಕುಟುಂಬಗಳನ್ನು ರಕ್ಷಿಸಿಕೊಳ್ಳುವುದಕ್ಕೆ ಅನುಮತಿಸಲಾಗುತ್ತಿದೆ. ಸ್ವಯಂ ಉದ್ಯೋಗಕ್ಕೆ ಸೂಕ್ಷ್ಮ ಸಾಲ ಕಾರ್ಯಕ್ರಮವು ಗ್ರಾಹಕರಿಗೆ ಸೇವೆಗಳು ಮತ್ತು ಸಂಪನ್ಮೂಲಗಳನ್ನು ಒದಗಿಸುತ್ತದೆ. ಇವು ಉಳಿತಾಯಗಳು, ತರಬೇತಿ, ನೆಟ್‌ವರ್ಕಿಂಗ್ ಮತ್ತು ಸಾಮಾಜಿಕ ಅಂತಸ್ತಿನಲ್ಲಿ ಸಮಾನ ಬೆಂಬಲವನ್ನು ಕಂಡುಕೊಳ್ಳುತ್ತದೆ. ಇದು ಒಂದು ಬಹಳ ವಿಮರ್ಶಾತ್ಮಕವಾದದ್ದು, ಅದೇನೆಂದರೆ ಸೂಕ್ಷ್ಮ ಉದ್ಯಮಗಳನ್ನು ಆರ್ಥಿಕತೆಗೆ ಇವುಗಳ ಕೊಡುಗೆಯನ್ನು ಸರಿಯಾದ ರೀತಿಯಲ್ಲಿ ಪರಿಗಣಿಸಲ್ಪಟ್ಟಿಲ್ಲ. ಬಡ ಮಹಿಳೆ ಸಾಮಾನ್ಯವಾಗಿ ತನ್ನದೇ ಆದ ವೈಯಕ್ತಿಕ ಆರ್ಥಿಕ ಚಟುವಟಿಕೆಗಳನ್ನು ಬಹಳ ಪರಿಪೂರ್ಣವಾಗಿ ನಡೆಸುತ್ತಾಳೆ. ಕಾರಣ ಕೇವಲ ಅವರ ಮೇಲೆ ಉಳಿತಾಯ ಮಾಡುವ ಒತ್ತಡವಿರುತ್ತದೆ. ಆದರೆ ಮಹಿಳೆಯರಿಗೆ ವೈಯಕ್ತಿಕವಾಗಿ ಮತ್ತು ಸ್ವಂತವಾಗಿ ಆರ್ಥಿಕ ಚಟುವಟಿಕೆಗಳನ್ನು ಮಾಡುವುದಕ್ಕೆ ಸಾರ್ವಜನಿಕ ಬೆಂಬಲದ ಕೊರತೆ ಇದೆ. ಆದ್ದರಿಂದ ಆರ್ಥಿಕ ಸ್ಥಿತಿಗತಿಗಳನ್ನು ಒಬ್ಬರೇ ಸುಧಾರಿಸುವುದು ತುಂಬಾ ಕಷ್ಟದ ಕೆಲಸ. ಮಹಿಳೆಯರ ಆರ್ಥಿಕ ಚಟುವಟಿಕೆಗಳನ್ನು ಸಬಲಗೊಳಿಸಲು ಮಧ್ಯಪ್ರವೇಶಿಸಬೇಕಾಗಿದೆ. ಈ ಸಕಾರಾತ್ಮಕ ನೀತಿಯನ್ನು ಕಚ್ಚಾಪದಾರ್ಥಗಳಿಗೆ, ಮಾರುಕಟ್ಟೆಗಳಿಗೆ, ಕೌಶಲ್ಯಗಳಿಗೆ, ಸ್ಥಳೀಯ ಸಾಲ, ಮತ್ತು ಸಲಕರಣೆಗಳು, ಮುಂತಾದವುಗಳನ್ನು ಖಚಿತಪಡಿಸಲು ಈ ಒಂದು ನಿಯಮದ ಬೆಂಬಲ ಅಗತ್ಯವಿದೆ. ಸಮರ್ಥವಾಗಿ ಆರ್ಥಿಕ ಚಟುವಟಿಕೆಗಳನ್ನು ನಿರ್ವಹಿಸುವುದು ಕಷ್ಟ ಸಾಧ್ಯವಾಗಿದ್ದು, ಬಡ ಮಹಿಳೆಯರಿಗಾಗಿ ಹೆಚ್ಚಿನ ಆದಾಯವನ್ನು ಸೃಷ್ಟಿಸಲು ಬಹಳ ಕಷ್ಟವಾಗುವುದು.[೨೧]

ಅರ್ಚನಾ ಸಿನ್ಹಾ (೨೦೦೨) ಅವರು ಟೈಪ್ಸ್ ಆಫ್ ಎಸ್.ಹೆಚ್.ಜೀಸ್ ಅಂಡ್ ದೈರ್ ವರ್ಕ್ ಎಂಬ ಲೇಖನದಲ್ಲಿ ಸ್ವ-ಸಹಾಯ ಗುಂಪುಗಳು ಸಂಪ್ರದಾಯಿಕ ಗುಂಪುಗಳಾಗಿದ್ದು, ಸದಸ್ಯರು ಒಟ್ಟಾಗಿ ಸೇರಿ ಸಾಮಾನ್ಯ ಸಮಸ್ಯೆಗಳನ್ನು ಬಗೆಹರಿಸುತ್ತಾರೆ. ಬೇರೆಯವರ ಮೇಲೆ ಅವಲಂಬಿಸದೇ ಅವರ ಅತ್ಯವಶ್ಯಕ ಆರ್ಥಿಕ ಬೇಡಿಕೆಗಳನ್ನು ಈಡೇರಿಸಿಕೊಳ್ಳುತ್ತಾರೆ. ಸ್ವ-ಸಹಾಯ ಗುಂಪಿನ ಪ್ರಮುಖ ಗುರಿಗಳೆಂದರೆ ಮಿತವ್ಯಯ, ಉಳಿತಾಯಗಳು, ಬ್ಯಾಂಕಿಂಗ್ ಹವ್ಯಾಸಗಳು, ಸಾಲಪಡೆಯುವುದು ಹಾಗೂ ಕೊಟ್ಟಂತಹ ಸಮಯದಲ್ಲಿ ಸಾಲವನ್ನು ಬ್ಯಾಂಕಿಗೆ ಮರುಪಾವತಿ ಮಾಡುವುದು ಮತ್ತು ಈ ಪ್ರಕ್ರಿಯೆಯಿಂದ ಸಾಲದ ಮೂಲಕ ಆರ್ಥಿಕ ಅಭಿವೃದ್ಧಿಯ ಲಾಭವನ್ನು ಪಡೆಯುವುದು. ಆದ್ದರಿಂದ ಸ್ವ-ಸಹಾಯ ಗುಂಪುಗಳು ಮತ್ತು ಸೂಕ್ಷ್ಮಸಾಲ ಸಮಸ್ಯೆಗಳ ಪರಿಹಾರದ ಒಂದು ಭಾಗ ಎಂದು ತಿಳಿದುಕೊಂಡು ಇದರಿಂದ ಭಾರತದಲ್ಲಿ ಸಾಮಾಜಿಕ, ಆರ್ಥಿಕ ಅಭಿವೃದ್ಧಿ ನಿರ್ಧಿಷ್ಟವಾಗಿ ಅದು ಗ್ರಾಮೀಣ ಮಹಿಳೆಯರ ಸ್ಥಿತಿಗತಿಯನ್ನು ಹೆಚ್ಚಿಸುವುದಾಗಿದೆ. ಒಂದು ನ್ಯಾಯ ಬದ್ಧವಾದ ಸಣ್ಣ ಸಾಲ ಬೇರೆ ಚಟುವಟಿಕೆಗಳೊಂದಿಗೆ ಸೇರಿಕೊಂಡು ಅಭಿವೃದ್ಧಿ ಹಾಗೂ ವ್ಯಕ್ತಿತ್ವ ಮತ್ತು ಪ್ರಕ್ರಿಯೆಯಿಂದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಉಪಕರಣದಿಂದ ಮಹಿಳೆಯರ ಅಭಿವೃದ್ಧಿ ಒಟ್ಟಾಗಿ ಆಗಬೇಕಾಗಿದೆ.[೨೨]

ಸುಗುಣ (೨೦೦೨) ಅವರು ಸೆಲ್ಫ್-ಹೆಲ್ಪ್ ಗ್ರೂಪ್ಸ್ ಎಂಬ ಲೇಖನದಲ್ಲಿ ಮಹಿಳಾ ಸಬಲೀಕರಣವು ವ್ಯಕ್ತಿತ್ವ ಮತ್ತು ಬದಲಾವಣೆಗಳನ್ನು ಒಳಗೊಂಡಿದೆ. ಸ್ವ-ಸಹಾಯ ಗುಂಪುಗಳ ಮೂಲಕ ಅವರ ಶಿಕ್ಷಣದಿಂದ ಸಾಮರ್ಥ್ಯ, ಅಧಿಕಾರ ಮತ್ತು ಅನುಭವ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಸ್ವ-ಸಹಾಯ ಗುಂಪುಗಳು ಅಥವಾ ಸರ್ಕಾರೇತರ ಸಂಸ್ಥೆಗಳಿಂದ ಆರ್ಥಿಕವಾಗಿ ಬಲಗೊಳಿಸಲು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಸಾಮರ್ಥ್ಯ ಬರುತ್ತದೆ. ಇದು ಅವರ ಅರ್ಹತೆ, ಪರಸ್ಪರ ಸಹಕಾರದಿಂದ ಅಭಿವೃದ್ಧಿ ಪಡಿಸುವುದು ಮತ್ತು ಒಬ್ಬರ ಸ್ಥಿತಿಯನ್ನು ಇನ್ನೊಬ್ಬರು ತಿಳಿದುಕೊಳ್ಳಲು ಸಹಕಾರಿಯಾಗುತ್ತದೆ. ಆದ್ದರಿಂದ ಮಹಿಳೆಯರ ಅಭಿವೃದ್ಧಿ ಮಹಿಳೆಯರಿಂದಲೇ ಸಾಧ್ಯವಾಗುತ್ತದೆ. ಒಟ್ಟಾರೆಯಾಗಿ ಎಲ್ಲರು ಸಹಕಾರದಿಂದ ಒಟ್ಟು ಗೂಡಿದರೆ ಅಭಿವೃದ್ಧಿಯ ಚಟುವಟಿಕೆಗಳು ಮತ್ತು ಶಕ್ತಿಯುತವಾದ ಅಭಿಪ್ರಾಯಗಳು ಬೆಳೆಯುತ್ತವೆ. ಸ್ವ-ಸಹಾಯ ಗುಂಪುಗಳು ಅಸ್ತಿತ್ವದಲ್ಲಿರುವ ಮಹಿಳಾ ಚಳುವಳಿಯು ದೇಶದಾದ್ಯಂತ ವಿಶಾಲವಾಗಿ ಹಬ್ಬಿಕೊಂಡಿವೆ. ಇದರಲ್ಲಿ ವಿಶೇಷವಾಗಿ ಆಂಧ್ರಪ್ರದೇಶದಲ್ಲಿ ಶೇ.೫೦ರಷ್ಟು ಮಹಿಳಾ ಚಳುವಳಿಗಳಾಗಿ ರೂಪಗೊಂಡಿವೆ.[೨೩]

ಅಲಕನಂದ ಮುಖರ್ಜಿ (೨೦೦೨) ಅವರು ರೂರಲ್ ವುಮೆನ್ ಡ್ರಾ ಶಕ್ತಿ ಫ್ರಮ್ ಸೆಟ್ಟಿಂಗ್ ಆಫ್ ಡೈರಿ ಕೋ-ಆಪರೇಟಿವ್ಸ್ ಎಂಬ ಲೇಖನದಲ್ಲಿ ಸ್ವ-ಸಹಾಯ ಗುಂಪುಗಳ ರಚನೆಯಾದ ಮೇಲೆ ಮೊದಲ ಹೆಜ್ಜೆ ಸಬಲೀಕರಣದಿಂದ ದಿನನಿತ್ಯ ಆದಾಯವನ್ನು ಗಳಿಸುವುದಾಗಿದೆ. ಜನವರಿ ೧೯೯೯ರಲ್ಲಿ ಎರಡು ಸ್ವ-ಸಹಾಯ ಗುಂಪುಗಳು ಸಾಮಾನ್ಯ ವರ್ಗಕ್ಕೆ ಸೇರಿದಂತಹ ಲಕ್ಷ್ಮಿ ಬಚತ್ ಸಮೂಹ ಮತ್ತು ಅಂಬಿಕ ಬಚತ್‌ಸಮೂಹ ಎಂಬ ಗುಂಪುಗಳನ್ನು ಪ್ರಾರಂಭಿಸಲ್ಪಟ್ಟವು. ಇವರ ಪ್ರೇರಣೆಯಿಂದ ಅದೇ ವರ್ಷದಲ್ಲಿ ಬುಡಕಟ್ಟು ಮಹಿಳೆಯರು ದುರ್ಗಾ ಬಚತ್ ಸಮೂಹ ಎಂಬ ಗುಂಪನ್ನು ಪ್ರಾರಂಭಿಸಿದರು. ಅವರ ಸದಸ್ಯತ್ವ ಇತ್ತೀಚಿನ ದಿನಗಳಲ್ಲಿ ೧೯ಕ್ಕೆ ನಿಂತಿದೆ. ಪ್ರಾರಂಭದಲ್ಲಿ ಪ್ರತಿಯೊಬ್ಬ ಸದಸ್ಯೆ ತಿಂಗಳಿಗೆ ೧೦೦ರೂಗಳನ್ನು ಉಳಿತಾಯ ಮಾಡಬೇಕಾಗಿತ್ತು. ಮತ್ತು ಜಂಟಿ ಹಣಕಾಸಿನ ಠೇವಣಿ ಇಡಬೇಕಿತ್ತು. ಹಿಂದಿನ ಮೂರು ವರ್ಷಗಳಲ್ಲಿ ಸ್ವ-ಸಹಾಯ ಗುಂಪುಗಳು ೨ ಲಕ್ಷಕ್ಕಿಂತಲು ಹೆಚ್ಚು ಉಳಿತಾಯ ಮಾಡಿವೆ. ಇದು ಹೂಡಿಕೆಯಲ್ಲಿ ತೊಡಗಿಸಲು ಉಪಯುಕ್ತವಾಗಿದೆ. ಆದ್ದರಿಂದ ಸ್ವ-ಸಹಾಯ ಗುಂಪುಗಳ ರಚನೆಯಿಂದ ಗ್ರಾಮೀಣ ಮಹಿಳೆಯರಿಗೆ ಲಿಂಗ ತಟಸ್ಥ ಚಟುವಟಿಕೆಗಳನ್ನು ಮತ್ತು ಜೀವನದ ಸಂಪನ್ಮೂಲವಾಗಿ ಪರಿವರ್ತಿಸುವಂತೆ ಮಾಡಬಹುದು. ಆದ್ದರಿಂದ ಎರಡನೇ ಹೆಜ್ಜೆಯಲ್ಲಿ ಅವರ ಸಾಮರ್ಥ್ಯದ ಮೇಲೆ ಬೆಳಕು ಚೆಲ್ಲುವುದು, ಸಾಲ ಮರುಪಾವತಿ ಮತ್ತು ಅವರ ನಿರ್ಧಾರವನ್ನು ಹೆಚ್ಚಿಸಿಕೊಳ್ಳುವಂತೆ ಮಾಡುವುದಾಗಿದೆ.[೨೪]

ರಾವ್ (೨೦೦೨) ಅವರು ವುಮೆನ್ ಸೆಲ್ಫ್-ಹೆಲ್ಪ್ ಗ್ರೂಪ್ಸ್ ಪ್ರೊಫೈಲ್ಸ್ ಫ್ರಮ್ ಆಂಧ್ರಪ್ರದೇಶ್ ಅಂಡ್ ಕರ್ನಾಟಕ ಎಂಬ ಲೇಖನದಲ್ಲಿ ಭಾರತದಲ್ಲಿ ಸ್ವ-ಸಹಾಯ ಗುಂಪುಗಳ ಅಭಿವೃದ್ಧಿ ಮತ್ತು ಮೂಲವನ್ನು ತೋರಿಸಿಕೊಟ್ಟಿದೆ. ಅಸ್ತಿತ್ವದಲ್ಲಿರುವ ಔಪಚಾರಿಕ ಹಣಕಾಸಿನ ಸಂಸ್ಥೆಗಳು ಭೂ ರಹಿತರಿಗೆ, ಬಡವರಿಗೆ,

ಉಪೇಕ್ಷಿತ ವರ್ಗಗಳಿಗೆ ಹಣಕಾಸನ್ನು ಒದಗಿಸುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿವೆ. ಭಾರತದ ಗ್ರಾಮೀಣ ಸಮುದಾಯಗಳಲ್ಲಿ ಸ್ವ-ಸಹಾಯ ಗುಂಪುಗಳ ಮೂಲದಿಂದ ಪರಸ್ಪರ ಸಹಾಯ ಮಾಡುವುದನ್ನು ಕಂಡುಕೊಳ್ಳಬೇಕು. ಸಹಕಾರಿ ಸಂಘಗಳು ಮತ್ತು ಔಪಚಾರಿಕ ಸಂಸ್ಥೆಗಳಿಗೆ ಸ್ವ-ಸಹಾಯ ಗುಂಪುಗಳು ತದ್ವಿರುದ್ಧವಾಗಿವೆ. ಸ್ವ-ಸಹಾಯ ಗುಂಪುಗಳು ಉಳಿತಾಯವನ್ನು ಪ್ರೋತ್ಸಾಹಿಸುತ್ತವೆ ಮತ್ತು ಸಣ್ಣ ಸಾಲಗಳಿಂದ ಆದಾಯಕ್ಕೆ ಸಂಬಂಧಿಸಿದಂತೆ ಸೂಕ್ತವಾದ ಚಟುವಟಿಕೆಗಳನ್ನು ಯಶಸ್ವಿಯಾಗಿ ಮಾಡುತ್ತವೆ. ದೇಶದಲ್ಲಿ ಅನುಭವ ಉಳಿತಾಯಕ್ಕೆ ಪ್ರೇರಣೆ ಮತ್ತು ಬಡತನದ ವಿಷವರ್ತುಲನದಿಂದ ಮುಕ್ತವಾಗುವುದಕ್ಕೆ ಸಹಾಯ ಮಾಡುತ್ತವೆ.[೨೫]

ಪ್ರೀತಿ ಚಂದ್ರಶೇಖರ (೨೦೦೨) ಅವರು ಮಹಲ್ಯೆರ್ ಥಿಟ್ಟಮ್ ಅಪ್‌ಗ್ರೇಡ್ಸ್ ಸೆಲ್ಫ್-ಹೆಲ್ಪ್ ಗ್ರೂಪ್ಸ್ ಎಂಬ ಲೇಖನದಲ್ಲಿ ಗ್ರಾಮೀಣ ಮಹಿಳಾ ಸ್ವ-ಸಹಾಯ ಗುಂಪುಗಳನ್ನು ಅವರ ಉಳಿತಾಯಗಳಿಂದ ಆರ್ಥಿಕ ಸ್ವಾತಂತ್ರ್ಯವನ್ನು ನೀಡುತ್ತವೆ. ಕುರುಪ್ಪಯರನಿಯ ಶಾಖೆಯಾದಂತ ಭಾರತೀಯ ಬ್ಯಾಂಕು ಗ್ರಾಮೀಣ ಮಹಿಳೆಯರ ಸೌಭಾಗ್ಯ ಯೋಜನೆಯಡಿಯಲ್ಲಿ ೬೪ ಮಹಿಳೆಯರಿಗೆ ೫ ಲಕ್ಷರೂಗಳನ್ನು ವಿತರಿಸಿದ್ದು, ಇತ್ತೀಚಿನ ಉದಾಹರಣೆಯಾಗಿದೆ. ಮಹಿಳಾ ಯೋಜನೆಗಳ ಮುಖ್ಯ ಗುರಿ ಎಂದರೆ ಗ್ರಾಮೀಣ ಮಹಿಳೆಯರ ಸಬಲೀಕರಣ, ವಿಶೇಷವಾಗಿ ಬಡತನ ರೇಖೆಗಿಂತ ಕೆಳಗೆ ಇರುವ ಆರ್ಥಿಕ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಸಬಲೀಕರಣವನ್ನು ಸಾಧಿಸುವುದಾಗಿದೆ. ಪಂಚವಾರ್ಷಿಕ ಕೈಗಾರಿಕೋದ್ಯಮ ಅಭಿವೃದ್ಧಿ ಕಾರ್ಯಕ್ರಮ ಸ್ವ-ಸಹಾಯ ಗುಂಪುಗಳ ಮೂಲಕ ಸ್ವ-ದಕ್ಷತೆ ಮತ್ತು ಅವರ ವ್ಯಾಪಾರವನ್ನು ನಡೆಸಲು ಸಂಪನ್ಮೂಲಗಳ ವ್ಯಕ್ತಿಗಳನ್ನಾಗಿ ಪ್ರೋತ್ಸಾಹ ನೀಡುತ್ತದೆ.[೨೬]

ಎನ್. ಲಲಿತಾ ಶಿವುಕುಮಾರ್ (೨೦೦೨) ಅವರು ಸೆಲ್ಫ್-ಹೆಲ್ಪ್ ಗ್ರೂಪ್ಸ್ ಎಂಬ ಲೇಖನದಲ್ಲಿ ನಬಾರ್ಡ ನಿರ್ದೇಶನದ ಅಡಿಯಲ್ಲಿ ಸ್ವ-ಸಹಾಯ ಗುಂಪುಗಳು ಮತ್ತು ಬ್ಯಾಂಕು ಸಂಪರ್ಕದ ಯೋಜನೆಯನ್ನು ಸೂಕ್ಷ್ಮ ಉದ್ಯಮಿದಾರರಿಗೆ ಜಾರಿಗೆ ತರಲಾಗಿದೆ. ಈ ಸಂಪರ್ಕದ ಕಾರ್ಯಕ್ರಮ ಸೂಕ್ಷ್ಮ ಹಣಕಾಸಿನ ಚಟುವಟಿಕೆಗಳ ಭಾಗವಾಗಿದೆ. ಇದು ಉಳಿತಾಯ ಆಧಾರದ ಸಾಲಕ್ಕೆ ಹೆಚ್ಚು ಒತ್ತು ಕೊಡುವುದಾಗಿದ್ದು, ಗುಲಾಮಗಿರಿಯ ಸಾಲದ ಸಂಪರ್ಕವನ್ನು ನಿರ್ಮೂಲಣೆಯನ್ನು ಮಾಡುವುದು. ಆಂತರಿಕ ಗುಂಪು ಕಲಿಯುವಿಕೆಯ ಮುನ್ನಡೆ, ಸಾಲ ಮರುಪಾವತಿ, ಗುಂಪು ನಿರ್ಣಯ, ತರಬೇತಿ ಹಿಂದುಳಿದ ವರ್ಗಗಳಿಗೆ ಉತ್ತೇಜನ ಮುಂತಾದವುಗಳನ್ನು ಸರ್ಕಾರೇತರ ಸಂಸ್ಥೆಗಳ ಮೂಲಕ ಸಂಪರ್ಕ ಸೌಲಭ್ಯಗಳನ್ನು ಒದಗಿಸುವುದಾಗಿದೆ. ಸುಸ್ಥಿರ ಅಭಿವೃದ್ಧಿ ಸಾಧಿಸಲು ಮಹಿಳೆಯರು ಬ್ಯಾಂಕು ಮತ್ತು ಸರ್ಕಾರೇತರ ಸಂಸ್ಥೆಗಳ ಜೊತೆಗೆ ಸಂಪರ್ಕವನ್ನು ಹೊಂದಿದ್ದಾರೆ. ಸೂಕ್ಷ್ಮ ಹಣಕಾಸಿನ ರಚನೆಯನ್ನು ಬದಲಾವಣೆ ಮಾಡಬಹುದು. ಸೂಕ್ಷ್ಮ ಉದ್ಯಮಿಗಳ ಅಭಿವೃದ್ಧಿಯ ಮೇಲೆ ಮಹಿಳಾ ಸಬಲೀಕರಣಕ್ಕೆ ಮಹಿಳಾ ಅಭಿವೃದ್ಧಿಪರ ಸಂಘಟನೆಗಳು ಮತ್ತು ಸರ್ಕಾರದ ವಿಭಾಗಗಳು ಹಾಗೆಯೇ ಸರ್ಕಾರೇತರ

ಸಂಸ್ಥೆಗಳು ಕೂಡ ಸೇವೆಯನ್ನು ಕೊಡುವುದರಲ್ಲಿ ನಿರತವಾಗಿವೆ. ಬ್ಯಾಂಕುಗಳು ಮತ್ತು ಎನ್‌ಜಿಓಗಳ ಸಹಭಾಗಿತ್ವದಿಂದ ಸ್ವ-ಸಹಾಯ ಗುಂಪುಗಳನ್ನು ಉತ್ತೇಜಿಸಲು ಮತ್ತು ಸಾಲ ವಿಧಾನದ ಸಲುವಾಗಿ ಮಹಿಳಾ ಸೂಕ್ಷ್ಮ ಉದ್ಯಮಿಗಳಿಗೆ ಸಾಂಸ್ಥಿಕವಾಗಿ ದೃಢವಾದ ಭದ್ರಬುನಾದಿಯನ್ನು ಹಾಕಿಕೊಟ್ಟಿವೆ.[೨೭]

ಲಲಿತ ಮತ್ತು ನಾಗರಾರ್ಜುನ (೨೦೦೨) ಅವರು ಸೆಲ್ಫ್-ಹೆಲ್ಪ್ ಗ್ರೂಪ್ಸ್ ಇನ್ ರೂರಲ್ ಡೆವಲಪ್‌ಮೆಂಟ್ ಎಡಿಷನ್ ಎಂಬ ಪುಸ್ತಕದಲ್ಲಿ ಸಬಲೀಕರಣ ಎಂಬ ಪದಕ್ಕೆ ಶಕ್ತಿಯುತವಾದ ಅರ್ಥಬರುತ್ತಿದೆ. ಗ್ರಾಮೀಣ ಮಹಿಳೆಯರ ಬಡತನವನ್ನು ನಿವಾರಿಸಲು, ಸಬಲರಾಗಲು ತಮ್ಮದೇ ಆದ ಸಂಸ್ಥೆಗಳಿರಬೇಕೆಂದು ಕೇಳುತ್ತಾರೆ. ಅವರು ತಮ್ಮದೇ ಆದತಂಹ ಆರ್ಥಿಕ ಅವಶ್ಯಕತೆ ಮತ್ತು ಅಭಿರುಚಿಗೆ ತಕ್ಕಂತೆ ಸಮಿತಿಗಳನ್ನು ಹೊಂದಿರಬೇಕು. ಇದು ಆಸಕ್ತಿ ಮತ್ತು ಆರ್ಥಿಕ ಅಗತ್ಯಗಳನ್ನು ಪೂರೈಸಲು ಕಾರ್ಯಚಟುವಟಿಕೆಗಳನ್ನು ಪೂರೈಸಬೇಕು. ಯೋಜನೆಯನ್ನು ರೂಪಿಸುವ ಸಂಸ್ಥೆಗಳು ಗ್ರಾಮೀಣ ಬಡವರ ಸಮಸ್ಯೆ ಮತ್ತು ಅಗತ್ಯಗಳ ಬಗ್ಗೆ ಸಾಕಷ್ಟು ಜ್ಞಾನ ಪೂರೈಸಿಲ್ಲ. ಒಂದು ವೇಳೆ ಸ್ವ-ಸಹಾಯ ಗುಂಪುಗಳು ಉತ್ತೇಜಿತವಾದರೆ ಗುಂಪಿನ ಸದಸ್ಯರು ಉತ್ತಮ ರೀತಿಯಲ್ಲಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಲ್ಲರು.[೨೮]

ಭರತ್ ಡೊಗ್ರ (೨೦೦೨) ಅವರು ವುಮೆನ್ ಸೆಲ್ಫ್-ಹೆಲ್ಪ್ ಗ್ರೂಪ್ಸ್ ಮಹಿಳಾ ಸ್ವ-ಸಹಾಯ ಗುಂಪುಗಳಲ್ಲಿರುವ ಇವರು ಮಹಿಳೆಯರು ಬಡಕುಟುಂಬದಿಂದ ಬಂದಿರುತ್ತಾರೆ, ದಲಿತ ಮತ್ತು ಹಿಂದುಳಿದ ವರ್ಗದವರಾಗಿರುತ್ತಾರೆ. ಆದಾಯದಲ್ಲಿ ಹೆಚ್ಚಳ ಮಾಡುವುದು ಮತ್ತು ಕೇವಲ ಗುಂಪುಗಳ ಸದಸ್ಯತ್ವವನ್ನು ಪಡೆಯುವುದಲ್ಲ. ಇವು ಅಸ್ತಿತ್ವದಲ್ಲಿರುವ ಗ್ರಾಮೀಣ ಸಮಸ್ಯೆಗಳಿಂದ ಹೊರಬರುವುದಕ್ಕೆ ಚರ್ಚಿಸಲಾಗುತ್ತದೆ. ಸ್ವ-ಸಹಾಯ ಗುಂಪುಗಳಿಗೆ ಸಾಲಗಳನ್ನು ಮರುಪಾವತಿ ಮಾಡುವುದಕ್ಕೆ ದೀರ್ಘಾವಧಿಯು ಅತ್ಯಂತ ಮಹತ್ವವಾಗಿದೆ.[೨೯]

ಪ್ರೇಮ್ ಸಿಂಗ್ ದಹಿಯ, ಮತ್ತು ಇತರರು (೨೦೦೨) ಅವರು ಸೋಷಿಯೋ-ಎಕನಾಮಿಕ್ ಅಪ್‌ಲಿಫ್ಟ್‌ಮೆಂಟ್ ಥ್ರೂ ಸೆಲ್ಫ್-ಹೆಲ್ಪ್ ಗ್ರೂಪ್ಸ್ ಇನ ಸೋಲಾನ್ ಡಿಸ್ಟ್ರಿಕ್ಟ್ ಆಫ್ ಹಿಮಾಲಯ ಪ್ರದೇಶ ಎಂಬ ಲೇಖನದಲ್ಲಿ ಹಿಮಾಚಲ ಪ್ರದೇಶದ ಸೋಲಾನ್ ಜಿಲ್ಲೆಯಲ್ಲಿ ಸ್ವ-ಸಹಾಯ ಗುಂಪುಗಳ ಮೂಲಕ ಸಾಮಾಜೋ-ಆರ್ಥಿಕವಾಗಿ ಸಬಲರಾಗಿದ್ದಾರೆ, ಯಶಸ್ವಿ ಅಥವಾ ಸೂಕ್ಷ್ಮ ಹಣಕಾಸಿನ ಮಧ್ಯಸ್ಥಿಕೆಯ ದಕ್ಷತೆಯನ್ನು ಮೂರು ವಿಧಾನದಲ್ಲಿ ತಿಳಿದುಕೊಳ್ಳಬಹುದಾಗಿದ್ದು, ಅದರಲ್ಲಿ ಪ್ರಮುಖವಾಗಿ ೧. ಸಂಪೂರ್ಣವಾದ ಮತ್ತು ವಿಪುಲವಾದ ಹಣಕಾಸಿನ ಕಾರ್ಯಕ್ರಮ, ೨. ಆದಾಯ ಅಥವಾ ಬಡತನವನ್ನು ಉಪಯೋಗಿಸುವವರ ಮೇಲೆ ಪ್ರಭಾವ ಮತ್ತು ೩. ಸ್ಥಳೀಯ ಮಟ್ಟದಲ್ಲಿ ಹಣಕಾಸಿನ ಮಾರುಕಟ್ಟೆ ಅಭಿವೃದ್ಧಿ. ವಾರ್ಷಿಕ ಆದಾಯದ ಹೆಚ್ಚಳದಲ್ಲಿ ಆರ್ಥಿಕ ಪರಿಣಾಮವು ಅಳೆಯಲಾಗುತ್ತದೆ. ಎಲ್ಲಾ ಸ್ವ-ಸಹಾಯ ಗುಂಪುಗಳು ಶೇ.೯೪.೩ರಷ್ಟು ಆದಾಯ ಹೆಚ್ಚಾಗಿದೆ ಎಂದು ದಾಖಲಿಸಿವೆ. ಅವರು ಇದನ್ನು ಕೂಡ ಸೂಚಿಸಿದ್ದಾರೆ. ಅದೇನೆಂದರೆ ಮನೆಗಳ ಪರಿಪಕ್ವತೆ (ಮೆಚ್ಯೂರಿಟಿ)ಯನ್ನು ಮಾಪನಮಾಡಲು ಬೇರೆ

ಬೇರೆ ಅಳತೆಗೋಲುಗಳನ್ನು ಉಪಯೋಗಿಸಲಾಗಿದೆ. ಇವುಗಳು ೧. ಏಕರೂಪತೆ, ೨. ಪ್ರಸ್ತುತ ಗುಂಪು ರಚನೆಯ ಭಾವನೆ ೩. ಗುಂಪುಗಳ ಗುರಿಗಳ ಬಗ್ಗೆ ತಿಳುವಳಿಕೆ ೪. ಭಾಗವಹಿಸುವಿಕೆ ಮತ್ತು ಸಭೆಗಳನ್ನು ಮೇಲಿಂದ ಮೇಲೆ ನಡೆಸುವುದು. ೫. ಉಳಿತಾಯಗಳ ಕ್ರಮಬದ್ಧತೆ ೬. ಸಾಲ ಮರುಪಾವತಿ ಮತ್ತು ೭. ಹಣಕಾಸಿನ ವಹಿವಾಟುಗಳಲ್ಲಿ ಗುಂಪು ಭಾಗವಹಿಸುವಿಕೆ.[೩೦]

ಜಸ್ವಂತ್ ಸಿಂಗ್ (೨೦೦೩) ಅವರ ಬಡ್ಜೆಟ್ ಸ್ಪೀಚ್ ಆನ್ ಯುನಿಯನ್ ಮಿನಿಸ್ಟರ್ ಆಫ್ ಫೈನಾನ್ಸ್ ಅಂಡ್ ಕಂಪನಿ ಅಫೈರ್ಸ್ ಎಂಬ ಪುಸ್ತಕದಲ್ಲಿ ಸ್ವ-ಸಹಾಯ ಗುಂಪು ಮತ್ತು ಬ್ಯಾಂಕ್ ಸಂಪರ್ಕ ಕಾರ್ಯಕ್ರಮವನ್ನು ನಬಾರ್ಡ್ ಮೂಲಕ ಆಸ್ತಿತ್ವಕ್ಕೆ ತರಲಾಗಿದೆ. ವಿಶ್ವದಲ್ಲಿ ಕಳೆದ ಹತ್ತು ವರ್ಷಗಳಿಂದ ದೊಡ್ಡ ಮತ್ತು ವೇಗವಾಗಿ ಬೆಳೆಯುತ್ತಿರುವ ಮೈಕ್ರೋ ಫೈನಾನ್ಸ್ ಪ್ರೋಗ್ರಾಂ ಎಂದು ಗುರುತಿಸಲ್ಪಟ್ಟಿದೆ. ಪ್ರಸಕ್ತ ವರ್ಷದಲ್ಲಿ ೧.೨೫ಲಕ್ಷ ಸ್ವ-ಸಹಾಯ ಗುಂಪುಗಳಿಗೆ ಬ್ಯಾಂಕು ಕ್ರೆಡಿಟ್ ನಿರೀಕ್ಷೆಗಳನ್ನು ಮೀರಿ ಮತ್ತೊಮ್ಮೆ ಕೊಡಲಾಗಿದೆ ಮತ್ತು ಜನವರಿ ೨೦೦೩ರಲ್ಲಿ ೧.೫೦ಲಕ್ಷ ಹೊಸ ಸ್ವ-ಸಹಾಯ ಗುಂಪುಗಳ ಮೂಲಕ ೨೫ಲಕ್ಷ ಬಡ ಕುಟುಂಬಗಳಿಗೆ ಬ್ಯಾಂಕು ೫೯೮ ಕೋಟಿಗಳಷ್ಟು ಸಾಲವನ್ನು ನೀಡಿದೆ. ಮಹಿಳೆಯರ ಸಬಲೀಕರಣ ಪ್ರಕ್ರಿಯೆಯ ಚಲನೆಯ ಕಾರ್ಯಕ್ರಮದಲ್ಲಿ ಸ್ಥಾಪಿಸಿದೆ. ಈ ದೇಶಾದ್ಯಾಂತ ಕಾರ್ಯಕ್ರಮ ಹರಡಿದೆ. ಆದರೆ ಕೆಲವೇ ಕೆಲವು ರಾಜ್ಯಗಳಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿದೆ.[೩೧]

ರಾಜಾಮೋಹನ್ (೨೦೦೩) ಅವರು ಆ್ಯಕ್ಟಿವಿಟೀಸ್ ಆಫ್ ಸೆಲ್ಫ್-ಹೆಲ್ಪ್ ಗ್ರೂಪ್ಸ್ ಇನ್ ವಿರುಧುನಗರ ಡಿಸ್ಟ್ರಿಕ್ಟ್ ಎ ಸ್ಟಡಿ ಆಫ್ ತಮಿಳುನಾಡು ಎಂಬ ಲೇಖನದಲ್ಲಿ ಮಹಿಳೆಯರ ನಡುವೆ ಉಳಿತಾಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸ್ವ-ಸಹಾಯ ಗುಂಪುಗಳು ಒಂದು ಮಾಧ್ಯಮವಾಗಿದೆ. ಇದು ದೊಡ್ಡ ಪರಿಮಾಣದ ಸಂಪನ್ಮೂಲಗಳನ್ನು ಕೇಂದ್ರಿಕರಿಸುತ್ತದೆ. ಕೌಶಲ್ಯ ಹೆಚ್ಚಿಸಿಕೊಳ್ಳಲು ಮತ್ತು ಉತ್ತಮ ತಂತ್ರಜ್ಞಾನಕ್ಕೆ ಇದು ಒಂದು ಗವಾಕ್ಷಿ(ವಿಂಡೊ)ಯಾಗಿದೆ. ಇದು ಕುಟುಂಬದ ಆದಾಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಸ್ವ-ಸಹಾಯ ಗುಂಪುಗಳ ಸಾಮುದಾಯಿಕ ವ್ಯವಹಾರ ಮತ್ತು ಐಕ್ಯತೆ ಸಬಲೀಕರಣದ ತಾಂತ್ರಿಕತೆಗೆ ಅತ್ಯಂತ ಮಹತ್ವವಾಗಿದೆ.[೩೨]

ರಾಜೇಶ್ವರಿ (೨೦೦೩) ಅವರು ನ್ಯೂ ಜನರೇಷನ್ ಕೋ-ಆಪರೇಟಿವ್ಸ್ ಥ್ರೂ ಸೆಲ್ಫ್-ಹೆಲ್ಪ್ ಗ್ರೂಪ್ಸ್ ಇನ್ ತಮಿಳುನಾಡು ಎಂಬ ಲೇಖನದಲ್ಲಿ ಸ್ವ-ಸಹಾಯ ಗುಂಪಿನ ಹೆಸರಿನಲ್ಲಿ ಬ್ಯಾಂಕುಗಳು ನೇರವಾಗಿ ಸಾಲದ ಖಾತೆಯನ್ನು ಪ್ರಾರಂಭಿಸುತ್ತವೆ. ಗುಂಪುಗಳ ಉಳಿತಾಯದ ಆಧಾರದ ಮೇಲೆ ಬ್ಯಾಂಕು ಸಾಲವನ್ನು ವಿತರಿಸುತ್ತದೆ. ಸಾಮಾನ್ಯ ನಿಧಿ ಮತ್ತು ಬ್ಯಾಂಕು ಸಾಲ ಶೇ.೧.೧ರಿಂದ ಶೇ.೧.೪ರಷ್ಟು ಗರಿಷ್ಟ ಮಟ್ಟದಲ್ಲಿ ಉಳಿತಾಯವನ್ನು ಮಾಡಿದೆ. ಬ್ಯಾಂಕು ಸ್ವ-ಸಹಾಯ ಗುಂಪಿಗೆ ಹಣಕಾಸನ್ನು ಒದಗಿಸುವುದು. ಅದನ್ನು ಒಂದು ಸರ್ಕಾರೇತರ ಸಂಸ್ಥೆಗಳನ್ನಾಗಿ ರಚಿಸಲಾಗಿದೆ. ಆದರೆ ಸಾಲ ಮರುಪಾವತಿಯ ಜವಾಬ್ದಾರಿ ಸ್ವ-

ಸಹಾಯ ಗುಂಪಿನದ್ದೆ ಆಗಿರುತ್ತದೆ. ಗುಂಪಿನ ಸದಸ್ಯರ ಉಳಿತಾಯಗಳಿಂದ ಬ್ಯಾಂಕುಗಳು ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಂತ ಹಿಂದುಳಿದ ಮಹಿಳೆಯರಿಗೆ ಆರ್ಥಿಕ ಬೆಂಬಲವನ್ನು ನೀಡುತ್ತಿವೆ.[೩೩]

ಶಿವರಾಮಕೃಷ್ಣನ್ (೨೦೦೩) ಅವರು ಪಾವರ್ಟಿ ಅಲ್ಲಿವೇಷನ್ ಥ್ರೂ ಸೆಲ್ಫ್-ಹೆಲ್ಪ್ ಗ್ರೂಪ್ಸ್ ಇನ್ ತಮಿಳುನಾಡು ಎಂಬ ಲೇಖನದಲ್ಲಿ ಸ್ವರ್ಣಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆಯ ಗುರಿ ಗ್ರಾಮೀಣ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದ ಸೂಕ್ಷ್ಮ ಉದ್ಯಮಿಗಳನ್ನು ಸ್ಥಾಪಿಸುವುದಾಗಿದೆ. ಗ್ರಾಮೀಣ ಬಡಜನರ ಅವಶ್ಯಕತೆಯನ್ನು ಹೆಚ್ಚಿಸುವುದು ಮತ್ತು ಎಸ್.ಜಿ.ಎಸ್.ವೈ. ಅಡಿಯಲ್ಲಿ ಮೂರು ವರ್ಷಗಳಲ್ಲಿ ಪ್ರತಿಯೊಂದು ಕುಟುಂಬವನ್ನು ಬಡತನ ರೇಖೆಗಿಂತ ಮೇಲಕ್ಕೆ ತರವುದಾಗಿದೆ. ಎಸ್.ಜಿ.ಎಸ್.ವೈ.ಯು ಒಂದು ಪವಿತ್ರವಾದ ಕಾರ್ಯಕ್ರಮ ಎಂದು ಊಹಿಸಲಾಗಿದ್ದು, ಸ್ವಯಂ ಉದ್ಯೋಗದ ಎಲ್ಲಾ ಆಕಾರಗಳನ್ನು ಸೂಕ್ಷ್ಮ ಉದ್ಯಮಗಳು ಒಳಗೊಂಡಿವೆ, ಉದಾಹರಣೆಗೆ, ಸ್ವ-ಸಹಾಯ ಗುಂಪುಗಳಲ್ಲಿ ಗ್ರಾಮೀಣ ಬಡವರನ್ನು ಸಂಘಟಿಸುವುದು ಮತ್ತು ಅವರಿಗೆ ಸಾಮರ್ಥ್ಯ ಹೆಚ್ಚಿಸಿಕೊಳ್ಳುವುದು, ಗುಂಪುಗಳ ಯೋಜನೆಯ ಚಟುವಟಿಕೆಗಳು, ಮೂಲಸೌಕರ್ಯ ಒದಗಿಸುವುದು, ತಂತ್ರಜ್ಞಾನ ಸಾಲ ಮತ್ತು ಮಾರುಕಟ್ಟೆಯ ಸೌಲಭ್ಯವನ್ನು ಒದಗಿಸುವುದಾಗಿದೆ.[೩೪]

ಓಂ ರಾಜಸಿಂಗ್ (೨೦೦೩) ಅವರು ರೋಲ್ ಆಫ್ ಎನ್.ಜಿ.ಓ ಇನ್ ಪೋಸ್ಟರಿಂಗ್ ಸೆಲ್ಫ್-ಹೆಲ್ಪ್ ಗ್ರೂಪ್ಸ್ ಎಂಬ ಲೇಖನದಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರವನ್ನು ಸ್ವ-ಸಹಾಯ ಗುಂಪುಗಳು ತೋರಿಸಿಕೊಟ್ಟವು. ಎನ್.ಜಿ.ಓ ಸಂಸ್ಥೆಗಳು ಸ್ವ-ಸಹಾಯ ಗುಂಪುಗಳ ಮೂಲಕ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ಸಹಾಯಕಾರಿಯಾಗಿವೆ. ಜನರ ಸಂಸ್ಥೆಗಳನ್ನು ಕಟ್ಟುವುದೇ ಮೈರಾಡದ ಧ್ಯೇಯವಾಗಿದೆ. ಸುಸ್ಥಿರತೆಯ ಸಲುವಾಗಿ ಮೂಲಸೌಕರ್ಯಗಳ ನಿಯಂತ್ರಣ ಮತ್ತು ನಿರ್ವಹಣೆ, ಅವಶ್ಯಕವಾದ ವಿಶ್ವಾಸ ಹಾಗೂ ಸ್ವಾವಲಂಬನೆ, ಮತ್ತು ಬಾಹ್ಯ ಬೆದರಿಕೆಗಳನ್ನು ನಿಭಾಯಿಸಲು ಜನರ ಸಂಸ್ಥೆಗಳನ್ನು ನಿರ್ಮಾಣ ಮಾಡುವುದು. ಈ ಸಂಸ್ಥೆಗಳು ಚಾಲ್ತಿಯಲ್ಲಿರುವ ಸಂಸ್ಕೃತಿಯ ವಿರುದ್ಧವಾಗಿ ಹೋಗುವಂತೆ ಪ್ರೋತ್ಸಾಹವನ್ನು ನೀಡುತ್ತವೆ. ಮೈರಾಡವು ಗುಂಪಿನ ಸದಸ್ಯರ ಸುಸ್ಥಿರ ಜೀವನಾಧಾರ ಖಚಿತಪಡಿಸಿಕೊಳ್ಳಲು ಅಗತ್ಯವಿರುವ ಸಂಪನ್ಮೂಲಗಳನ್ನು ಮಹಿಳಾ ಹಕ್ಕುಗಳ ಮೇಲೆ ಗಮನ ಮತ್ತು ಪ್ರವೇಶಿಸಲು ಹಾಗೂ ನಿಯಂತ್ರಣ ಸಾಧಿಸುವಲ್ಲಿ ೧೦೦೬ಕ್ಕೂ ಹೆಚ್ಚು ಮಹಿಳಾ ಗುಂಪುಗಳನ್ನು ಹೊಂದಿದೆ.[೩೫]

ಪ್ರಶಾಂತ ಸರಂಗಿ (೨೦೦೩) ಅವರು ಸೆಲ್ಫ್-ಹೆಲ್ಪ್ ಗ್ರೂಪ್ಸ್ ಎಂಬ ಲೇಖನದಲ್ಲಿ ನಮ್ಮ ದೇಶದಲ್ಲಿ ಮಹಿಳೆಯರ ಕಲ್ಯಾಣಕ್ಕಾಗಿ ಸ್ವ-ಸಹಾಯ ಗುಂಪುಗಳು ಒಂದು ಪ್ರಭಾವಿ ಸಂಪನ್ಮೂಲವಾಗಿದೆ ಎಂದು ಗುರುತಿಸಿದ್ದಾರೆ. ಸ್ವ-ಸಹಾಯ ಗುಂಪುಗಳ ರಚನೆಯು ಗ್ರಾಮೀಣ ಅಭಿವೃದ್ಧಿಯ ಗುರಿಗಳನ್ನು ಸಾಧಿಸಲು ಮತ್ತು ಎಲ್ಲಾ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಮುದಾಯ ಭಾಗವಹಿಸಲು ಸೂಕ್ತ ಪರ್ಯಾಯ ಮಾರ್ಗವಾಗಿದೆ ಎಂದು ಅವರು ತೋರಿಸಿದ್ದಾರೆ. ಎಸ್.ಎಚ್.ಜಿ.ಯು ಗ್ರಾಮೀಣ ಮಹಿಳೆಯರಿಗೆ ಸೂಕ್ಷ್ಮ

ಸಾಲವನ್ನು ವಿತರಿಸಿ ಮತ್ತು ಉದ್ಯಮಶೀಲತಾ ಚಟುವಟಿಕೆಗಳನ್ನು ಪ್ರವೇಶಿಸಲು ಪ್ರೋತ್ಸಾಹಿಸುವ ಆಯೋಜಿಸಿದ್ಧ ಕಾರ್ಯಕ್ರಮವಾಗಿದೆ.[೩೬]

ಚಿರಂಜೀವುಲು (೨೦೦೩) ಅವರು ಎಂಪವರಿಂಗ್ ವುಮೆನ್ ಥ್ರೂ ಸೆಲ್ಫ್-ಹೆಲ್ಪ್ ಗ್ರೂಪ್ಸ್ ಎಂಬ ಲೇಖನದಲ್ಲಿ ಸ್ವ-ಸಹಾಯ ಗುಂಪುಗಳು ರಫ್ತು ಸ್ಥಳೀಯ ಮಾರುಕಟ್ಟೆಗಳಿಗೆ ಸೇರಿದಂತೆ ಬಹುದೀರ್ಘಕಾಲದ ತಂತ್ರವನ್ನು ಪರಿಗಣಿಸಲಾಗಿದೆ ಎಂದು ತಿಳಿದುಬಂದಿದೆ. ಉತ್ಪನ್ನವನ್ನು ಸಮಪರ್ಕವಾಗಿ ಜಿಲ್ಲೆಯೊಳಗಿನ ಎಲ್ಲಾ ಸ್ವ-ಸಹಾಯ ಗುಂಪುಗಳಲ್ಲಿ ಜನಪ್ರಿಯಗೊಳಿಸುವುದು ಮತ್ತು ಉತ್ಪನ್ನವನ್ನು ಪೂರೈಸುವುದಕ್ಕಾಗಿ ಎಲ್ಲಾ ಮಾರುಕಟ್ಟೆಯ ಸ್ಥಳಗಳನ್ನು ಅಭಿವೃದ್ಧಿಪಡಿಸುವುದು. ಅಕ್ಕಪಕ್ಕದ ಜಿಲ್ಲೆಗಳು ಕೂಡ ಸ್ವ-ಸಹಾಯ ಗುಂಪಿನ ಮಹಿಳೆಯರು ಇತರೆ ಮಾರುಕಟ್ಟೆಯ ಉದ್ಯಮಶೀಲತೆಯನ್ನು ಪ್ರಾರಂಭಿಸಿವೆ ಎಂದು ಗುರುತಿಸಿದ್ದಾರೆ. ಸರ್ಕಾರ ನಿಯಂತ್ರಣ ಅಡಿಯಲ್ಲಿರುವ ಬಳಕೆ ವಸ್ತುಗಳನ್ನು ಪಡೆಯಲು ವಸತಿ ನಿಲಯಗಳು ಮತ್ತು ದೇವಸ್ಥಾನಗಳು ಸಂಪರ್ಕಿಸಲಾಗುವುದು. ಉತ್ಪನ್ನವನ್ನು ಪಿ.ಡಿ.ಎಸ್ ಮತ್ತು ಗೃಹ ಮಿತ್ರ ಪೂರೈಕೆ ಮಾರ್ಗಗಳ ಮೂಲಕ ಮಾರಾಟ ಮಾಡಲಾಗುತ್ತದೆ.[೩೭]

ರಾಘವೇಂದ್ರ (೨೦೦೩) ಅವರು ಸೆಲ್ಫ್-ಹೆಲ್ಪ್ ಗ್ರೂಪ್ಸ್ ಲಿಂಕೇಜ್ ಬ್ಯಾಂಕಿಂಗ್ : ಚಾಲೆಂಜಸ್ ಆಫ್ ಟ್ರೈನಿಂಗ್-ರೋಲ್ ಪ್ಲೇಯಿಡ್ ಬೈ ನ್ಯಾಷನಲ್ ಸೆಂಟರ್ ಎಂಬ ಲೇಖನದಲ್ಲಿ ತರಬೇತಿಯು ಸಂಪರ್ಕ ಕಾರ್ಯಕ್ರಮವನ್ನು ಅಳತೆ ಮಾಡುವುದರಲ್ಲಿ ಒಂದು ಮಹತ್ವವಾದ ಪಾತ್ರವಹಿಸುತ್ತದೆ. ಎಸ್.ಐ.ಡಿ.ಬಿ.ಐ. ನಬಾರ್ಡ್‌ನಿಂದ ಪ್ರಮುಖ ಸವಾಲುಗಳನ್ನು ಎದುರಿಸಲಾಗಿದೆ ಮತ್ತು ಬ್ಯಾಂಕುಗಳು ಬೇರೆ ಬೇರೆ ತರಬೇತಿಯ ಅವಶ್ಯಕತೆಯನ್ನು ಕಾರ್ಯಕ್ರಮದಲ್ಲಿ ಹಮ್ಮಿಕೊಳ್ಳುವುದು, ಆ ಪ್ರಕಾರ ಸ್ವ-ಸಹಾಯ ಗುಂಪುಗಳು ಸರ್ಕಾರೇತರ ಸಂಸ್ಥೆಗಳ ಕಾರ್ಯಗಳು, ಸರ್ಕಾರ ಮತ್ತು ಬ್ಯಾಂಕುಗಳು ವಿವಿಧ ರೀತಿಯ ಮತ್ತು ತರಬೇತಿ ಮಟ್ಟವನ್ನು ಹಾಗೂ ತಿಳುವಳಿಕೆಯ ಕಾರ್ಯಕ್ರಮಗಳಲ್ಲಿ ಪ್ರಮುಖ ಪಾತ್ರವಹಿಸುವುದಾಗಿದೆ.[೩೮]

ಪಲ್ಲಿ (೨೦೦೩) ಅವರು "ಸ್ವ-ಸಹಾಯ ಗುಂಪುಗಳು-ಸೂಕ್ಷ್ಮ ಉದ್ಯಮಶೀಲತೆ (ಕೆಲವು ಸಮಸ್ಯೆಗಳು, ಸವಾಲುಗಳು, ಪರ್ಯಾಯಗಳು) ಎಂಬ ಲೇಖನದಲ್ಲಿ ಗ್ರಾಮೀಣ ಉದ್ಯೋಗದ ಸಲುವಾಗಿ ಉತ್ತೇಜಿಸುವುದು ಮತ್ತು ಪ್ರೋತ್ಸಾಹಿಸುವುದು. ಸ್ಥಳೀಯ ಗ್ರಾಮೀಣ ಸಂಪನ್ಮೂಲಗಳನ್ನು ಉಪಯೋಗಿಸುವುದು. ಕೌಶಲ್ಯ ಅಭಿವೃದ್ಧಿ, ಗ್ರಾಮೀಣ ಉದ್ಯಮಶೀಲತೆಯನ್ನು ಉತ್ತೇಜಿಸುವುದು. ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವುದು, ಗ್ರಾಮೀಣ ಮತ್ತು ಪಟ್ಟಣದ ಅಂತರವನ್ನು ಕಡಿಮೆ ಮಾಡುವುದು, ಗ್ರಾಮೀಣ ಪ್ರದೇಶದ ಕೂಲಿಕಾರರನ್ನು ಪಟ್ಟಣದ ಕೇಂದ್ರಗಳಿಗೆ ವಲಸೆ ಹೋಗುವುದನ್ನು ತಡೆಯುವುದು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬಂಡವಾಳವನ್ನು ಹುಟ್ಟಿಸುವುದು ಮುಂತಾದ ಯೋಜನೆಗಳಲ್ಲಿ ಗ್ರಾಮೀಣ ಸೂಕ್ಷ್ಮ ಉದ್ಯಮಗಳು ಮಹತ್ವದ ಪಾತ್ರವಹಿಸುತ್ತಿವೆ ಎಂದು ಗುರುತಿಸಿದ್ದಾರೆ.

ಸಬ್ಯಸಚಿದಾಸ (೨೦೦೩) ಅವರು ತಮ್ಮ "Selg help Groups and Micro cridit synergic Integration" ಎಂಬ ಲೇಖನದಲ್ಲಿ ಈ ರೀತಿಯಾಗಿ ವಿವರಿಸಿದ್ದಾರೆ. ಸಾಲ ಕೊಡುವ ಸಂಸ್ಥೆಗಳ ದೌರ್ಬಲ್ಯದಿಂದ ಬಡವರಿಗೆ ಸಾಲ ಅವಶ್ಯಕತೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಣ್ಣ ಹಣಕಾಸಿನ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು ಅಥವಾ ಬಡಜನರಿಗೋಸ್ಕರ ಸೂಕ್ಷ್ಮ ಹಣಕಾಸಿನ ವ್ಯವಸ್ಥೆಯು ಒಂದು ಪೂರಕ ಸಾಲದ ವ್ಯವಸ್ಥೆಯಾಗಿದೆ. ಇದು ಒಂದು ಸಣ್ಣ ಹಣಕಾಸು ಅಥವಾ ಸಣ್ಣ ಸಾಲ ಯೋಜನೆಯು ಗ್ರಾಮೀಣ ಮಟ್ಟದಲ್ಲಿ ಬದಲಾವಣೆ ತರುವ ಸಲುವಾಗಿ ಬಡವರಿಗಾಗಿ ಅಸ್ತಿತ್ವಕ್ಕೆ ಬಂದಿದೆ ಎಂದು ಗುರುತಿಸಿದ್ದಾರೆ. ಗ್ರಾಮೀಣ ಭಾರತದಲ್ಲಿ ಸಮಾಜದ ಬಡತನದ ಗುಂಪುಗಳು ಅಥವಾ ದಿಕ್ಕಿಲ್ಲದವರಿಗೆ ಬ್ಯಾಂಕ್‌ಗಳಿಂದಾಗಲಿ ಅಥವಾ ಬೇರೆ ಬೇರೆ ಹಣಕಾಸಿನ ಸಂಸ್ಥೆಗಳಿಂದಾಗಲಿ ಸಾಲಕೊಡಲು ಸಾಧ್ಯವಿಲ್ಲ. ಏಕೆಂದರೆ ಅವುಗಳಲ್ಲಿ ಡಿಪಾಜಿಟ್‌ಗಾಗಿ ಹಣವಾಗಲಿ, ಸರ್ಕಾರದ ಭದ್ರತೆಯಾಗಲಿ ಮತ್ತು ಅಡ(ಒತ್ತಿ) ಇಡುವುದಕ್ಕೆ ಆಸ್ತಿಯಾಗಲಿ ಇವರಲ್ಲಿ ಇಲ್ಲ. ಈ ಒಂದು ದೃಷ್ಟಿಯಲ್ಲಿಟ್ಟುಕೊಂಡು ಸಣ್ಣ ಹಣಕಾಸಿನ ಅಥವಾ ಗುಂಪುಗಳಿಂದ ಸಾಲ ಕೊಡುವುದರ ಮೂಲಕ ಗ್ರಾಮೀಣ ಬಡತನ ನಿರ್ಮೂಲನೆ ಬಂಗಾರದ ಬಡಿಗೆ ಎಂಬ ಪರಿಕಲ್ಪನೆಯಿಂದ ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸುತ್ತಿವೆ.[೪೦]

ಭಾಗ್ಯಲಕ್ಷ್ಮಿ (೨೦೦೪) ಅವರು ವುಮೆನ್ ಎಂಪವರ್‌ಮೆಂಟ್ ಮೈಲ್ಸ್ ಟು ಗೊ ಎಂಬ ಲೇಖನದಲ್ಲಿ ಮಹಿಳಾ ಸಬಲೀಕರಣಕ್ಕಾಗಿ ಅವರನ್ನು ಪರಿಣಾಮಕಾರಿಯಾಗಿ ಮತ್ತು ಫಲಿತಾಂಶಗಳ ಆಧಾರದ ಮೇಲೆ ಮಹಿಳೆಯರನ್ನು ಬುದ್ಧಿವಂತರನ್ನಾಗಿ ಮಾಡಬೇಕೆಂದು ಅವರು ಹೇಳಿದ್ದಾರೆ. ಬಡಮಹಿಳೆ ದುಡಿದ ಹಣವನ್ನು ಹೆಚ್ಚಾಗಿ ಜೀವನಾವಶ್ಯಕ ಅವಶ್ಯಕತೆಗಳಿಗೆ ಪುರುಷರಿಂದ ವ್ಯಯಿಸಲ್ಪಡುವುದು ಮತ್ತು ಮಹಿಳೆ ಕುಟುಂಬ ಕಷ್ಟದಿಂದ ಮುಂದೆ ಬರುವುದಕ್ಕೆ ಕಾರಣವಾಗುತ್ತಾಳೆ ಎಂಬುದನ್ನು ಮನಗಾಣಬೇಕಾಗಿದೆ ಎಂದಿದ್ದಾರೆ. ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಕೂಡ ಇದೆ ಎಂದು ತಿಳಿದುಕೊಳ್ಳಬೇಕಾಗಿದೆ. ಅವರು ಇಂತಹ ಮಹಿಳಾ ಗುಂಪುಗಳನ್ನು ಪರೀಕ್ಷಿಸಿ ಪ್ರಯೋಜನಗಳ ಬಗ್ಗೆ ತಿಳಿಸಿ ಇಂತಹ ಮಹಿಳಾ ಗುಂಪುಗಳಿಗೆ ಒಂದು ಹೊಸ ಗೌರವ ಮತ್ತು ನಂಬಿಕೆ, ಅವರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು, ಆರ್ಥಿಕ ಸ್ವಾತಂತ್ರ್ಯ ಹೊಂದಲು ಒಂದು ಏಕತೆಯಿಂದ ಒಟ್ಟಾಗಿ ಕೆಲಸ ಮಾಡುವ ಅವಶ್ಯಕತೆಯ ಬಗ್ಗೆ ವಿವರಿಸಿದ್ದಾರೆ.[೪೧]

ಲೋಗನಾಥನ್ (೨೦೦೪) ಅವರು ಸ್ವ-ಸಹಾಯ ಗುಂಪುಗಳು ಮತ್ತು ಬ್ಯಾಂಕು ಸಂಪರ್ಕ ಎಂಬ ಲೇಖನದಲ್ಲಿ ಸ್ವ-ಸಹಾಯ ಗುಂಪುಗಳಿಗೆ ಮೂರು ರೀತಿಯ ಬ್ಯಾಂಕುಗಳು ಸಂಪರ್ಕವನ್ನು ಹೊಂದಿವೆ. ಅವುಗಳೆಂದರೆ, ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು. ೪೮ ವಾಣಿಜ್ಯ ಬ್ಯಾಂಕುಗಳು, ೧೯೨ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ೨೬೪ ಸಹಕಾರಿ ಬ್ಯಾಂಕುಗಳು ಸ್ವ-ಸಹಾಯ ಮತ್ತು ಬ್ಯಾಂಕು ಸಂಪರ್ಕವನ್ನು ಹೊಂದಿವೆ. ಈ ಕಾರ್ಯಕ್ರಮವು ರಾಷ್ಟ್ರಾದ್ಯಂತ ೫೨೩ ಜಿಲ್ಲೆಗಳಲ್ಲಿ ಚಾಲನೆಯಲ್ಲಿದೆ. ವಾಣಿಜ್ಯ ಬ್ಯಾಂಕುಗಳ ಮೂಲಕ ಸ್ವ-ಸಹಾಯ

ಗುಂಪುಗಳಿಗೆ ಸೂಕ್ಷ್ಮ ಸಾಲವನ್ನು ಸರಾಸರಿ ೩೧.೮೩೬ರೂಗಳು, ಪ್ರಾದೇಶಿಕ ಬ್ಯಾಂಕುಗಳಿಂದ ೨೬.೨೨೦ರೂ.ಗಳು ಮತ್ತು ಸಹಕಾರಿ ಬ್ಯಾಂಕುಗಳಿಂದ ೨೧,೭೦೩ರಷ್ಟು ಹಣಕಾಸನ್ನು ಒದಿಸಲಾಗಿದೆ.[೪೨]

ಸುಂದರ್ ಮತ್ತು ಅಶೋಕನ್ (೨೦೦೪) ಅವರು ಮಹಿಳಾ ಸ್ವ-ಸಹಾಯ ಗುಂಪುಗಳ ಹಣಕಾಸಿನಲ್ಲಿ ಸಹಕಾರಿ ಬ್ಯಾಂಕುಗಳು ಭಾಗವಹಿಸುವಿಕೆ ಎಂಬ ಲೇಖನದಲ್ಲಿ ಸ್ವ-ಸಹಾಯ ಗುಂಪುಗಳ ರೂಪದಲ್ಲಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಹಕಾರಿ ಬ್ಯಾಂಕುಗಳು ಹಣಕಾಸನ್ನು ಒದಗಿಸುತ್ತಿವೆ. ಸಾಲದ ಯೋಜನೆಯಲ್ಲಿ ಹೆಚ್ಚಿನ ಸಂಖ್ಯೆಯ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಸೂಕ್ಷ್ಮ ಸಾಲವನ್ನು ಕೊಡುವುದರ ಮುಖಾಂತರ ಕರ್ನಾಟಕ ರಾಜ್ಯದಲ್ಲಿ ಸಹಕಾರಿ ಬ್ಯಾಂಕುಗಳು ಮೊದಲನೇ ಸ್ಥಾನವನ್ನು ವಶಪಡಿಸಿಕೊಂಡಿವೆ. ನಂತರದ ಸ್ಥಾನಗಳಲ್ಲಿ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳಿವೆ.[೪೩]

ರಿನ್‌ಝಿಮ್ ಮೌಸುನಿದಾಸ (೨೦೦೪) ಅವರು ಸ್ವ-ಸಹಾಯ ಗುಂಪುಗಳ ಮೂಲಕ ಸೂಕ್ಷ್ಮ ಹಣಕಾಸು ಎಂಬ ಲೇಖನದಲ್ಲಿ ಬಡಜನರಿಗೆ ಬಡತನದಿಂದ ಮೇಲೆ ಬರಲು ಸ್ವ-ಸಹಾಯ ಗುಂಪುಗಳ ಮೂಲಕ ಸೂಕ್ಷ್ಮ ಹಣಕಾಸು ಒಂದು ನಿಚ್ಚಣಿಕೆಯಾಗಿದೆ. ಇದು ಕೇವಲ ಆರ್ಥಿಕವಾಗಿ ಅಲ್ಲದೇ ಸಾಮಾಜಿಕ, ಮಾನಸಿಕ ಮತ್ತು ಭಾವನಾತ್ಮಕವಾಗಿ ಸದೃಢರಾಗಲು ಸಹಾಯಮಾಡುತ್ತದೆ ಎಂದು ವಿಶ್ಲೇಷಿಸಿದ್ದಾರೆ. ಸೂಕ್ಷ್ಮ ಹಣಕಾಸು ಕೇವಲ ಸಾಲಕೊಡುವ ಭಾಗವಷ್ಟೇ ಅಲ್ಲ, ಇದರ ಜೊತೆಗೆ ಉಳಿತಾಯ ಮತ್ತು ವಿಮೆಯ ಭಾಗವು ಆಗಿರುತ್ತದೆ. ದಕ್ಷಿಣ ಭಾರತವು ಸೂಕ್ಷ್ಮ ಹಣಕಾಸಿಗೆ ಒಂದು ಅತ್ಯಂತ ಯಶಸ್ವಿ ಪ್ರದೇಶವಾಗಿದೆ.[೪೪]

ಪ್ಥಿ ನಿರ್ಮಲಾ (೨೦೦೪) ಅವರು ಎಸ್.ಹೆಚ್.ಜೀಸ್ ಫಾರ್ ಪಾವರ್ಟಿ ಅಲ್ಲಿವೇಷನ್ ಇನ್ ಪಾಂಡಿಚೇರಿ. ಎಂಬ ಲೇಖನದಲ್ಲಿ ಪಾಂಡಿಚೇರಿಯ ಪ್ರದೇಶದಲ್ಲಿ ಗ್ರಾಮೀಣ ಬಡ ಮಹಿಳೆಯರ ಸಬಲೀಕರಣದ ಮೇಲೆ ಸ್ವ-ಸಹಾಯ ಗುಂಪುಗಳ ಪರಿಣಾಮ ಮತ್ತು ಭಾಗವಹಿಸುವಿಕೆಯನ್ನು ಚರ್ಚಿಸಿದ್ದಾರೆ. ಈ ಅಧ್ಯಯನದ ಉದ್ದೇಶಗಳು ಒಂದು, ಸರ್ವೆ ಸಮಯದಲ್ಲಿ ಆಯ್ದುಕೊಂಡ ನಮೂನೆ ಪ್ರತಿವಾದಿಗಳ ಸಾಮಾಜೋ-ಆರ್ಥಿಕ ಹಿನ್ನೆಲೆಯನ್ನು ಗಮನಿಸುವುದು: ಎರಡು, ಪ್ರತಿವಾದಿಗಳ ಮಾಸಿಕ ಆದಾಯವನ್ನು ಗೊತ್ತುಪಡಿಸುವುದು ಮತ್ತು ಮೂರು, ಸ್ವ-ಸಹಾಯ ಗುಂಪಿನ ನಮೂನೆಯ ಪ್ರತಿವಾದಿಗಳಿಂದ ಸಮಸ್ಯೆ ಮತ್ತು ಲಾಭಗಳನ್ನು ವಿವರಿಸುವುದು. ಈ ಅಧ್ಯಯನವು ಪಾಂಡಿಚೇರಿಯ ಗ್ರಾಮೀಣ ಪ್ರದೇಶದಲ್ಲಿ ಸ್ವ-ಸಹಾಯ ಗುಂಪುಗಳ ಕಾರ್ಯಗಳನ್ನು ಅರ್ಥಮಾಡಿಕೊಳ್ಳಲು ಒಂದು ಕಾಣಿಕೆಯಾಗಿದೆ.[೪೫]

ತ್ರಿಪತಿ (೨೦೦೪) ಅವರು "ಸ್ವ-ಸಹಾಯ ಗುಂಪುಗಳು" ಎಂಬ ಲೇಖನದಲ್ಲಿ ಸ್ವ-ಸಹಾಯ ಗುಂಪಿನ ಸದಸ್ಯರಿಗೆ ಸಮುದಾಯ ಆರೋಗ್ಯ, ಸಂಪ್ರದಾಯಿಕ ಮತ್ತು ಆಧುನಿಕ ಕೃಷಿ ಮಾಡುವಿಕೆ. ಸೂಕ್ಷ್ಮ

ಹಣಕಾಸು, ಪಶುಸಂಗೋಪನೆ ಮತ್ತು ನೀರಿನ ಸಂಪನ್ಮೂಲ ನಿರ್ವಹಣೆಯ ಮೇಲೆ ಜಾಗೃತಿ ಹುಟ್ಟಿಸುವುದಕ್ಕೆ ಅಗತ್ಯವಾಗಿ ತರಬೇತಿಯನ್ನು ಕೊಡಬೇಕೆಂದು ವಿವರಿಸಿದ್ದಾರೆ. ಗುಂಪುಗಳ ಸದಸ್ಯರ ಗುರಿಗಳನ್ನು ಸಾಧಿಸಲು ವಿವಿಧ ಇಲಾಖೆಗಳು, ಸಂಸ್ಥೆಗಳು, ಮತ್ತು ಸಚಿವ ಶಾಖೆಗಳು ಸ್ವ-ಸಹಾಯ ಗುಂಪುಗಳತ್ತ ನೋಡಬಹುದಾಗಿದ್ದು, ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಜನರ ಜೀವನದ ಗುಣಮಟ್ಟವನ್ನು ಸುಧಾರಿಸುವಲ್ಲಿ ಸಹಾಯಕವಾಗುವಂತಾಗುತ್ತದೆ.[೪೬]

ರಶೀದ ಭಗತ್ (೨೦೦೪) ಅವರು "ಇಂಡಿಯಾ ಇಂಟರೀಯರ್" ಎಂಬ ಲೇಖನದಲ್ಲಿ ಮಹಿಳಾ ಸ್ವ-ಸಹಾಯ ಗುಂಪುಗಳ ಮತ್ತು ಸೂಕ್ಷ್ಮ ಹಣಕಾಸಿನ ಬಗ್ಗೆ ಮಾನವನ ಭಾವನೆಯಲ್ಲಿ ಒಂದು ಬೃಹತ್ ಮಟ್ಟದಲ್ಲಿ ಬದಲಾವಣೆಯಾಗಿದೆ ಎಂದು ಹೇಳಿದ್ದಾರೆ. ಕಳೆದ ೧೦ ವರ್ಷಗಳಲ್ಲಿ ಬ್ಯಾಂಕುಗಳು ಪ್ರವೃತ್ತಿ ಗಣನೀಯವಾಗಿ ಬದಲಾಗಿದ್ದು, ಅಲ್ಲಿ ಕಾಣಿಸಿಕೊಳ್ಳುವ ವ್ಯತ್ಯಾಸವೆಂದರೆ ಮಹಿಳಾ ಗುಂಪುಗಳನ್ನು ನೋಡುವ ದೃಷ್ಟಿಕೋನ ಬದಲಾವಣೆಯಾಗಿರುವುದರಿಂದ ಈ ಕಾರ್ಯಕ್ರಮವು ಪ್ರಮುಖ ಯಶಸ್ವಿಯನ್ನು ಸಾಧಿಸಿದೆ.[೪೭]

ಶಾಂತಿ ಮತ್ತು ಧನಲಕ್ಷ್ಮಿ (೨೦೦೪) ಅವರು ಕೇಸ್ ಸ್ಟಡಿ ಆಫ್ ವುಮೆನ್ ಎಂಪವರ್‌ಮೆಂಟು ಥ್ರೂ ಸೆಲ್ಫ್-ಹೆಲ್ಪ್ ಗ್ರೂಪ್ಸ್ ಇನ್ ಗೊಬಿಚೆಟ್ಟಿಪಲಯಮ್ ಬ್ಲಾಕ್ ಎಂಬ ಲೇಖನದಲ್ಲಿ ಮಹಿಳೆಯರ ಜೀವನದ ಎಲ್ಲಾ ಕ್ಷೇತ್ರದಲ್ಲಿಯೂ ಮತ್ತು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಬಹು ಆಯಾಮದ ಪ್ರಕ್ರಿಯೆಯೇ ಸಬಲೀಕರಣ ಎಂದು ವಿಶ್ಲೇಷಿಸಿದ್ದಾರೆ. ಆರ್ಥಿಕ ಸಬಲೀಕರಣ ಜೊತೆಗೆ ಮಹಿಳೆಯರ ಸಬಲೀಕರಣದ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಗುಂಪುಗಳ ಸಂಸ್ಕೃತಿಯಲ್ಲಿ ಸಕ್ರಿಯ ಭಾಗವಹಿಸುವಿಕೆ, ನಾಯಕತ್ವದ ಗುಣಗಳು ಮತ್ತು ರಾಜಕೀಯ ವಿವೇಚನೆಯಲ್ಲಿ ಸುಧಾರಣೆ ಹಾಗೂ ಒಟ್ಟಾರೆಯಾಗಿ ಸಬಲೀಕರಣದ ಪ್ರಕ್ರಿಯೆಯನ್ನು ಉಳಿಸಿಕೊಳ್ಳಬಹುದು.[೪೮]

ಸಂಜಯ್‌ರಾಯ್ (೨೦೦೪) ಅವರು "Linking self help Groups under SGSY Scheme with co-operatives-prospects and concerns" ಎಂಬ ಲೇಖನದಲ್ಲಿ ಸ್ವ-ಸಹಾಯ ಗುಂಪುಗಳ ಮತ್ತು ಸಹಕಾರಿ ಸಂಸ್ಥೆಗಳ ನಡುವೆ ವಿಶೇಷ ಲಕ್ಷಣಗಳನ್ನು ಆಗಿಂದಾಗ್ಗೆ ದೊಡ್ಡವಾಗಬಹುದು. ಕೆಲವೊಮ್ಮೆ ಅಸಮಾನತೆಯಿಂದ ಮತ್ತು ಔಪಚಾರಿಕತೆಯಿಂದ ಅನೌಪಚಾರಿಕತೆಯೆಡೆಗೆ ಹಾಗೂ ಕೆಲವೊಮ್ಮೆ ಹೊಂದಾಣಿಕೆಯಿಂದ ಕಳೆದುಕೊಳ್ಳಬಹುದು ಮತ್ತು ಚಟುವಟಿಕೆ ಬೆಳವಣಿಗೆಯಲ್ಲಿ ವ್ಯಕ್ತಿಗಳ ನಡುವೆ ಸಂಬಂಧಗಳ ಆಧಾರದ ಮೇಲೆ ಅಲ್ಲಿ ನಿರ್ಣಯ ತೆಗೆದುಕೊಳ್ಳುವುದು. ಅನುಷ್ಠಾನ ಇತ್ಯಾದಿಗಳ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಬೆಳೆಸಿಕೊಳ್ಳಬಹುದು ಮತ್ತು ಇವುಗಳನ್ನು ಅನುಸರಿಸಿ ತುಲನಾತ್ಮಕವಾಗಿ

ಸುಲಭದ ರೀತಿಯಲ್ಲಿ ಮಾರ್ಪಡಿಸಿಕೊಳ್ಳಬಹುದು. ೩:೧ ಅನುಪಾತದಷ್ಟು ಎಸ್.ಜಿ.ಎಸ್.ವೈ. ಅಡಿಯಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳು ಅನುದಾನವನ್ನು ಒದಗಿಸಿವೆ.[೪೯]

ಕಲಾ (೨೦೦೪) ಅವರು ಎಕಾನಾಮಿಕ್ ಎಂಪವರ್‌ಮೆಂಟ್ ಆಫ್ ವುಮೆನ್ ಥ್ರೂ ಸೆಲ್ಫ್-ಹೆಲ್ಫ್ ಗ್ರೂಪ್ಸ್ ಎಂಬ ಲೇಖನದಲ್ಲಿ ದೇಶದಲ್ಲಿ ಎಲ್ಲಾ ರಾಜ್ಯಗಳಲ್ಲಿ ಮನೆಯ ಮಹಿಳಾ ಮುಖ್ಯಸ್ಥರಿಗೆ ಹೋಲಿಸಿದರೆ ತಮಿಳುನಾಡು ಅತಿ ಹೆಚ್ಚು ಶೇಕಡವಾರು ಮಹಿಳೆಯರು ತಮ್ಮ ಕುಟುಂಬಗಳಿಗೆ ಮುಖ್ಯಸ್ಥರಿದ್ದು, ದೇಶದಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ೧೯೯೭-೯೮ನೇ ವರ್ಷದಲ್ಲಿ ತಮಿಳುನಾಡಿನ ಮಹಿಳಾ ಅಭಿವೃದ್ಧಿ ಯೋಜನೆಯು ಮಹಿಳೆರ್ ಥಿಟ್ಟಮ್ ಅಡಿಯಲ್ಲಿ ರಾಜ್ಯದಲ್ಲಿ ೧೦ಲಕ್ಷ ಬಡ ಮಹಿಳೆಯರನ್ನು ಕವರ್ ಮಾಡಲಾಗಿದೆ. ೧೯೯೮ ಮಾರ್ಚ್‌ರ ಹೊತ್ತಿಗೆ ಸ್ವ-ಸಹಾಯ ಗುಂಪುಗಳ ಪಾಲು ಶೇ ೭೮ರಷ್ಟು ಇತ್ತು. ಆರು ರಾಜ್ಯಗಳಲ್ಲಿ (ಕರ್ನಾಟಕ, ಗುಜರಾತ, ರಾಜಸ್ಥಾನ, ಹರ್‍ಯಾಣ, ಮಧ್ಯಪ್ರದೇಶ ಮತ್ತು ಮೇಘಾಲಯ) ಪುರುಷರ ಸ್ವ-ಸಹಾಯ ಗುಂಪುಗಳು ಶೇ ೪೦ರಷ್ಟು ಮಾತ್ರ ಇವೆ.[೫೦]

ಅನಿತಾ ಪಂಡ (೨೦೦೪) ಅವರ "ಎಸ್‌ಹೆಚ್.ಜಿ-ಎಬೂನ್ ಫಾರ್ ಮನಿ" ಎಂಬ ಲೇಖನದಲ್ಲಿ ಪ್ರಾರಂಭದಲ್ಲಿ ವ್ಯಾಪಾರದಲ್ಲಿ ಮಹಿಳೆಯರಿಗೆ ಪುರುಷರು ಸಹಾಯ ಮಾಡುತ್ತಿದ್ದರು. ಆದರೆ ನಂತರದಲ್ಲಿ ಮಹಿಳೆಯರು ಸಹ ಸ್ವತಂತ್ರವಾಗಿ ವ್ಯಾಪಾರ ಪ್ರಾರಂಭಿಸಲು ಮುಂದೆ ಬಂದರು. ಸದಸ್ಯರು ಸಾಲವನ್ನು ತಮ್ಮ ಕುಟುಂಬದ ವ್ಯಾಪಾರಕ್ಕೆ ಉಪಯೋಗಿಸಿದರು ಮತ್ತು ಸರಿಯಾದ ಸಮಯಕ್ಕೆ ಮರುಪಾವತಿ ಮಾಡುತ್ತಿದ್ದರು ಎಂದು ವಿಶ್ಲೇಷಿಸಿದ್ದಾರೆ.[೫೧]

ಶೇಕ್ ಮಹಮದ್ (೨೦೦೪) ಅವರು ಸೆಲ್ಫ್-ಹೆಲ್ಫ್ ಗ್ರೂಪ್ಸ್ ಫಾರ್ ದಿ ಸಕ್ಸೆಸ್ ಆಫ್ ವುಮೆನ್ ಎಂಟ್ರಪ್ರಿನ್ಯೂರ್ಸ್ ಎಂಬ ಲೇಖನದಲ್ಲಿ ವಾಣಿಜ್ಯ ಜಗತ್ತು ಮತ್ತು ಆಧುನಿಕ ವ್ಯಾಪಾರದಲ್ಲಿ ಮಹಿಳೆಯರು ತಮ್ಮದೇ ಆದ ಮಹತ್ವದ ಕೊಡುಗೆಯನ್ನು ಕೊಟ್ಟಿದ್ದಾರೆ. ಮಹಿಳೆಯರನ್ನು ಅತೀ ಹೆಚ್ಚು ಓದಿ ಉದ್ಯೋಗದಲ್ಲಿರುವವರು, ಖಾಸಗೀ ಹಾಗೂ ಸರ್ಕಾರಿ ಔಪಚಾರಿಕ ವಲಯದಲ್ಲಿ ಕೆಲಸಗಾರರು ಮತ್ತು ಅನೌಪಚಾರಿಕ ವಲಯದಲ್ಲಿ ಮಹಿಳಾ ಕೆಲಸಗಾರರು ಎಂದು ಮಹಿಳಾ ಉದ್ಯಮಿಗಳಾಗಿ ವಿಭಾಗಿಸಬಹುದಾಗಿದೆ. ಮಹಿಳೆಯರ ವಿರುದ್ಧ ಚಾಲ್ತಿಯಲ್ಲಿರುವ ಸಾಮಾಜಿಕ ತಾರತಮ್ಯ ಮಾರ್ಪಡಿಸುವ ಮೊದಲ ಆದ್ಯತೆಯಾಗಬೇಕು. ವೇಗವಾಗಿ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಸುಧಾರಿಸಲು ನೇರವಾದ ಚಟುವಟಿಕೆಗಳ ಜೊತೆಗೆ ಏಕಕಾಲದಲ್ಲಿ ಆಗಬೇಕಾಗಿದೆ.[೫೨]

ಸೂರುಬರಾಣಿ ಮತ್ತು ಥೆಸ್ಮೋಜಿ (೨೦೦೪) ಅವರು ಸೆಲ್ಫ್-ಹೆಲ್ಫ್ ಗ್ರೂಪ್ಸ್ ಗೇಟ್‌ವೆ ಟು ವುಮೆನ್ ಎಂಪವರ್‌ಮೆಂಟು ಎಂಬ ಲೇಖನದಲ್ಲಿ ಭಾರತೀಯ ರಿಸರ್ವ್ ಬ್ಯಾಂಕು, ಸರ್ಕಾರೇತರ ಸಂಸ್ಥೆಗಳು ಮತ್ತು ಸ್ವ-ಸಹಾಯ ಗುಂಪುಗಳ ಮೂಲಕ ನೇರವಾಗಿ ಸಂಪರ್ಕವನ್ನು ಕಲ್ಪಿಸಿಕೊಳ್ಳಲು ವಾಣಿಜ್ಯ ಬ್ಯಾಂಕುಗಳಿಗೆ

ಸಲಹೆ ನೀಡಲಾಗಿದೆ. ಅವರು ಮೂಲ ತತ್ವಗಳ ಆಧಾರದ ಮೇಲೆ ಪರಸ್ಪರ ನಂಬಿಕೆ, ಬಡವರ ಸಂಘಟನೆ, ಸಣ್ಣ ನಿರ್ವಹಣಾ ಗುಂಪುಗಳು, ಗುಂಪು ಹೊಂದಾಣಿಕೆ, ಬೇಡಿಕೆ ಆಧಾರಿತ ಸಾಲ, ಸಹಭಾಗಿತ್ವದ ಸ್ನೇಹಿ ಮಹಿಳೆಯರ ಸಾಲ ಗೆಳೆಯರ ಗುಂಪಿನಿಂದ ಸಾಲ, ಮರುಪಾವತಿಯ ಒತ್ತಡ, ಕೌಶಲ್ಯ ತರಬೇತಿ, ಸಾಮರ್ಥ್ಯವನ್ನು ಹೆಚ್ಚಿಸುಕೊಳ್ಳುವಿಕೆ ಮತ್ತು ಸಬಲೀಕರಣ ಮುಂತಾದ ಸ್ವ-ಸಹಾಯ ಗುಂಪುಗಳ ಕಾರ್ಯವಿಧಾನಗಳ ಬಗ್ಗೆ ಚರ್ಚಿಸಿದ್ದಾರೆ.[೫೩]

ಸೆಂಥಿಲ್ ವಡಿವೂ ಮತ್ತು ಶೇಖರ್(೨೦೦೪) ಅವರು "Self Help Groups : A Movement for wonen Empowerment" ಎಂಬ ಲೇಖನದಲ್ಲಿ ಸಶಕ್ತರಾಗಿರುವ ಮಹಿಳೆಯರು ಸಭೆ ಸೇರುವುದು ಕೇವಲ ಆರ್ಥಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದಷ್ಟೇ ಅಲ್ಲದೆ ಪವಿತ್ರವಾದ ಸಾಮಾಜಿಕ ಅಭಿವೃದ್ಧಿ ಕೂಡ ಮಾಡುವುದಾಗಿದೆ. ಸ್ವ-ಸಹಾಯ ಗುಂಪುಗಳಲ್ಲಿ ಸಾಮೂಹಿಕ ಕ್ರಮ ಮತ್ತು ಐಕ್ಯಮತ ಒಂದು ಮಹತ್ವವಾದ ಯಾಂತ್ರಿಕ ಸಬಲೀಕರಣವಾಗಿದೆ. ಸಬಲೀಕರಣದಿಂದ ನಂಬಿಕೆ, ತಮ್ಮ ಸಾಮರ್ಥ್ಯವನ್ನು ಅರಿಯುತ್ತಾರೆ ಮತ್ತು ಅವರ ಸಾಮೂಹಿಕ ಚೌಕಾಸಿಯ ಶಕ್ತಿ ಹಾಗೂ ಮಹಿಳೆಯರ ಸ್ವಾಭಿಮಾನದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಅವರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೫೪]

ವೆಂಕಟಾಚಲಂ ಮತ್ತು ಜಯಪ್ರಕಾಶ(೨೦೦೪) ಅವರು "Selr Help in dindigul district" ಎಂಬ ಲೇಖನದಲ್ಲಿ ಸ್ವ-ಸಹಾಯ ಗುಂಪುಗಳ ಪರಿಕಲ್ಪನೆ ಗ್ರಾಮೀಣ ಮಟ್ಟದಲ್ಲಿ ಮೌನವಾಗಿ ಕ್ರಾಂತಿಯ ಬೀಜಗಳನ್ನು ಬಿತ್ತಲಾಗಿದೆ. ಇದು ಮಹಿಳೆಯರಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಮತ್ತು ಸ್ಥಳೀಯ ಆಡಳಿತದಲ್ಲಿ ಭಾಗವಹಿಸಲು ಸಹ ದಾರಿ ಮಾಡಿಕೊಡುತ್ತವೆ. ಗ್ರಾಮೀಣ ಮಟ್ಟದಲ್ಲಿ ಶೇ.೮೦ರಷ್ಟಕ್ಕಿಂತ ಹೆಚ್ಚು ಗುಂಪುಗಳನ್ನು ರಚಿಸಲಾಗಿದೆ ಮತ್ತು ನಗರ ಮಟ್ಟದಲ್ಲಿ ಶೇ.೫ರಷ್ಟು ಸ್ವ-ಸಹಾಯ ಗುಂಪುಗಳನ್ನು ರಚಿಸಲಾಗಿದೆ ಎಂದು ಗುರುತಿಸಿದ್ದಾರೆ.[೫೫]

ಲೀಲಾವತಿ (೨೦೦೪) ಅವರು SHG is a cream layer for women's social status ಎಂಬ ಪೇಪರ್‌ನಲ್ಲಿ ಸ್ವ-ಸಹಾಯ ಗುಂಪುಗಳು ಸಾಲಕೊಡುವ(ದಲ್ಲಾಳಿಗಳು, ಹಣದ ಲೇವಾದೇವಿಗಾರರು ಇತ್ಯಾದಿ)ರ ಶಾಪವನ್ನು ನಿರ್ಮೂಲನೆ ಮಾಡಿವೆ. ಗುಂಪುಗಳು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರನ್ನು ಮೇಲೆತ್ತಲು ಒಂದು ನಿಚ್ಚಣಿಕೆಯಾಗಿ ಪರಿವರ್ತನೆಯಾಗಿದೆ. ರೋಡುಗಳನ್ನು ಮಾಡುವುದು. ಬ್ರಾಂದಿ ಅಂಗಡಿಗಳನ್ನು ಮುಚ್ಚುವುದು. ಪುನರ್ವಸತಿ ಕೆಲಸಕ್ಕೆ ಕೊಡುಗೆ ಕೊಡುವುದು ಮತ್ತು ತಮ್ಮ ಹಳ್ಳಿಗೆ ಸಂಬಂಧಪಟ್ಟಂತೆ ನಿರ್ವಹಣೆ ಮಾಡುವುದರ ಮೂಲಕ ಸ್ವ-ಸಹಾಯ ಗುಂಪುಗಳು ತಮ್ಮ ಹಳ್ಳಿಗಳನ್ನು ಕಟ್ಟುವ ಕೆಲಸ ತೆಗೆದುಕೊಂಡಿವೆ ಎಂದು ಗುರುತಿಸಿದ್ದಾರೆ.[೫೬]

ರೋಸಪ್ಪ ಮತ್ತು ಕಲ್ಯಾಣ್ ಸುಂದರ್ (೨೦೦೪) ಅವರು ಎಕನಾಮಿಕ್ ಇಂಡೀಪೆಂಡೆನ್ಸ್ ಥ್ರೂ ಸೆಲ್ಫ್-ಹೆಲ್ಫ್ ಗ್ರೂಪ್ಸ್ ಎಂಬ ಲೇಖನದಲ್ಲಿ ಹೆಚ್ಚುವರಿ ಸಮಯ ಮತ್ತು ಸರ್ಕಾರಿ ಸೇವೆಗಳ ಅನುಪಸ್ಥಿತಿಯಲ್ಲಿ ಬ್ಯಾಂಕುಗಳಿಂದ ಸಾಲ ಪಡೆದು ಚಾಕೋಲೇಟ್‌ಗಳು, ಹಪ್ಪಳ, ಶೌಚಾಲಯಗಳ ನಿರ್ಮಾಣ, ಟೀ ಅಂಗಡಿ, ಕಲ್ಲಿನ ಕ್ವಾರೀಸ್‌ಗಳು, ಸಸ್ಯಗಳನ್ನು ನೀಡುವುದು, ಚಾಪೆ, ಸೋಪು ತಯಾರಿಕೆ ಮುಂತಾದ ವ್ಯಾಪಾರಗಳನ್ನು ಮಾಡಲು ಹಣ ಉತ್ಪಾದಿಸುವಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರ ಮಹತ್ವದಾಗಿದೆ ಎಂದು ಚರ್ಚಿಸಿದ್ದಾರೆ.[೫೭]

ಪ್ರೇಮ ಪರಂಡೆ(೨೦೦೫) ಅವರ ಎಕನಾಮಿಕ್ ಎಂಪವರ್‌ಮೆಂಟ್ ಆಫ್ ವುಮೆನ್ ಎಂಬ ಲೇಖನದಲ್ಲಿ ಮಹಿಳೆಯರಿಗೆ ತಮ್ಮ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಮರ್ಥ್ಯ ಹಾಗೂ ಶಕ್ತಿ ಮತ್ತು ತಮ್ಮ ಗುರುತನ್ನು ಅರಿಯುವುದಕ್ಕೆ ಸಬಲೀಕರಣವು ಸಕ್ರಿಯ ಪ್ರಕ್ರಿಯೆಯಾಗಿದೆ. ನಿರ್ಣಯ ಪ್ರಕ್ರಿಯೆ, ಹಿಂಸಾಚಾರ ತಡೆಗಟ್ಟಲು, ಸಾಮರ್ಥ್ಯ, ಆತ್ಮವಿಶ್ವಾಸ, ಆತ್ಮಗೌರವ, ಸಮುದಾಯಿಕ ಮಟ್ಟದಲ್ಲಿ ಆರೋಗ್ಯ ಮತ್ತು ನೈರ್ಮಲ್ಯದ ಸ್ಥಿತಿಯನ್ನು ಸುಧಾರಿಸುವಿಕೆ ಹಾಗೂ ಮಹಿಳೆಯರ ಸಂಘಟನೆಯ ಅಸ್ತಿತ್ವ, ಅಭಿವೃದ್ಧಿ ವಿನ್ಯಾಸ ಸಲಕರಣೆಗಳಲ್ಲಿ ಮಹಿಳೆಯರನ್ನು ಅಧಿಕ ಸಂಖ್ಯೆಯಲ್ಲಿ ಹೆಚ್ಚಿಸುವುದು ಮತ್ತು ಸೂಕ್ತ ತಂತ್ರಜ್ಞಾನದ ಅಳವಡಿಕೆ ಇತ್ಯಾದಿ ಅಂಶಗಳಲ್ಲಿ ಮಹಿಳೆಯರು ಸಕ್ರೀಯವಾಗಿ ಪಾಲ್ಗೊಳ್ಳುತ್ತಾರೆ. ಮಹಿಳಾ ಸಬಲೀಕರಣಕ್ಕೆ ಆರ್ಥಿಕ ಸ್ಥಿತಿ ಸುಧಾರಣೆಯ ಒಂದು ಗೋಚರ ಸೂಚಕವಾಗಿದೆ. ಮಹಿಳೆಯರ ಸಬಲೀಕರಣ ಪರಿಣಾಮಕ್ಕೆ ಅನೇಕ ಅಂಶಗಳಿವೆ. ಉದಾಹರಣೆಗೆ ಶಿಕ್ಷಣ ಸಂಶೋಧನಾ ಡಾಕ್ಯುಮೆಂಟ್, ಶಿಬಿರಗಳು ಮತ್ತು ನೆಟ್‌ವರ್ಕಿಂಗ್ ತರಬೇತಿ, ಜಾಗೃತಿ ಪ್ರಚಾರಾಂದೋಲನ, ಮೈಡ್‌ಪುಲ್ ಮೀಡಿಯಾ, ಚಿತ್ರಗಳು ಹಾಗೂ ದಹಿಸುವ ಅಂಶಗಳು ಇತ್ಯಾದಿ ಸಬಲೀಕರಣದ ಎಲ್ಲಾ ಪ್ರಮುಖ ಮಾರ್ಗಗಳು ಇನ್ನೂ ಇವೆ, ನಿರ್ದಿಷ್ಟವಾಗಿ, ಶಿಕ್ಷಣ ಮತ್ತು ತರಬೇತಿ ಅತ್ಯಂತ ಪರಿಣಾಮಕಾರಿ ಸಾಧನವಾಗಿದೆ. ಆದರೆ ದೀರ್ಘಾವಧಿಯಲ್ಲಿ ಸಬಲೀಕರಣ ಪ್ರಕ್ರಿಯೆಯನ್ನು ಸುಸ್ಥಿರವಾಗಿ ಉಳಿಸಿಕೊಳ್ಳಬೇಕು.[೫೮]

ಸತ್ಯ ಸುಂದರಮ್ (೨೦೦೫) ಅವರು ವ್ಯಾಲಂಟರಿ ಆ್ಯಕ್ಷನ್ ಫಾರ್ ರೂರಲ್ ಡೆವೆಲಪ್‌ಮೆಂಟ್ ಎಂಬ ಲೇಖನದಲ್ಲಿ ಸರ್ಕಾರೇತರ ಸಂಸ್ಥೆಗಳು ಮತ್ತು ಸ್ವ-ಸಹಾಯ ಗುಂಪುಗಳ ಮೂಲಕ ಸೂಕ್ಷ್ಮ ಹಣಕಾಸನ್ನು ಒದಿಸಲಾಗುವುದು. ಈ ಯೋಜನೆ ಯಶಸ್ವಿಯಾಗಿದೆ. ಏಕೆಂದರೆ ಇದು ಮಿತಿಮೀರಿದ ಸಮಸ್ಯೆಗಳನ್ನು ಪರಿಹರಿಸಲಾಗಿದೆ. ಇದರ ಜೊತೆಗೆ ಸಾಲವನ್ನು ಉತ್ಪನ್ನ ಪ್ರಕ್ರಿಯೆಗಳಿಗೆ ಉಪಯೋಗ ಮಾಡಲಾಗಿದೆ. ಸ್ವ-ಸಹಾಯ ಗುಂಪಿನ ಬ್ಯಾಂಕು ಸಂಪರ್ಕ ಕಡುಬಡಜನರ ಗುಂಪಿಗೆ ಸಹಾಯವಾಗಿದೆ. ಸ್ವಯಂ ಸೇವಾ ಸಂಸ್ಥೆಗಳು ಮಹಿಳೆಯರನ್ನು ಸಶಕ್ತರನ್ನಾಗಿ ಮಾಡುವ ಗುರಿಯನ್ನು ಹೊಂದಿವೆ. ಮೀಸಲಾತಿಯ ಪರಿಣಾಮವಾಗಿ, ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಮೇಯರ್‌ಗಳಾಗಿದ್ದಾರೆ. ಆದರೆ ಅವರು ಕಾರ್ಯಗಳನ್ನು ನಿರ್ವಹಿಸುತ್ತಿಲ್ಲ. ಅವರ ಪರವಾಗಿ ಅವರ ಗಂಡಂದಿರು ಕಾರ್ಯಗಳನ್ನು

ನಿರ್ವಹಿಸುತ್ತಿದ್ದಾರೆ ಮತ್ತು ಪರಸ್ಪರ ಪ್ರಯೋಜನೆ ಸಲುವಾಗಿ ಶೈಕ್ಷಣಿಕ ಸಂಸ್ಥೆಗಳ ಜೊತೆಗೆ ಸ್ವಯಂ ಸೇವಾ ಸಂಸ್ಥೆಗಳು ಸಂಪರ್ಕದಲ್ಲಿರಬೇಕು. ಗ್ರಾಮೀಣಾಭಿವೃದ್ಧಿಯು ವಿಶಾಲವಾದ ಕ್ಷೇತ್ರವಾಗಿದೆ ಮತ್ತು ಸಮಸ್ಯೆಗಳು ಕ್ಲಿಷ್ಟವಾಗಿವೆ. ಆದ್ದರಿಂದ ವಿವಿಧ ಆಯಾಮದ ಗ್ರಾಮೀಣ ಸಮಸ್ಯೆಗಳು ಮತ್ತು ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಸ್ವಯಂ ಸೇವಾ ಸಂಸ್ಥೆಗಳ ಕಾರ್ಯ ಅವಶ್ಯಕತೆ ಇದೆ ಮತ್ತು ಈ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತ ಕಾರ್ಯ ತಂತ್ರಗಳನ್ನು ಕೂಡ ರೂಪಿಸಬೇಕು.[೫೯]

ರಾಮಕೃಷ್ಣನ್ (೨೦೦೫) ಅವರು ಎಸ್.ಹೆಚ್.ಜಿ–ಬ್ಯಾಂಕ್ ಲಿಂಕೇಜ್ ಎಂಬ ಲೇಖನದಲ್ಲಿ ಪ್ರಕಾರ ಸ್ವ–ಸಹಾಯ ಗುಂಪುಗಳನ್ನು ಬಡಜನತೆಗೆ ಔಪಚಾರಿಕ ಹಣಕಾಸಿನ ಸೇವೆಯನ್ನು ಒದಗಿಸಲು ಪ್ರಾರಂಭಮಾಡಲಾಗಿದ್ದು, ಇದನ್ನು ಸಹಕಾರ ಸೇವೆಗಳನ್ನು ಒದಗಿಸಲು ಒಂದು ಪ್ರಥಮ ಹೆಜ್ಜೆ ಎಂದು ನಿರೀಕ್ಷಿಸಲಾಗಿತ್ತು. ಈಗಾಗಲೇ ಅಸ್ತಿತ್ವದಲ್ಲಿದ್ದ ಸ್ಥಳೀಯ ಮಟ್ಟದ ಸಣ್ಣ ಸಂಸ್ಥೆಗಳು ಸರ್ಕಾರದ ಬೆಂಬಲದೊಂದಿಗೆ ಸ್ವ–ಸಹಾಯ ಗುಂಪುಗಳಿಗೆ ಸಂಪೂರ್ಣವಾಗಿ ಹಣಕಾಸಿನ ಸೌಲಭ್ಯವನ್ನು ಒದಗಿಸಿವೆ. ಇದನ್ನು ನಿದರ್ಶನವಾಗಿ ಇಟ್ಟುಕೊಂಡು ರಾಜ್ಯಾದಾದ್ಯಂತ ಸ್ವ–ಸಹಾಯ ಗುಂಪಿನ ಸಂಪರ್ಕದ ಕಾರ್ಯಕ್ರಮದಡಿಯಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘಗಳು ಮತ್ತು ಸಹಕಾರಿ ಬ್ಯಾಂಕುಗಳು ಮಿತವಾದ ಪಾತ್ರವನ್ನು ನಿರ್ವಹಿಸುತ್ತಿವೆ. ಈ ಸಂಬಂಧಗಳ ನಡುವೆ ಸಹಕಾರಿ ಬ್ಯಾಂಕುಗಳು ವಾಣಿಜ್ಯ ಯಶಸ್ವಿಯನ್ನು ಕಂಡಿವೆ. ಬ್ಯಾಂಕುಗಳ ಕಾರ್ಯಕ್ಷಮತೆಗಳಿಂದ ಬ್ಯಾಂಕು ಸಂಪರ್ಕವನ್ನು ವಿಸ್ತಾರಗೊಳಿಸಿವೆ. ಹೆಚ್ಚಿನ ಬ್ಯಾಂಕುಗಳು ಸ್ವ–ಸಹಾಯ ಗುಂಪುಗಳಿಗೆ ಕಡಿಮೆ ಸದಸ್ಯತ್ವವನ್ನು ನೀಡಿವೆ ಮತ್ತು ೧೯೯ ಬ್ಯಾಂಕುಗಳಲ್ಲಿ ಕೇವಲ ೯ ಬ್ಯಾಂಕುಗಳು ಮಾತ್ರ ಯಾವುದೇ ವಿಧದಲ್ಲಿ ಸದಸ್ಯತ್ವವನ್ನು ಪಡೆಯಲು ಅವಕಾಶ ಕಲ್ಪಿಸಿಕೊಟ್ಟಿದೆ.[೬೦]

ಪ್ರೆಡ್ರಿಕ್ (೨೦೦೫) ಅವರು ಎಸ್.ಹೆಚ್.ಜಿಸ್ ಗೇಟ್‌ವೆ ಟು ಸಕ್ಸೆಸ್ ಫಾರ್ ರೂರಲ್ ಎಂಟ್ರಪ್ರಿನ್ಯೂರ್ಸ್ ಎಂಬ ಲೇಖನದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಉತ್ತಮ ಶಿಕ್ಷಣ ಮತ್ತು ತರಬೇತಿಯನ್ನು ಪಡೆಯುವುದರಿಂದ ಅವರು ಹೆಚ್ಚಿನ ಹಣ ದುಡಿಯುತ್ತಾರೆ ಮತ್ತು ಮಹಿಳೆಯರ ಆರ್ಥಿಕ ಸ್ಥಾನಮಾನವನ್ನು ಸುಧಾರಿಸುವುದು ಹಾಗೂ ಸಮಾಜದಲ್ಲಿ ಒಂದು ಸ್ಥಾನವನ್ನು ಪಡೆಯುತ್ತಾರೆ. ಮಹಿಳೆಯರ ಆರ್ಥಿಕ ಶಕ್ತಿ ಬೆಳೆದಂತೆ ಮಗನ ಅಧೀನದಲ್ಲಿರುವ ಸಂಪ್ರದಾಯದಿಂದ ಹೊರಬರಲು ಸಾಧ್ಯವಾಗುವುದು ಮತ್ತು ವರದಕ್ಷಿಣೆಯಂತಹ ಅನಿಷ್ಟ ಪದ್ಧತಿಗೆ ಮುಕ್ತಿ ಹೇಳಬಹುದಾಗಿದೆ. ಗ್ರಾಮೀಣಾಭಿವೃದ್ಧಿ ಸಚಿವಾಲಯ (Ministry of Rural development) ವರದಿ ಪ್ರಕಾರ ಭಾರತದಲ್ಲಿ ೧೧.೪೫ಲಕ್ಷ ಸ್ವ–ಸಹಾಯ ಗುಂಪುಗಳನ್ನು ರಚನೆಮಾಡಲಾಗಿದೆ ಮತ್ತು ತಮಿಳುನಾಡುನಲ್ಲಿ ೧.೧೮.೪೧೩ರಷ್ಟು ಸ್ವ–ಸಹಾಯ ಗುಂಪುಗಳಿದ್ದು ಈ ಗುಂಪುಗಳಲ್ಲಿ ೨೩.೨೬೯.೭೩ರಷ್ಟು ಸದಸ್ಯರು ಇದ್ದಾರೆ ಎಂದು ಹೇಳಿದ್ದಾರೆ.

ವಸಂತ ಕನ್ನವಿರನ್ (೨೦೦೫) ಅವರು ಮಾರ್ಕೆಟಿಂಗ್ ಸೆಲ್ಫ್-ಹೆಲ್ಫ್, ಮ್ಯಾನೇಜಿಂಗ್ ಪಾವರ್ಟಿ ಎಂಬ ಲೇಖನದಲ್ಲಿ ಸೂಕ್ಷ್ಮ ಹಣಕಾಸಿನಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗಿದೆ ಮತ್ತು ಸ್ವ-ಸಹಾಯ ಗುಂಪುಗಳನ್ನು ರಚಿಸಿರುವುದರಿಂದ ಅಲ್ಪಾವಧಿಯಲ್ಲಿ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬಹುದು. ದೀರ್ಘಾವಧಿಯ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ದೃಷ್ಟಿಯಲ್ಲಿ ಮಹಿಳೆಯರ ಅಧೀನತೆಯು ಮುಕ್ತಾಯವಾಗುತ್ತದೆ. ಸ್ವ-ಸಹಾಯ ಗುಂಪುಗಳಿಂದ ಮಹಿಳೆಯರ ಸಬಲೀಕರಣ ಮತ್ತು ಬಡತನವನ್ನು ನಿರ್ಮೂಲನೆ ಮಾಡಬಹುದು ಹಾಗೂ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಮೇಲೆ ಜವಾಬ್ದಾರಿ ಹೆಚ್ಚುತ್ತದೆ. ಆದರೆ ಸಂಘಗಳು ಅಭಿವೃದ್ಧಿಯತ್ತ ಸಾಗುತ್ತಿಲ್ಲ ಎಂದು ವಿಶ್ಲೇಷಿಸಿದ್ದಾರೆ.[೬೧]

ಅಶೋಕನ್ ಮತ್ತು ಸುಧಾ (೨೦೦೫) ಅವರು Economic status of rural women SHGs in Nagapattinam District with a special referance to Elumagalur village ಎಂಬ ಲೇಖನದಲ್ಲಿ ತಮಿಳುನಾಡಿನ ನಾಗಪಟ್ಟಿನಮ್ ಜಿಲ್ಲೆಯಲ್ಲಿ ಗ್ರಾಮೀಣ ಮಹಿಳಾ ಸ್ವ-ಸಹಾಯ ಗುಂಪುಗಳ ಆರ್ಥಿಕ ಸ್ಥಿತಿಯನ್ನು ಪ್ರಾಯೋಗಿಕವಾಗಿ ವಿಶ್ಲೇಷಿಸಿದ್ದಾರೆ. ಸ್ವ-ಸಹಾಯ ಗುಂಪುಗಳಿಗೆ ಸೇರಿದ ನಂತರ ನಮೂನೆಯ ಮಹಿಳಾ ಪ್ರತಿವಾದಿಗಳ ಆಸ್ತಿ ರಚನೆ ಹೆಚ್ಚಾಗಿರುವುದು ಕಂಡುಬಂದಿದೆ. ನಿರ್ದಿಷ್ಟವಾಗಿ ಹಣಕಾಸಿನ ಆಸ್ತಿ ಗಣನೀಯವಾಗಿ ಶೇ.೬.೬ರಿಂದ ೧೫.೫ರಷ್ಟು ಹೆಚ್ಚಾಗಿದೆ. ಗುಂಪುಗಳ ಮೂಲಕ ಶೇ.೪೦ರಷ್ಟು ಆದಾಯ ಅಧಿಕವಾಗಿದೆ ಮತ್ತು ಶೇ.೪೨ರಷ್ಟು ಮಹಿಳೆಯರು ನಿರ್ಣಯ ಕೈಗೊಳ್ಳುವಿಕೆಯಲ್ಲಿ ಶಕ್ತಿಯುತರಾಗಿದ್ದಾರೆ. ಈ ಅಧ್ಯಯನದ ಪ್ರದೇಶದಲ್ಲಿ ಸ್ವ-ಸಹಾಯ ಗುಂಪುಗಳು ಆರ್ಥಿಕ ಪ್ರಕ್ರಿಯೆ ಮತ್ತು ಸಾಮಾಜಿಕ ಅಭಿವೃದ್ಧಿ ಸಾಧಿಸಲು ಯಶಸ್ವಿಯಾಗಿವೆ ಎಂದು ಗುರುತಿಸಿದ್ದಾರೆ.[೬೨]

ಚಿತ್ತರಂಜನ್‌ಮಿಶ್ರಾ (೨೦೦೫) ಅವರು SHGs in the unorganised garment sector : A case study of Madurai ಎಂಬ ಲೇಖನದಲ್ಲಿ ಗಾರ್ಮೆಂಟ್ ವಲಯದಲ್ಲಿ ಸ್ವ-ಸಹಾಯ ಉತ್ತೇಜನ ಸಂಸ್ಥೆಗಳಲ್ಲಿ ಎರಡು ವಿಧ, ಒಂದು ಸರ್ಕಾರ ಉತ್ತೇಜಿತ ಸಂಘಗಳು ಎರಡು, ಸರ್ಕಾರೇತರ ಉತ್ತೇಜಿತ ಸಂಘಗಳು District Rural development Agency (DRDA)ಯು ಹೆಚ್ಚು ಸ್ವ-ಸಹಾಯ ಗುಂಪುಗಳನ್ನು ಆಯೋಜಿಸಲಾಗಿದೆ ಮತ್ತು ಗಾರ್ಮೆಂಟ್ ವಲಯದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಉತ್ತಮ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತಿದೆ. ಸ್ವ-ಸಹಾಯ ಗುಂಪುಗಳನ್ನು ಸರ್ಕಾರೇತರ ಸಂಸ್ಥೆಗಳು ಪ್ರಾಯೋಜಿಸಲಾಗಿದೆ. ಮತ್ತೊಂದೆಡೆ ಡಿ.ಆರ್.ಡಿ.ಎ.ಯು ಆಯೋಜಿಸುವುದರಿಂದ ಗ್ರಾಮೀಣ ಮಟ್ಟದಲ್ಲಿ ಒಂದು ದೊಡ್ಡ ರೀತಿಯಲ್ಲಿ ಅಭಿವೃದ್ಧಿ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ. ಗಾರ್ಮೆಂಟ್ ವಲಯದ ಆಧಾರಿತ ಸ್ವ-ಸಹಾಯ ಗುಂಪಿನ ಅಭಿವೃದ್ಧಿಗೆ ಸಾಲದ ಲಭ್ಯತೆಯ ಪೂರಕವಾಗಿ ಮತ್ತು ಸಾಮರ್ಥ್ಯ ಹೆಚ್ಚಿಸಿಕೊಳ್ಳುವಲ್ಲಿ ಸಹಕಾರಿಯಾಗಿದೆ ಎಂದು ಗುರುತಿಸಿದ್ದಾರೆ.[೬೩]

ಕಾಮರಾಜು (೨೦೦೫) ಅವರು self help groups : Emerging rural enterprises ಎಂಬ ಲೇಖನದಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಸ್ವ-ಸಹಾಯ ಗುಂಪುಗಳು ಮೇಕೆ, ಎಮ್ಮೆಗಳನ್ನು ಖರೀದಿಸುವ ಮತ್ತು ವೈಯಕ್ತಿಕ ಶೀಘ್ರ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಲವನ್ನು ಬಳಸಿಕೊಂಡಿದ್ದಾರೆ. ಕೆಲವೊಂದು ಸ್ವ-ಸಹಾಯ ಗುಂಪುಗಳು ಬಾಡಿಗೆ ಆಧಾರದ ಮೇಲೆ ಕೃಷಿ ಉದ್ದೇಶಕ್ಕಾಗಿ ಪವರ್ ಟಿಲ್ಲರ್‌ಗಳನ್ನು ಖರೀದಿಸಿದ್ದಾರೆ. ಪವರ್ ಟಿಲ್ಲರ್‌ಗಳಲ್ಲಿ ಹೂಡಿಕೆ ಮಾಡಿರುವುದರಿಂದ ಅವರ ವೈಯಕ್ತಿಕ ಮತ್ತು ಸಾಮೂಹಿಕ ಆದಾಯ ಹೆಚ್ಚಾಗಿದೆ. ಕೃಷಿಗಾಗಿ ಪವರ್ ಟಿಲ್ಲರ್‌ಗಳನ್ನು ಬಾಡಿಗೆ ತೆಗೆದುಕೊಳ್ಳುವುದು ಸ್ವ-ಸಹಾಯ ಗುಂಪುಗಳ ಒಂದು ಮಹತ್ವವಾದ ಉದ್ಯಮಶೀಲ ಚಟುವಚಟಿಕೆಯಾಗಿದೆ. ಸ್ವ-ಸಹಾಯ ಗುಂಪುಗಳು ರಾಜಕೀಯೇತರ ಮತ್ತು ವಿವಾದರಹಿತ ಕಾರ್ಯಗಳನ್ನು ಮಾಡಬೇಕು. ರಾಜಕೀಯ ಮತ್ತು ಧಾರ್ಮಿಕ ಮಧ್ಯಸ್ತಿಕೆ ಮಾರ್ಗವನ್ನು ಆರೋಗ್ಯಕರಕ ಬೆಳವಣಿಗೆಗಾಗಿ ಅನುಸರಿಸಬೇಕು. ಸ್ವ-ಸಹಾಯ ಗುಂಪು ಲಾಭಗಳ ಛಾಪು ಪಡೆಯುತ್ತಿದೆ. ಇದಕ್ಕೆ ಕಾರಣ ಬಡಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಹಲವಾರು ಮಹತ್ವದ ಪ್ರಭಾವಗಳು ಬೀರುತ್ತಿವೆ ಎಂದು ಅವರು ವ್ಯಕ್ತಪಡಿಸಿದ್ದಾರೆ.[೬೪]

ಫರ್ಜಾನೆಹ್ ಶೇಖ್ ಖಾಟಿ ಬಿ ಮತ್ತು ಎಂ. ಇಂದಿರಾ (೨೦೧೧), ಅವರು ಸ್ವ-ಸಹಾಯ ಗುಂಪುಗಳ ಮೂಲಕ ಮಹಿಳಾ ಸಬಲೀಕರಣ ಮತ್ತು ಪರಿಸರ ನಿರ್ವಹಣೆ : ಕರ್ನಾಟಕ ರಾಜ್ಯದಲ್ಲಿ ಎನ್‌ಜಿಓಗಳ ಅನುಭವ ಎಂಬ ಲೇಖನದಲ್ಲಿ ಹಲವಾರು ಜಲಾನಯನ ಯೋಜನೆಗಳು ಅಧ್ಯಯಗಳ ಅಧ್ಯಯನವು ಅಸ್ತಿತ್ವದಲ್ಲಿರುವ ಸರಕಾರ ವಿತರಣೆ ಕಾರ್ಯವಿಧಾನವು ಕೇವಲ ಅಸಮರ್ಪಕವಲ್ಲ ಎಂದು ಸೂಚಿಸುತ್ತದೆ. ಏಕೆಂದರೆ ಜನರನ್ನು ಪರಿಣಾಮಕಾರಿಯಾಗಿ ಭಾಗವಹಿಸುವಿಕೆಯನ್ನು ಸಾಧಿಸಲು ಮತ್ತು ನಿರಂತರ ಅಭಿವೃದ್ಧಿ ಹಾಗೂ ಸಮತೋಲನವನ್ನು ಪ್ರಯೋಜನಗಳ ಹಂಚಿಕೆಗೆ ಅನುವು ಮಾಡಿಕೊಡುವುದು ಅಸಾಧ್ಯವಾಗಿದೆ. ಜನರ ಶಿಕ್ಷಣ ಸಂಸ್ಥೆಗಳ ಜಲಾನಯನ ನಿರ್ವಹಣೆಗೆ ಸಂಬಂಧಿಸಿದ ಹಲವು ಆಡಳಿತ ಮಾರ್ಗದರ್ಶನದ ಪ್ರಭಾವವನ್ನು ವಿಶ್ಲೇಷಿಸಲಾಗಿದೆ. ಜಲಾನಯನ ಯೋಜನೆಗಳಲ್ಲಿ ಎನ್.ಜಿ.ಓಗಳ ಪಾತ್ರವನ್ನು ತೋರಿಸಿಕೊಟ್ಟಿವೆ ಹಾಗೂ ಅನುಭವವನ್ನು ಸಹ ಈ ಸಹಭಾಗಿತ್ವ ಸಂಸ್ಥೆಗಳಿಂದ ಕೌಶಲ್ಯ, ಸ್ವಾಂತಂತ್ರ್ಯ ಮತ್ತು ಸಾಂಸ್ಥಿಕ ಸ್ಥಳವನ್ನು ಹೊಂದಿರುವ ಎನ್.ಜಿ.ಓಗಳಾಗಿವೆ ಎಂದು ತೋರಿಸಿವೆ. ಆದುದರಿಂದ ಅವರು ಜಲಾನಯನ ಯೋಜನೆಗಳಲ್ಲಿ ಪ್ರಾರಂಭದಿಂದ ತೊಡಗಿಸಿಕೊಳ್ಳಬೇಕು. ಇತ್ತೀಚಿನ ದಿನಗಳಲ್ಲಿ ಎನ್.ಜಿ.ಓಗಳು ಸ್ವಸಹಾಯ ಗುಂಪುಗಳನ್ನು ಜಲಾನಯನ ನಿರ್ವಹಣೆಯಲ್ಲಿ ತೊಡಗುವಂತೆ ಪ್ರೇರೇಪಣೆ ಮಾಡುತ್ತದೆ. ಸ್ವ-ಸಹಾಯ ಗುಂಪುಗಳು ಇದು ಕೇವಲ ಸಬಲೀಕರಣದಲ್ಲಿ ಮಹತ್ವದ ಪಾತ್ರವನ್ನು ವಹಿಸಿಕೊಂಡಿಲ್ಲ. ಆದರೆ ಭಾರತ ಸರಕಾರದಿಂದ ಆಯೋಜಿಸಿರುವ ಜಲಾನಯನ ಯೋಜನೆಗಳನ್ನು ಈ ಗುಂಪುಗಳು ಅಂಗೀಕರಿಸಲ್ಪಟ್ಟಿವೆ. ಜಲಾನಯನ ನಿರ್ವಹಣೆಯಲ್ಲಿ ಸ್ವ-ಸಹಯ ಗುಂಪುಗಳ ಪಾತ್ರವನ್ನು ಭಾರತ ಸರಕಾರ ಗುರುತಿಸಿದೆ. ಮತ್ತು ಜಲಾನಯನ ಅಭಿವೃದ್ಧಿಯಲ್ಲಿ

ಮಹಿಳೆಯರು ಪಾಲ್ಗೊಳ್ಳುವಿಕೆಯ ಮೇಲೆ ಗಮನ ಕೇಂದ್ರೀಕರಿಸುವುದು ಇಂದಿನ ಭಾರತದಲ್ಲಿ ಒಂದು ಪ್ರತ್ಯೇಕ ಸಮಸ್ಯೆಯಲ್ಲ ಎಂದು ತಿಳಿಸಿದ್ದಾರೆ.[೬೫]

ಅನುಪಮ್ ಹರ್ಜಾ (೨೦೧೩)ಅವರು ಸುಸ್ಥಿರ ಗ್ರಾಮೀಣ ಅಬಿವೃದ್ಧಿಗೆ ಹೊಸ ಆಯಾಮಗಳಾ ಸೇರಿಸುವಿಕೆ ಎಂಬ ಲೇಖನದಲ್ಲಿ ನಬಾರ್ಡ್ ಮಾರ್ಚ್ ೨೦೧೨ರಂದು ಕಿರುಬಡವಾಳ ವರದಿಯನ್ನು ಬಿಡುಗಡೆ ಮಾಡಿದೆ. ಅದರ ಪ್ರಕಾರ ಭಾರತದಲ್ಲಿ ಒಟ್ಟು ೭೯.೬ ಲಕ್ಷ ಸ್ವ-ಸಹಾಯ ಗುಂಪುಗಳು ಬ್ಯಾಂಕು ಸಂಪರ್ಕ ಹೊಂದಿ ಸಕ್ರೀಯವಾಗಿ ಕಾರ್ಯನಿರ್ವಹಿಸುತ್ತಿವೆ. ಈ ದೇಶದಲ್ಲಿ ಸುಮಾರು ೯.೭ ಕೋಟಿ ಜನರು ಸ್ವ-ಸಹಾಯ ಸಂಘಗಳಲ್ಲಿ ತೊಡಗಿರುವುದನ್ನು ಖಚಿತಪಡಿಸಿಕೊಂಡಿದೆ. ಇದರ ಜೊತೆಗೆ ಬ್ಯಾಂಕ್‌ಗಳಲ್ಲಿ ಒಟ್ಟು ೬.೫೫ ಕೋಟಿಗಳಷ್ಟು ಉಳಿತಾಯವನ್ನು ಮಾಡಿವೆ ಎಂದು ವರದಿಮಾಡಿದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಭಾರತದಲ್ಲಿ ಶೇ.೯೦ರಷ್ಟು ಮಹಿಳೆಯರು ಸ್ವ-ಸಹಾಯ ಗುಂಪುಗಳಲ್ಲಿ ಸದಸ್ಯತ್ವವನ್ನು ಪಡೆದಿದ್ದಾರೆ ಎಂದು ಹೇಳಿದ್ದಾರೆ.[೬೬]

ಅರ್ಚನಾ ಕುಮಾರಿ (೨೦೧೩) ಅವರು ಪರಿಪೂರ್ಣ ಸಬಲೀಕರಣ ಎಂಬ ಲೇಖನದಲ್ಲಿ ಸ್ವ-ಸಹಾಯ ಗುಂಪುಗಳು ಮಹಿಳೆಯರಿಗೆ ಒಂದು ಸಮುದಾಯಯುತ ವೇದಿಕೆಯನ್ನು ಸೃಷ್ಟಿಸಿವೆ. ಇದರಿಂದ ಮಹಿಳೆಯರು ಹಳ್ಳಿಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ, ಸ್ಥಳೀಯ ಚುನಾವಣೆ, ಸಾಮಾಜಿಕವಾಗಿ ಪ್ರಬಲರಾಗಿ ತಮ್ಮ ಧ್ವನಿಯನ್ನು ಎತ್ತಬಹುದು. ಉದಾಹರಣೆಗೆ ವರದಕ್ಷಿಣೆಯ ಪದ್ದತಿಯ ವಿರುದ್ಧ ಕುಡಿತದ ವಿರೋಧ ಮತ್ತು ನೀರಿನ ಕೊರತೆ ಹೀಗೆ ಅನೇಕ ಸಮಸ್ಯಗಳನ್ನುದ್ದೇಶಿಸಿ ಜನತೆಯನ್ನು ಎಚ್ಚರಿಸುವ ಧೈರ್ಯ ಈ ಸ್ವ-ಸಹಾಯ ಗುಂಪುಗಳಿಂದ ಸಿಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೬೭]

ಸುಶಾಂತ ಕುಮಾರ್ ಕಶ್ಯಪ್ (೨೦೧೩) ಅವರು ಅಸ್ಸಾಂನಲ್ಲಿ ಬ್ಯಾಂಕ್-ಸ್ವ-ಸಹಾಯ ಗುಂಪಿನ ಜಂಟಿ ಕಾರ್ಯಕ್ರಮ-ಒಂದು ವಿಶ್ಲೇಷಣೆ ಎಂಬ ಲೇಖನದಲ್ಲಿ ಅಸ್ಸಾಂ ಹಾಗೂ ಈಶಾನ್ಯ ಪ್ರದೇಶದಲ್ಲಿ ಬ್ಯಾಕ್‌ಗಳು ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪನೆಮಾಡುವುದು ಅವಶ್ಯಕವಾಗಿದೆ. ಇದರಿಂದ ಸ್ವ-ಸಹಾಯ ಗುಂಪುಗಳು ಬ್ಯಾಂಕಿನೊಂದಿಗೆ ನೇರವಾದ ಸಂಪರ್ಕ ಹೊಂದಬಹುದು. ಸ್ವ-ಸಹಾಯ ಗುಂಪುಗಳ ಕಾರ್ಯವನ್ನು ಹಾಗೂ ಚಟುವಟಿಕೆಗಳನ್ನು ಸತತವಾಗಿ ಗಮನಿಸಿ ಪರಿಶೀಲಿಸಬೇಕು. ಗುಂಪುಗಳ ಪ್ರಗತಿಪರ ಚಟುವಟಿಕೆಗಳನ್ನಾಧರಿಸಿ ಸಹಾಯಧನವನ್ನು ಸಾಲಗಳ ಮುಖಾಂತರ ನೀಡಬೇಕು. ಇದರಿಂದ ಪ್ರಾಮಾಣಿಕವಾಗಿ ಕಾರ್ಯ ಮಾಡುವ ಗುಂಪುಗಳನ್ನು ಪ್ರೋತ್ಸಾಹಿಸಿದಂತಾಗುತ್ತದೆ.[೬೮]

ಕಾರ್ತಿಕ್ ದಾಸ್ (೨೦೧೩) ಅವರು ಸೂಕ್ಷ್ಮ ಹಣಕಾಸು-ಒಳಗೊಳ್ಳುವ ಅಭಿವೃದ್ಧಿಯ ಯಂತ್ರ ಎಂಬ ಲೇಖನದಲ್ಲಿ ಸೂಕ್ಷ್ಮಸಾಲದ ವ್ಯವಸ್ಥೆಯು ಇನ್ನೂ ಭಾರತೀಯ ಹಣಕಾಸಿನ ಕ್ಷೇತ್ರದಲ್ಲಿ ಸರಿಯಾದ ಬೆಳವಣಿಗೆಯನ್ನು ಕಂಡಿಲ್ಲ. ಇದರ ಬಗ್ಗೆ ಇರುವ ಜ್ಞಾನ. ಬಂಡವಾಳ ಮತ್ತು ತಾಂತ್ರಿಕತೆ ಬೆಳವಣಿಗೆ

ಹಾಗೂ ಬರುವ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸುವುದನ್ನು ಭಾರತದಲ್ಲಿ ಕಾಣುತ್ತೇವೆ. ಆದರೂ ಇನ್ನೂ ಬೆಳವಣಿಗೆಯಾಗಬೇಕಿದೆ. ಇದಕ್ಕೆ ಪೂರಕವಾದಂತೆ ವಾತಾವರಣ ಹಾಗೂ ಆರ್ಥಿಕ ಪ್ರಗತಿಯ ಸಾಧನೆಯಾದರೆ ಈ ಹಣಕಾಸಿನ ಸೇವೆಯೂ ಭಾರತದ ಪ್ರತಿ ಬಡಜನರನ್ನು ತಲುಪಲು ಸಾಧ್ಯ. ಕಿರುಸಾಲದ ವ್ಯವಸ್ಥೆಯು ಒಂದು ಪ್ರಮುಖವಾದ ಸಾಲವನ್ನು ತಲುಪಿಸುವ ಸಾಧನವಾಗಿ ಬಡಜನತೆಯ ಬೇಡಿಕೆಯನ್ನು ಪೂರೈಸಿ ಮತ್ತು ಮಹಿಳಾ ಸಬಲೀಕರಣವನ್ನು ಸಾಧಿಸಲು ಸಾಹಕಾರಿಯಾಗಿದೆ. ವ್ಯಕ್ತಿಯ ಹಣಕಾಸಿನ ಬಂಡವಾಳವನ್ನು ಹೆಚ್ಚುಸುವಲ್ಲಿ ಇದರ ಪಾತ್ರ ಅಂತ್ಯಂತ ಪ್ರಮುಖವಾಗಿದೆ. ಈ ಕಿರು ವ್ಯವಸ್ಥೆಯ ಪ್ರಥಮ ಉದ್ದೇಶ ಅವಶ್ಯವಿರುವವರಿಗೆ ಸಾಲವನ್ನು ಒದಗಿಸಿ ಅವರ ಬಡತನವನ್ನು ನೀಗಿಸುವುದಾಗಿದೆ ಎಂದು ತಿಳಿಸಿದ್ದಾರೆ.[೧೯]

ಭವ್ಯ ಹೆಚ್. ಪಿ ಮತ್ತು ಜಿ. ಹೆಚ್. ನಾಗರಾಜ (೨೦೧೪)ಅವರು ಪಂಚಾಯತ ರಾಜ್ ಸಂಸ್ಥೆಗಳಲ್ಲಿ ಮಹಿಳಾ ಭಾಗವಹಿಸುವಿಕೆಯ ಮೇಲೆ ಸ್ತ್ರೀಶಕ್ತಿ ಸಂಘಗಳ ಪಾತ್ರ ಎಂಬ ಲೇಖನದಲ್ಲಿ ಸ್ತ್ರೀಶಕ್ತಿ ಸಂಘಗಳಲ್ಲಿ ಸೇರಿದ ನಂತರ ಗ್ರಾಮ ಸಭೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಸುಧಾರಿಸಿದೆ. ಶೇ.೭೮ರಷ್ಟು ಮಹಿಳೆಯರು ಗ್ರಾಮ ಸಭೆಗೆ ನಿಯಮಿತವಾಗಿ ಹಾಜರಾಗುತ್ತಿದ್ದಾರೆ. ಶೇ.೧೧.೩ರಷ್ಟು ಸದಸ್ಯರು ಸಾಂದರ್ಭಿಕವಾಗಿ ಹಾಜರಾಗುತ್ತಿದ್ದಾರೆ. ಸಂಘಗಳಲ್ಲಿ ಮಹಿಳೆಯರು ಸದಸ್ಯರಾಗಿ ಗುರಿತಿಸಿಕೊಳ್ಳುತ್ತಾ ಹಣಕಾಸಿನ ಬೇಂಬಲಕ್ಕಾಗಿ ಗ್ರಾಮೀಣ ನೈರ್ಮಲ್ಯ, ಎಸ್.ಜಿ.ಎಸ್.ವೈ ಯೋಜನೆಗಳಯಲ್ಲಿ ಫಲಾನ್ನುಭವಿಗಳಾಗಿರುತ್ತಾರೆ. ಮಹಿಳೆಯರಿಗೆ ಅರಿವು ಮತ್ತು ಸಂವಹನ ಸಾಮರ್ಥ್ಯ ಸುಧಾರಿಸಿದೆ. ಅಲ್ಲದೆ ಸಾರ್ವಜನಿಕ ದೀಪಗಳ ಸಮಸ್ಯೆ, ನೈರ್ಮಲ್ಯ ಧೂಮಪಾನ ಅಂಗಡಿಗಳ ವಿರುದ್ಧ ಮತ್ತು ಕುಡಿಯುವ ನೀರಿನ ಸಮಸ್ಯೆಯ ಕುರಿತು ಗ್ರಾಮ ಸಭೆಯಲ್ಲಿ ಧ್ವನಿ ಎತ್ತುವುದು ಕಂಡುಬಂದಿದೆ ಎಂದು ತಿಳಿಸಿದ್ದಾರೆ.[೨೦]

ಕೊಂಡಲ ರಾವ್ ದೇವರಪಲ್ಲಿ ಮತ್ತು ಜ್ಯೋತಿ ಗುಂಟುಕ(೨೦೧೪) ಅವರು ಭಾರತದಲ್ಲಿ ಸ್ವ-ಸಹಾಯ ಗುಂಪುಗಳು-ಬ್ಯಾಂಕ್ ಸಂಪರ್ಕ ಕಾರ್ಯಕ್ರಮ ಒಂದು ಅಧ್ಯಯನ ಎಂಬ ಲೇಖನದಲ್ಲಿ ೨೦೧೧ರ ಮಾರ್ಚ್ ಅಂತ್ಯದ ವೇಳೆಗೆ ಬ್ಯಾಂಕಿಂಗ್ ವ್ಯವಸ್ಥೆಗಳಿಂದ ಹಣಕಾಸಿನ ಸಹಾಯ ಪಡೆಯಲು ೯೭ ಮಿಲಿಯನ್ ಬಡ ಮಹಿಳೆಯರು ಎಸ್.ಎಚ್.ಜಿ ಮೂಲಕ ಬ್ಯಾಂಕಿನ ಸಂಪರ್ಕ ಪಡೆದಿದ್ದಾರೆ. ನಬಾರ್ಡ್ ತೆಗೆದುಕೊಂಡ ಕ್ರಮಗಳಿಂದ ದೇಶದಲ್ಲಿ ಸ್ವ-ಸಹಾಯ ಗುಂಪುಗಳು ಭಾರಿ ಬೆಳವಣಿಗೆಗೆ ಕಾರಣವಾಗಿದೆ. ಆದರೂ ಸಹ ಸ್ವಲ್ಪ ಮಟ್ಟಗೆ ಬ್ಯಾಂಕ್ ಸಾಲಗಳಲ್ಲಿ ಕಾರ್ಯನಿವಹಿಸದ ಸ್ವತ್ತುಗಳು ಇವೆ. ತಮ್ಮ ಸಾಲವನ್ನು ಸಮಯಕ್ಕೆ ಸರಿಯಾಗಿ ಮರುಪಾವತಿಸಲು ಸ್ವ-ಸಹಾಯ ಗುಂಪುಗಳ ಸದಸ್ಯರಿಗೆ ವಿಶೇಷ ಪ್ರೋತ್ಸಾಹ ನೀಡಲಾಗುತ್ತಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೨೧]

ಪಿ. ಮನಿವೇಲ್ (೨೦೧೪) ಅವರು ಮಹಿಳಾ ಉದ್ಯಮಶೀಲರು ಉದ್ಯಮಗಳು ಪ್ರಭಾವ ಬೀರುವ ಸಮಸ್ಯೆಗಳು ಮತ್ತು ಅಂಶಗಳು ಎಂಬ ಲೇಖನದಲ್ಲಿ ಭಾರತದಲ್ಲಿ ಮಹಿಳೆಯರ ಉದ್ಯಮಶೀಲತೆ ಇನ್ನೂ

ಬಾಲ್ಯವ್ಯವಸ್ಥೆಯಲ್ಲಿದ್ದು, ಇದು ದಿನದಿಂದ ದಿನಕ್ಕೆ ದುಸ್ಥಿತಿ ಪಡೆಯುತ್ತಿದೆ. ಇದನ್ನು ಎತ್ತಿ ತೋರಿಸುತ್ತಾ ಅವರು ಹೆಚ್ಚಾಗಿ ಬಳಲುತ್ತಿದ್ದಾರೆ. ಅವಳ ಒಳಗೊಳ್ಳುವಿಕೆ, ಕಡಿಮೆ ಕೆಲಸದ ಭಾಗವಹಿಸುವಿಕೆ ಪ್ರಮಾಣದಲ್ಲಿ ಗುರುತಿಸಲ್ಪಟ್ಟಿದ್ದು, ತುಂಬಾ ಕಡಿಮೆ ಕೌಶಲ್ಯ ಉದ್ಯೋಗಗಳು ಮತ್ತು ಬಹುತೇಕವಾಗಿ ಆರ್ಥಿಕ ವಲಯದಲ್ಲಿ ಗುರುತಿಸಲಾಗದ ಸ್ಥಿತಿಯಲ್ಲಿದ್ದಾರೆ. ಇಂದು ಮಹಿಳೆಯರು ಶಿಕ್ಷಣದಲ್ಲಿ ಮತ್ತು ವೃತ್ತಿಪರ ಅಧ್ಯಯನಗಳಲ್ಲಿ ಪುರುಷರಿಗಿಂತ ಹೆಚ್ಚಿನ ಅವಕಾಶಗಳನ್ನು ಪಡೆಯುತ್ತಿರುವುದನ್ನು ಕಾಣಬಹುದು.[೨೨]

ಟಿ.ರಮೇಶ್ (೨೦೧೪) ಅವರು ಸ್ಥಳೀಯ ಸ್ವಯಂ ಸರಕಾರ ಮತ್ತು ಮಹಿಳಾ ಸಬಲೀಕರಣದಲ್ಲಿ ಅದರ ಪಾತ್ರ : ಒಂದು ಮೌಲ್ಯಮಾಪನ ಎಂಬ ಲೇಖನದಲ್ಲಿ ೭೩ನೇ ತಿದ್ದುಪಡಿ ಕಾರಣದಿಂದಾಗಿ ಪಂಚಾಯತ್ ಆಡಳಿತದಲ್ಲಿ ಸುಧಾರಣೆ ಕಂಡುಬಂದಿದೆ ಎಂದು ಬಹುತೇಕ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ಮಹಿಳೆಯ ಸ್ಥಾನಮಾನದಲ್ಲಿ ಸುಧಾರಣೆಯಾಗಿದೆ ಎಂದು ತಿಳಿಸಿದ್ದಾರೆ. ಪುರುಷ ಪ್ರಾಬಲ್ಯದ ಸಮಾಜದಿಂದ ಯಾವುದೇ ತೊಂದರೆಗಳಿಲ್ಲ ಎಂದು ಮಹಿಳಾ ಸದಸ್ಯರು ಹೇಳಿದ್ದಾರೆ. ಪರಿಸ್ಥಿತಿ ತುಂಬಾ ವೇಗವಾಗಿ ಬದಲಾಗುತ್ತಿದೆ. ಕೆಲವು ಮಹಿಳಾ ಚೇರ್ಮನ್‌ಗಳು ಶ್ಲಾಘನೀಯ ಕೆಲಸ ಮಾಡಿದ್ದಾರೆ. ಅವರು ಸಬಲೀಕರಣದ ಕಡೆಗೆ ಸವಾಲಿನ ರಸ್ತೆಯ ಮೇಲೆ ನಡೆಯುತ್ತಿದ್ದಾರೆ ಎಂದು ತಿಳಿಸಿದ್ದಾರೆ.[೨೩]

ರವಿ ಪ್ಥಿ. ಮತ್ತು ಎಸ್. ರಮೇಶ್ (೨೦೧೪) ಅವರು ಕರ್ನಾಟಕದಲ್ಲಿ ಸ್ವ-ಸಹಾಯ ಗುಂಪುಗಳಿಗೆ ಸೇರಿದ ಸಾಮಾಜೋ-ಆರ್ಥಿಕ ಸ್ಥಿತಿಯ ಮೇಲೆ ಸೂಕ್ಷ್ಮ ಹಣಕಾಸಿನ ಪರಿಣಾಮ ಎಂಬ ಲೇಖನದಲ್ಲಿ ಸೂಕ್ಷ್ಮ ಹಣಕಾಸು ಮಹಿಳೆಯರ ಸಾಮಾಜೋ-ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮವನ್ನು ಬೀರಿದೆ. ಆ ಮೂಲಗಳೆಂದರೆ ಆರೋಗ್ಯ ಸೇವೆಗಳು, ಪ್ರತಿರಕ್ಷಣೆ ಮತ್ತು ನೈರ್ಮಲ್ಯ ಸೌಲಭ್ಯ ಮುಂತಾದವುಗಳು. ಈ ಪ್ರಭಾವ ಹೆಚ್ಚಿನ ಮಟ್ಟದಲ್ಲಿ ಆಗಿಲ್ಲ. ಆದರೆ ಸ್ವಲ್ಪ ಮಟ್ಟಿಗೆ ಆಸ್ತಿ ಕಟ್ಟಡದ ಬಗ್ಗೆ ನಿರ್ಧಾರ, ಮಕ್ಕಳ ಶಿಕ್ಷಣ, ಹಣಕಾಸಿನ ಸಮಸ್ಯೆಗಳು, ಕುಟುಂಬ ನಿಯಂತ್ರಣ ಹೆಣ್ಣು ಮಕ್ಕಳ ಅಭಿವೃದ್ಧಿಯ ಜಾಗೃತಿಯಲ್ಲಿ ಸುಧಾರಣೆ ಕಂಡಿದೆ.[೨೪]

ಶ್ರೀನಿವಾಸ ಎಚ್ ಕೊಪ್ಪಳ (೨೦೧೫) ಅವರು ಮಹಿಳಾ ಸಬಲೀಕಾರಣ, ಆರ್ಥಿಕ ಅಭಿವೃದ್ಧಿ ಮತ್ತು ಸ್ಥಾನಮಾನಗಳು ಎಂಬ ಲೇಖನದಲ್ಲಿ ಮಹಿಳೆಯು ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ, ವೈಜ್ಞಾನಿಕ, ಉದ್ಯೋಗ ಹಾಗೂ ಕೌಟುಂಬಿಕವಾಗಿಯೂ ಮಹಿಳೆಯು ಸಮಾಜದಲ್ಲಿ ಗೌರವವನ್ನು ಪಡೆಯುತ್ತಿರುವುದು ಕಂಡುಬಂದಿದೆ. ಪುರಾತನ ಕಾಲದಿಂದ ಮಧ್ಯಯುಗೀನ ಕಾಲದವರೆಗೂ ಮಹಿಳೆಯರು ಅನೇಕ ಸಂಕೋಲೆಗಳಲ್ಲಿ ಸಿಲುಕಿದ್ದರೂ ಇಂದಿನ ಸಮಾಜದಲ್ಲಿ ತನ್ನದೇ ಆದ ಆರ್ಥಿಕ ಸ್ವಾವಲಂಬನೆಯನ್ನು, ಅಧಿಕಾರವನ್ನು, ಸ್ವಾತಂತ್ರ್ಯತೆಯನ್ನು, ಸ್ಥಾನಮಾನಗಳನ್ನು ವಿವಿಧ ಸಂಘಟನೆಗಳ

ಸದಸ್ಯತ್ವವನ್ನು ಹೊಂದುತ್ತಾ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜಾರಿಗೊಳಿಸುವ ವಿವಿಧ ಯೋಜನೆಗಳ ಉಪಯುಕ್ತತೆಯನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ಲೇಖಕರು ಹೇಳಿದ್ದಾರೆ.[೨೫]

ಕೊನೆ ಟಿಪ್ಪಣಿಗಳು

೧. ಎನ್. ಲಲಿತ ಶಿವಕುಮಾರ್, ಸ್ವ-ಸಹಾಯ ಗುಂಪುಗಳು, ಸಾಮಾಜಿಕ ಕ್ಷೇಮಾಭ್ಯುದಯ, ಜುಲೈ ೧೯೯೫, ವ್ಯಾ-೪೨, ಸಂಖ್ಯೆ-೪, ಪು.ಸಂ ೯

೨. ಕಾರ್ಲ್ ಮೆರಿಲೀ, ವುಮೆನ್ ಅಂಡ್ ಎಂಪವರ್‌ಮೆಂಟ್ ಪಾರ್ಟಿಸಿಪೇಶನ್ ಅಂಡ್ ಡಿಸಿಶನ್‌ಮೇಕಿಂಗ್, ಜೆಡ್ ಬುಕ್ಸ್ ಲಿಮಿಟೆಡ್, ೧೯೯೫, ಲಂಡನ್

೩. ಎಮ್. ಡಿ. ಡೋಕಿ, ಸಸ್‌ಟೈನಿಂಗ್ ರೂರಲ್ ವುಮೆನ್, ಸೋಷಿಯಲ್ ವರ್ಲ್ಡ್, ಮಾರ್ಚು ೧೯೯೯, ವ್ಯಾ-೪೫, ಸಂಖ್ಯೆ-೧೨, ಪು.ಸಂ ೧೯

೪. ಶಿವಸುಬ್ರಮನಿಯನ್ ಎಮ್. ಎನ್. ಕ್ರೆಡಿಟ್-ಬೇಸ್‌ಡ್ ಪಾವರ್ಟಿ ಅಲ್ಲಿವೇಷನ್ ಪ್ರೋಗ್ರಾಂ ಇನ್‌ನೋವೇಟಿವ್ ಅಪ್ರೋಚ್, ಕುರುಕ್ಷೇತ್ರ, ನವಂಬರ್ ೧೯೯೯ ವ್ಯಾ-೪೮, ಸಂ-೨, ಪು.ಸಂ. ೩೭

೫. ರಾಜೇಶ್ವರಿ ಎಮ್ ಮತ್ತು ಪಿ.ಸುಮಂಗಳಾ, ವುಮೆನ್, ಎಂಟ್ರಪ್ರಿನ್ಯೂರ್ಸ್-ಎ ಸ್ಕ್ಯಾನ್ ಆನ್ ದೇರ್ ಪ್ರಾಬ್ಲಮ್ಸ್ ಅಂಡ್ ಪ್ರಾಸ್ಪೆಕ್ಟ್ಸ್ ಇನ್ ವುಮೆನ್ ಎಂಟ್ರಪ್ರಿನ್ಯೂರ್‌ಶಿಫ್ ಇಶ್ಯೂಸ್ ಅಂಡ್ ಸ್ಟ್ರಟಜೀಸ್, ಕನಿಷ್ಕ ಪಬ್ಲಿಕೇಷನ್ಸ್, ೧೯೯೯ ನ್ಯೂ ದೆಹಲಿ.

೬. ಗುರುಮೂರ್ತಿ ಟಿ.ಆರ್. ಸೆಲ್ಫ್-ಹೆಲ್ಫ್ ಗ್ರೂಪ್ಸ್ ಎಂಪವರ್ ರೂರಲ್ ವುಮೆನ್, ಕುರುಕ್ಷೇತ್ರ ಫೆಬ್ರವರಿ ೨೦೦೦, ವ್ಯಾ-೪೮, ಸಂ-೫, ಪು.ಸಂ. ೩೬

೭. ಕಾಮತ್ ಆರ್.ಜೆ. ರೂರಲ್ ಡೆವೆಲಪ್‌ಮೆಂಟ್ ಆ್ಯಕ್ಟಿವಿಟೀಸ್, ಸೌರ್ಥನ್ ಎಕಾನಾಮಿಸ್ಟ್, ನವೆಂಬರ್ ೨೦೦೦, ವ್ಯಾ-೩೯, ಸಂ-೧೪, ಪು.ಸಂ. ೧೯

೮. ವಿಜಯಾ ಡಿ ಕುಲಕರ್ಣಿ, 'ಎಂಪವರ್‌ಮೆಂಟ್ ಆಫ್ ವುಮೆನ್ ಥ್ರೂ ಸೆಲ್ಫ್ ಹೆಲ್ಪ್ ಗ್ರೂಪ್ಸ್', ಅಶ್ವತ, ಅಕ್ಟೋಬರ್ ೨೦೦೦, ಜುನ್ ೨೦೦೧, ವ್ಯಾ-೧, ಸಂ-೪, ಪು.ಸಂ ೩೨-೩೬.

೯. ಸುಮನ್ ಕೃಷ್ಣನ್‌ಕಾಂತ್, 'ವುಮೆನ್ಸ್ ಎಂಪವರ್‌ಮೆಂಟ್ ಅಂಡ್ ಮ್ಯೂಚ್ವಲ್ ಕೋ-ಆಪರೇಷನ್ ಇನ್ ದಿ ಫ್ಯಾಮಿಲಿ', ಸೋಷಲ್ ವೆಲ್‌ಫೇರ್, ಏಪ್ರೀಲ್ ೨೦೦೧, ವ್ಯಾ-೪೮, ಸಂ-೧೨, ಪು.ಸಂ. ೩

೧೦. ವೇಲುರಾಜು ಆರ್. ಸೆಲ್ಫ್ ಹೆಲ್ಫ್ ಗ್ರೂಫ್ಸ್ ಆ್ಯನ್ ಆಲ್ಟರ್‌ನೇಟಿವ್ ಅಪ್ರೋಚ್ ಟು ಎಂಪವರ್ ರೂರಲ್ ವುಮೆನ್', ತಮಿಳುನಾಡು ಜರ್ನಲ್ ಆಫ್ ಕೋ-ಆಪರೇಷನ್. ಜೂನ್ ೨೦೦೧, ವ್ಯಾ-೧, ಸಂ-೮, ಪು.ಸಂ ೧೮

೧೧. ಪಟೇಲ್ ಎ.ಆರ್. ರೂರಲ್ ಕ್ರೆಡಿಟ್ ಸಿಸ್ಟಮ್, ಕುರುಕ್ಷೇತ್ರ ಜನವರಿ ೨೦೦೧, ವ್ಯಾ-೪೯. ಸಂ-೩, ಪು. ೧೭

೧೨. ಘೋಷ್ ಡಿ.ಕೆ. ಎನ್‌ಜಿಓ ಇಂಟರ್‌ವೆನ್‌ಷನ್ ಇನ್ ಪಾವರ್ಟಿ ಅಲಿವೇಷನ್, ಕುರುಕ್ಷೇತ್ರ ಮಾರ್ಚು ೨೦೦೧, ವ್ಯಾ-೪೯. ಸಂ. ೬, ಪು. ೨

೧೩. ಜಿನ್ ಅಗರವಾಲ ಭೂಮಿಯ ಹಕ್ಕುಗಳು ಮತ್ತು ಲಿಂಗ ಸಮಾನತೆ. ಯೋಜನೆ ಆಗಸ್ಟ್ ೨೦೦೧. ವ್ಯಾ-೪೫. ಪು. ೩೫

೧೪. ಸುಬ್ರಮನಿಯನ್ ಎಸ್. ರೂರಲ್ ಡೆವೆಲೆಪ್‌ಮೆಂಟ್ ಅಂಡ್ ಆ್ಯಸ್‌ಪೈರೇಷನ್ಸ್ ಇನ್ ತ್ರಿಪುರ, ಕುರುಕ್ಷೇತ್ರ ಜನವರಿ ೨೦೦೧, ವ್ಯಾ-೪೯, ಸಂ-೪, ಪು. ೨೨

೧೫. ಓಜಾ ಆರ್.ಕೆ. ಸೆಲ್ಫ್ ಹೆಲ್ಫ್ ಗ್ರೂಪ್ ಅಂಡ್ ರೂರಲ್ ಎಂಪ್ಲಾಯ್‌ಮೆಂಟ್, ಯೋಜನೆ, ಮೇ ೨೦೦೧, ವ್ಯಾ-೪೫, ಪು. ೨೦

೧೬. ದೀಪೇಂದ್ರ ಬ್ಯಾನರ್ಜಿ. ಮೈಕ್ರೋ-ಫೈನಾನ್‌ಸಿಂಗ್, ಸೌರ್ಥನ್ ಎಕಾನಾಮಿಸ್ಟ್, ಫೆಬ್ರವರಿ ೨೦೦೧, ವ್ಯಾ-೩೯, ಸಂ-೨೦. ಪು. ೧೯

೧೭. ರಿಪೋರ್ಟ್ ಆಫ್ ಡಿಪಾರ್ಟ್‌ಮೆಂಟ್ ಆಫ್ ವುಮೆನ್ ಅಂಡ್ ಚೈಲ್ಡ್ ಡೆವೆಲೆಪ್‌ಮೆಂಟ್, ಮಿನಿಸ್ಟ್ರಿ ಆಫ್ ವುಮೆನ್ ರಿಸೋರ್ಸ್ ಡೆವೆಲಪ್‌ಮೆಂಟ್, ಎಕನಾಮಿಕ್ ಎಂಪವರ್‌ಮೆಂಟ್ ಆಫ್ ವುಮೆನ್. ಯೋಜನೆ, ಆಗಸ್ಟ್ ೨೦೦೧, ವ್ಯಾ-೪೫, ಪು. ೬೯

೧೮. ಬಾರಿಕ್ ಬಿ.ಬಿ. ಪಿ.ಪಿ. ವನ್ನನ್, ಪ್ರೊಮೋಟಿಂಗ್ ಸೆಲ್ಫ್ ಹೆಲ್ಫ್ ಗ್ರೂಪ್ಸ್ ಆ್ಯಸ್ ಸಬ್ ಸಿಸ್ಟಮ್ ಆಫ್ ಕ್ರೆಡಿಟ್ ಕೋ-ಆಪರೇಟಿವ್ಸ್, ದಿ ಕೋ-ಆಪರೇಟರ್, ಜನವರಿ ೨೦೦೧, ವ್ಯಾ-೩೮, ಸಂ-೭, ಪು. ೩೦೫-೩೧೧

೧೯. ಮಣಿಸಿಂಗ್ ಸಿ. ಹೆಚ್. ಸೆಲ್ಫ್ ಹೆಲ್ಫ್ ಗ್ರೂಪ್ಸ್ ಸಮ್ ಆರ್ಗನೈಜೆಷನಲ್ ಆಸ್‌ಪೆಕ್ಟ್ಸ್, ದಿ ಕೋ-ಆಪರೇಟರ್, ಮೇ ೨೦೦೧, ವ್ಯಾ-೩೮, ಸಂ-೧೧, ಪು. ೪೯೭-೪೯೯

೨೦. ಎಸ್.ಎಲ್. ಟಂಡಮ್, ಸೆಲ್ಫ್ ಹೆಲ್ಫ್ ನ್ಯೂ ಮಂತ್ರ ಫಾರ್ ಎಂಪವರ್‌ಮೆಂಟ್. ಸೋಸಿಯಲ್ ವರ್ಲ್ಡ್ ಅಕ್ಟೋಬರ್ ೨೦೦೧, ವ್ಯಾ-೪೮, ಸಂ-೨೩, ಪು. ೩೦

೨೧. ಜೋಷಿ ಎಸ್.ಸಿ. ಮೈಕ್ರೋ-ಕ್ರೆಡಿಟ್ ನಾಟ್ ಚಾರಿಟಿ, ಸೋಸಿಯಲ್ ವೆಲ್‌ಫೇರ್, ಫೆಬ್ರವರಿ ೨೦೦೨, ವ್ಯಾ-೪೮, ಸಂ-೩೨, ಪು. ೧೨

೨೨. ಅರ್ಚನಾ ಸಿನ್ಹಾ, ಟೈಪ್ಸ್ ಆಫ್ ಎಸ್‌ಹೆಚ್‌ಜೀಸ್ ಅಂಡ್ ದೈರ್ ವರ್ಕ್, ಸೋಷಿಯಲ್ ವೆಲ್‌ಫೇರ್, ಫೆಬ್ರವರಿ ೨೦೦೨, ವ್ಯಾ-೪೮, ಸಂ-೧೧, ಪು. ೧೫

೨೩. ಸುಗುಣ ಬಿ. ಸೆಲ್ಫ್-ಹೆಲ್ಫ್ ಗ್ರೂಪ್ಸ್ ವಿಕಾಶಿನಿ, ಅಕ್ಟೋಬರ್ ೨೦೦೨, ವ್ಯಾ-೧೭, ಸಂ-೪, ಪು. ೧೧

೨೪. ಅಲಕನಂದ ಮುಖರ್ಜಿ, ರೂರಲ್ ವುಮೆನ್ ಡ್ರಾ ಶಕ್ತಿ ಫ್ರಮ್ ಸೆಟ್ಟಿಂಗ್ ಆಫ್ ಡೈರಿ ಕೋ-ಆಪರೇಟಿವ್ಸ್, ವಿಕಾಶಿನಿ ಜನವರಿ ೨೦೦೨, ವ್ಯಾ-೧೭, ಸಂ-೧, ಪು.೩೭

೨೫. ಫ್ಲ.ಎಮ್.ರಾವ್, ವುಮೆನ್ ಸೆಲ್ಫ್-ಹೆಲ್ಫ್ ಗ್ರೂಪ್ಸ್ ಪ್ರೊಫೈಲ್ಸ್ ಫ್ರಮ್ ಆಂಧ್ರಪ್ರದೇಶ ಅಂಡ್ ಕರ್ನಾಟಕ. ಕುರುಕ್ಷೇತ್ರ ಏಪ್ರೀಲ್ ೨೦೦೨, ವ್ಯಾ-೫೦, ಸಂ.-೬, ಪು. ೨೬

೨೬. ಪ್ರೀತಿ ಚಂದ್ರಶೇಖರ, ಮಹಲೈರ್ ಥಿಟ್ಟಮ್ ಅಪ್‌ಗ್ರೇಡ್ಸ್ ಸೆಲ್ಸ್-ಹೆಲ್ಫ್ ಗ್ರೂಫ್ಸ್, ಹಿಂದು ಪಬ್ಲಿಕೇಷನ್, ನವೆಂಬರ್ ೨೦೦೨, ವ್ಯಾ-೧೮, ಪು. ೫

೨೭. ಎನ್ ಲಲಿತ ಶಿವಕುಮಾರ, ಸೆಲ್ಫ್-ಹೆಲ್ಫ್ ಗ್ರೂಪ್ಸ್, ಸೊಷಿಯಲ್ ವೆಲ್‌ಫೇರ್, ಜುಲೈ ೨೦೦೨. ವ್ಯಾ-೪೨, ಸಂಖ್ಯೆ-೪. ಪು. ೯

೨೮. ಎನ್ ಲಲಿತ ಮತ್ತು ಜಿ.ಎಸ್.ನಾಗಾರ್ಜುನ, ಸೆಲ್ಫ್-ಹೆಲ್ಫ್ ಗ್ರೂಪ್ ಇನ್ ರೂರಲ್ ಡೆವಲಪ್‌ಮೆಂಟ್ ಎಡಿಷನ್ XII. ೨೦೦೨, ಹಿಮಾಲಯ ಪಬ್ಲಿಕೇಷನ್ಸ್, ನ್ಯೂದೆಹಲಿ, ಪು. ೭೮

೨೯. ಭರತ್ ಡೊಗ್ರ. ವುಮೆನ್ ಸೆಲ್ಫ್-ಹೆಲ್ಫ್ ಗ್ರೂಪ್ಸ್ ಕುರುಕ್ಷೇತ್ರ ಮಾರ್ಚ್ ೨೦೦೨, ವ್ಯಾ-೫೦ ಸಂಖ್ಯೆ-೫. ಪು. ೪೦-೪೨

೩೦. ಪ್ರೇಮ್ ಸಿಂಗ್‌ದಹಿಯ, ಎನ್.ಕೆ.ಪಾಂಡೆ ಮತ್ತು ಅನ್ಸೂಮನ್ ಕರೋಲ್, ಸೋಷಿಯೋ ಎಕಾನಾಮಿಕ್ ಅಪ್‌ಲಿಪ್ಟ್‌ಮೆಂಟ್ ಥ್ರೂ ಸೆಲ್ಫ್-ಹೆಲ್ಫ್ ಗ್ರೂಪ್ಸ್ ಇನ್ ಸೋಲಾನ್ ಡಿಸ್ಟ್ರಿಕ್ಟ್ ಆಫ್ ಹಿಮಾಲಯ ಪ್ರದೇಶ, ಜರ್ನಲ್ ಆಫ್ ಅಗ್ರಿಕಲ್ಚರಲ್ ಡೆವೆಲಪ್‌ಮೆಂಟ್ ಅಂಡ್ ಪಾಲಿಸಿ, ಜನವರಿ ಜೂನ್ ೨೦೦೨, ವ್ಯಾ-೧೪, ಸಂ-೧, ಪು. ೧೦-೧೮

೩೧. ಜಸ್ವಂತ್‌ಸಿಂಗ್ ಬಡ್ಜಟ್ ಸ್ಪೀಚ್ ಆನ್ ಯುನಿಯನ್ ಮಿನಿಸ್ಟರ್ ಆಫ್ ಫೈನಾನ್ಸ್ ಅಂಡ್ ಕಂಪನಿ ಅಫೈರ್ಸ್, ಸೌಥರ್ನ್ ಎಕನಾಮಿಸ್ಟ್, ಮಾರ್ಚು ೨೦೦೩, ವ್ಯಾ-೪೧, ಸಂ-೨೨, ಪು. ೧೬

೩೨. ರಾಜಮೋಹನ್ ಎಸ್. ಆ್ಯಕ್ಟಿವಿಟೀಸ್ ಆಫ್ ಸೆಲ್ಫ್-ಹೆಲ್ಫ್ ಗ್ರೂಪ್ಸ್ ಇನ್ ವಿರುಧುನಗರ ಡಿಸ್ಟ್ರಿಕ್ಟ್ ಎ ಸ್ಟಡಿ, ಜರ್ನಲ್ ಆಫ್ ಕೋ-ಆಪರೇಷನ್, ಏಪ್ರಿಲ್ ೨೦೦೩, ವ್ಯಾ-೩, ಸಂ-೬, ಪು. ೧೫

೩೩. ರಾಜೇಶ್ವರಿ ವ್ಹಿ. ನ್ಯೂ ಜನರೇಷನ್ ಕೋ-ಆಪರೇಟಿವ್ಸ್ ಥ್ರೂ ಸೆಲ್ಫ್-ಹೆಲ್ಫ್ ಗ್ರೂಪ್ಸ್ ಇನ್ ತಮಿಳುನಾಡು. ಜರ್ನಲ್ ಆಫ್ ಕೋ-ಆಪರೇಷನ್ ಆಗಸ್ಟ್ ೨೦೦೩, ವ್ಯಾ-೧೦, ಸಂ-೧೦, ಪು.೧೪

೩೪. ಶಿವರಾಮ ಕೃಷ್ಣನ್ ಕೆ. ಪಾವರ್ಟಿ ಅಲ್ಲಿವೇಷನ್ ಥ್ರೂ ಸೆಲ್ಫ್-ಹೆಲ್ಫ್ ಗ್ರೂಪ್ಸ್ ತಮಿಳುನಾಡು ಜರ್ನಲ್ ಆಫ್ ಕೋ-ಆಪರೇಷನ್ ಮಾರ್ಚು ೨೦೦೩, ವ್ಯಾ-೩, ಸಂ-೫, ಪು. ೯

೩೫. ಓಂರಾಜಸಿಂಗ್ ರೋಲ್ ಆಫ್ ಎನ್‌ಜಿಓ ಇನ್ ಪೋಸ್ಟರಿಂಗ್ ಸೆಲ್ಫ್-ಹೆಲ್ಫ್ ಗ್ರೂಪ್ಸ್, ಕುರುಕ್ಷೇತ್ರ ಫೆಬ್ರವರಿ ೨೦೦೩, ವ್ಯಾ-೫೧, ಸಂ-೪, ಪು. ೩೩-೩೫

೩೬. ಪ್ರಶಾಂತ್ ಸರಂಗಿ ಸೆಲ್ಫ್-ಹೆಲ್ಫ್ ಗ್ರೂಪ್ಸ್ ಕುರುಕ್ಷೇತ್ರ, ಫೆಬ್ರವರಿ ೨೦೦೩, ವ್ಯಾ-೫೧, ಸಂ-೪, ಪು. ೩೦-೩೨

೩೭. ಚಿರಂಜೀವುಲು ಟಿ, ಎಂಪವರಿಂಗ್ ವುಮೆನ್ ಥ್ರೂ ಸೆಲ್ಫ್-ಹೆಲ್ಫ್ ಗ್ರೂಪ್ಸ್, ಕುರುಕ್ಷೇತ್ರ ಫೆಬ್ರವರಿ ೨೦೦೩, ವ್ಯಾ-೫೧, ಸಂ-೫, ಪು. ೧೬-೧೯

೩೮. ರಾಘವೇಂದ್ರ ಕೆ, ಸೆಲ್ಫ್-ಹೆಲ್ಫ್ ಗ್ರೂಪ್ಸ್, ಲಿಂಕೇಜ್ ಬ್ಯಾಂಕಿಂಗ್ ಚಾಲೆಂಜಸ್ ಆಫ್ ಟ್ರೈನಿಂಗ್ ರೂಲ್ ಪ್ಲೇಯಿಡ್ ಬೈ ನ್ಯಾಷನಲ್ ಸೆಂಟರ್, ಲ್ಯಾಂಡ್ ಬ್ಯಾಂಕ್ ಜರ್ನಲ್ ಮಾರ್ಚು ೨೦೦೩, ವ್ಯಾ-೪೧, ಸಂ-೪, ಪು. ೭೧-೭೬

೩೯. ಸಿ.ಪಿಳ್ಳಿ, "ಸ್ವ-ಸಹಾಯ ಗುಂಪುಗಳು-ಸೂಕ್ಷ್ಮ ಉದ್ಯಮಶೀಲತೆ (ಕೆಲವು ಸಮಸ್ಯೆಗಳು, ಸವಾಲುಗಳು, ಪರ್ಯಾಯಗಳು) ಕೋ-ಆಪರೇಷನ್, ಜುಲೈ ೨೦೦೩, ಸಂ. ೯, ಪು. ೨೦-೨೪

೪೦. ಸುಬ್ಯಸಚಿದಾಸ, ಸೆಲ್ಫ್-ಹೆಲ್ಫ್ ಗ್ರೂಪ್ಸ್, ಮೈಕ್ರೋ ಕ್ರೆಡಿಟ್ ಸಿನರ್‌ಜಿಕ್ ಇಂಟೀಗ್ರೇಷನ್, ಕುರುಕ್ಷೇತ್ರ, ಆಗಸ್ಟ್ ೨೦೦೩, ವ್ಯಾ-೫೧, ಸಂ-೧೦, ಪು. ೨೫-೩೦

೪೧. ಭಾಗ್ಯಲಕ್ಷ್ಮಿ ಎಸ್, ವುಮೆನ್ಸ್ ಎಂಪವರ್‌ಮೆಂಟ್ ಮೈಲ್ಸ್ ಟು ಗೊ, ಯೋಜನಾ, ಆಗಸ್ಟ್ ೨೦೦೪, ವ್ಯಾ-೪೮, ಪು ೩೮-೪೧

೪೨. ಲೋಗನಾಥನ್ ಪಿ. ಸ್ವ-ಸಹಾಯ ಗುಂಪುಗಳು ಮತ್ತು ಬ್ಯಾಂಕು ಸಂಪರ್ಕ, ಕಿಸಾನ್ ವರ್ಲ್ಡ್ ಏಪ್ರಿಲ್ ೨೦೦೪, ವ್ಯಾ-೩೧, ಸಂ-೪, ಪು. ೨೪-೨೬

೪೩. ಐ.ಸುಂದರ್ ಮತ್ತು ಆರ್ ಅಶೋಕನ್, ಮಹಿಳಾ ಸ್ವ-ಸಹಾಯ ಗುಂಪುಗಳ ಹಣಕಾಸಿನಲ್ಲಿ ಸಹಕಾರಿ ಬ್ಯಾಂಕುಗಳು ಭಾಗವಹಿಸುವಿಕೆ, ಕೋ-ಆಪರೇಟಿವ್ ಪರ್ಸ್‌ಪೆಕ್ಟಿವ್. ಜನವರಿ ೨೦೦೪, ವ್ಯಾ-೩೮, ಸಂ-೪, ಪು. ೫-೨೬

೪೪. ರಿನ್‌ಝಿಮ್ ಮೌಸುನಿದಾಸ ಅವರು ಸ್ವ-ಸಹಾಯ ಗುಂಪುಗಳ ಮೂಲಕ ಸೂಕ್ಷ್ಮ ಹಣಕಾಸು. ಕುರುಕ್ಷೇತ್ರ. ಫೆಬ್ರವರಿ ೨೦೦೪, ವ್ಯಾ-೫೨, ಸಂ-೪, ಪು. ೪೩-೪೫

೪೫. ವ್ಹಿ. ನಿರ್ಮಲಾ ಕೆ.ಶಾಮ್‌ಭಟ್ ಮತ್ತು ಭುವನೇಶ್ವರಿ, ಎಸ್‌ಹೆಚ್‌ಜೀಸ್ ಫಾರ್ ಪಾವರ್ಟಿ ಅಲ್ಲಿವೇಷನ್ ಇನ್ ಪಾಂಡಿಚೇರಿ, ಜರ್ನಲ್ ಆಫ್ ರೂರಲ್ ಡೆವೆಲಪ್‌ಮೆಂಟು, ಜೂನ್ ೨೦೦೪, ವ್ಯಾ-೨೩, ಸಂ-೨, ಪು. ೨೦೩-೨೧೫

೪೬. ಕೆ.ಕೆ. ತ್ರಿಪತಿ. ಸ್ವ-ಸಹಾಯ ಗುಂಪುಗಳು, ಕುರುಕ್ಷೇತ್ರ ಜೂನ್ ೨೦೦೪, ವ್ಯಾ-೫೨, ಸಂ-೮, ಪು. ೪೦-೪೩

೪೭. ರಶೀದ ಭಗತ್. ಇಂಡಿಯಾ ಇಂಟೀರಿಯರ್. ದಿ ಹಿಂದು ಜುಲೈ ೧೬, ೨೦೦೪, ಪು. ೪

೪೮. ಜಿ. ಶಾಂತಿ ಮತ್ತು ಸಿ. ಧನಲಕ್ಷ್ಮಿ, ಕೇಸ್ ಸ್ಟಡಿ ಆಫ್ ವುಮೆನ್ ಎಂಪವರ್‌ಮೆಂಟ್ ಥ್ರೂ ಸೆಲ್ಫ್-ಹೆಲ್ಫ್ ಗ್ರೂಪ್ಸ್ ಇನ್ ಗೊಬಿಚೆಟ್ಟಿಪಲಯಮ್ ಬ್ಲಾಕ್, ಎರೋಡೀ ಡಿಸ್ಟ್ರಿಕ್ಟ್, ಕೋ-ಆಪರೇಷನ್, ಆಗಸ್ಟ್ ೨೦೦೪, ವ್ಯಾ-೪, ಸಂ-೧೦, ಪು. ೨೩-೨೫

೪೯. ಸಂಜಯ್‌ರಾಯ್. ಲಿಂಕಿಂಗ್ ಸೆಲ್ಫ್-ಹೆಲ್ಫ್ ಗ್ರೂಪ್ಸ್ ಅಂಡರ್ ಎಸ್‌ಜಿಎಸ್‌ವೈ ಸ್ಕೀಮ್ ವಿಥ್ ಕೋ-ಆಪರೇಟಿವ್ಸ್ ಪ್ರೋಸ್‌ಪೆಕ್ಟೀವ್ ಅಂಡ್ ಕನ್ಸರ್ನ್‌ರ್ಸ್ ದಿ ಕೋ-ಆಪರೇಟರ್, ಆಕ್ಟೋಬರ್ ೨೦೦೪, ವ್ಯಾ-೪೨, ಸಂ-೪, ಪು. ೧೨೮-೧೩೧

೫೦. ಜಿ.ಎಸ್.ಕಲಾ. ಎಕಾನಾಮಿಕ್ ಎಂಪವರ್‌ಮೆಂಟ್ ಆಫ್ ವುಮೆನ್ ಥ್ರೂ ಸೆಲ್ಫ್-ಹೆಲ್ಫ್ ಗ್ರೂಪ್ಸ್ ಕಿಸಾನ್ ವರ್ಲ್ಡ್, ನವೆಂಬರ್ ೨೦೦೪, ಪು. ೨೬೪-೨೬೬

೫೧. ಅನಿತಾ ಪಂಡ. ಎಸ್‌ಹೆಚ್‌ಜಿ: ಎ ಬೂನ್ ಫಾರ್‌ಮನಿ ದಿ ಕೋ-ಆಪರೇಟರ್, ಡಿಸೆಂಬರ್ ೨೦೦೪, ವ್ಯಾ-೪೨, ಸಂ-೬, ಪು. ೨೬೪-೨೬೬

೫೨. ಶೇಕ್‌ಮಹಮ್ಮದ್ ಎಮ್. ಸೆಲ್ಫ್-ಹೆಲ್ಫ್ ಗ್ರೂಪ್ಸ್ ಫಾರ್ ದಿ ಸಕ್ಸೆಸ್ ಆಫ್ ವುಮೆನ್ ಎಂಟ್ರೆಪ್ರಿನ್ಯೂರ್ಸ್, ಕಿಸಾನ್ ವರ್ಲ್ಡ್, ಮಾರ್ಚು ೨೦೦೪, ವ್ಯಾ-೩೧, ಸಂ-೩, ಪು. ೩೦-೩೧

೫೩. ಸೊರುಬರಾಣಿ ಮತ್ತು ಥೆನ್ಮೋಜಿ. ಸೆಲ್ಫ್-ಹೆಲ್ಫ್ ಗ್ರೂಪ್ಸ್ ಗೇಟ್‌ವೆ ಟು ವುಮೆನ್ ಎಂಪವರ್‌ಮೆಂಟು ಕೋ-ಆಪರೇಷನ್, ಡಿಸೆಂಬರ್ ೨೦೦೪, ಪು. ೧೦-೧೨

೫೪. ಸೆಂಥಿಲ್ ವಡಿವೂ ಮತ್ತು ಜಿ. ಶೇಖರ್, ಸೆಲ್ಫ್-ಹೆಲ್ಫ್ ಗ್ರೂಪ್ಸ್ ಎ ಮೂಮೆಂಟ್ ಫಾರ್ ವುಮೆನ್ ಎಂಪವರ್‌ಮೆಂಟ್, ಕಿಸಾನ್ ವರ್ಲ್ಡ್, ಜುಲೈ ೨೦೦೪, ಪು. ೧೩-೧೪

೫೫. ಎ. ವೆಂಕಟಾಚಲಂ ಮತ್ತು ಜಯಪ್ರಕಾಶ, ಸೆಲ್ಫ್-ಹೆಲ್ಫ್ ಗ್ರೂಪ್ಸ್ ಇನ್ ದಿಂಡಿಗುಲ್ ಡಿಸ್ಟ್ರಿಕ್ಟ್ ಕಿಸಾನ್ ವರ್ಲ್ಡ್, ಅಕ್ಟೋಬರ್ ೨೦೦೪, ವ್ಯಾ-೩೧, ಸಂ-೧೦, ಪು. ೨೯-೩೦

೫೬. ಲೀಲಾವತಿ. ಎಸ್.ಹೆಚ್.ಜಿ ಈಸ್ ಎ ಕ್ರೀಮ್ ಲೇಯರ್ ಫಾರ್ ವುಮೆನ್ಸ್ ಸೋಸಿಯಲ್ ಸ್ಟೇಟಸ್, ಪ್ರೊಸೀಡಿಂಗ್ಸ್ ಆಫ್ ನ್ಯಾಷನಲ್ ಲೆವೆಲ್ ಸಿಂಪೋಜಿಯಮ್ ಆನ್ ಸೆಲ್ಫ್-ಹೆಲ್ಫ್ ಗ್ರೂಪ್ಸ್ ಎ ಸೈಲೆಂಟ್ ರೆವ್ಲೊಲ್ಯೂಶನ್ ಅರುಲ್‌ಮಿಗು ಪಳನಿಯನ್‌ಥವರ್ ಆರ್ಟ್ಸ್ ಕಾಲೇಜು ಫಾರ್ ವುಮೆನ್ ಪಳನಿ. ಮಾರ್ಚು ೨೦೦೪

೫೭. ಕೆ. ರೋಸಪ್ಪು ಮತ್ತು ಕೆ. ಕಲ್ಯಾಣ್ ಸುಂದರ್, ಎಕನಾಮಿಕ್ ಇಂಡೀಪೆಂಡೆನ್ಸ್ ಥ್ರೂ ಸೆಲ್ಫ್-ಹೆಲ್ಫ್ ಗ್ರೂಪ್ಸ್, ಪ್ರೊಸೀಡಿಂಗ್ಸ್ ಆಫ್ ನ್ಯಾಷನಲ್ ಲೆವೆಲ್ ಸಿಂಪೋಜಿಯಮ್ ಆನ್ ಸೆಲ್ಫ್-ಹೆಲ್ಫ್ ಗ್ರೂಪ್ಸ್ ಎ ಸೈಲೆಂಟ್ ರೆವ್ಲೊಲ್ಯೂಶನ್ ಅರುಲ್‌ಮಿಗು ಪಳನಿಯನ್‌ಥವರ್ ಆರ್ಟ್ಸ್ ಕಾಲೇಜು ಫಾರ್ ವುಮೆನ್ ಪಳನಿ, ಮಾರ್ಚು ೨೦೦೪

೫೮. ಪ್ರೇಮ ಪರಂಡೆ, ಎಕನಾಮಿಕ್ ಎಂಪವರ್‌ಮೆಂಟ್ ಆಫ್ ವುಮೆನ್, ಸೌರ್ಥನ್ ಎಕನಾಮಿಸ್ಟ್, ಮಾರ್ಚು ೨೦೦೫

೫೯. ಸತ್ಯ ಸುಂದರಮ್, ವ್ಯಾಲಂಟರಿ ಆ್ಯಕ್ಷನ್ ಫಾರ್ ರೂರಲ್ ಡೆವೆಲಪ್‌ಮೆಂಟ್, ಸೌರ್ಥನ್ ಎಕನಾಮಿಸ್ಟ್, ಡಿಸೆಂಬರ್ ೨೦೦೫, ವ್ಯಾ-೪೧, ಸಂ-೧೫, ಪು. ೩೬

೬೦. ಆರ್.ವಿ.ರಾಮಕೃಷ್ಣನ್ ಎಸ್‌ಹೆಚ್‌ಜಿ- ಬ್ಯಾಂಕ್ ಲಿಂಕೇಜ್. ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲೀ, ಏಪ್ರಿಲ್ ೨೦೦೫,ವ್ಯಾ-೪೦, ಸಂ-೧೫, ಪು. ೩೬

೬೧. ಜೆ. ಪ್ರೆಡ್ರಿಕ್, ಎಸ್‌ಹೆಚ್‌ಜಿಸ್ ಗೇಟ್‌ವೇ ಟು ಸಕ್ಸೆಸ್ ಫಾರ್ ರೂರಲ್ ಎಂಟ್ರಪ್ರಿನ್ಯೂರ್ಸ್, ಕಿಸಾನ್‌ವರ್ಲ್ಡ್ ಸೆಪ್ಟೆಂಬರ್ ೨೦೦೫, ವ್ಯಾ-೪೦, ಸಂ-೧೭, ಪು. ೧೭೨೦

೬೨. ವಸಂತ ಕನ್ನಿಬಿರನ್, ಮಾರ್ಕೆಟಿಂಗ್ ಸೆಲ್ಫ್-ಹೆಲ್ಫ್, ಮ್ಯಾನೇಜಿಂಗ್ ಪಾವರ್ಟಿ, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಆಗಸ್ಟಂ ೨೦೦೫, ವ್ಯಾ-೪೦, ಸಂ-೩೪, ಪು. ೩೭೧೬

೬೩. ಆರ್.ಅಶೋಕನ್ ಮತ್ತು ಟಿ. ಸುಧಾ, ಎಕನಾಮಿಕ್ ಸ್ಟೇಟಸ್ ಆಫ್ ರೂರಲ್ ವುಮೆನ್ ಎಸ್‌ಹೆಚ್‌ಜಿಸ್ ಇನ್ ನಾಗಪಟ್ಟಿನಮ್ ಡಿಸ್ಟ್ರಿಕ್ಟ್ ವಿಥ್ ಸ್ಪೆಷಲ್ ಟು ಎಲುಮಗಲೂರ್ ವಿಲೇಜ್, ಕೋ-ಆಪರೇಟಿವ್ ಪರ್‌ಸ್ಪೆಕ್ಟಿವ್, ಜನವರಿ ೨೦೦೫, ವ್ಯಾ-೩೯, ಸಂ-೪, ಪು. ೫೨-೫೭

೬೪. ಚಿತ್ತರಂಜನ್‌ಮಿಶ್ರಾ. ಎಸ್.ಹೆಚ್.ಜಿಸ್ ಇನ್ ದಿ ಅನ್‌ಆರ್ಗನೈಜಡ್ ಗಾರ್ಮೆಂಟ್ ಸೆಕ್ಟರ್ : ಎ ಕೇಸ್ ಸ್ಟಡಿ ಆಫ್ ಮಧುರೈ, ಕುರುಕ್ಷೇತ್ರ ಜುಲೈ ೨೦೦೫, ವ್ಯಾ-೫೩, ಸಂ-೮, ಪು. ೪೩-೪೬

೬೫. ಫರ್ಜಾನೆಹ್ ಶೇಖ್ ಖಾಟಿಬಿ ಮತ್ತು ಎಂ ಇಂದಿರಾ. ಸ್ವ-ಸಹಾಯ ಗುಂಪುಗಳ ಮೂಲಕ ಮಹಿಳಾ ಸಬಲೀಕರಣ ಮತ್ತು ಪರಿಸರ ನಿರ್ವಹಣೆ : ಕರ್ನಾಟಕ ರಾಜ್ಯದಲ್ಲಿ ಎನ್ ಜಿ ಓಗಳ ಅನುಭವ, ಜರ್ನಲ್ ವುಮೆನ್ ಎಕ್‌ನಾಮಿಕ್ಸ್, ವ್ಯಾ.೧, ೨೦೧೧

೬೬ ಅನುಪಮ್ ಹರ್ಜಾ, ಸುಸ್ಥಿರ ಗ್ರಾಮೀಣ ಅಬಿವೃದ್ಧಿಗೆ ಹೊಸ ಆಯಾಮಗಳು ಸೇರಿಸುವಿಕೆ. ಆರ್ನಲ್ ಆಫ್ ಕುರುಕ್ಷೇತ್ರ ಜುಲೈ ೨೦೧೩

೬೭. ಅರ್ಚನಾ ಕುಮಾರಿ, ಪರಿಪೂರ್ಣ ಸಬಲೀಕರಣ, ಜರ್ನಲ್ ಆಫ್ ಕುರುಕ್ಷೇತ್ರ, ಜುಲೈ ೨೦೧೩.

೬೮. ಸುಶಾಂತ ಕುಮಾರ್ ಕಶ್ಯಪ್, ಅಸ್ಸಾಂನಲ್ಲಿ ಬ್ಯಾಂಕ್ ಸ್ವ-ಸಹಾಯ ಗುಂಪಿನ ಜಂಟ ಕಾರ್ಯಕ್ರಮ ಒಂದು ವಿಶ್ಲೇಷಣೆ, ಜರ್ನಲ್ ಆಫ್ ಕುರುಕ್ಷೇತ್ರ ಜುಲೈ ೨೦೧೩

೬೯. ಕಾರ್ತಿಕ್ ದಾಸ್. ಸೂಕ್ಷ್ಮ ಹಣಕಾಸು- ಒಳಗೊಳ್ಳುವ ಅಭಿವೃದ್ಧಿಯ ಯಂತ್ರ. ಆರ್ನಲ್ ಆಫ್ ಕುರುಕ್ಷೇತ್ರ ಜುಲೈ ೨೦೧೩

೭೦. ಭವ್ಯ. ಎಚ್. ಪಿ. ಮತ್ತು ಜಿ. ಹೆಚ್ ನಾಗರಾಜ. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳಾ ಭಾಗವಹಿಸುವಿಕೆಯ ಮೇಲೆ ಸ್ತ್ರೀಶಕ್ತಿ ಸಂಘಗಳ ಪಾತ್ರ, ಸೌರ್ಥನ್ ಎಕಾನಾಮಿಸ್ಟ್, ವ್ಯಾ.೫೨. ಜನವರಿ.೨೦೧೪

೭೧. ಕೊಂಡಲ ರಾವ್ ದೇವರಪಲ್ಲಿ ಮತ್ತು ಜ್ಯೋತಿ ಗುಂಟಕ. ಭಾರತದಲ್ಲಿ ಸ್ವ-ಸಹಾಯ ಗುಂಪುಗಳು ಬ್ಯಾಂಕ್ ಸಂಪರ್ಕ ಕಾರ್ಯಕ್ರಮ: ಒಂದು ಅಧ್ಯಯನ. ಸೌರ್ಥನ್ ಎಕ್‌ನಾಮಿಸ್ಟ್, ವ್ಯಾ.೫೨. ಜನವರಿ. ೨೦೧೪

೭೨. ಎ. ಮನಿವೇಲ್. ಮಹಿಳಾ ಉದ್ಯಮಶೀಲರು-ಉದ್ಯಮಗಳು ಪ್ರಭಾವ ಬೀರುವ ಸಮಸ್ಯೆಗಳು ಮತ್ತು ಅಂಶಗಳು. ಸೌರ್ಥನ್ ಎಕ್‌ನಾಮಿಸ್ಟ್, ವ್ಯಾ.೫೩. ಮೇ. ೨೦೧೪

೭೩. ಟಿ. ರಮೇಶ, ಸ್ಥಳೀಯ ಸ್ವಯಂ ಸರಕಾರ ಮತ್ತು ಮಹಿಳಾ ಸಬಲೀಕಾರಣದಲ್ಲಿ ಅದರ ಪಾತ್ರ : ಒಂದು ಮೌಲ್ಯಮಾಪನ, ಸೌರ್ಥನ್ ಎಕ್‌ನಾಮಿಸ್ಟ್ ವ್ಯಾ. ೫೨. ೨೦೧೪

೭೪. ರವಿ. ಫ್ಹಿ ಮತ್ತು ಎಸ್. ರಮೇಶ್. ಕರ್ನಾಟಕದಲ್ಲಿ ಸ್ವ-ಸಹಾಯ ಗುಂಪುಗಳಿಗೆ ಸೇರಿದ ನಂತರ ಸಮಾಜೋ ಆರ್ಥಿಕ ಸ್ಥಿತಿಯ ಮೇಲೆ ಸೂಕ್ಷ್ಮ ಹಣಕಾಸಿನ ಪರಿಣಾಮ, ಸೌರ್ಥನ್ ಎಕಾನಾಮಿಸ್ಟ್, ೨೦೧೪

೭೫. ಶ್ರೀನಿವಾಸ ಎಸ್ ಕೊಪ್ಪಳ, ಮಹಿಳಾ ಸಬಲೀಕರಣ, ಆರ್ಥಿಕ ಅಭಿವೃದ್ಧಿ ಮತ್ತು ಸ್ಥಾನಮಾನಗಳು, ಶಿಕ್ಷಣ ಸೌಧ, ವ್ಯಾ.೫. ಇಸ್ಸ್ಯೂ.೧. ೨೦೧೫.

ಅಧ್ಯಾಯ : ಮೂರು

ಅಧ್ಯಯನ ಕ್ಷೇತ್ರ ಪರಿಚಯ

ಅಧ್ಯಾಯ : ಮೂರು

ಅಧ್ಯಯನ ಕ್ಷೇತ್ರದ ಪರಿಚಯ

ರಾಜ್ಯದ ಪೂರ್ವಭಾಗದಲ್ಲಿರುವ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ ಗುಂಪುಗಳ ಪರಿಶಿಷ್ಟ ಮಹಿಳಾ ಸದಸ್ಯರನ್ನು ಹಾಗೂ ಸಂಘಗಳ ಸದಸ್ಯರಲ್ಲದ ಪರಿಶಿಷ್ಟ ಮಹಿಳಾ ಸದಸ್ಯರನ್ನು ಹಾಗೂ ಕೂಡ್ಲಿಗಿ ತಾಲ್ಲೂಕಿನ ಚಿರತಗುಂಡು ಮತ್ತು ರಾಂಪುರ ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ ಗುಂಪುಗಳ ಪರಿಶಿಷ್ಟ ಮಹಿಳಾ ಸದಸ್ಯರನ್ನು ಹಾಗೂ ಸಂಘಗಳ ಸದಸ್ಯರಲ್ಲದ ಪರಿಶಿಷ್ಟ ಮಹಿಳಾ ಸದಸ್ಯರನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಕ್ಷೇತ್ರದ ಜಿಲ್ಲೆ, ತಾಲೂಕು ಹಾಗೂ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಗ್ರಾಮಪಂಚಾಯತಿಗಳ ಚಾರಿತ್ರಿಕ, ಭೌಗೋಳಿಕ, ಆರ್ಥಿಕ ಮತ್ತು ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳ ಸಂಕ್ಷಿಪ್ತ ಪರಿಚಯ ನೀಡಲಾಗಿದೆ. ಬಳ್ಳಾರಿ ಜಿಲ್ಲೆಯ ಹಾಗೂ ತಾಲೂಕುಗಳ ಜನಸಂಖ್ಯೆಯ ನಮೂನೆಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಅಂಕಿ ಅಂಶಗಳ ಮೂಲಕ ವಿಶ್ಲೇಷಿಸಲಾಗಿದೆ.

೩.೧. ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ :

ಬಳ್ಳಾರಿ ಜಿಲ್ಲೆಗೆ ತನ್ನದೇ ಆದಂತಹ ಚಾರಿತ್ರಿಕ ಹಿನ್ನೆಲೆ ಇರುವುದನ್ನು ಕಾಣಬಹುದು. ಮುಖ್ಯವಾಗಿ ಶಾಸನಗಳು, ಪೌರಾಣಿಕ ಸಂಗತಿಗಳು, ಹಸ್ತಪ್ರತಿಗಳಲ್ಲಿ ಬಳ್ಳಾರಿಯ ಕುರಿತಂತೆ ಉಲ್ಲೇಖಗಳಿರುವುದು ಕಂಡುಬರುತ್ತದೆ. ಬಳ್ಳಾರಿ ಎಂಬ ಹೆಸರು ಬರಲು ಒಂದು ಪೌರಾಣಿಕ ಕಥೆಯೊಂದು ಜನಪ್ರಿಯತೆಯನ್ನು ಪಡೆದುಕೊಂಡಿದೆ. ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಬಳ್ಳಾರಿ ತಾಲೂಕಿನ ಕೋಳೂರು ಗ್ರಾಮದಲ್ಲಿ ಒಬ್ಬ ಮಹಾಶಿವಭಕ್ತ, ಕಾಯಕ ಯೋಗಿ ಮಲ್ಲಯ್ಯನೆಂಬ ವ್ಯಾಪಾರಿ ಇದ್ದ. ಆತನು ಧವಸ ಧಾನ್ಯಗಳನ್ನು ಎತ್ತಿನ ಮೇಲೆ ಹೇರಿಕೊಂಡು ಹಳ್ಳಿಗಳಲ್ಲಿ ಮಾರಾಟ ಮಾಡುವ ಸತ್ಯ ಶುದ್ಧ ಕಾಯಕದಲ್ಲಿ ನಿರತನಾಗಿದ್ದ. ಇದೇ ಕಾರಣದಿಂದ ಆತನು ಒಂದು ದಿನ ಬಳ್ಳಾರಿಯ ಈ ಪ್ರದೇಶಕ್ಕೆ ಬಂದಿದ್ದ. ಆತನು ಅನೇಕ ವರ್ಷಗಳಿಂದ ಒಂದು ವ್ರತವನ್ನು ತಪ್ಪದೇ ಪಾಲಿಸಿಕೊಂಡು ಬಂದಿದ್ದ. ಪ್ರತಿದಿನವೂ ಆತ ಬೆಳಿಗ್ಗೆ ಶುಚಿರ್ಭೂತವಾಗಿ ಭಕ್ತಿಯಿಂದ ಶಿವಲಿಂಗಕ್ಕೆ ಪೂಜೆ ಸಲ್ಲಿಸಿ, ನಿಷ್ಟೆಯಿಂದ, ಮಡಿಯಿಂದ ತಾನೇ ತಯಾರಿಸಿದ ಪ್ರಸಾದವನ್ನು ಶಿವಲಿಂಗಕ್ಕೆ ನೈವೇದ್ಯ ಮಾಡಿ ಆ ಪ್ರಸಾದವನ್ನು ಮಾತ್ರ ಸೇವಿಸುತ್ತಿದ್ದ. ಒಂದು ವೇಳೆ ಲಿಂಗ ಪೂಜೆ ಮಾಡಲು, ನೈವೇದ್ಯ ಸಮರ್ಪಿಸಲು ಆಗದಿದ್ದರೆ ಬೇರೇನನ್ನೂ ಸೇವಿಸದೆ ದಿವಸಗಟ್ಟಲೆ

ಉಪವಾಸವಿರುತ್ತಿದ್ದ. ಶಿವಭಕ್ತ ಮಲ್ಲಯ್ಯನಿಗೆ ಆಗಲೆ ಇಳಿವಯಸ್ಸಾಗಿದ್ದುದರಿಂದ ಕಣ್ಣಿಗೆ ಪೊರೆ ಬಂದು ದೃಷ್ಟಿ ಬಹಳ ಮಂದವಾಗಿತ್ತು. ಆದ್ದರಿಂದ ತನ್ನ ಅಳಿಯನಾದ ಬಸವಣ್ಣ ಎಂಬುವವನನ್ನು ತನ್ನ ಸಹಾಯಕ್ಕಾಗಿ ನೇಮಿಸಿಕೊಂಡಿದ್ದ. ತನ್ನ ಪದ್ಧತಿ ಪ್ರಕಾರ ವ್ರತವನ್ನು ಪಾಲಿಸಲು[೧] ಶಿವಲಿಂಗವನ್ನು ನೋಡಿಕೊಂಡು ಬರಲು ತನ್ನ ಅಳಿಯನಿಗೆ ತಿಳಿಸಿದ. ಈ ಪ್ರದೇಶದಲ್ಲಿ ಎಲ್ಲಿಯೂ ಶಿವಲಿಂಗ ಕಾಣಿಸದಿದ್ದರಿಂದ ಆ ದಿನವೂ ತನ್ನ ಮಾವನಾದ ಮಲ್ಲಯ್ಯನು ವ್ರತವನ್ನು ಪೂರೈಸಲಾಗದೆ ವ್ಯಥೆಪಟ್ಟು ಹಿಂದಿನ ದಿನದಂತೆ ಉಪವಾಸವಿರುವುದನ್ನು ನೋಡಲಾಗದೆ, ಬಸವಣ್ಣನು ಒಂದು ಉಪಾಯವನ್ನು ಮಾಡಿದ.

ಬಸವಣ್ಣನು ತಮ್ಮಲ್ಲಿದ್ದ ಧಾನ್ಯವನ್ನು ಅಳೆಯುವ "ಬಳ್ಳವನ್ನು" (ಆ ಕಾಲದಲ್ಲಿ ಈಗಿನ ೮ ಸೇರಿನಷ್ಟು ದೊಡ್ಡದಾದ ಬಳ್ಳವು ಬಳಕೆಯಲ್ಲಿತ್ತು.) ಅಲ್ಲಿಯೇ ಪ್ರಾಕೃತಿಕವಾಗಿ ಬಂಡೆಯ ಮೇಲೆ ತಲೆ ಕೆಳಗೆ ಮಾಡಿ ಇಟ್ಟು, ಅದನ್ನು ಸ್ವಚ್ಛವಾಗಿ ತೊಳೆದು, ವಿಭೂತಿ, ಗಂಧ, ಪುಷ್ಪಗಳಿಂದ ಪೂಜಿಸಿ ನಂತರ ತನ್ನ ಮಾವನಿಗೆ ಹತ್ತಿರದಲ್ಲಿ ಶಿವಲಿಂಗ ಇರುವುದಾಗಿ ಹೇಳಿದ. ಮಲ್ಲಯ್ಯನು ಶುಚಿರ್ಭೂತವಾಗಿ ಮಡಿಯಿಂದ ತಯಾರಿಸಿದ ಪ್ರಸಾದವನ್ನು ಅಳಿಯ ತೋರಿಸಿದ ಲಿಂಗಕ್ಕೆ (ಬಳ್ಳಕ್ಕೆ) ಭಕ್ತಿಯಿಂದ ದೃಢಮನಸ್ಸಿನಿಂದ ಸಮರ್ಪಿಸಿ, ಲಿಂಗಕ್ಕೆ ಶರಣಾಗಿ, ನಂತರ ಆ ಶಿವಪ್ರಸಾದವನ್ನು ಸೇವಿಸಿದ. ಆ ನಂತರ ನೋಡಲಾಗಿ ಶಿವಲಿಂಗವೆಂದು ನಿಷ್ಠೆಯಿಂದ ಪೂಜಿಸಿದ ಬಂಡೆಯ ಮೇಲಿನ ಬಳ್ಳವೇ "ಲಿಂಗ"ವಾಗಿತ್ತು. ಹಳೆಗನ್ನಡದಲ್ಲಿ 'ಬಳ್ಳ'- ಅಂದರೆ=ಸೇರು, ಅರೆ-ಅಂದರೆ=ಬಂಡೆ ಬಳ್ಳ+ಅರೆ=ಬಳ್ಳಾರೆ ಎಂದು ಹೆಸರು ಬಂದಿದೆ. (ಆ ಕಾಲದ ಶಾಸನಗಳಲ್ಲಿ ಬಳ್ಳಾರೆ ಎಂದು ಕರೆಯಲಾಗಿದೆ.) ನಂತರ ವಾಡಿಕೆಯಲ್ಲಿ ಬಳ್ಳಾರೆ, ಬಳ್ಳಾರಿ ಆಗಿದೆ.[೨] ಜಾಗತಿಕ ಮಾರುಕಟ್ಟೆಯಲ್ಲಿ ಖ್ಯಾತಿ ಪಡೆದಿರುವ ಬಳ್ಳಾರಿ ಜಿಲ್ಲೆಯು ರಾಜ್ಯದ ಪೂರ್ವಮಧ್ಯ ಭಾಗದಲ್ಲಿದೆ. ಬಳ್ಳಾರಿ ಜಿಲ್ಲೆಯ ಬಹುತೇಕ ಭಾಗವು ತುಂಗಾಭದ್ರ ನದಿ ತೀರದಲ್ಲಿ ಕಂಡುಬರುತ್ತದೆ. ಪ್ರಾಚೀನ ಕಾಲದಿಂದಲೂ ಇದು ಆರ್ಥಿಕವಾಗಿ ಸಮೃದ್ಧ ಪ್ರದೇಶವಾಗಿದ್ದರಿಂದ ವ್ಯಾಪಾರ, ವಾಣಿಜ್ಯ ಹಾಗೂ ಧಾರ್ಮಿಕ ಕೇಂದ್ರವಾಗಿತ್ತು ಎಂದು ಐತಿಹಾಸಿಕವಾಗಿ ಕಂಡುಬರುತ್ತದೆ.[೩] ಚಾರಿತ್ರಿಕವಾಗಿ ಬಳ್ಳಾರಿ ಜಿಲ್ಲೆಗೆ ಪ್ರಾಮುಖ್ಯತೆ ಬಂದಿದ್ದು, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ. ಇದಕ್ಕೂ ಮೊದಲು ಶಾತವಾಹನರು, ಕಲ್ಯಾಣಿ ಚಾಲುಕ್ಯರು, ಕದಂಬರು, ಸೇವುಣರು ಮತ್ತು ಹೊಯ್ಸಳರ ನಿಯಂತ್ರಣದಲ್ಲಿತ್ತು.[೪] ಮುಸಲ್ಮಾನರ ಭೀಕರ ದಾಳಿಗಳಿಂದ ದಕ್ಷಿಣ ಭಾರತದಲ್ಲಿ ಹಿಂದೂ ಧರ್ಮ, ಸಂಸ್ಕೃತಿಗಳು ನಾಶವಾಗುವ ಪರಿಸ್ಥಿತಿ ಬಂದಿತ್ತು. ಇಂತಹ ಗಂಡಾಂತರದ ಪರಿಸ್ಥಿತಿಯನ್ನು ಹೋಗಲಾಡಿಸಿ, ಸನಾತನ ಹಿಂದೂ ಧರ್ಮ, ಸಂಸ್ಕೃತಿ ಮತ್ತು ಪರಂಪರೆಗಳನ್ನು ಕಾಪಾಡುವ ಮಹಾದುದ್ದೇಶದಿಂದ ಸಂಗಮನ ಮಕ್ಕಳಾದ ಹರಿಹರ ಮತ್ತು ಬುಕ್ಕರು ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆಮಾಡಿದರು.[೫] ವಿಜಯನಗರ

ಸಾಮ್ರಾಜ್ಯ ಬಳ್ಳಾರಿ ಜಿಲ್ಲೆಯ ಹಂಪಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರಿಂದ ಈ ಜಿಲ್ಲೆಗೆ ಪ್ರಾಮುಖ್ಯತೆ ಬಂದಿತು.[೬]

ಕ್ರಿ.ಶ. ೧೭೬೮ರಿಂದ ೧೭೯೯ರ ವರೆಗೆ ಮೈಸೂರಿನ ಹೈದರಾಲಿ ಮತ್ತು ಅವನ ಮಗ ಟಿಪ್ಪುಸುಲ್ತಾನನ ವಶಕ್ಕೆ ಒಳಪಟ್ಟಿತ್ತು. ಬ್ರಿಟಿಷರ, ಮರಾಠರ ಹಾಗೂ ಹೈದ್ರಾಬಾದ್ ನಿಜಾಮನ ಸೈನ್ಯವು ಒಟ್ಟಾಗಿ ೧೭೯೯ರಲ್ಲಿ ಟಿಪ್ಪುಸುಲ್ತಾನನ ಮೇಲೆ ಆಕ್ರಮಣ ಮಾಡಿದಾಗ, ಈ ಯುದ್ಧದಲ್ಲಿ ಟಿಪ್ಪು ಹತನಾದನು. ಯುದ್ಧದ ಒಪ್ಪಂದದಂತೆ ಬಳ್ಳಾರಿ ಪ್ರದೇಶವು ನಿಜಾಮನ ವಶವಾಯಿತು. ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡ ನಿಜಾಮನು ಆಂಧ್ರಪ್ರದೇಶದ ಕೆಲವು ಜಿಲ್ಲೆಗಳನ್ನೊಳಗೊಂಡಂತೆ ಬಳ್ಳಾರಿ ಪ್ರದೇಶವನ್ನು ಬ್ರಿಟೀಷರಿಗೆ ಕಾಣಿಕೆಯಾಗಿ ನೀಡಿದನು.[೭] ಹೀಗೆ ಬಳ್ಳಾರಿ ಪ್ರದೇಶವನ್ನು ಈಸ್ಟ್ ಇಂಡಿಯಾ ಕಂಪನಿಗೆ ಬಿಟ್ಟುಕೊಟ್ಟನಂತರ ಕ್ರಿ.ಶ. ೧೮೦೦ರಲ್ಲಿ ಬಳ್ಳಾರಿ ಬ್ರಿಟೀಷರ ಸಾಮ್ರಾಜ್ಯಕ್ಕೆ ಅಂಗಸಂಸ್ಥೆಯಾಗಿ ಆಡಳಿತ ನಿರ್ವಹಿಸಿತು.[೮]

ಬ್ರಿಟೀಷರು ಬಳ್ಳಾರಿ ಪ್ರದೇಶವನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿಕೊಂಡರು. ವಿಜಯನಗರ ಅರಸರ ಕಾಲದಲ್ಲಿ ವಿಸ್ತಾರವಾದ ಭೂ ಪ್ರದೇಶವನ್ನು ಹೊಂದಿದ್ದ ಬಳ್ಳಾರಿ ಜಿಲ್ಲೆಯು ಬ್ರಿಟೀಷರ ಆಳ್ವಿಕೆ ಕಾಲದಲ್ಲಿ ಮದ್ರಾಸ್ ಪ್ರಾಂತ್ಯದ ಬಹುದೊಡ್ಡ ಜಿಲ್ಲೆಯಾಗಿತ್ತು. ಸ್ವಾತಂತ್ರ್ಯೋತ್ತರ ಭಾರತದಲ್ಲೂ ೧೯೫೩ರ ಮೊದಲು ೧೨ ತಾಲ್ಲೂಕುಗಳನ್ನೊಳಗೊಂಡ ಬಳ್ಳಾರಿ ಬಹು ದೊಡ್ಡ ಜಿಲ್ಲೆಯಾಗಿತ್ತು. ಭಾಷಾವಾರು ಆಧಾರದ ಮೇಲೆ ತೆಲುಗು ಭಾಷೆ ಮಾತನಾಡುವ ಆಂಧ್ರಪ್ರದೇಶ ಅಕ್ಟೋಬರ್ ೧, ೧೯೫೩ರಂದು ಪ್ರಥಮ ಭಾಷಾವಾರು ರಾಜ್ಯವಾಗಿ ಉದಯಗೊಂಡಿತು. ಆ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿದ್ದ ಆದವಾನಿ, ಆಲೂರು ಮತ್ತು ರಾಯದುರ್ಗ ತಾಲೂಕುಗಳನ್ನು ಆಂಧ್ರಪ್ರದೇಶಕ್ಕೆ ವರ್ಗಾಯಿಸಲಾಯಿತು.[೯] ಅದೇ ಸಂದರ್ಭದಲ್ಲಿ ಕನ್ನಡ ಮಾತನಾಡುವ ಜನಸಂಖ್ಯೆಯ ಪ್ರದೇಶಗಳನ್ನು ೧೯೫೩ರಲ್ಲಿ ಮೈಸೂರು ರಾಜ್ಯಕ್ಕೆ ವರ್ಗಾಯಿಸಲಾಯಿತು ಮತ್ತು ನಂತರದಲ್ಲಿ ಅದು ಕರ್ನಾಟಕ ರಾಜ್ಯವಾಯಿತು.[೧೦]

ಭಾರತದ ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಕರ್ನಾಟಕ ಏಕೀಕರಣ ಚಳುವಳಿಯು ೧೯೨೦ರ ನಾಗಪುರ ಕಾಂಗ್ರೇಸ್ ಅಧಿವೇಶನದ ಮುಖ್ಯ ವಿಷಯಗಳಾಗಿದ್ದವು. ೧೯೨೪ರಲ್ಲಿ ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಚರ್ಚಿತವಾಗಿ ಕರ್ನಾಟಕ ಏಕೀಕರಣ ಸಭಾ ಅಸ್ತಿತ್ವಕ್ಕೆ ಬಂದಿತು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಏಕೀಕರಣ ಚಳುವಳಿಯ ನೇತೃತ್ವ ವಹಿಸಿತು. ನಂತರದಲ್ಲೇ ಚಳುವಳಿ ತೀವ್ರರೂಪ ಪಡೆಯಿತು. ಏಕೀಕರಣದ ಚಳುವಳಿಯ ಫಲವಾಗಿ ೧೯೫೩ರಲ್ಲಿಯೇ ಕರ್ನಾಟಕ್ಕೆ ಸೇರ್ಪಡೆಗೊಂಡ ಮೊದಲ ಜಿಲ್ಲೆ ಬಳ್ಳಾರಿ ಎಂಬ ಕೀರ್ತಿಗೆ ಪಾತ್ರವಾಯಿತು. ೧೯೫೬ರಲ್ಲಿ ರಾಜ್ಯಗಳ ಪುನರ್‌ರಚನಾ ಆಯೋಗ ವರದಿ ಶಿಫಾರಸ್ಸಿನ ಮೇರೆಗೆ ರಾಜ್ಯಗಳ ಪುನರ್‌ರಚನೆ ಮಾಡಲಾಯಿತು. ಆಗ ಮೈಸೂರು ಪ್ರಾಂತ್ಯವನ್ನು ಮೈಸೂರು ರಾಜ್ಯವೆಂದು ಕರೆಯಲಾಯಿತು. ೧೯೫೬ರಲ್ಲಿ ಏಕೀಕರಣಗೊಂಡ ಕರ್ನಾಟಕದಲ್ಲಿ ಆಡಳಿತದ ಅನುಕೂಲಕ್ಕಾಗಿ ನಾಲ್ಕು

ಕಂದಾಯ ವಿಭಾಗಗಳನ್ನು ರಚಿಸಲಾಯಿತು. ಪ್ರಾರಂಭದಲ್ಲಿ ಬಳ್ಳಾರಿ ಜಿಲ್ಲೆಯನ್ನು ಬೆಂಗಳೂರು ಕಂದಾಯ ವಿಭಾಗಕ್ಕೆ ಸೇರಿಸಲಾಯಿತು. ನಂತರ ಫೆಬ್ರವರಿ ೧, ೧೯೬೬ರಂದು ಗುಲಬರ್ಗಾ ಕಂದಾಯ ವಿಭಾಗಕ್ಕೆ ಸೇರಿಸಲಾಯಿತು. ೧೯೯೭ರಲ್ಲಿ ರಾಜ್ಯದಲ್ಲಿ ಹೊಸ ಜಿಲ್ಲೆಗಳನ್ನು ರಚನೆಮಾಡಿದ ವೇಳೆಯಲ್ಲಿ ಜಿಲ್ಲೆಯಲ್ಲಿದ್ದ ಹರಪನಹಳ್ಳಿ ತಾಲೂಕನ್ನು ದಾವಣಗೆರೆ ಜಿಲ್ಲೆಗೆ ಸೇರಿಸಲಾಯಿತು. ಹೀಗಾಗಿ ಪ್ರಸ್ತುತ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬಳ್ಳಾರಿ, ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಕೂಡ್ಲಿಗಿ, ಸಂಡೂರು ಮತ್ತು ಸಿರುಗುಪ್ಪ ಎಂಬ ಏಳು ತಾಲ್ಲೂಕುಗಳಿವೆ.[೧೧]

ಭೌಗೋಳಿಕ ವಿಸ್ತೀರ್ಣ: ಬಳ್ಳಾರಿ ಜಿಲ್ಲೆಯು ಕರ್ನಾಟಕ ರಾಜ್ಯದ ಪೂರ್ವಭಾಗದ ಮಧ್ಯದಲ್ಲಿ ದಕ್ಷಿಣೋತ್ತರದವರೆಗೆ ಹಬ್ಬಿದೆ. ೧೪°-೧೩° ಮತ್ತು ೧೫°-೫೦° ಉತ್ತರ ಅಕ್ಷಾಂಶ ಹಾಗೂ ೭೦°-೪೦° ಮತ್ತು ೭೭°-೧೧° ಪೂರ್ವರೇಖಾಂಶ ಇವುಗಳ ಮಧ್ಯದಲ್ಲಿದೆ. ಜಿಲ್ಲೆಯ ಉತ್ತರದಲ್ಲಿ ರಾಯಚೂರು ಜಿಲ್ಲೆ, ಪಶ್ಚಿಮದಲ್ಲಿ ಹಾವೇರಿ ಜಿಲ್ಲೆ, ದಕ್ಷಿಣದಲ್ಲಿ ಚಿತ್ರದುರ್ಗ ಜಿಲ್ಲೆ ಹಾಗೂ ಪೂರ್ವದಲ್ಲಿ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆ ಮತ್ತು ಅನಂತಪುರ ಜಿಲ್ಲೆಗಳಿಂದ ಆವೃತವಾಗಿದೆ.[೧೨] ಜಿಲ್ಲೆಯು ೮೪೫೦ ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು, ರಾಜ್ಯದ ಒಟ್ಟು ಶೇ.೬ರಷ್ಟು ವಿಸ್ತೀರ್ಣವನ್ನು ಹೊಂದಿದ್ದು, ರಾಜ್ಯದ ವಿಸ್ತೀರ್ಣದಲ್ಲಿ ೧೧ನೇ ಸ್ಥಾನದಲ್ಲಿದೆ. ಜಿಲ್ಲೆಯ ವಿಸ್ತೀರ್ಣದಲ್ಲಿ ಬಳ್ಳಾರಿ ತಾಲೂಕು ಹೆಚ್ಚಿನ ವಿಸ್ತೀರ್ಣ ಅಂದರೆ ೧೬೮೯ ಚ.ಕಿ.ಮೀ (ಶೇ.೨೦ರಷ್ಟು) ಹೊಂದಿದ್ದು, ಅತೀ ಕಡಿಮೆ ಎಂದರೆ ೯೩೪ ಚ.ಕಿ.ಮೀ. (ಶೇ.೧೧ರಷ್ಟು) ವಿಸ್ತೀರ್ಣವನ್ನು ಹೊಸಪೇಟೆ ತಾಲೂಕು ಹೊಂದಿರುತ್ತದೆ. ಜಿಲ್ಲೆಯು ಬಳ್ಳಾರಿ, ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಕೂಡ್ಲಿಗಿ, ಸಂಡೂರು ಮತ್ತು ಸಿರುಗುಪ್ಪ ತಾಲೂಕುಗಳನ್ನು ಹೊಂದಿದೆ. ಜಿಲ್ಲೆಯ ಕೇಂದ್ರ ಸ್ಥಾನ ಬಳ್ಳಾರಿ. ಅದು ರಾಜ್ಯದ ರಾಜಧಾನಿಯಾದ ಬೆಂಗಳೂರಿನಿಂದ ೩೦೪ ಕಿ.ಮೀ. ದೂರದಲ್ಲಿದೆ.[೧೩]

ಜನಸಂಖ್ಯೆ : ೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯಲ್ಲಿ ಒಟ್ಟು ೨೫,೩೨೩,೮೩ ಜನಸಂಖ್ಯೆ ಇದೆ. ಇದರಲ್ಲಿ ೧೨,೮೦೪,೦೨ ರಷ್ಟು ಪುರುಷರು ಹಾಗೂ ೧೨,೫೧,೯೮೧ರಷ್ಟು ಸ್ತ್ರೀಯರು ಇದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ೧೬,೧೩೦,೩೮ (ಶೇ..೬೪)ರಷ್ಟು ಮತ್ತು ನಗರ ಪ್ರದೇಶದಲ್ಲಿ ೯೧,೯೩,೪೫ (ಶೇ.೩೫)ರಷ್ಟು ಜನರು ವಾಸಿಸುತ್ತಿದ್ದಾರೆ. ೧೯೯೧ ಮತ್ತು ೨೦೦೧ರ ದಶಕದಲ್ಲಿ ಜಿಲ್ಲೆಯ ಜನಸಂಖ್ಯೆ ಬೆಳವಣಿಗೆ ಪ್ರಮಾಣ ಶೇ.೨೧,೧೫ರಷ್ಟು ಹಾಗೂ ಶೇ.೨೧.೪೦ರಷ್ಟು ಇದೆ. ೨೦೧೧ರ ಜನಗಣತಿಯ ಪ್ರಕಾರ ಶೇ.೨೪.೯೦ರಷ್ಟು ಬೆಳವಣಿಗೆಯಾಗಿದೆ. ೨೦೧೧ರ ಜನಗಣತಿಯಂತೆ ಜಿಲ್ಲೆಯ ವಿಸ್ತೀರ್ಣ ಪ್ರತಿ ಚದರ ಕಿ.ಮೀ.ಗೆ ೨೯೯ ಜನಸಂಖ್ಯೆ ಇದ್ದು, ೨೦೦೧ರಂತೆ ಜನಸಾಂದ್ರತೆಯಲ್ಲಿ ಜಿಲ್ಲೆಯು ೧೩ನೇ ಸ್ಥಾನದಲ್ಲಿದೆ.[೧೪] ಬಳ್ಳಾರಿ ಜಿಲ್ಲೆಯು ಲಿಂಗಾನುಪಾತದಲ್ಲಿಯೂ ಅಂತರವನ್ನು ಕಾಯ್ದುಕೊಂಡು ಬಂದಿದೆ. ೨೦೦೧ರ ಜನಗಣತಿಯ ಪ್ರಕಾರ ಲಿಂಗಾನುಪಾತ ೯೬೯ ಆದರೆ ೨೦೧೧ರ ಜನಗಣತಿಯ ಪ್ರಕಾರ ಜಿಲ್ಲೆಯ ಲಿಂಗಾನುಪಾತ ೯೭೮

ಆಗಿರುತ್ತದೆ. ದಶಕದ ಜನಸಂಖ್ಯೆ ಬೆಳವಣಿಗೆ ದರವು ೨೪.೯೨ ಆಗಿದ್ದು, ೨೦೦೧ರ ಜನಸಂಖ್ಯಾ ಬೆಳವಣಿಗೆಯ ದರಕ್ಕಿಂತ (ಶೇ.೨೨.೪೧ರಷ್ಟು) ಅಧಿಕವಾಗಿರುತ್ತದೆ.[೧೫]

ಜನಸಂಖ್ಯಾಶಾಸ್ತ್ರದ ಪ್ರಕಾರ ಜಿಲ್ಲೆಯ ಜನಸಂಖ್ಯಾ ಗಾತ್ರವನ್ನು ಅವಲೋಕಿಸಿದಾಗ ತಿಳಿದುಬರುವ ಅಂಶವೆಂದರೆ ಕರ್ನಾಟಕ ಜನಸಂಖ್ಯೆಯಲ್ಲಿ ಶೇ. ೩.೮೪ರಷ್ಟು ಪಾಲನ್ನು ೨೦೦೧ರಲ್ಲಿ ಹೊಂದಿದ್ದರೆ, ೨೦೧೧ರ ಜನಗಣತಿಯ ಪ್ರಕಾರ ಶೇ. ೪.೧೪ರಷ್ಟು ರಾಜ್ಯದ ಜನಸಂಖ್ಯೆಯಲ್ಲಿ ಬಳ್ಳಾರಿ ಜಿಲ್ಲೆಯು ಜನಸಂಖ್ಯೆಯ ಪಾಲನ್ನು ಹೊಂದಿದೆ. ಈ ಕೆಳಗಿನ ಕೋಷ್ಟಕ ೧ರಲ್ಲಿ ಬಳ್ಳಾರಿ ಜಿಲ್ಲೆಯ ತಾಲೂಕುವಾರು ಜನಸಂಖ್ಯೆ ಹಾಗೂ ದಶಕದ ಜನಸಂಖ್ಯೆ ಬೆಳವಣಿಗೆ ದರವನ್ನು ಗಮನಿಸಬಹುದು.

ಕೋಷ್ಟಕ ೧ : ಜನಸಂಖ್ಯೆ ಹಾಗೂ ಬೆಳವಣಿಗೆ ದರ

ತಾಲೂಕುಗಳು	ಜನಸಂಖ್ಯೆ (ಲಕ್ಷಗಳಲ್ಲಿ) (ಜನಸಂಖ್ಯೆ ಶೇಕಡಾವಾರು)		
	೨೦೦೧	೨೦೧೧	೨೦೦೧-೨೦೧೧
ಬಳ್ಳಾರಿ	೬.೨೬	೭.೮೮	೨೫.೮೭
ಹಡಗಲಿ	೧.೬೮	೨.೦೭	೨೩.೨೧
ಹಗರಿಬೊಮ್ಮನಹಳ್ಳಿ	೧.೬೦	೧.೯೮	೨೩.೭೫
ಹೊಸಪೇಟೆ	೩.೭೫	೪.೬೮	೨೪.೮
ಕೂಡ್ಲಿಗಿ	೨.೭೨	೩.೨೨	೧೮.೩೮
ಸಂಡೂರು	೧.೯೧	೨.೭೦	೪೧.೩೬
ಸಿರುಗುಪ್ಪ	೨.೩೫	೨.೭೯	೧೮.೭೨
ಬಳ್ಳಾರಿ ಜಿಲ್ಲೆ	೨೦.೨೭	೨೫.೩೨	೨೪.೯೧
ಕರ್ನಾಟಕ ರಾಜ್ಯ	೫೩೮.೩೦	೬೧೧.೩೦	೧೩.೫೨

ಮೂಲ : ೨೦೦೧ ಹಾಗೂ ೨೦೧೧ರ ಜನಗಣತಿ ಮಾಹಿತಿ

ಜನಸಂಖ್ಯಾಶಾಸ್ತ್ರದ ಪ್ರಕಾರ ಜಿಲ್ಲೆಯ ಜನಸಂಖ್ಯಾ ಗಾತ್ರವನ್ನು ಅವಲೋಕಿಸಿದಾಗ ತಿಳಿದುಬರುವ ಕೋಷ್ಟಕ ೧ರ ಮಾಹಿತಿಯ ಪ್ರಕಾರ ಬಳ್ಳಾರಿ ಜಿಲ್ಲೆಯ ಜನಸಂಖ್ಯಾ ಬೆಳವಣಿಗೆ ದರವನ್ನು ಕಾಣಬಹುದು. ಗಮನಿಸಬಹುದಾದ ಅಂಶವೆಂದರೆ ರಾಜ್ಯದ ಜನಸಂಖ್ಯಾ ಬೆಳವಣಿಗೆ ದರಕ್ಕಿಂತ ಬಳ್ಳಾರಿ ಜಿಲ್ಲೆ ಹಾಗೂ ತಾಲೂಕುಗಳ ಜನಸಂಖ್ಯಾ ಬೆಳವಣಿಗೆ ದರ ಅಧಿಕವಿರುವುದು.

ನಗರೀಕರಣ : ದೇಶವೊಂದರ ಗ್ರಾಮೀಣ-ನಗರ ಅನುಪಾತವು ದೇಶದ ಕೈಗಾರೀಕರಣ ಮಟ್ಟದ ಸೂಚಿಯಾಗಿರುತ್ತದೆ. ಕೈಗಾರಿಕೆಗಳು ಬೆಳೆದಂತೆ ನಗರ ಭಾಗದ ಜನರ ಸಂಖ್ಯೆಯು ಅಧಿಕವಾಗುತ್ತಾ ಹೋಗುತ್ತದೆ. ಜಿಲ್ಲೆಯಲ್ಲಿ ಸ್ಥಾಪಿತವಾದ ಕಾರ್ಖಾನೆಗಳಲ್ಲಿ ಉದ್ಯೋಗವನ್ನರಸಿ ವಲಸೆ ಬಂದ ಜನರು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಹೀಗೆ ಬಳ್ಳಾರಿ ಜಿಲ್ಲೆಯೂ ನಗರೀಕರಣ ಪ್ರಭಾವಕ್ಕೊಳಗಾಗಿದೆ.[೧೬]

ಈ ಕೆಳಗಿನ ಕೋಷ್ಟಕ ೨ರಲ್ಲಿ ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಜನಸಂಖ್ಯೆ ಹಾಗೂ ೨೦೦೧ ಮತ್ತು ಸಾಲಿನ ಅಂದರೆ ಜಿಲ್ಲೆಯಲ್ಲಿ ದಶಕದ ಜನಸಂಖ್ಯಾ ಬೆಳವಣಿಗೆ ದರವನ್ನು ದಾಖಲಿಸಲಾಗಿದೆ.

ಕೋಷ್ಟಕ ೨: ಗ್ರಾಮೀಣ-ನಗರ ಜನಸಂಖ್ಯೆ

ಗ್ರಾಮೀಣ ಜನಸಂಖ್ಯೆ				ನಗರದ ಜನಸಂಖ್ಯೆ		
ತಾಲೂಕು	೨೦೦೧	೨೦೧೧	ಬೆಳವಣಿಗೆ ದರ	೨೦೦೧	೨೦೧೧	ಬೆಳವಣಿಗೆ ದರ
ಬಳ್ಳಾರಿ	೩.೦೮	೩.೭೯	೨೩.೦೫	೩.೧೭	೪.೯೭	೫೬.೭೮
ಹಡಗಲಿ	೧.೪೫	೧.೭೯	೨೩.೪೫	೨೩೪೧೪	೧೭೯೫೮	೧೯.೪೦
ಹಗರಿಬೊಮ್ಮನಹಳ್ಳಿ	೧.೬೦	೧.೯೮	೨೩.೭೫	–	–	–
ಹೊಸಪೇಟೆ	೧.೫೩	೧.೯೭	೨೮.೭೬	೨.೨೧	೨.೭೧	೨೨.೬೨
ಕೂಡ್ಲಿಗಿ	೨.೨೮	೨.೬೯	೧೭.೯೮	೪೪೫೫೦	೫೩೦೧೫	೧೯.೦೦
ಸಂಡೂರು	೧.೬೦	೧.೯೧	೧೯.೩೭	೩೪೧೬೮	೭೯೦೪೩	೧೩೧.೩೪
ಸಿರುಗುಪ್ಪ	೧.೬೯	೨.೦೦	೧೮.೩೪	೬೬೫೦೨	೭೮೭೮೧	೧೮.೪೬
ಬಳ್ಳಾರಿ ಜಿಲ್ಲೆ	೧೩.೨೦	೧೬.೧೩	೨೨.೨	೭.೦೬	೯.೧೯	೨೦.೧೨

ಮೂಲ: ೨೦೦೧ ಹಾಗೂ ೨೦೧೧ರ ಜನಗಣತಿ ಮಾಹಿತಿ

ಕೋಷ್ಟಕ ೨ರಲ್ಲಿ ದಾಖಲಿಸಿದ ಮಾಹಿತಿಯ ಪ್ರಕಾರ ನಗರ ಪ್ರದೇಶಗಳ ಜನಸಂಖ್ಯೆಯಲ್ಲಿ ಏರಿಕೆ ಕಂಡುಬರುತ್ತಿದೆ. ಅದರಲ್ಲೂ ಪ್ರಮುಖವಾಗಿ ಬಳ್ಳಾರಿ ತಾಲೂಕು ಹೊಸಪೇಟೆ, ಸಂಡೂರು ಹಾಗೂ ಬಳ್ಳಾರಿ ಜಿಲ್ಲೆಗಳ ನಗರ ಪ್ರದೇಶಗಳ ಜನಸಂಖ್ಯೆ ಹೆಚ್ಚಳ ಅಧಿಕ ಪ್ರಮಾಣದಲ್ಲಿರುವುದು ಗಮನಾರ್ಹ ಸಂಗತಿಯಾಗಿದೆ.

ನಗರ ಪ್ರದೇಶಗಳಲ್ಲಿ ಉದ್ಯೋಗವನ್ನರಸಿಬಂದ ಜನರ ಸಂಖ್ಯೆಯು ಅಧಿಕವಾಗಿ ಕಂಡುಬರುತ್ತಿದೆ. ಗ್ರಾಮಗಳಲ್ಲಿ ಕೃಷಿಯ ಮೇಲಿನ ಅವಲಂಬನೆ ದಿನೇ ದಿನೇ ಕಡಿಮೆಯಾಗುತ್ತಿರುವುದು ನಗರ ಪ್ರದೇಶಗಳ ವಲಸೆಗೆ ಕಾರಣವಾಗಿದೆ.

೩.೨. ಜಿಲ್ಲೆಯ ಆರ್ಥಿಕ ಹಿನ್ನೆಲೆ

ಬಳ್ಳಾರಿ ಜಿಲ್ಲೆಯನ್ನು ಪ್ರಾದೇಶಿಕವಾಗಿ ಪೂರ್ವ ಮತ್ತು ಪಶ್ಚಿಮ ತಾಲೂಕುಗಳೆಂದು ವಿಂಗಡಿಸಲಾಗಿದೆ. ಸಿರುಗುಪ್ಪ, ಬಳ್ಳಾರಿ, ಹೊಸಪೇಟೆ ಮತ್ತು ಸಂಡೂರು ಪೂರ್ವಾಭಾಗದ ತಾಲೂಕುಗಳಾದರೆ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಮತ್ತು ಹಡಗಲಿ ಪಶ್ಚಿಮ ಭಾಗದ ತಾಲೂಕುಗಳಾಗಿವೆ. ಜಿಲ್ಲೆಯ ಕೃಷಿಗೆ ತುಂಗಭದ್ರಾ ನದಿಯು ಪ್ರಮುಖ ನೀರಾವರಿ ಮೂಲವಾಗಿದೆ. ಆದರೆ ಈ ನದಿಯಿಂದ ಇಡೀ ಜಿಲ್ಲೆಗೆ ನೀರಾವರಿ ಸೌಲಭ್ಯ ದೊರೆತಿಲ್ಲ. ಜಿಲ್ಲೆಯ ಪೂರ್ವಭಾಗದ ತಾಲೂಕುಗಳ ಸೀಮಿತ ಪ್ರದೇಶಗಳಿಗೆ ಮಾತ್ರ ನೀರಾವರಿ ಸೌಲಭ್ಯ ದೊರೆತಿದೆ. ಪಶ್ಚಿಮ ಭಾಗದ ತಾಲೂಕುಗಳು ಸಂಪೂರ್ಣವಾಗಿ ಮಳೆ ಆಶ್ರಯದ ಕೃಷಿಯನ್ನು ಅವಲಂಬಿಸಿವೆ. ಜಿಲ್ಲೆಯ ಬಹುತೇಕ ಜನರು ಕೃಷಿ ಅವಲಂಬಿತ ದುಡಿಯುವ ವರ್ಗದವರಾಗಿದ್ದಾರೆ.

ಭೂಮಿ

೨೦೧೨-೧೩ನೇ ಸಾಲಿನಲ್ಲಿ ಒಟ್ಟು ಭೌಗೋಳಿಕ ವಿಸ್ತೀರ್ಣ ೮.೧೩ ಲಕ್ಷ ಹೆಕ್ಟರುಗಳಲ್ಲಿ ೫.೩೨ ಲಕ್ಷ ಹೆಕ್ಟರುಗಳಷ್ಟು ಬಿತ್ತನೆಯಾಗಿದ್ದು, ಇದರಲ್ಲಿ ಶೇ ೬೫.೪೩ರಷ್ಟು ಬಿತ್ತನೆಯಾಗಿರುತ್ತದೆ. (ಅಂದರೆ ನಿವ್ವಳ

ಬಿತ್ತನೆಯಾದ ಪ್ರದೇಶ ೪.೧೪ಲಕ್ಷ ಹೆಕ್ಟರು). ಒಂದಕ್ಕಿಂತ ಹೆಚ್ಚು ಸಾರಿ ಬಿತ್ತನೆಯಾಗಿರುವ ಪ್ರದೇಶವು ನಿವ್ವಳ ಬಿತ್ತನೆಯಾಗಿರುವ ಪ್ರದೇಶದ ೧.೧೮ಲಕ್ಷ ಹೆಕ್ಟೇರು ಇದ್ದು, ಬಿತ್ತನೆಯಾಗಿರುವ ಪ್ರದೇಶದಲ್ಲಿ ಮುಖ್ಯವಾಗಿ ಜೋಳವನ್ನು ೦.೪೨ ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಭತ್ತ ೧.೧೬ ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ.[೧೭]

೨೦೧೧-೧೨ನೇ ಸಾಲಿನಲ್ಲಿ ಜಿಲ್ಲೆಯ ನೀರಾವರಿಯಾದ ನಿವ್ವಳ ವಿಸ್ತೀರ್ಣ ೧೯೮೦೦೮ ಹೆಕ್ಟೇರುಗಳಾಗಿದ್ದು, ಇದರಲ್ಲಿ ಕಾಲುವೆಗಳಿಂದ ೯೦೭೬೬ ಹೆಕ್ಟೇರು (ಶೇ.೫.೮ರಷ್ಟು) ಗಳಷ್ಟು ಕೆರೆಗಳಿಂದ ೧೪೫೪ ಹೆಕ್ಟೇರು (ಶೇ.೦.೭೩ರಷ್ಟು)ಗಳಷ್ಟು ಬಾವಿಗಳಿಂದ ೩೧೨೨ (ಶೇ.೧.೫೯)ರಷ್ಟು, ಕೊಳವೆ ಬಾವಿಗಳಿಂದ ೬೦೬೦೧ ಹೆಕ್ಟೇರು (ಶೇ.೩೦.೬೦ರಷ್ಟು)ಗಳಷ್ಟು, ಏತ ನೀರಾವರಿಗಳಿಂದ ೩೦೯೨೮ ಹೆಕ್ಟೇರು (ಶೇ.೧೫.೬೨)ರಷ್ಟು ಮತ್ತು ಇತರೇ ಮೂಲಗಳಿಂದ ೧೧೧೩೭ ಹೆಕ್ಟೇರು (ಶೇ.೫.೬೨)ರಷ್ಟು ನೀರಾವರಿಯಾಗಿರುತ್ತದೆ. ಒಟ್ಟು ೪೫೬ ಕಿ.ಮೀ. ಉದ್ದವಾದ ಕಾಲುವೆಗಳು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಇರುತ್ತವೆ. ಬಳ್ಳಾರಿ ತಾಲೂಕಿನಲ್ಲಿ ಶೇ.೧೭ರಷ್ಟು ಇದ್ದು, ಉಳಿದ ತಾಲೂಕುಗಳಾದ ಸಿರುಗುಪ್ಪ ಶೇ.೧೯ರಷ್ಟು, ಹೊಸಪೇಟೆ ಶೇ.೩೫ರಷ್ಟು, ಹಗರಿಬೊಮ್ಮನಹಳ್ಳಿ ಶೇ.೨೮ರಷ್ಟು, ಸಂಡೂರು ಶೇ.೧ರಷ್ಟು ಇರುತ್ತದೆ.

೨೦೧೧-೧೨ನೇ ಸಾಲಿನಲ್ಲಿ ಒಟ್ಟು ಬಿತ್ತನೆಯಾಗಿರುವ ಪ್ರದೇಶ ೫೩೨೦೧೬ಲಕ್ಷ ಹೆಕ್ಟೇರು, ಅದರಲ್ಲಿ ಒಟ್ಟು ಬಿತ್ತನೆಯಾಗಿರುವ ನಿವ್ವಳ ಪ್ರದೇಶದ ಪೈಕಿ ಬಳ್ಳಾರಿ ೧೩೫೮೯೧ಲಕ್ಷ ಹೆಕ್ಟೇರು. ಹಗರಿಬೊಮ್ಮನಹಳ್ಳಿ ೫೬೩೧೬ ಲಕ್ಷ ಹೆಕ್ಟೇರು, ಹೊಸಪೇಟೆ ೪೯೦೩೯ ಲಕ್ಷ ಹೆಕ್ಟೇರು, ಕೂಡ್ಲಿಗಿ ೧೦೯೪೭ ಲಕ್ಷ ಹೆಕ್ಟೇರು, ಸಂಡೂರು ೩೧೫೯ ಲಕ್ಷ ಹೆಕ್ಟೇರು, ಸಿರುಗುಪ್ಪ ೮೧೮೬೩ ಲಕ್ಷ ಹೆಕ್ಟೇರು ಮತ್ತು ಹಡಗಲಿ ೭೫೩೬೧ ಲಕ್ಷ ಹೆಕ್ಟೇರು ಭೂಮಿ ಬಿತ್ತನೆಯಾಗಿದೆ.

ಭೂ ಹಿಡುವಳಿಗಳು : ೨೦೧೦-೧೧ನೇ ಸಾಲಿನ ಕೃಷಿ ಗಣತಿಯ ಪ್ರಕಾರ ಜಿಲ್ಲೆಯಲ್ಲಿ ೨೭೫೧೩೫ ಭೂ-ಹಿಡುವಳಿದಾರರು ೫೩೭೫೨೬ ಹೆಕ್ಟೇರು ವಿಸ್ತೀರ್ಣವನ್ನು ಹೊಂದಿರುತ್ತಾರೆ. ೨೦೧೦-೧೧ನೇ ಸಾಲಿನ ಕೃಷಿ ಗಣತಿಯ ಪ್ರಕಾರ ೧ ಹೆಕ್ಟೇರುಕ್ಕಿಂತ ಕಡಿಮೆ ಇರುವವರ ಸಂಖ್ಯೆ ೧೦,೫೦೪೬ರಷ್ಟು ಇದ್ದಾರೆ. ೧ರಿಂದ ೨ ಹೆಕ್ಟೇರು ಇರುವ ಸಂಖ್ಯೆ ೮೨೨೯. ೨ರಿಂದ ೪ ಹೆಕ್ಟೇರು ಇರುವವರ ಸಂಖ್ಯೆ ೫೬೫೯. ೪ರಿಂದ ೧೦ ಹೆಕ್ಟೇರು ಇರುವವರ ಸಂಖ್ಯೆ ೨೬೭೫೬. ೧೦ಕ್ಕಿಂತ ಹೆಚ್ಚು ಇರುವವರ ಸಂಖ್ಯೆ ೩೯೬೫. ಒಟ್ಟು ೨೭೫೧೩೫ ಲಕ್ಷ ಹಿಡುವಳಿದಾರರು ಬಳ್ಳಾರಿ ಜಿಲ್ಲೆಯಲ್ಲಿದ್ದಾರೆ.[೧೮]

ಉದ್ಯೋಗ : ಬಳ್ಳಾರಿ ಜಿಲ್ಲೆಯಲ್ಲಿರುವ ಜನರು ತಮ್ಮದೇ ಆದಂತಹ ಕಸುಬಿನ ಆಧಾರದ ಮೇಲೆ ಜೀವನವನ್ನು ಸಾಗಿಸುತ್ತಿದ್ದಾರೆ. ೨೦೦೧ ಗಣತಿ ಪ್ರಕಾರ, ಜಿಲ್ಲೆಯಲ್ಲಿ ೯,೨೦,೮೨೧(ಶೇ.೪೫.೬೨)ರಷ್ಟು

ದುಡಿಯುವ ವರ್ಗದವರಿದ್ದು, ಇದರಲ್ಲಿ ೬,೧೨,೬೪೦(ಶೇ.೬೬.೫೩)ರಷ್ಟು ಪ್ರಾಥಮಿಕ ವಲಯವನ್ನು ಅವಲಂಬಿಸಿದ್ದಾರೆ. ಜಿಲ್ಲೆಯಲ್ಲಿ ದುಡಿಯುವ ಜನರಲ್ಲಿ ೩,೫೮,೪೯೮(ಶೇ.೩೮.೯೩)ರಷ್ಟು ಮಹಿಳೆಯರ ಪಾಲು ಇದೆ. ಇವರಲ್ಲಿ ೨,೯೦,೮೨೪(ಶೇ.೪೭.೪೮)ರಷ್ಟು ಪ್ರಾಥಮಿಕ ವಲಯ, ೧೨,೫೩೭(ಶೇ.೩.೫೦)ರಷ್ಟು ದ್ವಿತೀಯ ವಲಯವನ್ನು ಹಾಗೂ ೫೫,೧೩೭(ಶೇ.೧೯.೫೨)ರಷ್ಟು ತೃತೀಯ ವಲಯವನ್ನು ಅವಲಂಬಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಹಿಂದುಳಿದ ಜಿಲ್ಲೆಯಾಗಿದೆ.

ಜಿಲ್ಲೆಯ ಆದಾಯ : ಜಿಲ್ಲೆಯ ಆದಾಯದ ನಿವ್ವಳ ೨೦೦೭-೦೮ನೇ ಸಾಲಿಗೆ ಚಾಲ್ತಿ ಬೆಲೆಗಳಲ್ಲಿ ವಿವಿಧ ಬಾಬ್ತುಗಳಿಂದ ಅಂದರೆ ಕೃಷಿ ಮತ್ತು ಪಶುಸಂಗೋಪನೆಯಿಂದ ೧೨೧೦೯೯ಲಕ್ಷ ರೂಪಾಯಿಗಳು, ಅರಣ್ಯ ಹಾಗೂ ಮರ ಕೆಲಸದಿಂದ ೮೩೮೫ ಲಕ್ಷ ರೂಪಾಯಿಗಳು, ಮೀನುಗಾರಿಕೆಯಿಂದ ೨೪೩೧ ಲಕ್ಷ ರೂಪಾಯಿಗಳು, ಗಣಿ ಮತ್ತು ಕಲ್ಲು ಅಗೆತದಿಂದ ೨೨೧೦೭೦ ಲಕ್ಷ ರೂಪಾಯಿಗಳು, ಒಟ್ಟು ಪ್ರಾಥಮಿಕ ವಲಯದಿಂದ ೩೫೨೯೮೫ ಲಕ್ಷ ರೂಪಾಯಿಗಳು, ತಯಾರಿಕೆಯಿಂದ ೬೮೯೯೮ ಲಕ್ಷ ರೂ.ಗಳು, ನಿರ್ಮಾಣ ಕಾರ್ಯದಿಂದ ೭೮೫೮೭ ಲಕ್ಷ ರೂಪಾಯಿಗಳು, ವಿದ್ಯುಚ್ಛಕ್ತಿ ಅನಿಲ ಮತ್ತು ನೀರು ಸರಬರಾಜುನಿಂದ ೫೧೨೨ ಲಕ್ಷ ರೂಪಾಯಿಗಳು, ಒಟ್ಟು ದ್ವಿತೀಯ ವಲಯದಿಂದ ೧೫೨೭೦೭ ಲಕ್ಷ ರೂಪಾಯಿಗಳು, ರೈಲ್ವೆಯಿಂದ ೪೫೧೮ ಲಕ್ಷ ರೂಪಾಯಿಗಳು, ಇತರೆ ರೀತಿಯ ಸಾರಿಗೆಯಿಂದ ೫೯೫೪೪ ಲಕ್ಷ ರೂಪಾಯಿಗಳು, ದಾಸ್ತಾನುಗಳಿಂದ ೨೬೫ ಲಕ್ಷರೂಗಳು. ಸಂಪರ್ಕದಿಂದ ೭೫೩೬ ಲಕ್ಷ ರೂಪಾಯಿಗಳು, ವ್ಯಾಪಾರ, ವಸತಿ ಮತ್ತು ವಿಮೆಯಿಂದ ೪೯೮೫ ಲಕ್ಷ ರೂ.ಗಳು, ಸ್ಥಿರಾಸ್ಥಿ ವಾಸ ಗೃಹಗಳ ಒಡೆತನ ಮತ್ತು ವ್ಯಾಪಾರ ಸೇವೆಗಳಿಂದ ೫೫೩೭೨ ಲಕ್ಷರೂ.ಗಳು. ಸಾರ್ವಜನಿಕ ಆಡಳಿತದಿಂದ ೧೬೧೫೩ ಲಕ್ಷ ರೂಪಾಯಿಗಳಾಗಿದ್ದು, ಇತರೆ ಸೇವೆಗಳಿಂದ ೫೯೭೮ ಲಕ್ಷ ರೂ.ಗಳು ತೃತೀಯ ವಲಯದಿಂದ ೪೧೪೧೦೭ ಲಕ್ಷ ರೂಪಾಯಿಗಳಾಗಿದ್ದು, ತಲಾ ಆದಾಯ ೪೧೮೫೭ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ರಾಜ್ಯದ ಒಟ್ಟು ಆದಾಯ ೨೧೧೬೬೭೫೨ ಲಕ್ಷ ರೂಪಾಯಿಗಳಲ್ಲಿ ಜಿಲ್ಲೆಯ ಆದಾಯ ೯೧೯೭೯೯ ಲಕ್ಷ ರೂಪಾಯಿಗಳಾಗಿದ್ದು, ಇದು ರಾಜ್ಯದ ಒಟ್ಟು ಆದಾಯಕ್ಕೆ ಹೋಲಿಸಿದರೆ ಶೇ. ೪.೩೪ರಷ್ಟಾಗಿರುತ್ತದೆ.[೧೯]

೩.೩. ಜಿಲ್ಲೆಯ ನೈಸರ್ಗಿಕ ಸಂಪನ್ಮೂಲಗಳು

ತುಂಗಾಭದ್ರಾ ನದಿಯು ನೈಸರ್ಗಿಕ ಮೆರೆಯಾಗಿದ್ದು, ಪಶ್ಚಿಮದಲ್ಲಿ ಕೊಪ್ಪಳ ಜಿಲ್ಲೆಯನ್ನು ಹಾಗೂ ಉತ್ತರದಲ್ಲಿ ರಾಯಚೂರು ಜಿಲ್ಲೆಯನ್ನು ಪ್ರತ್ಯೇಕಿಸುತ್ತದೆ. ಪೂರ್ವದಲ್ಲಿ ಹಗರಿ ನದಿಯು ಹರಿಯುತ್ತದೆ. ಜಿಲ್ಲೆಯ ಪೂರ್ವ ಭಾಗದಲ್ಲಿ ಸಾಮಾನ್ಯವಾಗಿ ಕಪ್ಪು ಮಣ್ಣಿನ ಪ್ರದೇಶ ಹೆಚ್ಚಾಗಿರುತ್ತದೆ. ಸಂಡೂರು ತಾಲೂಕಿನಲ್ಲಿ ಎತ್ತರವಾದ ಗುಡ್ಡಗಳಿದ್ದು, ಅವುಗಳ ಎತ್ತರವು ಸಮುದ್ರ ಮಟ್ಟದಿಂದ ೩೪೦೦ ಅಡಿ ಇರುತ್ತದೆ.

ನೈಸರ್ಗಿಕವಾಗಿ ಖನಿಜ ಸಂಪತ್ತು ಹೇರಳವಾಗಿ ಲಭ್ಯವಿರುವುದರಿಂದ ಬಳ್ಳಾರಿ ಜಿಲ್ಲೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಶ್ರೀಮಂತ ಜಿಲ್ಲೆಯಾಗಿದೆ. ಜಿಲ್ಲೆಯ ಶ್ರೀಮಂತಿಕೆ ಕೇವಲ ಗಣಿ ಮಾಲೀಕರಿಗೆ ಹಾಗೂ ಗಣಿ ಉದ್ಯಮಿಗಳಿಗೆ ಸಮೀತವಾಗಿದೆಯೇ ಹೊರತು, ಜನಸಾಮಾನ್ಯರಿಗೆ ಕನ್ನಡಿಯೊಳಗಿನ ಗಂಟಾಗಿದೆ. ವಿಶ್ವದಲ್ಲೇ ಉತ್ಕೃಷ್ಟ ಗುಣಮಟ್ಟದ ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜ ಅದಿರು ನಿಕ್ಷೇಪಗಳು ಜಿಲ್ಲೆಯಲ್ಲಿವೆ. ಪರಿಣಾಮವಾಗಿ ಜಿಲ್ಲೆಯಲ್ಲಿ ಬೃಹತ್ ಕಂಪನಿಗಳು ಕಬ್ಬಿಣ ಮತ್ತು ಉಕ್ಕು ಉದ್ದಿಮೆ ಮೇಲೆ ಬಂಡವಾಳ ಹೂಡಿವೆ. ಪ್ರಸ್ತುತ ಜಿಲ್ಲೆಯಲ್ಲಿ ಒಟ್ಟು ೨೩ ಸಣ್ಣ ಮತ್ತು ಬೃಹತ್ ಪ್ರಮಾಣದ ಪ್ರಮುಖ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳು ಉತ್ಪಾದನೆಯಲ್ಲಿ ತೊಡಗಿವೆ. ಔದ್ಯೋಗಿಕವಾಗಿ ಜಿಲ್ಲೆ ರಾಜ್ಯದಲ್ಲಿ ೯ನೇ ಸ್ಥಾನದಲ್ಲಿದೆ. ಹೀಗಾಗಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಬಳ್ಳಾರಿ ಜಿಲ್ಲೆಗೆ ವಿಶಿಷ್ಟ ಸ್ಥಾನವಿದೆ. ಈ ಕಾರ್ಖಾನೆಗಳು ಜಿಲ್ಲೆಯ ಪೂರ್ವ ತಾಲೂಕುಗಳಲ್ಲಿ ಮಾತ್ರ ಹೆಚ್ಚಾಗಿ ನೆಲೆಗೊಂಡಿವೆ. ಔದ್ಯೋಗಿಕವಾಗಿ ಪೂರ್ವ ತಾಲೂಕುಗಳು ಅಭಿವೃದ್ಧಿ ಹೊಂದಿದ ಹಾಗೂ ನೀರಾವರಿಯಿಂದ ಸಮೃದ್ಧಿ ತಾಲೂಕುಗಳಾದರೆ, ಪಶ್ಚಿಮ ತಾಲೂಕುಗಳು ಔದ್ಯೋಗಿಕವಾಗಿ ಮತ್ತು ನೀರಾವರಿಯಿಂದಲೂ ವಂಚಿತವಾದ ತಾಲೂಕುಗಳಾಗಿವೆ. ಜಿಲ್ಲೆಯ ಪೂರ್ವಭಾಗದ ತಾಲೂಕುಗಳನ್ನು ಅಭಿವೃದ್ಧಿ ಪ್ರದೇಶಗಳೆಂದು ಹಾಗೂ ಪಶ್ಚಿಮ ಭಾಗದ ತಾಲೂಕುಗಳನ್ನು ಹಿಂದುಳಿದ ಪ್ರದೇಶಗಳೆಂದು ಗುರುತಿಸಲಾಗಿದೆ. ಹೀಗಾಗಿ ಎರಡು ಭಾಗಗಳ ನಡುವೆ ಆರ್ಥಿಕ ಅಸಮಾನತೆ ಕಂಡುಬರುವುದರಿಂದ ಬಳ್ಳಾರಿ ಜಿಲ್ಲೆಯು ಹಿಂದುಳಿದ ಜಿಲ್ಲೆಯಾಗಿದೆ.[೨೦]

ಭೂ ವಿಜ್ಞಾನ : ಜಿಲ್ಲೆಯು ಕರ್ನಾಟಕ ಪ್ರಿಕೇಂಬ್ರಿಯ್ ಭೂ-ಭಾಗವಾಗಿದ್ದು, ಕಲ್ಲು ಮತ್ತು ಬೆಂಚು ಕಲ್ಲುಗಳಿಂದ ಕೂಡಿದೆ. ಪ್ರಮುಖ ಖನಿಜಗಳಾದ ಕಬ್ಬಿಣ ಹಾಗೂ ಮ್ಯಾಂಗನೀಸ್ ಅದಿರುಗಳು ಹೇರಳವಾಗಿ ದೊರೆಯುತ್ತವೆ. ಅತಿ ಹೆಚ್ಚು ಅದಿರು ದೊರೆಯುವ ಪ್ರದೇಶಗಳು ಶೇ.೭೩-೭೫ರಷ್ಟು ಸಂಡೂರು ತಾಲೂಕಿನಲ್ಲಿದ್ದು, ಹೊಸಪೇಟೆಯು ಎರಡನೇ ಸ್ಥಾನದಲ್ಲಿರುತ್ತದೆ.

ಮಣ್ಣಿನ ನಮೂನೆ : ಜಿಲ್ಲೆಯಲ್ಲಿ ಕಪ್ಪು ಮತ್ತು ಕೆಂಪು ಮಣ್ಣಿನ ನಮೂನೆಗಳಿವೆ. ಬಳ್ಳಾರಿ ತಾಲೂಕು ಒಂದರಲ್ಲಿ ಕಪ್ಪು ಮಣ್ಣಿನ ಪ್ರದೇಶ ಹೆಚ್ಚಾಗಿದೆ. ಕಪ್ಪು ಮಣ್ಣು ಮೂಲದಲ್ಲಿ ಫಲವತ್ತಾಗಿದ್ದು, ಹೆಚ್ಚಿನ ನೀರಿನ ಅಂಶಗಳನ್ನು ಹಿಡಿದುಕೊಳ್ಳುವ ಗುಣವನ್ನು ಹೊಂದಿದೆ. ಈ ಕಪ್ಪು ಮಣ್ಣು ಶೇ ೬೦ರಷ್ಟು ಜೇಡಿ ಮಣ್ಣಿನಿಂದ ಕೂಡಿರುತ್ತದೆ. ಹೊಸಪೇಟೆ, ಹಡಗಲಿ, ಕೂಡ್ಲಿಗಿ ಮತ್ತು ಸಂಡೂರು ತಾಲೂಕುಗಳಲ್ಲಿ ಉಸುಗು (ಮರಳು)ಮಿಶ್ರಿತ ಕೆಂಪು ಮಣ್ಣು, ಜಿಗಿಟು ಮಣ್ಣು ದೊರೆಯುತ್ತದೆ. ತುಂಗಭದ್ರಾ ಜಲಾಶಯದಲ್ಲಿನ ಕಪ್ಪು ಮಣ್ಣಿನಲ್ಲಿ ೨ ರಿಂದ ೪ ಅಡಿಗಳವರೆಗೆ ಆಳವಾಗಿಯು ಹಾಗೂ ಮಣ್ಣಿನ ರಚನೆಯಲ್ಲಿ ಭಾರವಾಗಿಯೂ ಮತ್ತು ಶೇ.೪೫ರಿಂದ ೫೫ರಷ್ಟು ಜಿಗುಟು ಮಣ್ಣಿನಿಂದ ಕೂಡಿರುತ್ತದೆ. ಭೂಗರ್ಭದಲ್ಲಿ ನೀರು ೬.೫ ಮೀ ರಿಂದ ೩೫ ಮೀ.ಗಳವರೆಗೆ ಇರುತ್ತದೆ.

ನದಿಗಳು : ಜಿಲ್ಲೆಯ ಮುಖ್ಯವಾದ ನದಿ ತುಂಗಭದ್ರಾ, ಇದರ ಉಪನದಿಗಳು ಹಗರಿ ಮತ್ತು ಚಿಕ್ಕಹಗರಿ. ತುಂಗಭದ್ರಾ ನದಿಯು ಪಶ್ಚಿಮ ಮತ್ತು ಉತ್ತರ ದಿಕ್ಕಿನಲ್ಲಿ ಹರಿಯುತ್ತಿದ್ದು, ವರ್ಷದಲ್ಲಿ ಸದಾಕಾಲ ನೀರಿನಿಂದ ಕೂಡಿರುತ್ತದೆ. ಈ ನದಿಯು ಹಡಗಲಿ ತಾಲೂಕಿನಲ್ಲಿ ಕುರುವತ್ತಿ ಗ್ರಾಮದಲ್ಲಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಇದರ ನೀರು ಕುಡಿಯಲು ರುಚಿಯಾಗಿರುತ್ತದೆ. "ಗಂಗಾಸ್ಥಾನ ತುಂಗಾಪಾನ" ಎಂಬ ನಾಣ್ಣುಡಿಯನ್ನು ಸ್ಮರಣೆಗೆ ತಂದುಕೊಡುತ್ತದೆ. ಆದರೆ ಚಿಕ್ಕಹಗರಿ ಮತ್ತು ದೊಡ್ಡಹಗರಿ ನದಿಗಳಲ್ಲಿ ನೀರು ವರ್ಷದಲ್ಲಿ ಕೇವಲ ಕೆಲವು ಕಾಲ ಮಾತ್ರ ಇರುತ್ತದೆ. ನಾರಿಹಳ್ಳ ಜಲಾಶಯವು ಸಂಡೂರು ತಾಲೂಕಿನಲ್ಲಿದ್ದು, ತಾರಾನಗರ ಗ್ರಾಮದ ಹತ್ತಿರ ಹಳ್ಳಕ್ಕೆ ಒಡ್ಡು ಹಾಕಿ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಇದೇ ರೀತಿ ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಮಾಲ್ವಿ ಎಂಬ ಗ್ರಾಮದ ಹತ್ತಿರ ಚಿಕ್ಕಹಗರಿ ನದಿಗೆ ಆಣೆಕಟ್ಟು ಕಟ್ಟಿ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ.

ಹವಾಮಾನ : ಜಿಲ್ಲೆಯ ಹವಾಮಾನವು ವರ್ಷದಲ್ಲಿ ಹೆಚ್ಚಿನ ಭಾಗ ಶುಲ್ಕವಾಗಿದ್ದು, ಬೇಸಿಗೆಯ ಉಷ್ಣಾಂಶಗಳಿಂದ ಕೂಡಿರುತ್ತದೆ. ಡಿಸೆಂಬರ್ ತಿಂಗಳಿನಿಂದ ಫೆಬ್ರವರಿಯವರೆಗೆ ವಾತಾವರಣ ತಂಪಾಗಿರುತ್ತದೆ. ಚಳಿಗಾಲದಲ್ಲಿ ಕನಿಷ್ಟ ಉಷ್ಣಾಂಶವು ೯-೧೦ಸೆ ಇದ್ದು, ಗರಿಷ್ಟ ಉಷ್ಣಾಂಶವು ೩೫ ಸೆ ವರೆಗೆ ಇರುತ್ತದೆ. ಬೇಸಿಗೆ ಕಾಲವು ಮಾರ್ಚ್‌ನಿಂದ ಮೇ ತಿಂಗಳವರೆಗೆ ಇದ್ದು, ರಾಜ್ಯದಲ್ಲಿಯೇ ಹೆಚ್ಚು ಉಷ್ಣಾಂಶದಿಂದ ಕೂಡಿರುತ್ತದೆ. ಬೇಸಿಗೆಯಲ್ಲಿ ಕನಿಷ್ಟ ೧೫ರಿಂದ ೪೪ ಸೆಂ ವರೆಗೆ ಉಷ್ಣಾಂಶವು ಇರುತ್ತದೆ.[೨೧]

ಮಳೆ : ಜಿಲ್ಲೆಯಲ್ಲಿ ಒಟ್ಟು ೪೪ ಮಳೆ ಮಾಪನ ಕೇಂದ್ರಗಳಿದ್ದು, ಇದರಲ್ಲಿ ೪೧ ಮಳೆಮಾಪನ ಕೇಂದ್ರಗಳು ಕಾರ್ಯನಿರ್ವಹಿಸುತ್ತವೆ. ೨೦೧೧ ಡಿಸೆಂಬರ್ ಅಂತ್ಯಕ್ಕೆ ವಾಸ್ತವವಾಗಿ ಸರಾಸರಿ ಮಳೆ ೪೧೯.೬ಮಿ.ಮೀ ಆಗಿರುತ್ತದೆ. ಜಿಲ್ಲೆಯ ವಾಡಿಕೆ ಮಳೆ ೬೨೬.೮ಮಿ.ಮೀ ಇರುತ್ತದೆ. ಮಳೆಯು ಕನಿಷ್ಟ ಪ್ರಮಾಣದಲ್ಲಿ ಸಿರುಗುಪ್ಪ ತಾಲೂಕಿನಲ್ಲಿ ೨೩೧.೬ಮಿ.ಮೀ. ಹಾಗೂ ಗರಿಷ್ಟ ಪ್ರಮಾಣದಲ್ಲಿ ಸಂಡೂರು ತಾಲೂಕಿನಲ್ಲಿ ೬೨೫.೨ ಮಿ.ಮೀ. ಮಳೆ ಆಗಿರುತ್ತದೆ.[೨೨]

ಬಳ್ಳಾರಿ ಜಿಲ್ಲೆಯ ಗಣಿಗಾರಿಕೆಯಲ್ಲಿ ಹೇರಳ ಪ್ರಮಾಣದಲ್ಲಿ ದೊರೆಯುವ ಮ್ಯಾಂಗನೀಸ್, ಕಬ್ಬಿಣ, ಅದಿರು ನಿಕ್ಷೇಪಗಳ ಉದ್ಯಮವು ರಾಜ್ಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದು ನಿಂತಿದ್ದು, ಜನಸಮುದಾಯದ ಆರೋಗ್ಯಕರ ಬದುಕಿನ ನೆಲೆಯಿಂದ ತುಂಬಾ ಆತಂಕಕಾರಿಯಾದ ವಿಷಯವಾಗಿ ಹಲವಾರು ಸ್ಥಿತ್ಯಂತರಗಳಿಗೆ ಕಾರಣವಾಗಿದೆ. ತುಂಗಭದ್ರಾ ಆಣೆಕಟ್ಟಿನ ಜಲವಿದ್ಯುತ್ ಸ್ಥಾವರಗಳು, ಕಾಲುವೆಗಳ ನೀರಾವರಿ ವ್ಯವಸ್ಥೆಯು ರೈತರ ಭೂಮಿಯನ್ನು ಹಸಿರಾಗಿಸಿದರೂ ಕಾರ್ಖಾನೆಗಳು ಉಂಟುಮಾಡುವ ಸಮಸ್ಯೆಗಳ ಸ್ವರೂಪವು ಕೂಡ ತುಂಬಾ ಸಂಕೀರ್ಣವಾಗಿ ಬೆಳೆದಿದೆ. ಗಣಿಗಾರಿಕೆ ಮತ್ತು ನೀರಿನ ಉತ್ಪಾದನೆಗಳು ರೈತ, ಕೂಲಿಕಾರ್ಮಿಕರನ್ನು ಅಭಿವೃದ್ಧಿಯೆಡೆಗೆ ಕರೆದುಕೊಂಡು ಹೋಗುವ

ನೆಲೆಗಿಂತ ಹೆಚ್ಚಾಗಿ ಬಂಡವಾಳಶಾಹಿಯನ್ನು, ಮಾಧ್ಯಮ ದಲ್ಲಾಳಿ ವ್ಯಾಪಾರೀಕರಣವನ್ನು ಬಲಪಡಿಸುವ ಸಾಮ್ರಾಜ್ಯಶಾಹಿಯನ್ನು ಪೋಷಿಸುವ ಸ್ವರೂಪವನ್ನು ಕೂಡ ಮರೆಮಾಚುವ ಹಾಗಿಲ್ಲ[೨೩]

೩.೪. ಸಾಮಾಜಿಕ ಹಿನ್ನೆಲೆ

ಜಿಲ್ಲೆಯು ೮೪೫೦ ಚ.ಕೀ.ಮೀ. ವಿಸ್ತೀರ್ಣ ಹೊಂದಿದೆ. ರಾಜ್ಯ ಒಟ್ಟು ಶೇ.೬ರಷ್ಟು ವಿಸ್ತೀರ್ಣವನ್ನು ಹೊಂದಿದ್ದು, ೧೧ನೇ ಸ್ಥಾನದಲ್ಲಿದೆ. ೨೦೧೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ೨೪೫೨೫೯೫ರಷ್ಟು ಜನಸಂಖ್ಯೆ ಇದ್ದು, ಇದರಲ್ಲಿ ೧೨೩೬೯೫೪ (ಶೇ.೫೦.೪೩)ರಷ್ಟು ಪುರುಷರು ಹಾಗೂ ೧೨೧೫೬೪೧ (ಶೇ.೪೯.೫೭)ರಷ್ಟು ಮಹಿಳೆಯರು ಇದ್ದಾರೆ.[೨೪] ಗ್ರಾಮಾಂತರ ಪ್ರದೇಶದಲ್ಲಿ ೧೬೧೩೦೩೮ (ಶೇ.೬೪)ರಷ್ಟು ಮತ್ತು ನಗರ ಪ್ರದೇಶದಲ್ಲಿ ೯೧೯೩೪೫ (ಶೇ.೩೫)ರಷ್ಟು ಜನ ವಾಸಿಸುತ್ತಿದ್ದಾರೆ. ರಾಜ್ಯದ ಜನಸಂಖ್ಯೆಯಲ್ಲಿ ಜಿಲ್ಲೆಯು ಶೇ ೪.೧೪ರಷ್ಟು ಪಾಲನ್ನು ಹೊಂದಿದೆ.[೨೫] ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ೫೧೭,೪೮೯ (ಶೇ.೨೧.೧೦)ರಷ್ಟು ಪರಿಶಿಷ್ಟ ಜಾತಿ ಮತ್ತು ೪೫೧.೪೦೬ (ಶೇ.೧೮.೪೧)ರಷ್ಟು ಪರಿಶಿಷ್ಟ ಪಂಗಡದವರಿದ್ದಾರೆ. ಈ ಪ್ರಮಾಣವು ಕರ್ನಾಟಕ ರಾಜ್ಯಕ್ಕೆ ಹೋಲಿಸಿದರೆ (ಶೇ.೨೪ರಷ್ಟು), ಬಳ್ಳಾರಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯು ಗಮನಾರ್ಹವಾಗಿ ಹೆಚ್ಚು ಇದೆ.[೨೬]

೨೦೧೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ೧೦೦೦ ಪುರುಷರಿಗೆ ೯೭೮ ಮಹಿಳೆಯರು ಇದ್ದಾರೆ. ರಾಜ್ಯದಲ್ಲಿ ಪ್ರತಿಸಾವಿರ ಪುರುಷರಿಗೆ ೯೬೮ ಸ್ತ್ರೀಯರಿದ್ದಾರೆ. ಈ ಪ್ರಮಾಣವನ್ನು ರಾಜ್ಯಕ್ಕೆ ಹೋಲಿಸಿದರೆ ಶೇ.೫ರಷ್ಟು ಹೆಚ್ಚಾಗಿದೆ. ೧೯೯೧ ಮತ್ತು ೨೦೦೧ರಲ್ಲಿ ಜಿಲ್ಲೆಯ ಜನಸಂಖ್ಯೆ ಬೆಳವಣಿಗೆ ದರ ಶೇ.೨೧.೧೫ ಮತ್ತು ಶೇ.೨೧.೪೦ರಷ್ಟು ಇತ್ತು. ೨೦೧೧ರ ಗಣತಿ ಪ್ರಕಾರ ಶೇ.೨೪.೯೦ರಷ್ಟು ದಶಕದ ಬೆಳವಣಿಗೆಯಾಗಿದೆ. ಜಿಲ್ಲೆಯ ಬೆಳವಣಿಗೆಯ ದರವನ್ನು ಕಳೆದ ದಶಕಕ್ಕೆ ಹೋಲಿಸಿದರೆ ಶೇ.೩.೫ರಷ್ಟು ಹೆಚ್ಚಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಪ್ರತಿ ಚ.ಕಿ.ಮೀಟರ್‌ಗೆ ಜನಸಂಖ್ಯೆ ೨೯೯ರಷ್ಟಿದೆ. ಇದಕ್ಕೆ ಕಾರಣ ಜಿಲ್ಲೆಯಲ್ಲಿ ನಡೆಯುವ ಗಣಿಗಾರಿಕೆಯಾಗಿರಬಹುದು. ೨೦೦೧ರಂತೆ ಜನಸಾಂದ್ರತೆಯಲ್ಲಿ ಜಿಲ್ಲೆಯು ೧೩ನೇ ಸ್ಥಾನದಲ್ಲಿದೆ.

ಬಳ್ಳಾರಿ ಜಿಲ್ಲೆಯಲ್ಲಿ ವಿವಿಧ ಜಾತಿ, ಧರ್ಮ ಮತ್ತು ವರ್ಗಗಳಿಂದ ಕೂಡಿದೆ. ಜಿಲ್ಲೆಯಲ್ಲಿ ಮುಖ್ಯವಾಗಿ ಲಿಂಗಾಯತ, ವಾಲ್ಮೀಕಿ, ಮುಸ್ಲಿಂ, ಕುರುಬ, ಕಮ್ಮ ಮತ್ತು ರೆಡ್ಡಿ ಈ ಆರು ಸಮುದಾಯಗಳು ದೊಡ್ಡ ಸಂಖ್ಯೆಯಲ್ಲಿವೆ. ಪರಿಶಿಷ್ಟ ಜಾತಿ ಸಮುದಾಯವನ್ನು ಇಡಿಯಾಗಿ ಪರಿಗಣಿಸಿದಾಗ ಇದು ಈ ಮೇಲಿನ ಸಮುದಾಯಗಳಿಗೆ ಸಮ ಆಗುತ್ತದೆ. ಆದರೆ ಪರಿಶಿಷ್ಟ ಜಾತಿಯಲ್ಲಿ ಹಲವಾರು ಜಾತಿಗಳು ಸೇರಿರುವುದರಿಂದ ಇವುಗಳನ್ನು ಬಿಡಿಬಿಡಿಯಾಗಿ ನೋಡಿದಾಗ ಇದು ಬಲಿಷ್ಟ ಸಮುದಾಯವಾಗಿ ಕಂಡುಬರುವುದಿಲ್ಲ.

೨೦೧೧ರ ಜನಗಣತಿಯ ಪ್ರಕಾರ, ರಾಜ್ಯದಲ್ಲಿ ಸಾಕ್ಷರತೆ ಪ್ರಮಾಣ ಶೇ.೭೫.೬೦ರಷ್ಟಿದ್ದು, ಇದರಲ್ಲಿ ಶೇ.೮೨.೮೫ರಷ್ಟು ಪುರುಷರು ಮತ್ತು ಶೇ.೬೮.೧೩ರಷ್ಟು ಮಹಿಳಾ ಸಾಕ್ಷರತೆ ದರ ಇದೆ. ಬಳ್ಳಾರಿ ಜಿಲ್ಲೆಯಲ್ಲಿ ಸಾಕ್ಷರತೆ ಪ್ರಮಾಣ ಶೇ.೬೭.೪೩ರಷ್ಟಿದ್ದು, ಇದರಲ್ಲಿ ಪುರುಷರ ಸಾಕ್ಷರತೆ ದರ ಶೇ.೭೭.೨೪ರಷ್ಟಿದ್ದು, ಶೇ.೫೮.೦೯ರಷ್ಟು ಮಹಿಳೆಯ ಸಾಕ್ಷರತಾ ದರವಿದೆ. ರಾಜ್ಯದ ಸಾಕ್ಷರತಾ ದರಕ್ಕೆ ಹೋಲಿಸಿದರೆ ಜಿಲ್ಲೆಯಲ್ಲಿ ಶೇ.೭.೫೫ರಷ್ಟು ಕಡಿಮೆ ಹಾಗೂ ಪುರುಷ ಮತ್ತು ಮಹಿಳಾ ಸಾಕ್ಷರತೆ ಪ್ರಮಾಣದಲ್ಲಿ ಕ್ರಮವಾಗಿ ಶೇ.೫.೬೧ರಷ್ಟು ಹಾಗೂ ಶೇ.೯.೮೫ರಷ್ಟು ಕಡಿಮೆ ಇದೆ. ರಾಜ್ಯದ ಸಾಕ್ಷರತೆ ಬೆಳವಣಿಗೆಯಲ್ಲಿ ಬಳ್ಳಾರಿ ಜಿಲ್ಲೆಯು ೨೪ನೇ ಸ್ಥಾನದಲ್ಲಿದೆ.[೨೭] ಹೀಗಾಗಿ ಸಾಕ್ಷರತೆ ಬೆಳವಣಿಗೆಯಲ್ಲಿ ಬಳ್ಳಾರಿ ಜಿಲ್ಲೆ ರಾಜ್ಯದಲ್ಲಿ ಒಂದು ಹಿಂದುಳಿದ ಜಿಲ್ಲೆಯಾಗಿದೆ.

೩.೫. ಜಿಲ್ಲೆಯ ರಾಜಕೀಯ ಹಿನ್ನೆಲೆ

ಬಳ್ಳಾರಿ ಜಿಲ್ಲೆಯು ಆಡಳಿತಾತ್ಮಕವಾಗಿ ಎರಡು ಉಪವಿಭಾಗಗಳನ್ನು ಹೊಂದಿದೆ. ಒಂದು, ಬಳ್ಳಾರಿ ವಿಭಾಗ. ಇದು ಮೂರು (ಬಳ್ಳಾರಿ ಗ್ರಾಮೀಣ, ಸಿರುಗುಪ್ಪ ಮತ್ತು ಸಂಡೂರು) ತಾಲೂಕುಗಳನ್ನು ಹೊಂದಿದೆ. ಎರಡು, ಹೊಸಪೇಟೆ ವಿಭಾಗ. ಇದು ನಾಲ್ಕು (ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ ಹಾಗೂ ಹಡಗಲಿ) ತಾಲೂಕುಗಳನ್ನು ಹೊಂದಿದೆ. ಬಳ್ಳಾರಿ ಜಿಲ್ಲೆಯು ಒಂದು ಲೋಕಸಭಾ ಕ್ಷೇತ್ರವನ್ನು ಹಾಗೂ ಒಂಭತ್ತು ವಿಧಾನಸಬಾ ಕ್ಷೇತ್ರಗಳನ್ನು ಹೊಂದಿದೆ. ೨೦೦೮ ಫೆಬ್ರವರಿ ತಿಂಗಳಲ್ಲಿ ತಿದ್ದುಪಡಿಯೊಂದಿಗೆ ಜಾರಿಗೆ ಬಂದ ೧೯೭೨ರ ಡಿಲಿಮಟೇಷನ್ ಕಾಯಿದೆಯು ನೂತನವಾಗಿ ರಾಜ್ಯದ ರಾಜಕೀಯ ಭೂಪಟವನ್ನು ಬದಲಾಗಿಸಿದೆ. ೨೦೦೮ರ ಮೊದಲು ಜಿಲ್ಲೆಯ ಹೊಸಪೇಟೆ ತಾಲೂಕು ನೆರೆ ಜಿಲ್ಲೆ ಕೊಪ್ಪಳ ಲೋಕಸಭಾ ಕ್ಷೇತ್ರಕ್ಕೆ ಸೇರಿತ್ತು. ಇಂದು ಇದು ಬಳ್ಳಾರಿ ಲೋಕಸಭಾ ಕ್ಷೇತ್ರಕ್ಕೆ ಸೇರ್ಪಡೆಗೊಂಡಿದೆ. ಬಳ್ಳಾರಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟ ಸಿರುಗುಪ್ಪ ವಿಧಾನಸಭೆ ಕ್ಷೇತ್ರವು ಕೊಪ್ಪಳ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ.[೨೮] ರಾಜ್ಯ ರಾಜಕೀಯದಲ್ಲಿ ಬಳ್ಳಾರಿ ಜಿಲ್ಲೆಗೆ ವಿಶೇಷ ಸ್ಥಾನಮಾನವಿದೆ. ಸ್ವಾತಂತ್ರ್ಯ ನಂತರ ನಡೆದ ಎಲ್ಲಾ ಲೋಕಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲುತ್ತಾ ಬಂದಿದೆ. ಇದೊಂದು ಐತಿಹಾಸಿಕ ದಾಖಲೆಯಾಗಿದೆ.[೨೯] ಇತ್ತೀಚಿನ ಕೆಲವು ವರ್ಷಗಳಿಂದ ಬಳ್ಳಾರಿ ಜಿಲ್ಲೆ ರಾಜ್ಯದ ರಾಜಕೀಯವನ್ನು ನಿರ್ಣಯಿಸುವ ಶಕ್ತಿಯೆನ್ನುವ ಚಿತ್ರಣ ಪಡೆದಿದೆ ಎನ್ನಲಾಗುತ್ತಿದೆ. ಕಳೆದೆರಡು ಲೋಕಸಭಾ ಚುನಾವಣೆಯಲ್ಲಿ ಮತ್ತು ಕಳೆದ ವಿಧಾನಸಭೆ ಚನಾವಣೆಯಲ್ಲಿ ಒಂಭತ್ತು ವಿಧಾನಸಭಾ ಸ್ಥಾನಗಳಲ್ಲಿ ಒಂದನ್ನು ಹೊರತುಪಡಿಸಿ, ಎಲ್ಲಾ ಎಂಟು ಸ್ಥಾನಗಳನ್ನು ಭಾರತೀಯ ಜನತಾ ಪಕ್ಷ ಗೆದ್ದುಕೊಂಡಿರುವುದು ಇದಕ್ಕೆ ಸಾಕ್ಷಿಯಾಗಿದೆ. ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ಇದೊಂದು ಐತಿಹಾಸಿಕ ದಾಖಲೆಯಾಗಿದೆ. ಈ ಬದಲಾವಣೆಗೆ ಪ್ರಮುಖವಾಗಿ ಎರಡು ಕಾರಣಗಳನ್ನು ಗುರುತಿಸಲಾಗಿದೆ. ಒಂದು, ಸಂಸತ್ತು ಹಾಗೂ ವಿಧಾನಸಭಾ ಕ್ಷೇತ್ರ ಮರು ವಿಂಗಡನೆಯ ಪರಿಣಾಮವಾಗಿ

ರಾಜ್ಯದ ರಾಜಕೀಯ ಸಮೀಕರಣ ಬದಲಾಗುವುದರಲ್ಲಿ ಮಹತ್ವದ ಪಾತ್ರವಹಿಸಿದೆ. ಬಳ್ಳಾರಿ ಜಿಲ್ಲೆಯ ಒಂಭತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ಕೇವಲ ಎರಡನ್ನು ಬಿಟ್ಟು ಉಳಿದ ಏಳು ಕ್ಷೇತ್ರಗಳಲ್ಲಿ ಐದು ಪರಿಶಿಷ್ಟ ಪಂಗಡ ಮತ್ತು ಎರಡು ಪರಿಶಿಷ್ಟ ಜಾತಿಗಳ ಮೀಸಲಾತಿ ಕ್ಷೇತ್ರಗಳಾಗಿ ವಿಂಗಡನೆಗೊಂಡಿವೆ. ಕ್ಷೇತ್ರ ಮರುವಿಂಗಡನೆಯಿಂದಾಗಿ ಜಿಲ್ಲೆಯ ದೊಡ್ಡ ಸಮುದಾಯಗಳಿಗೆ ರಾಜಕೀಯ ಪ್ರಾತಿನಿಧ್ಯ ದೊರೆತಂತಾಗಿದೆ. ಆದರೆ ಜನಸಾಮಾನ್ಯರಿಗೆ ರಾಜಕೀಯ ಪ್ರಾತಿನಿತ್ಯ ಸಿಗದಂತಹ ಪರಿಸ್ಥಿತಿ ಜಿಲ್ಲೆಯಲ್ಲಿ ನಿರ್ಮಾಣವಾಗಿದೆ. ಎರಡು ಜಿಲ್ಲೆಯ ಸಂಪತ್ತು ಹಾಗೂ ವಿಧಾನಸಭಾ ಕ್ಷೇತ್ರಗಳಿಗೆ ಗಣಿ ಉದ್ಯಮಿಗಳ ನೇರ ಸ್ಪರ್ಧೆ. ಜಿಲ್ಲೆಯ ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ಗಣಿ ಉದ್ಯಮಿಗಳು ಅಥವಾ ಅವರ ಸಂಬಂಧಿಗಳು ಚುನಾವಣೆಯಲ್ಲಿ ನೇರವಾಗಿ ಸ್ಪರ್ಧಿಸಿದ್ದು, ಸಾಕಷ್ಟು ಪ್ರಮಾಣದಲ್ಲಿ ಹಣ ವೆಚ್ಚ ಮಾಡಿದ್ದರ ಪರಿಣಾಮವಾಗಿ ಜಿಲ್ಲೆಯ ದೊಡ್ಡ ಸಂಖ್ಯೆಯಲ್ಲಿರುವ ಸಮುದಾಯಗಳು ಪಕ್ಷ ಬದಲಾಯಿಸುವುದಕ್ಕೆ ಕಾರಣವಾಗಿದೆ. ೨೦೧೩ರ ಸಾರ್ವತ್ರಿಕ ಚುನಾವಣೆಯಲ್ಲಿ ಬಳ್ಳಾರಿ ಜಿಲ್ಲೆಯ ಒಂಭತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ನಾಲ್ಕು ಸ್ಥಾನಗಳನ್ನು, ಬಿ.ಎಸ್.ಆರ್. ಕಾಂಗ್ರೆಸ್ ಎರಡು ಸ್ಥಾನಗಳನ್ನು, ಬಿ.ಜೆ.ಪಿ, ಜೆ.ಡಿ.ಎಸ್. ತಲಾ ಒಂದೊಂದು ಸ್ಥಾನಗಳನ್ನು ಹಾಗೂ ಪಕ್ಷೇತರ ಒಂದು ಸ್ಥಾನವನ್ನು ಪಡೆದುಕೊಂಡಿವೆ.[೩೦]

೩.೬. ಹೊಸಪೇಟೆ ತಾಲೂಕಿನ ಪರಿಚಯ

ಅಧ್ಯಯನ ಕ್ಷೇತ್ರದ ಜಿಲ್ಲೆಯ ನಂತರ ತಾಲೂಕಿನ ಪರಿಚಯವನ್ನು ಅಂಕಿ-ಅಂಶಗಳೊಂದಿಗೆ ವಿವರಿಸಲಾಗಿದೆ. ಹೊಸಪೇಟೆ ಬಳ್ಳಾರಿ ಜಿಲ್ಲೆಯ ಉತ್ತರ ಭಾಗದಲ್ಲಿ ಬರುವ ತಾಲೂಕಾಗಿದೆ. ಜಿಲ್ಲೆಯ ಆಡಳಿತದ ಉಪವಿಭಾಗವೂ ಆಗಿದೆ. ಹೊಸಪೇಟೆ ತಾಲೂಕು ನೈಸರ್ಗಿಕ ಸಂಪತ್ತು, ಹೆಚ್ಚಿನ ನೀರಾವರಿಯ ಸೌಲಭ್ಯ, ಫಲವತ್ತಾದ ಕೃಷಿಭೂಮಿ ಹೊಂದಿರುವ ಹಾಗೂ ಗಣಿಗಾರಿಕೆ, ಕಾರ್ಖಾನೆಗಳು, ವಾಣಿಜ್ಯ ಉದ್ದಿಮೆಗಳು, ಮಾರುಕಟ್ಟೆ, ಶಿಕ್ಷಣ, ವೈದ್ಯಕೀಯ, ಸಾರಿಗೆ ಸಂಪರ್ಕ ಮುಂತಾದ ಸೌಲಭ್ಯಗಳನ್ನು ಅಧಿಕವಾಗಿ ಪಡೆದ ತಾಲೂಕಾಗಿದೆ. ಈ ಸೌಲಭ್ಯಗಳನ್ನು ಪಡೆದ ತಾಲೂಕುಗಳಿಗೆ ಹೋಲಿಸಿದರೆ ಹೊಸಪೇಟೆ ತಾಲೂಕು ಜಿಲ್ಲೆಯಲ್ಲಿ ಅಭಿವೃದ್ಧಿ ಹೊಂದಿದ ತಾಲೂಕು ಎಂದು ಗುರುತಿಸಬಹುದು. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಹೊಸಪೇಟೆ ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಚಾರಿತ್ರಿಕ ಹಿನ್ನೆಲೆ : ಹೊಸಪೇಟೆ ತಾಲ್ಲೂಕು ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಹೊಂದಿದೆ. ರಾಮಾಯಣ ಮತ್ತು ಮಹಾಭಾರತದ ಮಹಾಕಾವ್ಯಗಳಲ್ಲಿ ಹೊಸಪೇಟೆ ಪರಿಸರದ ಬಗ್ಗೆ ಉಲ್ಲೇಖವಿರುವುದು ಕಂಡುಬರುತ್ತದೆ.[೩೧] ಹಾಗೂ ಹಂಪಿ ಪರಿಸರದಲ್ಲಿ ಬರುವ ಹೇಮಕೂಟ, ಮಾಲ್ಯವಂತ, ಮಾತಂಗ, ಋಷ್ಯಮೂಕ ಮತ್ತು ಕಿಷ್ಕಿಂದೆ ಎಂಬ ಐದು ಪರ್ವತಗಳು ಹಾಗೂ ಪಂಪಾಸರೋವರ, ಶಬರಿ ಆಶ್ರಮ, ಆಂಜನೇಯನ ಜನ್ಮಸ್ಥಳಗಳು ಈ ಮಹಾಕಾವ್ಯಗಳಲ್ಲಿ ಉಲ್ಲೇಖವಿರುವುದು ಕಂಡುಬರುತ್ತದೆ.[೩೨] ಕಿಷ್ಕಿಂದೆ, ಪಂಪಾಸರೋವರ, ಶಬರಿ ಆಶ್ರಮ ಹಾಗೂ ಆಂಜನೇಯ ಜನ್ಮಸ್ಥಳಗಳನ್ನು ಹೊರತುಪಡಿಸಿ

ಉಳಿದ ಈ ಪ್ರದೇಶಗಳು ಹೊಸಪೇಟೆ ತಾಲೂಕು ವ್ಯಾಪ್ತಿಗೆ ಒಳಪಟ್ಟಿವೆ. ರಾಮಾಯಣ ಮಹಾಕಾವ್ಯದಲ್ಲಿ ಬರುವ ವಾನರರು ಇಂದಿನ ಹಂಪಿ ಪರಿಸರದ ಕಿಷ್ಕಿಂದೆ ಪ್ರದೇಶದಲ್ಲಿ ವಾಸಿಸುತ್ತಿದ್ದರು ಎಂದು ಹೇಳಲಾಗಿದೆ.[೩೩] ಹೊಸಪೇಟೆ ಪರಿಸರವು ಆದಿ ಹಳೆ ಶಿಲಾಯುಗ ಕಾಲದಿಂದಲೂ ಮಾನವನ ಚಟುವಟಿಕೆಗಳನ್ನು ಗುರುತಿಸಲಾಗಿದೆ. ಅದರಲ್ಲೂ ಬಳ್ಳಾರಿ ಜಿಲ್ಲೆ, ಆಗಿನ ಮದ್ರಾಸ್ ಪ್ರಾಂತ್ಯದ ಇತರೆ ಜಿಲ್ಲೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಶಿಲಾಯುಗದ ನೆಲೆಗಳನ್ನು ಮತ್ತು ಅವಶೇಷಗಳನ್ನು ಹೊಂದಿದೆ ಎಂದು ೧೯೦೮ರ ಭಾರತದ ಇಂಪೀರಿಯಲ್ ಗೆಜೆಟಿಯರ್ ತಿಳಿಸುತ್ತದೆ.[೩೪] ಹೊಸಪೇಟೆ ತಾಲೂಕಿನ ಗಾದಿಗನೂರಿನ ಕುರಿಕುಪ್ಪಿಬೆಟ್ಟ, ಬಸವನದುರ್ಗ (ಗುಡಿ ಓಬಳಾಪುರ) ಮತ್ತು ಕಾಲಘಟ್ಟ ವ್ಯಾಪ್ತಿಯಲ್ಲಿ ಬರುವ ಧರ್ಮದ ಗುಡ್ಡ, ಕಮಲಾಪುರ, ದರೋಜಿ ಕರಡಿಧಾಮ ಹಾಗೂ ಹಂಪಿ ಪರಿಸರದಲ್ಲಿ ಹಳೆ ಶಿಲಾಯುಗಕ್ಕೆ ಸಂಬಂಧಿಸಿದ ಶಿಲಾಯುಧಗಳು, ಅವಶೇಷಗಳು ಮತ್ತು ರೇಖಾಚಿತ್ರಗಳು ಕಂಡುಬರುತ್ತವೆ. ಇದರಿಂದ ಹೊಸಪೇಟೆ ಪ್ರದೇಶವು ಹಳೆಶಿಲಾಯುಗದ ಕಾಲದಿಂದಲೂ ಮಾನವನ ಅಸ್ತಿತ್ವವಿರುವುದು ಸುಸ್ಪಷ್ಟವಾಗುತ್ತದೆ. ಈ ತಾಲೂಕಿನಲ್ಲಿರುವ ಹಂಪೆ ಐತಿಹಾಸಿಕವಾಗಿ ವಿಶ್ವವಿಖ್ಯಾತಿ ಹೊಂದಿದೆ.

ಹೊಸಪೇಟೆ ತಾಲೂಕಿನ ಬಹುತೇಕ ಭಾಗವು ತುಂಗಭದ್ರಾ ನದಿಯ ಬಲದಂಡೆ ತೀರದಲ್ಲಿ ವಿಸ್ತರಿಸಿಕೊಂಡಿದ್ದು, ಕೃಷಿಯೋಗ್ಯವಾದ ಹಾಗೂ ಫಲವತ್ತಾದ ಪ್ರದೇಶವಾಗಿದೆ. ಆರ್ಥಿಕವಾಗಿ ಸಮೃದ್ಧಿ ಹೊಂದಿತ್ತೆಂದು ಹಾಗೂ ವಾಣಿಜ್ಯ-ವ್ಯಾಪಾರ ಮತ್ತು ಧಾರ್ಮಿಕ ಕೇಂದ್ರವಾಗಿತ್ತೆಂದು ಇತಿಹಾಸದಿಂದ ತಿಳಿದುಬರುತ್ತದೆ. ಇಂತಹ ಸಮೃದ್ಧಿ ಹೊಂದಿದ ಪ್ರದೇಶವು ಕದಂಬ, ಪಲ್ಲವ, ಪಾಂಡ್ಯ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಗಂಗರು, ಕಲ್ಯಾಣದ ಚಾಲುಕ್ಯರ, ಕಲಚೂರಿಗಳ ಮತ್ತು ಹೊಯ್ಸಳ ರಾಜಮನೆತನಗಳ ಆಡಳಿತಕ್ಕೆ ಒಳಪಟ್ಟಿದ್ದು ಕಂಡುಬರುತ್ತದೆ. ದಕ್ಷಿಣ ಭಾರತ ಮತ್ತು ಉತ್ತರ ಭಾರತದ ಅರಸರ ಆಡಳಿತಕ್ಕೆ ಒಳಪಟ್ಟ ಈ ಪ್ರದೇಶವು ೧೪ನೇ ಶತಮಾನದಲ್ಲಿ ವಿಜಯನಗರ ಅರಸರ ನೇರ ಆಡಳಿತಕ್ಕೆ ಒಳಪಟ್ಟಿತ್ತು. ವಿಜಯನಗರ ಸಾಮ್ರಾಜ್ಯ ಪತನವಾದ ಮೇಲೆ ಈ ಪ್ರದೇಶವು ಪಾಳೇಗಾರರ ಆಳ್ವಿಕೆಗೆ ಒಳಪಟ್ಟಿತು. ಹರಪನಹಳ್ಳಿ ಪಾಳೆಗಾರ ಸೋಮಶೇಖರ ನಾಯಕನು ಹಲವಾರು ಗ್ರಾಮಗಳನ್ನು ಒಂದುಗೂಡಿಸಿ ಹೊಸಪೇಟೆ ನಗರವನ್ನು ಕಟ್ಟಿದನೆಂದು ಹೇಳಲಾಗುತ್ತದೆ. ಹೊಸಪೇಟೆಯು ಹರಪನಹಳ್ಳಿ ಪಾಳೆಗಾರರ ಉಪರಾಜಧಾನಿಯಾಗಿತ್ತು ಎಂದು ತಿಳಿದುಬರುತ್ತದೆ. ನಂತರ ಈ ಪ್ರದೇಶವನ್ನು ಶಿವಾಜಿ, ಔರಂಗಜೇಬ, ಹೈದರಾಲಿ ಇವರ ಆಡಳಿತಕ್ಕೆ ಒಳಪಟ್ಟಿತು. ಕ್ರಿ.ಶ. ೧೭೯೯ರಲ್ಲಿ ನಡೆದ ನಾಲ್ಕನೇ ಮೈಸೂರು ಆಂಗ್ಲಯುದ್ಧದಲ್ಲಿ ಟಿಪ್ಪುಸುಲ್ತಾನ್ ಹತನಾದ ಮೇಲೆ ಈ ಪ್ರದೇಶವು ಬ್ರಿಟಿಷರ ಆಡಳಿತದ ಭಾಗವಾಗಿತ್ತು. ೧೮೫೭ರ ಸ್ವಾತಂತ್ರ್ಯ ಸಂಗ್ರಾಮದ ಫಲವಾಗಿ ಕಮಲಾಪುರ ಮತ್ತು ಮುಂಡರಗಿ ಭೀಮರಾಯರು ಬ್ರಿಟೀಷರ ವಿರುದ್ಧ ಹೋರಾಟ ನಡೆಸಿದಾಗ ಹೊಸಪೇಟೆಯ ಹಲವಾರು ಜನರು ಭಾಗವಹಿಸಿದ್ದರು ಹಾಗೂ ಧನಸಹಾಯ ಮಾಡಿದ್ದರು. ಈ ಹೋರಾಟದಲ್ಲಿ ಬ್ರಿಟಿಷರು ೧೫೦ ಜನರನ್ನು ಸೆರೆ ಹಿಡಿದರು ಹಾಗೂ ೭೭

ಜನರನ್ನು ಗುಂಡಿಕ್ಕಿ ಕೊಂದರು. ಅವರಲ್ಲಿ ೧೩ ಜನ ಬಳ್ಳಾರಿ ಮತ್ತು ೭ ಜನ ಹೊಸಪೇಟೆಯವರಾಗಿದ್ದರು. ಇದು ಸ್ವಾತಂತ್ರ್ಯ ಹೋರಾಟದಲ್ಲಿ ನೀಡಿದ ತಾಲೂಕಿನ ಪ್ರಥಮ ಕಾಣಿಕೆಯಾಗಿದೆ. ಇಷ್ಟಲ್ಲದೇ ಗಾಂಧೀಜಿಯವರ ಕರೆಯ ಮೇರೆಗೆ ಈ ಭಾಗದ ಪ್ರಗತಿಪರರು ಉಪ್ಪಿನಸತ್ಯಾಗ್ರಹ, ಮದ್ಯಪಾನ ನಿಷೇಧ ಚಳುವಳಿ, ಕರನಿರಾಕರಣೆ ಚಳುವಳಿ, ಸ್ವದೇಶಿ ಚಳುವಳಿ, ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸಿದ್ದಾರೆ ಹಾಗೂ ಶಿಕ್ಷೆಯನ್ನು ಅನುಭವಿಸಿದ್ದಾರೆ. ಅದರಲ್ಲಿ ವಿಶೇಷವಾಗಿ ಬಳ್ಳಾರಿ ಜಿಲ್ಲೆಯ ಸಿದ್ಧಮ್ಮ, ಮೈಲಾರ ಮಹಾದೇವಪ್ಪ ಅವರ ಪಾತ್ರ ಹಿರಿದಾದದ್ದು. ೧೯೩೨ರಲ್ಲಿ ಟಿ.ಬಿ.ಲಕ್ಷ್ಮಿಬಾಯಿ ಎಂಬ ಹೊಸಪೇಟೆಯ ಮಹಿಳೆ ಬ್ರಿಟಿಷ್ ಸರಕಾರವನ್ನು ಖಂಡಿಸುವ ಅನಧಿಕೃತ ಸಾಹಿತ್ಯವನ್ನು ಹಂಚುವ ಚಳುವಳಿಯಲ್ಲಿ ಭಾಗವಹಿಸಿ, ಬಂಧನಕ್ಕೊಳಗಾಗಿದ್ದು ಕಂಡುಬರುತ್ತದೆ. ಭಾರತ ಸ್ವಾತಂತ್ರ್ಯ ಪಡೆದ ನಂತರ ಹೈದ್ರಾಬಾದ್ ನಿಜಾಮನು ಭಾರತದ ಒಕ್ಕೂಟ ಸೇರಲು ಹಿಂಜರಿದಾಗ, ೧೯೪೮ ಸೆಪ್ಟೆಂಬರ್ ೧೩ರಿಂದ ೧೭ರ ವರೆಗೆ ನಡೆದ ರಕ್ಷಣಾಕಾರ್ಯಚರಣೆಯಲ್ಲಿ ಹೊಸಪೇಟೆಯು ಮಹತ್ವ ಪೂರ್ಣ ಪಾತ್ರ ವಹಿಸಿತು.[೩೫]

ಭೌಗೋಳಿಕ ಹಿನ್ನೆಲೆ : ಹೊಸಪೇಟೆ ತಾಲೂಕು ಬಳ್ಳಾರಿ ಜಿಲ್ಲೆಯ ಉತ್ತರ ಭಾಗದಲ್ಲಿದ್ದು, ಭೂವಿಸ್ತೀರ್ಣ ೨೦೧೧ರ ಜನಗಣತಿಯ ಪ್ರಕಾರ ೯೦೪,೧೭ರಷ್ಟು ಇದೆ. ಇದು ಜಿಲ್ಲೆಯಲ್ಲೇ ಅತ್ಯಂತ ಸಣ್ಣ ತಾಲೂಕಾಗಿದೆ.[೩೬] ಹೊಸಪೇಟೆ ತಾಲೂಕು ಬೆಟ್ಟ-ಪರ್ವತ, ನದಿ-ಕಾಲುವೆ, ಕೆರೆ-ಬಾವಿಗಳಿಂದ ಕೂಡಿದ ಮತ್ತು ಸಮತಟ್ಟಾದ ಬಯಲು ಪ್ರದೇಶದಿಂದ ಕೂಡಿದೆ. ಹೊಸಪೇಟೆ ತಾಲೂಕು ತುಂಗಭದ್ರಾ ನದಿಯ ಬಲದಂಡೆಯ ಮೇಲ್ಭಾಗದಲ್ಲಿ ನೈರುತ್ಯ ಭಾಗದಿಂದ ಈಶಾನ್ಯ ಭಾಗಕ್ಕೆ ಬಾಚಿಕೊಂಡಿದೆ. ತುಂಗಭದ್ರಾ ಆಣೆಕಟ್ಟಿನ ಬಲಭಾಗದಲ್ಲಿರುವ ಬೆಟ್ಟ ಪರ್ವತಗಳು ತಾಲೂಕನ್ನು ಈಶಾನ್ಯ ಭಾಗದ ಪೂರ್ವದಲ್ಲಿ ಬಳ್ಳಾರಿ, ಪಶ್ಚಿಮದಲ್ಲಿ ಹಗರಿಬೊಮ್ಮನಹಳ್ಳಿ, ಉತ್ತರಕ್ಕೆ ಗಂಗಾವತಿ, ದಕ್ಷಿಣಕ್ಕೆ ಸಂಡೂರು ತಾಲೂಕುಗಳಿದ್ದರೆ, ಈಶಾನ್ಯಕ್ಕೆ ಸಿರುಗುಪ್ಪ ತಾಲೂಕು, ವಾಯುವ್ಯಕ್ಕೆ ತುಂಗಭದ್ರಾ ನದಿ ಮತ್ತು ಕೊಪ್ಪಳ ಜಿಲ್ಲೆಯ ಮುನಿರಾಬಾದ್ ಬರುತ್ತವೆ. ತಾಲೂಕಿನ ನೈರುತ್ಯ ಭಾಗದ ಪೂರ್ವದಲ್ಲಿ ಸಂಡೂರು, ಪಶ್ಚಿಮಕ್ಕೆ ಹಗರಿಬೊಮ್ಮನಹಳ್ಳಿ, ದಕ್ಷಿಣಕ್ಕೆ ಕೂಡ್ಲಿಗಿ ತಾಲೂಕುಗಳು ಇವೆ.

೨೦೧೧ರ ಜನಗಣತಿಯ ಪ್ರಕಾರ ತಾಲೂಕಿನ ಒಟ್ಟು ೯೩,೩೭೪ ಹೆಕ್ಟೇರ್ ಪ್ರದೇಶದಲ್ಲಿ ೨೪,೯೭೦ ಹೆಕ್ಟೇರ್ (ಶೇ.೧೫.೯)ನಷ್ಟು ಪ್ರದೇಶವು ಅರಣ್ಯ ಪ್ರದೇಶವಾಗಿದೆ. ಬಿಸಲು ಜಿಲ್ಲೆಯ ತಾಲೂಕಾಗಿದ್ದರಿಂದ ಮಳೆ ಬೀಳುವ ಪ್ರಮಾಣವು ಕಡಿಮೆ ಇದೆ. ೨೦೧೧ರ ಗಣತಿ ಪ್ರಕಾರ ತಾಲೂಕುನಲ್ಲಿ ವಾರ್ಷಿಕವಾಗಿ ಬಿದ್ದ ಮಳೆಯ ಪ್ರಮಾಣವು ೬೦೪.೧ ಮಿಲಿ ಮೀಟರ್‌ರಷ್ಟಿದೆ. ಜಿಲ್ಲೆಗೆ ಹೋಲಿಸಿದಾಗ ಬಿದ್ದ ಮಳೆಯ ಪ್ರಮಾಣ ಕಡಿಮೆ ಇದೆ. ಆದರೆ ತಾಲೂಕಿನಲ್ಲಿ ಇತ್ತೀಚಿನ ಹತ್ತು ವರ್ಷಗಳಲ್ಲಿ ಬಿದ್ದ ಮಳೆಯ ಪ್ರಮಾಣ ೬೮೬.೪೨ ಮಿಲಿ ಮೀಟರ್‌ನಷ್ಟಿದೆ. ತುಂಗಭದ್ರಾ ನದಿ ಹೊಸಪೇಟೆ ತಾಲೂಕಿಗೆ ಪ್ರಮುಖ ನೀರಾವರಿ ಮೂಲವಾಗಿದೆ. ತುಂಗಭದ್ರಾ ಆಣೆಕಟ್ಟಿನಿಂದ ತಾಲೂಕಿಗೆ ಸಂಪೂರ್ಣವಾಗಿ ನೀರಾವರಿ ಸೌಲಭ್ಯ ದೊರೆತಿಲ್ಲ. ತಾಲೂಕಿನ

ಉತ್ತರ ವಾಯುವ್ಯ ಭಾಗದಿಂದ ಉತ್ತರ ಈಶಾನ್ಯ ಭಾಗದ ಪ್ರದೇಶಕ್ಕೆ ಮಾತ್ರ ನೀರಾವರಿ ಸೌಲಭ್ಯ ಲಭಿಸಿದೆ. ಅಂದರೆ ತುಂಗಭದ್ರಾ ನದಿಯ ಬಲದಂಡೆ ಮೇಲ್ಭಾಗದಲ್ಲಿ ಬರುವ ತಾಲೂಕಿನ ಪ್ರದೇಶಕ್ಕೆ ಮಾತ್ರ ನೀರಾವರಿ ಸೌಲಭ್ಯ ದೊರೆತಿದೆ. ತಾಲೂಕಿನಲ್ಲಿ ಒಟ್ಟು ಬಿತ್ತನೆಯಾಗುವ ಪ್ರದೇಶಕ್ಕೆ ಹೋಲಿಸಿದಾಗ ೧೮,೩೦೦ ಹೆಕ್ಟೇರ್‌ಗೆ (ಶೇ.೧೯.೫೯ರಷ್ಟು) ಮಾತ್ರ ತುಂಗಭದ್ರಾ ಜಲಾಶಯದಿಂದ ನೀರಾವರಿ ಸೌಲಭ್ಯ ದೊರೆತಿದೆ. ಈ ಭಾಗವು ವರ್ಷದ ೧೦ ರಿಂದ ೧೧ ತಿಂಗಳ ಕಾಲ ನೀರಾವರಿ ಸೌಲಭ್ಯ ಪಡೆದ ಸಮೃದ್ಧಿಯಾದ ಪ್ರದೇಶವಾಗಿದೆ. ಆದರೆ ತಾಲೂಕಿನ ಬಹುತೇಕ ಭಾಗವು ನೀರಾವರಿ ಸೌಲಭ್ಯದಿಂದ ವಂಚಿತವಾಗಿದೆ. ಈ ಭಾಗವು ಇಂದಿಗೂ ಕೃಷಿಗೆ ಮಳೆ, ಕೆರೆ, ಬಾವಿ, ಕೊಳವೆ ಬಾವಿಗಳನ್ನು ಅವಲಂಬಿಸಿದೆ. ಜಿಲ್ಲೆಯ ತುಂಗಭದ್ರಾ ಜಲಾಶಯದಿಂದ ನೀರಾವರಿ ಸೌಲಭ್ಯ ಪಡೆದ ಇತರ ತಾಲೂಕುಗಳಿಗೆ ಹೋಲಿಸಿದಾಗ ಹೊಸಪೇಟೆ ನೀರಾವರಿ ಸೌಲಭ್ಯ ಪಡೆದ ೨೫,೮೫೫ ಹೆಕ್ಟೇರ್ ಪ್ರದೇಶದಲ್ಲಿ ಶೇ.೨೦.೭೭ರಷ್ಟು ಪ್ರದೇಶವು ತುಂಗಭದ್ರಾ ಆಣೆಕಟ್ಟಿನಿಂದ ನೀರಾವರಿ ಸೌಲಭ್ಯ ಹೊಂದಿದೆ. ಹೊಸಪೇಟೆ ತಾಲೂಕಿನ ಬಹುಪಾಲು ಜನರು ಇಂದಿಗೂ ಕೃಷಿಯನ್ನು ಅವಲಂಬಿಸಿಯೇ ಬದುಕುತ್ತಿದ್ದಾರೆ. ಇತಿಹಾಸ ಕಾಲದಿಂದಲೂ ಇದು ಫಲವತ್ತತೆಗೆ ಹೆಸರಾದ ಭೂ ಪ್ರದೇಶವಾಗಿತ್ತು. ಸುತ್ತಮುತ್ತಣ ಬಯಲು ಪ್ರದೇಶಗಳಿಗೆ ನೀರುಣಿಸುತ್ತಾ ತಾಲ್ಲೂಕಿನ ಮೂಲಕ ಹರಿಯುವ ತುಂಗಭದ್ರಾ ನದಿಯೇ ಇದಕ್ಕೆ ಕಾರಣವೆನ್ನಬಹುದು. ಜೊತೆಗೆ ಇಲ್ಲಿನ ಮಣ್ಣಿನ ಗುಣವೂ ಒಂದು ಕಾರಣವೆನ್ನಲಡ್ಡಿಯಿಲ್ಲ. ತಾಲೂಕಿನಲ್ಲಿ ಶೇ.೮ರಷ್ಟು ಕರಿಮಣ್ಣಿನ ಭೂಮಿಯಿದ್ದು, ಶೇ.೨ರಷ್ಟು ಕೆಂಪುಮಣ್ಣಿನ ಭೂಮಿಯಿದೆ. ಉಳಿದ ಶೇ.೯೦ರಷ್ಟು ಮಿಶ್ರಮಣ್ಣಿನ ಭೂಮಿಯಿದೆ. ಇದು ಭತ್ತ, ಕಬ್ಬು, ಬಾಳೆ, ಜೋಳ, ಹತ್ತಿ, ಶೇಂಗಾ, ಈರುಳ್ಳಿ, ಟೊಮೇಟೊ, ತೊಗರಿ, ಅಲಸಂಧಿ, ಹುರುಳಿ, ಮೆಣಸಿನಕಾಯಿ, ಸಜ್ಜೆ, ಸೂರ್ಯಕಾಂತಿ ಮುಂತಾದ ಬೆಳೆಗಳಿಗೆ ಯೋಗ್ಯವಾಗಿದೆ.[೩೭]

ಹೊಸಪೇಟೆ ತಾಲೂಕು ಉಷ್ಣವಲಯ ಪ್ರದೇಶವಾಗಿದೆ. ತುಂಗಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಸೌಲಭ್ಯದಿಂದ ಕಣ್ಮನ ತಣಿಸುವ ಸಂಮೃದ್ಧಿ ಬೆಳೆಗಳು ಹಾಗೂ ಗಿಡಮರಗಳು ಬಿಸಿಲಿನ ತಾಪವನ್ನು ತಣಿಸುವಲ್ಲಿ ಸಾಧ್ಯವಾಗಿಲ್ಲ. ತಾಲೂಕಿನ ಶೇ.೮೯.೪೧ರಷ್ಟು ಪ್ರದೇಶವು ಮಳೆ ಆಶ್ರಯ ಪ್ರದೇಶವಾಗಿದೆ. ಸಾಲದಕ್ಕೆ ಕಲ್ಲು ಬಂಡೆಗಳಿಂದ ಕೂಡಿದ ಬೃಹತ್ ಬೆಟ್ಟಗುಡ್ಡಗಳು ತಾಲೂಕನ್ನು ಸುತ್ತುವರೆದಿದ್ದರಿಂದ ಸಹಜವಾಗಿ ಬಿಸಿಲು ತಾಪ ಉಲ್ಬಣವಾಗುತ್ತದೆ. ತಾಲೂಕಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ಕಬ್ಬಿಣ ಹಾಗೂ ವಿವಿಧ ಕಾರ್ಖಾನೆಗಳು, ಶಾಖೋತ್ಪನ್ನ ಘಟಕಗಳು ಮತ್ತಷ್ಟು ಬಿಸಿಲು ಉಲ್ಬಣಗೊಳ್ಳುವಂತೆ ಮಾಡಿವೆ. ಇದರಿಂದಾಗಿ ತಾಲೂಕಿನ ವಾತಾವರಣವು ಕಲುಷಿತಗೊಂಡಿದೆ. ಜನಜೀವನ, ಕೃಷಿ, ಪ್ರಾಣಿ ಪಕ್ಷಿಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಇಲ್ಲಿ ಎಲ್ಲವೂ ಅಪಾಯದ ಅಂಚಿನಲ್ಲಿವೆ. ತಾಲೂಕಿನ ಜನತೆಯಲ್ಲಿ ಪರಿಸರದ ಬಗ್ಗೆ ಕಾಳಜಿ ಇಲ್ಲದಿರುವುದು

ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬರುತ್ತದೆ.[೩೮] ಮುಂದಿನ ದಿನಮಾನಗಳಲ್ಲಿ ಇದಕ್ಕೆ ಪರಿಹಾರವನ್ನು ಕಂಡುಕೊಳ್ಳದೆ ಹೋದರೆ ಜನತೆ ಇನ್ನಷ್ಟು ದುಃಷ್ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಅರಿತುಕೊಳ್ಳಬೇಕಿದೆ.

ಸಾಮಾಜಿಕ ಹಿನ್ನೆಲೆ : ೨೦೧೧ ಜನಗಣತಿಯ ಪ್ರಕಾರ ತಾಲೂಕಿನ ಜನಸಂಖ್ಯೆ ೩,೭೪,೯೪೯ರಷ್ಟಿದ್ದು, ಇದರಲ್ಲಿ ಪುರುಷರು ೧,೮೯,೬೭೪(ಶೇ.೫೦.೫೮) ಹಾಗೂ ಮಹಿಳೆಯರು ೧,೮೫,೨೫ (ಶೇ.೪೯.೪೧)ರಷ್ಟು ಇದ್ದಾರೆ. ಜಿಲ್ಲೆಯಲ್ಲಿ ತಾಲೂಕಿನ ಪಾಲು ಶೇ.೧೯ರಷ್ಟಿದೆ. ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು, ಜಿಲ್ಲೆಯ ಎರಡನೇ ತಾಲೂಕಾಗಿದೆ.[೩೯] ಹೊಸಪೇಟೆ ತಾಲೂಕಿನಲ್ಲಿ ಪ್ರತಿ ೧೦೦೦ ಪುರುಷರಿಗೆ ೯೭೭ರಷ್ಟು ಮಹಿಳೆಯರು ಇದ್ದು, ಲಿಂಗಾನುಪಾತವು ಜಿಲ್ಲೆಗೆ ಹೋಲಿಸಿದರೆ ಶೇ.೧೯ರಷ್ಟು ಹೆಚ್ಚಿದೆ. ೨೦೧೧ರ ಜನಗಣತಿಯ ಪ್ರಕಾರ, ತಾಲೂಕಿನ ಜನಸಂಖ್ಯೆ ಬೆಳವಣಿಗೆ ದರ ಶೇ.೧೯.೮೩ರಷ್ಟಿದೆ. ಕಳೆದ ದಶಕಕ್ಕೆ ಹೋಲಿಸಿದರೆ ಶೇ.೧.೩೫ರಷ್ಟು ಏರಿಕೆಯಾಗಿದೆ. ಜಿಲ್ಲೆಯ ಜನಸಂಖ್ಯೆ ಬೆಳವಣಿಗೆ ದರದಲ್ಲಿ ೫ನೇ ಸ್ಥಾನ ಹಾಗೂ ಒಟ್ಟು ಜನಸಂಖ್ಯೆಯಲ್ಲಿ ೩ನೇ ಸ್ಥಾನದಲ್ಲಿದೆ. ಇದಕ್ಕೆ ತಾಲೂಕಿನಲ್ಲಿರುವ ನೀರಾವರಿ ಸೌಲಭ್ಯ ಹಾಗೂ ಗಣಿ ಚಟುವಟಿಕೆ ಮತ್ತು ಸಾಮಾಜಿಕ ಆರ್ಥಿಕ ಸೌಲಭ್ಯ ಲಭ್ಯತೆ ಕಾರಣವಾಗಿರಬಹುದು.[೪೦]

೨೦೧೧ರ ಜನಗಣತಿಯ ಪ್ರಕಾರ, ಜಾತಿವಾರು ಜನಸಂಖ್ಯೆಯನ್ನು ನೋಡಿದಾಗ ಪರಿಶಿಷ್ಟ ಜಾತಿಯಲ್ಲಿ ೫೨,೨೧೨(ಶೇ.೧೯.೧೮)ರಷ್ಟಿದ್ದು, ಇದರಲ್ಲಿ ೨೬,೫೪೦(ಶೇ.೫೦.೮೩)ರಷ್ಟು ಪುರುಷರನ್ನು ೨೫,೬೭೨(ಶೇ.೪೯.೧೬) ರಷ್ಟು ಮಹಿಳೆಯರನ್ನು ಹೊಂದಿದೆ. ಒಟ್ಟು ಪರಿಶಿಷ್ಟ ಪಂಗಡ ಜನಸಂಖ್ಯೆ ೭೩,೬೫೦(ಶೇ.೨೭.೦೫)ರಷ್ಟಿದ್ದು ಇದರಲ್ಲಿ ೩೭,೨೯೮(ಶೇ.೫೦.೬೪)ರಷ್ಟು ಪುರುಷರನ್ನು ಹಾಗೂ ೩೬,೩೫೨(ಶೇ.೪೯.೩೫)ರಷ್ಟು ಮಹಿಳೆಯರನ್ನು ಹೊಂದಿದೆ. ಅಲ್ಪಸಂಖ್ಯಾತರು ಶೇ.೧೨ರಷ್ಟಿದ್ದು, ಇತರೆ ಹಿಂದುಳಿದ ವರ್ಗಗಳು ಶೇ.೭೬.೪೬ರಷ್ಟು ಮತ್ತು ಸಾಮಾನ್ಯ ಶೇ.೬೨.೫೪ರಷ್ಟು ಇರುವುದನ್ನು ನೋಡಲಾಗಿದೆ. ಈ ತಾಲೂಕು ಪರಿಶಿಷ್ಟ ಜಾತಿ–ಪಂಗಡ ಜನಸಂಖ್ಯೆಯ ಪ್ರಮಾಣ ೧,೨೫,೮೬೨(ಶೇ.೪೬.೨೪)ರಷ್ಟು ಹೊಂದಿದ್ದು, ಜಿಲ್ಲೆಯಲ್ಲಿ ಅತಿ ಹೆಚ್ಚು ಪರಿಶಿಷ್ಟರನ್ನು ಹೊಂದಿದೆ. ಶೇ.೨೭.೧ರಷ್ಟು ಪರಿಶಿಷ್ಟ ಪಂಗಡದವರನ್ನು ಹೊಂದಿದ್ದು, ಜಿಲ್ಲೆಯಲ್ಲಿ ಅತಿ ಹೆಚ್ಚು ಪರಿಶಿಷ್ಟ ಪಂಗಡ ಜನಸಂಖ್ಯೆಯನ್ನು ಹೊಂದಿದ ತಾಲೂಕು ಇದಾಗಿದೆ.[೪೧] ಅಧ್ಯಯನದ ಆಯ್ಕೆ ಈ ಅಂಶವು ಸಹ ಒಂದು ಕಾರಣವಾಗಿದೆ.

ಸಾಮಾಜಿಕವಾಗಿ ಹೊಸಪೇಟೆ ತಾಲೂಕು ವಿವಿಧ ಜಾತಿ, ಧರ್ಮ ಹಾಗೂ ವರ್ಗಗಳಿಂದ ಕೂಡಿದೆ. ತಾಲೂಕಿನಲ್ಲಿ ಮುಖ್ಯವಾಗಿ ಹರಿಜನ, ಕುರುಬ, ಲಿಂಗಾಯಿತ, ಮುಸ್ಲಿಂ ಮತ್ತು ಬೇಡ(ವಾಲ್ಮೀಕಿ), ನಾಯಕರು ದೊಡ್ಡ ಸಮುದಾಯಗಳಾಗಿವೆ. ಅಗಸ, ಬ್ರಾಹ್ಮಣ, ಗೌಳಿ, ಅಂಬಿಗ(ಕಬ್ಬೇರ), ಲಂಬಾಣಿ,

ಮಾರವಾಡಿ, ಮೇದಾರ, ನೇಕಾರ, ಬೋವಿ, ಸಮತಾ(ಕ್ಷೌರಿಕ) ಶೆಟ್ಟಿ(ವೈಶ್ಯ) ಕಮ್ಮ, ರೆಡ್ಡಿ, ಅಕ್ಕಿಪಿಕ್ಕಿ, ಗೊಲ್ಲರು, ದಾಸರು ಪ್ರಮುಖ ಸಮುದಾಯಗಳಾಗಿವೆ. ಆದರೆ ಅವು ಬಲಿಷ್ಠ ಸಮುದಾಯಗಳಾಗಿ ಕಂಡುಬರುವುದಿಲ್ಲ.[೪೨] ೨೦೧೧ರ ಜನಗಣತಿಯ ಪ್ರಕಾರ, ತಾಲೂಕಿನ ಜನಸಂಖ್ಯೆಯಲ್ಲಿ ೧,೮೮,೯೬೫ (ಶೇ.೪೭.೬೧)ರಷ್ಟು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವುತ್ತಿದ್ದಾರೆ. ಇದರಲ್ಲಿ ೯೪,೨೯೨ (ಶೇ.೫೦.೨೩)ರಷ್ಟು ಮಹಿಳೆಯರು, ೯೪,೬೭೩ ಪುರುಷರಿದ್ದಾರೆ.[೪೩] ಬಳ್ಳಾರಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ ೨೦೧೪ರಂತೆ ತಾಲೂಕಿನ ಸಾಕ್ಷರತೆ ಪ್ರಮಾಣವು ಶೇ.೭೦.೧೬ರಷ್ಟಿದ್ದು, ಇವರಲ್ಲಿ ಪುರುಷರ ಸಾಕ್ಷರತೆ ಪ್ರಮಾಣ ಶೇ.೭೮.೪೯ರಷ್ಟು ಹಾಗೂ ಮಹಿಳಾ ಸಾಕ್ಷರತೆ ಪ್ರಮಾಣ ಶೇ.೬೧.೯೩ರಷ್ಟಿದೆ. ಈ ಪ್ರಮಾಣವನ್ನು ಜಿಲ್ಲೆಯ ಸಾಕ್ಷರತೆ (ಶೇ.೬೭.೪೩ರಷ್ಟು) ಪ್ರಮಾಣಕ್ಕೆ ಹೋಲಿಸಿದರೆ, ಪುರುಷರ ಸಾಕ್ಷರತೆಯಲ್ಲಿ ಶೇ.೬.೯.ರಷ್ಟು ಹಾಗೂ ಮಹಿಳಾ ಸಾಕ್ಷರತೆಯಲ್ಲಿ ಶೇ.೧೧.೯೭ರಷ್ಟು ಹೆಚ್ಚು ಇದೆ. ಹೊಸಪೇಟೆ ತಾಲೂಕು ಜಿಲ್ಲೆಯ ಸಾಕ್ಷರತೆ ಬೆಳವಣಿಗೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಹೀಗಾಗಿ ಜಿಲ್ಲೆಯಲ್ಲಿ ಸಾಕ್ಷರತೆ ಬೆಳವಣಿಗೆಯಲ್ಲಿ ಎರಡನೇ ಸ್ಥಾನದಲ್ಲಿರುವ ಹೊಸಪೇಟೆ ಅಭಿವೃದ್ಧಿ ಹೊಂದಿದ ತಾಲೂಕಾಗಿದೆ.[೪೪]

ಆರ್ಥಿಕ ಹಿನ್ನೆಲೆ : ಹೊಸಪೇಟೆ ತಾಲೂಕನ್ನು ಭೌಗೋಳಿಕವಾಗಿ ನೈರುತ್ಯ ಹಾಗೂ ಈಶಾನ್ಯ ಭಾಗಗಳೆಂದು ವಿಂಗಡಿಸಲಾಗಿದೆ. ನೈರುತ್ಯ ಭಾಗದಲ್ಲಿ ಮರಿಯಮ್ಮನಹಳ್ಳಿ ಹೋಬಳಿ ಬಂದರೆ, ಈಶಾನ್ಯ ಭಾಗದಲ್ಲಿ ಹೊಸಪೇಟೆ, ಕಮಲಾಪುರ ಹಾಗೂ ಕಂಪ್ಲಿ ಹೋಬಳಿಗಳು ಬರುತ್ತವೆ. ತಾಲೂಕಿನಲ್ಲಿರುವ ತುಂಗಭದ್ರಾ ನದಿಯು ಉತ್ತರ ವಾಯುವ್ಯದಿಂದ ಪೂರ್ವ ಈಶಾನ್ಯಕ್ಕೆ ಅಭಿಮುಖವಾಗಿ ಹರಿಯುತ್ತಿದೆ. ತಾಲೂಕಿನ ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ಕಬ್ಬಿಣದ ಅದಿರು ತುಂಬಿಕೊಂಡಿರುವ ಬೆಟ್ಟ-ಗುಡ್ಡಗಳಿವೆ. ತುಂಗಭದ್ರಾ ನದಿಯ ಬಲದಂಡೆ ಮೇಲೆ ಬರುವ ಹೊಸಪೇಟೆ, ಕಮಲಾಪುರ ಹಾಗೂ ಕಂಪ್ಲಿ ಹೋಬಳಿಗಳ ಬಹುತೇಕ ಗ್ರಾಮಗಳು ತುಂಗಭದ್ರಾ ಜಲಾಶಯದಿಂದ ನೀರಾವರಿ ಸೌಲಭ್ಯ ಪಡೆದಿದೆ. ಈ ಹೋಬಳಿಗಳ ಪೂರ್ವ ಹಾಗೂ ದಕ್ಷಿಣ ಭಾಗದಲ್ಲಿ ಬರುವ ಗ್ರಾಮಗಳು ನೀರಾವರಿ ಸೌಲಭ್ಯದಿಂದ ವಂಚಿತವಾಗಿವೆ. ಆದರೆ ಈ ಗ್ರಾಮಗಳು ಪ್ರಮುಖವಾಗಿ ಗಣಿಗಾರಿಕೆಯ ಚಟುವಟಿಕೆಗಳ ಮೇಲೆ ಅವಲಂಬಿತವಾಗಿವೆ. ತಾಲೂಕಿನ ನೈರುತ್ಯ ಭಾಗದಲ್ಲಿ ಬರುವ ಮರಿಯಮ್ಮನಹಳ್ಳಿ ಹೋಬಳಿಯ ಎಲ್ಲಾ ಗ್ರಾಮಗಳು ಕೃಷಿಪ್ರಧಾನವಾದ ಗ್ರಾಮಗಳಾಗಿವೆ. ತುಂಗಭದ್ರಾ ಜಲಾಶಯದ ಹಿಂಭಾಗದಲ್ಲಿ ಬರುವ ಈ ಎಲ್ಲಾ ಗ್ರಾಮಗಳು ನೀರಾವರಿ ಸೌಲಭ್ಯದಿಂದ ವಂಚಿತವಾಗಿವೆ. ಆದ್ದರಿಂದ ಈ ಗ್ರಾಮಗಳ ಜನರು ಕೇವಲ ಮಳೆಯಾಧಾರಿತ ಒಣ ಬೇಸಾಯ ಹಾಗೂ ಬೋರ್‌ವೆಲ್ ಆಧಾರಿತ ಕೃಷಿಯನ್ನು ಅವಲಂಬಿಸಬೇಕಾಗಿದೆ.[೪೫]

ಯಾವುದೇ ಒಂದು ಪ್ರದೇಶದ ಅಭಿವೃದ್ಧಿಯು ಅಲ್ಲಿನ ಜನರು ಅವಲಂಬಿಸಿರುವ ದುಡಿಮೆಯ ಮೇಲೆ ನಿರ್ಧಾರವಾಗುತ್ತದೆ. ಆಯಾ ಪ್ರದೇಶದ ಜನರ ಶ್ರಮಶಕ್ತಿ ಮತ್ತು ದುಡಿಯುವ ವರ್ಗಗಳ ವಲಯವಾರು ವಿವರ ನೋಡಿದಾಗ ಅದು ಅಭಿವೃದ್ಧಿ ಹೊಂದಿದೆಯೋ ಅಥವಾ ಇಲ್ಲವೋ ಎಂಬುದು ಸ್ಪಷ್ಟವಾಗುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿ ಮಾನವ ಶ್ರಮಶಕ್ತಿ ಅಥವಾ ದುಡಿಯುವ ವರ್ಗಗಳ ವಲಯವಾರು ಅಂಕಿ-ಅಂಶಗಳನ್ನು ನೋಡಿದಾಗ ಜಿಲ್ಲೆ ಕೃಷಿ ಪ್ರಧಾನವಾದುದು ಎಂದು ತಿಳಿದುಬರುತ್ತದೆ. ಹಾಗೆಯೇ ಜಿಲ್ಲೆಯಲ್ಲಿ ತಾಲೂಕುವಾರು ಶ್ರಮಶಕ್ತಿ ಮತ್ತು ದುಡಿಯುವ ವರ್ಗಗಳ ವಲಯವಾರು ವಿವರಣೆ ನೋಡಿದಾಗ ಹೊಸಪೇಟೆ ತಾಲೂಕು ಅಭಿವೃದ್ಧಿ ಹೊಂದಿದ ತಾಲೂಕು ಎಂಬುದು ಸ್ಪಷ್ಟವಾಗುತ್ತದೆ. ಹೊಸಪೇಟೆ ಕೃಷಿ ಪ್ರಧಾನವಾದ ತಾಲೂಕಾಗಿದ್ದರೂ ನೀರಾವರಿ ಸೌಲಭ್ಯ ಹೊಂದಿರುವ ಹೆಚ್ಚು ಆದಾಯ ತರುವ ವಾಣಿಜ್ಯ ಬೆಳೆಗಳನ್ನು ಬೆಳೆಯುವ ಪ್ರದೇಶವಾಗಿದೆ.[೪೬]

ತಾಲೂಕಿನ ಬಹುಪಾಲು ಜನರು ಇಂದಿಗೂ ಕೃಷಿಯನ್ನೇ ಅವಲಂಬಿಸಿ ಬದುಕುತ್ತಿದ್ದಾರೆ. ಇತಿಹಾಸ ಕಾಲದಿಂದಲೂ ಇದು ಫಲವತ್ತತೆಗೆ ಹೆಸರಾದ ಭೂ ಪ್ರದೇಶವಾಗಿತ್ತು. ಸುತ್ತಮುತ್ತಣ ಬಯಲು ಪ್ರದೇಶಗಳಿಗೆ ನೀರುಣಿಸುತ್ತಾ ತಾಲೂಕಿನ ಮೂಲಕ ಹರಿಯುವ ತುಂಗಭದ್ರಾ ನದಿಯೇ ಇದಕ್ಕೆ ಕಾರಣವೆನ್ನಬಹುದು. ಜೊತೆಗೆ ಇಲ್ಲಿನ ಮಣ್ಣಿನ ಗುಣವೂ ಒಂದು ಕಾರಣವೆನ್ನಲಡ್ಡಿಯಿಲ್ಲ. ತಾಲೂಕಿನಲ್ಲಿ ಶೇ.೮ರಷ್ಟು ಕರಿಮಣ್ಣಿನ ಭೂಮಿ ಇದ್ದು ಶೇ.೨ರಷ್ಟು ಕೆಂಪುಮಣ್ಣಿನ ಭೂಮಿಯಿದೆ. ಉಳಿದ ಶೇ.೯೦ರಷ್ಟು ಮಿಶ್ರಮಣ್ಣಿನ ಭೂಮಿಯಿದೆ. ಇದು ಭತ್ತ, ಕಬ್ಬು, ಬಾಳೆ, ಜೋಳ, ಹತ್ತಿ, ಶೇಂಗಾ, ಈರುಳ್ಳಿ, ಮೆಣಸಿನಕಾಯಿ, ಟೊಮೆಟೋ, ತೊಗರಿ, ಅಲಸಂಧಿ, ಹುರುಳಿ, ಗೋಧಿ ಮೆಕ್ಕೆಜೋಳ, ಸೂರ್ಯಕಾಂತಿ ಮುಂತಾದ ಬೆಳೆಗಳಿಗೆ ಯೋಗ್ಯವಾಗಿದೆ.[೪೭]

೨೦೧೧ ಜನಗಣತಿಯ ಪ್ರಕಾರ, ತಾಲೂಕಿನ ೯೦,೯೨೪(ಶೇ.೪೮.೧೧)ರಷ್ಟು ಜನರು ದುಡಿಯುವ ವರ್ಗದವರಿದ್ದು, ಇವರಲ್ಲಿ ೨೪೧೬೨(ಶೇ.೨೬.೫೭)ರಷ್ಟು ಮಹಿಳೆಯರಿದ್ದಾರೆ. ಇವರಲ್ಲಿ ಪ್ರಾಥಮಿಕ ವಲಯ ಅವಲಂಬಿಸಿದವರ ಸಂಖ್ಯೆ ೪೨,೯೪೭(ಶೇ.೪೭.೨೩)ರಷ್ಟಿದ್ದು, ಇದರಲ್ಲಿ ಮಹಿಳೆಯರ ಸಂಖ್ಯೆ ೨೩,೫೩೦(ಶೇ.೨೫.೮೭)ರಷ್ಟಿದೆ. ಜಿಲ್ಲೆಗೆ ಹೋಲಿಸಿದಾಗ ಹೊಸಪೇಟೆ ತಾಲೂಕಿನಲ್ಲಿ ಪ್ರಾಥಮಿಕ ವಲಯವನ್ನು ಅವಲಂಬಿಸಿದವರ ಪ್ರಮಾಣ ಶೇ.೦.೧೧ರಷ್ಟು ಹಾಗೂ ಮಹಿಳೆಯರ ಪ್ರಮಾಣ ಶೇ.೩೭.೮೭ ರಷ್ಟು ಕಡಿಮೆ ಇದೆ. ತಾಲೂಕಿನಲ್ಲಿ ದ್ವಿತೀಯ ವಲಯವನ್ನು ಅವಲಂಬಿಸಿದವರ ಸಂಖ್ಯೆ ೫೬೮(ಶೇ.೩.೪೪)ರಷ್ಟಿದ್ದು, ಇದರಲ್ಲಿ ಮಹಿಳೆಯರ ಪ್ರಮಾಣ ೬೩೨(ಶೇ.೧.೭೦)ರಷ್ಟಿದೆ. ಈ ಪ್ರಮಾಣವನ್ನು ಜಿಲ್ಲೆಗೆ ಹೋಲಿಸಿದಾಗ ತಾಲೂಕಿನಲ್ಲಿ ದ್ವಿತೀಯ ವಲಯವನ್ನು ಅವಲಂಬಿಸಿದವರ ಪ್ರಮಾಣ ಶೇ.೦.೦೨ರಷ್ಟು ಮತ್ತು ಮಹಿಳೆಯರ ಪ್ರಮಾಣದಲ್ಲಿ ಶೇ.೦.೧೨ರಷ್ಟು ಹೆಚ್ಚಿದೆ.[೪೮]

ತಾಲೂಕಿನಲ್ಲಿ ಉತ್ತಮ ಗುಣಮಟ್ಟದ ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜ ಅದಿರು ನಿಕ್ಷೇಪಗಳಿದ್ದು, ಗಣಿಗಾರಿಕೆಯಲ್ಲಿ ಮುಂಚೂಣಿಯಲ್ಲಿದೆ. ೨೦೧೧ರ ಅಂಕಿ-ಅಂಶಗಳ ಪ್ರಕಾರ, ತಾಲೂಕಿನಲ್ಲಿ ೩೫ ವಾಣಿಜ್ಯ ಬ್ಯಾಂಕುಗಳು, ೧೭೨ ಸಹಕಾರಿ ಸಂಘಗಳು, ೨೭೫ ಸಣ್ಣ ಹಾಗೂ ೨೦ ದೊಡ್ಡ ಪ್ರಮಾಣದ ಕಾರ್ಖಾನೆಗಳು, ೯೦೪ ಮಹಿಳಾ ಸ್ವ-ಸಹಾಯ ಸಂಘಗಳು ಮತ್ತು ಒಂದು ಕೃಷಿ ಉತ್ಪನ್ನ ಮಾರುಕಟ್ಟೆ

ಇವೆ. ತಾಲೂಕಿನಲ್ಲಿ ಗಣಿಗಾರಿಕೆ ಹಾಗೂ ವಾಣಿಜ್ಯ ಬೆಳೆಗಳ ಚಳುವಳಿಗಳು ಅಧಿಕವಾಗಿರುವುದರಿಂದ ಬ್ಯಾಂಕು ಮತ್ತು ಮಾರುಕಟ್ಟೆ ವ್ಯವಹಾರಗಳು ನಿರೀಕ್ಷಿತ ಮಟ್ಟದಲ್ಲಿ ಹೆಚ್ಚಾಗಿವೆ.[೪೯]

ರಾಜಕೀಯ ಹಿನ್ನೆಲೆ : ಜಿಲ್ಲೆಯ ಆಡಳಿತ ಉಪವಿಭಾಗವಾದ ಹೊಸಪೇಟೆ ಮೂರು ಹೋಬಳಿಗಳು ಸೇರಿದಂತೆ ಒಟ್ಟು ೭೪ ಗ್ರಾಮಗಳನ್ನು ಹೊಂದಿದೆ. ತಾಲೂಕಿನಲ್ಲಿ ಲಿಂಗಾಯಿತ, ನಾಯಕ, ಹರಿಜನ, ಮುಸ್ಲಿಂ ಮತ್ತು ಕುರುಬ ಪ್ರಮುಖ ಬಲಿಷ್ಠ ಸಮುದಾಯಗಳಾಗಿವೆ. ರಾಜ್ಯದಲ್ಲಿ ಬಿ.ಜೆ.ಪಿ. ಪಕ್ಷ ಅಧಿಕಾರಕ್ಕೆ ಬರುವ ಮೊದಲು ಈ ಸಮುದಾಯಗಳು ಕಾಂಗ್ರೆಸ್ ಹಾಗೂ ಜೆ.ಡಿ.ಎಸ್ ಪಕ್ಷಗಳೊಂದಿಗೆ ಗುರುತಿಸಿಕೊಂಡಿದ್ದವು. ಕಳೆದ ಚುನಾವಣೆಯಲ್ಲಿ ಗಣಿಧಣಿಗಳ ಹಣದ ದೂಳಿನಲ್ಲಿ ಕುರುಬ, ಮುಸ್ಲಿಂ ಮತ್ತು ಹರಿಜನ ಸಮುದಾಯಗಳ ಮತಗಳು ಮೂರು ಪಕ್ಷಗಳ ನಡುವೆ ಹಂಚಿಹೋದರೆ, ನಾಯಕ ಸಮುದಾಯದ ಮತಗಳು ಸ್ಥಳೀಯವಾಗಿ ಬಿ.ಜೆ.ಪಿ. ಪಕ್ಷದ ಅಭ್ಯರ್ಥಿ ಅಧಿಕಾರಕ್ಕೆ ಬರಲು ನಿರ್ಣಾಯಕವಾಗಿತ್ತು. ತಾಲೂಕಿನಲ್ಲಿ ಬಹುಸಂಖ್ಯಾತರಾಗಿರುವ ನಾಯಕರು ರಾಜಕೀಯ ಸ್ಥಿತಿಗತಿಯನ್ನು ನಿರ್ಧರಿಸುವ ಶಕ್ತಿ ಇವರಿಗಿದೆ. ಇಂದು ಈ ಸಮುದಾಯಗಳು ಬಹುತೇಕವಾಗಿ ಬಿ.ಜೆ.ಪಿ. ಪಕ್ಷದೊಂದಿಗೆ ಗುರುತಿಸಿಕೊಂಡಂತೆ ಕಂಡುಬರುತ್ತದೆ. ಇದಕ್ಕೆ ಸ್ಥಳೀಯ ಶಾಸಕರ ಸಾಮಾಜಿಕ ಪ್ರಾತಿನಿಧ್ಯವೇ ಕಾರಣವಾಗಿದೆ. ಇವರಿಗೆ ಪಕ್ಷಕ್ಕಿಂತ ವ್ಯಕ್ತಿಯೇ ಮುಖ್ಯವಾಗಿದ್ದಾರೆ. ಇದಕ್ಕೆ ಶಾಸಕರು ಹತ್ತು ಹಲವಾರು ಸಾಮಾಜಿಕ ಸೇವಾಕಾರ್ಯದಲ್ಲಿ ತೊಡಗಿಸಿಕೊಂಡಿರುವುದು ಕಾರಣವಾಗಿರಬಹುದು. ಇದರಿಂದಾಗಿ ತಾಲೂಕಿನ ಎಲ್ಲಾ ಹಿಂದುಳಿದ ಹಾಗೂ ಕೆಳವರ್ಗದ ಸಮುದಾಯಗಳು ಹೆಚ್ಚಾಗಿ ಇವರನ್ನು ಬೆಂಬಲಿಸುತ್ತಾರೆ.

ರಾಜಕೀಯವಾಗಿ ಹೊಸಪೇಟೆ ತಾಲೂಕನ್ನು ನೋಡುವುದಾದರೆ ೨೦೦೮ರ ಮೊದಲು ಒಂದು ವಿಧಾನಸಭಾ ಕ್ಷೇತ್ರವನ್ನು ಹೊಂದಿದ ತಾಲೂಕು ಹೊಸ ಡಿಲಿಮಿಟೇಷನ್ ಕಾಯ್ದೆ ಜಾರಿಗೆ ಬಂದ ಮೇಲೆ ಹೊಸದಾಗಿ ವಿಜಯನಗರ ಮತ್ತು ಕಂಪ್ಲಿ ಎಂಬ ಎರಡು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಕಂಪ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿ ಬಳ್ಳಾರಿ ತಾಲೂಕಿನ ಕೆಲವು ಭಾಗದವರಿಗೂ ವ್ಯಾಪಿಸಿದೆ. ಹೊಸಪೇಟೆ ವಿಜಯನಗರ ಕ್ಷೇತ್ರವು ಸಾಮಾನ್ಯ ಕ್ಷೇತ್ರವಾದರೆ, ಕಂಪ್ಲಿ ಪರಿಶಿಷ್ಟ ಪಂಗಡದ ಸಾಮಾನ್ಯ ಮೀಸಲು ಕ್ಷೇತ್ರವಾಗಿದೆ. ೨೦೦೮ರ ನಂತರ ನೆರೆ ಜಿಲ್ಲೆ ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಬೇರ್ಪಟ್ಟ ಹೊಸಪೇಟೆ ತಾಲೂಕು ಸ್ವ ಜಿಲ್ಲೆ ಬಳ್ಳಾರಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಹೊಸಪೇಟೆ ತಾಲೂಕು ನಗರಾಭಿವೃದ್ಧಿ ಪ್ರಾಧಿಕಾರ, ನಗರಸಭೆ ಮತ್ತು ಎರಡು ಪಟ್ಟಣ ಪಂಚಾಯಿತಿಗಳು ಹಾಗೂ ತಾಲೂಕು ಪಂಚಾಯಿತಿ ಹೊಂದಿದೆ. ತಾಲೂಕಿನಲ್ಲಿ ಒಟ್ಟು ೨೩ ಗ್ರಾಮ ಪಂಚಾಯಿತಿಗಳಿದ್ದು, ಇವು ವಿಜಯನಗರ, ಕಂಪ್ಲಿ ಮತ್ತು ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಗಳಲ್ಲಿ ಅನುಕ್ರಮವಾಗಿ ೯, ೮ ಮತ್ತು ೬ ಗ್ರಾಮಪಂಚಾಯಿತಿಗಳು ಹಂಚಿಕೆಯಾಗಿವೆ.[೫೦] ಪ್ರಸ್ತುತ ಅಧ್ಯಯನದಲ್ಲಿ ಹೊಸಪೇಟೆ ತಾಲೂಕಿನ ಸಣಾಪುರ

ಮತ್ತು ಗರಗನಾಗಲಾಪುರ ಗ್ರಾಮಪಂಚಾಯತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಗ್ರಾಮ ಪಂಚಾಯತಿಗಳ ಬಗ್ಗೆ ಮುಂದೆ ಚರ್ಚಿಸಲಾಗಿದೆ.

ಅಧ್ಯಯನಕ್ಕೆ ಒಳಪಟ್ಟ ಗ್ರಾಮ ಪಂಚಾಯಿತಿಗಳು

ಪ್ರಸ್ತುತ ಅಧ್ಯಯನವು ತೌಲನಿಕ ಮತ್ತು ಸೂಕ್ಷ್ಮ ಅಧ್ಯಯನವಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ತಾಲೂಕಿನಲ್ಲಿ ಎರಡು ಗ್ರಾಮ ಪಂಚಾಯತಿಗಳಿಗೆ ಅಧ್ಯಯನವನ್ನು ಸೀಮಿತಗೊಳಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಒಟ್ಟು ೨೩ ಗ್ರಾಮ ಪಂಚಾಯತಿಗಳು ಅಸ್ತಿತ್ವದಲ್ಲಿದ್ದು, ಇದರಲ್ಲಿ ಸಣಾಪುರ ಮತ್ತು ಗರಗನಾಗಲಾಪುರ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ ಗುಂಪುಗಳ ಮಹಿಳೆಯರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದೆ. ಹೊಸಪೇಟೆ ತಾಲೂಕು ಕೇಂದ್ರದಿಂದ ಸಣಾಪುರ ಗ್ರಾಮ ಪಂಚಾಯಿತಿ ಕಾರ್ಯಲಯವು ೩೯ ಕಿ.ಮೀ. ದೂರದಲ್ಲಿದೆ. ಇನ್ನೊಂದು ಗ್ರಾಮ ಪಂಚಾಯತಿಯಾದ ಗರಗನಾಗಲಾಪುರ ಗ್ರಾಮಪಂಚಾಯತಿಯ ಕಾರ್ಯಲಯವು ತಾಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿದೆ.

ಈ ಮೊದಲು ಹೇಳಿದಂತೆ ಇದೊಂದು ತೌಲನಿಕ ಮತ್ತು ಸೂಕ್ಷ್ಮ ಅಧ್ಯಯನವಾಗಿದ್ದರಿಂದ ಇದೇ ಮಾದರಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಹಿಂದುಳಿದ ತಾಲೂಕು ಆಗಿರುವ ಕೂಡ್ಲಿಗಿ ತಾಲೂಕಿನ ಚಿರತಗುಂಡ ಮತ್ತು ರಾಂಪುರ ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ ಗುಂಪುಗಳ ಪರಿಶಿಷ್ಟ ಮಹಿಳಾ ಸದಸ್ಯರನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ.

೩.೬. ಸಣಾಪುರ ಗ್ರಾಮಪಂಚಾಯತಿಯ ಪರಿಚಯ

ಸಣಾಪುರವು ಕ್ರಿ.ಶ. ೧೫೧೩ರ ಹಂಪಿ ಶಾಸನದಲ್ಲಿ “ಕಂಪಿಲೆಯಾ ಮಾಗಣೆಯಲ್ಲೂ ಸಣಾಪುರದ ಗ್ರಾಮ” ಎಂದು ಉಲ್ಲೇಖಗೊಂಡಿದೆ. ಮೊದಲನೆಯ ಬುಕ್ಕರಾಯನ ಕಾಲದಲ್ಲಿ ಸಾಯಣಾಚಾರ್ಯನೆಂಬ ಪ್ರಸಿದ್ಧ ಸಂಸ್ಕೃತ ವಿದ್ವಾಂಸನು ವಿಜಯನಗರದ ಆ ಸ್ಥಾನದಲ್ಲಿದ್ದನು. ಅಲ್ಲದೆ ಈತನು ಬುಕ್ಕರಾಯನ ಮಂತ್ರಿಯಾಗಿದ್ದು, ವಿದ್ವಾಂಸನಾದ ಮಾಧವಾಚಾರ್ಯನ ಸಹೋದರನೂ ಆಗಿದ್ದನು. ಬಹುಶಃ ಈತನ ಗೌರವಾರ್ಥವಾಗಿ ಗ್ರಾಮವನ್ನು ನಿರ್ಮಿಸಿ ಅದಕ್ಕೆ ಸಾಯಣಾಪುರವೆಂದು ಹೆಸರಿಟ್ಟಿರಬೇಕು. ಮುಂದೆ ಅದು ಸಣಾಪುರ ಎಂದು ಹೆಸರಾಗಿರಬಹುದು. ಸುಮಾರು ೨೦೦ ವರ್ಷಗಳ ಹಿಂದೆ ಹಳೆಯ ಗ್ರಾಮ ಬಿಟ್ಟು ಈಗಿನ ಹೊಸಗ್ರಾಮವನ್ನು ನಿರ್ಮಿಸಲಾಯಿತೆಂದು ಸ್ಥಳೀಯರು ತಿಳಿಸುತ್ತಾರೆ.[೫೧]

ಕಂಪ್ಲಿ-ಸಿರುಗುಪ್ಪ ಮುಖ್ಯ ರಸ್ತೆಯಲ್ಲಿ ೬ ಕಿ.ಮೀ. ದೂರದಲ್ಲಿ ಸಣಾಪುರವಿದೆ. ಇಲ್ಲಿಂದ ತಾಲೂಕು ಕೇಂದ್ರಕ್ಕೆ ೩೬ ಕಿ.ಮೀ. ದೂರವಾದರೆ ಜಿಲ್ಲಾ ಕೇಂದ್ರಕ್ಕೆ ೬೦ ಕಿ.ಮೀಗಳ ದೂರದಲ್ಲಿದ್ದು[೫೨]. ಇದು ಕಂಪ್ಲಿ ಹೋಬಳಿಗೆ ಸೇರಿದೆ. ಸಣಾಪುರ, ಅರಳಿ ಹಳ್ಳಿ ತಾಂಡ, ಬಸವೇಶ್ವರ ಕ್ಯಾಂಪು, ಕೊಂಡಯ್ಯ ಕ್ಯಾಂಪು, ನಂ೨ ಮುದ್ದಾಪುರ ಮತ್ತು ಇಟಗಿ ಗ್ರಾಮಗಳನ್ನು ಸೇರಿಸಿ ಗ್ರಾಮ ಪಂಚಾಯಿತಿಯಾಗಿ ರಚಿಸಲಾಗಿದೆ. ಗ್ರಾಮ

ಪಂಚಾಯಿತಿ ಕೇಂದ್ರವು ಸಣಾಪುರ ಗ್ರಾಮದಲ್ಲಿದೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯು ಎಲ್ಲಾ ಗ್ರಾಮಗಳನ್ನು ಒಳಗೊಂಡಂತೆ ಒಟ್ಟು ಭೌಗೋಳಿಕ ವಿಸ್ತೀರ್ಣವು ೭೫೫.೨೧ ಹೆಕ್ಟೇರ್‌ಗಳಷ್ಟಿದೆ.[೫೩] ಇದು ೫.೦೮ ಹೆಕ್ಟೇರ್ ಗ್ರಾಮ ಠಾಣಾವನ್ನು ಹೊಂದಿದೆ. ಸಣಾಪುರ ಗ್ರಾಮವು ಪಶ್ಚಿಮದಲ್ಲಿ ಹೊಸಪೇಟೆ ತಾಲೂಕು, ಪೂರ್ವದಲ್ಲಿ ಸಿರುಗುಪ್ಪ ತಾಲೂಕು, ಉತ್ತರದಲ್ಲಿ ಸಿಂಧನೂರು ತಾಲೂಕು, ಹಾಗೂ ದಕ್ಷಿಣದಲ್ಲಿ ಸಂಡೂರು ತಾಲೂಕುಗಳಿಂದ ಆವೃತವಾಗಿದೆ.

೨೦೧೧ರ ಜನಗಣತಿಯ ಪ್ರಕಾರ ಸಣಾಪುರ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಒಟ್ಟು ೭೬ ಕುಟುಂಬಗಳು ನೆಲೆಸಿರುವುದು ಕಂಡುಬರುತ್ತದೆ ಹಾಗೂ ಈ ಪಂಚಾಯಿತಿ ವ್ಯಾಪ್ತಿಯ ಒಟ್ಟು ಜನಸಂಖ್ಯೆ ೮,೫೦೭ರಷ್ಟಿದ್ದು, ಇದರಲ್ಲಿ ಪುರುಷರು ೪,೨೪೯ ಹಾಗೂ ಮಹಿಳೆಯರು ೪,೨೫೮ರಷ್ಟಿದ್ದಾರೆ. ಇವರಲ್ಲಿ ಒಟ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ೨,೮೦೧ರಷ್ಟು ಕಂಡುಬರುತ್ತದೆ. ಅದರಲ್ಲಿ ಪುರುಷರು ೧೩೯೨ ಹಾಗೂ ಮಹಿಳೆಯರು ೧೪೦೯ರಷ್ಟಿದ್ದಾರೆ ಮತ್ತು ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೭೯೭ರಷ್ಟಿದ್ದು, ಇದರಲ್ಲಿ ಪುರುಷರು ೩೯೭ ಹಾಗೂ ಮಹಿಳೆಯರು ೪೦೦ರಷ್ಟಿದ್ದಾರೆ. ಅಂದರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಪ್ರಮಾಣವು ಶೇ.೩೨.೯೨ರಷ್ಟಿದೆ. ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಪ್ರಮಾಣ ಶೇ.೯.೩೬ರಷ್ಟಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇ.೪೨.೨೮ರಷ್ಟು ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನೆಲೆನಿಂತುರುವುದು ಕಂಡುಬರುತ್ತದೆ. ಇನ್ನುಳಿದಂತೆ ಶೇ.೫೭.೭೨ರಷ್ಟು ಇತರ ಸಮುದಾಯದವರು ನೆಲೆನಿಂತಿದ್ದಾರೆ.

೨೦೧೧ರ ಜನಗಣತಿಯ ಪ್ರಕಾರ ಸಣಾಪುರ ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ೧೦೦೦ ಪುರುಷರಿಗೆ ೧೦೦೭ರಷ್ಟು ಮಹಿಳೆಯರಿದ್ದಾರೆ. ರಾಜ್ಯದಲ್ಲಿ ಪ್ರತಿಸಾವಿರ ಪುರುಷರಿಗೆ ೯೬೮ ಸ್ತ್ರೀಯರಿದ್ದಾರೆ. ಈ ಪ್ರಮಾಣವನ್ನು ರಾಜ್ಯಕ್ಕೆ ಹೋಲಿಸಿದರೆ ಶೇ ೪೦ರಷ್ಟು ಹೆಚ್ಚಾಗಿದೆ. ಮಕ್ಕಳ (೦-೬) ಲಿಂಗಾನುಪಾತ ೮೯೯ರಷ್ಟಿದ್ದು, ರಾಜ್ಯಕ್ಕೆ (೯೪೮) ಹೋಲಿಸಿದರೆ ಕಡಿಮೆಯಿದೆ. ೨೦೧೧ರ ಗಣತಿ ಪ್ರಕಾರ ಸಾಕ್ಷರತಾ ಪ್ರಮಾಣವನ್ನು ಕರ್ನಾಟಕ (ಶೇ.೭೫.೬೦ರಷ್ಟು) ರಾಜ್ಯಕ್ಕೆ ಹೋಲಿಸಿದರೆ ಸಣಾಪುರ ಗ್ರಾಮದ (ಶೇ.೫೭.೩೨ರಷ್ಟು) ಸಾಕ್ಷರತಾ ದರವು ಅತ್ಯಂತ ಕಡಿಮೆ ಇರುವುದು ಕಂಡುಬರುತ್ತದೆ. ಈ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಒಟ್ಟು ಸಾಕ್ಷರತಾ ಪ್ರಮಾಣವು ಶೇ.೫೭.೩೨ರಷ್ಟಿದ್ದು, ಇದರಲ್ಲಿ ಪುರುಷರು ಶೇ.೬೮.೯೩ರಷ್ಟು ಹಾಗೂ ಮಹಿಳೆಯರದ್ದು ಶೇ.೪೫.೩೩ರಷ್ಟಿದೆ. ರಾಜ್ಯದ ಸಾಕ್ಷರತಾ ದರಕ್ಕೆ ಹೋಲಿಸಿದರೆ ಪಂಚಾಯತಿಯ ವ್ಯಾಪ್ತಿಯಲ್ಲಿ ಶೇ.೧೮.೨೮ರಷ್ಟು ಕಡಿಮೆ ಹಾಗೂ ಪುರುಷ ಮತ್ತು ಮಹಿಳಾ ಸಾಕ್ಷರತೆ ಪ್ರಮಾಣದಲ್ಲಿ ಕ್ರಮವಾಗಿ ಶೇ.೧೧.೧೭ರಷ್ಟು ಹಾಗೂ ಶೇ.೧೮.೭ರಷ್ಟು ಕಡಿಮೆ ಇದೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಲಿಂಗಾಯತ, ಕಮ್ಮ, ರೆಡ್ಡಿ, ವಾಲ್ಮೀಕಿ, ಹರಿಜನ, ಮುಸ್ಲಿಂ, ಕ್ಷೌರಿಕ, ಅಗಸ.

ಗೊಲ್ಲ, ಕುರುಬ, ಗಂಗಾಮತ, ಬೋವಿ, ಲಂಬಾಣಿ ಮುಂತಾದ ಜಾತಿಗಳು ಕಂಡುಬರುತ್ತವೆ. ಇವುಗಳಲ್ಲಿ ಬಲಿಷ್ಟ ಜಾತಿಯ ಲಿಂಗಾಯಿತ, ಕಮ್ಮ ಹಾಗೂ ರೆಡ್ಡಿ ಸಮುದಾಯಗಳು ಕಂಡುಬರುತ್ತವೆ.[೫೪]

ಈ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಬಹುತೇಕ ಭೂಮಿಯು ಕೃಷಿಯೋಗ್ಯ ನೀರಾವರಿ ಭೂಮಿಯಾಗಿದೆ. ಈ ಗ್ರಾಮದ ಪಕ್ಕದ ಪೂರ್ವದಲ್ಲಿ ತುಂಗಭದ್ರಾ ನದಿ ಹರಿಯುತ್ತದೆ. ತುಂಗಭದ್ರಾ ನದಿಗೆ ವಿಜಯನಗರ ಸಾಮ್ರಾಜ್ಯದ ಆಡಳಿತ ಕಾಲದಲ್ಲಿಯೇ ನಿರ್ಮಿಸಿದ ಕಾಲುವೆ ಮೂಲಕ ನೀರು ಹರಿದು ಬರುತ್ತಿದ್ದು, ಆ ಕಾಲುವೆಯ ನೀರಿನಿಂದ ಬಹುತೇಕ ಕೃಷಿ ಭೂಮಿ ನೀರನ್ನು ಪಡೆಯುತ್ತಿದೆ. ಈ ಗ್ರಾಮದ ವ್ಯಾಪ್ತಿಯಲ್ಲಿ ಸುಮಾರು ೬೦೮ ಹೆಕ್ಟೇರ್‌ಗಳ ಪ್ರದೇಶದಲ್ಲಿ ಭತ್ತ, ಜೋಳ, ಕಬ್ಬು, ಹತ್ತಿ, ಬಾಳೆ, ಮೆಣಸಿನಕಾಯಿ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇಷ್ಟೇ ಅಲ್ಲದೆ ಕಾಲುವೆ ಹಾಗೂ ನದಿಯಿಂದ ನೀರೆತ್ತಲು ಪಂಪ್‌ಸೆಟ್ಟುಗಳನ್ನು ಬಳಸಿಕೊಂಡು ಕೃಷಿ ಭೂಮಿಗೆ ನೀರನ್ನು ಪಡೆಯಲಾಗುತ್ತದೆ.

ಈ ಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು ೨೮ರಷ್ಟು ಸ್ತ್ರೀಶಕ್ತಿ ಗುಂಪುಳಿವೆ. ಇವುಗಳಲ್ಲಿ ೫೩೦ರಷ್ಟು ಮಹಿಳಾ ಸದಸ್ಯರಿದ್ದು, ಇದರಲ್ಲಿ ಪರಿಶಿಷ್ಟ ಜಾತಿ ಮಹಿಳೆಯರು ೨೧೧ರಷ್ಟು ಹಾಗೂ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರು ೫೫ರಷ್ಟು ಇದ್ದಾರೆ.

೩.೮. ಗರಗನಾಗಲಾಪುರ ಗ್ರಾಮ ಪಂಚಾಯತಿಯ ಪರಿಚಯ

ಹೊಸಪೇಟೆ ತಾಲೂಕಿನ ಗರಗನಾಗಲಾಪುರದಲ್ಲಿರುವ ಒಪ್ಪತ್ತೇಶ್ವರ ಸ್ವಾಮಿಯ ಕುರಿತು ಐತಿಹ್ಯ ಹೀಗಿದೆ. ವಿಜಯನಗರ ಸಾಮ್ರಾಜ್ಯದ ದೊರೆ ಪ್ರೌಢದೇವರಾಯನ ಕಾಲದಲ್ಲಿ ಅನೇಕ ಜನ ಅವತಾರ ಪುರುಷರು, ಪವಾಡ ಪುರುಷರು, ವೀರ ಮೂರ್ತಿಗಳು, ಚಿಂತನಾಶೀಲರು, ಭಕ್ತಿಪಥದಲ್ಲಿ ನಡೆದ ನಾಡಿನ ಜನತೆಗೆ ಆಧ್ಯಾತ್ಮಿಕ ಜ್ಞಾನದಾರೆ ಎರೆದಿರುವುದನ್ನು ಅವರು ಮಾಡಿರುವ ಕಾಯಗಳ ಮೂಲಕ ನಮಗೆ ತಿಳಿದುಬರುತ್ತದೆ.

ಪ್ರೌಢದೇವರಾಯ ನಿಧನರಾದ ಮೇಲೆ ಸದಾಶಿವರಾಯ ರಾಜ್ಯಭಾರ ವಹಿಸಿಕೊಂಡನು. ಪ್ರೌಢದೇವರಾಯನ ಅನ್ಯೋನ್ಯತೆಯಲ್ಲಿ ಬೆಳೆದಿದ್ದ ನೂರಾರು ಜನ ವಿರಕ್ತರು ಅವರ ಅಗಲಿಕೆಯಿಂದ ಶೋಕಿತರಾಗಿ ನಾಡಿನೆಲ್ಲಾಚೆ ಒಬ್ಬೊಬ್ಬರಾಗಿ ಸಂಚಾರ ಹೊರಟರು. ಅವರಲ್ಲಿ ಒಬ್ಬರಾದ ಶ್ರೀಗುರು ಒಪ್ಪತ್ತಯ್ಯ ಈ ಸ್ವಾಮಿಯನ್ನು ಒಪ್ಪತ್ತೇಶ್ವರ, ಒಪ್ಪತ್ತಿನ ಅಯ್ಯ, ಒಪ್ಪತ್ತಯ್ಯ ಎಂಬುದಾಗಿ ಮುಂತಾದ ಪರ್ಯಾಯ ನಾಮಗಳಿಂದ ಕರೆಯಲ್ಪಡುತ್ತಿದ್ದರು. ಕಲ್ಯಾಣ ಕಾರ್ಯಗಳನ್ನು ಕೈಗೊಂಡು ಅಂದಿನ ವ್ಯಾಸರಹಟ್ಟಿ (ಈಗಿನ ಗರಗ ನಾಗಲಾಪುರ) ಗ್ರಾಮದಲ್ಲಿ ಜನಿಸಿದ. ಕಥೆ, ವೇದ, ಪುರಾಣ, ಪ್ರವಚನದ ಮೂಲಕ ಆಧ್ಯಾತ್ಮಿಕ ಮೌಲ್ಯ ಸಾರಿ ಸಮಸ್ತ ಜನತೆಗೆ ಐಕ್ಯತೆ ಮತ್ತು ಶಾಂತಿಯನ್ನು ಎಲ್ಲಡೆ ಭಕ್ತಿಯ ಪರಿಸರ ನಿರ್ಮಾಣ ಮಾಡಿದರು. ಅಂತೆ ಅವರನ್ನು ಭಕ್ತಿ ಗೌರವದಿಂದ ಕಂಡು ತಮ್ಮ ಬದುಕನ್ನು ಹಸನಾಗಿಸಿಕೊಂಡರು. ಸುತ್ತಮುತ್ತಲಿನ ಗ್ರಾಮಗಳಿಗೂ ಅವರ ಭಕ್ತಿ, ಆದರ್ಶವಾದದ ಕೀರ್ತಿ

ಹಬ್ಬತೊಡಗಿತು. ಕಾಲನಂತರದಲ್ಲಿ ಒಪ್ಪತ್ತಿನ ಅಯ್ಯ ಅಭಯಾರಣ್ಯದಂತಿದ್ದ ಮ್ಯಾಸರಹಟ್ಟಿ ಗ್ರಾಮದಲ್ಲೇ ಜೀವಂತ ಸಮಾದಿಯಾದರು.

ವಿಜಯನಗರ ಸಾಮ್ರಾಜ್ಯದ ದೊರೆ ಪ್ರೌಢದೇವರಾಯನ ಮಗ ಸದಾಶಿವರಾಯ ತನ್ನ ರಾಣಿಯೊಂದಿಗೆ ಒಂದು ದಿನ ವಾಯುವಿಹಾರಕ್ಕೆಂದು ಮ್ಯಾಸರಹಟ್ಟಿ ಅರಣ್ಯಕ್ಕೆ ಬಂದಾಗ ಮಹಾರಾಣಿಗೆ ಅನತಿ ದೂರದಲ್ಲಿ ಒಂದು ಜ್ಯೋತಿಯ ಪ್ರಖರವಾದ ಬೆಳಕು ಕಾಣಿಸಿತು. ತನ್ಮಯತೆಯಿಂದ ಜ್ಯೋತಿಯನ್ನು ಹಿಂಬಾಲಿಸುತ್ತಾ ಮಹಾರಾಣಿ ನಡೆದಳು. ಅದು ಅರಣ್ಯದ ಒಪ್ಪತ್ತಯ್ಯ ಜೀವಂತ ಸಮಾದಿಯ ಸ್ಥಳಕ್ಕೆ ಬಂದು ಮಾಯವಾಯಿತು. ತುಂಬಾ ಅಚ್ಚರಿಯಿಂದ ಕೆಲ ಕ್ಷಣಗಳಲ್ಲೇ ನಡೆದ ಈ ಘಟನೆಯಿಂದ ರೋಮಾಂಚಿತಳಾದ ಮಹಾರಾಣಿ ತನ್ನ ದೊರೆಗೆ ಈ ವಿಷಯ ತಿಳಿಸಿದಳು. ನಂತರ ಪರಿಪೂರ್ಣ ವಿಷಯ ತಿಳಿದ ಮಹಾರಾಜ ಸಮಾಧಿ ಸ್ಥಳದಲ್ಲಿ ಮಠ ಕಟ್ಟಿಸಿದನು. ಈ ಸಂದರ್ಭದಲ್ಲಿ ತನ್ನ ತಾಯಿ ನಾಗಲಾಂಬಿಕೆಯ ಸವಿನೆನಪಿಗಾಗಿ ಮ್ಯಾಸರಹಟ್ಟಿ ಗ್ರಾಮಕ್ಕೆ ನಾಗಲಾಪುರವೆಂದು ನೂತನ ನಾಮಕರಣ ಮಾಡಿದ ಎಂದು ಹೇಳಲಾಗುತ್ತದೆ.[೫೫] ಪ್ರಸ್ತುತ ಈ ಗ್ರಾಮವನ್ನು ಗರಗನಾಗಲಾಪುರವೆಂದು ಕರೆಯಲಾಗುತ್ತಿದೆ.

ರಾಷ್ಟ್ರೀಯ ಹೆದ್ದಾರಿ ನಂ.೧೩ರಲ್ಲಿ ಮರಿಯಮ್ಮನಹಳ್ಳಿಯಿಂದ ಎಡಗಡೆಗೆ ತಿರುಗುವ ಸಂಪರ್ಕ ರಸ್ತೆಯಲ್ಲಿ ನಾಗಲಾಪುರ ಗ್ರಾಮವಿದೆ. ತಾಲೂಕು ಕೇಂದ್ರವಾದ ಹೊಸಪೇಟೆ ಇಲ್ಲಿಂದ ೨೮ ಕಿ.ಮೀ. ದೂರದಲ್ಲಿದ್ದು, ಜಿಲ್ಲಾ ಕೇಂದ್ರ ಇಲ್ಲಿಂದ ೮೯ ಕಿ.ಮೀ ದೂರದಲ್ಲಿದೆ. ಇದು ಮರಿಯಮ್ಮನಹಳ್ಳಿ ಹೋಬಳಿಗೆ ಸೇರಿದೆ. ಗರಗನಾಗಲಾಪುರ, ನಾಗಲಾಪುರ ತಾಂಡ, ಗುಂಡಾ, ಗುಂಡಾತಾಂಡ, ಗರಗ ಮತ್ತು ಬ್ಯಾಲಕುಂದಿ ಗ್ರಾಮಗಳನ್ನು ಗ್ರಾಮಪಂಚಾಯತಿಯಾಗಿ ರಚಿಸಲಾಗಿದ್ದು, ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೨,೯೮೩ ಹೆಕ್ಟೇರ್ ವಿಸ್ತೀರ್ಣವಾದರೆ, ೮೭೮ ಹೆಕ್ಟೇರ್ ಗ್ರಾಮ ಠಾಣಾದ ವಿಸ್ತೀರ್ಣವಿದೆ.[೫೬] ಗರಗನಾಗಲಾಪುರ ಗ್ರಾಮವು ಉತ್ತರದಲ್ಲಿ ಸಂಡೂರು ತಾಲೂಕು, ದಕ್ಷಿಣದಲ್ಲಿ ಹಗರಿಬೊಮ್ಮಹಳ್ಳಿ ತಾಲೂಕು ಪೂರ್ವದಲ್ಲಿ ಕೂಡ್ಲಿಗಿ ತಾಲೂಕು ಹಾಗೆ ಪಶ್ಚಿಮದಲ್ಲಿ ಹೊಸಪೇಟೆ ತಾಲೂಕುಗಳಿಂದ ಆವೃತವಾಗಿದೆ.[೫೭]

೨೦೧೧ರ ಜನಗಣತಿಯ ಪ್ರಕಾರ ಗರಗನಾಗಲಾಪುರ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಒಟ್ಟು ೧೧೪೯ ಕುಟುಂಬಗಳು ನೆಲೆಸಿರುವುದು ಕಂಡುಬರುತ್ತದೆ. ಹಾಗೂ ಈ ಪಂಚಾಯಿತಿಯ ವ್ಯಾಪ್ತಿಯ ಒಟ್ಟು ಜನಸಂಖ್ಯೆ ೬,೬೪೨ರಷ್ಟಿದ್ದಾರೆ. ಇದರಲ್ಲಿ ಪುರುಷರು ೩,೪೨೧ ಹಾಗೂ ಮಹಿಳೆಯರು ೩,೨೨೧ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ೨,೫೯೮ರಷ್ಟು ಕಂಡುಬರುತ್ತದೆ. ಅವರಲ್ಲಿ ಪುರುಷರು ೧,೩೩೫ ಹಾಗೂ ಮಹಿಳೆಯರು ೧,೨೬೩ರಷ್ಟಿದ್ದಾರೆ. ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೨,೨೮೬ರಷ್ಟಿದ್ದು, ಇದರಲ್ಲಿ ಪುರುಷರು ೧,೧೫೮ಹಾಗೂ ಮಹಿಳೆಯರು ೧,೧೨೮ರಷ್ಟಿದ್ದಾರೆ. ಅಂದರೆ ಗ್ರಾಮಪಂಚಾಯತಿ ವ್ಯಾಪ್ತಿಯ ಒಟ್ಟು ಜನಸಂಖ್ಯೆ ಹೋಲಿಸಿದರೆ ಪರಿಶಿಷ್ಟ ಜಾತಿಯ ಪ್ರಮಾಣವು

ಶೇ.೩೯.೧೧ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಪ್ರಮಾಣ ಶೇ.೩೪.೪೧ರಷ್ಟಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇ.೭೩.೫೨ರಷ್ಟು ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನೆಲೆನಿಂತಿರುವುದು ಕಂಡುಬರುತ್ತಾರೆ. ಇನ್ನುಳಿದಂತೆ ಶೇ.೨೬.೪೮ರಷ್ಟು ಇತರ ಸಮುದಾಯವರು ನೆಲೆನಿಂತಿದ್ದಾರೆ. ೨೦೧೧ರ ಗಣತಿಯ ಪ್ರಕಾರ, ಗರಗನಾಗಲಾಪುರ ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ೧೦೦೦ ಪುರುಷರಿಗೆ ೯೪೧ರಷ್ಟು ಮಹಿಳೆಯರಿದ್ದಾರೆ. ರಾಜ್ಯದಲ್ಲಿ ಪ್ರತಿಸಾವಿರ ಪುರುಷರಿಗೆ ೯೬೮ಸ್ತ್ರೀಯರಿದ್ದಾರೆ. ಈ ಪ್ರಮಾಣವನ್ನು ರಾಜ್ಯಕ್ಕೆ ಹೋಲಿಸಿದರೆ ಶೇ.೧೦ರಷ್ಟು ಕಡಿಮೆಯಾಗಿದೆ. ಮಕ್ಕಳ (೦-೬) ಲಿಂಗಾನುಪಾತ ೯೦೯ರಷ್ಟಿದ್ದು, ರಾಜ್ಯಕ್ಕೆ (೯೪೮) ಹೋಲಿಸಿದರೆ ಕಡಿಮೆಯಿದೆ. ೨೦೧೧ರ ಗಣತಿಯ ಪ್ರಕಾರ, ಗರಗನಾಗಲಾಪುರ ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ಸಾಕ್ಷರತಾ ದರ ಶೇ.೫೬.೭೮ರಷ್ಟಿದ್ದು, ಇದನ್ನು ರಾಜ್ಯಕ್ಕೆ (ಶೇ.೭೫.೬೦ರಷ್ಟು) ಹೋಲಿಸಿದರೆ ಶೇ.೧೮.೮೨ರಷ್ಟು ಕಡಿಮೆ ಇರುವುದು ಕಂಡುಬರುತ್ತದೆ. ಈ ಪಂಚಾಯತಿಯ ವ್ಯಾಪ್ತಿಯಲ್ಲಿ ಒಟ್ಟು ಸಾಕ್ಷರತಾ ಪ್ರಮಾಣವು ಶೇ.೫೬.೭೮ರಷ್ಟಿದ್ದು, ಇದರಲ್ಲಿ ಪುರುಷರು ಶೇ.೬೮.೯೦ರಷ್ಟು ಹಾಗೂ ಮಹಿಳೆಯರದ್ದು ಶೇ.೪೩.೯೮ರಷ್ಟಿದೆ. ರಾಜ್ಯದ ಸಾಕ್ಷರತಾ ದರಕ್ಕೆ ಹೋಲಿಸಿದರೆ ಪಂಚಾಯತಿಯ ವ್ಯಾಪ್ತಿಯಲ್ಲಿ ಶೇ.೧೮.೮೨ರಷ್ಟು ಕಡಿಮೆ ಹಾಗೂ ಪುರುಷ ಮತ್ತು ಮಹಿಳಾ ಸಾಕ್ಷರತೆ ಪ್ರಮಾಣದಲ್ಲಿ ಕ್ರಮವಾಗಿ ಶೇ.೨೪.೧೫ರಷ್ಟು ಹಾಗೂ ಶೇ.೧೩.೯೫ರಷ್ಟು ಕಡಿಮೆ ಇದೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಾಯಕ, ಮ್ಯಾಸನಾಯಕ, ಬಡಿಗ, ಈಡಿಗ, ಲಿಂಗಾಯಿತ, ಕುರುಬ, ಗಂಗಾಮತ, ಬೋವಿ, ಲಂಬಾಣಿ, ಮುಸ್ಲಿಂ, ಮಡಿವಾಳ, ಶೆಟ್ಟಿ, ಶೆಟ್ಟಿಬಣಜಿಗ, ಸಿಂಪಿಗ, ಬಾರಿಕ, ಜಂಗಮ, ಕೊರವ ಮುಂತಾದ ಸಮುದಾಯಗಳು ಕಂಡುಬರುತ್ತವೆ. ಇಲ್ಲಿ ಕನ್ನಡ ಪ್ರಾದೇಶಿಕ ಭಾಷೆಯಾಗಿದೆ.[೫೮] ತೆಲುಗು, ಲಮಾಣಿ ಭಾಷೆಗಳನ್ನೂ ಸಹ ಇಲ್ಲಿನ ಜನರು ಮಾತನಾಡುತ್ತಾರೆ.

ಈ ಗ್ರಾಮ ಪಂಚಾಯತಿ ವ್ಯಾಪ್ತಿಯ ಒಟ್ಟು ಭೌಗೋಳಿಕ ವಿಸ್ತೀರ್ಣವು ೨,೯೮೩ ಹೆಕ್ಟೇರುಗಳಷ್ಟಿದೆ. ಒಣ ಬೇಸಾಯವನ್ನು ಹೆಚ್ಚಾಗಿ ಅವಲಂಬಿಸಿರುವ ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎರಡು ಕೆರೆಗಳಿವೆ. ಮಳೆಯಾಶ್ರಿತ ನೀರನ್ನು ಮಾತ್ರ ಅವಲಂಬಿಸಿರುವ ಈ ಕೆರೆಗಳಲ್ಲಿ ಮಳೆಯಾದರೆ ಮಾತ್ರ ನೀರು ಸಂಗ್ರಹವಾಗುತ್ತದೆ. ಮಳೆ ಸಮರ್ಪಕವಾಗಿ ಬಾರದಿದ್ದಲ್ಲಿ ಈ ಕೆರೆಯನ್ನಾಶ್ರಯಿಸಿ ಬೇಸಾಯದಲ್ಲಿ ತೊಡಗಿರುವ ಕೃಷಿ ಭೂಮಿಗಳಿಗೆ ನೀರಾವರಿ ಸೌಲಭ್ಯ ಇರುವುದಿಲ್ಲ. ನೀರಿಗಾಗಿ ಕೆರೆಗಳನ್ನಾಶ್ರಯಿಸಿದ ಒಟ್ಟು ಕೃಷಿ ಭೂಮಿ ೫೦೫ ಹೆಕ್ಟೇರ್‌ಗಳಷ್ಟಿದೆ. ಇದರೊಳಗೆ ಕೊಳವೆ ಬಾವಿಗಳನ್ನು ಸಹ ಈ ಗ್ರಾಮಪಂಚಾಯತಿ ವ್ಯಾಪ್ತಿಯ ಕೃಷಿ ಭೂಮಿಗೆ ನೀರುಣಿಸಲು ಬಳಸಲಾಗುತ್ತದೆ. ಅಂದರೆ ವಿದ್ಯುತ್‌ಚ್ಛಕ್ತಿ ಹೊಂದಿದ ನೀರಾವರಿ ಪಂಪ್‌ಸೆಟ್‌ಗಳು ೧೩೮ ರಷ್ಟಿವೆ. ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ಭೂಮಿಯಲ್ಲಿ ಮೆಕ್ಕೆಜೋಳ, ಜೋಳ, ಸಜ್ಜೆ, ರಾಗಿ, ನವಣೆ, ಗೋಧಿ ಮತ್ತು ಈರುಳ್ಳಿ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಈ

ಗ್ರಾಮಪಂಚಾಯತಿ ವ್ಯಾಪ್ತಿಯ ಸರಹದ್ದಿಗೆ ಸೇರಿದ ಅರಣ್ಯ ಪ್ರದೇಶವು ೧.೮೨೩ ಹೆಕ್ಟೇರ್‌ಗಳಷ್ಟಿದೆ. ಗ್ರಾಮಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಒಟ್ಟು ಠಾಣಾ ಪ್ರದೇಶವು ೧೦ ಹೆಕ್ಟೇರ್‌ಗಳಷ್ಟಿದ್ದು, ಇದರಲ್ಲಿ ಒಟ್ಟು ೯೪೫೩ರಷ್ಟು ಕುಟುಂಬಗಳು ನೆಲೆಸಿರುವುದನ್ನು ನೋಡಬಹುದು.[೫೯]

ಈ ಪಂಚಾಯಿತಿಯ ವ್ಯಾಪ್ತಿಯಲ್ಲಿ ಒಟ್ಟು ೩೫ ಸ್ತ್ರೀಶಕ್ತಿ ಗುಂಪುಗಳಿದ್ದು, ಇವುಗಳಲ್ಲಿ ೪೨೬ ಮಹಿಳಾ ಸದಸ್ಯರಿದ್ದಾರೆ. ಇದರಲ್ಲಿ ೯೬ ಪರಿಶಿಷ್ಟ ಮಹಿಳೆಯರು ಹಾಗೂ ೧೨೪ ಪರಿಶಿಷ್ಟ ಪಂಗಡದ ಮಹಿಳೆಯರಿದ್ದಾರೆ.

೩.೯. ಕೂಡ್ಲಿಗಿ ತಾಲೂಕಿನ ಪರಿಚಯ

ಕೂಡ್ಲಿಗಿ ಬಳ್ಳಾರಿ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಬರುವ ತಾಲೂಕಾಗಿದೆ. ಜಿಲ್ಲೆಯ ಆಡಳಿತದ ಉಪವಿಭಾಗವೂ ಆಗಿದೆ. ಕೂಡ್ಲಿಗಿ ತಾಲೂಕು ಸಂಪೂರ್ಣ ಒಣಭೂಮಿ ಪ್ರದೇಶವನ್ನು ಒಳಗೊಂಡಿದೆ. ಶೇ.೮೦ಕ್ಕೂ ಹೆಚ್ಚು ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ಇದು ಕೃಷಿಯನ್ನು ಅವಲಂಬಿಸಿರುವ ರಾಜ್ಯದ ೩ನೇ ತಾಲೂಕಾಗಿದೆ. ಮಳೆಯನ್ನೇ ನಂಬಿ ಕೃಷಿಯನ್ನು ಇಲ್ಲಿನ ಜನತೆ ಅವಲಂಬಿಸಿದ್ದಾರೆ. ತಾಲೂಕಿನಲ್ಲಿ ನೈಸರ್ಗಿಕ ಸಂಪತ್ತಿನ ಅಭಾವ, ನೀರಾವರಿ ಸೌಲಭ್ಯದ ಕೊರತೆ, ಮಾರುಕಟ್ಟೆ, ಉದ್ದಿಮೆಗಳು, ವಾಣಿಜ್ಯ, ವೈದ್ಯಕೀಯ, ಸಾರಿಗೆ–ಸಂಪರ್ಕ ಮುಂತಾದ ಸೌಲಭ್ಯಗಳು ಕಡಿಮೆ ಪ್ರಮಾಣದ ಪಡೆದ ತಾಲೂಕಾಗಿದೆ. ಈ ಸೌಲಭ್ಯಗಳ ವಂಚಿತ ತಾಲೂಕುಗಳಿಗೆ ಹೋಲಿಸಿದರೆ ಕೂಡ್ಲಿಗಿ ತಾಲೂಕು ಜಿಲ್ಲೆಯಲ್ಲಿ ಹಿಂದುಳಿದ ತಾಲೂಕು ಎಂದು ಗುರುತಿಸಬಹುದು. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಕೂಡ್ಲಿಗಿ ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಚಾರಿತ್ರಿಕ ಹಿನ್ನೆಲೆ : ಕೂಡ್ಲಿಗಿ ಕರ್ನಾಟಕದ ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಕೇಂದ್ರ ಬೆಂಗಳೂರಿಗೆ ಹೋಗುವ ಹೆದ್ದಾರಿಯಲ್ಲಿ ಕಂಡುಬರುವ ಕೂಡ್ಲಿಗಿ ಪಟ್ಟಣ ಧಾರ್ಮಿಕ, ಐತಿಹಾಸಿಕ ಹಾಗೂ ರಾಜಕೀಯವಾಗಿ ಹಾಗೂ ಪ್ರಸಿದ್ಧಿ ಪಡೆದ ಸ್ಥಳ. ಕೂಡ್ಲಿಗಿಯ ಇತಿಹಾಸವನ್ನು ಗಮನಿಸಿದರೆ ಮೌರ್ಯರು, ಶಾತವಾಹನರು, ಪಲ್ಲವರು, ಕದಂಬರು, ಚಾಲುಕ್ಯರ ಆಳ್ವಿಕೆಗೆ ಈ ಭಾಗ ಒಳಪಟ್ಟತ್ತೆಂದು ತಿಳಿದುಬರುತ್ತದೆ. ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಕೂಡ್ಲಿಗಿಯು ಅವರ ಸಾಮಂತರಾದ ಗಂಗರ ಆಳ್ವಿಕೆಯಲ್ಲಿತ್ತು. ನಂತರ ವಿಜಯನಗರ ಅರಸರು, ಹೈದರಾಲಿ, ಟಿಪ್ಪುಸುಲ್ತಾನರ ಆಳ್ವಿಕೆಗೆ ಒಳಪಟ್ಟಿತ್ತು. ತದನಂತರ ಬ್ರಿಟೀಷರ ಆಧಿಪತ್ಯಕೊಳಪಟ್ಟಿತ್ತು. ಸ್ವಾತಂತ್ರ್ಯನಂತರ ೧೯೫೩ರ ಅಕ್ಟೋಬರ್‌ನಲ್ಲಿ ಬಳ್ಳಾರಿ ಜಿಲ್ಲೆಯೊಂದಿಗೆ ಕೂಡ್ಲಿಗಿ ಮೈಸೂರು ರಾಜ್ಯಕ್ಕೆ ಸೇರಿಸಲ್ಪಟ್ಟಿತ್ತು. ನಂತರ ೧೯೫೬ರಲ್ಲಿ ಕರ್ನಾಟಕದಲ್ಲಿ ವಿಲೀನವಾಯಿತು.

ಸ್ವಾತಂತ್ರ್ಯ ಚಳುವಳಿಯಲ್ಲಿ ಕೂಡ್ಲಿಗಿಯ ಪಾತ್ರ ಅತ್ಯಂತ ಮಹತ್ವವಾಗಿದೆ. ಅನೇಕ ಸ್ವಾತಂತ್ರ್ಯ ಪ್ರೇಮಿಗಳು ಈ ಮಹಾನ್ ಕಾರ್ಯದಲ್ಲಿ ಭಾಗಿಗಳಾಗಿದ್ದರು. ಕೊಟ್ಟೂರಿನ ಗೋರ್ಲಿ ಶರಣಪ್ಪನವರು ಕಟ್ಟಿ ಬೆಳೆಸಿದ ಕೊಟ್ಟೂರು ವ್ಯಾಯಾಮ ಶಾಲೆ ಸ್ವಾತಂತ್ರ್ಯ ಹೋರಾಟಗಾರರ ಕೇಂದ್ರ ಸ್ಥಾನವಾಗಿ ಬೆಳೆಯಿತು.

ಗ್ರಾಮಪಂಚಾಯತಿ ವ್ಯಾಪ್ತಿಯ ಸರಹದ್ದಿಗೆ ಸೇರಿದ ಅರಣ್ಯ ಪ್ರದೇಶವು ೧.೮೨೩ ಹೆಕ್ಟೇರ್‌ಗಳಷ್ಟಿದೆ. ಗ್ರಾಮಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಒಟ್ಟು ಠಾಣಾ ಪ್ರದೇಶವು ೧೦ ಹೆಕ್ಟೇರ್‌ಗಳಷ್ಟಿದ್ದು, ಇದರಲ್ಲಿ ಒಟ್ಟು ೯೪೫೩ರಷ್ಟು ಕುಟುಂಬಗಳು ನೆಲೆಸಿರುವುದನ್ನು ನೋಡಬಹುದು.[೫೯]

ಈ ಪಂಚಾಯಿತಿಯ ವ್ಯಾಪ್ತಿಯಲ್ಲಿ ಒಟ್ಟು ೩೫ ಸ್ತ್ರೀಶಕ್ತಿ ಗುಂಪುಗಳಿದ್ದು, ಇವುಗಳಲ್ಲಿ ೪೨೬ ಮಹಿಳಾ ಸದಸ್ಯರಿದ್ದಾರೆ. ಇದರಲ್ಲಿ ೯೬ ಪರಿಶಿಷ್ಟ ಮಹಿಳೆಯರು ಹಾಗೂ ೧೨೪ ಪರಿಶಿಷ್ಟ ಪಂಗಡದ ಮಹಿಳೆಯರಿದ್ದಾರೆ.

೩.೯. ಕೂಡ್ಲಿಗಿ ತಾಲೂಕಿನ ಪರಿಚಯ

ಕೂಡ್ಲಿಗಿ ಬಳ್ಳಾರಿ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಬರುವ ತಾಲೂಕಾಗಿದೆ. ಜಿಲ್ಲೆಯ ಆಡಳಿತದ ಉಪವಿಭಾಗವೂ ಆಗಿದೆ. ಕೂಡ್ಲಿಗಿ ತಾಲೂಕು ಸಂಪೂರ್ಣ ಒಣಭೂಮಿ ಪ್ರದೇಶವನ್ನು ಒಳಗೊಂಡಿದೆ. ಶೇ.೮೦ಕ್ಕೂ ಹೆಚ್ಚು ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ಇದು ಕೃಷಿಯನ್ನು ಅವಲಂಬಿಸಿರುವ ರಾಜ್ಯದ ೩ನೇ ತಾಲೂಕಾಗಿದೆ. ಮಳೆಯನ್ನೇ ನಂಬಿ ಕೃಷಿಯನ್ನು ಇಲ್ಲಿನ ಜನತೆ ಅವಲಂಬಿಸಿದ್ದಾರೆ. ತಾಲೂಕಿನಲ್ಲಿ ನೈಸರ್ಗಿಕ ಸಂಪತ್ತಿನ ಅಭಾವ, ನೀರಾವರಿ ಸೌಲಭ್ಯದ ಕೊರತೆ, ಮಾರುಕಟ್ಟೆ, ಉದ್ದಿಮೆಗಳು, ವಾಣಿಜ್ಯ, ವೈದ್ಯಕೀಯ, ಸಾರಿಗೆ–ಸಂಪರ್ಕ ಮುಂತಾದ ಸೌಲಭ್ಯಗಳು ಕಡಿಮೆ ಪ್ರಮಾಣದ ಪಡೆದ ತಾಲೂಕಾಗಿದೆ. ಈ ಸೌಲಭ್ಯಗಳ ವಂಚಿತ ತಾಲೂಕುಗಳಿಗೆ ಹೋಲಿಸಿದರೆ ಕೂಡ್ಲಿಗಿ ತಾಲೂಕು ಜಿಲ್ಲೆಯಲ್ಲಿ ಹಿಂದುಳಿದ ತಾಲೂಕು ಎಂದು ಗುರುತಿಸಬಹುದು. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಕೂಡ್ಲಿಗಿ ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಚಾರಿತ್ರಿಕ ಹಿನ್ನೆಲೆ : ಕೂಡ್ಲಿಗಿ ಕರ್ನಾಟಕದ ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಕೇಂದ್ರ ಬೆಂಗಳೂರಿಗೆ ಹೋಗುವ ಹೆದ್ದಾರಿಯಲ್ಲಿ ಕಂಡುಬರುವ ಕೂಡ್ಲಿಗಿ ಪಟ್ಟಣ ಧಾರ್ಮಿಕ, ಐತಿಹಾಸಿಕ ಹಾಗೂ ರಾಜಕೀಯವಾಗಿ ಹಾಗೂ ಪ್ರಸಿದ್ಧಿ ಪಡೆದ ಸ್ಥಳ. ಕೂಡ್ಲಿಗಿಯ ಇತಿಹಾಸವನ್ನು ಗಮನಿಸಿದರೆ ಮೌರ್ಯರು, ಶಾತವಾಹನರು, ಪಲ್ಲವರು, ಕದಂಬರು, ಚಾಲುಕ್ಯರ ಆಳ್ವಿಕೆಗೆ ಈ ಭಾಗ ಒಳಪಟ್ಟತ್ತೆಂದು ತಿಳಿದುಬರುತ್ತದೆ. ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಕೂಡ್ಲಿಗಿಯು ಅವರ ಸಾಮಂತರಾದ ಗಂಗರ ಆಳ್ವಿಕೆಯಲ್ಲಿತ್ತು. ನಂತರ ವಿಜಯನಗರ ಅರಸರು, ಹೈದರಾಲಿ, ಟಿಪ್ಪುಸುಲ್ತಾನರ ಆಳ್ವಿಕೆಗೆ ಒಳಪಟ್ಟಿತ್ತು. ತದನಂತರ ಬ್ರಿಟೀಷರ ಆಧಿಪತ್ಯಕೊಳಪಟ್ಟಿತ್ತು. ಸ್ವಾತಂತ್ರ್ಯನಂತರ ೧೯೫೩ರ ಅಕ್ಟೋಬರ್‌ನಲ್ಲಿ ಬಳ್ಳಾರಿ ಜಿಲ್ಲೆಯೊಂದಿಗೆ ಕೂಡ್ಲಿಗಿ ಮೈಸೂರು ರಾಜ್ಯಕ್ಕೆ ಸೇರಿಸಲ್ಪಟ್ಟಿತ್ತು. ನಂತರ ೧೯೫೬ರಲ್ಲಿ ಕರ್ನಾಟಕದಲ್ಲಿ ವಿಲೀನವಾಯಿತು.

ಸ್ವಾತಂತ್ರ್ಯ ಚಳುವಳಿಯಲ್ಲಿ ಕೂಡ್ಲಿಗಿಯ ಪಾತ್ರ ಅತ್ಯಂತ ಮಹತ್ವವಾಗಿದೆ. ಅನೇಕ ಸ್ವಾತಂತ್ರ್ಯ ಪ್ರೇಮಿಗಳು ಈ ಮಹಾನ್ ಕಾರ್ಯದಲ್ಲಿ ಭಾಗಿಗಳಾಗಿದ್ದರು. ಕೊಟ್ಟೂರಿನ ಗೋರ್ಲಿ ಶರಣಪ್ಪನವರು ಕಟ್ಟಿ ಬೆಳೆಸಿದ ಕೊಟ್ಟೂರು ವ್ಯಾಯಾಮ ಶಾಲೆ ಸ್ವಾತಂತ್ರ್ಯ ಹೋರಾಟಗಾರರ ಕೇಂದ್ರ ಸ್ಥಾನವಾಗಿ ಬೆಳೆಯಿತು.

೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದವರಲ್ಲಿ ಬಣಕಾರ ಸಿದ್ದಲಿಂಗಪ್ಪ, ಸುತ್ರಾವೆ ಗೋವಿಂದರಾವ್, ಗೋರ್ಲಿ ಶರಣಪ್ಪ, ಅಯ್ಯನಹಳ್ಳಿ ಕೊಟ್ರಯ್ಯ ಮುಂತಾದವರು ಪ್ರಮುಖರು. ದಿವಂಗತ ಸುಮಿತ್ರಪ್ಪ ಎಂಬ ಹೋರಾಟಗಾರರು ನೇತಾಜಿ ಸುಭಾಷ ಚಂದ್ರಬೋಸ್ ಅವರ ಅನುಯಾಯಿಯಾಗಿ ಅವರೊಂದಿಗೆ ಕಾರ್ಯನಿರ್ವಹಿಸಿದವರು. ಆ ಸಂದರ್ಭದಲ್ಲಿ ಭೂಗತರಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರೂ ಇದ್ದಾರೆ. ಕೂಡ್ಲಿಗಿ ಪಟ್ಟಣದಲ್ಲಿಯೇ ಮಹಾತ್ಮ ಗಾಂಧೀಯವರ ಚಿತಾಭಸ್ಮ ಸ್ಮಾರಕವಿದೆ.[೬೦]

ಭೌಗೋಳಿಕ ಹಿನ್ನೆಲೆ : ಕೂಡ್ಲಿಗಿ ತಾಲೂಕು ಬಳ್ಳಾರಿ ಜಿಲ್ಲೆಯ ಪಶ್ಚಿಮ ಭಾಗದಲ್ಲಿದೆ. ಭೂ ವಿಸ್ತೀರ್ಣ ೨೦೧೧ರ ಜನಗಣತಿಯ ಪ್ರಕಾರ ೧೬೧೮.೮೭ರಷ್ಟು ಇದ್ದು, ವಿಸ್ತೀರ್ಣದಲ್ಲಿ ಜಿಲ್ಲೆಯಲ್ಲಿ ಎರಡನೇ ಸ್ಥಾನದಲ್ಲಿದೆ.[೬೧] ಕೂಡ್ಲಿಗಿ ತಾಲೂಕು ಮಧ್ಯದಲ್ಲಿ ಸಣ್ಣ ಬೆಟ್ಟ ಗುಡ್ಡಗಳನ್ನು ಹೊಂದಿದ್ದು, ಉಳಿದಂತೆ ಪ್ರಸ್ಥಭೂಮಿಯನ್ನು ಹೊಂದಿದೆ. ಕೆಂಪು-ಬಿಳಿ ಮಿಶ್ರಿತವಾದ ಮಣ್ಣನ್ನೂ ಭೂಮಿ ಹೊಂದಿದೆ. ಹವಾಮಾನ ಆರೋಗ್ಯಕರವಾಗಿದ್ದು, ಚಳಿಗಾಲ ಬಿಟ್ಟರೆ ಉಳಿದಂತೆ ಉಷ್ಣತೆ ಹೆಚ್ಚು. ಇದು ಕೃಷಿಯನ್ನು ಅವಲಂಬಿಸಿರುವ ರಾಜ್ಯದ ೩ನೇ ತಾಲೂಕಾಗಿದೆ. ಮಳೆಯನ್ನೆ ನಂಬಿ ಕೃಷಿಯನ್ನು ಮಾಡುತ್ತಿದ್ದಾರೆ. ತಾಲೂಕಿನಾದ್ಯಂತ ಅಧಿಕ ಕೆರೆಗಳಿದ್ದು, ಇದರ ಮೂಲಕ ಸಹ ಕೃಷಿಯನ್ನು ಕೈಗೊಂಡಿದ್ದಾರೆ. ಕೆರೆಗಳು ಅಲ್ಪ ಸ್ವಲ್ಪ ನೀರಾವರಿ ಕೃಷಿಗೆ ಅನುಕೂಲವಾಗಿದೆ. ಸರಾಸರಿಯಾಗಿ ೬೨೮.೩ ಮಿಲಿಮೀಟರ್‌ರಷ್ಟು ಮಳೆ ಬೀಳುತ್ತದೆ. ತಾಲೂಕಿನ ಪ್ರಮುಖ ಬೆಳೆಗಳೆಂದರೆ ಜೋಳ, ಸಜ್ಜೆ, ನವಣೆ, ನೆಲಗಡಲೆ, ಹತ್ತಿ, ಬೇಳೆಕಾಳುಗಳು, ರಾಗಿ, ಮೆಕ್ಕೆಜೋಳ, ನೀರಿನ ಆಶ್ರಯವಿರುವಕಡೆ ಭತ್ತ, ಮೆಣಸಿನಕಾಯಿ, ಈರುಳ್ಳಿ, ಕಬ್ಬು. ಸರಾಸರಿ ೧೪೬೯೮ (ಶೇ.೧೯ರಷ್ಟು) ಹೆಕ್ಟೇರ್‌ಗಳಷ್ಟು ಮಾತ್ರ ನೀರಾವರಿ ಭೂಮಿಯಿದೆ. ಉಳಿದೆಲ್ಲಾ ಪ್ರದೇಶ ಕೆರೆಗಳ ಮೂಲಕ ೬೯೦೫ (ಶೇ.೪೭.೦೦ರಷ್ಟು) ಹೆಕ್ಟೇರ್‌ಗಳಷ್ಟು ಹಾಗೂ ಬೋರ್‌ವೆಲ್ ಅಥವಾ ಬಾವಿಗಳ ಮೂಲಕ ೭೭೯೩ (ಶೇ.೫೩.೦೦ರಷ್ಟು) ಹೆಕ್ಟೇರ್‌ಗಳಲ್ಲಿ ಮಾತ್ರ ಬಿತ್ತನೆಯಾಗಿದೆ. ಇಡೀ ಜಿಲ್ಲೆಯಲ್ಲಿ ಹೆಚ್ಚು ಹುಣಸೆ ಮರಗಳನ್ನು ಹೊಂದಿದ ತಾಲೂಕಾಗಿದೆ. ಜಿಲ್ಲೆಯಲ್ಲಿ ೩೩.೬೬೧ ಹೆಕ್ಟೇರ್‌ಗಳಷ್ಟು ಅರಣ್ಯ ಪ್ರದೇಶವನ್ನು ಹೊಂದಿದ್ದು, ಜಿಲ್ಲೆಯಲ್ಲೇ ಮೊದಲ ಸ್ಥಾನದಲ್ಲಿದೆ. ತಾಲೂಕಿನ ಉತ್ತರ ಭಾಗದಲ್ಲಿ ಹಗರಿಬೊಮ್ಮನಹಳ್ಳಿ ಹಾಗೂ ಸಂಡೂರು ತಾಲೂಕು, ದಕ್ಷಿಣಕ್ಕೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕು ಮತ್ತು ಮೊಳಕಾಲ್‌ಮೂರ್ ತಾಲೂಕು, ಪೂರ್ವಕ್ಕೆ ಅನಂತರಪುರ ಜಿಲ್ಲೆ, ಪಶ್ಚಿಮಕ್ಕೆ ಹರಪನಹಳ್ಳಿ ತಾಲೂಕುಗಳು ಇವೆ.[೬೨]

ಸಾಮಾಜಿಕ ಹಿನ್ನೆಲೆ : ೨೦೧೧ರ ಜನಗಣತಿಯ ಪ್ರಕಾರ ತಾಲೂಕಿನ ಜನಸಂಖ್ಯೆ ೨,೭೨,೧೮೩ರಷ್ಟಿದ್ದು, ಇದರಲ್ಲಿ ಪುರುಷರು ೧,೩೯,೧೭೦ (ಶೇ.೫೧.೧೩)ರಷ್ಟು ಮತ್ತು ಮಹಿಳೆಯರು ೧,೩೨,೯೮೧ (ಶೇ.೪೮.೮೫)ರಷ್ಟು ಇದ್ದಾರೆ. ಜಿಲ್ಲೆಯಲ್ಲಿ ತಾಲೂಕಿನ ಪಾಲು ಶೇ.೨೪ರಷ್ಟಿದ್ದು, ಜನಸಂಖ್ಯೆಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ತಾಲೂಕಿನ ವಿಸ್ತೀರ್ಣ ೧೬೧೮.೮೭ ರಷ್ಟಿದೆ. ಶೇ.೧೯.೧೫ರಷ್ಟು ಜಿಲ್ಲೆಯ ಒಟ್ಟು

ವಿಸ್ತೀರ್ಣದಲ್ಲಿ ಇದರ ಪ್ರಮಾಣವಾಗಿದೆ. ಜಿಲ್ಲೆಯಲ್ಲಿ ಬಳ್ಳಾರಿ ತಾಲೂಕನ್ನು ಬಿಟ್ಟರೆ ಅತಿ ದೊಡ್ಡ ತಾಲೂಕು ಇದಾಗಿದೆ. ೨೦೧೧ರ ಜನಗಣತಿಯ ಪ್ರಕಾರ ತಾಲೂಕಿನ ಒಟ್ಟು ಜನಸಂಖ್ಯೆ ೩೦೮೯೦೧ರಷ್ಟಿದ್ದು, ಇದರಲ್ಲಿ ೧೫೭೪೦೨ರಷ್ಟು ಪುರುಷರು ಮತ್ತು ೧೫೧೪೯೯ರಷ್ಟು ಮಹಿಳೆಯರು ಇದ್ದಾರೆ. ಕೂಡ್ಲಿಗಿ ತಾಲೂಕುನಲ್ಲಿ ಪ್ರತಿ ಚ.ಕಿ.ಮೀಗೆ ೧೯೯ರಷ್ಟು ಜನಸಾಂದ್ರತೆ ಇದೆ. ಜಾತಿವಾರು ಜನಸಂಖ್ಯೆಯನ್ನು ನೋಡಿದಾಗ ಪರಿಶಿಷ್ಟ ಜಾತಿ ೫೨,೨೧೨ ಶೇ.೧೯.೧೮ ಇದ್ದು, ಇದರಲ್ಲಿ ೨೬,೫೪೦ (ಶೇ.೫೦.೮೩ರಷ್ಟು) ಪುರುಷರು, ೨೫,೬೭೨ (ಶೇ.೪೯.೧೬)ರಷ್ಟು ಮಹಿಳೆಯರು ಇದ್ದಾರೆ. ಒಟ್ಟು ಪರಿಶಿಷ್ಟ ಪಂಗಡ ಜನಸಂಖ್ಯೆ ೫೩.೬೫೦ (ಶೇ.೨೭.೦೫ರಷ್ಟು) ಇದ್ದು, ಇದರಲ್ಲಿ ೩೭,೨೯೮ (ಶೇ.೫೦.೬೪)ರಷ್ಟು ಪುರುಷರು ಮತ್ತು ೩೬,೩೫೨ (ಶೇ.೪೯.೩೫)ರಷ್ಟು ಮಹಿಳೆಯರು ಇದ್ದಾರೆ. ಈ ತಾಲೂಕು ಪರಿಶಿಷ್ಟ ಜಾತಿ–ಪಂಗಡ ಜನಸಂಖ್ಯೆ ಪ್ರಮಾಣ ೧,೨೫,೮೬೨ (ಶೇ.೪೬.೨೪)ರಷ್ಟು ಹೊಂದಿದ್ದು, ಜಿಲ್ಲೆಯಲ್ಲಿ ಅತಿ ಹೆಚ್ಚು ಪರಿಶಿಷ್ಟರನ್ನು ಹೊಂದಿದ ತಾಲೂಕು ಇದಾಗಿದೆ. ಅಧ್ಯಯನದ ಆಯ್ಕೆಗೆ ಈ ಅಂಶವು ಸಹ ಒಂದು ಕಾರಣವಾಗಿದೆ. ಕೂಡ್ಲಿಗಿ ತಾಲೂಕಿನಲ್ಲಿ ಪ್ರತಿ ೧೦೦೦ ಪುರುಷರಿಗೆ ೯೬೦ರಷ್ಟು ಮಹಿಳೆಯರಿದ್ದಾರೆ. ಲಿಂಗಾನುಪಾತವು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ೬ನೇ ಸ್ಥಾನವನ್ನು ಪಡೆದಿದೆ.[೬೩] ೨೦೧೧ರ ಜನಗಣತಿ ಪ್ರಕಾರ ಸಾಕ್ಷರರ ಸಂಖ್ಯೆ ತಾಲೂಕಿನಲ್ಲಿ ೧೯೫೯೯೩ (ಶೇ.೬೯.೪೫) ರಷ್ಟಿದ್ದು, ಜಿಲ್ಲೆಯಲ್ಲಿ ಮೂರನೇ ಸ್ಥಾನದಲ್ಲಿದೆ. ಜಿಲ್ಲೆಗಿಂತ ಶೇ ೧.೬ರಷ್ಟು ಹೆಚ್ಚಿದ್ದು, ಸಾಕ್ಷರತೆಯ ದೃಷ್ಟಿಯಿಂದ ಜಿಲ್ಲೆಗಿಂತ ಉತ್ತಮ ಸ್ಥಿತಿಯಲ್ಲಿದೆ. ಒಣಭೂಮಿ ಪ್ರದೇಶವಾದರೂ ಸಾಕ್ಷರತೆ ಪ್ರಮಾಣ ಹೆಚ್ಚಿದೆ.[೬೪] ಸಾಮಾಜಿಕವಾಗಿ ಕೂಡ್ಲಿಗಿ ತಾಲೂಕು ವಿವಿಧ ಜಾತಿ, ಧರ್ಮ ಹಾಗೂ ವರ್ಗಗಳಿಂದ ಕೂಡಿದೆ. ತಾಲೂಕಿನಲ್ಲಿ ಮುಖ್ಯವಾಗಿ ಲಿಂಗಾಯತರು, ವಾಲ್ಮೀಕಿ, ಕುರುಬ, ಹರಿಜನ ಮತ್ತು ಮುಸ್ಲಿಂ ಸಮುದಾಯಗಳು ದೊಡ್ಡ ಸಮುದಾಯಗಳಾಗಿವೆ. ಅಗಸ, ಬ್ರಾಹ್ಮಣ, ಅಂಬಿಗ (ಕಬ್ಬೇರ) ಲಂಬಾಣಿ, ಮೇದಾರ, ಬೋವಿ, ಕ್ಷೌರಿಕ, ಶೆಟ್ಟಿ, ಗೊಲ್ಲರು, ದಾಸರು ಕೊರಚ ಪ್ರಮುಖ ಸಮುದಾಯಗಳಾಗಿವೆ. ಆದರೆ ಅವು ಬಲಿಷ್ಟ ಸಮುದಾಯಗಳಾಗಿ ಕಂಡುಬರುವುದಿಲ್ಲ.[೬೫]

ಆರ್ಥಿಕ ಹಿನ್ನೆಲೆ : ಪ್ರಸ್ತುತ ಜಿಲ್ಲೆಯು ೭ ತಾಲೂಕುಗಳನ್ನು ಹೊಂದಿದ್ದು, ಪ್ರಾದೇಶಿಕವಾಗಿ ಈ ತಾಲೂಕುಗಳನ್ನು ಪೂರ್ವ ಮತ್ತು ಪಶ್ಚಿಮ ತಾಲೂಕುಗಳೆಂದು ವಿಭಾಗಿಸಲಾಗಿದೆ. ಬಳ್ಳಾರಿ, ಸಿರುಗುಪ್ಪ, ಹೊಸಪೇಟೆ ಮತ್ತು ಸಂಡೂರು ತಾಲೂಕುಗಳನ್ನು ಪೂರ್ವ ತಾಲೂಕುಗಳೆಂದು ಹಾಗೂ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಮತ್ತು ಹೂವಿನ ಹಡಗಲಿಯನ್ನು ಪಶ್ಚಿಮ ತಾಲೂಕುಗಳೆಂದು ಕರೆಯುವುದು ವಾಡಿಕೆಯಲ್ಲಿದೆ. ಪ್ರಾಕೃತಿಕವಾಗಿ ಮತ್ತು ಆರ್ಥಿಕವಾಗಿ ಪೂರ್ವ ತಾಲೂಕುಗಳು ಸಮೃದ್ಧಿಯಾದ ಪ್ರದೇಶಗಳಾಗಿದ್ದು, ಈ ತಾಲೂಕುಗಳು ಅಭಿವೃದ್ಧಿಯ ಎಲ್ಲಾ ಸವಲತ್ತುಗಳನ್ನು ಅಧಿಕವಾಗಿ ಪಡೆದುಕೊಂಡಿವೆ. ಜಿಲ್ಲೆಯ ಪಶ್ಚಿಮಭಾಗದ ತಾಲೂಕುಗಳು ಸಂಪೂರ್ಣ ಬಯಲು ಪ್ರದೇಶ ಮತ್ತು

ಒಣಭೂಮಿ ಕೃಷಿಯನ್ನು ಹೊಂದಿದ ಪ್ರದೇಶಗಳಾಗಿವೆ. ಪೂರ್ವ ತಾಲೂಕುಗಳು ಜಿಲ್ಲಾ ಕೇಂದ್ರಕ್ಕೆ ಹತ್ತಿರವಾಗಿದ್ದು ಮತ್ತು ಹೆಚ್ಚು ನೀರಾವರಿ ಕೃಷಿಯನ್ನು ಹೊಂದಿವೆ. ಇದಕ್ಕೆ ವಿರುದ್ಧವಾಗಿ ಪಶ್ಚಿಮ ತಾಲುಕುಗಳು ಜಿಲ್ಲೆಯಿಂದ ದೂರವಿದ್ದು, ಹೆಚ್ಚು ಒಣಭೂಮಿ ಕೃಷಿಯನ್ನು ಹೊಂದಿವೆ. ದೊಡ್ಡ ಮತ್ತು ಮಧ್ಯಮಗಾತ್ರದ ಉದ್ದಿಮೆಗಳು ಪೂರ್ವಭಾಗದ ತಾಲೂಕುಗಳಲ್ಲಿ ೧೯ ಘಟಕಗಳನ್ನು ಹೊಂದಿದ್ದರೆ, ಪಶ್ಚಿಮಭಾಗದ ತಾಲೂಕುಗಳಲ್ಲಿ ಒಂದೇ ಒಂದು ಘಟಕವಿದೆ. ಗಣಿಗಾರಿಕೆ ಚಟುವಟಿಕೆಗಳೂ ಸಹ ಪೂರ್ವಭಾಗಕ್ಕೆ ಸೀಮಿತವಾಗಿವೆ. ಪಶ್ಚಿಮ ತಾಲೂಕುಗಳಲ್ಲಿ ಯಾವುದೇ ಗಣಿಗಾರಿಕೆ ಚಟುವಟಿಕೆಗಳು ಇರುವುದಿಲ್ಲ. ಅಂದರೆ ಪಶ್ಚಿಮ ತಾಲೂಕುಗಳಲ್ಲಿ ಹೆಚ್ಚು ಕೃಷಿಯನ್ನು ಅವಲಂಬಿಸಿದ್ದಾರೆ. ಈ ಎಲ್ಲಾ ವಿವರಗಳನ್ನು ನೋಡಿದಾಗ ಪೂರ್ವಭಾಗದ ತಾಲೂಕುಗಳು ಅಭಿವೃದ್ಧಿಯ ಪ್ರದೇಶಗಳೆಂದು ಪಶ್ಚಿಮ ಭಾಗದ ತಾಲೂಕುಗಳನ್ನು ಹಿಂದುಳಿದ ಪ್ರದೇಶಗಳೆಂದು ಗುರುತಿಸಬಹುದು.[೬೬] ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಪೂರ್ವಭಾಗದ ಹೊಸಪೇಟೆ ತಾಲೂಕನ್ನು ಮತ್ತು ಪಶ್ಚಿಮಭಾಗದ ಕೂಡ್ಲಿಗಿ ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿಯೇ ಆರ್ಥಿಕವಾಗಿ ತುಂಬಾ ಹಿಂದುಳಿದ ತಾಲೂಕು ಎಂದರೆ ಕೂಡ್ಲಿಗಿ. ಈ ತಾಲೂಕು ಸಂಪೂರ್ಣ ಒಣಭೂಮಿ ಪ್ರದೇಶವನ್ನು ಒಳಗೊಂಡಿದೆ. ಶೇ.೮೦ಕ್ಕೂ ಹೆಚ್ಚು ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ಇನ್ನೂ ಕೃಷಿಯೇತರ ಚಟುವಟಿಕೆಗಳಾದ ಹೈನುಗಾರಿಕೆ, ಕುರಿಸಾಕಾಣಿಕೆ ಮತ್ತು ನೇಕಾರಿಕೆ ಕಸುಬುಗಳು ಪ್ರಾಚೀನ ಕಾಲದಿಂದಲೂ ಬೆಳೆದುಬಂದಿವೆ. ಇದು ಕೃಷಿಯನ್ನು ಅವಲಂಬಿಸಿರುವ ರಾಜ್ಯದ ಮೂರನೇ ತಾಲೂಕಾಗಿದೆ. ಮಳೆಯನ್ನೇ ನಂಬಿ ಕೃಷಿಯನ್ನು ಇಲ್ಲಿನ ಜನತೆ ಅವಲಂಬಿಸಿದ್ದಾರೆ. ತಾಲೂಕಿನಾದ್ಯಾಂತ ಅಧಿಕ ಕೆರೆಗಳಿದ್ದು, ಇದರ ಮೂಲಕ ಸಹ ಕೃಷಿಯನ್ನು ಕೈಗೊಂಡಿದ್ದಾರೆ. ಕೆರೆಗಳು ಅಲ್ಪ ಸ್ವಲ್ಪ ನೀರಾವರಿ ಕೃಷಿಗೆ ಅನುಕೂಲವಾಗಿದೆ.[೬೭]

೨೦೧೦-೧೧ನೇ ಸಾಲಿನಲ್ಲಿ ಒಟ್ಟು ಭೌಗೋಳಿಕ ವಿಸ್ತೀರ್ಣ ೧೫೭೦೬ ಲಕ್ಷ ಹೆಕ್ಟೇರುಗಳಲ್ಲಿ ೮೯.೬೦೧ ಸಾವಿರ ಹೆಕ್ಟೇರುಗಳಷ್ಟು ಬಿತ್ತನೆಯಾಗಿದ್ದು, ಇದರಲ್ಲಿ ಶೇ.೫೬ರಷ್ಟು ಬಿತ್ತನೆಯಾಗಿದೆ. ಇದರಲ್ಲಿ ೪೨೭೯ ಹೆಕ್ಟೇರುಗಳಲ್ಲಿ ಆಹಾರ ಬೆಳೆಗಳು ಮತ್ತು ೫೨೨೮ ಹೆಕ್ಟೇರುಗಳಲ್ಲಿ ಆಹಾರೇತರ ಬೆಳೆಗಳನ್ನು ಬೆಳೆಯಲಾಗುತ್ತಿದೆ.[೬೮]

೨೦೧೧ರ ಜನಗಣತಿ ಪ್ರಕಾರ, ತಾಲೂಕಿನಲ್ಲಿ ೧,೩೩,೨೪೯(ಶೇ.೫೨)ರಷ್ಟು ಜನರು ದುಡಿಯುವ ವರ್ಗದವರಿದ್ದು, ಇವರಲ್ಲಿ ೫೭೪೯೭(ಶೇ.೨೨)ರಷ್ಟು ಮಹಿಳೆಯರು ಮತ್ತು ೭೫೭೫೨(ಶೇ.೨೯)ರಷ್ಟು ಪುರುಷರಿದ್ದಾರೆ. ತಾಲೂಕಿನಲ್ಲಿ ಮಹಿಳೆಯರು ಪ್ರಾಥಮಿಕ ವಲಯ ೩೪೭೬೦(ಶೇ.೬೦.೫೧)ರಷ್ಟು, ದ್ವಿತೀಯ ವಲಯವನ್ನು ೧೪೩೦(ಶೇ.೨.೪೯)ರಷ್ಟು ಹಾಗೂ ತೃತೀಯ ವಲಯವನ್ನು

೫೪೨೮(ಶೇ.೯.೪೪)ರಷ್ಟು ಅವಲಂಬಿಸಿದ್ದಾರೆ.[೧೯] ಈ ಅಂಕಿ ಸಂಖ್ಯೆಗಳನ್ನು ಗಮನಿಸಿದರೆ ತಾಲೂಕಿನಲ್ಲಿ ಜನರು ಅತ್ಯಧಿಕ ಸಂಖ್ಯೆಯಲ್ಲಿ ಕೃಷಿಯನ್ನೇ ಅವಲಂಭಿಸಿರುವುದು ಕಂಡುಬರುತ್ತದೆ.

ರಾಜಕೀಯ ಹಿನ್ನೆಲೆ : ಕೂಡ್ಲಿಗಿಯು ಜಿಲ್ಲೆಯಿಂದ ಪಶ್ಚಿಮಕ್ಕೆ ೮೦ ಕಿ.ಮೀ ದೂರದಲ್ಲಿದೆ. ಬಳ್ಳಾರಿ ಜಿಲ್ಲೆಯಲ್ಲಿ ಕೂಡ್ಲಿಗಿಯು ಹಿಂದುಳಿದ ತಾಲೂಕುಗಳಲ್ಲಿ ಒಂದಾಗಿದೆ. ಹೊಸಪೇಟೆ ಉಪವಿಭಾಗಕ್ಕೆ ಸೇರಿದ ಈ ತಾಲೂಕು ಎರಡು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಅವುಗಳಲ್ಲಿ ಕೂಡ್ಲಿಗಿ ಮತ್ತು ಕೊಟ್ಟೂರು. ಜಿಲ್ಲೆಯ ಇನ್ನೊಂದು ತಾಲೂಕಾದ ಹಗರಿಬೊಮ್ಮನಹಳ್ಳಿ ಕೂಡ್ಲಿಗಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿದೆ. ತಾಲೂಕು ಒಟ್ಟು ೯೮ ಗ್ರಾಮಗಳನ್ನು ಹೊಂದಿದ್ದು, ೩೩ ಗ್ರಾಮ ಪಂಚಾಯತಿಗಳನ್ನು ನಾಲ್ಕು ಹೋಬಳಿಗಳನ್ನು ಹೊಂದಿದೆ. ಈ ತಾಲೂಕಿನಲ್ಲಿ ಲಿಂಗಾಯಿತ ನಾಯಕ, ಹರಿಜನ ಮುಸ್ಲಿಂ ಮತ್ತು ಕುರುಬ ಪ್ರಮುಖ ಬಲಿಷ್ಠ ಸಮುದಾಯಗಳಾಗಿವೆ. ರಾಜ್ಯದಲ್ಲಿ ಬಿ.ಜೆ.ಪಿ. ಪಕ್ಷ ಅಧಿಕಾರಕ್ಕೆ ಬರುವ ಮೊದಲು ಈ ಸಮುದಾಯಗಳು ಕಾಂಗ್ರೆಸ್ ಹಾಗೂ ಜೆ.ಡಿ.ಎಸ್. ಪಕ್ಷಗಳೊಂದಿಗೆ ಗುರುತಿಸಿಕೊಂಡಿದ್ದವು. ಕಳೆದ ಚನಾವಣೆಯಲ್ಲಿ ಗಣಿಧಣಿಗಳ ಹಣದ ದೂಳಿನಲ್ಲಿ ಕುರುಬ, ಮುಸ್ಲಿಂ ಮತ್ತು ಹರಿಜನ ಸಮುದಾಯಗಳ ಮತಗಳು ಮೂರು ಪಕ್ಷಗಳ ನಡುವೆ ಹಂಚಿಹೋದರೆ, ನಾಯಕ ಸಮುದಾಯದ ಮತಗಳು ಸ್ಥಳೀಯವಾಗಿ ಬಿ.ಜೆ.ಪಿ. ಪಕ್ಷದ ಅಭ್ಯರ್ಥಿ ಅಧಿಕಾರಕ್ಕೆ ಬರಲು ನಿರ್ಣಾಯಕವಾಗಿತ್ತು. ತಾಲೂಕಿನಲ್ಲಿ ಬಹುಸಂಖ್ಯಾತರಾಗಿರುವ ನಾಯಕರು ರಾಜಕೀಯ ಸ್ಥಿತಿಗತಿಯನ್ನು ನಿರ್ಧರಿಸುವ ಶಕ್ತಿ ಇವರಿಗಿದೆ. ಇಂದು ಈ ಸಮುದಾಯಗಳು ಬಹುತೇಕವಾಗಿ ಬಿ.ಜೆ.ಪಿ. ಪಕ್ಷದೊಂದಿಗೆ ಗುರುತಿಸಿಕೊಂಡಂತೆ ಕಂಡುಬರುತ್ತದೆ. ಇದಕ್ಕೆ ಸ್ಥಳೀಯ ಶಾಸಕರ ಸಾಮಾಜಿಕ ಪ್ರಾತಿನಿದ್ಯವೇ ಕಾರಣವಾಗಿದೆ. ಇವರಿಗೆ ಪಕ್ಷಕ್ಕಿಂತ ವ್ಯಕ್ತಿಯೇ ಮುಖ್ಯವಾಗಿದ್ದಾರೆ. ಇದಕ್ಕೆ ಶಾಸಕರು ಹತ್ತು ಹಲವಾರು ಸಾಮಾಜಿಕ ಸೇವಾಕಾರ್ಯದಲ್ಲಿ ತೊಡಗಿಸಿಕೊಂಡಿರುವುದು ಕಾರಣವಾಗಿರಬಹುದು. ಇದರಿಂದಾಗಿ ತಾಲೂಕಿನ ಎಲ್ಲಾ ಹಿಂದುಳಿದ ಹಾಗೂ ಕೆಳವರ್ಗದ ಸಮುದಾಯಗಳು ಹೆಚ್ಚಾಗಿ ಇವರನ್ನು ಬೆಂಬಲಿಸುತ್ತಾರೆ.[೨೦] ಪ್ರಸ್ತುತ ಅಧ್ಯಯನದಲ್ಲಿ ಕೂಡ್ಲಿಗಿ ತಾಲೂಕಿನ ಚಿರತಗುಂಡು ಮತ್ತು ರಾಂಪುರ ಗ್ರಾಮಪಂಚಾಯತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಗ್ರಾಮಪಂಚಾಯತಿಗಳ ಬಗ್ಗೆ ಮುಂದೆ ಚರ್ಚಿಸಲಾಗಿದೆ.

ಅಧ್ಯಯನಕ್ಕೆ ಒಳಪಟ್ಟ ಗ್ರಾಮ ಪಂಚಾಯತಿಗಳು

ಈ ಮೊದಲೆ ಹೇಳಿದಂತೆ ಪ್ರಸ್ತುತ ಅಧ್ಯಯನವು ತೌಲನಿಕ ಮತ್ತು ಸೂಕ್ಷ್ಮ ಅಧ್ಯಯನವಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ತಾಲೂಕಿನಲ್ಲಿ ಎರಡು ಗ್ರಾಮಪಂಚಾಯಿತಿಗಳಿಗೆ ಅಧ್ಯಯನವನ್ನು ಸೀಮಿತಗೊಳಿಸಲಾಗಿದೆ. ಕೂಡ್ಲಿಗಿ ತಾಲೂಕಿನಲ್ಲಿ ಒಟ್ಟು ೩೩ ಗ್ರಾಮ ಪಂಚಾಯಿತಿಗಳು ಅಸ್ತಿತ್ವದಲ್ಲಿದ್ದು, ಇದರಲ್ಲಿ ಚಿರತಗುಂಡು ಮತ್ತು ರಾಂಪುರ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ

ಗುಂಪುಗಳ ಪರಿಶಿಷ್ಟ ಮಹಿಳಾ ಸದಸ್ಯರನ್ನು ಹಾಗೂ ಗುಂಪುಗಳ ಸದಸ್ಯರಲ್ಲದ ಪರಿಶಿಷ್ಟ ಮಹಿಳೆಯರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದೆ. ಕೂಡ್ಲಿಗಿ ತಾಲೂಕು ಕೇಂದ್ರದಿಂದ ಚಿರತಗುಂಡು ಗ್ರಾಮ ಪಂಚಾಯಿತಿ ಕಾರ್ಯಾಲಯವು ತಾಲೂಕು ಕೇಂದ್ರದಿಂದ ೪೮ ಕಿ.ಮೀ. ದೂರದಲ್ಲಿದೆ. ಇನ್ನೊಂದು ಗ್ರಾಮ ಪಂಚಾಯಿತಿಯಾದ ರಾಂಪುರ ಗ್ರಾಮಪಂಚಾಯಿತಿಯ ಕಾರ್ಯಾಲಯವು ತಾಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ.

೩.೧೦. **ಚಿರತಗುಂಡು ಗ್ರಾಮಪಂಚಾಯಿತಿ :** ಚಿರತಗುಂಡು ಗ್ರಾಮಕ್ಕೆ ಚಿರತಗುಂಡ ಎನ್ನುವ ಹೆಸರು ಬರಲು ಮುಖ್ಯ ಹಿನ್ನೆಲೆ ಏನಿರಬಹುದು ಎಂದು ಗ್ರಾಮದ ಹಿರಿಯರನ್ನು ಕೇಳಿದಾಗ ಈ ಊರು ಹಿಂದೆ ಚರಿತೆಯ ನೆಲೆಯಾಗಿತ್ತು. ಇದರಿಂದಾಗಿ ಗ್ರಾಮಕ್ಕೆ ಚಿರತಗುಂಡು ಅಥವಾ ಚಿರತಗುಂಡು ಎಂದು ಹೆಸರು ಬಂದಿದೆ ಎಂದು ಗ್ರಾಮದ ಹಿರಿಯರು ಸಾಮಾನ್ಯವಾಗಿ ಹೇಳುತ್ತಾರೆ. ಹಾಗೆಯೇ ಈ ಗ್ರಾಮವನ್ನು ಭೌಗೋಳಿಕವಾಗಿ ನೋಡಿದಾಗ ದೊಡ್ಡ ದೊಡ್ಡ ಗುಂಡುಗಳು ಗುಂಪು ಗುಂಪಾಗಿ ಇರುವುದರಿಂದ ಚಿರತೆವಾಸದ ನೆಲೆಯನ್ನು ಗುರುತಿಸಬಹುದಾಗಿದೆ. ಈ ಪ್ರದೇಶ ಸುತ್ತಮುತ್ತ ಹೆಚ್ಚಾಗಿ ಗುಂಡುಗಳು ಕಂಡುಬರುತ್ತಿರುವುದರಿಂದ ಸಾಮಾನ್ಯವಾಗಿ ಗುಹೆಗಳಿವೆ. ಈ ಗುಹೆಗಳಲ್ಲಿ ಚಿರತೆ ವಾಸವಾಗಿತ್ತು. ಆದ್ದರಿಂದ ಈ ಗ್ರಾಮಕ್ಕೆ ಚಿರತಗುಂಡು ಎಂದು ಹೆಸರು ಬಂದಿರಬಹುದು.

ರಾಷ್ಟ್ರೀಯ ಹೆದ್ದಾರಿ ೧೪ರಲ್ಲಿ ಕೂಡ್ಲಿಗಿಯಿಂದ ಚಿತ್ರದುರ್ಗಕ್ಕೆ ಹೋಗುವ ಹೆದ್ದಾರಿಯಲ್ಲಿ ಎಡಗಡೆಗೆ ತಿರುಗುವ ಸಂಪರ್ಕ ರಸ್ತೆಯಿಂದ ೧೫ ಕಿ.ಮೀ. ದೂರದಲ್ಲಿ ಚಿರತೆಗುಂಡು ಗ್ರಾಮವಿದೆ. ತಾಲೂಕು ಕೇಂದ್ರವಾದ ಕೂಡ್ಲಿಗಿ ಇಲ್ಲಿಂದ ೩೫ ಕಿ.ಮೀ. ದೂರದಲ್ಲಿದ್ದು, ಜಿಲ್ಲಾ ಕೇಂದ್ರ ಇಲ್ಲಿಂದ ೧೩೫ ಕಿ.ಮೀ. ದೂರದಲ್ಲಿದೆ. ಚಿರತಗುಂಡು, ಕೊಂಬಿಹಳ್ಳಿ ಮತ್ತು ಗಡ್ಡದ ಬೋರಯ್ಯನ ಹಟ್ಟಿ ಈ ಗ್ರಾಮಗಳನ್ನು ಸೇರಿಸಿ ಗ್ರಾಮ ಪಂಚಾಯಿತಿಯಾಗಿ ರಚಿಸಲಾಗಿದ್ದು, ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೫೦೪.೨೭ರಷ್ಟಿದೆ. ಚಿರತಗುಂಡು ಗ್ರಾಮವು ಪಶ್ಚಿಮದಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು, ಉತ್ತರದಲ್ಲಿ ಸಂಡೂರು ತಾಲೂಕು, ಪೂರ್ವದಲ್ಲಿ ಹೊಸಪೇಟೆ ತಾಲೂಕು ಹಾಗೂ ದಕ್ಷಿಣದಲ್ಲಿ ಜಗಳೂರು ತಾಲೂಕುಗಳಿಂದ ಆವೃತವಾಗಿದೆ.

೨೦೧೧ರ ಜನಗಣತಿಯ ಪ್ರಕಾರ, ಚಿರತಗುಂಡು ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ಒಟ್ಟು ೭೬೫ ಕುಟುಂಬಗಳು ನೆಲೆಸಿರುವುದು ಕಂಡುಬರುತ್ತದೆ ಹಾಗೂ ಈ ಪಂಚಾಯಿತಿಯ ವ್ಯಾಪ್ತಿಯ ಒಟ್ಟು ಜನಸಂಖ್ಯೆ ೪,೦೧೯ರಷ್ಟಿದ್ದಾರೆ. ಇದರಲ್ಲಿ ಪುರುಷರು ೨,೦೩೨ ಹಾಗೂ ಮಹಿಳೆಯರು ೧,೯೮೭ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ೫೧೭ರಷ್ಟಿದ್ದು, ಅವರಲ್ಲಿ ಪುರುಷರು ೨೫೨ ಹಾಗೂ ಮಹಿಳೆಯರು ೨೬೫ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೨,೯೪೦ರಷ್ಟಿದ್ದು, ಇದರಲ್ಲಿ ಪುರುಷರು ೧.೪೮೪ ಹಾಗೂ ಮಹಿಳೆಯರು ೧.೪೫೬ರಷ್ಟಿದ್ದಾರೆ. ಅಂದರೆ ಗ್ರಾಮಪಂಚಾಯತಿ ವ್ಯಾಪ್ತಿಯ ಒಟ್ಟು ಜನಸಂಖ್ಯೆ ಹೋಲಿಸಿದರೆ ಪರಿಶಿಷ್ಟ ಜಾತಿಯ ಪ್ರಮಾಣವು ಶೇ.೧೨.೮೬ರಷ್ಟಿದೆ. ಹಾಗೂ ಪರಿಶಿಷ್ಟ ಪಂಗಡದ ಒಟ್ಟು

ಪ್ರಮಾಣ ಶೇ.೭೩.೧೫ರಷ್ಟಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇ.೮೬.೦೧ರಷ್ಟು ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನೆಲೆನಿಂತಿರುವುದು ಕಂಡುಬರುತ್ತಾರೆ. ಇನ್ನುಳಿದಂತೆ ಶೇ.೧೩.೯೯ರಷ್ಟು ಇತರ ಸಮುದಾಯದವರು ನೆಲೆನಿಂತಿದ್ದಾರೆ.

೨೦೧೧ರ ಗಣತಿಯ ಪ್ರಕಾರ, ಚಿರತಗುಂಡು ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ೧೦೦೦ ಪುರುಷರಿಗೆ ೯೭೦ರಷ್ಟು ಮಹಿಳೆಯರಿದ್ದಾರೆ. ರಾಜ್ಯದಲ್ಲಿ ಪ್ರತಿಸಾವಿರ ಪುರುಷರಿಗೆ ೯೬೮ರಷ್ಟು ಸ್ತ್ರೀಯರಿದ್ದಾರೆ. ಈ ಪ್ರಮಾಣವನ್ನು ರಾಜ್ಯಕ್ಕೆ ಹೋಲಿಸಿದರೆ ಶೇ ೨ರಷ್ಟು ಹೆಚ್ಚು ಇದೆ. ಮಕ್ಕಳ (೦–೬) ಲಿಂಗಾನುಪಾತ ೧೧೭೭ರಷ್ಟಿದ್ದು, ರಾಜ್ಯಕ್ಕೆ (೯೪೮) ಹೋಲಿಸಿದರೆ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ. ೨೦೧೧ರ ಜನಗಣತಿಯ ಪ್ರಕಾರ, ಈ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಸಾಕ್ಷರತಾ ದರವು ಶೇ.೫೨.೪೧ರಷ್ಟಿದ್ದು, ಇದನ್ನು ರಾಜ್ಯಕ್ಕೆ (ಶೇ.೭೫.೬೦ರಷ್ಟು) ಹೋಲಿಸಿದರೆ ಶೇ.೨೩.೧೯ರಷ್ಟು ಕಡಿಮೆ ಇರುವುದು ಕಂಡುಬರುತ್ತದೆ. ಈ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ನಾಯಕ, ಹರಿಜನ, ಬೋವಿ, ಲಿಂಗಾಯತ, ಮುಸ್ಲಿಂ, ಅಗಸರು ಮುಂತಾದ ಸಮುದಾಯಗಳು ಕಂಡುಬರುತ್ತವೆ. ಇಲ್ಲಿ ಕನ್ನಡ ಮತ್ತು ತೆಲುಗು ಪ್ರಾದೇಶಿಕ ಭಾಷೆಗಳಾಗಿವೆ. ೨೦೧೧ರ ಜನಗಣತಿಯ ಪ್ರಕಾರ ಈ ಗ್ರಾಮಪಂಚಾಯಿತಿ ವ್ಯಾಪ್ತಿಯು ಎಲ್ಲಾ ಗ್ರಾಮಗಳನ್ನು ಒಳಗೊಂಡಂತೆ ಒಟ್ಟು ಭೌಗೋಳಿಕ ವಿಸ್ತೀರ್ಣವು ೫೦೪.೨೭ ಹೆಕ್ಟೇರ್‌ಗಳಷ್ಟಿದ್ದು, ಇದು ೪.೦೩ ಹೆಕ್ಟೇರ್ ಗ್ರಾಮ ಠಾಣಾವನ್ನು ಹೊಂದಿದೆ. ೩೨೪ ಹೆಕ್ಟೇರ್‌ಗಳಷ್ಟು ಕೃಷಿ ಭೂಮಿಯಾಗಿದ್ದು, ೧೨೦ ಹೆಕ್ಟೇರ್‌ಗಳಷ್ಟು ಅರಣ್ಯ ಪ್ರದೇಶವನ್ನು ಹೊಂದಿದೆ. ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬಹುತೇಕ ಭೂಮಿಯ ಕೃಷಿಯೋಗ್ಯ ಮಳೆಯಾಶ್ರಿತ ಹಾಗೂ ನೀರಾವರಿ ಭೂಮಿಯಾಗಿದೆ. ಇಲ್ಲಿ ಚಿತ್ರದುರ್ಗದಿಂದ ನೀರು ಹರಿದುಬರುವ ಹಗರಿನದಿಯಿದ್ದು, ಇದು ಮುಂದೆ ರಂಗಯ್ಯನದುರ್ಗ ಜಲಾಶಯಕ್ಕೆ ಸೇರುತ್ತದೆ. ಚಿಕ್ಕಹಗರಿ, ಹಾಗೂ ನಾರಿಹಳ್ಳಗಳಿವೆ. ಈ ಹಳ್ಳಗಳಿಗೆ ನೀರು ಬಂದರೆ ಮಾತ್ರ ಕಬ್ಬು, ಹತ್ತಿ, ಭತ್ತ ಈರುಳ್ಳಿ ನೆಲಗಡಲೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಇಲ್ಲವಾದರೆ ಮಳೆಯನ್ನೇ ನಂಬಿಕೊಂಡು ಮೆಕ್ಕೆಜೋಳ, ಸೂರ್ಯಕಾಂತಿ, ಎಳ್ಳು ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಈ ಪಂಚಾಯತಿ ವ್ಯಾಪ್ತಿಯಲ್ಲಿ ಬೇಡ, ಹರಿಜನ, ಮುಸ್ಲಿಂ, ಅಗಸ, ಬೋವಿ, ಲಿಂಗಾಯತ, ಕ್ಷೌರಿಕ, ಗೊಲ್ಲ ಮುಂತಾದ ಜಾತಿಗಳು ಕಂಡುಬರುತ್ತವೆ. ಇವುಗಳಲ್ಲಿ ಬಲಿಷ್ಟ ಜಾತಿಯ ಬೇಡ ಲಿಂಗಾಯತ ಹಾಗೂ ಹರಿಜನ ಸಮುದಾಯಗಳು ಕಂಡುಬರುತ್ತವೆ.[೭೧]

ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು ೧೮ ಸ್ತ್ರೀಶಕ್ತಿ ಗುಂಪುಗಳಿವೆ. ಇವುಗಳಲ್ಲಿ ೨೩೧ರಷ್ಟು ಮಹಿಳಾ ಸದಸ್ಯರಿದ್ದು, ಇದರಲ್ಲಿ ೬೨ ಪರಿಶಿಷ್ಟ ಮಹಿಳೆಯರು ಮತ್ತು ೧೫೫ ಪರಿಶಿಷ್ಟ ಪಂಗಡದ ಮಹಿಳೆಯರಿದ್ದಾರೆ.

೩.೧೧. ರಾಂಪುರ ಗ್ರಾಮಪಂಚಾಯತಿಯ ಪರಿಚಯ

ರಾಂಪುರ ಗ್ರಾಮವು ಕೂಡ್ಲಿಗಿಯಿಂದ ೧೮ ಕಿ.ಮೀ. ದೂರ ಹಾಗೂ ಕೊಟ್ಟೂರಿನಿಂದ ೩ ಕಿ.ಮೀ. ದೂರದಲ್ಲಿದೆ. ಜಿಲ್ಲಾ ಕೇಂದ್ರದಿಂದ ೭೮ ಕಿ.ಮೀ. ದೂರದಲ್ಲಿದ್ದು, ಇದು ಕೊಟ್ಟೂರು ಹೋಬಳಿಗೆ ಸೇರಿದೆ. ಮೊದಲು ರಾಂಪುರ, ಜಾಗಟಗೆರೆ, ಮತ್ತು ಸುಂಕದಕಲ್ಲು ಗ್ರಾಮಗಳನ್ನು ಸೇರಿಸಿ ಗ್ರಾಮಪಂಚಾಯತಿಯನ್ನು ರಚಿಸಲಾಗಿತ್ತು. ನಂತರ ೨೦೧೪ರಲ್ಲಿ ರಾಂಪುರ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಹೊಸಕೋಡಿಹಳ್ಳಿ, ಸುಟ್ಟಕೋಡಿಹಳ್ಳಿ, ಬೋರನಹಳ್ಳಿ ಮತ್ತು ಸಿರಿನಾಯ್ಕನ ಹಳ್ಳಿ ಎಂಬ ಹೊಸ ಗ್ರಾಮಗಳನ್ನು ವಿಲೀನಗೊಳಿಸಿಲಾಯಿತು. ಇದರ ಭೌಗೋಳಿಕ ವಿಸ್ತೀರ್ಣ ೨೬೪೪ ಹೆಕ್ಟೇರ್ ವಿಸ್ತೀರ್ಣವಾದರೆ, ೬೦೮ ಹೆಕ್ಟೇರ್ ಗ್ರಾಮ ಠಾಣಾದ ವಿಸ್ತೀರ್ಣವಿದೆ. ರಾಂಪುರ ಗ್ರಾಮದ ಉತ್ತರಕ್ಕೆ ಸಂಡೂರು ತಾಲೂಕು, ದಕ್ಷಿಣಕ್ಕೆ ಜಗಳೂರು ತಾಲೂಕು, ಪೂರ್ವಕ್ಕೆ ಹಗರಿಬೊಮ್ಮನಹಳ್ಳಿ ತಾಲೂಕು ಹಾಗೂ ಪಶ್ಚಿಮಕ್ಕೆ ಹರಪನಹಳ್ಳಿ ತಾಲೂಕುಗಳಿವೆ.

೨೦೧೧ರ ಜನಗಣತಿಯ ಪ್ರಕಾರ, ರಾಂಪುರ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಒಟ್ಟು ೯೮೫ ಕುಟುಂಬಗಳು ನೆಲೆಸಿರುವುದು ಕಂಡುಬರುತ್ತದೆ. ಹಾಗೂ ಈ ಪಂಚಾಯತಿಯ ವ್ಯಾಪ್ತಿಯ ಒಟ್ಟು ಜನಸಂಖ್ಯೆ ೫,೨೪೯ರಷ್ಟಿದ್ದಾರೆ. ಇದರಲ್ಲಿ ಪುರುಷರು ೨,೬೯೧ ಹಾಗೂ ಮಹಿಳೆಯರು ೨,೫೫೮ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ೭೦೨ರಷ್ಟು ಕಂಡುಬರುತ್ತದೆ. ಅವರಲ್ಲಿ ಪುರುಷರು ೩೪೬ ಹಾಗೂ ಮಹಿಳೆಯರು ೩೫೬ರಷ್ಟಿದ್ದಾರೆ ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೫೪೫ರಷ್ಟಿದ್ದು, ಇದರಲ್ಲಿ ಪುರುಷರು ೨೮೮ ಹಾಗೂ ಮಹಿಳೆಯರು ೨೫೭ರಷ್ಟಿದ್ದಾರೆ. ಅಂದರೆ ಗ್ರಾಮಪಂಚಾಯತಿ ವ್ಯಾಪ್ತಿಯ ಒಟ್ಟು ಜನಸಂಖ್ಯೆ ಹೋಲಿಸಿದರೆ ಪರಿಶಿಷ್ಟ ಜಾತಿಯ ಪ್ರಮಾಣವು ಶೇ.೧೩.೩೭ರಷ್ಟು ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಪ್ರಮಾಣ ಶೇ.೧೦.೩೮ರಷ್ಟಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇ.೨೩.೭೫ರಷ್ಟು ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನೆಲೆನಿಂತುರುವುದು ಕಂಡುಬರುತ್ತದೆ. ಇನ್ನುಳಿದಂತೆ ಶೇ.೭೬.೨೫ರಷ್ಟು ಇತರ ಸಮುದಾಯದವರು ನೆಲೆನಿಂತಿದ್ದಾರೆ. ೨೦೧೧ರ ಗಣತಿ ಪ್ರಕಾರ ರಾಂಪುರ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ೧೦೦೦ ಪುರುಷರಿಗೆ ೯೪ (ಶೇ.೭೩.೨೪)ರಷ್ಟು ಮಹಿಳೆಯರಿದ್ದಾರೆ. ರಾಜ್ಯದಲ್ಲಿ ಪ್ರತಿ ಸಾವಿರ ಪುರುಷರಿಗೆ ೯೬೮ ಸ್ತ್ರೀಯರಿದ್ದಾರೆ. ಈ ಪ್ರಮಾಣವನ್ನು ರಾಜ್ಯಕ್ಕೆ(ಶೇ.೭೫.೬೦ರಷ್ಟು) ಹೋಲಿಸಿದರೆ ಶೇ.೨.೩೬ರಷ್ಟು ಕಡಿಮೆ ಇದೆ. ಮಕ್ಕಳ(೦-೬) ಲಿಂಗಾನುಪಾತ ೯೦೯ರಷ್ಟಿದ್ದು ರಾಜ್ಯಕ್ಕೆ(೯೪೮) ಹೋಲಿಸಿದರೆ ಕಡಿಮೆಯಿದೆ. ೨೦೧೧ರ ಗಣತಿ ಪ್ರಕಾರ, ರಾಂಪುರ ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ಸಾಕ್ಷರತಾ ದರ ಶೇ.೭೩.೨೪ರಷ್ಟಿದ್ದು, ಇದರಲ್ಲಿ ಪುರುಷರದ್ದು ಶೇ.೮೩.೯೭ರಷ್ಟು ಹಾಗೂ ಮಹಿಳೆಯರದ್ದು ಶೇ.೬೨.೧೦ರಷ್ಟಿದ್ದಾರೆ. ಇದನ್ನು ರಾಜ್ಯಕ್ಕೆ(ಶೇ.೭೫.೬೦ರಷ್ಟು) ಹೋಲಿಸಿದರೆ ಪಂಚಾಯತಿಯ ವ್ಯಾಪ್ತಿಯಲ್ಲಿ

ಶೇ.೨.೩೬ರಷ್ಟು ಹಾಗೂ ಪುರುಷ ಮತ್ತು ಮಹಿಳಾ ಸಾಕ್ಷರತೆ ಪ್ರಮಾಣದಲ್ಲಿ ಶೇ.೧.೧೨ರಷ್ಟು ಹೆಚ್ಚು ಹಾಗೂ ೨೩ರಷ್ಟು ಕಡಿಮೆ ಇದೆ. ಪಂಚಾಯತಿಯ ವ್ಯಾಪ್ತಿಯಲ್ಲಿ ನಾಯಕ, ಮ್ಯಾಸನಾಯಕ, ಬಡಿಗ, ಈಡಿಗ, ಲಿಂಗಾಯಿತ, ಕುರುಬ, ಗಂಗಾಮತ, ಬೋವಿ, ಲಂಬಾಣಿ, ಹರಿಜನ ಮುಸ್ಲಿಂ, ಮಡಿವಾಳ, ಮುಂತಾದ ಸಮುದಾಯಗಳು ಕಂಡುಬರುತ್ತವೆ. ಇಲ್ಲಿ ಕನ್ನಡ ಪ್ರಾದೇಶಿಕ ಭಾಷೆಯಾಗಿದೆ.

ಈ ಗ್ರಾಮ ಪಂಚಾಯತಿ ವ್ಯಾಪ್ತಿಯ ಒಟ್ಟು ೨೬ಳಳ ವಿಸ್ತೀರ್ಣವನ್ನು ಹೊಂದಿದೆ. ಒಣ ಬೇಸಾಯವನ್ನು ಹೆಚ್ಚಾಗಿ ಅವಲಂಬಿಸಿರುವ ಈ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ೨ ಕೆರೆಗಳಿವೆ. ಮಳೆಯಾಶ್ರಿತ ನೀರನ್ನು ಮಾತ್ರ ಅವಲಂಬಿಸಿರುವ ಈ ಕೆರೆಗಳಲ್ಲಿ ಮಳೆಯಾದರೆ ಮಾತ್ರ ನೀರು ಸಂಗ್ರಹವಾಗುತ್ತದೆ ಮಳೆ ಸಮರ್ಪಕವಾಗಿ ಬಾರದಿದ್ದಲ್ಲಿ ಈ ಕೆರೆಯನ್ನಾಶ್ರಯಿಸಿ ಬೇಸಾಯದಲ್ಲಿ ತೊಡಗಿರುವ ಕೃಷಿ ಭೂಮಿಗಳಿಗೆ ನೀರಾವರಿ ಸೌಲಭ್ಯ ಇರುವುದಿಲ್ಲ. ಇಲ್ಲಿ ಬರುವ ಭೂಮಿಯಲ್ಲಿ ಮೆಕ್ಕೆಜೋಳ, ಜೋಳ, ಸಜ್ಜೆ, ರಾಗಿ, ನವಣೆ, ನೆಲೆಗಡಲೆ ಮತ್ತು ಈರುಳ್ಳಿ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ.[೨] ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು ೨೩ ಸ್ತ್ರೀಶಕ್ತಿ ಗುಂಪುಗಳಿವೆ. ಇವುಗಳಲ್ಲಿ ೩೭೨ರಷ್ಟು ಮಹಿಳಾ ಸದಸ್ಯರಿದ್ದು, ಇದರಲ್ಲಿ ೯೫ ಪರಿಶಿಷ್ಟ ಜಾತಿ ಮಹಿಳೆಯರು ಹಾಗೂ ೧೧೮ ಪರಿಶಿಷ್ಟ ಪಂಗಡದ ಮಹಿಳೆಯರಿದ್ದಾರೆ. ಒಟ್ಟಾರೆಯಾಗಿ ಬಳ್ಳಾರಿ ಜಿಲ್ಲೆಯು ತನ್ನದೇ ಆದಂತಹ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿದ್ದು, ಇಲ್ಲಿನ ಜನರು ಹಲವಾರು ಸಾಮಾಜಿಕ ಹಿನ್ನೆಲೆಯನ್ನು ಹೊಂದಿದವರಾಗಿದ್ದಾರೆ. ಹಾಗೆಯೇ ಮಹಿಳೆಯರು ಸಹ ಇಲ್ಲಿ ಹಲವು ನೆಲೆಗಳಲ್ಲಿ ಗುರುತಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಜೊತೆಗೆ ಕುಟುಂಬದ ಎಲ್ಲಾ ಜಾವಾಬ್ದಾರಿಗಳನ್ನು ನಿಭಾಯಿಸಲು ತಮ್ಮದೇ ಆದಂತಹ ಆದಾಯದ ಮೂಲಗಳನ್ನು ಹೊಂದಿರುವುದು ಕಂಡುಬರುತ್ತದೆ. ಮುಖ್ಯವಾಗಿ ಸ್ತ್ರೀಶಕ್ತಿ ಗುಂಪುಗಳಿಗೆ ಸೇರುವುದು ಮತ್ತು ಅವುಗಳಿಂದ ಆದಾಯವನ್ನು ಪಡೆದುಕೊಂಡು ಸಣ್ಣ ಸಣ್ಣ ವ್ಯಾಪಾರಗಳನ್ನು ಮಾಡುವುದು, ಇತರೆ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ನಿಟ್ಟನಲ್ಲಿ ಕಾರ್ಯಪ್ರವೃತ್ತರಾಗಿರುವುದನ್ನು ಕಾಣಬಹುದಾಗಿದೆ.

ಕೊನೆಯ ಟಿಪ್ಪಣಿಗಳು

೧. ಹನುಮಂತರೆಡ್ಡಿ ವೈ, ಬಳ್ಳಾರಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೨೦೦೮, ಪು. ಸಂ. ೧

೨. ಅದೇ ಪು.ಸಂ. ೨

೩. ಕಿಚಿಡಿ ಚನ್ನಪ್ಪ, ಗ್ರಾಮ ಪಂಚಾಯಿತಿ : ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ, (ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ೨೦೧೪, ಪು.ಸಂ. ೫೧

೪. https://en.wikipedia.org/wiki/Bellary

೫. ಪೂರ್ವೋಕ್ತ, ಹನುಮಂತರೆಡ್ಡಿ ವೈ. ಪು.ಸಂ. ೧೦

೬. ಪೂರ್ವೋಕ್ತ, https://en.wikipedia.org/wiki/Bellary.

೭. ಪೂರ್ವೋಕ್ತ, ಕಿಚಿಡಿ ಚನ್ನಪ್ಪ ಪು.ಸಂ. ೫೧

೮. ಬಳ್ಳಾರಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ ೨೦೧೪, ಬಳ್ಳಾರಿ ಜಿಲ್ಲಾ ಪಂಚಾಯತ್ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ, ಪು.ಸಂ. ೨೮

೯. ಪೂರ್ವೋಕ್ತ, ಕಿಚಿಡಿ ಚನ್ನಪ್ಪ ಪು.ಸಂ. ೫೨

೧೦. ಪೂರ್ವೋಕ್ತ ಬಳ್ಳಾರಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ ೨೦೧೪, ಪು.ಸಂ. ೨೭

೧೧. ಪೂರ್ವೋಕ್ತ, ಕಿಚಿಡಿ ಚನ್ನಪ್ಪ ಪು.ಸಂ. ೫೨

೧೨. ಬಳ್ಳಾರಿ ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ಅವಲೋಕನ ವರದಿ ೨೦೧೧-೧೨, ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಬಳ್ಳಾರಿ ಪು.ಸಂ. ೧

೧೩. ಅದೇ ಪುಟ ಸಂಖ್ಯೆ ೨

೧೪. ಅದೇ ಪುಟ ಸಂಖ್ಯೆ ೨-೩

೧೫. ಅದೇ ಪುಟ ಸಂಖ್ಯೆ ೩

೧೬. ಪೂರ್ವೋಕ್ತ ಬಳ್ಳಾರಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ, ೨೦೧೪, ಪು.ಸಂ. ೧೮೯

೧೭. ಪೂರ್ವೋಕ್ತ ಬಳ್ಳಾರಿ ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ಅವಲೋಕನ ವರದಿ ೨೦೧೧-೧೨, ಪು.ಸಂ. ೩

೧೮. ಅದೇ ಪುಟ ಸಂಖ್ಯೆ ೪

೧೯. ಅದೇ ಪುಟ ಸಂಖ್ಯೆ ೩

೨೦. ಪೂರ್ವೋಕ್ತ, ಕಿಚಿಡಿ ಚನ್ನಪ್ಪ ಪು.ಸಂ. ೫೫-೫೬

೨೧. ಪೂರ್ವೋಕ್ತ ಬಳ್ಳಾರಿ ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ಅವಲೋಕನ ವರದಿ ೨೦೧೧-೧೨, ಪುಟಸಂ. ೧

೨೨. ಅದೇ ಪುಟ ಸಂಖ್ಯೆ ೪

೨೩. ಕೆ.ರವೀಂದ್ರನಾಥ (ಸಂ) ಬಳ್ಳಾರಿ ಜಿಲ್ಲಾ ದರ್ಶನ, ೨೦೦೫, ಪು.ಸಂ. ೩-೪

೨೪. ಪೂರ್ವೋಕ್ತ, ಬಳ್ಳಾರಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ, ೨೦೧೪, ಪು.ಸಂ. ೩೦

೨೫. ಜಿಲ್ಲಾ ಸಾಂಖ್ಯಿಕ ವಿಭಾಗ ೨೦೧೩ ಬಳ್ಳಾರಿ ಪು.ಸಂ. ೧

೨೬. ಅದೇ ಪುಟ ಸಂಖ್ಯೆ ೨

೨೭. ಪೂರ್ವೋಕ್ತ ಬಳ್ಳಾರಿ ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ಅವಲೋಕನ ವರದಿ ೨೦೧೧-೧೨, ಪು.ಸಂ. ೨-೩

೨೮. ಪೂರ್ವೋಕ್ತ, ಕಿಚಿಡಿ ಚನ್ನಪ್ಪ ಪು.ಸಂ. ೫೬

೨೯. ಯರ್ರಿಸ್ವಾಮಿ ಎಂ, ಗ್ರಾಮಪಂಚಾಯತಿ ಮತ್ತು ಸಬಲೀಕರಣ (ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ) ೨೦೧೨, ಪು.ಸಂ. ೫೧-೫೨

೩೦. ಪೂರ್ವೋಕ್ತ, ಕಿಚಿಡಿ ಚನ್ನಪ್ಪ ಪು.ಸಂ. ೫೭

೩೧. ಅದೇ ಪುಟ ಸಂಖ್ಯೆ ೫೮

೩೨. ಸಿ. ಮಹದೇವ ಮತ್ತು ಇತರರು, ಹೊಸಪೇಟೆ ತಾಲೂಕು ದರ್ಶನ, ೨೦೦೨, ಪು.ಸಂ. ೧೧

೩೩. ಅದೇ ಪುಟ ಸಂಖ್ಯೆ ೧೧

೩೪. ಅದೇ ಪುಟ ಸಂಖ್ಯೆ ೦೬

೩೫. ಪೂರ್ವೋಕ್ತ, ಕಿಚಿಡಿ ಚನ್ನಪ್ಪ ಪು.ಸಂ. ೫೮

೩೬. ಪೂರ್ವೋಕ್ತ, ಬಳ್ಳಾರಿ ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ಅವಲೋಕನ ವರದಿ ೨೦೧೧-೧೨, ಪು.ಸಂ. ೮

೩೭. ಪೂರ್ವೋಕ್ತ ಸಿ. ಮಹಾದೇವ ಮತ್ತು ಇತರರು ಪು.ಸಂ. ೩೪೮

೩೮. ಪೂರ್ವೋಕ್ತ ಕಿಚಿಡಿ ಚನ್ನಪ್ಪ ಪು.ಸಂ. ೬೦

೩೯. ಜೋಗಿನಕಟ್ಟಿ ನಾಗರಾಜ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಅಭಿವೃದ್ಧಿ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ೨೦೧೫, ಪು.ಸಂ. ೮೬

೪೦. ಪೂರ್ವೋಕ್ತ ಕಿಚಿಡಿ ಚನ್ನಪ್ಪ ಪು. ಸಂ. ೫೫

೪೧. ಡೈರೆಕ್ಟರ್ ಆಫ್ ಸೆನ್ಸ್ ಆಪರೇಷನ್ಸ್, ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್ ೨೦೧೧, ಬಳ್ಳಾರಿ ಡಿಸ್ಟ್ರಿಕ್ಟ್, ಬೆಂಗಳೂರು, ಗವರ್ನ್‌ಮೆಂಟ್ ಆಫ್ ಕರ್ನಾಟಕ, ಪು.ಸಂ. ೦೧

೪೨. ಪೂರ್ವೋಕ್ತ ಕಿಚಿಡಿ ಚನ್ನಪ್ಪ ಪು.ಸಂ.೫೦

೪೩. www. Bellary district census 2011, pdf p.no 02

೪೪. ಪೂರ್ವೋಕ್ತ ಬಳ್ಳಾರಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ ೨೦೧೪, ಪು.ಸಂ. ೬೬

೪೫. Directorate of census opetations Karnataka, village analysis, 2011, pdf, p.no 24

೪೬. ಪೂರ್ವೋಕ್ತ ಕಿಚಿಡಿ ಚನ್ನಪ್ಪ ಪು.ಸಂ. ೪೪

೪೭. ಪೂರ್ವೋಕ್ತ ಸಿ. ಮಹಾದೇವ ಮತ್ತು ಇತರರು ಪು.ಸ.ಂ ೩೪೮

೪೮. Bellary district census Hand book 2011 serice 30, Part XII-A p.no 52

೪೯. Directorate of census opetations Karnataka 2011, p no. 26

೫೦. ಪೂರ್ವೋಕ್ತ, ಕಿಚಿಡಿ ಚನ್ನಪ್ಪ ಪು.ಸಂ. ೬೨

೫೧. ಪೂರ್ವೋಕ್ತ ಸಿ.ಮಹಾದೇವ ಮತ್ತು ಇತರರು, ಪು.ಸ.ಂ ೮೮

೫೨. ಅದೇ ಪುಟಸಂಖ್ಯೆ ೨೮೬

೫೩. https://en.wikipedia.org/wiki/ Hospe.

೫೪. Village map, in Karnataka. Bellary

೫೫. ಹೆಗ್ಡಾಳ್ ಹುಲುಗಪ್ಪ, ದೈವಮೂಲ ವ್ಯಕ್ತಿ ಮತ್ತು ಸ್ಥಳನಾಮಗಳು: ಸಾಮಾಜೋಭಾಷಿಕ ಅಧ್ಯಯನ, (ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ೨೦೧೬,ಪು.ಸಂ. ೧೪೭–೧೪೮.

೫೬. ಪೂರ್ವೋಕ್ತ ಸಿ. ಮಹಾದೇವ ಮತ್ತು ಇತರರು, ಪು.ಸಂ. ೨೭೦

೫೭. https://en.wikipedia.org/wiki/Hospet.

೫೮. www.census 2011, co.in Karnataka, Bellary district list p.no 1

೫೯. ಕೆ.ಮಲ್ಲಿಕಾರ್ಜುನ, ಪಂಚಾಯತ್‌ರಾಜ್ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ೨೦೧೧, ಪು.ಸಂ. ೬೫

೬೦. https://en.wikipedia.org/wiki/taluks of karnataka

೬೧. ಪೂರ್ವೋಕ್ತ ಬಳ್ಳಾರಿ ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ಅವಲೋಕನ ವರದಿ ೨೦೧೧–೧೨, ಪು.ಸಂ. ೮

೬೨. ಪೂರ್ವೋಕ್ತ, https://en.wikipedia.org/wiki/taluks of karnataka

೬೩. ಪೂರ್ವೋಕ್ತ ಜೋಗಿನಕಟ್ಟೆ ನಾಗರಾಜ ೨೦೧೫, ಪು.ಸ.ಂ ೮೭–೮೮

೬೪. ಪೂರ್ವೋಕ್ತ ಜಿಲ್ಲಾ ಸಾಂಖ್ಯಿಕ ವಿಭಾಗ ೨೦೧೩, ಬಳ್ಳಾರಿ ಪು.ಸಂ. ೬

೬೫. ಯರಿಸ್ವಾಮಿ ಎಂ. ಗ್ರಾಮಪಂಚಾಯಿತಿ ಮತ್ತು ಸಬಲೀಕರಣ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ೨೦೦೨, ಪು.ಸಂ. ೫೩

೬೬. ಪೂರ್ವೋಕ್ತ ಜೋಗಿನಕಟ್ಟೆ ನಾಗರಾಜ ೨೦೧೫, ಪು.ಸಂ. ೮೭–೮೮

೬೭. ಪೂರ್ವೋಕ್ತ ಯರಿಸ್ವಾಮಿ ಎಂ. ೨೦೦೨, ಪು.ಸಂ. ೫೨

೬೮. ಪೂರ್ವೋಕ್ತ, ಬಳ್ಳಾರಿ ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ಅವಲೋಕನ ವರದಿ ೨೦೧೧-೧೨, ಪು.ಸಂ. ೧೬ಮತ್ತು ೧೯

೬೯. ಪೂರ್ವೋಕ್ತ Bellary district census Hand book 2011, p.no. 52

೭೦. ಪೂರ್ವೋಕ್ತ ಯರಿಸ್ವಾಮಿ ಎಂ. ೨೦೦೨ ಪು.ಸಂ. ೫೨

೭೧. ಪೂರ್ವೋಕ್ತ Censs 2011, co in Karnataka p.no 01

೭೨. ಅದೇ ಪುಟ ಸಂಖ್ಯೆ, ೨

ಅಧ್ಯಾಯ : ನಾಲ್ಕು

ಸ್ವ–ಸಹಾಯ ಗುಂಪುಗಳ ಐತಿಹಾಸಿಕ ಹಿನ್ನೆಲೆ

ಅಧ್ಯಾಯ : ನಾಲ್ಕು

ಸ್ವ–ಸಹಾಯ ಗುಂಪುಗಳ ಐತಿಹಾಸಿಕ ಹಿನ್ನೆಲೆ

ಸ್ವ–ಸಹಾಯ ಗುಂಪುಗಳು ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಮಹಿಳೆಯರ ಸಬಲೀಕರಣಕ್ಕೆ ತಮ್ಮದೇ ಆದಂತಹ ಪಾತ್ರವನ್ನು ವಹಿಸುತ್ತಿವೆ. ಮುಖ್ಯವಾಗಿ ಗ್ರಾಮೀಣ ಪ್ರದೇಶದ ಜನರಲ್ಲಿ ಅದರಲ್ಲೂ ಮಹಿಳೆಯರು ಇವುಗಳ ಸಂಪೂರ್ಣ ಲಾಭವನ್ನು ಪಡೆದುಕೊಂಡಿರುವುದು ಕಂಡುಬರುತ್ತಿದೆ. ಇವುಗಳ ಆರಂಭದ ದಿನದಿಂದಲೂ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆ ಇರುವುದನ್ನು ಕಾಣಬಹುದು. ಇವುಗಳ ಕಾರಣವಾಗಿ ಇಂದು ಮಹಿಳೆಯರು ಹಲವಾರು ಪ್ರಯೋಜನಗಳನ್ನು ಪಡೆದುಕೊಂಡಿರುವುದು ಕಂಡುಬರುತ್ತಿದೆ. ಸ್ವ ಸಹಾಯ ಸಂಘಗಳ ಕುರಿತಾಗಿ ಚರಿತ್ರೆಯು ಜಾಗತಿಕ ಹಿನ್ನೆಲೆಯನ್ನು ಹೊಂದಿದೆ. ಹಾಗಾಗಿ ಜಾಗತಿಕ ನೆಲೆಯಿಂದ ಗ್ರಾಮೀಣ ಮಟ್ಟದವರೆಗೆ ಹೇಗೆಲ್ಲಾ ಬೆಳೆದು ಬಂದಿದೆ ಎಂಬುದನ್ನು ಮುಂದಿನಂತೆ ನೋಡಬಹುದಾಗಿದೆ.

೪.೧. ಜಾಗತಿಕ ಮಟ್ಟದಲ್ಲಿ ಸ್ವ–ಸಹಾಯ ಗುಂಪುಗಳ ಹಿನ್ನೆಲೆ

ಇತಿಹಾಸದುದ್ದಕ್ಕೂ ಮಾನವರು ಇತರರೊಡನೆ ಒಟ್ಟುಗೂಡಿ ಹಲವಾರು ಗುಂಪುಗಳನ್ನು ಸ್ಥಾಪನೆ ಮಾಡಿಕೊಂಡಿರುವುದು ಕಂಡುಬಂದಿದೆ. ಈ ಗುಂಪುಗಳು ಒಂದೇ ವಿದಧ ಅಭಿರುಚಿಯುಳ್ಳವರು ಹಾಗೂ ದಬ್ಬಾಳಿಕೆಗೊಳಪಟ್ಟ ಜನರೆಲ್ಲರೂ ಒಟ್ಟು ಗೂಡಿ ತಮಗಾಗಿರುವ ಶೋಷಣೆಯ ವಿರುದ್ಧ ಧ್ವನಿ ಎತ್ತಲು ಗುಂಪುಗಳು ಸ್ಥಾಪಿಸಿರುವುದು ಕಾಣುತ್ತೇವೆ. ಐತಿಹಾಸಿಕವಾಗಿ ನಾವು ನೋಡಿದಾಗ ೧೯೩೦ರಲ್ಲಿ ಲ್ಯಾಟೀನ್ ಅಮೇರಿಕಾದಲ್ಲಿ (ಆಲ್ಕೋಹಾಲ್ (Alcoholice Anonymons) ಕುಡಿಯುವ ವಿವಿಧ ಗುಂಪುಗಳು) ಅದನ್ನು ತಡೆಯುವುದಕ್ಕಾಗಿ ಸ್ವ–ಸಹಾಯ ಗುಂಪುಗಳನ್ನು ಆರಂಭಿಸಿದವು. ಸ್ವ–ಸಹಾಯ ಗುಂಪುಗಳು ತಮ್ಮದೇ ಆದ ಮಹತ್ವದ ಸ್ವರೂಪವನ್ನು ಹೊಂದಿವೆ. ಎಲ್ಲಾ ಸ್ವ–ಸಹಾಯ ಗುಂಪುಗಳ ಪ್ರಮುಖ ತತ್ವವು ಹಲವಾರು ಪಿಥದಲ್ಲಿ ಸಮುದಾಯಗಳ ಬೆಳವಣಿಗೆಯನ್ನು ಮಾಡುವುದಾಗಿದೆ. ಇದನ್ನು ೧೯೮೦ರಲ್ಲಿ ಶಿಸ್ತುಬದ್ಧವಾದ ನಿಟ್ಟಿನಲ್ಲಿ ಸಬಲೀಕರಣದ ಪರಿಕಲ್ಪನೆಯಲ್ಲಿ ಪ್ರಾರಂಭಿಸಲಾಯಿತು. ಕಳೆದ ೨೦ ವರ್ಷಗಳಲ್ಲಿ ಸ್ವ–ಸಹಾಯ ಗುಂಪುಗಳು ನಾಯಿಕೊಡೆಯ ಹಾಗೆ ತ್ವರಿತಗತಿಯಲ್ಲಿ ಬೆಳೆದಿರುವುದನ್ನು ಕಾಣಬಹುದು. ಅಮೇರಿಕಾದ ಆಲ್ಕೋಹಾಲ್ ಕುಡಿಯುವ (Alcoholice Anonymons) ಗುಂಪು ೧೦ ದಶಲಕ್ಷ ಸದಸ್ಯರನ್ನೊಳಗೊಂಡ ಬಹುದೊಡ್ಡ ಸ್ವ–ಸಹಾಯ ಗುಂಪು ಎಂದು ಪರಿಗಣಿಸಲಾಗಿದೆ. ಒಂದು ಅಂದಾಜಿನ ಪ್ರಕಾರ ಸ್ವ–ಸಹಾಯ ಗುಂಪುಗಳ ಸದಸ್ಯರ ಸಂಖ್ಯೆ ೨೦ ದಶಲಕ್ಷವೆಂದು ತಿಳಿಯಲಾಗಿದೆ. ಈ ಗುಂಪುಗಳಲ್ಲಿ ಎಲ್ಲಾ ರೀತಿಯ ವ್ಯಸನಿಗಳಿಗೆ ಗುರಿಯಾದ ವ್ಯಕ್ತಿಗಳನ್ನು ಕಾಣಬಹುದು. ಮಧ್ಯವ್ಯಸನಿಗಳ ಅ್ಯನ್‌ನಿಮಸ್ ಗುಂಪು, ಜೂಜಾಡುವ ಗುಂಪು, ಸಾಲಗಾರರ ಗುಂಪು, ಹಾಗೆಯೇ ಕುಟುಂಬಗಳ ವಿಚಾರದಲ್ಲಿ–ಮಾನಸಿಕ

ಅಸ್ವಸ್ಥರ ಕುಟುಂಬ, ಅವಳಿ ಮಕ್ಕಳ ತಾಯಂದಿರು ಹೆಚ್‌ಐವಿ/ಏಡ್ಸ್ ಹೊಂದಿರುವ ವ್ಯಕ್ತಿಗಳ ರಾಷ್ಟ್ರೀಯ ಸಂಘಟನೆಗಳು, ಮಾನಸಿಕ ಅಸ್ವಸ್ಥತೆಯಲ್ಲಿ, ಭಾವನಾತ್ಮಕ ಗುಂಪು, ಮರುಪಾವತಿ, ಆದಾಯ, ಬೆಳವಣಿಗೆ, ಸ್ನೇಹಿತರ ಗುಂಪು, ಆತ್ಮಹತ್ಯೆಯಲ್ಲಿ ಉಳಿದುಬಂದ ಗುಂಪು, ವಿಧವೆಯರಿಗೆ ವಿಧವೆಯರು, ಜೀವನ ಶೈಲಿಯಲ್ಲಿ ಒಬ್ಬ ತಾಯಿಯನ್ನು ಅವಲಂಭಿಸಿರುವುದು ಹಾಗೂ ಸಮಾಜಕ್ಕಾಗಿ ಮತ್ತೊಬ್ಬಳು.

ಹಲವಾರು ವಿಧದ ತೊಂದರೆಗಳಿಗೊಳ್ಳಗೊಂಡವರು ಹಾಗೂ ವಿವಿದೋದ್ದೇಶವನ್ನು ಹೊಂದಿರುವ ಜನರೆಲ್ಲರೂ ಗುಂಪುಗಳ ಸದಸ್ಯರಾಗಿ, ಪರಸ್ಪರ ಬೆಂಬಲಕ್ಕಾಗಿ ಮತ್ತು ಬೆಂಬಲ ನೀಡುವುದಕ್ಕಾಗಿ ಹಾಗೂ ಒಟ್ಟಾಗಿ ಕೆಲಸವನ್ನು ನಿರ್ವಹಿಸಿ ತಮಗಾದ ಅನಾನುಕೂಲತೆ ಹಾಗೂ ಶೋಷಣೆಯ ವಿರುದ್ಧ ನ್ಯಾಯವನ್ನು ದೊರಕಿಸಿಕೊಳ್ಳಲು ಈ ಗುಂಪುಗಳ ಸದಸ್ಯರಾಗುತ್ತಾರೆ. ಸಮುದಾಯ ಶಿಕ್ಷಣ, ಮಾಹಿತಿ ಹಾಗೂ ಪರಸ್ಪರ ಬೆಂಬಲಗಳು ಮುಂತಾದವು ಈ ಗುಂಪುಗಳ ಚಟುವಟಿಕೆಯಾಗಿದೆ.[೧]

ಸ್ವ-ಸಹಾಯ ಗುಂಪುಗಳ ಒಂದು ಸ್ವ-ನಿಯಂತ್ರಣದ ಕಿರು ಹಾಗೂ ಒಂದು ಅಸಾಂಪ್ರದಾಯಿಕ ಸಂಸ್ಥೆಯಾಗಿದ್ದು, ಇದು ಬಡಜನರಿಗಾಗಿ ಸ್ಥಾಪನೆಯಾಗಿದೆ. ಪ್ರಮುಖವಾಗಿ ಸಾಮಾಜಿಕ, ಆರ್ಥಿಕವಾಗಿ ಒಂದೇ ವರ್ಗದಲ್ಲಿ ಬರುವ ಕುಟುಂಬಗಳು ತಮ್ಮ ಉಳಿತಾಯ ಹಾಗೂ ಸಾಲದ ಹಲವಾರು ಕಾರ್ಯಕ್ರಮಗಳಿಗಾಗಿ ಈ ಗುಂಪಿನ ಸದಸ್ಯರಾಗುತ್ತಾರೆ. ಸಾಲ ನೀಡುವ ಕಾರ್ಯವನ್ನು ಸದಸ್ಯರುಗಳು ಸ್ವೀಕರಿಸಿದ ಉಳಿತಾಯದ ಠೇವಣಿಗಳಿಂದ ನೀಡಲಾಗುತ್ತದೆ. ಈ ಉಳಿತಾಯ ಖಾತೆಗೆ ವಾರ ಅಥವಾ ೧೫ ದಿನಗಳಿಗೊಮ್ಮೆ ಹಣವನ್ನು ಸದಸ್ಯರುಗಳು ಜಮಾ ಮಾಡುತ್ತಾರೆ. ಇಲ್ಲಿ ಆಗಾಗ ನಡೆಯುವ ಸಭೆಗಳಲ್ಲಿ, ಹಳ್ಳಿಗಳಲ್ಲಿ ಉಂಟಾಗುವ ಸಾಮಾನ್ಯ ಸಮಸ್ಯೆಗಳು ಹಾಗೂ ಪರಿಹಾರ, ಮಾಹಿತಿಗಳನ್ನು ಪರಸ್ಪರ ಹಂಚಿಕೊಳ್ಳುವುದು, ಆರೋಗ್ಯದಲ್ಲಿ ಸುಧಾರಣೆಗಳ ಪ್ರಯತ್ನ ಹಾಗೂ ಶಿಕ್ಷಣದ ನೈಪುಣ್ಯತೆಗಳ ಬಗ್ಗೆ ವಿಚಾರಗಳು ನಡೆಯುತ್ತವೆ.[೨]

ಸ್ವ-ಸಹಾಯ ಗುಂಪುಗಳು ಕೇವಲ ದಾನಿಗಳ ಸಂಸ್ಥೆ ಅಥವಾ ಕೇವಲ ಸಮುದಾಯ ಆಧಾರಿತ ಗುಂಪುಗಳಲ್ಲ, ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವ ಒಂದೇ ವಿಧದ ಜನರು ಈ ಗುಂಪುಗಳ ಸದಸ್ಯರಾಗಿರುತ್ತಾರೆ. ಈ ಗುಂಪುಗಳ ಸದಸ್ಯರು ಗುಂಪುಗಳ ಪ್ರತಿನಿಧಿಗಳಲ್ಲ. ಈ ಗುಂಪುಗಳ ಸದಸ್ಯರು ತಮ್ಮ ಜೀವನದಲ್ಲಿ ಉಂಟಾದ ಸಮಸ್ಯೆಗಳ ಪರಿಹಾರಕ್ಕಾಗಿ ಕಾರ್ಯವನ್ನು ಹಾಗೂ ಚಟುವಟಿಕೆಗಳಲ್ಲಿ ನಿರತರಾಗುತ್ತಾರೆ. ಇಲ್ಲಿ ತಮ್ಮ ಜೀವನಮಟ್ಟದಲ್ಲಿ ಸುಧಾರಣೆಗಳನ್ನು ತಂದುಕೊಳ್ಳಲು ಪರಸ್ಪರ ಒಬ್ಬರಿಗೊಬ್ಬರು ಬೆಂಬಲಿಸುತ್ತಾರೆ. ಈ ಸದಸ್ಯರುಗಳು ಜ್ಞಾನದ ಅಭಿಪ್ರಾಯವು ಸ್ಥಳೀಯವಾಗಿದ್ದು ಹಾಗೂ ಪ್ರಾಯೋಗಾತ್ಮಕವಾಗಿದ್ದು ಮತ್ತು ಈ ಜ್ಞಾನದ ಮೂಲವು ಅವರು ಜೀವನದಲ್ಲಿ ಅನುಭವಿಸಿರುವ ಸಮಸ್ಯೆಗಳಿಂದ ಉಂಟಾಗಿದ್ದಾಗಿದೆ. ಸ್ವ-ಸಹಾಯ ಗುಂಪುಗಳ ಸ್ಥಾಪನೆಯು ಗುಂಪಿನ ಸದಸ್ಯರ ಸಾಮರ್ಥ್ಯದ ಮೇಲೆ ನಿಂತಿದೆ.

ಸ್ವ–ಸಹಾಯ ಗುಂಪುಗಳ ಇನ್ನೊಂದು ಪ್ರಮುಖ ಪಾತ್ರವು ಇಂದಿನ ತಂತ್ರಜ್ಞಾನವನ್ನು ಗುಂಪಿನ ಸದಸ್ಯರಿಗೆ ವರ್ಗಾವಣೆ ಮಾಡುವುದಾಗಿದೆ. ಸ್ವ–ಸಹಾಯ ಗುಂಪುಗಳ ಸದಸ್ಯರುಗಳಿಗೆ ಈ ಗುಂಪುಗಳ ಸಂಘಟನೆಯ ಶಕ್ತಿಯನ್ನು ಅಧಿಕ ಸಂಪನ್ಮೂಲಗಳನ್ನು ಹಾಗೂ ಆಧುನಿಕ ತಾಂತ್ರಿಕತೆಯನ್ನು ತಲುಪುವ ಮಟ್ಟವನ್ನು ನೀಡುವುದರ ಮೂಲಕ ಉದ್ಯೋಗ ಮತ್ತು ವರಮಾನಗಳ ಉತ್ಪನ್ನವನ್ನು ತಿಳಿಸಿಕೊಳ್ಳುತ್ತದೆ. ಇದರಿಂದ ತಿಳಿಯುವುದೇನೆಂದರೆ ಸ್ವ–ಸಹಾಯ ಗುಂಪುಗಳ ಬೆಳವಣಿಗೆಯು ಹಾಗೂ ಗ್ರಾಮೀಣ ಬಡಜನತೆಯ ಪಾತ್ರವು ದೇಶದ ಹಲವಾರು ಪ್ರದೇಶಗಳಲ್ಲಿ ಹೊಸ ತಂತ್ರಜ್ಞಾನದತ್ತ ಮುನ್ನುಗ್ಗುತ್ತಿರುವುದು ಕಂಡುಬರುತ್ತದೆ. ಇದರಿಂದ ಅತೀ ಚಿಕ್ಕ ಜಮೀನನ್ನು ಹೊಂದಿರುವ ರೈತನೂ ಹೊಸ ತಂತ್ರಜ್ಞಾನದ ಉಪಯೋಗವನ್ನು ಪಡೆಯುತ್ತಾನೆ.

ಸ್ವ–ಸಹಾಯ ಗುಂಪುಗಳ ಮುಖಾಂತರ ಅಮೇರಿಕನ್ನರು ತಮ್ಮ ಆರೋಗ್ಯ ಸ್ಥಿತಿಗಳಲ್ಲಿ ಬದಲಾವಣೆಗಳನ್ನು ತಂದುಕೊಂಡಿರುವುದು ಕಂಡುಬಂದಿದೆ. ಇಂದು ಸ್ವ–ಸಹಾಯ ಗುಂಪಿನ ಬೆಳವಣಿಗೆಯು (ಆಂದೋಲನ) ಜಾಗತಿಕಮಟ್ಟದ ಅಸಾಧಾರಣ ಪರಿಕಲ್ಪನೆಯಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಈ ಸ್ವ–ಸಹಾಯ ಗುಂಪುಗಳು ಆರೋಗ್ಯ ಸ್ಥಿತಿಯ ಸುಧಾರಣೆಗೆ ಸೃಷ್ಟಿಯಾಗಿರುವುದೆಂದು ಘೋಷಿಸಲಾಗಿದೆ ಹಾಗೂ ಈ ಗುಂಪುಗಳು ದೈಹಿಕ ಮತ್ತು ಮಾನಸಿಕ ತೊಂದರೆಯುಳ್ಳ ಹಾಗೂ ಭಾವನಾತ್ಮಕ ತೊಂದರೆಯುಳ್ಳವರಿಗೆ ಸೇವೆಯನ್ನು ತಲುಪಿಸುತ್ತಿದೆ.[೩]

ರಾಪರೋಟ್ (೧೯೯೩) ಅವರು ಹೇಳುವುದೇನೆಂದರೆ ಸ್ವ–ಸಹಾಯ ಗುಂಪುಗಳು, ಗುಂಪಿನ ಅನುಭವವನ್ನು ತಿಳಿದುಕೊಳ್ಳಲು ಒಂದು ಆಶ್ರಯ ಸ್ಥಾನವಾಗಿದ್ದು, ಇಲ್ಲಿ ಭಾವನಾತ್ಮಕ ಬೆಂಬಲ ಹಾಗೂ ಸಾಮಾಜಿಕ ಕಲಿಕೆಯಿಂದ ಸಮಾಜದಲ್ಲಿ ತನ್ನದೇ ಆದ ಸಾಮಾಜಿಕ ಸ್ಥಾನವನ್ನು ಕಲ್ಪಿಸಿಕೊಳ್ಳುವುದಾಗಿದೆ.[೪] ತದನಂತರದಲ್ಲಿ ೧೯೭೬ರಲ್ಲಿ ಪ್ರೋ. ಮೊಹಮ್ಮದ್ ಯುನಸ್ ಅವರು ಮಹಿಳಾ ಗುಂಪುಗಳನ್ನು ಬಾಂಗ್ಲಾದೇಶದಲ್ಲಿ ಪ್ರಾರಂಭಿಸಿದರು. ಇದರ ಪ್ರಮುಖ ಉದ್ದೇಶ ಬಡಜನತೆಗೆ ಉಳಿತಾಯವನ್ನು ಮಾಡಿಸುವುದು. ಇಂದು ಈ ಗುಂಪು "ಬಾಂಗ್ಲಾದೇಶ ಗ್ರಾಮೀಣ ಬ್ಯಾಂಕು" ಆಗಿ ಮಾರ್ಪಾಡಾಗಿದೆ. ಇದು ೧೯೯೮ ಫೆಬ್ರವರಿಯಲ್ಲಿ ಒದಗಿಸಿದ ಮಾಹಿತಿಯ ಪ್ರಕಾರ ಈ ಬ್ಯಾಂಕು ೧೧೩೮ ಶಾಖೆಗಳನ್ನು ಹೊಂದಿದ್ದು, ೩೯,೫೭೨ ಹಳ್ಳಿಗಳನ್ನೊಳಗೊಂಡಿದೆ. ಹಾಗೂ ಇದು ೨೩,೬೭,೫೦೩ ಸದಸ್ಯರನ್ನು ಹೊಂದಿದೆ. ಅದರಲ್ಲಿ ೧,೨೪,೫೭೧ ಸದಸ್ಯರು ಪುರುಷರು ಈ ಬ್ಯಾಂಕು ೨೭,೧೪,೬೧ ದಶಲಕ್ಷ ಯುಸ್ ಡಾಲರ್ಸ್‌ನ್ನು ಉಳಿತಾಯವನ್ನು ಮಾಡಿರುವುದು ಕಂಡುಬಂದಿದೆ.[೫]

೪.೨. ಭಾರತದಲ್ಲಿ ಸ್ವ-ಸಹಾಯ ಗುಂಪುಗಳ ಹಿನ್ನೆಲೆ

ಈ ಬಾಂಗ್ಲಾದೇಶ ಗ್ರಾಮೀಣ ಬ್ಯಾಂಕಿನ ಯಶಸ್ಸಿನಿಂದ ಪ್ರೇರಣೆಗೊಂಡು ೧೯೮೫ರಲ್ಲಿ ಮೈರಾಡವು ಮೊದಲ ಸ್ವ-ಸಹಾಯ ಗುಂಪುಗಳನ್ನು ಆರಂಭಿಸಿತು. ೧೯೮೬-೮೭ರಲ್ಲಿ ಮೈರಾಡ ಯೋಜನೆಯಡಿ ೩೦೦ ಸ್ವ-ಸಹಾಯ ಗುಂಪುಗಳು ಕಂಡುಬಂದವು. ಹಲವಾರು ಗುಂಪುಗಳು ಮೈರಾಡದಿಂದ ಕಟ್ಟಿದ ಕೋ-ಆಪರೇಟಿವ್ ಸಂಘಗಳ ವಿಭಜನೆಯಿಂದ ಆರಂಭವಾಯಿತು. ಈ ಭಾಗಗಳಲ್ಲಿ ಹಲವಾರು ಸದಸ್ಯರುಗಳ ಸಾಲ ಪದ್ದತಿಯ ಮರು ಪ್ರಾರಂಭ ಮಾಡಬೇಕೆಂದು ಮೈರಾಡ್‌ಗೆ ಕೇಳಿಕೊಂಡರು. ಸಾಮಾನ್ಯವಾಗಿ ೧೫-೩೦ ಜನರ ಗುಂಪು ಒಂದು ಬೇಡಿಕೆಯನ್ನು ಮುಂದಿಟ್ಟರು. ಸಾಲಗಳ ಮರುಪಾವತಿಯ ಬಗ್ಗೆ ಜ್ಞಾಪಿಸಿದಾಗ ಈ ಗುಂಪುಗಳು ಮೈರಾಡ ಸಂಸ್ಥೆಗೆ ಮರುಪಾವತಿಸಲು ಒಪ್ಪಿಗೆ ಸೂಚಿಸಿದರು. ಆದರೆ ಕೋ-ಆಪರೇಟಿವ್ ಸಂಸ್ಥೆಗಳಿಗೆ ಮರುಪಾವತಿಸಲು ಅವರ್‍ಯಾರು ತಯಾರಿರಲಿಲ್ಲ. ಕಾರಣ ಈ ಸಂಘಗಳ ಕೆಲವು ವ್ಯಕ್ತಿಗಳ ದಬ್ಬಾಳಿಕೆಯೇ ಕಾರಣವೆಂದು ಹಲವರು ತಮ್ಮ ಅನುಭವ ವ್ಯಕ್ತಪಡಿಸಿದರು. ಮೈರಾಡದ ಸಿಬ್ಬಂದಿವರ್ಗದವರೆಲ್ಲಾ ಸದಸ್ಯರುಗಳಿಗೆ ಅವರವರ ಹಣದ ಮರುಪಾವತಿ ಮಾಡುವುದಾಗಿ ಸಲಹೆ ಸೂಚಿಸಿದರು. ನಂತರ ಸ್ವಲ್ಪ ಹಿಂಜರಿಕೆಯಿಂದ ಚಿಕ್ಕ ಗುಂಪುಗಳಲ್ಲಿ ತಮ್ಮ ಸಭೆಯನ್ನು ಮುಂದುವರೆಸಿದರು.

ಮೈರಾಡ ಸಿಬ್ಬಂದಿಯವರು ಅವರೆಲ್ಲರಿಗೂ ತರಬೇತಿಯ ಅವಶ್ಯಕತೆಯನ್ನು ಗಮನಿಸಿದರು. ಇದಕ್ಕಾಗಿ ಒಂದು ಅಜೆಂಡಾ ಮತ್ತು ದಾಖಲೆ ಪುಸ್ತಕವನ್ನು ತಯಾರು ಮಾಡಿದರು. ಸದಸ್ಯರುಗಳಿಗೆ ಕ್ರಮಬದ್ಧ ತರಬೇತಿ ನೀಡುವ ವ್ಯವಸ್ಥೆಯನ್ನು ಮಾಡಲಾಯಿತು. ಅವರೆಲ್ಲರೂ ಸಾಮಾನ್ಯವಾಗಿ, ಒಂದೇ ಆಸಕ್ತಿಯುಳ್ಳವರಾಗಿದ್ದರು. ಉದಾಹರಣೆಗೆ ಒಂದೇ ಆದಾಯ ಉಳ್ಳವರು, ಉದ್ಯೋಗ ಇಲ್ಲದವರು (ಉದಾ: ಕೃಷಿ ಕಾರ್ಮಿಕರು) ಆದರೆ ಎಲ್ಲಾ ಅವಧಿಯಲ್ಲೂ ಒಂದೇ ಗುಂಪಿನವರಾಗಿರಲಿಲ್ಲ. ಇಲ್ಲಿ ಜಾತಿ ಹಾಗೂ ವರ್ಗವೂ ಪ್ರಮುಖ ಪಾತ್ರವಹಿಸುತ್ತಿದ್ದವು. ಇನ್ನು ಹಲವಾರು ಸಂದರ್ಭಗಳಲ್ಲಿ ಒಂದೇ ಆರ್ಥಿಕ ಸ್ಥಿತಿಯುಳ್ಳವರು, ವಿವಿಧ ಜಾತಿ ಗುಂಪುಗಳಿಗೆ ಸೇರಿದ ವರ್ಗದವರೂ ಈ ಗುಂಪುಗಳಲ್ಲಿ ಸೇರಿರುತ್ತಾರೆ.

ಸ್ವ-ಸಹಾಯ ಗುಂಪುಗಳ ಯೋಜನೆಯಡಿ ೧೯೮೫ರಲ್ಲಿ ಪ್ರಪ್ರಥಮ ಸ್ವ-ಸಹಾಯ ಗುಂಪು ಪ್ರಾರಂಭವಾಯಿತು. ಇಲ್ಲಿ ನಬಾರ್ಡ್, ಆರ್‌ಬಿಐ ಹಾಗೂ ಎನ್‌ಜಿಓಗಳು ಬಡತನ ನಿರ್ಮೂಲನಾ ಕಾರ್ಯಕ್ರಮದಂತಹ ಹಲವಾರು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿತು. ಪರಿಣಾಮವಾಗಿ ಸ್ವ-ಸಹಾಯ ಗುಂಪುಗಳು ಸರ್ಕಾರದ ಒಂದು ಭಾಗವಾಗಿ ಬಡತನ ನಿರ್ಮೂಲನಾ ಕಾರ್ಯಕ್ರಮದಲ್ಲಿ ತನ್ನ ಕಾರ್ಯವನ್ನು ನಿರ್ವಹಿಸಿತು.[2] ಪ್ರಸ್ತುತ ಅಧ್ಯಾಯದಲ್ಲಿ ೨೦ವರ್ಷಗಳ ಸುದೀರ್ಘ ಅವಧಿಯನ್ನು ಎರಡು ಹಂತಗಳಾಗಿ ವಿಭಾಗಿಸಲಾಗಿದೆ.

ಹಂತ ೧: ೧೯೮೭ರಿಂದ ೧೯೯೨ರ ವರೆಗೆ

ಮೊದಲನೆ ಹಂತದಲ್ಲಿ ನಬಾರ್ಡ್‌ನ ಪ್ರಮುಖ ಆದ್ಯತೆ ಸ್ವ-ಸಹಾಯ ಗುಂಪುಗಳನ್ನು ಬೆಳೆಸಲು NGOದ ಆರಂಭಿಕ ನಿರ್ಧಾರಗಳಿಗೆ ಬೆಂಬಲಿಸುವುದು ಹಾಗೂ ಈ ಗುಂಪುಗಳಲ್ಲಿ ಅಡಗಿರುವ ಸಾಮರ್ಥ್ಯ ಹಾಗೂ ಕಾರ್ಯವನ್ನು ವಿಶ್ಲೇಷಿಸುವುದು. ೧೯೮೭ರಲ್ಲಿ ನಬಾರ್ಡ್ ತನ್ನ ಬಂಡವಾಳವನ್ನು ಎಸ್‌ಹೆಚ್.ಜಿ/ಎಸ್.ಎ.ಜಿ (Self-help affinity groups)ಯ ಬೆಳವಣಿಗೆಯಲ್ಲಿ ತೊಡಗಿಸಿತು (೧೯೮೬ರಲ್ಲಿ ಮೈರಾಡವು ಮುಂದಿಟ್ಟ ವರದಿಯ ಪ್ರತ್ಯುತ್ತರವಾಗಿ). ೧೯೮೭ರಲ್ಲಿ ಮೈರಾಡಗೆ ೧ ದಶಲಕ್ಷ ರೂಪಾಯಿ ಅನುದಾನವನ್ನು ನೀಡಿತು. ಇದರಿಂದ ಸ್ವ-ಸಹಾಯ ಗುಂಪುಗಳನ್ನು ಗುರುತಿಸಿ ಅವರ ಸಾಮರ್ಥ್ಯದ ಮುಖಾಂತರ ಅವರ ಉಳಿತಾಯವನ್ನು ೩-೬ ತಿಂಗಳ ನಂತರ ತಾಳೆನೋಡುವುದು. ಈ ಅನುದಾನವನ್ನು ಸ್ವ-ಸಹಾಯ ಗುಂಪುಗಳನ್ನು ಬೆಳೆಸುವಲ್ಲಿ ಮೈರಾಡ ಸಂಸ್ಥೆಗೆ ಅನುಭವದ ಮೇಲೆ ನೀಡಲಾಗಿದೆ. ನಬಾರ್ಡ್‌ನ ಅಂದಿನ ಅವದಿಯ ಅಧ್ಯಕ್ಷರಾಗಿ ಶ್ರೀ ಪಿ.ಆರ್.ನಾಯಕ್ ರವರಿದ್ದರು.

ಇದರ ಫಲಿತಾಂಶದ ಅನುಗುಣವಾಗಿ ೧೯೮೯ರಲ್ಲಿ ನಬಾರ್ಡ್ ಮತ್ತೊಂದು ಸಕ್ರಿಯ ಸಂಶೋಧನಾ ಯೋಜನೆಯನ್ನು ಹಮ್ಮಿಕೊಂಡಿತು. ಈ ಯೋಜನೆಯ ಮುಖಾಂತರ ಹಲವಾರು NGOಗಳಿಗೆ ಅನುದಾನವನ್ನು ನೀಡಲಾಯಿತು. ಈ ಒಂದು ಸಕ್ರಿಯ ಸಂಶೋಧನೆಯನ್ನು ವಿಶ್ಲೇಷಿಸಿದಾಗ ಇದರ ಯಶಸ್ಸು ನಬಾರ್ಡ್‌ನ ಅಧ್ಯಕ್ಷರು, ಹಿರಿಯ ಮ್ಯಾನೇಜ್‌ಮೆಂಟೆಗೆ ಸಲ್ಲುತ್ತದೆ. ೧೯೯೦ರಲ್ಲಿ ಆರ್.ಬಿ.ಐ. ಸ್ವ-ಸಹಾಯ ಗುಂಪುಗಳ ಮಾದರಿಯನ್ನು ಪರ್ಯಾಯ ಸಾಲದ ವ್ಯವಸ್ಥೆಯ ಮಾದರಿಯನ್ನಾಗಿ ಒಪ್ಪಿಕೊಂಡಿತು. ೧೯೯೨ರಲ್ಲಿ ನಬಾರ್ಡ್ ಬ್ಯಾಂಕುಗಳಿಗೆ ಆದೇಶವನ್ನು ಹೊರಡಿಸಿತು. ಇದರ ಪ್ರಕಾರ ಬ್ಯಾಂಕುಗಳು ಸಾಲವನ್ನು ನೇರವಾಗಿ ಸ್ವ-ಸಹಾಯ ಗುಂಪುಗಳಿಗೆ ನೀಡುವುದಾಗಿದೆ. ಈ ಆರಂಭಿಕ ಅನುಭವದ ಅನುಗುಣವಾಗಿ ಸ್ವ-ಸಹಾಯ ಗುಂಪು-ಬ್ಯಾಂಕುಗಳ ಜಂಟಿ ಯೋಜನೆಯ ಕಾರ್ಯಕ್ರಮವನ್ನು ೧೯೯೨ರಲ್ಲಿ ಆರಂಭಿಸಲಾಯಿತು. (ಇದನ್ನು ಎರಡನೇ ಹಂತದಲ್ಲಿ ಚರ್ಚಿಸಲಾಗಿದೆ.) ನಂತರ ರಾಷ್ಟ್ರದ ಸ್ವ-ಸಹಾಯ ಸಂಘಗಳಿಗೆ ಸಾಲ ನೀಡುವ ಪ್ರಥಮ ಕಾರ್ಯ ಕರ್ನಾಟಕದ ಕೋಲಾರ ಜಿಲ್ಲೆಯಲ್ಲಿ ಆರಂಭಗೊಂಡಿತು. ಅಂದಿನಿಂದ ಹಲವಾರು ಅಧಿಕಾರಿಗಳ ಸಂಪರ್ಕಗಳ ಮುಖಾಂತರ. ನಬಾರ್ಡ್ ಹಲವಾರು ಸ್ವ-ಸಹಾಯ ಗುಂಪುಗಳ ಬೆಳವಣಿಗೆಯನ್ನು ಮಾಡುವುದಲ್ಲದೇ ಹೊಸ ಕಾರ್ಯಯೋಜನೆಯ ಮುಖಾಂತರ ಸಾಮರ್ಥ್ಯವನ್ನು ಬೆಳೆಸಿರುವುದು ಕಂಡುಬಂದಿದೆ.

ಸ್ವ-ಸಹಾಯ ಗುಂಪು-ಬ್ಯಾಂಕುಗಳ ಜಂಟಿ ಯೋಜನೆಯು ಇನ್ನು ನಿರ್ದಿಷ್ಟ ಚೌಕಟ್ಟಿನಡಿ ಕಾರ್ಯನಡೆಸುತ್ತಿಲ್ಲ. ಆರ್.ಬಿ.ಐ. ಈ ಗುಂಪುಗಳಿಗೆ ಸಾಲ ನೀಡುವ ನಿರ್ಧಾರ ಮಾಡಲಿಲ್ಲದ ಕಾರಣ ಈ ಜಂಟಿ ಯೋಜನೆಯ ಕಾರ್ಯವನ್ನು ಆರಂಭಿಸಲಾಯಿತು. ಈ ಅನುಭವದ ಮುಖಾಂತರ ನಬಾರ್ಡ್

ಕಿರುಹಣಕಾಸಿನ ಮಾದರಿಯನ್ನು ಆರಂಭಿಸಿತು. ಇದರಿಂದ ದೊಡ್ಡ ಮಟ್ಟದ ಸ್ವ-ಸಹಾಯ ಗುಂಪು ಬ್ಯಾಂಕಿನ ಜಂಟಿ ಯೋಜನೆಯ ಕಾರ್ಯಕ್ರಮವು ಆರಂಭವಾಯಿತು.[೭]

ಹಂತ ೨: ೧೯೯೨ರಿಂದ ಸ್ವ -ಸಹಾಯ ಗುಂಪು-ಬ್ಯಾಂಕು ಜಂಟಿ ಕಾರ್ಯಕ್ರಮ

ಈ ಕಾರ್ಯಕ್ರಮ ೧೯೯೨ರಲ್ಲಿ ಆರಂಭವಾಗಿ ೨ ವರ್ಷಗಳಲ್ಲಿ ೫೦೦ ಸ್ವ-ಸಹಾಯ ಗುಂಪುಗಳನ್ನು ಜಂಟಿಗೊಳಿಸುವುದು. ಇದು ಸ್ವ-ಸಹಾಯ ಗುಂಪು-ಬ್ಯಾಂಕು ಜಂಟಿ ಕಾರ್ಯಕ್ರಮದ ಪ್ರಮುಖ ಯೋಜನೆಯಾಗಿದೆ. ೧೯೮೭ರಿಂದ ನಬಾರ್ಡ್ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿತ್ತು. ೧೯೮೭ರಲ್ಲಿ ಬಂಡವಾಳ ಹೂಡಿಕೆಯಿಲ್ಲದೆ ಈ ಸ್ವ-ಸಹಾಯ ಗುಂಪುಗಳ ಬೆಳವಣಿಗೆಗೆ ಯಾವುದೇ ಒಂದು ಅಧಿಕಾರಯುತ ಮಾನ್ಯತೆ ಹಾಗೂ ಯಜಮಾನಿಕೆ ಸಿಗುತ್ತಿರಲಿಲ್ಲ. ಸ್ವ-ಸಹಾಯ ಗುಂಪು-ಬ್ಯಾಂಕು ಜಂಟಿ ಯೋಜನೆಯು ನಿಧಾನಗತಿಯಿಂದ ಆರಂಭವಾಗಿ ನಂತರ ೧೯೯೯ರಲ್ಲಿ ಬಿರುಸಾಗಿ ಬೆಳೆಯುತ್ತಾ ಹೋಯಿತು. ಇದಕ್ಕೆ ಆರ್‌ಬಿಐ ನಿಂದ ಬಲವಾದ ಬೆಂಬಲ ಸಿಕ್ಕಿತು. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಂದಲೂ ಬೆಂಬಲ ಸಿಕ್ಕಿತು. ಪ್ರಮುಖವಾಗಿ ತಮಿಳುನಾಡು, ಆಂಧ್ರಪ್ರದೇಶ, ಮಹರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಸಾವಿರಾರು ಸ್ವಯಂ ಸೇವಾ ಸಂಸ್ಥೆಗಳು ಮತ್ತು ಬ್ಯಾಂಕಿಂಗ್ ವಲಯಗಳು ಹಾಗೂ ವಿವಿದೋದ್ದೇಶ ಸಂಸ್ಥೆಗಳು (IFAD) ಬೆಂಬಲ ನೀಡಿದವು. ಸ್ವ-ಸಹಾಯ ಗುಂಪುಗಳ ಬೆಳವಣಿಗೆಯ ಮೇಲೆ ಈ ಜಂಟಿ ಯೋಜನೆಯು ಕೇಂದ್ರಿಕೃತವಾಗಿದೆ. ಈ ಕಛೇರಿಯ ದಾಖಲೆಗಳು ಸ್ವ-ಸಹಾಯ ಗುಂಪು-ಬ್ಯಾಂಕ್ ಜಂಟಿ ಯೋಜನೆಯನ್ನು ಕೇಂದ್ರಿಕರಿಸಿದೆ. ಈ ಮಾಹಿತಿಗಳ ಪರಿಶೀಲನೆಯು ಕ್ಲಿಷ್ಟಕರವಾದರೂ, ವರದಿಗಳ ಪ್ರಕಾರ ಮಾರ್ಚ್ ೨೦೦೬ರಲ್ಲಿ ೩ ದಶಲಕ್ಷ ಸ್ವ-ಸಹಾಯ ಗುಂಪುಗಳು ಭಾರತದಲ್ಲಿ ಕಂಡುಬಂದವು. ಅವುಗಳಲ್ಲಿ ೧.೬ ದಶಲಕ್ಷ ಸ್ವ-ಸಹಾಯ ಗುಂಪುಗಳು ಬ್ಯಾಂಕಿನೊಂದಿಗೆ ಜಂಟಿಯಗಿದ್ದವು. ಇಲ್ಲಿ ನಬಾರ್ಡ್ ಬಂಡವಾಳವನ್ನು ಹೂಡಿದೆ. ಈ ವರದಿ ಪ್ರಕಾರ ೧.೬ ದಶಲಕ್ಷ ಸ್ವ-ಸಹಾಯ ಗುಂಪುಗಳು ಬ್ಯಾಂಕಿನೊಂದಿಗೆ ಜಂಟಿಯಾದವು. ಇಲ್ಲಿ ಸಂಪೂರ್ಣ ಮಾಹಿತಿ ಬ್ಯಾಂಕುಗಳ ಮರುಪಾವತಿಯ ಬಗ್ಗೆ ನೀಡಲಾಗಿದೆ. ಈ ವರದಿಯು ಪ್ರಮುಖವಾಗಿ ಸ್ವ-ಸಹಾಯ ಗುಂಪುಗಳ ಹಣಕಾಸಿನ ನಿರ್ವಹಣೆ ಬಗ್ಗೆ ಗಮನ ನೀಡಿದೆ.

ಸ್ವ-ಸಹಾಯ ಗುಂಪುಗಳು ಬಡಜನರ ಹಾಗೂ ಬಡತನ ರೇಖೆ ಕೆಳಗಿರುವ ಜನರ ಸಬಲೀಕರಣದ ಒಂದು ಉಪಕರಣವಾಗಿದೆ. ಇಷ್ಟು ಮಾತ್ರವಲ್ಲದೇ ಒಂದು ಕುಟುಂಬ ಹಾಗೂ ಸಮಾಜದ ಸಂಬಂಧಗಳಲ್ಲಿಯೂ ಸಕಾರಾತ್ಮಕ ಬೆಳವಣಿಗೆಯನ್ನು ತಂದಿದೆ. ಕುಟುಂಬದಲ್ಲಿ ನಡೆಯುತ್ತಿರುವ ದೌರ್ಜನ್ಯದ ಬಗ್ಗೆ ಧ್ವನಿ ಎತ್ತುವ ಹಾಗೆ ಮಾಡಿದೆ. ಇಲ್ಲಿ ಹಲವಾರು ಸಂಬಂಧಗಳ ನಡುವೆ ನಡೆಯುವ ಗೊಂದಲಗಳು ಅಂದರೆ, ಜಾತಿ, ವರ್ಗ, ರಾಜಕೀಯ ಅಧಿಕಾರ ಹಾಗೂ ಇನ್ನಿತರ ಕಾರಣಗಳಿಂದ ಬಡಜನತೆಯ ಜೀವನಮಟ್ಟ ಕುಸಿಯುವುದಲ್ಲದೇ ಬೆಳವಣಿಗೆಗೆ ಅಡ್ಡಗೋಡೆಯಾಗಿದೆ.

ಈ ಒಂದು ಸಾಮಾಜಿಕ ಪರಿಣಾಮವನ್ನು ಗಮನಿಸಿ ಮೈರಾಡವು ಸ್ವ-ಸಹಾಯ ಗುಂಪುಗಳಿಗೆ ಸಾಲ ತಲುಪಿಸುವ ಆದ್ಯತೆಯ ಮೇಲೆ ಗಮನ ಹರಿಸುವುದನ್ನು ಬಿಟ್ಟು ಉಳಿತಾಯ ಹಾಗೂ ಸಾಲ ನಿರ್ವಹಣೆಯ ಮೇಲೆ ಗಮನ ಹರಿಸುತ್ತಿದೆ. ಹಣಕಾಸಿನ ಕಾರ್ಯನಿರ್ವಹಣೆಯಲ್ಲಿ ಬದಲಾವಣೆ ತರುವ ಕಲೆಯನ್ನು ಹೇಳಿಕೊಡುತ್ತದೆ. ಸ್ವ-ಸಹಾಯ ಗುಂಪುಗಳ ಧ್ಯೇಯ ಕೇವಲ ಮೀನು ಹಿಡಿಯುವುದನ್ನು ಕಲಿಸುವುದು ಮಾತ್ರವಲ್ಲ, ಅದರ ಮುಂಚೆ ಅವರನ್ನು ನದಿಗೆ ತಲುಪಲು ತಯಾರಿ ಮಾಡುವುದು. ಹಲವಾರು ಅಡೆತಡೆ (ಜಾತಿ, ವರ್ಗ, ಮತ್ತು ರಾಜಕೀಯ)ಗಳನ್ನು ದಾಟಿ ಸ್ವ-ಸಹಾಯ ಗುಂಪುಗಳು ಗುರಿತಲುಪುವುದು.[೮]

ಮಾರ್ಚ್ ೨೦೦೫-೦೬ರ ಪ್ರಕಾರ ಈ ಕಾರ್ಯಕ್ರಮದ ಮುಖಾಂತರ ೨.೨. ಮಿಲಿಯನ್ ಸ್ವ-ಸಹಾಯ ಗುಂಪುಗಳಿಗೆ ಸಾಲವನ್ನು ಹಾಗೂ ೩೩ ಮಿಲಿಯನ್ ಬಡಕುಟುಂಬಗಳಿಗೆ ಸದಸ್ಯತ್ವವನ್ನು ಹಾಗೂ ೧೨೦ ದಶಲಕ್ಷ ಬಡಜನರು ದೊಡ್ಡಮಟ್ಟದಲ್ಲಿ ಕಿರುಹಣಕಾಸಿನ ವ್ಯವಸ್ಥೆಯನ್ನು ಭಾರತದಲ್ಲಿ ಆರಂಭಿಸಿರುವುದು ಕಂಡುಬಂದಿದೆ ಮತ್ತು ಹಲವು ಬ್ಯಾಂಕುಗಳು ಸ್ವ-ಸಹಾಯ ಗುಂಪುಗಳಿಗೆ ಹಣಕಾಸಿನ ಸಹಾಯವನ್ನು ಮಾಡಿದೆ.[೯] ಅದರಂತೆ ೨೦೧೬-೧೭ರ ಅಂಕಿ ಅಂಶಗಳ ಪ್ರಕಾರ, ಭಾರತದಲ್ಲಿ ೮೫,೭೭ಲಕ್ಷ ಮಹಿಳಾ ಸ್ವ-ಸಹಾಯ ಗುಂಪುಗಳಿವೆ. ಅದರಲ್ಲಿ ೧೦೦ಮಿಲಿಯನ್ ಮಹಿಳೆಯರಿದ್ದು, ೧೬೧೧೪.೨೩ಕೋಟಿ ರೂ.ಗಳನ್ನು ಉಳಿತಾಯವನ್ನು ಮಾಡಿದ್ದಾರೆ. ಆದರೆ ಸ್ವ-ಸಹಾಯ ಗುಂಪುಗಳ ತ್ವರಿತ ಬೆಳವಣಿಗೆಯ ನಂತರವೂ ಭಾರತದಲ್ಲಿ ಇದರ ಸಂಪೂರ್ಣ ಉಪಯೋಗವನ್ನು ಮಾಡಿಕೊಳ್ಳುವುದು ಕಂಡುಬರುತ್ತಿಲ್ಲ. ಇದಕ್ಕೆ ಕಾರಣ ಶಿಸ್ತುಬದ್ದವಾದ ಅಧ್ಯಯನದ ಕೊರತೆ ಹಾಗೂ ಕ್ರಮಬದ್ಧವಾದ ಜ್ಞಾನದ ಕೊರತೆ. ಸ್ವ-ಸಹಾಯ ಗುಂಪುಗಳ ಸದಸ್ಯರಿಗೆ ಇದರಿಂದಾಗುವ ಅನುಕೂಲಗಳ ಬಗ್ಗೆ ಅಲ್ಪಜ್ಞಾನ ಹಾಗೂ ಇದರಿಂದ ಸಾಮಾಜಿಕ ಪರಿಣಾಮಗಳ ಬಗ್ಗೆ ತಿಳುವಳಿಯಿಲ್ಲದಿರುವುದು.[೧೦]

೪.೩. ಕರ್ನಾಟಕದಲ್ಲಿ ಸ್ವ-ಸಹಾಯ ಗುಂಪುಗಳ ಹಿನ್ನೆಲೆ

ಕರ್ನಾಟಕದಲ್ಲಿ ಗ್ರಾಮೀಣಾಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಸ್ವಯಂ ಸಂಸ್ಥೆಯಾದ ಮೈರಾಡ ಎಂಬ ಸಂಸ್ಥೆಯು ಅನೇಕ ಸಹಕಾರಿ ಸಂಸ್ಥೆಗಳನ್ನು ೧೯೮೪ ಮತ್ತು ೧೯೮೫ರಲ್ಲಿ ಪ್ರಾಯೋಜಿಸಿದ್ದರಿಂದ ಸದಸ್ಯರಿಗೆ ಸಾಲ ನಿರ್ವಹಣೆಯನ್ನು ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡು ಸಾಲ ನಿರ್ವಹಣಾ ಗುಂಪುಗಳನ್ನು ಆರಂಭಿಸಿದ್ದೇ ಸ್ವ-ಸಹಾಯ ಗುಂಪುಗಳ ಹುಟ್ಟಿಗೆ ಕಾರಣವಾಯಿತು.[೧೧]

ಗುಂಪಿನ ಪ್ರತಿಯೊಬ್ಬ ಸದಸ್ಯನೂ ಉಳಿತಾಯ ಮಾಡಬೇಕೆಂಬ ಪರಿಭಾವನೆಯೊಂದಿಗೆ ನಿಯಮಿತ ಸಭೆಗಳನ್ನು ನಡೆಸುವ ವ್ಯವಸ್ಥೆ, ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪುಸ್ತಕ ಇಡುವಿಕೆ ಹಾಗೂ ಸಂಘಟಿತವಾಗಿ ತೀರ್ಮಾನ ತೆಗೆದುಕೊಳ್ಳುವ ಕ್ರಮಗಳು ಕ್ರಮೇಣ ರೂಪಗೊಂಡವು. ಪ್ರಹಾರ್‍ಝುಂಡಿ ಮತ್ತು ಸಾಯಿ (೨೦೦೦) ಪ್ರಯೋಗಾಧಾರದ ಅಧ್ಯಯನವೊಂದು ೧೯೯೨ರಲ್ಲಿ ಎಸ್‌ಹೆಚ್‌ಜಿ-ಬ್ಯಾಂಕ್ ಸಂಪರ್ಕ

ಕಾರ್ಯಕ್ರಮವನ್ನು ಸಾಮಾನ್ಯ ಸಾಲ ಚಟುವಟಿಕೆಯನ್ನಾಗಿ ಅಧಿಕೃತಗೊಳಿಸಲು ನಬಾರ್ಡ್‌ಗೆ ಅಗತ್ಯವಾದ ಆತ್ಮವಿಶ್ವಾಸವನ್ನು ನೀಡಿತು. ರಾಷ್ಟ್ರಾದ್ಯಂತ ಒಂದೇ ಸಮನಾಗಿ ಇಲ್ಲದಿದ್ದರೂ, ವ್ಯಾಪಕವಾಗಿ ಹರಡಿದ ಸದರಿ ಕಾರ್ಯಕ್ರಮವು ೨೦೦೨ರಷ್ಟೋತ್ತಿಗೆ ವಿಶ್ವದಲ್ಲೇ ಬೃಹತ್ತಾದ ಸಣ್ಣ ಹಣಕಾಸು ಕಾರ್ಯಕ್ರಮವಾಗಿ ರೂಪಗೊಂಡಿತು.[೧೨] NGOಗಳ ನಾಯಕತ್ವದಲ್ಲಿ ೧೯೮೦ರ ದಶಕದ ಮಧ್ಯಭಾಗದಲ್ಲಿ ಆರಂಭಗೊಂಡ ಎಸ್‌ಹೆಚ್‌ಜಿಗಳ ಚರಿತ್ರೆಯು ೧೯೮೦ರ ದಶಕದ ಕೊನೆಯ ಹೊತ್ತಿಗೆ ನಬಾರ್ಡ್‌ನ ನಿರ್ವಹಣೆಗೆ ಒಳಪಟ್ಟಿತು. ಎಸ್‌ಹೆಚ್.ಜಿ ಬ್ಯಾಂಕು ಸಂಪರ್ಕ ಕಾರ್ಯಕ್ರಮವು ೧೯೯೧-೯೨ರಲ್ಲಿ ಆರಂಭಗೊಂಡ ನಂತರ ರಾಷ್ಟ್ರದಲ್ಲಿ ಎಸ್‌ಹೆಚ್‌ಜಿಗಳ ಸಾಲ ನೀಡುವ ಪ್ರಥಮ ಕಾರ್ಯ ಕರ್ನಾಟಕದ ಕೋಲಾರ ಜಿಲ್ಲೆಯಲ್ಲಿ ಆರಂಭಗೊಂಡಿತು. ವೈಶ್ಯಬ್ಯಾಂಕಿನ ಬಂಗಾರಪೇಟೆ ಶಾಖೆಯು ಡಿಸೆಂಬರ್ ೯, ೧೯೯೧ರಲ್ಲಿ ಮುಡುಗುಲಿಯ ವೆಂಕಟೇಶ್ವರ ಮಹಿಳಾ ಸಂಘಕ್ಕೆ ಮತ್ತು ಕಾರ್ಪೋರೇಷನ್ ಬ್ಯಾಂಕಿನ ಆ್ಯಂಡರ್‌ಸನ್‌ಪೇಟೆ ಶಾಖೆಯು ಜನವರಿ ೩೦, ೧೯೯೨ರಂದು ಬೋಡುಗುರುಕಿಯ ಸರಸ್ವತಿ ಮಹಿಳಾ ಸಂಘಕ್ಕೆ ಸಾಲ ನೀಡಿದವು. ಎನ್‌ಜಿಓಗಳಿಗೆ ಮತ್ತು ಬ್ಯಾಂಕು ಸಿಬ್ಬಂದಿಗೆ ತರಬೇತಿ ನೀಡುವ ಮೂಲಕ ಇದಕ್ಕೆ ಸಂಬಂಧಿಸಿದ ಸಂಸ್ಥೆಗಳ ನಿಯಮಿತ ಸಭೆ ನಡೆಸುವುದರ ಮೂಲಕ, ವರದಿಗಳ ವಿಶ್ಲೇಷಣೆ ಮೂಲಕ, ಅವುಗಳನ್ನು ಸದಸ್ಯರಿಗೆ ಅನುಕೂಲವಾಗುವಂತೆ ಮಾಡಲು ಅಗತ್ಯವಾದ ಕಾರ್ಯನುಷ್ಠಾನ ಕ್ರಮಗಳಲ್ಲಿ ಬದಲಾವಣೆಗಳನ್ನು ಗುರುತಿಸುವುದರ ಮೂಲಕ ಹಾಗೂ ಮೈಸೂರಿನ ಕಾವೇರಿ ಗ್ರಾಮೀಣ ಬ್ಯಾಂಕನ್ನು ಎಸ್‌ಹೆಚ್‌ಜಿಗಳನ್ನು ಪ್ರೋತ್ಸಾಹಿಸುವ ಸಂಸ್ಥೆಗಳನ್ನಾಗಿ ಘೋಷಿಸುವುದರ ಮೂಲಕ (೧೯೯೪-೯೫) ಸದರಿ ಕಾರ್ಯಕ್ರಮವನ್ನು ಕರ್ನಾಟಕದಲ್ಲಿ ನಬಾರ್ಡ್ ತೀವ್ರಗೊಳಿಸಿತು. ಐಎಫ್‌ಎಡಿಯು ೧೯೯೦ರ ದಶಕದಲ್ಲಿ ವಿಶ್ವಬ್ಯಾಂಕಿನ ಸಹಯೋಗದಲ್ಲಿ ಹಾಗೂ ಆರು ರಾಜ್ಯ (ಕರ್ನಾಟಕ, ಆಂಧ್ರಪ್ರದೇಶ, ಬಿಹಾರ, ಗುಜರಾತ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶ)ಗಳಲ್ಲಿ ಇಂತಹದ್ದೇ ಕಾರ್ಯಕ್ರಮವನ್ನು ಸ್ವಶಕ್ತಿ ಎಂಬ ಹೆಸರಿನಲ್ಲಿ ಆರಂಭಿಸಿತು. ಈ ಅನುಭವದಿಂದ ಉತ್ತೇಜಿತವಾದ ಕರ್ನಾಟಕ ಸರ್ಕಾರವು ದಿನಾಂಕ ೧೮.೧೦.೨೦೦೦ ರಂದು ಎಸ್‌ಹೆಚ್‌ಜಿ ಕಾರ್ಯತಂತ್ರ ಆಧರಿಸಿದ ಸ್ತ್ರೀಶಕ್ತಿ ಎಂಬ ಕಾರ್ಯಕ್ರಮವನ್ನು ರಾಜ್ಯಾದ್ಯಾಂತ ಆರಂಭಿಸಿತು.

ಇದರ ಜವಾಬ್ದಾರಿಯನ್ನು ಹೊತ್ತ ಸಂಸ್ಥೆಗಳ (ಸರ್ಕಾರ, ಎನ್‌ಜಿಓಗಳ ಮತ್ತು ಬ್ಯಾಂಕುಗಳು) ಕ್ರಿಯಾಶೀಲತೆ ಮೂಲಕವೂ ಎಸ್‌ಹೆಚ್‌ಜಿಗಳ ವ್ಯಾಪ್ತಿಯನ್ನು ಕರ್ನಾಟಕದಲ್ಲಿ ಗಣನೀಯವಾಗಿ ವಿಸ್ತರಿಸಲಾಯಿತು. ಇತ್ತೀಚಿನ ಅಂದಾಜಿನ ಪ್ರಕಾರ ೪೦.೨೯೫ ಅಂಗನವಾಡಿ ಕಾರ್ಯಕರ್ತೆಯರು (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ) ೫೬೧ ಎನ್‌ಜಿಓಗಳು. ೮ ಪ್ರದೇಶಿಕ ಗ್ರಾಮೀಣ ಬ್ಯಾಂಕುಗಳು. ೨೦ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ಮತ್ತು ೨ ವಾಣಿಜ್ಯ ಬ್ಯಾಂಕುಗಳು. ಸ್ವ-ಸಹಾಯ ಗುಂಪುಗಳನ್ನು ಅಭಿವೃದ್ಧಿಪಡಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದು.[illegible] ಈವರೆಗೂ ೧.೪೦ಲಕ್ಷ

ಗುಂಪುಗಳನ್ನು ರಾಜ್ಯದ ೩೦ ಜಿಲ್ಲೆಯ ೧೭೬ ತಾಲ್ಲೂಕುಗಳ ಗ್ರಾಮೀಣ ಪ್ರದೇಶದಲ್ಲಿ ರಚನೆಮಾಡಲಾಗಿದೆ.[೧೪] ಸ್ತ್ರೀಶಕ್ತಿ ಯೋಜನೆಯು ಮಹಿಳೆಯರ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ವಾವಲಂಬನೆ ಮತ್ತು ನಾಯಕತ್ವದ ಗುಣಗಳನ್ನು ಮೈಗೂಡಿಸಿಕೊಳ್ಳುವಲ್ಲಿ ಯಾವ ರೀತಿ ಪ್ರಭಾವ ಬೀರುತ್ತದೆ ಎಂಬುದನ್ನು ತಿಳಿಯಬಹುದಾಗಿದೆ.

೪.೪. ಬಳ್ಳಾರಿ ಜಿಲ್ಲೆಯಲ್ಲಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪುಗಳು

ಬಳ್ಳಾರಿ ಜಿಲ್ಲೆಯ ಗ್ರಾಮೀಣ ಪ್ರದೇಶದ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸಬಲೀಕರಣಕ್ಕಾಗಿ ಸ್ತ್ರೀಶಕ್ತಿ ಯೋಜನೆಯನ್ನು ೨೦೦೦-೨೦೦೧ನೇ ಸಾಲಿನಿಂದ ಜಾರಿಗೊಳಿಸಲಾಗಿದೆ. ಜಿಲ್ಲೆಯಲ್ಲಿ ಯೋಜನೆ ಪ್ರಾರಂಭದಿಂದ ಇಲ್ಲಿಯವರೆಗೆ ಒಟ್ಟು ೫೨೨೦ ಗುಂಪುಗಳನ್ನು ರಚಿಸಲಾಗಿದೆ. ಈ ಗುಂಪುಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ೯೮೨ ಗುಂಪುಗಳು, ಪರಿಶಿಷ್ಟ ಪಂಗಡಕ್ಕೆ ಸೇರಿದ ೭೬೦ ಗುಂಪುಗಳು, ಅಲ್ಪ ಸಂಖ್ಯಾತ ೪೨೫ ಗುಂಪುಗಳು ಹಾಗೂ ಇತರೆ ಸದಸ್ಯರನ್ನು ಹೊಂದಿದ ೩೦೫೩ ಗುಂಪುಗಳು ಕಾರ್ಯನಿರ್ವಹಿಸುತ್ತಿದ್ದು, ಈ ಗುಂಪುಗಳಲ್ಲಿ ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವ ಗ್ರಾಮೀಣ ಮಹಿಳೆಯರು ಹಾಗೂ ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರು, ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು, ವಿಧವೆಯರು, ಏಡ್ಸ್ ಪೀಡಿತ, ನಿರ್ಗತಿಕ, ಅಂಗವಿಕಲ ಮಹಿಳೆಯರು, ದೇವದಾಸಿಯರು, ಮಂಗಳಮುಖಿಯರು, ಮಧ್ಯಪಾನ ಮಾಡುವ ಅಥವಾ ಮಾಧಕ ವಸ್ತುಗಳನ್ನು ಸೇವಿಸುವ ವ್ಯಕ್ತಿ ಇರುವ ಕುಟುಂಬದ ಮಹಿಳೆಯರು ಸೇರಿದಂತೆ ಒಟ್ಟಾರೆ ೮೨೩೯೭ ಸದಸ್ಯರನ್ನು ಒಳಗೊಂಡಿದೆ.[೧೫]

ಸರ್ಕಾರ ಪ್ರಾಯೋಜಿತ ಸ್ವ-ಸಹಾಯ ಗುಂಪುಗಳು ಸ್ತ್ರೀಶಕ್ತಿ ಸಂಘಗಳೆಂದು ಹೆಸರಾಗಿವೆ. ಮತ್ತು ಅವುಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಬೆಂಬಲಿಸಲ್ಪಟ್ಟು ಆ ಇಲಾಖೆಯಿಂದ ಮೇಲ್ವಿಚಾರಣೆ ಒಳಪಡುತ್ತವೆ. BAIF (Bharatiya Agro Industries Foundation) SKDRDP (Shri Kshetra Dharmasthala Rural Development Project) ಗಳಂತಹ ಮತ್ತು ಇತರ ಸರ್ಕಾರೇತರ ಸಂಸ್ಥೆಗಳು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ.[೧೬]

ಯೋಜನೆ ಪ್ರಾರಂಭದಿಂದ ಇಲ್ಲಿಯವರೆಗೆ ಗುಂಪುಗಳ ಬಲವರ್ಧನೆಗಾಗಿ ೫೨೨೦ ಗುಂಪುಗಳಿಗೆ ತಲಾ ಗುಂಪಿಗೆ ರೂ. ೫೦೦೦ಗಳಂತೆ ಒಟ್ಟು ರೂ. ೨ ಕೋಟಿ ೬೧ ಲಕ್ಷಗಳ ಸುತ್ತು ನಿಧಿ ವಿತರಣೆ ಮಾಡಲಾಗಿರುತ್ತದೆ. ಈ ಗುಂಪುಗಳಿಗೆ ೯ ಪುಸ್ತಕಗಳು ಹಾಗೂ ಜಿಂಕ್ ಟ್ರಂಕ್‌ಗಳನ್ನು ಒಳಗೊಂಡ ಅವಶ್ಯಕ ಕಿಟ್ ಸಾಮಗ್ರಿಗಳನ್ನು ವಿತರಿಸಲಾಗಿರುತ್ತದೆ. ಇಲ್ಲಿಯವರೆಗೆ ಅಧಿಕ ಉಳಿತಾಯ ಮಾಡಿದ ೪೧೨ ಗುಂಪುಗಳಲ್ಲಿ ರೂ. ೭೫೦೦೦ರಿಂದ ರೂ. ೧೦೦೦೦೦ದ ವರೆಗೆ ಉಳಿತಾಯ ಮಾಡಿದ ೧೯೭ ಗುಂಪುಗಳಿಗೆ ರೂ. ೧೫೦೦೦ರಂತೆ ಹಾಗೂ ರೂ. ೧೦೦೦೦೦ ಲಕ್ಷಕ್ಕೂ ಮೆಲ್ಪಟ್ಟು ಉಳಿತಾಯ ಮಾಡಿದ

೨೩೫ ಗುಂಪುಗಳಿಗೆ ರೂ. ೨೦೦೦೦ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ. ಅಲ್ಲದೇ ಬ್ಯಾಂಕುಗಳಿಂದ ಪಡೆದ ಸಾಲಕ್ಕೆ ೩೯೪ ಗಂಪುಗಳಿಗೆ ಶೇ ೬ ರಷ್ಟು ಬಡ್ಡಿ ಸಹಾಯಧನ ಒದಗಿಸಲಾಗಿದೆ ಈ ಗುಂಪುಗಳಿಗೆ ಪ್ರಾರಂಭದಿಂದ ಪುಸ್ತಕ ನಿರ್ವಹಣೆ, ಹಣಕಾಸು ನಿರ್ವಹಣೆ, ಲೆಕ್ಕ ಪತ್ರ ನಿರ್ವಹಣೆ, ಸಾಮಾಜಿಕ ವಿಷಯಗಳ ನಿರ್ವಹಣೆ ತರಬೇತಿಯನ್ನು ನೀಡಲಾಗಿರುತ್ತದೆ. ಸದರಿ ಗುಂಪುಗಳಲ್ಲಿ ಇಲ್ಲಿಯವರೆಗೆ ೫೦೯೩ ಗುಂಪುಗಳು ವಿವಿಧ ಬ್ಯಾಂಕುಗಳಿಂದ ರೂ. ೬೮.೮ ಕೋಟಿ ಸಾಲ ಸೌಲಭ್ಯ ಪಡೆದಿದ್ದು, ಈ ಗುಂಪುಗಳಲ್ಲಿ ೧೪೧ ಗುಂಪುಗಳು ಕೃಷಿಯೇತರ ಚಟುವಟಿಕೆಗಳಾದ ಸೋಪಿನ ಪುಡಿ, ಶಾಂಪೂ, ಫಿನಾಯಿಲ್, ಮೇಣದ ಬತ್ತಿ, ಪೊರಕೆ, ಬ್ಯಾಸ್ಕೇಟ್, ಅಗರ ಬತ್ತಿ, ಬಿದಿರಿನ ಉತ್ಪನ್ನ (ಬುಟ್ಟಿ,) ಬೊಂಬೆ, ಕೃತಕ ಹೂಗಳ ತಯಾರಿಕೆಯಲ್ಲಿ ತೊಡಗಿದ್ದು, ೩೫೫ ಗುಂಪುಗಳು ಕೃಷಿ ಆಧಾರಿತ ಚಟುವಟಿಕೆಗಳಾದ ವ್ಯವಸಾಯ (ಕೃಷಿ) ಹಸು ಸಾಕಾಣಿಕೆ, ಎಮ್ಮೆ ಸಾಕಾಣಿಕೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ, ತೋಟಗಾರಿಕೆ, ಎರೆಹುಳು ಗೊಬ್ಬರ ತಯಾರಿಕೆ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಅಲ್ಲದೇ ಉಳಿದ ಗುಂಪುಗಳಲ್ಲಿ ವೈಯಕ್ತಿಕ ೨೭೬೬ ಸದಸ್ಯರು ಕೃಷಿಯೇತರ ಹಾಗೂ ಕೃಷಿ ಆಧಾರಿತ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಜಿಲ್ಲೆಯಲ್ಲಿ ೨೦೦೭-೦೮ನೇ ಸಾಲಿನಿಂದ ೨೦೧೩-೧೪ನೇ ಸಾಲಿನವರೆಗೆ ಸ್ತ್ರೀಶಕ್ತಿ ಭವನ, ಮಾರುಕಟ್ಟೆ ಸಂಕೀರ್ಣ ಯೋಜನೆಯಡಿ ಬಿಡುಗಡೆಯಾದ ಅನುದಾನದಲ್ಲಿ ಭವನಗಳನ್ನು ನಿರ್ಮಿಸಲಾಗಿದ್ದು, ತಾಲೂಕುಗಳಲ್ಲಿ ರಚಿಸಲ್ಪಟ್ಟ ಬ್ಲಾಕ್ ಸೊಸೈಟಿ ಒಕ್ಕೂಟಗಳ ಕಾರ್ಯಚಟುವಟಿಕೆಗಳಿಗೆ ಅವಕಾಶ ಮಾಡಿಕೊಡುವ ಜೊತೆಗೆ ಸ್ತ್ರೀಶಕ್ತಿ ಗುಂಪುಗಳು ತಯಾರಿಸಿದ ವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯ ಕಲ್ಪಿಸಲಾಗಿದೆ. ೨೦೧೩-೧೪ನೇ ಸಾಲಿನ ಸಂಚಾರಿ ವಾಹನ ಮಾರುಕಟ್ಟೆ ಸೌಲಭ್ಯ ಯೋಜನೆಯಡಿ ೪೯ ಗುಂಪುಗಳು ತಯಾರಿಸಿದ ರೇಷ್ಮೆಸೀರೆ, ಕಂಬಳಿ, ಖಾದಿ ಶರ್ಟ್, ಮಣ್ಣಿನ ಮಡಕೆ, ಬಿದಿರಿನ ಬುಟ್ಟಿ, ಉಪ್ಪಿನಕಾಯಿ, ಖಾರಧಪುಡಿ, ಹೂವಿನ ಕುಮುಟ, ಜೋಕಾಲಿ, ಫ್ಯಾಷನ್ ಬಳೆ, ಸೇರಿದಂತೆ ಉತ್ಪನ್ನಗಳನ್ನು ಮಾರಾಟ ಮಾಡಲಾಗಿರುತ್ತದೆ. ಈ ಗುಂಪುಗಳು ಆರ್ಥಿಕವಾಗಿ ಸದೃಢವಾಗಿರುವ ಜೊತೆಗೆ ಸಾಮಾಜಿಕ ಚಟುವಟಿಕೆಗಳಾದ ಬಾಲ್ಯವಿವಾಹ, ವರದಕ್ಷಿಣೆ ನಿಷೇಧ, ಗ್ರಾಮ ಸ್ವಚ್ಛತಾ ಕಾರ್ಯಕ್ರಮ, ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸುವ ಕಾರ್ಯಕ್ರಮ, ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆ ಕಾರ್ಯಕ್ರಮ, ಕೌಟುಂಬಿಕ ದೌರ್ಜನ್ಯದಲ್ಲಿ ಸಲಹೆ ನೀಡುವ ಕಾರ್ಯಕ್ರಮವನ್ನು ಸಕ್ರಿಯವಾಗಿ ಹಮ್ಮಿಕೊಂಡಿರುತ್ತಾರೆ.[೧೨]

ಸ್ವ-ಸಹಾಯ ಗುಂಪುಗಳು ಜಿಲ್ಲೆಯಲ್ಲಿ ಸಕ್ರೀಯವಾಗಿ ಕಾರ್ಯನಿರ್ವಹಿಸುತ್ತಿವೆ. ಎಲ್ಲಾ ವರ್ಗದ ಮಹಿಳೆಯರು ಸ್ವ-ಸಹಾಯ ಗುಂಪುಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಇದಕ್ಕೆ ಎಲ್ಲಾ ವರ್ಗದ ಮಹಿಳೆಯರು ಎಲ್ಲಾ ತಾಲೂಕುಗಳಲ್ಲಿ ಸದಸ್ಯತ್ವ ಹೊಂದಿರುವ ಸತ್ಯವು ಸಾಕ್ಷಿಯಾಗಿದೆ.

ಕೊನೆಯ ಟಿಪ್ಪಣಿಗಳು

೧. www new. nic.in pdf P.no 3

೨. ಅದೇ, ಪುಟ ಸಂ. ೫

೩. ಅದೇ, ಪುಟ ಸಂ. ೨

೪. ಅದೇ, ಪುಟ ಸಂ. ೩

೫. ಅದೇ ಪುಟ ಸಂ. ೧೭

೬. https://www.Ifad.org the role played by IFAD by Aloysius P.Fernandez p.no. 8

೭. ಅದೇ ಪುಟ ಸಂ. ೯

೮. ಅದೇ ಪುಟ ಸಂ. ೧೧

೯. https://en.wikipedia.org/wiki/self help groups

೧೦. ಪೂರ್ವೋಕ್ತ www new. nic.in P.no 3

೧೧. ಗೀತಾ ಸಿ. "ಮಹಿಳಾ ಆರ್ಥಿಕ ಸಬಲೀಕರಣದಲ್ಲಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘಗಳ ಪಾತ್ರ" ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ೨೦೧೫, ಪು.ಸ.ಂ ೧೨೭

೧೨. ಕರ್ನಾಟಕ ಮಾನವ ಅಭಿವೃದ್ಧಿ ವರದಿ ೨೦೦೫, ಪು.ಸಂ. ೩೧೬

೧೩. ಅದೇ ಪುಟ ಸಂ. ೩೧೭

೧೪. ಸ್ತ್ರೀಶಕ್ತಿ ಯೋಜನೆ (ಕೈಪಿಡಿ), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಜೂನ್, ೨೦೧೦, ಪು.ಸ.ಂ ೧

೧೫. ಬಳ್ಳಾರಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ ೨೦೧೪, ಪು.ಸ.ಂ ೨೩೭

೧೬. ಅದೇ ಪುಟ ಸಂ. ೧೬೧

೧೭. ಅದೇ ಪುಟ ಸಂ. ೨೩೭

ಅಧ್ಯಾಯ : ಐದು

ಸ್ತ್ರೀಶಕ್ತಿ ಗುಂಪುಗಳ ಪರಿಕಲ್ಪನೆ

ಅಧ್ಯಾಯ : ಐದು

ಸ್ತ್ರೀಶಕ್ತಿ ಗುಂಪುಗಳ ಪರಿಕಲ್ಪನೆ

ಪರಿಶಿಷ್ಟ ಮಹಿಳೆಯರ ಆರ್ಥಿಕ ಸ್ಥಿತಿಗತಿಯನ್ನು ಸ್ತ್ರೀಶಕ್ತಿ ಗುಂಪುಗಳು ಸುಧಾರಿಸುವಲ್ಲಿ ಅವು ಹಮ್ಮಿಕೊಂಡಿರುವ ಸಮಸ್ಯೆ ಮತ್ತು ಸವಾಲುಗಳನ್ನು ಸಮಸ್ಯೀಕರಿಸಿಕೊಂಡು ತಳಸ್ಪರ್ಶೀಯ ಅಧ್ಯಯನವನ್ನು ಕೈಗೊಳ್ಳುವ ನಿಟ್ಟಿನಲ್ಲಿ ಪ್ರಸ್ತುತ ಮಹಾಪ್ರಬಂಧದಲ್ಲಿ ಸ್ತ್ರೀಶಕ್ತಿ ಗುಂಪುಗಳ ಪರಿಕಲ್ಪನೆಯನ್ನು ನಿರೂಪಿಸಲಾಗಿದೆ.

೫.೧. ಸೂಕ್ಷ್ಮ ಹಣಕಾಸಿನ ಪರಿಕಲ್ಪನೆ

ಸೂಕ್ಷ್ಮಹಣಕಾಸು ಮತ್ತು ಸಮಗ್ರ ಹಣಕಾಸು ನಡುವೆ ಇರುವ ವ್ಯತ್ಯಾಸವನ್ನು ಈ ಕೆಳಗಿನಂತೆ ನಿರೂಪಿಸಲಾಗಿದೆ. ಸೂಕ್ಷ್ಮಹಣಕಾಸು ಮತ್ತು ಸಮಗ್ರ ಹಣಕಾಸಿನ ಪರಿಕಲ್ಪನೆಯು ಯಾವಾಗಲೂ ಗೊಂದಲವನ್ನು ಸೃಷ್ಟಿಮಾಡುತ್ತದೆ. ಸೂಕ್ಷ್ಮ ಹಣಕಾಸು ವ್ಯಕ್ತಿಯಾಧಾರವಾಗಿಟ್ಟುಕೊಂಡು, ಒಂದು ಸಮುದಾಯ ಆಧಾರಿತ ವಿಧಾನವಾಗಿದೆ. ಹಣಕಾಸಿನ ಕೊರತೆ ಇರುವ ಬಡವರಿಗೆ ಹಣಕಾಸಿನ ಸೇವೆ ಮತ್ತು ಕಡಿಮೆ ಆದಾಯ ಇರುವ ಜನರಿಗೆ ಆರ್ಥಿಕ ಸೇವೆಗಳನ್ನು ಒದಗಿಸುತ್ತದೆ. ಹಣಕಾಸಿನ ಪ್ರಮುಖ ವಾಹಿನಿಗಳಿಂದ ಹಣ ಪಡೆಯುವಲ್ಲಿ ಬಡಜನತೆ ತೊಂದರೆಗೊಳಗಾಗುತ್ತಿರುವರೋ ಅಂತಹ ಬಡಜನರಿಗೆ ಸೂಕ್ಷ್ಮ ಹಣಕಾಸಿನ ಸೇವೆಯ ಮೂಲಕ ಸರಳವಾಗಿ ಕಿರುಸಾಲ, ಕಿರುಉಳಿತಾಯ ಹಾಗೂ ಕಿರುವಿಮೆ ದೊರಕುತ್ತಿದೆ. ಸೂಕ್ಷ್ಮ ಹಣಕಾಸಿನ ಪ್ರಮುಖ ಉದ್ದೇಶವು ಸಮಯಕ್ಕೆ ಸರಿಯಾಗಿ ಹಣವನ್ನು (ನಿಧಿ) ತಲುಪಿಸುವುದರ ಮುಖಾಂತರ ಅವರ ಸಾಮರ್ಥ್ಯವನ್ನು ಹೆಚ್ಚಿಸುವುದಲ್ಲದೆ, ಜೀವನ ಮಟ್ಟವನ್ನು ಸುಧಾರಿಸಿ ಸ್ವಾವಲಂಭಿಯನ್ನಾಗಿ ಮಾಡುವುದಾಗಿದೆ. ಇದಕ್ಕೆ ಉದಾಹರಣೆಯಾಗಿ ಒಬ್ಬ ಕೊಳಚೆ ಪ್ರದೇಶದ ಅವಿಧ್ಯಾವಂತ ಮಾರಾಟಗಾರನಿಗೆ ಕಚ್ಚಾವಸ್ತುಗಳ ಖರೀದಿಗಾಗಿ ೧೦೦ ರೂಪಾಯಿ ಸಾಲವನ್ನು ನೀಡಿ ಪೇಪರ್ ಲಕೋಟೆಗಳನ್ನು ತಯಾರಿಸಿ, ಮಾರಾಟ ಮಾಡಿ ಜೀವನ ಸುಧಾರಿಸುವುದಾಗಿದೆ.

ಸಮಗ್ರ ಹಣಕಾಸಿನ ಪರಿಕಲ್ಪನೆಯು ಸಂಪೂರ್ಣ ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದ ಆರ್ಥಿಕ ಸ್ಥಿತಿಗತಿಗಳನ್ನು ಒಳಗೊಂಡಿರುತ್ತದೆ. ಇದು ಯೋಜನೆಗಳ ರಚನೆ, ಧನ ಸಹಾಯದ ಯೋಜನೆ ಅಥವಾ ನಿಧಿಗಳ ಸಹಾಯ ಮತ್ತು ಬಹುವರ್ಷ ಅಭಿವೃದ್ಧಿ ಯೋಜನೆ (Multi Year development plans)ಗಳನ್ನು ಒಳಗೊಂಡು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗುರಿಯನ್ನೊಳಗೊಂಡಿದೆ. ಸಮಗ್ರ ಹಣಕಾಸಿನ ಪರಿಕಲ್ಪನೆಯು ಒಟ್ಟಾರೆ ಆರ್ಥಿಕ ಅಭಿವೃದ್ಧಿಯ ವಿಸ್ತಾರತೆಯನ್ನೊಳಗೊಂಡಿದೆ. ಇದಕ್ಕೆ ಉದಾಹರಣೆಯಾಗೆ: ದಶಲಕ್ಷ ಡಾಲರನ ಯೋಜನೆಯಾಗಿ ಸರ್ಕಾರವು ಒಂದು ಹೈಡ್ರೋಪವರ್ ಡ್ಯಾಮನ್ನು ಕಟ್ಟಿ ಸಹಸ್ರಾರು ಜನರನ್ನು ಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದು.[1]

ಭಾರತವು ಇಂದು ಅತೀ ವೇಗವಾಗಿ ಕಿರುಹಣಕಾಸಿನ ಮಾರುಕಟ್ಟೆಯಾಗಿ ಬೆಳೆಯುತ್ತಿದೆ.[೨] ಪ್ರಾಥಮಿಕ ಸಹಕಾರಿ ಸಂಘಗಳ ಮುಖಾಂತರ ಬಡ ರೈತರಿಗೆ ಸಾಲವನ್ನು ತಲುಪಿಸುವ ಸಹಕಾರಿ ಸಂಘಗಳ ವಿಧಿಯನ್ವಯದ ನಂತರ ೧೯೦೪ರಲ್ಲಿ ಕಿರುಹಣಕಾಸಿನ ಪರಿಕಲ್ಪನೆಯ ಆರಂಭವಾಯಿತು. ರೈತರ ಹೂಡಿಕೆಗಳ ಅನುಕೂಲಕ್ಕಾಗಿ ೧೯೨೮ರಲ್ಲಿ ದೀರ್ಘಾವಧಿಯ ಪತ್ತಿನ ಸಹಕಾರಿ ಸಂಸ್ಥೆಗಳು ಆರಂಭವಾದವು. ೧೯೨೫ರಲ್ಲಿ ಸಿಂಡಿಕೇಟ್ ಬ್ಯಾಂಕು ಆರಂಭವಾಯಿತು. ದಿನದ ಹಾಗೂ ವಾರದ ಉಳಿತಾಯ ಖಾತೆಯನ್ನು ಆರಂಭಿಸಿ ಕಿರು-ಠೇವಣಿಗಳಿಗೆ ಆದ್ಯತೆ ನೀಡಿತು ಹಾಗೂ ಕಿರು ಸಾಲವನ್ನು ಗ್ರಾಹಕರಿಗೆ ತಲುಪಿಸಿತು. ೧೯೬೯ರಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣವಾದ ನಂತರ ಕಿರುಸಾಲದ ಪರಿಕಲ್ಪನೆಗೆ ಮರು ಆದ್ಯತೆಯನ್ನು ನೀಡಲಾಯಿತು. ಆದರೂ ಸಹ ಗ್ರಾಮೀಣ ಪ್ರದೇಶಗಳಲ್ಲಿ ಹಣದ ಲೇವಾದೇವಿಗಾರರೂ ಹಾಗು ವ್ಯಾಪಾರಿಗಳು ಅಧಿಕ ಬಡ್ಡಿದರದಲ್ಲಿ ಸಾಲವನ್ನು ರೈತರಿಗೆ ಅನುಭೋಗಕ್ಕಾಗಿ ನೀಡುತ್ತಿದ್ದರು. ಆಧ್ಯತಾ ವಲಯಗಳ ಪ್ರಕಾರ, ಸೂಕ್ಷ್ಮ ಹಣಕಾಸಿನ ಪೂರೈಕೆಯನ್ನು ಸಾಲಗಳ ಹೂಡಿಕೆಗಾಗಿ ನೀಡುತ್ತಿದ್ದರು. ಇದರಲ್ಲಿ ಉತ್ಪಾದನಾ ಸಾಲ ಹಾಗೂ ಅನುಭೋಗ ಸಾಲವು ಸೇರಿರುತ್ತದೆ.[೩]

ಸೂಕ್ಷ್ಮಸಾಲ ವ್ಯವಸ್ಥೆಯು ಬಡತನವನ್ನು ಶಮನಗೊಳಿಸುವ ಒಂದು ಪ್ರಮುಖ ಮಾರ್ಗದ ಯೋಜನೆಯಾಗಿದೆ. ಸೂಕ್ಷ್ಮ ಸಾಲದ ವ್ಯವಸ್ಥೆಯು ಬಡಜನತೆಗೆ ಬೆಳವಣಿಗೆಯ ಯೋಜನೆಗಳತ್ತ ಮುನ್ನುಗ್ಗಲು ಒಂದು ಅವಕಾಶವನ್ನು ನೀಡುತ್ತದೆ. ಅವರ ಯಶಸ್ಸು ಹಾಗೂ ಸೋಲಿಗೆ ಅವರೇ ಕಾರಣ. ಸೂಕ್ಷ್ಮ ಸಾಲ ವ್ಯವಸ್ಥೆಯನ್ನು ಪುರಾತನ ಶೈಲಿ ಹಾಗೂ ನವಯುಗ ಶೈಲಿಯಿಂದ ಕಾಣಬಹುದು. ಪುರಾತನ ಶೈಲಿಯಲ್ಲಿ ಸಾಲವನ್ನು ಕೊಡುವುದು, ಉಳಿತಾಯವನ್ನು ಮಾಡುವುದು, ನಾವು ಬಾರ್ಟರ್ (ವಸ್ತು ವಿನಿಮಯ) ಪದ್ಧತಿಯು ಇರುವ ತನಕ ಈ ವ್ಯವಸ್ಥೆಯನ್ನು ಕಾಣಬಹುದು. ಈ ವಿನಿಮಯವು ತಮ್ಮ ಜನಾಂಗಗಳ ಮಧ್ಯೆಯೇ ನಡೆಯುತ್ತಿತ್ತು. ಇಲ್ಲಿ ತಮ್ಮದೇ ಆದ ಪದ್ಧತಿಗಳನ್ನು ಹಾಗೂ ಅನುಕೂಲತೆಗಳನ್ನು ಯಾವುದೇ ಹೊರ ವ್ಯವಸ್ಥೆಯ ಸಹಾಯವನ್ನು ತೆಗೆದುಕೊಳ್ಳದೇ ನಡೆಸಿಕೊಳ್ಳಲಾಗುತ್ತಿತ್ತು. ಇನ್ನೂ ನವಯುಗದ ಶೈಲಿಯಲ್ಲಿ ವಾಣಿಜ್ಯ ಬ್ಯಾಂಕಿನ ವ್ಯವಸ್ಥೆ, ಹಾಗೂ ಸಾಂಪ್ರದಾಯಿಕ ಹಣಕಾಸಿನ ಪದ್ಧತಿಯು ಪ್ರಾರಂಭವಾಯಿತು. ಇದರ ಪ್ರಮುಖ ಉದ್ದೇಶ ಬಡಜನತೆ, ಕಡಿಮೆ ಆದಾಯವಿರುವ ಮನೆಗಳಗೆ ಹಾಗೂ ಚಿಕ್ಕ ಉದ್ದಿಮೆಗಳಿಗೆ ಹಣಕಾಸಿನ ಸಹಾಯವನ್ನು ಒದಗಿಸುವುದು.[೪]

ಗ್ರಾಮೀಣಾಭಿವೃದ್ಧಿಯ ಸಮಗ್ರ ಯೋಜನೆಯ ಹಾಗೂ ಸ್ವರ್ಣಜಯಂತಿ ಗ್ರಾಮೀಣ ಸ್ವರೋಜ್‌ಗಾರ್ ಯೋಜನೆಯು ಪ್ರಮುಖ ಆಧ್ಯತೆಯನ್ನು ಉತ್ಪಾದನಾ ಸಾಲಗಳ ಮೇಲೆ ಮಾತ್ರ ನೀಡಿತು. ಆದರೆ ಇಲ್ಲಿ ಧನಸಹಾಯ ಹಾಗೂ ಕಡಿಮೆ ಬಡ್ಡಿದರದ ಸಾಲವು ಬಡಜನತೆಯನ್ನು ತಲುಪಲಿಲ್ಲ ಮತ್ತು ಇದರ ಉಪಯೋಗವನ್ನು ಗ್ರಾಮೀಣ ಪ್ರದೇಶದ ಸುಸ್ಥಿಯ (ಅನುಕೂಲಸ್ಥ) ವರ್ಗಗಳು ಬಳಕೆ ಮಾಡಿಕೊಂಡವು. ಇದರ ಮರು ಪಾವತಿಯಲ್ಲಿಯೂ ಕೊರತೆ ಕಂಡುಬಂದಿರುವುದು ಕಾಣಬಹುದು. ಕಾರಣ ಬ್ಯಾಂಕ್

ಸಿಬ್ಬಂದಿಗಳು ಸಮಯಕ್ಕೆ ಸರಿಯಾದ ರೀತಿಯಲ್ಲಿ ಸಾಲವನ್ನು ಸಂಗ್ರಹಿಸುವಲ್ಲಿ ಕೊರತೆ ಕಂಡುಬಂದಿದೆ. ೧೯೯೨ರಲ್ಲಿ ಸ್ವ-ಸಹಾಯ ಗುಂಪುಗಳಿಗೆ ನಬಾರ್ಡ್ ಯೋಜನೆಯ ಮುಖಾಂತರ ಬಡಜನತೆಗೆ ಸಾಲವು ಯಾವುದೇ ಜಾಮೀನುದಾರರ ಅವಶ್ಯಕತೆಯಿಲ್ಲದೇ ತಲುಪಿಸಲು ಆರಂಭಿಸಿತು. ಇಲ್ಲಿ ಶೇ.೧೦೦ರಷ್ಟು ಮರುಪಾವತಿಯ ಶಿಸ್ತನ್ನು ಅಳವಡಿಸಿ ಮತ್ತು ಸಾಲವನ್ನು ಗುಂಪುಗಳಿಗೆ ನೀಡುವುದಲ್ಲದೇ, ಆ ಗುಂಪುಗಳು ತಮ್ಮ ಉಳಿತಾಯವನ್ನು ಹೂಡಿಕೆಗಳಲ್ಲಿ ವಿನಿಯೋಗಿಸುವುದಲ್ಲದೇ ಇದರಿಂದ ಸಾಲ ಪಡೆಯುವವರಿಗೆ ಹಾಗೂ ಬ್ಯಾಂಕುಗಳಿಗೆ ವೆಚ್ಚವು ಕಡಿಮೆಯಾಗುತ್ತದೆ. ಆದರಿಂದ ಸೂಕ್ಷ್ಮ ಹಣಕಾಸು ಎಂದರೆ ಗ್ರಾಮೀಣ ಬಡಜನರ ಅವ್ಯಶಕತೆಗಳಿಗಾಗಿ ಸಾಲವನ್ನು ನೀಡುವ ಹೊಸ ಪರಿಕಲ್ಪನೆ ಹಾಗೂ ಇದನ್ನು ಸಾಂಪ್ರದಾಯಿಕ/ಅಸಂಪ್ರದಾಯಿಕ ವಿಧಾನಗಳಿಂದ ತಲುಪಿಸಲಾಗುತ್ತಿದೆ. ಇಂದು ಸ್ವ-ಸಹಾಯ ಗುಂಪು-ಬ್ಯಾಂಕು ಸಾಲದ ಜಂಟಿ ಆಯೋಜನೆಯ ಕಾರ್ಯಕ್ರಮವು ದಶಕ ಹಿಂದಿನ ಪರಿಕಲ್ಪನೆಯಾಗಿದ್ದು, ಇದರಿಂದ ಉಂಟಾದ ಹಲವಾರು ನಕರಾತ್ಮಕ ಅಂಶಗಳನ್ನು ವಿಶ್ಲೇಷಣೆ ಮಾಡುವ ಸಂದರ್ಭವಾಗಿದೆ. ಸೂಕ್ಷ್ಮ ಸಾಲವು ಆದ್ಯತೆಯ ವಲಯಗಳಿಂದ, ಸಮಗ್ರ ಗ್ರಾಮೀಣ ಅಭಿವೃದ್ಧಿಯ ಯೋಜನೆಯಿಂದ ಸೂಕ್ಷ್ಮಹಣಕಾಸಿನ ಯೋಜನೆಯ ಮುಖಾಂತರ ಇಂದು ಸಾಲವು ಬ್ಯಾಂಕುಗಳಿಂದ ಗ್ರಾಮೀಣ ಬಡಜನರಿಗೆ ತಲುಪುತ್ತಿದೆ. ಇಂದು ಈ ಸೂಕ್ಷ್ಮ ಹಣಕಾಸಿನ ಚಿತ್ರಣವು ಗ್ರಾಮೀಣ ಜನತೆಯ ಅಭಿವೃದ್ಧಿಗಾಗಿ ವಿನಿಯೋಗವಾಗಬೇಕಾಗಿದೆ. ಇದರ ಆರಂಭವು ೧೯೮೦ರ ಅಂತ್ಯದ ವೇಳೆ ಆರಂಭವಾಗಿ ೧೯೯೨ರಲ್ಲಿ ಸ್ವ-ಸಹಾಯ ಗುಂಪು-ಬ್ಯಾಂಕಿನ ಜಂಟಿ ಚಳುವಳಿಯ ಬಿರುಸಿನ ಪಥ ಪಡೆದಿದ್ದು, ವಿಶ್ವದಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿ ಸೂಕ್ಷ್ಮ ಸಾಲವನ್ನು ತಲುಪಿಸುವ ಯೋಜನೆಯಾಗಿದೆ.[೫]

ಸೂಕ್ಷ್ಮ ಸಾಲದ ವ್ಯವಸ್ಥೆಯು ಎರಡು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಒಂದು, ಬಡತನವನ್ನು ನಿರ್ಮೂಲನೆಗೊಳಿಸುವುದು ಹಾಗೂ ಎರಡು, ಈ ವ್ಯವಸ್ಥೆಯ ಸಂರಕ್ಷಣೆಗೆ ಬದ್ಧನಾಗಿರುವುದು. ಈ ಎರಡೂ ಅಂಶಗಳು ಒಗ್ಗೂಡಿದಾಗ ಮಾತ್ರ ಸಂಸ್ಥೆಯು ತನ್ನ ಕಾರ್ಯವನ್ನು ಸಮರ್ಥವಾಗಿ ನಿಭಾಯಿಸುತ್ತದೆ. ಸೂಕ್ಷ್ಮ ಸಾಲ ವ್ಯವಸ್ಥೆಯು ಹಳೆಯ ನಂಬಿಕೆಗಳನ್ನು ಅಂದರೆ ಬಡಜನರಿಗೆ ಬ್ಯಾಂಕು ವ್ಯವಸ್ಥೆಯು ತಲುಪುವುದಿಲ್ಲವೆಂಬುದನ್ನು ಹೋಗಲಾಡಿಸಿದೆ. ವಿಶ್ವ ಸಂಸ್ಥೆಯು (ಯುನೈಟೆಡ್ ನೇಷನ್ಸ್) ೨೦೦೫ನೇ ವರ್ಷವನ್ನು ಸೂಕ್ಷ್ಮ ಸಾಲದ ಅವಧಿ ಎಂದು ಘೋಷಿಸಿದೆ. ಈ ಘೋಷಣೆಯಿಂದ ಸೂಕ್ಷ್ಮ ಸಾಲ ವ್ಯವಸ್ಥೆಯನ್ನು ವಿಶ್ವಮಟ್ಟದಲ್ಲಿ ಅಧಿಕೃತವಾಗಿ ಗುರುತಿಸಲಾಯಿತು ಹಾಗೂ ಸಹಸ್ರಮಾನದ ಅಭಿವೃದ್ಧಿಯ ಗುರಿ (Millinium Development Goals) ಎಂದು ಚರ್ಚಿಸಲಾಯಿತು. ಸೂಕ್ಷ್ಮ ಸಾಲದ ವ್ಯವಸ್ಥೆಯನ್ನು ಬಡತನ ನಿರ್ಮೂಲನೆ, ಶಿಕ್ಷಣ ಒದಗಿಸುವ ಮುಂತಾದ ಆದಾಯ ಉತ್ಪನ್ನ ಹೆಚ್ಚಿಸುವ ಸಾಧನವಾಗಿ ಬಳಸಲಾಯಿತು.[೬]

ಸೂಕ್ಷ್ಮ ಸಾಲದ ವ್ಯವಸ್ಥೆಯನ್ನು ಹಲವಾರು ಹೆಸರುಗಳಿಂದ ಗುರುತಿಸಲಾಗುತ್ತಿದೆ. ಸೂಕ್ಷ್ಮ ಉದ್ದಿಮೆ, ಸೂಕ್ಷ್ಮ ಹಣಕಾಸು ವ್ಯವಸ್ಥೆ, ಸೂಕ್ಷ್ಮ ಹಣಕಾಸು ಸಂಸ್ಥೆ ಮುಂತಾದವುಗಳು. ಸೂಕ್ಷ್ಮ ಸಾಲ ವ್ಯವಸ್ಥೆಯ ಪರಿಕಲ್ಪನೆಯು ಯಾವುದೇ ಅಭಿವೃದ್ಧಿಯ ಕಾರ್ಯಕ್ರಮಗಳಿಗೆ ಅನ್ವಯವಾಗುತ್ತದೆ ಹಾಗೂ ಇದು ಕಿರು ಅವಧಿಯ ಸಾಲದ ವ್ಯವಸ್ಥೆಯಾಗಿದ್ದು, ಬಡಜನರ ಬದುಕಿನ ಶೈಲಿಯನ್ನು ಬೆಳವಣಿಗೆಗೊಳಿಸಲು ಸಹಕಾರಿಯಾಗಿದೆ. ಸೂಕ್ಷ್ಮ ಸಾಲ ಶೃಂಗವು ಬೆಳವಣಿಗೆಯ ಮಾರ್ಗವನ್ನು ತಲುಪುವ ವಿಧಾನವನ್ನು ಹೇಳಿಕೊಡುತ್ತದೆ. ಕಿರುಸಾಲ ಕಾರ್ಯಕ್ರಮವು ಬಡಜನತೆಗೆ ಸಾಲವನ್ನು ಸ್ವಯಂ ಉದ್ಯೋಗಿಗಳಿಗಾಗಿ ಮತ್ತು ಇದರಿಂದ ಆದಾಯ ಉತ್ಪನ್ನದಿಂದ ತಮ್ಮ ಕುಟುಂಬದ ನಿರ್ವಹಣೆಗಾಗಿ ಮಾಡುತ್ತಿದೆ.

ಸೂಕ್ಷ್ಮ ಸಾಲದ ವ್ಯವಸ್ಥೆಯು ಒಂದು ಹಣಕಾಸಿನ ಪ್ರಮುಖ ವ್ಯವಸ್ಥೆಯಾಗಿದ್ದು, ಹೆಸರೇ ಸೂಚಿಸುವಂತೆ ಚಿಕ್ಕ ಅವಧಿಯ ಸಾಲ, ಅಲ್ಪಾವಧಿಯ ಉಳಿತಾಯ, ಅಲ್ಪಾವಧಿಯಲ್ಲೇ ಮರುಪಾವತಿ. ಚಿಕ್ಕ ಸಾಲದ ವ್ಯವಸ್ಥೆಯಾಗಿದ್ದು, ಅತೀ ಕಡಿಮೆ ಅವಧಿಯಲ್ಲಿ ಅದನ್ನು ಮರುಪಾವತಿಸುವುದಾಗಿದೆ. ಇದನ್ನು ಅತೀ ಕಡಿಮೆ ಅದಾಯವಿರುವ ವ್ಯಕ್ತಿಗಳಿಗೆ ಹಾಗೂ ಕುಟುಂಬಗಳಿಗೆ ತಲುಪಿಸುವುದಾಗಿದೆ.[2]

ಸೂಕ್ಷ್ಮಸಾಲ ವ್ಯವಸ್ಥೆಯನ್ನು ಇನ್ನೊಂದು ರೀತಿಯಾಗಿ ವಿವರಿಸಬೇಕೆಂದರೆ ವ್ಯಕ್ತಿಗೆ ನೀಡುವ ಅತ್ಯಂತ ಕಿರುಹಣಕಾಸಿನ ಸಹಾಯದ ವ್ಯವಸ್ಥೆಯಾಗಿದ್ದು, ವ್ಯಕ್ತಿಯ ಸ್ವ-ಉದ್ಯೋಗ ಅಥವಾ ಸಣ್ಣ ಉದ್ದಿಮೆಯನ್ನು ಆರಂಭಿಸಲು ನೀಡುವ ಹಣಕಾಸಿನ ಸಹಾಯ. ಈ ರೀತಿಯ ಹಣವನ್ನು ವಿವಿಧ ಮೂಲಗಳಿಂದ ತಲುಪಿಸಬಹುದು. ಸ್ವತಂತ್ರ ಆದಾಯೇತರ ಸಂಸ್ಥೆಗಳು, ಸಮುದಾಯ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು, ವಾಣಿಜ್ಯ ಹಣಕಾಸಿನ ಸಂಸ್ಥೆಗಳು ಮುಂತಾದವುಗಳು. ಸೂಕ್ಷ್ಮಸಾಲಕ್ಕೆ ಒಂದು ವ್ಯಾಖ್ಯಾನವಿದ್ದರೂ, ವಾಸ್ತವದಲ್ಲಿ ಸಾಲಕ್ಕಾಗಿ ನೀಡುವ ಹಣವು ಅತೀ ಕಡಿಮೆ ಅಂದರೆ ಕೇವಲ ಸಾವಿರಾರು ರೂಪಾಯಿಗಳು ಮಾತ್ರ. ಸೂಕ್ಷ್ಮಸಾಲದ ಠೇವಣಿಯು ಚಿಕ್ಕ ಉದ್ದಿಮೆದಾರರನ್ನು ಬೆಂಬಲಿಸುವ ಕಾರ್ಯಕ್ರಮಗಳಿಗೆ ಹಾಗೂ ವಿವಿಧೋದ್ದೇಶದ ಬೆಂಬಲಿತ ಆದಾಯಗಳಿಗೆ ಹಾಗೂ ಇದನ್ನು ಅವಧಿಗೆ ಸರಿಯಾಗಿ ಮರುಪಾವತಿ ಮಾಡತಕ್ಕದ್ದು, ಸೂಕ್ಷ್ಮಸಾಲದಿಂದ ಪಡೆಯುವ ಸಾಲದ ಬಂಡವಾಳವನ್ನು ಸರಿಯಾಗಿ ಬಳಕೆಮಾಡಿದರೆ ದಿನನಿತ್ಯದ ಖರ್ಚುವೆಚ್ಚಗಳನ್ನು ನಿಭಾಯಿಸಲು ಸಹಕಾರಿಯಾಗುತ್ತದೆ.

ಸೂಕ್ಷ್ಮಸಾಲದ ವ್ಯವಸ್ಥೆಯು ಹಲವಾರು ಮೂಲಗಳಿಂದ ಆರಂಭಗೊಂಡಿದೆ. ಸಾಲವನ್ನು ತಲುಪಿಸುವ ಸಂಸ್ಥೆಗಳು ಹಲವಾರು ವಿಧದಲ್ಲಿರುವುದರಿಂದ ಇದರಲ್ಲಿ ಖಾಸಗೀ ಹಾಗೂ ಸಾರ್ವಜನಿಕ ಸಂಸ್ಥೆಗಳು ವಿಲೀನವಾಗಿ ಕಾರ್ಯನಿರ್ವಹಿಸುತ್ತಿವೆ. ಸೂಕ್ಷ್ಮಸಾಲದ ಬಂಡವಾಳವನ್ನು ಒಂದು ಸ್ವತಂತ್ರ ಗುಂಪು ವಿನಿಯೋಗಿಸಬಹುದು ಅಥವಾ ಒಂದು ಸಂಮಿಶ್ರ ಸಮುದಾಯ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮವಾಗಿರಬಹುದು ಅಥವಾ ಇದು ಒಂದು ವಾಣಿಜ್ಯ ಬ್ಯಾಂಕಿನ ಅಭಿವೃದ್ಧಿ ಕಾರ್ಯಕ್ರಮವಾಗಿರಬಹುದು. ಪ್ರಮುಖವಾಗಿ ಸೂಕ್ಷ್ಮಸಾಲ ಕಾರ್ಯಕ್ರಮದ ಉದ್ದೇಶವು ತಾಂತ್ರಿಕ

ಸಹಾಯಗಳನ್ನು ನೀಡುವುದು. ಉದಾಹರಣೆಗೆ, ವಾಣಿಜ್ಯ ತರಬೇತಿ ಕೋರ್ಸುಗಳು, ಅಭಿಪ್ರಾಯಗಳ ವಿನಿಮಯ ಹಾಗೂ ತಾಂತ್ರಿಕ ವ್ಯವಸ್ಥೆಗಳ ತರಬೇತಿ ಕಾರ್ಯಕ್ರಮ ಇನ್ನೂ ಮುಂತಾದವು.[೮] ಸೂಕ್ಷ್ಮಸಾಲದ ಯೋಜನೆಯನ್ನು ಬಡತನ ರೇಖೆಯಲ್ಲಿರುವವರ ಅವಶ್ಯಕತೆಗಳನ್ನಾಧರಿಸಿ ಹಾಗೂ ಅದರ ಬೆಳವಣಿಗೆಯ ದೂರದೃಷ್ಟಿಯಿಂದ ಸೂಕ್ಷ್ಮಹಣಕಾಸಿನ ಪಿತಾಮಹ ಮೊಹಮದ್ ಯೂನಸ್ ಅವರು ಬೆಳಕಿಗೆ ತಂದರು. ಸೂಕ್ಷ್ಮಸಾಲವು ಹಣಕಾಸಿನ ವ್ಯವಸ್ಥೆಯ ಒಂದು ಭಾಗವಾಗಿ ಮಿತವ್ಯಯ ಸಾಲ ಹಾಗೂ ಇತರ ಹಣಕಾಸಿನ ಸೇವೆಗಳ ವ್ಯವಸ್ಥೆಯನ್ನು ಚಿಕ್ಕ ಬೆಲೆಗಳ ವಸ್ತುಗಳನ್ನು ಗ್ರಾಮೀಣ ಬಡಜನರಿಗೆ ಗ್ರಾಮಾಂತರ ಮತ್ತು ನಗರದ ಜನರಿಗೆ ಅವರ ಆದಾಯದಲ್ಲಿ ಹೆಚ್ಚಳ ಮೂಡಿಸಿ ಅವರ ಜೀವನ ಶೈಲಿಯಲ್ಲಿ ಸುಧಾರಣೆ ಮೂಡಿಸುವುದಾಗಿದೆ. ೨೦೦೮ರ ಆರ್‌ಬಿಐ ಸಮೀಕ್ಷೆಯ ಪ್ರಕಾರ, ಸಾಮಾಜಿಕ ಉದ್ದೆಮೆದಾರರ ಪ್ರಮುಖ ಬೆಳವಣಿಗೆಯನ್ನು ಸೂಕ್ಷ್ಮಸಾಲಗಳ ಹಾಗೂ ಸೂಕ್ಷ್ಮಹಣಕಾಸು ವ್ಯವಸ್ಥೆಯ ಮುಖಾಂತರವಾಗಿರುವುದನ್ನು ಗಮನಿಸಬಹುದು.[೯] ವಾಷಿಂಗ್ಟನ್‌ನಲ್ಲಿ ೧೯೯೭ರಲ್ಲಿ ಹಮ್ಮಿಕೊಂಡ ಕಿರುಹಣಕಾಸಿನ ಶೃಂಗದಲ್ಲಿ ಕಿರುಹಣಕಾಸಿನ ಚಳುವಳಿಯು ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಟ್ಟಿತು. ಈ ಶೃಂಗದಲ್ಲಿ ೧೫೦೦ ಸಂಸ್ಥೆಗಳು ಹಾಗೂ ೧೩೭ ದೇಶಗಳು ಭಾಗವಹಿಸಿದ್ದವು. ಇಲ್ಲಿ ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪ್ರಮುಖ ಧ್ಯೇಯವು ಬಡತನವನ್ನು ಸಂಪೂರ್ಣವಾಗಿ ನಿವಾರಣೆಮಾಡುವುದು. ಈ ಕಿರುಹಣಕಾಸಿನ ಶೃಂಗವು ೯ ವರ್ಷದ ಪ್ರಚಾರದ ಮುಖಾಂತರ ೨೦೦೫ರಲ್ಲಿ ಜಗತ್ತಿನ ೧೦೦ ದಶಲಕ್ಷ ಬಡಕುಟುಂಬಗಳನ್ನು ತಲುಪುವುದು.

ಹಲವಾರು ದೇಶಗಳು ವಿವಿಧ ಸಹಕಾರಿ ಸಂಸ್ಥೆಗಳನ್ನು ಹಾಗೂ ಕ್ರೆಡಿಟ್ ಕೋ- ಆಪರೇಟಿವ್ ಸೊಸೈಟಿಗಳನ್ನು ಹೊಂದಿವೆ. ದಕ್ಷಿಣ ಏಷ್ಯಾದ ಹಲವಾರು ರಾಷ್ಟ್ರಗಳು ಹಾಗೂ ಇಂಡೋನೇಷ್ಯಾದಲ್ಲಿ ಹಣಕಾಸಿನ ಸೇವೆಯನ್ನು ಬಡಜನತೆಗೆ ತಲುಪಿಸಲು ಹಲವಾರು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಗಳು ವಿಫಲವಾಗಿವೆ. ಸಾಮಾನ್ಯವಾಗಿ ಈ ಕೋ-ಆಪರೇಟಿವ್ ಸಂಸ್ಥೆಗಳು ಕಡಿಮೆ ಆದಾಯವನ್ನು ಹೊಂದಿರುವ ಬಡಜನತೆ ಅಥವಾ ಸಮುದಾಯವನ್ನು ಒಳಗೊಂಡಿದೆ. ಇದಲ್ಲದೇ ವಿವಿಧ ದೇಶಗಳಲ್ಲಿ ಈ ಸಂಘಗಳ ವ್ಯವಸ್ಥಿತ ಯೋಜನೆಗಳನ್ನು ನಾವು ಕಾಣುವುದಿಲ್ಲ.

ಇನ್ನೂ ಪಾಕಿಸ್ತಾನ ಹಾಗೂ ಭಾರತ ದೇಶದ ಪ್ರಮುಖ ಕೋ-ಆಪರೇಟಿವ್ ಸಂಸ್ಥೆಗಳು ಕಾರ್ಯವನ್ನು ನಿರ್ವಹಿಸುತ್ತಿಲ್ಲ. ಕಾರಣ ಹಣಕಾಸಿನ ಅವ್ಯವಸ್ಥಿತ ಯೋಜನೆ ಹಾಗೂ ಸಮಯಕ್ಕೆ ಸರಿಯಾಗಿ ಸಾಲವನ್ನು ಮರುಪಾವತಿಸದಿರುವುದು. ಕೆಲವು ಸಂಸ್ಥೆಗಳು ಕಾರ್ಯವನ್ನು ನಿರ್ವಹಿಸುತ್ತಿದ್ದರೂ ಇದು ಹಳ್ಳಿಯ ಪ್ರಮುಖ ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗಿದ್ದು, ಪ್ರಭಾವದ ಮೇಲೆ ಸಾಲವನ್ನು ನೀಡುತ್ತಿದ್ದಾರೇ ಹೊರತು ಅವಶ್ಯಕತೆಗುಣವಾಗಿ ಸಾಲವನ್ನು ತಲುಪಿಸುತ್ತಿಲ್ಲ. ಅವರು ಸರಕಾರದ ಬಂಡವಾಳದ ಮೇಲೆ ಅತೀಯಾಗಿ ಅವಲಂಬನೆಯಾಗಿರುವುದು ಕಂಡುಬರುತ್ತದೆ. ಉದಾಹರಣೆಗೆ ಭಾರತ

ಹಾಗೂ ಪಾಕಿಸ್ತಾನದಲ್ಲಿ ರಾಜ್ಯ ಹಾಗೂ ಪ್ರಾದೇಶಿಕ ಕೋ-ಅಪರೇಟಿವ್ ವಿಭಾಗಗಳು 'ಬೋರ್ಡ್ ಅಫ್ ಡೈರೆಕ್ಟರ್' ಅನ್ನು ಪ್ರತಿನಿಧಿಸುತ್ತಿರುವುದು ಕಂಡುಬರುತ್ತಿದೆ. ಇವರು ಕೋ-ಆಪರೇಟಿವ್‌ನ ಮ್ಯಾನೇಜಿಮೆಂಟ್ ಮೇಲೆ ಪ್ರಭಾವವನ್ನು ಬೀರುತ್ತಿರುವುದು ಕಂಡುಬರುತ್ತಿದೆ. ಉದಾಹರಣೆಗೆ ಚುನಾವಣೆಗಾಗಿ ಒಪ್ಪಿಗೆ, ಬಂಡವಾಳದ ವಿನಿಯೋಗಕ್ಕೆ, ಪ್ರದೇಶಗಳ ಬದಲಾವಣೆ ಮುಂತಾದವುಗಳು. ಪ್ರಮುಖವಾಗಿ ಭಾರತದಲ್ಲಿ ಕೆಲವು ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕುಗಳನ್ನು ಕಾಣಬಹುದು. ಇವು ಬಡಜನತೆಗೆ ಯಶಸ್ವಿಯಾಗಿ ಹಣಕಾಸಿನ ಸೇವೆಯನ್ನು ಒದಗಿಸುತ್ತಿವೆ.[೧೦]

ಸೂಕ್ಷ್ಮ ಹಣಕಾಸು ಬಡತನ ನಿರ್ಮೂಲನಾ ಯೋಜನೆಯಿಂದ ಸಂಪೂರ್ಣವಾಗಿ ಹೊರತಾಗಿದೆ. ಸೂಕ್ಷ್ಮ ಹಣಕಾಸಿನ ಯೋಜನೆಯಲ್ಲಿ ಸಾಲದ ಹಣವು ತುಂಬಾ ಕಡಿಮೆಯಾಗಿರುತ್ತದೆ. ಇದು ಭಾರತೀಯ ಗುಣಮಟ್ಟದಲ್ಲಿ ನೂರು ರೂಪಾಯಿ ಗಿಂತ ಕಡಿಮೆಯಾಗಿದೆ. ಸೂಕ್ಷ್ಮಹಣಕಾಸಿನ ವ್ಯವಸ್ಥೆ ಪ್ರಮುಖ ಗುರಿ ಗ್ರಾಮೀಣ ಹಾಗೂ ಗ್ರಾಮಾಂತರ ಮನೆಗಳನ್ನು ತಲುಪುವುದು. ಮಹಿಳಾ ಗ್ರಾಹಕರು ಉದ್ಯಮಗಳನ್ನು ಬೆಳಸಿಕೊಳ್ಳಲು ಹಾಗೂ ಹೆಚ್ಚಿನ ಮಟ್ಟದ ಸೇವೆಯನ್ನು ತಲುಪಿಸುವುದು. ಇದರಿಂದ ಉಪಯೋಗ ಹೊಂದಿದವರು ಸದಸ್ಯರುಗಳು. ಈ ಸಾಲವನ್ನು ಎನ್‌ಜಿಓ ಅಥವಾ ಸ್ವ-ಸಹಾಯ ಗುಂಪುಗಳ ಮುಖಾಂತರ ಪಡೆಯಲಾಗುತ್ತದೆ. ಇಲ್ಲಿ ಮರುಪಾವತಿಯ ಅವಧಿಯು ಅತ್ಯಂತ ಚಿಕ್ಕ ಅವಧಿಯದ್ದಾಗಿರುತ್ತದೆ. ಇಲ್ಲಿ ಸಾಲದ ಹಣವನ್ನು ಗ್ರಾಹಕನ ಮರುಪಾವತಿಯ ಇತಿಹಾಸವನ್ನು ಗಮನಿಸಿ ಹೆಚ್ಚಿಸಲಾಗುತ್ತದೆ.

ಸೂಕ್ಷ್ಮ ಹಣಕಾಸಿನ ಯೋಜನೆಯು ಬ್ಯಾಂಕಿನೊಂದಿಗೆ ಜಂಟಿಯಾದ ಮಹತ್ವವಾದ ಪರಿಕಲ್ಪನೆಯಾಗಿ ಮತ್ತು ಬಡವರಿಗೆ ಸಹಾಯವನ್ನು ನೀಡುವ, ಕಡಿಮೆ ವಹಿವಾಟಿನ ವೆಚ್ಚ ಹಾಗೂ ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡುವ ಕಾರ್ಯಕ್ರಮವಾಗಿದೆ. ಈ ಕಿರು ಹಣಕಾಸಿನ ವ್ಯವಸ್ಥೆಯಲ್ಲಿ ನಬಾರ್ಡ್ ಎರಡು ರೀತಿಯಾದ ಕಾರ್ಯನಿರ್ವಹಿಸುತ್ತಿದೆ. ಹಣಕಾಸಿನ ಹಾಗೂ ಅಭಿವೃದ್ಧಿಯ ಕಾರ್ಯಕ್ರಮಗಳು ಸ್ವ-ಸಹಾಯ ಗುಂಪಿನ ಯೋಜನೆಯೆಂದರೆ ಕೇವಲ ವ್ಯಕ್ತಿ, ಗ್ರಾಹಕರು ಮಾತ್ರ ಇಡೀ ಗುಂಪಿನ ಸದಸ್ಯರೇ ಇದನ್ನು ಬೆಳಸಬೇಕು.

ಎಲ್ಲಾ ದೇಶಗಳಲ್ಲೂ ಹಲವಾರು ರೀತಿಯ ಚಿಕ್ಕ, ಅಸಾಂಪ್ರದಾಯಿಕ ಉಳಿತಾಯ ಹಾಗೂ ಸಾಲದ ಗುಂಪುಗಳನ್ನು ಮತ್ತು ಕೆಲವು ಸಾಲದ ಸಂಸ್ಥೆಗಳನ್ನು ಅದು ನೋಂದಣಿಯಿಲ್ಲದೇ ನಡೆಸುತ್ತಿರುವುದನ್ನು ಕಾಣಬಹುದು. ಭಾರತದಲ್ಲಿ ಸ್ವ-ಸಹಾಯ ಗುಂಪುಗಳು ನಬಾರ್ಡ್‌ನ ಜಂಟಿ ಆಯೋಜನೆಯ ಪ್ರಮುಖ ಭಾಗವಾಗಿ ಕಾರ್ಯನಿರ್ವಹಿಸುತ್ತಿವೆ. ಭಾರತದಲ್ಲಿ ಕಾನೂನಾತ್ಮಕವಾಗಿ ಸ್ವ-ಸಹಾಯ ಗುಂಪುಗಳನ್ನು ನೋಂದಣಿ ಮಾಡಬೇಕಾಗಿದೆ. ಇದು ೨೦ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದ್ದರೆ ಮಾತ್ರ ನೋಂದಣಿ ಸಾಧ್ಯ. ಈ ಕಾರಣಕ್ಕಾಗಿ, ಹಲವಾರು ಸ್ವ-ಸಹಾಯ ಗುಂಪುಗಳು ಸದಸ್ಯತ್ವವನ್ನು ೨೦ ವ್ಯಕ್ತಿಗಳಿಗೆ

ಸೀಮಿತಗೊಳಿಸಿವೆ. ಗುಜರಾತ್ ಹಾಗೂ ಭಾರತದ ಇತರೆ ಭಾಗಗಳಲ್ಲಿ ಸ್ವ-ಸಹಾಯ ಗುಂಪುಗಳು ನೋಂದಣಿಯಿಲ್ಲದೇ ನಡೆಸುತ್ತಿರುವುದು ಗಮನಿಸಲಾಗಿದೆ.[೧೧]

ಸ್ವ-ಸಹಾಯ ಗುಂಪುಗಳ ಆರಂಭಿಕ ಸ್ಥಾಪನೆಯು ಹಲವಾರು ಯೋಜನೆಗಳ ಮೇಲೆ ಅವಲಂಬಿತವಾಗಿದೆ. ಇದರ ಇನ್ನೊಂದು ಉದ್ದೇಶವು ಸಾಮಾಜಿಕ ಬೆಳವಣಿಗೆಯೂ ಹೌದು. ಸೂಕ್ಷ್ಮ ಹಣಕಾಸಿನ ಸಂದರ್ಭದಲ್ಲಿ ಸ್ವ-ಸಹಾಯ ಗುಂಪುಗಳು ಉಳಿತಾಯ ಹಾಗೂ ಸಾಲಗಳಿಗೆ ಸಂಬಂಧಿಸಿದಂತೆ ಆಗಿದೆ. ಹಲವಾರು ವ್ಯಕ್ತಿಗಳ ಒಂದು ಚಿಕ್ಕ ಗುಂಪು ಸದಸ್ಯರುಗಳಾಗಿ, ತಮ್ಮ ಉಳಿತಾಯವನ್ನು ವಿವಿಧ ಕಾರ್ಯಗಳಿಗೆ ವಿನಿಯೋಗಿಸುತ್ತಾರೆ. ಇಲ್ಲಿ ಸೇರಿಸಿದ ಹಣ (ಬಂಡವಾಳ)ವನ್ನು ತಾವೇ ಮಾಡಿಕೊಂಡು ಒಂದು ಮೌಲ್ಯಗಳ ಮುಖಾಂತರ ಸಾಲದ ರೂಪವಾಗಿ ಹಂಚಿಕೊಳ್ಳಲಾಗುತ್ತದೆ. ಒಮ್ಮೆ ನಂಬಿಕೆಯು ಗುಂಪುಗಳ ಮಧ್ಯೆ ಸೃಷ್ಟಿಯಾದಾಗ, ಸದಸ್ಯರುಗಳಿಗೆ ಹಣಕಾಸಿನ ಸೇವೆಯ ಮುಖಾಂತರ ಪ್ರೇರಣೆಯನ್ನು ಕೊಡಲಾಗುತ್ತದೆ. ಒಮ್ಮೆ ಈ ಸ್ವ-ಸಹಾಯ ಗುಂಪು ಸ್ಥಿರವಾಗಿ ಸ್ಥಾಪನೆಯಾದರೆ, ಸಾಲವನ್ನು ಕೇವಲ ತಮ್ಮ ಸದಸ್ಯರುಗಳಿಗೆ ಮಾತ್ರವಲ್ಲದೇ ಹೊರಗಿನವರಿಗೂ ಕೊಡಲು ಸಾಧ್ಯವಾಗುತ್ತದೆ.

ಇಂಡೋನೇಷ್ಯಾವು ನೂರು ಮತ್ತು ಸಾವಿರಗಟ್ಟಲೆ ಸ್ವ-ಸಹಾಯ ಗುಂಪುಗಳನ್ನು ಹೊಂದಿದ್ದು, ಇವು ಉಳಿತಾಯ ಹಾಗೂ ಸಾಲದ ಕಾರ್ಯಕ್ರಮದಲ್ಲಿ ಸದಾ ತೊಡಗಿಸಿಕೊಂಡಿರುತ್ತವೆ. ಇಲ್ಲಿ ಕೆಲವು ಗುಂಪುಗಳು ಪ್ರಾಚೀನ ಹಾಗೂ ದೇಸಿ ಪದ್ಧತಿಯನ್ನು ಅನುಸರಿಸುತ್ತಿದ್ದು ಇನ್ನೂ ಹಲವಾರು ಸರಕಾರಿ ಸಂಸ್ಥೆಗಳು, ಸಮುದಾಯಿಕ ಗುಂಪುಗಳು ಮತ್ತು ಎನ್‌ಜಿಓದಿಂದ ಆರಂಭವಾದ ಸೂಕ್ಷ್ಮ ಹಣಕಾಸಿನ ಯೋಜನೆಗಳಾಗಿವೆ. ಇದಕ್ಕೆ ಇಂಡೋನೇಷ್ಯಾದ ಸೂಕ್ಷ್ಮಹಣಕಾಸಿನ ಯೋಜನೆ ಮತ್ತು ಸ್ವ-ಸಹಾಯ ಗುಂಪಿನೊಂದಿಗೆ ಬ್ಯಾಂಕಿನ ಜಂಟಿ ಆಯೋಜನೆ, ಬಡರೈತರಿಗೆ ಆದಾಯವನ್ನು ಹೆಚ್ಚಿಸುವ ಕಾರ್ಯಕ್ರಮಗಳು ಹಾಗೂ ಹೊಸ ಗುಂಪು ಕಾರ್ಯಕ್ರಮಗಳಿಗೆ ಸಹಕಾರಿಯಾಗಿವೆ. ಕೆಲವೊಮ್ಮೆ ಈ ಸ್ವ-ಸಹಾಯ ಗುಂಪುಗಳ ನೋಂದಣಿಗೆ ಅನುಕೂಲವಿರುವುದಿಲ್ಲ.[೧೨]

ಹಾಗೆಯೇ ಥೈಲ್ಯಾಂಡ್‌ನಲ್ಲಿ ಕೆಲವು ಸಮುದಾಯ ಸಂಸ್ಥೆಗಳು ಸೂಕ್ಷ್ಮ ಹಣಕಾಸಿನ ಕಾರ್ಯಕ್ರಮವನ್ನು ಸರ್ಕಾರದ ಉಳಿತಾಯ ಬ್ಯಾಂಕು, ಗ್ರಾಮಾಂತರ ಸಮುದಾಯ ಅಭಿವೃದ್ಧಿ ಕಛೇರಿಯಲ್ಲಿ ಕೋ-ಆಪರೇಟೀವ್ಸ್ ಆಗಿ ನೋಂದಣಿ ಮಾಡಲಾಗಿದೆ. ಆದರೂ ಕೆಲವು ಕೋ-ಆಪರೇಟೀವ್ಸ್ ನೋಂದಣಿ ರಹಿತ ಅಸಂಪ್ರದಾಯಿಕವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಕಾಣುತ್ತೇವೆ.

ಹಲವಾರು ದೇಶಗಳಲ್ಲಿ ಸೂಕ್ಷ್ಮಹಣಕಾಸಿನ ಸಂಸ್ಥೆಗಳನ್ನು ಶಿಸ್ತುಬದ್ಧವಾಗಿ ನಿಯಂತ್ರಣ ಮಾಡುವುದು ಹಾಗೂ ಮೇಲ್ವಿಚಾರಣೆ ಮಾಡುವುದನ್ನು ತಡೆಯಲಾಗಿದೆ. ಹಾಗೆಯೇ ಇತರ ದೇಶಗಳಲ್ಲಿರುವ ಸೂಕ್ಷ್ಮ ಹಣಕಾಸಿನ ಸಂಸ್ಥೆಗಳು ಬಾಂಗ್ಲಾದೇಶದ ಸಂಸ್ಥೆಗಳಿಗಿರುವ ಸ್ವಾತಂತ್ರವನ್ನು ಹೊಂದಿಲ್ಲ. ಭಾರತದಲ್ಲಿಯೂ. ಎನ್‌ಜಿಓಗಳು ಬಾಂಗ್ಲಾದೇಶದಲ್ಲಿರುವಷ್ಟೇ ಅಧಿಕ ಸಂಖ್ಯೆಯಲ್ಲಿವೆ. ಇದಲ್ಲದೇ ೬೦.೦೦೦ ಪ್ರಾಥಮಿಕ

ವ್ಯವಸಾಯ ಕ್ರೆಡಿಟ್ ಸೊಸೈಟಿಗಳು ಇವೆ ಮತ್ತು ಸಾವಿರಾರು ಸ್ವ–ಸಹಾಯ ಗುಂಪುಗಳನ್ನು ಕಾಣಬಹುದು. ಫಿಲಿಪೈನ್ಸ್‌ನಲ್ಲಿ ಸುಮಾರು ೫೦೦ ಕಿರುಸಹಾಯ ಸಂಸ್ಥೆಗಳು ೨೦.೦೦೦ ಗ್ರಾಹಕರನ್ನು ಹೊಂದಿದೆ. ಥೈಲ್ಯಾಂಡ್‌ನಲ್ಲಿ ೧.೫೦೦ಕ್ಕೂ ಅಧಿಕ ಸಮುದಾಯಿಕ ಸಂಸ್ಥೆಗಳು ಕಿರುಹಣಕಾಸಿನ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿವೆ.

ಭಾರತದಲ್ಲಿ ಮೂರು ಕಛೇರಿಗಳು ಪ್ರಮುಖವಾದ ಸೂಕ್ಷ್ಮಹಣಕಾಸಿನ ಸಂಸ್ಥೆಗಳಿಗೆ ಹಣವನ್ನು ನೀಡುತ್ತಿವೆ. ಆದರೆ ಯಾವ ಸಂಸ್ಥೆಯು ಬಿರುಸಾಗಿ ಕಾರ್ಯವನ್ನು ನಿರ್ವಹಿಸುತ್ತಿಲ್ಲ. ಇನ್ನೊಂದು ಹಣ ಒದಗಿಸುವ ಸಂಸ್ಥೆಯು ರಾಷ್ಟ್ರೀಯ ಮಹಿಳಾ ಕೋಶ (ಆರ್‌ಎಮ್‌ಕೆ) ಇದರಿಂದ ಸಾಲವನ್ನು ಪಡೆಯಲು ಕನಿಷ್ಠ ೩ ವರ್ಷ ಅನುಭವವನ್ನು ಆಡಳಿತದಲ್ಲಿ ಹೊಂದಿರಬೇಕು. ಹಾಗೆಯೇ ಶೇ.೯೦ರಷ್ಟು ಮರುಪಾವತಿಯನ್ನು ಮಾಡಿರುವ ಅನುಭವವನ್ನು ಹೊಂದಿರಬೇಕು. ಹಾಗೆಯೇ ಸಾಮಾಜಿಕ, ಆರ್ಥಿಕ ವಲಯದಲ್ಲಿ ಹಣಕಾಸಿನ ವ್ಯವಸ್ಥಿತ ಕಾರ್ಯಗಳನ್ನು ತೃಪ್ತಿಕರವಾಗಿ ನಿರ್ವಹಿಸಬೇಕು. ಈ ಎಲ್ಲಾ ಅವಶ್ಯಕತೆಗಳು ಸಾಮಾನ್ಯವಾಗಿರುತ್ತವೆ. ಸಾಲಕ್ಕೆ ಸಂಬಂಧಿಸಿದಂತೆ ಇನ್ನೂ ಹಲವಾರು ಅವಶ್ಯಕತೆಗಳನ್ನು ಕಾಣಬಹುದು.

ಇವುಗಳ ಕಾರ್ಯಗಳನ್ನು ಎರಡು ಸಂಸ್ಥೆಗಳಾದ ಭಾರತೀಯ ಚಿಕ್ಕ ಉದ್ದಿಮೆ ಅಭಿವೃದ್ಧಿ ಬ್ಯಾಂಕು (ಎಸ್‌ಐಡಿಬಿಐ) ಹಾಗೂ ನಬಾರ್ಡ್ ನಿಯಂತ್ರಿಸುತ್ತದೆ.[೧೩] ಹಲವಾರು ಸೂಕ್ಷ್ಮಹಣಕಾಸಿನ ಕಾರ್ಯಕ್ರಮಗಳು ಪ್ರಮುಖವಾಗಿ ಮಹಿಳೆಯರನ್ನೇ ಗುರಿಯಾಗಿಟ್ಟುಕೊಂಡು ನಡೆಸುತ್ತಿವೆ ಮತ್ತು ಇದರ ಪ್ರಮುಖ ಉದ್ದೇಶ ಮಹಿಳೆಯರನ್ನು ಸಬಲೀಕರಣಗೊಳಿಸುವುದು. ಕೆಲವು ಮಹಿಳೆಯರು ಬಡತನದ ರೇಖೆಗಿಂತ ಕೆಳಮಟ್ಟದಲ್ಲಿರುವುದಲ್ಲದೇ ಅತೀ ಹಿಂದುಳಿದ ವರ್ಗದಲ್ಲಿ ಕಾಣುತ್ತೇವೆ. ಇದರಿಂದ ಹಣಕಾಸಿನ ಸಮಯದಲ್ಲಿ ಮಹಿಳೆಯರಿಗೆ ಪ್ರಥಮ ಆದ್ಯತೆ ನೀಡುವುದು ಅವಶ್ಯವಾಗಿದೆ. ಸೂಕ್ಷ್ಮಹಣಕಾಸಿನ ಸಹಾಯದ ಮುಖಾಂತರ ಮಹಿಳೆಯರಿಗೆ ತಮ್ಮ ಹಕ್ಕು ಹಾಗೂ ಸ್ವತಂತ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಅವಕಾಶ ನೀಡುತ್ತದೆ.

೫.೨. ಮಹಿಳಾ ಸಬಲೀಕರಣದ ಪರಿಕಲ್ಪನೆ

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಶೋಷಣೆಗೆ ಒಳಗಾಗಿರುವ ಮಹಿಳೆಯರನ್ನು ಮುಖ್ಯವಾಹಿನಿಗೆ ತರಲು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಪ್ರಯತ್ನಗಳು ನಡೆದಿವೆ. ಏಕೆಂದರೆ ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಆರ್ಥಿಕ. ಸಾಮಾಜಿಕ. ರಾಜಕಿಯ. ಔದ್ಯೋಗಿಕ. ಶೈಕ್ಷಣಿಕ. ತಂತ್ರಜ್ಞಾನ. ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಮಹಿಳೆಯರು ಪುರುಷರಿಗೆ ಸರಿಸಮಾನವಾದ ಸ್ಥಾನಮಾನವನ್ನು ಹೊಂದಿಲ್ಲ.[೧೪] ಮಹಿಳೆಯರ ಅಭಿವೃದ್ಧಿಯನ್ನು ಒಂದೋ ವರಮಹಾಲಕ್ಷ್ಮೀ ಪೂಜೆಗೆ ಸೀಮಿತಗೊಳಿಸಲಾಗಿತ್ತು. ಇಲ್ಲವೇ

ಸೀರೆ ಹಂಚುವ ಕಾರ್ಯವನ್ನಾಗಿ ಮಾಡಲಾಗಿತ್ತು. ಇವರೆಡೂ ಸಂಗತಿಗಳು ಮಹಿಳೆಯರನ್ನು ಹಂಗಿನ ಬದುಕಿಗೆ ದೂಡಬಲ್ಲವೇ ವಿನಾಃ ಸ್ವತಂತ್ರ-ಸ್ವಾಯತ್ತ ನೆಲೆಯಲ್ಲಿ ಅವರ ಅಭಿವೃದ್ಧಿಯನ್ನು ಮಾಡಲಾರವು.[೧೫]

ಮಹಿಳೆರನ್ನು ಸಾಮಾಜಿಕ ಘಟಕವಾಗಿ ಪರಿಭಾವಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಜನಸಂಖ್ಯಾ ಘಟಕವಾಗಿ, ಜೈವಿಕ ಘಟಕವಾಗಿ ಪರಿಭಾವಿಸಿಕೊಳ್ಳಲಾಗಿದೆ. ಮಹಿಳೆಯರನ್ನು ಒಬ್ಬ 'ವ್ಯಕ್ತಿ'ಯಾಗಿ ಪರಿಭಾವಿಸಿಕೊಳ್ಳುವ ಕ್ರಮ ಸಮಾಜ ವಿಜ್ಞಾನಗಳಲ್ಲಿ ಕಂಡುಬರುವುದಿಲ್ಲ. ಅವು ಅವರನ್ನು 'ತಾಯಿ'ಯಾಗಿ. 'ಹೆಂಡತಿ'ಯಾಗಿ ಗೃಹಿಣಿಯಾಗಿ ಮಾತ್ರ ಪರಿಭಾವಿಸಿಕೊಳ್ಳುತ್ತೇವೆ. ಅಂದರೆ ಅವಳನ್ನು ಕೇವಲ ಅನುಷಂಗಿಕವಾಗಿ ಮಾತ್ರ ನೋಡಲಾಗುತ್ತದೆ. ಸರಿಯಾಗಿ ಹೇಳಬೇಕೆಂದರೆ ಮಹಿಳೆಯರನ್ನು 'ಕುಟುಂಬ'ಕ್ಕೆ ಸಂವಾದಿಯಾಗಿ ಪರಿಭಾವಿಸಿಕೊಳ್ಳುವುದು ರೂಢಿಯಲ್ಲಿದೆ. ಸಮಾಜ ವಿಜ್ಞಾನಗಳಲ್ಲಿ ಮಹಿಳೆಗೆ ಯಾವುದೇ ಸ್ಥಾನವಿಲ್ಲವಾಗಿದೆ.[೧೬] ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಶಿಕ್ಷಣ, ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ಸ್ಥಾನಮಾನಗಳನ್ನು ಪಡೆದುಕೊಳ್ಳುವಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.[೧೭]

ಮಹಿಳೆಯರ ಬದುಕನ್ನು ಕೇವಲ 'ಲೋಕಹಿತಾರ್ಥ' ನೆಲೆಯಲ್ಲಿ ಪರಿಭಾವಿಸಿಕೊಂಡರೆ ಉಪಯೋಗವಿಲ್ಲ. ಏಕೆಂದರೆ ಅಂತಹ ದೃಷ್ಟಿಕೋನದಿಂದ, ಅಂದರೆ ವೆಲ್‌ಬೀಯಿಂಗ್ ದೃಷ್ಟಿಕೋನದಿಂದ, ಕಲ್ಯಾಣವಾದಿ ದೃಷ್ಟಿಕೋನದಿಂದ, ಅವರಿಗೆ ಒಳ್ಳೆಯದಾಗಲೆಂಬ 'ಅನುಕಂಪವಾದಿ' ದೃಷ್ಟಿಕೋನದಿಂದ ಮಹಿಳೆಯರ ಬದುಕಿನ ಸ್ಥಾನಮಾನವನ್ನು ಪರಿವರ್ತರಿಸಲು ಸಾದ್ಯವಿಲ್ಲ. ಏಕೆಂದರೆ ಅಲ್ಲಿ ಅಧಿಕಾರದ ಪ್ರಶ್ನೆಯಿದೆ ಮತ್ತು ಅದಕ್ಕೆ ಅಂಟಿಕೊಂಡಂತೆ ಸಂಘರ್ಷದ ಸಂಗತಿಗಳಿವೆ. ಆದ್ದರಿಂದ ಅವರನ್ನು ಸಂಘರ್ಷಣಾವಾದಿ, ಅಂದರೆ 'ಮಹಿಳೆಯರ ಸ್ವಹಿತಾಸಕ್ತಿ' ನೆಲೆಯಿಂದ ಅದನ್ನು ಪರಿಭಾವಿಸಿಕೊಳ್ಳಬೇಕಾಗಿದೆ. ಯಾವುದನ್ನು 'ಚೌಕಾಸಿ ಸಂಧಾನ'ದ ದೃಷ್ಟಿಕೋನವೆಂದು ಕರೆಯಲಾಗಿದೆಯೋ ಅಂತಹ ಸಿದ್ಧಾಂತದ ನೆಲೆಯಿಂದ ಮಹಿಳೆಯರ ಬದುಕನ್ನು ಪರಿಭಾವಿಸಿಕೊಳ್ಳುವ ಅಗತ್ಯವಿದೆ. ಮಹಿಳೆಯರ ಬದುಕು ಕೇವಲ ಪರರ ಹಿತಾಸಕ್ತಿಗಾಗಿದೆಯೆಂಬುದು ಪುರುಷಶಾಹಿಯು ಕಟ್ಟಿರುವ ಒಂದು ಸಂಕಥನವಾಗಿದೆ. ಇದನ್ನು 'ಸೆಲ್ಫಾಡಿನೈಯಲ್' ದೃಷ್ಟಿ ಕೋನವೆಂದು ಕರೆಯಬಹುದು. ಆದರೆ ಅದೇ ಸಾರ್ವತ್ರಿಕ ಸಂಗತಿಯಾಗಬಾರದು. ಮಹಿಳೆಯರ ಮನಸ್ಸಿನಲ್ಲಿ ಆಳವಾಗಿ ಬೇರು ಬಿಟ್ಟಿರುವ, ಅಂದರೆ ಅವರಲ್ಲಿ ರಕ್ತಗತವಾಗಿಬಿಟ್ಟಿರುವ ತಮ್ಮ ಬಗೆಗಿನ ನಿರಾಶವಾದಿ ಮತ್ತು ಅಸಹಾಯಕವಾದಿ ದೃಷ್ಟಿಕೋನವನ್ನು ಸರಿಪಡಿಸಬೇಕಾಗಿದೆ.[೧೮]

ಸ್ತ್ರೀಯರು ಹೊಂದಿರುವ ಸ್ಥಾನಮಾನ ಎಂಬುದು ಸಮಾಜದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮತ್ತು ನಾಗರಿಕತೆಯ ಮುನ್ನಡೆಯನ್ನು ಅಳೆಯುವ ಮಾನದಂಡವಿದ್ದಂತೆ. ಆದರೆ ವಿವಿಧ ಕಾರ್ಯಗಳನ್ನು ನಿರ್ವಹಿಸಲು ಮಹಿಳೆಯರ ದೈಹಿಕ ರಚನೆ ಪ್ರಮುಖ ಅಡೆತಡೆಯಾಗಿದೆ. ಪುರುಷರ ಬಲಯುತವಾದ ಶಾರೀರಿಕ ರಚನೆ ಹಾಗೂ ಭೇಟೆಯಾಡುವ ಮತ್ತು ಆಹಾರ ಸಂಗಹಿಸುವ ಕಾರ್ಯಗಳಿಂದಾಗಿ. ಕ್ರಮೇಣ

ಮಹಿಳೆಯರು ಆಹಾರ ಮತ್ತು ರಕ್ಷಣೆಗಾಗಿ ಪುರುಷರ ಮೇಲೆ ಅವಲಂಬಿತರಾಗಬೇಕಾಯಿತು. ನಿಜವಾದ ವಿಪರ್ಯಾಸವೆಂದರೆ, ಈ ಗ್ರಹದ ಮೇಲೆ ಮಾನವ ವಂಶ ಮುಂದುವರೆಸುವಲ್ಲಿ ಬಹುಮುಖ್ಯ ಕಾರ್ಯನಿರ್ವಹಿಸುತ್ತಿರುವ ಹೆಣ್ಣಿಗೆ ಪ್ರಾಮುಖ್ಯತೆ ನೀಡುವ ಬದಲಾಗಿ ಕೇವಲ ಶಕ್ತಿವಂತನಾಗಿರುವ ಗಂಡಿಗೆ ಪ್ರಾಮುಖ್ಯತೆ ನೀಡಲಾಗಿದೆ.[೧೯] ಆದ್ದರಿಂದ ಇಂದು ನಾವು "ಸಮಾನತೆಯೆಡೆಗೆ ಸಾಗುವ ಉದ್ದೇಶದಿಂದ ಸಬಲೀಕರಣದೆಡೆಗೆ ಸಾಗುತ್ತಿದ್ದೇವೆ.[೨೦] ಸಬಲೀಕರಣ ಎಂದರೆ ವ್ಯಕ್ತಿಯನ್ನು, ಸಮಾಜವನ್ನು, ಆಧ್ಯಾತ್ಮಿಕವಾಗಿ ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಬಲಪಡಿಸುವುದಾಗಿದೆ.

ಸಬಲೀಕರಣ ಎನ್ನುವ ಪದವನ್ನು ೧೯೭೦ರ ದಶಕದಲ್ಲಿ ಲ್ಯಾಟಿನ್ ಅಮೇರಿಕೆಯಲ್ಲಿ ವ್ಯಾಪಕವಾಗಿ ಮೊದಲಬಾರಿಗೆ ಬಳಸುವುದು ತಿಳಿದುಬರುತ್ತದೆ. ಎಂಪವರ್‌ಮೆಂಟ್ ಎನ್ನುವ ಆಂಗ್ಲ ಭಾಷೆಯ ಪದ ಕನ್ನಡದಲ್ಲಿ ಸಬಲೀಕರಣ, ಸಶಕ್ತೀಕರಣ ಎನ್ನುವ ಅರ್ಥವನ್ನು ಕೊಡುತ್ತದೆ.[೨೧]

"ಸಬಲೀಕರಣ" ಎಂದರೆ ಶಕ್ತಿಕೊಡು, ಅಧಿಕಾರವಹಿಸು ಹಾಗೂ ಕಾನೂನಿನ ಹಕ್ಕುಗಳನ್ನು ನೀಡು, ಪ್ರಾತ್ತಿನಿಧ್ಯ ಹಾಗೂ ಪಾಲ್ಗೊಳ್ಳುವಿಕೆಯ ಮೂಲಕ ಅಧಿಕಾರ ಪಡೆಯುವುದು ಎಂಬುದಾಗಿ ಅನೇಕ ಅರ್ಥವನ್ನು ಹೊಂದಿದೆ. ವ್ಯಕ್ತಿಯನ್ನು ಸಶಕ್ತಿಗೊಳಿಸುವ ಕ್ರಿಯೆಯೇ ಸಬಲೀಕರಣ ಅಥವಾ ಸಶಕ್ತಿಕರಣವಾಗಿದೆ. "ಮಹಿಳಾ ಸಬಲೀಕರಣ"ವು ಮಹಿಳೆಯರನ್ನು ಸಶಕ್ತಗೊಳಿಸುವ ಕ್ರಿಯೆಯಾಗಿದೆ. ಇದು ಮಹಿಳಾ ಅಭಿವೃದ್ಧಿ, ಮಹಿಳಾ ಕಲ್ಯಾಣ, ಮಹಿಳಾ ಜಾಗೃತಿ, ಭಾಗವಹಿಸುವಿಕೆ, ಪ್ರಗತಿ ಮತ್ತು ಉದ್ಧಾರ ಎಂಬ ಅರ್ಥಗಳನ್ನು ನೀಡುತ್ತದೆ. ಮಹಿಳೆಯರ ಅವಲಂಬನೆಯನ್ನು ತೊಡೆದು ಹಾಕಿ, ಸ್ವಾತಂತ್ರ್ಯ ಸಮಾನತೆ ಪಡೆಯುವುದಕ್ಕೆ ಅವಕಾಶ ನೀಡುವುದು, ಆರ್ಥಿಕ, ಸಾಮಾಜಿಕ, ರಾಜಕೀಯ ಅವಕಾಶಗಳನ್ನು ಸೃಷ್ಟಿಸುವುದು, ಶಿಕ್ಷಣ, ಆರೋಗ್ಯ ಸುರಕ್ಷೆ ನೀಡುವುದು ಮತ್ತು ಮಹಿಳಾ ಸಬಲೀಕರಣಕ್ಕಾಗಿ ಅವಶ್ಯಕವಾದ ಕಾನೂನು ಹಾಗೂ ಶಾಸನಾತ್ಮಕ ಚೌಕಟ್ಟನ್ನು ನಿರ್ಮಿಸುವುದಾಗಿದೆ. ಮಹಿಳೆಯರು ತಮ್ಮನ್ನು ತಾವು ಸಂಪೂರ್ಣವಾಗಿ ಗುರುತಿಸಿಕೊಂಡು ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಶಕ್ತಿಯನ್ನು ಬೆಳೆಸಿಕೊಳ್ಳುವಂತೆ ಮಾಡುವ ಕ್ರಿಯೆಯೇ ಮಹಿಳಾ ಸಶಕ್ತೀಕರಣವೆಂದು ವಿವರಿಸಲಾಗಿದೆ.[೨೨] ಸಬಲೀಕರಣ ಎಂಬ ಪರಿಕಲ್ಪನೆಯನ್ನು ಮಾಪನ ಮಾಡುವುದು ಕಷ್ಟವೇ ಹೌದು. ಇದಕ್ಕೆ ಸಂಬಂಧಿಸಿದಂತೆ ಏಕ ರೀತಿಯಾದ ಮಾಪನವನ್ನು ಕಾಣಲಾಗುವುದಿಲ್ಲ, ಅಂದರೆ ವೈಯಕ್ತಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬದಲಾವಣೆ ಹೊಂದುವಂತಾಗಬೇಕಾಗಿದೆ.[೨೩]

ಸಬಲೀಕರಣ ಅರ್ಥವೇನು? ವ್ಯಕ್ತಿಯ ಜೀವನ ಮಟ್ಟ ಯಾವಾಗ ಸುಧಾರಿಸುತ್ತದೆ? ನೊಬೆಲ್ ಪ್ರಶಸ್ತಿ ಪುರಸ್ಕೃತ ಅಮಾರ್ತ್ಯಸೇನ್ (೧೯೯೩)ರ ಪ್ರಕಾರ: ವಿವಿಧ ಜೀವನ ಶೈಲಿಯನ್ನು ಅನುಸರಿಸಲು ಮನುಷ್ಯನಿಗೆ ಅವಕಾಶಕೊಟ್ಟರೆ ಅಲ್ಲಿ ಅವನ ಸಾಮರ್ಥ್ಯದ ಪರೀಕ್ಷೆಯಾಗುತ್ತದೆ. ಒಬ್ಬ ಮನುಷ್ಯನ ಸಾಮರ್ಥ್ಯವು ಹಲವಾರು ವಿಧಗಳಿಂದ ಕೂಡಿರುತ್ತದೆ. ತಮ್ಮ ವ್ಯಕ್ತಿಗತವಾದ ಗುಣಲಕ್ಷಣಗಳೊಂದಿಗೆ

ಸಾಮಾಜಿಕ ಅಂಶಗಳು ಕಾರಣವಾಗುತ್ತವೆ. ಕೆಲವೊಮ್ಮೆ ಮನುಷ್ಯನ ಸಾಮಾರ್ಥ್ಯವನ್ನು ಮೀರಿ ಅವನ ಜೀವನ ಶೈಲಿಯು ಅವನನ್ನು ಕೊಂಡೊಯ್ಯುತ್ತದೆ. ಉದಾಹರಣೆಗೆ ಕೆಲವೊಮ್ಮೆ ನಮ್ಮಲ್ಲಿ ಸಾಮಾರ್ಥ್ಯವಿದ್ದರೂ ನಾವು ನಡೆಸುವ ಜೀವನ ಶೈಲಿಯ ಬಗೆಗೆ ನಿರ್ಧರಿಸಲು ಧೈರ್ಯವನ್ನು ತೆಗೆದುಕೊಳ್ಳದಿದ್ದರೆ ಅಥವಾ ನಿರ್ಧಾರವನ್ನು ತೆಗೆದುಕೊಂಡರೆ ಅಲ್ಲಿ ನಿಜವಾಗಲೂ ನಮ್ಮ ಸಾಮರ್ಥ್ಯದ ಪರೀಕ್ಷೆಯಾಗುತ್ತದೆ. ಸೇನ್ ಅವರು ಹೇಳಿದ ಇನ್ನೊಂದು ಪ್ರಮುಖವಾದ ಅಂಶವೆಂದರೆ ತಮ್ಮ ಸಾಮರ್ಥ್ಯದ ಮಾಪನವನ್ನು ಮಾಡುವುದಕ್ಕಾಗಿ, ಪ್ರತಿವ್ಯಕ್ತಿಯು ಸಾಮಾನ್ಯವಾಗಿ ಜೀವನದಲ್ಲಿ ಅವಶ್ಯಕತೆಯಿರುವ ಕಾರ್ಯಗಳ ಬಗ್ಗೆ ಗಮನಹರಿಸಬೇಕು. ಉದಾಹರಣೆಗೆ ಎಲ್ಲರಿಗೂ ಬೇಕಾಗಿರುವುದು ಅಗತ್ಯ ಮೂಲಭೂತ ಅವಶ್ಯಕತೆಗಳಾದ ಶುಚಿತ್ವ, ಉತ್ತಮ ಆರೋಗ್ಯ ಮತ್ತು ಇರುವುದಕ್ಕೊಂದು ಸೂರು. ಸೇನ್ ಖಚಿತವಾಗಿ ಹೇಳುವುದೇನೆಂದರೆ ಕ್ರಮವಾದ ಲಿಂಗ ವ್ಯತ್ಯಾಸಗಳನ್ನು ಇಲ್ಲಿ ಮೂಲಭೂತ ಅವಶ್ಯಕತೆಗಳ ಸಾಧನೆಯಲ್ಲೂ ಅಸಮಾನತೆಯನ್ನು ಕಾಣಬಹುದು. ಇಲ್ಲಿ ನಾವು ಸಾಮರ್ಥ್ಯದ ವಿಷಯದಲ್ಲೂ ಅಸಮಾನತೆಯನ್ನು ಕಾಣಬಹುದು.[೨೪]

ಆನಸ್ (೧೯೯೩)ಅವರ ಪ್ರಕಾರ ಜಗತ್ತಿನಾದ್ಯಂತ ಮನುಷ್ಯನ ಜೀವನದಲ್ಲಿ ಎರಡು ಪ್ರಮುಖ ಮಾದರಿಗಳನ್ನು ಕಾಣುತ್ತೇವೆ. ಇಲ್ಲಿ ಹೆಣ್ಣಾಗಲಿ ಅಥವಾ ಗಂಡಾಗಲಿ ತಮ್ಮ ಜೀವನವನ್ನು ರೂಪಿಸಿಕೊಳ್ಳುಲು ಯಾವುದೇ ಸಮಾಜದಲ್ಲಿ ಅಡ್ಡಿಯನ್ನು ಕಾಣುವುದಿಲ್ಲ. ಕೆಲವೊಮ್ಮೆ ಲಿಂಗ ಭೇದಗಳಿಂದ ಜೀವನದಲ್ಲಿ ಆಯ್ಕೆಗಳನ್ನು ಮಾಡಿಕೊಳ್ಳುವ ಅವಕಾಶಗಳನ್ನು ಕಳೆದುಕೊಂಡಿರುವುದನ್ನು ಕಾಣಬಹುದು ಅಥವಾ ಅವಕಾಶಗಳಲ್ಲಿ ಕೊರತೆಯನ್ನು ಕಾಣಬಹುದು. ಆನಸ್‌ನ ಪ್ರಕಾರ ಸಾಂಪ್ರದಾಯಿಕ ಸಮಾಜದಲ್ಲಿ ಹೆಣ್ಣು ಅಥವಾ ಗಂಡಿಗೆ ಕೆಲವೊಂದು ಬಲವಾದ ಕಟ್ಟಳೆಗಳನ್ನು ವಿಧಿಸಿರುವುದು ಕಂಡುಬರುತ್ತದೆ ಹಾಗೂ ಇದರಿಂದ ಕಾರ್ಯಚಟುವಟಿಕೆಗಳನ್ನು ವಿಭಾಗಿಸಲಾಗುತ್ತದೆ.

ಇಂದು ನಾವಿರುವ ಸಾಂಪ್ರದಾಯಿಕ ಸಮಾಜವನ್ನು ಹೊರತುಪಡಿಸಿ, ಹಿಂದಿನ ಸಾಂಪ್ರದಾಯಿಕ ಸಮಾಜವನ್ನು ನೋಡಿದಾಗ, ಅಲ್ಲಿ ನಡೆದಂತ ಅನ್ಯಾಯವನ್ನು ನೋಡಬಹುದು. ಗಂಡು ಹಾಗೂ ಹೆಣ್ಣಿಗೆ ಬಲವಾದ ಎರಡು ಕಟ್ಟಳೆಯನ್ನು ಹೇರಿ, ಹೆಣ್ಣು ಇದೇ ಮಾದರಿಯಲ್ಲಿ ಹಾಗೂ ಗಂಡು ಇದೇ ಮಾದರಿಯಲ್ಲಿ ಜೀವನ ನಡೆಸಬೇಕೆಂಬುದನ್ನು ನಿರ್ಧರಿಸಿತ್ತು. ಹೀಗೆ ನಾವು ಹಿಂದಿನ ಸಾಂಪ್ರದಾಯಿಕ ಸಮಾಜದ ಬಗ್ಗೆ ಚಿಂತನೆಯನ್ನು ನಡೆಸಿದಾಗ ಈ ಎರಡೂ ವಿಧಾನಗಳಿಂದ ಮನುಷ್ಯನಿಗೆ ಅನ್ಯಾಯ ನಡೆದದ್ದು ಗಮನಕ್ಕೆ ಬರುತ್ತದೆ. ಈ ಮಹಿಳಾ ಮಾದರಿಯ ಸಮಾಜದಲ್ಲಿ, ಆರ್ಥಿಕ ಅಭಿವೃದ್ಧಿಯನ್ನು ಮೀರಿ ಮಹಿಳಾ ಸಬಲೀಕರಣ ನಡೆದುದನ್ನು ಕಾಣಬಹುದು.[೨೫] ಮಯೋಕ್ಸ್ (೧೯೯೮) ಸಲಹೆಯ ಪ್ರಕಾರ ಸಬಲೀಕರಣವು ಅಂತರಾತ್ಮದ ಬದಲಾವಣೆ ಅಥವಾ ಅಂತರಾತ್ಮದ ಶಕ್ತಿ, ಸಾಮರ್ಥ್ಯವನ್ನು ಹೊರಹಾಕುವಿಕೆ, ಮಹಿಳಾ ಸಮೂಹ ಸಂಘಟನೆ, ಸಬಲೀಕರಣದ ಬೆಳವಣಿಗೆಯು ವ್ಯಕ್ತಿಯ

ಸಬಲೀಕರಣದಿಂದ ಪ್ರಾರಂಭವಾಗಬಹುದು. ಆದಕಾರಣ ಈ ರೀತಿಯ ಸಬಲೀಕರಣದಿಂದ ಪ್ರತಿಯೊಬ್ಬರು ವ್ಯಕ್ತಿಗತವಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯ. ಇದರಿಂದ ಆರ್ಥಿಕ ಸಂಪನ್ಮೂಲಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದು. ಬದಲಾವಣೆಯಲ್ಲಿ ಸ್ವ-ಗೌರವ ಹಾಗೂ ಆತ್ಮ ಸ್ಥೈರ್ಯ ಪ್ರಮುಖವಾದ ಅಂಶವಾಗಿದೆ. ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸ್ಥೈರ್ಯ ಹಾಗೂ ಆತ್ಮಬಲವನ್ನು ಹೆಚ್ಚಿಸುತ್ತದೆ. ಸ್ವ-ಸಬಲೀಕರಣದಿಂದ ಸಂಸ್ಥೆಯ ಹಾಗೂ ಕಟ್ಟಳೆಗಳಲ್ಲಿ ಹಲವಾರು ಬದಲಾವಣೆಗಳನ್ನು ತರಬಹುದು. ಆದರೂ ಸ್ವ-ಸಬಲೀಕರಣವು ಸಮೂಹದ ಸಬಲೀಕರಣದಿಂದ ಮಾತ್ರ ಸಾಧ್ಯ.

ಸಾಂಸ್ಥಿಕ ವ್ಯವಸ್ಥೆಗಳ ನ್ಯೂನತೆಗನುಗುಣವಾಗಿ ಸಬಲೀಕರಣದ ಸ್ವರೂಪವು ಭಿನ್ನವಾಗಿರುತ್ತದೆ. ನಾರ್ಥ್ ಅವರ ಪ್ರಕಾರ ಸಂಸ್ಥೆಗಳು ಮನುಷ್ಯನು ಕಟ್ಟಿಕೊಂಡಂತಹ ಕಟ್ಟಳೆ. ಇದು ವ್ಯಕ್ತಿಯ ನಡುವಳಿಕೆಗೆ ರೂಪವನ್ನು ಕೊಡೆವುದಲ್ಲದೇ, ವ್ಯಕ್ತಿಗಳ ಮಧ್ಯೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಅಭಿಪ್ರಾಯಗಳ ವಿನಿಮಯ ಮಾಡಿಕೊಳ್ಳಲು ಸಹಕಾರಿಯಾಗಿದೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ವಾತಾವರಣವು ವಿವಿಧ ಸದಸ್ಯರ ಸಬಲೀಕರಣದ ಮೇಲೆ ಸಮಾಜದಲ್ಲಿ ಪ್ರಭಾವ ಬೀರಿರುವುದು ಕಾಣುತ್ತೇವೆ. ಇದು ವ್ಯಕ್ತಿಯ ನಡುವಳಿಕೆಯ ಮೇಲೆ ಅಥವಾ ಕಾನೂನಿನ ಚೌಕಟ್ಟಿನ ಮೇಲೆ ನಿರ್ಧಾರವಾಗುತ್ತದೆ.

ಮಲ್ಹೋತ್ರ ೨೦೦೨, ಅವರು ವಿವಿಧ ದೃಷ್ಟಿಕೋನಕ್ಕನುಗುಣವಾಗಿ ಮಹಿಳಾ ಸಬಲೀಕರಣದ ಒಂದು ಸಾಮಾನ್ಯವಾದ ಪಟ್ಟಿಯನ್ನು ತಯಾರಿಸಿದ್ದಾರೆ. ಈ ಪಟ್ಟಿಯನ್ನು ವಿವಿಧ ಸಾಮಾಜ ವಿಜ್ಞಾನಗಳ ಲೇಖಕರ ಅಭಿಪ್ರಾಯವನ್ನು ಸಂಗ್ರಹಿಸಿ ತಯಾರಿಸಲಾಗಿದೆ. ಈ ಚೌಕಟ್ಟುಗಳಿಂದ ತಿಳಿಯುವುದೇನೆಂದರೆ ಮಹಿಳಾ ಸಬಲೀಕರಣವು ವಿವಿಧ ದೃಷ್ಟಿಕೋನ ಗಳಲ್ಲಾಗಿರುವುದು ಕಾಣಬಹುದು. ಉದಾಹರಣೆಗೆ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ, ಕಾನೂನು, ರಾಜಕೀಯ ಮತ್ತು ಮಾನಸಿಕವಾಗಿ. ಈ ದೃಷ್ಟಿಕೋನವು ಹಲವಾರು ಅಂಶಗಳನ್ನೊಳಗೊಂಡಿರುವುದರಿಂದ ಮಹಿಳೆಯು ಯಾವುದಾದರೂ ಕ್ಷೇತ್ರದಲ್ಲಿ ಸಾಧನೆಯನ್ನು ಸಾಧಿಸಬಹುದು. ಉದಾಹರಣೆಗೆ, ಸಾಮಾಜಿಕ-ಸಾಂಸ್ಕೃತಿಕ ದೃಷ್ಟಿಕೋನದಲ್ಲಿ ಮಹಿಳಾ ಸಬಲೀಕರಣ ನೋಡಿದಾಗ ಮದುವೆಯ ಪದ್ಧತಿಯಿಂದ ಹಿಡಿದು ಮಹಿಳೆಯ ದೈಹಿಕತೆಯನ್ನು ಬಳಸಿಕೊಳ್ಳುವವರೆಗೂ ಕಾಣಬಹುದು.[೨೬]

ವರ್ಲ್ಡ್‌ಬ್ಯಾಂಕು ಸಬಲೀಕರಣವನ್ನು ಈ ರೀತಿ ವ್ಯಾಖ್ಯಾನ ಮಾಡುತ್ತದೆ. "ವ್ಯಕ್ತಿಯ ಅಥವಾ ಗುಂಪಿನ ಸಾಮರ್ಥ್ಯವನ್ನು ಹೆಚ್ಚಿಸಿ, ಆಯ್ಕೆಗಳನ್ನು ನಿರ್ಧರಿಸಿ, ಆ ಆಯ್ಕೆಗಳನ್ನು ಕಾರ್ಯರೂಪಕ್ಕೆ ತಿರುಗಿಸಿ ಅದರಿಂದ ಉತ್ತಮ ಫಲಿತಾಂಶವನ್ನು ಕೊಡುವುದು. ಈ ಕ್ರಿಯೆಯಿಂದ ಕೇವಲ ವ್ಯಕ್ತಿಯ ಬೆಳವಣಿಗೆ ಮಾತ್ರವಲ್ಲದೇ ಸಮೂಹ ಬೆಳವಣಿಗೆಯನ್ನು ಕಾಣಬಹುದು. ಇದರಿಂದ ಒಂದು ಸಂಸ್ಥೆ ಹಾಗೂ ಸಂಘದ ಬೆಳವಣಿಗೆಯನ್ನು ಮಾಡಿ ಸಂಪನ್ಮೂಲಗಳ ಸರಿಯಾದ ಪ್ರಯೋಜನವನ್ನು ಪಡೆಯುವುದಾಗಿದೆ.[೨೭] ಈ ರೀತಿಯಾಗಿ ವರ್ಲ್ಡ್ ಬ್ಯಾಂಕು(೨೦೦೧)ವರದಿಯ ಪ್ರಕಾರ ಯಾವ ಸಮಾಜದಲ್ಲಿ ಲಿಂಗ ತಾರತಮ್ಯ

ವಿರುತ್ತದೆಯೋ ಆ ಸಮಾಜದ ಬೆಳವಣಿಗೆಯು ಅಸಾಧ್ಯ, ಅಲ್ಲಿ ಅತಿಯಾದ ಬಡತನ, ಮಂದಗತಿಯ ಆರ್ಥಿಕ ಬೆಳವಣಿಗೆ ಹಾಗೂ ಕೆಳಮಟ್ಟದ ಜೀವನಶೈಲಿಯನ್ನು ಕಾಣಬಹುದು. ವರ್ಲ್ಡ್‌ಬ್ಯಾಂಕು ಮಹಿಳಾ ಸಬಲೀಕರಣದ ಬಗ್ಗೆ ನಾಲ್ಕು ಪ್ರಮುಖ ಅಂಶಗಳನ್ನು ಗಮನಿಸಿದೆ. ಇದರಿಂದ ಸಂಸ್ಥೆಯ ಸುಧಾರಣೆಯ ಬಗ್ಗೆ ಯೋಜನೆಯನ್ನು ರೂಪಿಸಿದೆ; ಮಾಹಿತಿಯ ತಲುಪುವಿಕೆ; ಸೇರ್ಪಡೆ ಮತ್ತು ಭಾಗವಹಿಸುವಿಕೆ; ಲೆಕ್ಕಾಚಾರ ಹಾಗೂ ಸ್ಥಳೀಯ ಸಂಸ್ಥೆಗಳ ಸಾಮರ್ಥ್ಯ.[೨೮]

ಸಬಲೀಕರಣದ ಪರಿಕಲ್ಪನೆಯು ಸಾಮಾಜಿಕ ಬಂಡವಾಳ ಹಾಗೂ ಸಮುದಾಯ ಅಭಿವೃದ್ಧಿಯ ಮಧ್ಯೆ ಗೊಂದಲಮಯವಾಗಿದೆ. ಕೃಷ್ಣಾ(೨೦೦೩)ಅವರ ಪ್ರಕಾರ ಸಬಲೀಕರಣವೆಂದರೆ ವ್ಯಕ್ತಿಯ ಸಾಮರ್ಥ್ಯವನ್ನು ಹೆಚ್ಚಿಸುವುದಲ್ಲವೇ ಅಥವಾ ಗುಂಪುಗಳ ಬೆಳವಣಿಗೆಯನ್ನು ಮಾಡಿ ಸ್ವ-ನಿರ್ಧಾರಗಳಿಗೆ ಅವಕಾಶ ನೀಡಿ, ಇದರಿಂದ ಉತ್ತಮ ಕಾರ್ಯಗಳಾಗಿ ಉತ್ತಮ ಫಲಿತಾಂಶಗಳು ಹೊರ ಹೊಮ್ಮುವುದಾಗಿದೆ. ಇದು ಒಂದು ಹಂತ ಅಥವಾ ಬೆಳವಣಿಗೆ. ಸಾಮಾಜಿಕ ಸಂಸ್ಥೆಯ ಗುಣಲಕ್ಷಣಗಳೆಂದರೆ, ಸಾಮಾಜಿಕ ಬಂಡವಾಳದಿಂದ ಒಂದು ಸಾಮಾಜಿಕ ಸಂಬಂಧಗಳನ್ನು ಸೃಷ್ಟಿಸಿ, ಕಟ್ಟಳೆ ಹಾಗೂ ಪರಸ್ಪರ ನಂಬಿಕೆಗಳನ್ನು ಹೆಚ್ಚಿಸಿ ಇದರಿಂದ ಸಹಕಾರ ಉಂಟಾಗಿ ಪರಸ್ಪರ ಉಪಯೋಗಗಳನ್ನು ಪಡೆದುಕೊಳ್ಳುವುದು. ಸ್ವಾಭಾವಿಕವಾಗಿ ಇದು ಒಂದು ವಿಧಾನ ಅಥವಾ ಹುಟ್ಟುವಳಿ. ಸಾಮಾಜಿಕ ಬಂಡವಾಳದ ಬಗ್ಗೆ ಹೇಳುವುದಾದರೆ ಇದೊಂದು ಸಾಮಾಜಿಕ ಸಂಘಟನೆಯ ವ್ಯವಸ್ಥೆಯ ಜೋಡಣೆ, ಆದರ್ಶ ಹಾಗೂ ಪರಸ್ಪರ ನಂಬಿಕೆ ಮತ್ತು ಇದರಿಂದ ಪರಸ್ಪರ ಸಹಕಾರ ಹಾಗೂ ಅನ್ಯೋನ್ಯತೆಯಿಂದ ಪರಸ್ಪರ ಆದಾಯವನ್ನು ಪಡೆಯಬಹುದು. ಸ್ವಾಭಾವಿಕವಾಗಿ ಇದೊಂದು ಬಂಡವಾಳ ಹೂಡಿಕೆ. ಅಂದರೆ ಕೆಲವು ಉದ್ದಿಮೆಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅದರ ಸಂಪನ್ಮೂಲಗಳನ್ನು ಬಳಸಿಕೊಂಡು ನಿರ್ಧಾರಗಳಿಂದ ಸಮುದಾಯವನ್ನು ಬೆಳವಣಿಗೆಯತ್ತ ಮುನ್ನಡೆಸುವುದು. ಇದೊಂದು ಕಾರ್ಯಪರ ಚಟುವಟಿಕೆ ಎಂದೆನ್ನಬಹುದು. ಇದೆಲ್ಲದರ ಅನ್ವಯದ ಮೇಲೆ ಗ್ರೂಟ್‌ಪಾರ್ಟ್ ಅವರ ಪ್ರಕಾರ ಸಾಮಾಜಿಕ ಬಂಡವಾಳದ ಶೇಖರಣೆಯಿಂದ ಸಬಲೀಕರಣದ ಸಾಧ್ಯತೆ ಹಾಗೂ ಸಾಮಾಜಿಕ ಬಂಡವಾಳ ಮತ್ತು ಸಬಲೀಕರಣ ಎರಡೂ ಬಹು ಅರ್ಥವುಳ್ಳ ಪರಿಕಲ್ಪನೆಯಾಗಿದ್ದು, ಇವೆರಡರಿಂದ ಬಡತನವನ್ನು ಕಡಿಮೆಗೊಳಿಸುವುದು ಹಾಗೂ ಸಮುದಾಯವನ್ನು ಬೆಳವಣಿಗೆಯತ್ತ ಮುನ್ನಡೆಸುವ ಕಾರ್ಯಕ್ರಮದಲ್ಲಿ ಸಾಮಾಜಿಕ ಬಂಡವಾಳಕ್ಕೆ ಹಾಗೂ ಸಬಲೀಕರಣಕ್ಕೆ ಮಹತ್ವವನ್ನು ನೀಡಿದೆ. ಕೃಷ್ಣಾ(೨೦೦೩) ಅವರು ಈ ಮೂರು ಪರಿಕಲ್ಪನೆಗಳನ್ನು ಬೇರ್ಪಡಿಸಿ ನೋಡಬೇಕು ಎಂದು ಹೇಳಿದ್ದಾರೆ. ಸಾಮಾಜಿಕ ಬಂಡವಾಳ ಶೇಖರಣೆಯಲ್ಲಿ ಸಮುದಾಯದ ಸದಸ್ಯತ್ವವನ್ನು ಒಗ್ಗೂಡಿಸಲು ಪ್ರಯತ್ನವನ್ನು ನಡೆಸಬೇಕು. ಸಮುದಾಯವನ್ನು ಬೆಳವಣಿಗೆಯತ್ತ ಮುನ್ನಡೆಸುವ ಈ ಕಾರ್ಯಕ್ರಮವು ಮಹತ್ವವನ್ನು ಪೂರಕವಾದ ಸಂಪನ್ಮೂಲಗಳಿಗೆ ಹಾಗೂ ಈ ಸಮುದಾಯವನ್ನು ಮುನ್ನಡೆಸುವ

ಅಧಿಕಾರಿಗಳಿಗೆ ನೀಡಿದೆ. ಆಡಳಿತವನ್ನು ಬಲಪಡಿಸಿದಾಗ ಮಾತ್ರ ವ್ಯಕ್ತಿಯ ಹಾಗೂ ಸಮುದಾಯ ಬೆಳವಣಿಗೆಯಾಗಲು ಸಾಧ್ಯ.

ಕಬೀರ್(೧೯೯೯) ಅವರ ಪ್ರಕಾರ ಮಹಿಳಾ ಸಬಲೀಕರಣವೆಂದರೆ ಯಾವ ಮಹಿಳೆಗೆ ಒಂದು ಶಿಸ್ತುಬದ್ಧವಾದ ಆಯ್ಕೆಯನ್ನು ಮಾಡಲು ಜೀವನದಲ್ಲಿ ಅವಕಾಶವಿರುದಿಲ್ಲವೊ ಅಂತಹ ಮಹಿಳೆ ತನ್ನ ಸಾಮರ್ಥ್ಯದಿಂದ ಜೀವನದಲ್ಲಿ ಆಯ್ಕೆಯನ್ನು ಮಾಡಲು, ಬೆಳೆಯಲು ಇದೊಂದು ವೇದಿಕೆ. ಕಬೀರ್‌ನ ಪ್ರಕಾರ ಆಯ್ಕೆಯ ಸಾಮರ್ಥ್ಯವು ಮೂರು ಪರಸ್ಪರ ಹೊಂದಾಣಿಕೆಯ ದೃಷ್ಟಿಕೋನದಿಂದ ಕೂಡಿದೆ. ಸಂಪನ್ಮೂಲಗಳು ಕಾರ್ಯಕರ್ತರ ಮಾಧ್ಯಮ ಹಾಗೂ ಸಾಧನೆ. ಕಬೀರ್ ಬಲವಾಗಿ ಹೇಳುವುದೇನೆಂದರೆ ಸಂಪನ್ಮೂಲಗಳು ಹಾಗೂ ವ್ಯಕ್ತಿ ಎರಡೂ ಸೇರಿದಾಗ ಸಾಮರ್ಥ್ಯವು ಹೊರಬರುತ್ತದೆ. ಜೀವನವನ್ನು ನಡೆಸಲು ಮನುಷ್ಯನಿಗಿರುವ ಸಾಮರ್ಥ್ಯ ಅವನು ಮಾಡುವ ಚಟುವಟಿಕೆಗಳು ಹಾಗೂ ಕಾರ್ಯಗಳನ್ನು ಅವಲಂಬಿಸಿರುತ್ತದೆ. ಜೀವನದಲ್ಲಿ ಅವನು ಸಾಧನೆಯ ಮಾರ್ಗವನ್ನು ತಲುಪಲು ನಡೆ ಹಾಗೂ ನುಡಿಯಲ್ಲಿ ವ್ಯತ್ಯಾಸವಾಗಬಾರದು. ಈ ವಿಷಯದಲ್ಲಿ ಅವನು ಅನುತ್ತೀರ್ಣನಾದರೆ ಅದಕ್ಕೆ ಕಾರಣ ಸೋಮಾರಿತನ, ಸ್ವರ್ಧಾತ್ಮಕ ಮನೋಭಾವದ ಕೊರತೆ, ಅದ್ಯತೆಗಳು ಹೀಗಿದ್ದಾಗ ಇಲ್ಲಿ ಸಾಮರ್ಥ್ಯದ ಪ್ರಶ್ನೆ ಸೂಕ್ತವೆನಿಸುವುದಿಲ್ಲ. ಗುರಿಯನ್ನು ತಲುಪಲು ಯಶಸ್ವಿಯಾಗದಿದ್ದಾಗ ಮಾತ್ರ ಸಾಮರ್ಥ್ಯದ ಪ್ರಶ್ನೆ ಉದ್ಭವವಾಗಿ ಅಸಬಲೀಕರಣಕ್ಕೆ ಇದನ್ನು ಕಾರಣವಾಗಿ ಪರಿಗಣಿಸಬೇಕಾಗುತ್ತದೆ.[೨೯]

ಇಲ್ಲಿ ಇನ್ನೊಂದು ಪ್ರಶ್ನೆಯನ್ನು ಪರಿಗಣಿಸಬೇಕಾಗುತ್ತದೆ. ಅದೇನೆಂದರೆ ಸಬಲೀಕರಣದ ಪರಿಕಲ್ಪನೆಯು ಭೌಗೋಳಿಕ ಹಿನ್ನೆಲೆಯನ್ನು ಹೊರತುಪಡಿಸಿ ಸಾರ್ವತ್ರಿಕ ಪರಿಕಲ್ಪನೆಯಾಗಿ ನೋಡಲಾಗುತ್ತಿದೆ. ಇಲ್ಲಿ ಮೊಹಾಂತಿ(೧೯೯೧) ಅವರು ವಿಮರ್ಶೆ ಮಾಡುವುದೇನೆಂದರೆ, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿರುವ ಮಹಿಳೆಯರ ಮೇಲಿನ ಊಹೆಗಳನ್ನು ಅಲ್ಲಗಳೆಯುತ್ತಾರೆ. ಕಾರಣ ಮಹಿಳೆಯರ ಆಸೆ ಆಕಾಂಕ್ಷೆಗಳು ಹಾಗೂ ಉದ್ಯೋಗದ ಅವಶ್ಯಕತೆಗಳು ಜಗತ್ತಿನೆಲ್ಲೆಡೆಯೂ ಒಂದೇ ರೀತಿಯಾಗಿರುತ್ತದೆ. ಇಲ್ಲಿ ಸಾಮಾಜಿಕ ಸಂಬಂಧಗಳು ಹಾಗೂ ಸಂಸ್ಥೆಗಳನ್ನು ಹೊರತುಪಡಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಭಾರತದಲ್ಲಿ ಮಹಿಳೆಯರು ಸಮಾಜದಲ್ಲಿ ಕೇವಲ ಬಡವರ್ಗಗಳಲ್ಲಿ ಮಾತ್ರ ಕಂಡುಬರುವುದಲ್ಲದೇ. ಇವರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದಲ್ಲಿರುವುದು ಮಾತ್ರವಲ್ಲದೇ ಯಾವುದೇ ರೀತಿಯಾದ ವಿದ್ಯಾಭ್ಯಾಸ, ಹಣಕಾಸಿನ ಸಹಾಯವಿಲ್ಲದೇ ಮೂಲಭೂತ ಸೌಕರ್ಯಗಳಿಂದ ವಂಚಿತರಾಗುತ್ತಿದ್ದಾರೆ. ಪ್ರಮುಖವಾಗಿ ಇವರಿಗೆ ಯಾವುದೇ ಆರೋಗ್ಯ ಸೇವೆಯು ತಲುಪುತ್ತಿಲ್ಲ. ಆ್ಯಂಡ್ರೆ ಬ್ರಿಟಲ್ (೧೯೯೯) ಅವರ ಪ್ರಕಾರ, ನಾವು ಸಮಾಜವನ್ನು ವಿಶ್ಲೇಷಿಸಿದಾಗ ನಾವು ಭಾರತದ ರಾಜಕೀಯ ವ್ಯವಸ್ಥೆಯನ್ನು, ಸಾಮಾಜಿಕ ಕ್ರಮಬದ್ಧತೆಯ ವ್ಯವಸ್ಥೆಯನ್ನು ಕಾಣಬಹುದು. ಆದಕಾರಣ ಭಾರತದಲ್ಲಿ ಆರ್ಥಿಕ ಹಾಗೂ

ಸಾಮಾಜಿಕ ಅಸಮಾನತೆಯು ನಮ್ಮ ಸಂಪ್ರದಾಯ ಹಾಗೂ ಸಂಸ್ಕೃತಿಯ ಆದರ್ಶಗಳಲ್ಲೇ ಬೇರೂರಿದೆ. ಇದೆಲ್ಲವನ್ನು ನಾವು ಬದಲಾಯಿಸಿದಾಗ ಮಾತ್ರ ಸಬಲೀಕರಣದ ಸಾಧ್ಯವಾಗುತ್ತದೆ.[೩೦]

ಭಾರತದ ಸಂವಿಧಾನ ಪೂರ್ವಪ್ರಸ್ತಾವನೆಯಲ್ಲಿ ಭಾರತದ ಎಲ್ಲಾ ನಾಗರೀಕನಿಗೂ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಸಮಾನ ಸ್ಥಾನಮಾನವನ್ನು ನೀಡುವುದಾಗಿ ಹೇಳಲಾಗಿದೆ. ಸಂವಿಧಾನದ ಅನೇಕ ಹಕ್ಕುಗಳನ್ನು ರಕ್ಷಿಸುವ ಉದ್ದೇಶದಿಂದ ರಾಜ್ಯವು ಮಹಿಳೆಗೆ ಸಂಬಂಧಿಸಿದ ಅನೇಕ ಶಾಸನಗಳನ್ನು ರೂಪಿಸಿದೆ.

ವಿಶ್ವಮಾನವ ಹಕ್ಕುಗಳ ಘೋಷಣೆಯು ೧೯೪೮ರಲ್ಲಿ ಮಹಿಳೆ ಮತ್ತು ಪುರುಷನ ಸಮಾನ ಹಕ್ಕುಗಳನ್ನು ದಯವಾಲಿಸಿದೆ.

೧. ವಿಶ್ವಸಂಸ್ಥೆಯು ೧೯೭೯ನೇ ವರ್ಷವನ್ನು ಅಂತರರಾಷ್ಟ್ರೀಯ ಮಹಿಳಾ ದೌರ್ಜನ್ಯ ನಿರ್ಮೂಲನಾ ವರ್ಷವನ್ನಾಗಿ ಘೋಷಿಸಿದೆ.
೨. ನಾಲ್ಕನೇ ವಿಶ್ವ ಮಹಿಳಾ ಸಮ್ಮೇಳನ ೧೯೯೫ರಲ್ಲಿ ಸಾಮೂಹಿಕವಾಗಿ ಪುರುಷ ಮಹಿಳೆಯ ತಾರತಮ್ಯ ನಿರ್ಮೂಲನಾತತ್ವ ನಿರೂಪಿಸಿ, ೨೦೦೧ನೇಯ ಇಸವಿಯನ್ನು ಮಹಿಳಾ ಸಬಲೀಕರಣದ ವರ್ಷವೆಂದು ಆಚರಿಸಿತು.
೩. ೨೦೧೩ರನ್ನು ಮಹಿಳಾ ಸುರಕ್ಷತಾ ವರ್ಷವೆಂದು ಭಾರತ ಸರ್ಕಾರ ಘೋಷಣೆ ಮಾಡಿದೆ.

೨೦೦೧ನೇ ವರ್ಷದ ರಾಷ್ಟ್ರೀಯ ಮಹಿಳಾ ಸಬಲೀಕರಣ ನಿಯಮವು ಒಂದು ಪ್ರಮುಖ ದಾಖಲೆಯಾಗಿದ್ದು, ಮಹಿಳೆಯ ಸ್ಥಾನವನ್ನು ಉನ್ನತೀಕರಿಸಲು ಧನಾತ್ಮಕವಾದ ಹಂತಗಳನ್ನು ಅನ್ವಯಿಸಿಕೊಂಡಿತು. ಸಬಲೀಕರಣವೆಂಬುದು ವಿಸ್ತೃತವಾದ ಪದವಾಗಿದ್ದು, ಮಹಿಳೆಗೆ ಸಮಾಜಿಕವಾಗಿ ಹಾಗೂ ತನ್ನ ಸಂಸಾರದ ವ್ಯಾಪ್ತಿಯಲ್ಲಿ ಮೂಲಭೂತ ಅಧಿಕಾರವನ್ನು ಪುನರ್ ಹಂಚುವುದಾಗಿದೆ. ಈ ರೀತಿಯಾದ ಅನೇಕ ಅಂಶಗಳು ಹಾಗೂ ಪರಿಣಾಮಕಾರಿಯಾದ ಸಹಭಾಗಿತ್ವವನ್ನು ಮಹಿಳೆಗೆ ಕೊಡುವುದರಿಂದಾಗಿ ಆಕೆಗೆ ನಾಯಕತ್ವ ತಂದುಕೊಡುವ ಮೂಲಕ ಸಬಲೀಕರಣ ಸಾಧ್ಯವಾಗುವುದು.

ಮಹಿಳೆಯು ಸಾರ್ವಜನಿಕ ವಲಯದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಿರುವುದಕ್ಕೆ ಸುದೀರ್ಘ ಇತಿಹಾಸವಿದೆ. ಇವರು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅದರಲ್ಲೂ ವಿಶೇಷವಾಗಿ ಅಸಹಕಾರ ಚಳುವಳಿ ಹಾಗೂ ಉಪ್ಪಿನ ಸತ್ಯಾಗ್ರಹದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಹಾಗೆಯೇ ತಮ್ಮನ್ನು ಗುರುತಿಸಿಕೊಳ್ಳುವ ಸಲುವಾಗಿ ಮತಚಲಾಯಿಸುವ ಹಕ್ಕನ್ನು ಪಡೆಯಲು ಹೋರಾಟ ನಡೆಸಬೇಕಾಯಿತು. ಅಲ್ಲದೆ ಆಡಳಿತ ವಿಭಾಗದಲ್ಲೂ ತಮ್ಮನ್ನು ಗುರುತಿಸಿಕೊಳ್ಳಲು ಹೋರಾಡಬೇಕಾಗಿರುವುದನ್ನು ಕಾಣಬಹುದಾಗಿದೆ. ಆದರೂ ನಮ್ಮ ಕಾನೂನು ನಿರೂಪಕ ವಲಯ. ಚುನಾವಣೆಯಲ್ಲಿನ ಸ್ಪರ್ಧೆ. ಮತದಾರವರ್ಗ. ಮಹಿಳೆಗಿಂತ ಪುರುಷ ಪ್ರದಾನವಾಗಿತ್ತು. ಇದು ಒಂದು ರೀತಿ ನಮ್ಮ ದೇಶದ ಭೂಮಿ ಮತ್ತು ನೀರಿನ ಅನುಪಾತದಲ್ಲಿದೆ.[೩೧]

ಈ ನಿಟ್ಟಿನಲ್ಲಿ ಮಹಿಳಾ ಸಬಲೀಕರಣವನ್ನು ನಿಸರ್ಗದ ಸಬಲೀಕರಣ ಇದರ ನಡುವೆ ಬೇಧ ಮಾಡಲಾಗುವುದಿಲ್ಲ. ಹಾಗಾಗಿ ದುರ್ಬಲ ವರ್ಗದ ಸಬಲೀಕಣವು ಶಾಂತಿ ಚಳುವಳಿ, ಪರಿಸರ ಚಳುವಳಿ, ಕತರ್ವ್ಯನಿರತ ಚಳುವಳಿ, ಮಾನವ ಹಕ್ಕು ಚಳುವಳಿ, ಪ್ರಜಾಶಕ್ತೀರಣ ಚಳುವಳಿ, ಸಾಮಾಜಿಕ ವಿಕೇಂದ್ರಿಕರಣ ಚಳುವಳಿಗಳೊಂದಿಗೆ ಬೆಸೆದುಕೊಂಡಿದೆ.

ಅಭಿವೃದ್ಧಿಶೀಲ ರಾಷ್ಟ್ರವಾದ ಭಾರತದಲ್ಲಂತೂ ಮಹಿಳೆಯನ್ನು ಪುರುಷ ಬಂಧನದಿಂದ ಮುಕ್ತಿಗೊಳಿಸುವುದು ಅತ್ಯಂತ ಅವಶ್ಯಕವಾದುದಾಗಿದೆ. ಅದರೂ ಮಹಿಳಾ ಸಬಲೀಕರಣವೆಂಬುದು ಪ್ರಸ್ತುತ ಸಾಮಾಜಿಕ, ಆರ್ಥಿಕ ಸನ್ನಿವೇಶದಲ್ಲಿ ಮಿಥ್ಯ ಸಾಧನೆ ಎನ್ನಬಹುದಾಗಿದೆ. ಕಾರಣ ಅಲ್ಲಿ ನಾವು ಸಬಲೀಕರಣಕ್ಕೆ ಬೇಕಾದ ಸಾಂಘಿಕವಾದ ಪ್ರಯತ್ನದ ಕೊರತೆಯನ್ನು ಕಾಣಬಹುದಾಗಿದೆ.

೧೯೬೦ರಿಂದ೭೦ರ ಅವಧಿಯಲ್ಲಿ ಕೈಗೊಳ್ಳಲಾದ ಅನೇಕ ನಿಯಮಗಳು ಹಾಗೂ ಯೋಜನೆಗಳು ಭಾರತದಲ್ಲಿ ಮಹಿಳಾ ಸಬಲೀಕರಣವನ್ನು ಯಶಸ್ವಿಗೊಳಿಸಲಿಲ್ಲ. ಮೊದಲನೆಯ ಹಂತದಲ್ಲಿ ಮಹಿಳೆಯನ್ನು ಸಬಲೀಕರಿಸಬೇಕಾದರೆ ತಳಮಟ್ಟದಲ್ಲಿ ಮಹಿಳಾ ಮಂಡಲಗಳನ್ನು ರಚಿಸಿ ಮಹಿಳೆಯರನ್ನು ಸಂಘಟಿತರನ್ನಾಗಿಸಬೇಕಾಗಿದೆ. ಈ ಮೂಲಕ ಮಹಿಳೆಯರು ತಮ್ಮ ಗೃಹ ನಿರ್ವಹಣಾ ಕೌಶಲ್ಯತೆ ರೂಢಿಸಿಕೊಳ್ಳುವುದು, ದರ್ಜೆ ಕೆಲಸ, ಮಕ್ಕಳ ನಿರ್ವಹಣೆಯಂತಹ ನೈಪುಣ್ಯತೆಯನ್ನು ರೂಢಿಸಿಕೊಳ್ಳುವ ಉದ್ದೇಶವನ್ನು ಹೊಂದಿದೆ.

ಅನಂತರದಲ್ಲಿ ಮಹಿಳೆಗೆ ಶಿಕ್ಷಣ ನೀಡುವ ಮೂಲಕ ಬಡ ಹೆಣ್ಣುಮಕ್ಕಳು ಆರೋಗ್ಯಯುತವಾಗಿ ಇರಲು ಅನುಕೂಲವಾಗುವಂತೆ ಮಾಡುವುದಾಗಿದೆ. ಹಾಗೆಯೇ ಮಹಿಳೆಯನ್ನು ಸಾಲಯೋಜನೆ, ವಸತಿ ಯೋಜನೆಯ ಫಲಾನುಭವಿಯನ್ನಾಗಿ ಮಾಡಿ ಈ ಮೂಲಕ ಮಹಿಳೆಯರ ಗ್ರಾಮೀಣ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವಂತಾಗುತ್ತದೆ. ೧೯೮೦ರ ಪರಿಸರ ನಿಯಮದಲ್ಲಿ ಮಹಿಳೆಗೆ ಸಂಬಂಧಿಸಿದ ಶಿಕ್ಷಣ ನಿಯಮ, ಪೋಷಕಾಂಶಗಳ ನಿಯಮ ಹಾಗೂ ಅನೇಕ ತಿದ್ದುಪಡಿಗಳ ಮೂಲಕ ಮಹಿಳೆಗೆ ಅನುಕೂಲ ಕಲ್ಪಿಸಿಕೊಡಲಾಗಿದೆ. ಹಾಗೆಯೇ ಮಹಿಳಾ ನೈಪುಣ್ಯತೆ ಹಾಗೂ ಸಾಲಯೋಜನೆಗಳು ಆಕೆಯನ್ನು ಸಣ್ಣ ಓಡುವಳಿದಾರಳನ್ನಾಗಿ ಮಾಡಿದ್ದರಿಂದಾಗಿ ಬಡ ಮಹಿಳೆಯರು ಸಹ ಸಬಲರಾಗುವಂತಾಗಿದೆ.

೧. ಮಹಿಳಾ ಮುಖ್ಯ ಯೋಜನೆಯನ್ನು ಜಾರಿಗೊಳಿಸಿ ಆ ಮೂಲಕ ಶಿಕ್ಷಣದ ಅರಿವು ಮೂಡಿಸುವುದು, ಆರ್ಥಿಕ ಸದೃಢತೆಯನ್ನು ತಂದುಕೊಡುವುದು, ಆರೋಗ್ಯ ಮತ್ತು ಪೋಷಕಾಂಶಗಳ ಅರಿವು ಮೂಡಿಸುವುದು, ರಾಜಕೀಯದಲ್ಲಿ ಹಾಗೂ ಕಾನೂನಿನ ಇನ್ನಿತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದಾಗಿದೆ.[೩೨]
೨. ಮಹಿಳಾ ಚಳುವಳಿಗಳ ಮೂಲಕ ಸಬಲೀಕರಣದ ಅರಿವು ಮೂಡುವಂತೆ ಮಾಡುವುದು. ಅನ್ಯಾಯವನ್ನು ವಿರೋಧಿಸುವುದು. ಸಂಘಟನಾತ್ಮಕವಾಗಿ ಮಹಿಳಾ ಹಕ್ಕುಗಳನ್ನು ರಕ್ಷಿಸಿಕೊಂಡು ತಮ್ಮೊಳಗಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು.

೩. ನಿರ್ಣಯ ಕೈಗೊಳ್ಳುವಲ್ಲಿ ಮಹಿಳೆಯರಿಗೆ ಅವಕಾಶ ನೀಡಿ ಶೇಕಡಾ ೫೦ರಷ್ಟು ಮೀಸಲಾತಿಯನ್ನು ನೀಡಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಬಲತೆ ಸಾಧಿಸುವುದು.

ಸಮಾಜದಲ್ಲಿ ಮಹಿಳೆಯು ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತಿದ್ದಾಳೆ. ಮನೆಗೆಲಸಗಳನ್ನು ಮಾಡುವುದಕ್ಕಿಂತ ಹೊರತಾಗಿ ಮಹಿಳೆಯು ಅನೇಕ ಆರ್ಥಿಕ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಆದಾಗ್ಯೂ ಆಕೆಯ ಕೊಡುಗೆಗಳನ್ನು ಗುರುತಿಸಲಾಗಿಲ್ಲ. ಅವರು ಶಿಕ್ಷಣದಿಂದ, ಆರೋಗ್ಯದಿಂದ, ವಿವಾಹದಿಂದ, ರಾಜಕೀಯ ಕ್ಷೇತ್ರದಿಂದ ಇನ್ನು ಮುಂತಾದ ಕ್ಷೇತ್ರಗಳಿಂದ ಸೌಲಭ್ಯ ವಂಚಿತರಾಗಿ ತಾರತಮ್ಯತೆ ಅನುಭವಿಸುತ್ತಿದ್ದಾರೆ. ಹೀಗಿದ್ದಾಗ್ಯೂ ವಿಶ್ವಮಟ್ಟದಲ್ಲಿ ಲಿಂಗ ತಾರತಮ್ಯತೆಯ ವಿರುದ್ಧ ಚಳುವಳಿಗಳು ಪ್ರಾರಂಭಗೊಂಡಿವೆ. ಈ ಸಂದರ್ಭ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನಿಯಮಗಳು ಮಹಿಳಾ ಸಬಲೀಕರಣವನ್ನು ಪ್ರತಿಪಾದಿಸುತ್ತವೆ. ಮಹಿಳಾ ಸಬಲೀಕರಣವೆಂಬುದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಭಿವೃದ್ಧಿಯನ್ನು ಹೊಂದಬೇಕಾದುದು ಮೂಲಭೂತ ಅಗತ್ಯ ಅಂಶಗಳಲ್ಲೊಂದಾಗಿದೆ. ಅಲ್ಲದೆ ಸ್ವಾತಂತ್ರ್ಯ ನಂತರ ಮಹಿಳಾ ತಾರತಮ್ಯ ವಿರೋಧಿಯಾದ ಅನೇಕ ನಿಯಮಗಳನ್ನು ಹಾಗೂ ಅನೇಕ ಯೋಜನೆಗಳನ್ನು ಹೊಂದಿ ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಲಾಗುತ್ತಿದೆ.[೩೩]

ಮಹಿಳಾ ಸಬಲೀಕರಣಕ್ಕಾಗಿ ಅಂತರಾಷ್ಟ್ರೀಯ ಪ್ರಯತ್ನ

ವಿಶ್ವಸಂಸ್ಥೆಯ ಕರೆಯ ಮೇರೆಗೆ ೧೯೭೫ರಲ್ಲಿ ಅಂತರಾಷ್ಟ್ರೀಯ ಮಹಿಳಾ ವರ್ಷವನ್ನು ವಿಶ್ವದೆಲ್ಲೆಡೆ ಆಚರಿಸಲಾಯಿತು. ಲಿಂಗ ಸಮಾನತೆ ಮೂಲಭೂತ ಹಕ್ಕೆಂದು ಘೋಷಿಸಿತು. ಮಹಿಳಾ ದಿನದ ಆಚರಣೆಯ ಸಂದರ್ಭದಲ್ಲಿ ಹಲವಾರು ರಾಷ್ಟ್ರಗಳು ಮಹಿಳೆಯರಿಗೋಸ್ಕರ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಲಾಯಿತು. ಇದಾದ ನಂತರ ನಾಲ್ಕು ವಿಶ್ವಸಮ್ಮೇಳನಗಳು ನಡೆದವು. ಈ ಸಮ್ಮೇಳನಗಳು ವಿಶ್ವದ ಮಹಿಳೆಯರ ಸಬಲೀಕರಣಕ್ಕೆ ಪ್ರಮುಖವಾದ ಕೊಡುಗೆಯನ್ನು ನೀಡಿವೆ.

ಮೊದಲನೆಯ ವಿಶ್ವಸಮ್ಮೇಳನವು ೧೯೭೫ ಜೂನ್ ೧೯ರಲ್ಲಿ ಮೆಕ್ಸಿಕೋ ನಗರದಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ತಮ್ಮ ತಮ್ಮ ದೇಶದ ಮಹಿಳೆಯರ ಸ್ಥಾನಮಾನವನ್ನು ಕುರಿತು ಪ್ರಸ್ತುತ ಪಡಿಸಲು ಅನೇಕ ರಾಷ್ಟ್ರಗಳು ಮಾಹಿತಿ ಸಂಗ್ರಹಿಸಿದವು. ಸಮಾನತೆ, ಅಭಿವೃದ್ಧಿ ಹಾಗೂ ಶಾಂತಿಯನ್ನು ಸಾಧಿಸುವ ಗುರಿಯನ್ನು ಹೊಂದಿತ್ತು. ಈ ಸಮ್ಮೇಳನದಲ್ಲಿ ಭಾಗವಹಿಸಿದ ರಾಷ್ಟ್ರಗಳು ವರ್ಲ್ಡ್ ಪ್ಲಾನ್ ಆಫ್ ಯಾಕ್ಷನ್ (World plan of Action) ಅನ್ನು ಅಳವಡಿಸಿಕೊಂಡವು. ಸ್ತ್ರೀ-ಪುರುಷರ ನಡುವೆ ಸಮಾನತೆ ಸಾಧಿಸಲು ಮಹಿಳೆಯರ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವುದು. ತರಬೇತಿಗಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆಕೊಡುವುದು. ರಾಜಕೀಯದಲ್ಲಿ ಭಾಗವಹಿಸಲು ಅವಕಾಶ ದೊರೆಯುವಂತೆ ಮಾಡುವುದು. ಉದ್ಯೋಗಾವಕಾಶಗಳನ್ನು ಮಹಿಳೆಯರಿಗೆ ದೊರಕುವಂತೆ ಮಾಡುವುದು. ಮಹಿಳೆಯರ ಆರೋಗ್ಯವನ್ನು

ಉತ್ತಮಪಡಿಸಲು ಗಮನ ಕೊಡುವುದು, ಸಾಮಾಜಿಕ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು, ವೇತನ ರಹಿತ ದುಡಿಮೆಯನ್ನು ಗುರುತಿಸಿ ಮೌಲ್ಯೀಕರಣ ಮಾಡಬೇಕೆಂದು ಹಾಗೂ ಸರ್ಕಾರಗಳು ಮಹಿಳಾ ವಿಷಯಗಳನ್ನು ನಿರ್ವಹಣೆ ಮಾಡಲು ಘಟಕ ಮತ್ತು ಸಂಸ್ಥೆಗಳನ್ನು ಸ್ಥಾಪಿಸಲು ಈ ಯೋಜನೆ ಶಿಫಾರಸ್ಸು ಮಾಡಿತು. ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸಲು ಸರ್ಕಾರೇತರ ಸಂಸ್ಥೆಗಳ ಅಗತ್ಯವಿದೆ ಎಂಬುದನ್ನು ಮನಗಂಡಿತು.

೧೯೭೬ರಲ್ಲಿ ಸರ್ಕಾರಗಳ ಮೂಲಕ ಮಹಿಳಾ ಸಂಘಟನೆಗಳಿಗೆ ಹಣಕಾಸಿನ ನೆರವನ್ನು ನೀಡಲು ಆರು ಹಣಕಾಸಿನ ದಶಕದ ಯೋಜನೆಗಳನ್ನು (Financial decade projects) ಜಾರಿಗೆ ತರಲಾಯಿತು.[೩೪] ನಂತರ ಇದನ್ನು ಮಹಿಳೆಯರಿಗಾಗಿ ವಿಶ್ವಸಂಸ್ಥೆ ಅಭಿವೃದ್ಧಿ ನಿಧಿ (United Nations development fund for women, (Unifem) ಎಂದು ಕರೆಯಲಾಯಿತು. ಇದರ ಜೊತೆಗೆ ಮಹಿಳೆಯರ ಅಭ್ಯುದಯಕ್ಕಾಗಿ ಅಂತರಾಷ್ಟ್ರೀಯ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (International Research and trining Instititnte for the Advancement of women, INSTRAW) ಕೂಡ ಸ್ಥಾಪನೆಗೊಂಡಿತು. ಮಹಿಳೆಯರು ಎದುರಿಸುತ್ತಿರುವ ತಾರತಮ್ಯಗಳನ್ನು ಕೊನೆಗಾಣಿಸಲು ಮಹಿಳೆಯರ ಮೇಲಿನ ಎಲ್ಲಾ ರೀತಿಯ ತಾರತಮ್ಯಗಳನ್ನು ತೊಡೆದು ಹಾಕುವ ವಿಶ್ವಸಂಸ್ಥೆಯ ಒಡಂಬಡಿಕೆ ೧೯೭೯ (UN convention of the Elininiation of all Forms of descriminatio against women ೧೯೭೯) ಮತ್ತು ಇತರ ಕಾನೂನು ರೀತ್ಯ ಪರಿಹಾರಗಳನ್ನು ಕೂಡ ಒದಗಿಸಲಾಯಿತು.

ಈ ಅಂತರಾಷ್ಟ್ರೀಯ ಸಮ್ಮೇಳನ ಡೆನ್ಮಾರ್ಕಿನ ಕೋಪನ್ ಹೇಗ್‌ನಲ್ಲಿ ೧೯೮೦ರಲ್ಲಿ ನಡೆಯಿತು. 'ವರ್ಲ್ಡ್ ಪ್ಲ್ಯಾನ್ ಆಫ್ ಯಾಕ್ಷನ್' ಅನ್ನು ಜಾರಿಗೆ ತರುವ ಹಾಗೂ ಅದರ ಪರಿಣಾಮವನ್ನು ಸಮೀಕ್ಷಿಸುವುದು, ಉದ್ಯೋಗ, ಆರೋಗ್ಯ ಮತ್ತು ಶಿಕ್ಷಣ ಈ ಮೂರು ಕ್ಷೇತ್ರಗಳು ಮಹಿಳಾ ಹಿತಾಸಕ್ತಿಗೆ ಬಹಳ ಮಹತ್ವಗಳೆಂದು ಸಮಾವೇಶದಲ್ಲಿ ಪರಿಗಣಿಸಲಾಯಿತು. ಈ ಅವಧಿಯಲ್ಲಿ ಸ್ವಯಂ ಸೇವಾ ಸಂಸ್ಥೆ ಮಹಿಳೆಯರ ವಿಚಾರದಲ್ಲಿ ಕೆಲಸ ಮಾಡುತ್ತಿರುವುದು ಕಂಡುಬಂದಿತು. ಮಹಿಳಾ ಸ್ವಯಂ ಸೇವಾ ಸಂಸ್ಥೆಗಳು, ಮಹಿಳಾ ಹೋರಾಟಕ್ಕೆ ಬೆಂಬಲ ನೀಡುವ ಗುಂಪುಗಳು ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಮತ್ತಷ್ಟು ಸಂಸ್ಥೆಗಳು ಹುಟ್ಟಿಕೊಂಡವು. ಮಹಿಳಾ ಪರ ಕೆಲಸ ಮಾಡಲು ರಾಷ್ಟ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಸರ್ಕಾರಿ ವಲಯದಲ್ಲಿ ಮಹಿಳಾ ಸಚಿವಾಲಯ, ಘಟಕ ಮತ್ತು ಇಲಾಖೆಗಳನ್ನು ಪ್ರಾರಂಭಿಸಲಾಯಿತು.

ಎರಡನೇ ಸಮ್ಮೇಳನದಲ್ಲಿ ಹಿಂದಿನ ದಶಕದ ಪ್ರಗತಿಯ ಸಮೀಕ್ಷೆ ನಡೆಸಿದಾಗ ತೃಪ್ತಿಕರ ಫಲಿತಾಂಶ ಕಂಡುಬರಲಿಲ್ಲ. ಮಹಿಳೆಯ ಜೀವನದಲ್ಲಿ ಬದಲಾವಣೆ ಯಾವುದೇ ಗಮನಾರ್ಹವಾದ ಸೂಚನೆ ಕಂಡುಬರಲಿಲ್ಲ. ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆ ಕಂಡುಬಂದರೂ

ಉದ್ಯೋಗಾವಕಾಶಗಳನ್ನು ಮಹಿಳೆಯರಿಗೆ ದೊರಕಿಸಿ ಕೊಡುವಂತೆ, ರಾಜಕೀಯ ಸಹಭಾಗಿತ್ವಕ್ಕೆ ಅವಕಾಶ ಕಲ್ಪಿಸಿದರೂ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವಂತೆ ಕ್ರಮಕೈಗೊಂಡಿದ್ದರೂ ಪ್ರಗತಿಸಾಧಿಸಲು ಸಾಧ್ಯವಾಗಲಿಲ್ಲ. ಕೆಳವರ್ಗದ ಹಾಗೂ ಕಡಿಮೆ ವೇತನ ದೊರೆಯುವ ಕೆಲಸಗಳಲ್ಲಿ ಮಾತ್ರ ಮಹಿಳಾ ದುಡಿಮೆ ಕಂಡುಬಂದಿತ್ತು. ಉಳಿದ ದುಡಿಮೆ ಕ್ಷೇತ್ರಗಳಲ್ಲಿ ಮಹಿಳಾ ದುಡಿಮೆ ತೀರಾ ಕಡಿಮೆಯಾಗಿತ್ತು. ಮಹಿಳೆಯರು ಮಾರುಕಟ್ಟೆಗೆ ಸಂಬಂಧ ಪಡೆದ ಗೃಹಾಧಾರಿತ ಉತ್ಪಾದನಾ ಚಟುವಟಿಕೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದರ ಪರಿಣಾಮ ಮಹಿಳೆಯರ ದುಡಿಮೆ ಅಗೋಚರವಾಗಿದೆ. ವರ್ಲ್ಡ್ ಪ್ಲಾನ್ ಆಫ್ ಯಾಕ್ಷನ್ ಅಳವಡಿಸಿಕೊಂಡರೂ ಮಹಿಳೆಯರ ಸ್ಥಿತಿಗತಿ ೧೯೭೫ರ ತನಕ ಸುಧಾರಣೆ ಕಂಡುಬಾರದಿರುವ ಅಂಶ ಬೆಳಕಿಗೆ ಬಂದಿತ್ತು.[೩೫]

೧೯೮೦ರಲ್ಲಿ 'ಮಹಿಳೆ ಮತ್ತು ಅಭಿವೃದ್ಧಿ' ಎಂಬ ಪರಿಕಲ್ಪನೆ ಪ್ರಾರಂಭವಾಯಿತು. ಅಭಿವೃದ್ಧಿಯ ಎಲ್ಲಾ ಯೋಜನೆಗಳಲ್ಲಿ ಮಹಿಳಾ ಆಯೋಗ ಇರಬೇಕೆಂಬ ಒತ್ತಡ ಹಾಕಲಾಯಿತು. ಇಷ್ಟೆಲ್ಲಾ ಪ್ರಯತ್ನ ಮಾಡಿದರೂ ಯೋಜನೆಗಳ ಅನುಷ್ಠಾನದಲ್ಲಿ ಮಹಿಳಾ ಪರಚಿಂತನೆ ಇರಲಿಲ್ಲ. ಮಹಿಳೆಯರ ಅಭಿವೃದ್ಧಿಯಲ್ಲಿ ಮಹಿಳೆಯರ ಉತ್ಪಾದನಾ ಚಟುವಟಿಕೆಗಳ ಸಾಮರ್ಥ್ಯದ ಹೆಚ್ಚಳವಾಗುವ ಅವಶ್ಯಕತೆ ಇದೆ ಎಂದು ಮನವರಿಕೆಯಾಯಿತು. ಅಭಿವೃದ್ಧಿಯಲ್ಲಿ ಮಹಿಳೆಯರು ಮಾಹಿತಿ ಸಂಗ್ರಹಗಾರರು ರಾಷ್ಟ್ರದ ಅಭಿವೃದ್ಧಿಯಲ್ಲಿ ಮಹಿಳೆಯರ ದುಡಿಮೆಯ ಕೊಡುಗೆಯನ್ನು ಮಾನ್ಯ ಮಾಡುವ ಕ್ರಮ ಸರಿ ಇಲ್ಲದಿರುವುದರಿಂದ ಮಹಿಳೆಯರ ಜೀವನದ ಬಗ್ಗೆ ಸಾಕಷ್ಟು ಮಾಹಿತಿ ಇಲ್ಲದಂತಾಗಿದೆ ಎಂದು ಅಭಿಪ್ರಾಯಪಟ್ಟರು. ಈ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ವಿಶ್ವಸಂಸ್ಥೆ ಮಾಹಿತಿ ಸಂಗ್ರಹಣೆಯಲ್ಲಿ ತೊಡಗಿತು. ನಂತರ ಮಹಿಳಾ ಉದ್ಯಮಗಳ ಬೆಳವಣಿಗೆ ಹಾಗೂ ಮಹಿಳೆಯರು ಹೆಚ್ಚು ಹೆಚ್ಚು ಆದಾಯ ತರುವಂತಹ ಉತ್ಪಾದನಾ ಚಟುವಟಿಕೆಗಳನ್ನು ಕೈಗೊಳ್ಳುವಂತೆ ಪ್ರೋತ್ಸಾಹ ನೀಡುವುದು ಮುಂದಿನ ಪ್ರಯತ್ನದ ಗುರಿಯಾಯಿತು. ಕೃಷಿ, ಕೈಗಾರಿಕೆ, ವಾಣಿಜ್ಯ ಹಣ ಮತ್ತು ಹಣಕಾಸಿನ ವ್ಯವಹಾರ, ವಿಜ್ಞಾನ ಮತ್ತು ತಂತ್ರಜ್ಞಾನ, ಇಂಧನ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಬಳಕೆ, ಮಹಿಳೆಯರ ಸ್ವಾವಲಂಬನೆ ಹಾಗೂ ಅಭಿವೃದ್ಧಿ ಕ್ರಿಯೆಯಲ್ಲಿ ಸಮಗ್ರವಾಗಿ ಮಹಿಳೆಯರನ್ನು ಬೆಸೆಯುವುದಕ್ಕೆ ಮೊದಲಾದ ವಿಷಯಗಳ ಬಗ್ಗೆ ವಿಶ್ಲೇಷಿಸಲಾಯಿತು.

ಮೂರನೇ ಅಂತರಾಷ್ಟ್ರೀಯ ಮಹಿಳಾ ಸಮ್ಮೇಳನ ೧೯೮೫ರಲ್ಲಿ ನೈರೋಬಿಯಲ್ಲಿ ನಡೆಯಿತು. ಫಾರವರ್ಡ್ ಲುಕಿಂಗ್ ಸ್ಟ್ರಾಟಜೀಸ್ (Forward looking Strategies) ಯೋಜನೆಯನ್ನು ಅಳವಡಿಸಿಕೊಳ್ಳಲಾಯಿತು. ಸಮ್ಮೇಳನದಲ್ಲಿ ಭಾಗವಹಿಸಿದ ರಾಷ್ಟ್ರಗಳಿಗೆ ಅಭಿವೃದ್ಧಿಯು ಮಹಿಳಾ ಪರ ದೃಷ್ಟಿಕೋನ ಹೊಂದುವಂತೆ ಮಾಡಲು ಹಾಗೂ ಮಹಿಳೆಯರ ಬೇಡಿಕೆಗಳನ್ನು ಗಮನಕ್ಕೆ ತಂದುಕೊಳ್ಳುವಂತೆ ಮಾಡಲು ಮಹಿಳೆಯರು ಅಧಿಕಾರವನ್ನು ಹೊಂದಬೇಕು. ಅಭಿವೃದ್ಧಿಯ ವಿನ್ಯಾಸ.

ಯೋಜನೆ ಮತ್ತು ನಿರ್ಧಾರ ಕೈಗೊಳ್ಳಲು ಎಲ್ಲಾ ಹಂತಗಳಲ್ಲೂ ಅವರು ಭಾಗವಹಿಸುವಂತಾಗಬೇಕು ಎಂಬ ಅಭಿಪ್ರಾಯ ಪ್ರಕಟಿಸಿತು. ಜೊತೆಗೆ ದೇಶಗಳು ಅಭಿವೃದ್ಧಿಯ ವಿವಿಧ ಹಂತದಲ್ಲಿರುವುದರಿಂದ ಅವುಗಳು ತಮ್ಮದೇ ಸಂಪನ್ಮೂಲ ಸಾಮರ್ಥ್ಯಗಳು ಮತ್ತು ಅಭಿವೃದ್ಧಿ ನೀತಿಗಳ ನೆಲೆಯಲ್ಲಿ ಆದ್ಯತೆಗಳನ್ನು ಹೊಂದಲು ಆಯ್ಕೆ ಸ್ವಾತಂತ್ರ್ಯ ಹೊಂದಿರಬೇಕು. ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳು, ರಾಜಕೀಯ ಪಾಲ್ಗೊಳ್ಳುವಿಕೆ ಮತ್ತು ತೀರ್ಮಾನಿಸುವಿಕೆ ಕ್ರಿಯೆಯಲ್ಲಿ ಸಮಾನತೆ, ಅಲ್ಲದೆ ಉದ್ಯೋಗ, ಆರೋಗ್ಯ, ಶಿಕ್ಷಣ, ಆಹಾರ, ನೀರಾವರಿ ಮತ್ತು ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯ ಸೇವೆಗಳು, ವಿಜ್ಞಾನ ಮತ್ತು ತಂತ್ರಜ್ಞಾನ, ಮಾಹಿತಿ ಸಂವಹನಗಳು, ವಸತಿ ಸಮುಚ್ಚಯ ನಿರ್ಮಾಣ, ಸಮುದಾಯ ಅಭಿವೃದ್ಧಿ, ಸಾರಿಗೆ, ಇಂಧನ, ಪರಿಸರ ಮತ್ತು ಸಾಮಾಜಿಕ ಸೇವೆಗಳು ಮೊದಲಾದ ಮಹತ್ವದ ಕ್ಷೇತ್ರಗಳನ್ನು ಮಹಿಳಾಭಿವೃದ್ಧಿಗಾಗಿ ಬಳಸಿಕೊಳ್ಳಲು ಕ್ರಮಗಳನ್ನು ಸೂಚಿಸಲಾಯಿತು.[೩೬] ನಾಲ್ಕನೇ ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನ ಏಪ್ರಿಲ್ ೭ರಂದು ೧೯೯೫ರಲ್ಲಿ ಬೀಜಿಂಗ್‌ನಲ್ಲಿ ವಿಶ್ವಸಂಸ್ಥೆ ಸಮ್ಮೇಳನ ನಡೆಯಿತು. ಮಹಿಳೆಗೆ ಸಂಬಂಧಿಸಿದ ಸಶಸ್ತ್ರ ಸಂಘರ್ಷ, ಆರ್ಥಿಕ ಸಂರಚನೆಗಳು, ಅಧಿಕಾರದ ಹಂಚಿಕೆ ಮತ್ತು ತೀರ್ಮಾನಿಸುವಿಕೆ ಮಹಿಳಾ ಪ್ರಗತಿಯನ್ನು ಉತ್ತೇಜಿಸಲು ಕ್ರಿಯಾತ್ಮಕ ಕ್ರಮಗಳು, ಮಾನವ ಹಕ್ಕುಗಳು, ಸಮೂಹ ಮಾಧ್ಯಮ, ಪರಿಸರ ಮತ್ತು ಹೆಣ್ಣು ಮಕ್ಕಳ ಸ್ಥಿತಿಗತಿ, ಕೈರೋದ ಜನಸಂಖ್ಯಾ ಸಮ್ಮೇಳನ ೧೯೯೪ರಲ್ಲಿ ಚರ್ಚಿಸಲಾದ ಮಹಿಳಾ ಶಕ್ತಿ ಸಂವರ್ಧನೆ ಕೂಡ ಸೇರಿತು. ಮಹಿಳೆಯರಿಗೆ ಆರ್ಥಿಕ ಅವಕಾಶ ವಿಸ್ತರಣೆ, ಸಂಪನ್ಮೂಲಗಳಿಗೆ ಸಮಾನ ಪ್ರವೇಶಾವಕಾಶ ನೀಡಿಕೆ ಹಾಗೂ ಅನಕ್ಷರತೆ ನಿರ್ಮೂಲವನ್ನು ಒಳಗೊಳ್ಳುವುದು. ಈ ವಿಚಾರಗಳ ಕುರಿತು ಬೀಜಿಂಗ್ ಸಮ್ಮೇಳನದ ಕಾರ್ಯಸೂಚಿಯಲ್ಲಿ ಅವಕಾಶ ಕಲ್ಪಿಸಲಾಯಿತು. ಈ ಕ್ರಿಯಾ ಯೋಜನೆಯಲ್ಲಿ ಪ್ರಮುಖವಾಗಿ ಆರ್ಥಿಕತೆಗೆ ಮಹಿಳೆ ಮತ್ತು ಪುರುಷರಿಂದ ಸಮಾನ ಕೊಡುಗೆ ಸಲ್ಲಿಸಲು ಅವಕಾಶ ನೀಡುವುದು ಮಹಿಳಾ ಆರ್ಥಿಕ ಸಬಲೀಕರಣಕ್ಕೆ ಸಹಾಯವಾಯಿತು.

ಮಾನವ ಹಕ್ಕುಗಳ ವಿಶ್ವಸಮಾವೇಶದ ವರದಿ(೧೯೯೩)ಯಲ್ಲಿ ಸಮಾನತೆ ಸಾಧಿಸಲು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮುದಾಯ ಪ್ರಯತ್ನಿಸಬೇಕು. ದುಡಿಯುವ ಸ್ಥಳಗಳಲ್ಲಿ ಮಹಿಳೆಯರಿಗೆ ಮತ್ತು ಪುರುಷರಿಗೆ ಹೆಚ್ಚುಹೆಚ್ಚಾಗಿ ಆಯ್ಕೆಗಳನ್ನು ವಿಸ್ತರಿಸಲು ಅನೇಕ ಆರ್ಥಿಕ ಮತ್ತು ಸಾಂಸ್ಥಿಕ ವ್ಯವಸ್ಥೆಯನ್ನು ಪುನರ್ ರಚಿಸಲಾಯಿತು. ಶೇಕಡಾ ೩೦ರಷ್ಟು ಮಹಿಳೆಯರನ್ನು ರಾಷ್ಟ್ರೀಯ ಮಟ್ಟದಲ್ಲಿ ತೀರ್ಮಾನ ಕೈಗೊಳ್ಳಲು ಭಾಗಿಯಾಗುವಂತೆ ಮಾಡುವುದು. ಸಾರ್ವತ್ರಿಕ ಮಹಿಳಾ ಶಿಕ್ಷಣ. ಮಹಿಳೆಯರಿರಗೆ ಹೆಚ್ಚು ಸಾಲ ನೀಡಿಕೆ ಕಾರ್ಯಕ್ರಮಗಳಿಗೆ ಆದ್ಯತೆ ನೀಡುವುದು. ಆರ್ಥಿಕ ಮತ್ತು ರಾಜಕೀಯ ಅವಕಾಶಗಳನ್ನು ಮಹಿಳೆಯರಿಗೆ ಒದಗಿಸುವುದರ ಮೂಲಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಭಾಗವಹಿಸುವಂತೆ ಪ್ರಯತ್ನವಾಗಬೇಕೆಂದು ಪ್ರತಿಪಾದಿಸಲಾಯಿತು.

ಬೀಜಿಂಗ್ ಸಮ್ಮೇಳನಕ್ಕೆ ಭಾರತವೂ ಕೂಡ ಭಾರತೀಯ ಮಹಿಳೆಯರಿಂದ ಬದುಕು ಮತ್ತು ಸ್ಥಿತಿಗತಿಗಳನ್ನು ಕುರಿತು ವಿವರವಾದ ವರದಿಯನ್ನು ಸಲ್ಲಿಸಿತು. ಸ್ವಾತಂತ್ರ್ಯ ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕಗಳ ದೃಷ್ಟಿಯಿಂದ ಮಹಿಳೆ ಸ್ಥಿತಿಗತಿ ಉತ್ತಮವಾಗಿದ್ದರೂ ಕೂಡ ಸಾಕ್ಷರತೆ, ಲಿಂಗಾನುಪಾತ ಉದ್ಯೋಗಾವಕಾಶಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶ ದೊರಕಿಸಿಕೊಡುವುದು, ಮಹಿಳೆಯರ ಆರೋಗ್ಯ ಮತ್ತು ಪೌಷ್ಟಿಕತೆಗೆ ಗಮನ ಕೊಡುವಲ್ಲಿ ಸುಧಾರಣೆಯಾಗಿದೆ. ಉದ್ಯಮಶೀಲತೆ ಮತ್ತು ನಾಯಕತ್ವ ಸಾಮರ್ಥ್ಯ ನಿರ್ಮಾಣ ಮಾಡುವ ಅಗತ್ಯವಿದೆ ಎಂದು ತನ್ನ ವರದಿಯಲ್ಲಿ ತಿಳಿಸಿದೆ.[೩೭]

ಸಬಲೀಕರಣದ ಗಣನೆ

ಮಲ್ಹೋತ್ರಾ (೨೦೦೨) ಅವರು ಸಮರ್ಥಿಸುವುದೇನೆಂದರೆ ಸಬಲೀಕರಣವು ಪ್ರಾಥಮಿಕ ಬೆಳವಣಿಗೆಯ ಗುರಿ ಎಂದು ಗುರುತಿಸಿದ ನಂತರವು ವಿಶ್ವಬ್ಯಾಂಕು ಅಥವಾ ವಿವಿಧ ಅಭಿವೃದ್ಧಿಯ ಸಂಘಟನೆಗಳು ಯಾವುದೇ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ಸಬಲೀಕರಣಗೊಳಿಸಲು ತೆಗೆದುಕೊಂಡಿಲ್ಲ. ಯುಎನ್‌ಡಿಪಿಯ ಮಾನವ ಅಭಿವೃದ್ಧಿ ವರದಿಯು (೧೯೯೨) ಎರಡು ಹೊಸ ಬಗೆಯ ಪೂರಕ ಯೋಜನೆಗಳನ್ನು ಪರಿಚಯಿಸಿತು. ಲಿಂಗಕ್ಕೆ ಸಂಬಂಧಿಸಿದ ಅಭಿವೃದ್ಧಿಯ ಸೂಚಿ(GDI) ಹಾಗೂ ಲಿಂಗ ಸಬಲೀಕರಣ ಕ್ರಮ, (GEM). ಜಿಡಿಐಯು ಸ್ತ್ರೀ ಹಾಗೂ ಪುರುಷರ ಅಸಮಾನತೆಯ ವಿಷಯವಾಗಿ ಮೂಲಭೂತ ಸೌಕರ್ಯಗಳ ಬಗ್ಗೆ ಚರ್ಚಿಸುತ್ತದೆ. ಜಿಇಎಮ್‌ಯು ಮಹಿಳೆಯ ರಾಜಕೀಯ ಹಾಗೂ ಆರ್ಥಿಕ ಸ್ಥಾನಗಳ ಬಗ್ಗೆ ವಿಶ್ಲೇಷಿಸುತ್ತದೆ. ಇಲ್ಲಿ ನಾವು ಮೂರು ಪ್ರಮುಖ ಅಂಶಗಳನ್ನು ಗಮನಿಸಬೇಕು. ಮೊದಲನೆಯದಾಗಿ ಮೇಲ್ವಿಚಾರಕನಾಗಿ ಕಾರ್ಯನಿರ್ವಹಣೆ, ಉನ್ನತ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಣೆ ಮತ್ತು ತಾಂತ್ರಿಕ ನಿರ್ವಹಣೆ ಕ್ಷೇತ್ರದಲ್ಲಿ ಮಹಿಳೆಯು ಕಾರ್ಯನಿರ್ವಹಿಸಿದಾಗ ಮಹಿಳೆ ಹಾಗೂ ಪುರುಷರನ್ನು ಹೋಲಿಸಿ ಆದಾಯವನ್ನು ಊಹಿಸಬಹುದು. ಅಮಾರ್ಥ್ಯಸೇನ್ ಅವರ ಕಾರ್ಯವನ್ನು ಗಮನಿಸಿ ಯುಎನ್‌ಡಿಪಿ (UNDP)ಯು ಅಸಮಾನತೆ ಹಾಗೂ ಸಬಲೀಕರಣ ಬಗೆಗೆ ಹೋಲಿಕೆಯನ್ನು ನೀಡುತ್ತದೆ. ಜಿಡಿಐಯು ಸಾಮರ್ಥ್ಯವನ್ನು ಹೆಚ್ಚಿಸುವುದರ ಬಗ್ಗೆ ಗಮನವನ್ನು ಹರಿಸುತ್ತದೆ. ಜಿಇಎಮ್‌ಯು ಅವರಲ್ಲಿರುವ ಸಾಮರ್ಥ್ಯದಿಂದ ಜೀವನದಲ್ಲಿ ಸಿಗುವ ಅವಕಾಶಗಳ ಬಗ್ಗೆ ಗಮನಹರಿಸುತ್ತದೆ. ಯುಎನ್‌ಡಿಪಿ ಯು ಲಿಂಗ ಸಬಲೀಕರಣಕ್ಕೆ ಮತ್ತು ಲಿಂಗಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಹಾಗೂ ಮಾನವ ಅಭಿವೃದ್ಧಿಯ ಸೂಚ್ಯಾಂಕದ ಬಗ್ಗೆ ಗಮನ ಹರಿಸುತ್ತದೆ. ಬರ್ದಾನ್ (೧೯೯೬) ಅವರ ಪ್ರಕಾರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ತನ್ನದೇ ಆದ ದೋಷಗಳಿವೆ. ಮೊದಲನೆಯದಾಗಿ. ಹೆಚ್ಚಿನ ಮಟ್ಟದಲ್ಲಿ ಆಯ್ಕೆಯಾಗಿರುವ ಮಹಿಳಾ ಸದಸ್ಯೆಯರಿಗೆ ಸಂಸತ್ತಿನಲ್ಲಿ ಯಾವುದೇ ರೀತಿಯಾದ ಅಧಿಕಾರವಿರುವುದಿಲ್ಲ ಮತ್ತು ಎರಡನೆಯದಾಗಿ ಈ ಮಹಿಳೆಯರಿಗೆ ಸ್ಥಳೀಯ ರಾಜಕೀಯ ಸಂಸ್ಥೆಗಳಲ್ಲಿ ಹಾಗೂ ಇನ್ನಿತರ ಸಭೆಗಳಲ್ಲಿ ಯಾವ ರೀತಿಯಾದ

ಅವಕಾಶವಿರುವುದಿಲ್ಲ.[೩೮] ಸಿನ್ಹಾ ಹಾಗೂ ಪಟೇಲ್ ಅವರು ಇಡಿಎ (Economic development associate) ಗ್ರಾಮೀಣ ಪದ್ಧತಿಯನ್ನು ಉಪಯೋಗಿಸಿ ೨೦ ಕಿರುಹಣಕಾಸಿನ ಸಂಸ್ಥೆಗಳನ್ನು ವಿಶ್ಲೇಷಣೆಗೆ ಒಳಪಡಿಸಿದರು. ಇವೆಲ್ಲಾ ಸಂಸ್ಥೆಗಳು ಹಲವಾರು ಮಾದರಿಗಳನ್ನೊಳಗೊಂಡಿದೆ. ಇಲ್ಲಿ ಮೂರು ರೀತಿಯಾದ ಮಾದರಿಗಳನ್ನು ಅವಲೋಕಿಸಿದೆ. ಬದಲಾವಣೆಯ ಗುರಿ, ಸಂದರ್ಭಕ್ಕನುಗುಣವಾಗಿ ಬದಲಾವಣೆ ಮತ್ತು ಬದಲಾವಣೆಗೆ ಕಾರಣವೇನೆಂದು ತಿಳಿಯುವುದು. ಕುತೂಹಲಕಾರಿ ಅಂಶವೆಂದರೆ ಸಬಲೀಕರಣದಲ್ಲಿ ಈ ಯಾವ ಅಂಶಗಳನ್ನು ನಾವು ಕಾಣುವುದಿಲ್ಲ. ಆ್ಯಕರ್‌ಲೇ(೧೯೯೫) ಅವರು ಸಬಲೀಕರಣಕ್ಕೆ ಕಾರಣವಾದ ಅಂಶಗಳನ್ನು ತಿಳಿದುಕೊಳ್ಳಲು ಒಂದು ಮಾಪನವನ್ನು ತಯಾರಿಮಾಡುತ್ತಾರೆ. ಗೋಯೆಟ್ಜ್ ಹಾಗೂ ಸೇನ್‌ಗುಪ್ತಾ(೧೯೯೬) ಅವರು ವ್ಯವಸ್ಥೆಯ ಅಧೀನವನ್ನು ತಿಳಿದುಕೊಳ್ಳಲು ಒಂದು ಸೂಚಿಯನ್ನು ಸ್ಥಾಪಿಸಿದರು. ಇದರಿಂದ ಸಾಲಪಡೆಯುವ ಗ್ರಾಹಕರನ್ನು ಐದು ಭಾಗಗಳಾಗಿ ವಿಂಗಡಿಸಿದರು. ಸಾಲಗಳ ಬಗ್ಗೆ ಯಾವುದೇ ಮಾಹಿತಿಯೇ ಇಲ್ಲದ ಗ್ರಾಹಕರಿಂದ ಹಿಡಿದು ಸಾಲದ ಬಗ್ಗೆ ಸಂಪೂರ್ಣ ಮಾಹಿತಿ ಅಂದರೆ ಜ್ಞಾನವಿರುವ ಗ್ರಾಹಕರವರೆಗೂ ಇದು ಸೇರುತ್ತದೆ.

ಹಶೇಮಿ, ಸ್ಕೂಲರ್ ಮತ್ತು ರಿಲೇ (೧೯೯೬) ಅವರ ಪ್ರಕಾರ, ಮಹಿಳಾ ಸಬಲೀಕರಣದ ಬದಲಾವಣೆಯ ಬಗ್ಗೆ ತನಿಖೆ ಮಾಡಿದರು. ಈ ವಿಶ್ಲೇಷಣೆಯು ೧೩೦೦ ಮಹಿಳೆಯರ ಬಗ್ಗೆ ಅಧ್ಯಯನ ಮಾಡಿದರು. ಇದಕ್ಕೆ ಕಾರಣ ಗ್ರಾಮೀಣ ಬ್ಯಾಂಕು ಹಾಗೂ ಬಾಂಗ್ಲಾದೇಶದ ಗ್ರಾಮೀಣ ಅಭಿವೃದ್ಧಿ ಸಮಿತಿಯ ಪ್ರಭಾವವು ಮಹಿಳೆಯರ ಸಬಲೀಕರಣದ ಮೇಲೆ ಯಾವ ರೀತಿಯಾಗಿದೆ ಎಂದು ನೋಡುವುದಾಗಿದೆ. ಇಲ್ಲಿ ಸಬಲೀಕರಣಕ್ಕೆ ಕಾರಣವಾದ ೮ ಪ್ರಮುಖ ಅಂಶಗಳನ್ನು ಗಮನಿಸಲಾಗಿದೆ. ಚಲನಶೀಲತೆ, ಆರ್ಥಿಕ ಭದ್ರತೆ, ಸಣ್ಣ ವಸ್ತುಗಳನ್ನು ಖರೀದಿಸುವ ಸಾಮರ್ಥ್ಯ, ಹೆಚ್ಚಿನ ವಸ್ತುಗಳನ್ನು ಖರೀದಿಸುವಿಕೆ, ಪ್ರಮುಖವಾದ ಗೃಹಸಂಬಂಧಿ ವಿಚಾರಗಳ ಬಗ್ಗೆ ನಿರ್ಧಾರ, ಕುಟುಂಬದಲ್ಲಿ ನಡೆಯುವ ಅನ್ಯಾಯದಿಂದ ಮುಕ್ತಿ, ರಾಜಕೀಯ ಮತ್ತು ಕಾನೂನಿನ ಜಾಗೃತಿ, ರಾಜಕೀಯ ಶಿಬಿರಗಳು ಮತ್ತು ಜನಪರ ಹೋರಾಟದಲ್ಲಿ ಭಾಗಿಯಾಗುವುದು.[೩೯] ಈ ಹಿಂದೆ ಸಾಲದ ಮರುಪಾವತಿಯ ಆಧಾರದ ಮೇಲೆ ಸಬಲೀಕರಣವು ನಿರ್ಧಾರವಾಗುತ್ತಿತ್ತು. ಇದನ್ನು ಹಲವಾರು ಅಧ್ಯಯನಗಳು ಈ ವಿಚಾರವನ್ನು ಪರಿಗಣಿಸಿವೆ. ಇವರ ಪ್ರಕಾರ ಮಹಿಳೆಯು ಸಾಲವನ್ನು ಮರುಪಾವತಿ ಮಾಡಲು ಇನ್ನೊಂದು ಮೂಲಗಳಿಂದ ಸಾಲ ಪಡೆಯುತ್ತಿರಬಹುದು. ಇದರಿಂದ ಅವಳು ತುಂಬಾ ಗಂಭೀರದ ಸಾಲದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಪುರುಷರು ಸಾಲದ ಜವಾಬ್ದಾರಿಯನ್ನು ಹೊತ್ತುಕೊಂಡು ಮಹಿಳೆಯರು ತಮ್ಮ ಮನೆಯ ಯಜಮಾನ ಹಾಗೂ ಸೂಕ್ಷ್ಮಸಾಲ ಸಂಸ್ಥೆಯ ನಡುವೆ ಮಧ್ಯಸ್ಥಿಕೆಗಾರರಾಗಿ ಕಾರ್ಯನಿರ್ವಹಿಸಬಹುದು. ಹ್ಯೂಮ್ ಹಾಗೂ ಮೋಸ್‌ಲೇ (೧೯೯೬) ಅವರ ಅನಿಸಿಕೆಯ ಪ್ರಕಾರ, ಸಾಲ ಮರುಪಾವತಿಯ ಬಗ್ಗೆ ಅತಿಯಾದ ಒತ್ತಡ ಹೇರಿದಾಗ ಗುಂಪುಗಳು ಯಾರಿಗೆ

ಸೂಕ್ಷ್ಮಸಾಲದ ಅಗತ್ಯವಿದೆಯೋ ಅಂತಹ ಸದಸ್ಯರನ್ನು ಹೊರಹಾಕಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಸಬಲೀಕರಣದ ಮಾಪನ ಮಾಡಿದಾಗ ಕಬೀರ್ (೧೯೯೯) ಅವರು ಹಲವಾರು ಪ್ರಮುಖ ಅಂಶಗಳನ್ನು ಶಿಸ್ತುಬದ್ಧವಾದ ಅಧ್ಯಯನದ ಮುಖಾಂತರ ನೀಡುತ್ತಾರೆ. ಸಂಪನ್ಮೂಲಗಳು, ಮಧ್ಯವರ್ತಿಗಳು ಹಾಗೂ ಗುರಿ. ಸಂಪನ್ಮೂಲಗಳಿಂದ ಯಾವ ರೀತಿ ಮನುಷ್ಯನು ಜೀವನದಲ್ಲಿ ಆಯ್ಕೆಯನ್ನು ಮಾಡಬಹುದು ಮತ್ತು ಇದರಿಂದ ಇನ್ನೂ ವಿವಿಧ ಪರಿಕಲ್ಪನೆಗಳು ಹುಟ್ಟಿ ಇದರಿಂದ ಹಲವಾರು ಹಣಕಾಸಿನ ಮೂಲಗಳನ್ನು ಹುಟ್ಟಿಹಾಕಲು ಯೋಜನೆಯನ್ನು ಮಾಡಬಹುದು. 'ನಿಯಂತ್ರಣ' ಸಬಲೀಕರಣವನ್ನು ಅಳೆಯುವುದಕ್ಕೆ ಒಂದು ಮಾರ್ಗ. ಉದಾಹರಣೆಗೆ ಗೋಯೆಟ್ಜ್ ಮತ್ತು ಸೇನ್‌ಗುಪ್ತಾ (೧೯೯೬) ಅವರು, ಇದು ಒಂದು ವೇಳೆ ಊಹೆಯಾಗಿರಬಹುದು ಎಂದು ವಾದಿಸುತ್ತಾರೆ. ಅದೇನೆಂದರೆ, ಸಾಲವು ಕ್ಲಿಷ್ಟಕರವಾದ ನಿಯಂತ್ರಣ ಬಿಂದುವಾಗಿದ್ದು, ಒಂದು ಮೌಲ್ಯದ ಸಾಧನೆಯೊಳಗೆ ದೊಡ್ಡ ಮಟ್ಟದ ಸಾಲವನ್ನು ಪಡೆಯುವ ಪ್ರಕ್ರಿಯೆಯಾಗಿದೆ. ನಂತರ ವ್ಯವಸ್ಥಾಪನಾ ನಿಯಂತ್ರಣ ಸಬಲೀಕರಣಕ್ಕೆ ಒಂದು ಸೂಚಕವಾಗಿ ಬಳಸಲ್ಪಡುತ್ತದೆ.

ಸಮುದಾಯಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಮಟ್ಟದಲ್ಲಿ ಗೌರವವನ್ನು ಕಟ್ಟಳೆಗಳಿಗೆ ಹೊಂದಿಕೊಂಡಿರುವುದು ಕಾಣುತ್ತೇವೆ. ಈ ನಿರ್ಭಂಧಗಳನ್ನು ಅಳವಡಿಸಿಕೊಳ್ಳದಿದ್ದರೆ ಅದರಿಂದಾಗುವ ಫಲಿತಾಂಶವನ್ನು ಎದುರಿಸಬೇಕು. ಆದಕಾರಣ ಸಬಲೀಕರಣ ನಿರ್ಧಾರಗಳನ್ನು ತೆಗೆದುಕೊಳ್ಳುವುದರಲ್ಲಿ ತನ್ನ ಪಾತ್ರವನ್ನು ತೋರುತ್ತದೆ. ಅಲ್ಲದೇ ಮನೆಯ ಕಾರ್ಯಗಳನ್ನು ನಿಯಂತ್ರಣ ಮಾಡುವಲ್ಲಿ ತನ್ನ ಸಾಮರ್ಥ್ಯವನ್ನು ತೋರಿಸುತ್ತದೆ. ಉದಾಹರಣೆಗೆ, ಮಗನಿಗೆ ಮದುವೆ ಮಾಡಿ ವರದಕ್ಷಿಣೆಯನ್ನು ತರುವುದು ಮಹಿಳಾ ಸಬಲೀಕರಣ. ಆದಕಾರಣ ವರದಕ್ಷಿಣೆ ಮತ್ತು ಗಂಡು ಮಕ್ಕಳನ್ನು ಪಡೆಯುವ ಹಂಬಲವನ್ನು ನೋಡಿದಾಗ ಇಲ್ಲಿ ನಾವು ಲಿಂಗತಾರತಮ್ಯವನ್ನು ಕಾಣಬಹುದು.

ಇನ್ನು ಗಣತಿ ಸಂಸ್ಥೆಗಳ ಮುಖಾಂತರ ನೋಡುವುದಾದರೆ ಇಲ್ಲಿ ಸಕಾರಾತ್ಮಕ ಹಾಗೂ ನಕಾರಾತ್ಮಕ ಬೆಳವಣಿಗೆ. ಅಂದರೆ ಮಹಿಳೆಯ ಪಾತ್ರವನ್ನು ಸಾರ್ವಜನಿಕ ವಲಯದಲ್ಲಿ ಕಾಣಬಹುದು. ಹಾಗೆಯೇ ಪುರುಷರ ದೌರ್ಜನ್ಯವನ್ನು ಕಾಣಬಹುದು. ಹಾಗೂ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು ಪುರುಷರು ಹೊಂದಿದ್ದಾರೆ. ಅಡಿಗೆ ಮಾಡುವ ವಿಷಯದಿಂದ, ಮಕ್ಕಳ ವಿದ್ಯಾಭ್ಯಾಸ, ಹೆಣ್ಣುಮಕ್ಕಳನ್ನು ಹೊರಗೆ ದುಡಿಯಲು ಕಳಿಸಬೇಕೋ, ಬೇಡವೋ, ಮಗ ಅಥವಾ ಮಗಳ ಮದುವೆಗಾಗಿ ಖರೀದಿಸುವುದು ಅಥವಾ ಆಸ್ತಿಯನ್ನು ಮಾರುವ ವಿಷಯವಿರಬಹುದು. ಇಲ್ಲಿ ಪುರುಷರೇ ನಿರ್ಧಾರವನ್ನು ತೆಗೆದುಕೊಳ್ಳುವುದು ಕಾಣುತ್ತೇವೆ. ನಿರ್ಧಾರಗಳನ್ನು ಪುರುಷರು ತೆಗೆದುಕೊಳ್ಳುವುದೋ ಅಥವಾ ಮಹಿಳೆ ತೆಗೆದುಕೊಳ್ಳುವುದೋ ಎನ್ನುವುದು ಸಂಸ್ಕೃತಿಗನುಗುಣವಾಗಿ ನಿರ್ಧಾರವಾಗುತ್ತದೆ. ಇಬ್ಬರ ನಡುವೆಯೂ ಈ ಅಧಿಕಾರದ ಹಂಚಿಕೆಯಾಗಿರುತ್ತದೆ. ಕಬೀರ್(೧೯೯೯) ಪ್ರಕಾರ ದಕ್ಷಿಣ ಏಷ್ಯಾದ ಅಧ್ಯಯನವನ್ನು

ಮಾಡಿದಾಗ ಒಂದು ಕುಟುಂಬದಲ್ಲಿ ಮನೆಗೆ ಬಳಸುವ ಸಾಮಗ್ರಿಗಳನ್ನು ಖರೀದಿಸಲು ಹಾಗೂ ಮಕ್ಕಳ ಆರೋಗ್ಯವನ್ನು ನೋಡಿಕೊಳ್ಳುವಲ್ಲಿ ನಿರ್ಧಾರಗಳು ಮಹಿಳೆಯರಿಗೆ ಸೇರಿರುತ್ತದೆ ಮತ್ತು ವಿದ್ಯಾಭ್ಯಾಸ, ಮಕ್ಕಳ ಮದುವೆ ಹಾಗೂ ಆಸ್ತಿ ವಿಷಯಗಳಲ್ಲಿ ನಿರ್ಧಾರವು ಪುರುಷರದ್ದಾಗಿರುತ್ತದೆ.[೪೦] ನಿರ್ಧಾರಗಳನ್ನು ತೆಗೆದುಕೊಳ್ಳುವುದು ಒಂದು ದೊಡ್ಡ ಕಲೆ. ಕೀನ್ಯಾದ ಸಿಲ್‌ಬರ್‌ಸ್ಮಿಡ್ಟ್(೧೯೯೨)ಪ್ರಕಾರ ಮಹಿಳೆಯರು ಹೇಳುವ ಹಾಗೆ ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು ಪುರುಷರ ಸಲಹೆಯನ್ನು ತೆಗೆದುಕೊಳ್ಳುವುದು ಅಗತ್ಯ. ಆದರೆ ಅವರು ಸಲಹೆ ತೆಗೆದುಕೊಂಡ ಬಳಿಕವೂ ತಮ್ಮದೇ ಆದ ನಿರ್ಧಾರಗಳನ್ನೇ ಜಾರಿಗೊಳಿಸುತ್ತಾರೆ. ಹಾಗೂ ಪುರುಷರು ಕೊಟ್ಟ ಸ್ವತಂತ್ರವನ್ನು ದುರ್ಬಳಕೆ ಮಾಡಿಕೊಳ್ಳುವುದು ಕಂಡುಬರುತ್ತದೆ. ಇಲ್ಲಿ ಸಾಧನೆಗಳನ್ನು ಗಣನೆಗೆ ತೆಗೆದುಕೊಂಡರೆ, ಇಲ್ಲಿ ಪುರುಷರ ಹಾಗೂ ಮಹಿಳೆಯರ ಸಾಧನೆಗಳು ಆಯ್ಕೆಯ ಮೇಲೆ ಅವಲಂಬಿತವಾಗಿರುತ್ತದೆ. ಶಿಶುಗಳ ಆರೈಕೆಯನ್ನು ನೋಡಿಕೊಳ್ಳುವುದು ಯಾವ ಮಹಿಳೆಯ ಸಬಲೀಕರಣವಲ್ಲ. ಇಲ್ಲಿ ಅವಳ ಕರ್ತವ್ಯವು ಮಹತ್ವದ್ದಾಗಿರುತ್ತದೆ. ಏಕೆಂದರೆ ಇಲ್ಲಿ ಅವಳ ಅತ್ತೆ ಮಾವ ವಯಸ್ಸಿನಲ್ಲಿ ಅತೀ ಹಿರಿಯರಾಗಿರುವುದರಿಂದ ಮಕ್ಕಳ ಬಗ್ಗೆ ಕಾಳಜಿಯನ್ನು ವಹಿಸಲು ಕಷ್ಟವಾಗುತ್ತದೆ.

ಪಿಟ್ ಮತ್ತು ಖಾಂಡೇಕರ್ (೧೯೯೫) ಪ್ರಕಾರ; ನಿರ್ಧಾರಗಳು ಲಿಂಗ ನೀತಿಯ ಮೇಲೆ ನಿಂತಿದೆ. ಮಹಿಳೆಯರಿಗೆ ಹಾಗೂ ಪುರುಷರಿಗೆ ನೀಡುವ ಸಾಲ ಹಾಗೂ ಅದರ ಮರುಪಾವತಿಯ ಬಗ್ಗೆ ನಿರ್ಧರಿಸುವಲ್ಲಿ ವಿವರಣೆ ಕೊಡುವುದು ಕ್ಲಿಷ್ಟಕರವಾದ ಕೆಲಸ. ಕಬೀರ್ ಪ್ರಕಾರ; ಇಲ್ಲಿ ಕೆಲವು ಊಹೆಗಳನ್ನು ಅಂದರೆ ಸಂಪನ್ಮೂಲ ಹಾಗೂ ಗುರಿಗಳನ್ನು ತಲುಪುವ ಮಧ್ಯವರ್ತಿಗಳ ಪಾತ್ರವು ಪ್ರಮುಖವಾಗಿರುತ್ತದೆ.[೪೦]

೫.೩. ಸ್ವ-ಸಹಾಯ ಗುಂಪುಗಳ ಪರಿಕಲ್ಪನೆ

ಗ್ರಾಮೀಣ ಬಡಜನರಲ್ಲಿ ಸಂಪನ್ಮೂಲಗಳ ತರಬೇತಿಯ, ಮಾಹಿತಿಯ, ನೈಪುಣ್ಯತೆಯ ಮತ್ತು ತಾಂತ್ರಿಕ ಅಡಿಪಾಯದ ಕೊರತೆಯಿದೆ. ಆದಕಾರಣ ದಿನನಿತ್ಯದ ಆರ್ಥಿಕ ಚಟುವಟಿಕೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಅಭಿವೃದ್ಧಿಯ ವಿಷಯಗಳಲ್ಲಿ ಹಿಂದುಳಿದಿರುವುದನ್ನು ಕಾಣಬಹುದು. ಅವರಿಗೆ ಸಾಲದ ಅವಶ್ಯಕತೆಗಳು ಕುಟುಂಬಗಳ ಸದಸ್ಯರ ಹೆಚ್ಚಳದಿಂದ ಹಾಗೂ ಹಲವಾರು ಸಾಮಾಜಿಕ ಕಟ್ಟಳೆಗಳ ಸಂಪ್ರದಾಯಗಳ ಕಾರಣದಿಂದ ಕಂಡುಬರುತ್ತದೆ. ಉದಾಹರಣೆಗೆ, ಮದುವೆ ಮತ್ತು ಸತ್ತ ಕಾರ್ಯಗಳಿಗೆ ಖರ್ಚು, ಅನಾರೋಗ್ಯದ ತಪಾಸಣೆಗಾಗಿ ಖರ್ಚು, ಮಾರುಕಟ್ಟೆ ಹಾಗೂ ಪ್ರಕೃತಿಯಿಂದ ಉಂಟಾಗುವ ಕೆಲವೊಂದು ಏರುಪೇರುಗಳಿಗಾಗಿ ಸಾಲವನ್ನು ಅನಿವಾರ್ಯತೆಯಿಂದ ಮಾಡಬೇಕಾಗುತ್ತದೆ. ಈ ಹಲವಾರು ವೈವಿಧ್ಯಮಯ ಕಾರ್ಯಗಳಿಂದಾಗಿ ಕುಟುಂಬದ ಆದಾಯದ ಮೇಲೆ ಬಲವಾದ ಪರಿಣಾಮ ಉಂಟಾಗುತ್ತದೆ. ಇದರಿಂದಾಗಿ ದಿನನಿತ್ಯದ ಅವಶ್ಯಕತೆಗಳನ್ನು ಹಾಗೂ ಪೂರೈಕೆಗಳನ್ನು ಈಡೇರಿಸಿಕೊಳ್ಳಲು ಕಷ್ಟವಾಗುತ್ತದೆ. ಇದರಿಂದಾಗಿ ಆರ್ಥಿಕ ಚಟುವಟಿಕೆಗಳ ಮೇಲೆ ಬಲವಾದ ಪ್ರಭಾವ ಬೀರಿ ಉತ್ಪಾದನೆಯ

ಮೇಲೆಯೂ ಪ್ರಭಾವ ಬೀರುತ್ತದೆ. ಇಂತಹ ತುರ್ತು ಸ್ಥಿತಿಯು ಉಂಟಾದಾಗ ಯಾವ ಸಾಲ ಸಂಸ್ಥೆಗಳೂ ಸಾಲ ನೀಡಲು ಮುಂಬರುವುದಿಲ್ಲ. ಇದರಿಂದಾಗಿ ಸಾಲಕ್ಕಾಗಿ ಪ್ರಮುಖ ಬಡ್ಡಿ ಲೇವಾದಾರರಲ್ಲಿ ಹಾಗೂ ಅಧಿಕ ಜಮೀನು ಹೊಂದಿರುವ ಭೂಮಾಲಿಕರಲ್ಲಿ ಅಧಿಕ ಬಡ್ಡಿದರದಲ್ಲಿ ಸಾಲ ಪಡೆಯುತ್ತಾರೆ. ಈ ಸಾಲವು ನೇರವಾದ ಪರಿಣಾಮವನ್ನು ಉತ್ಪಾದನೆ ಹಾಗೂ ಅವರ ಜೀವನ ಶೈಲಿಯ ಮೇಲೆ ಪ್ರಭಾವವನ್ನು ಬೀರುತ್ತದೆ. ಸಾಮಾನ್ಯವಾಗಿ ಅವರ ಅಧಿಕ ಬಡ್ಡಿದರದ ಸಾಲಗಳ ಮರುಪಾವತಿ ಅವರಲ್ಲಿರುವ ಸಾಮರ್ಥ್ಯ ಹಾಗೂ ಅಪಾಯಗಳ ಸವಾಲುಗಳನ್ನು ಎದುರಿಸುವ ಧೈರ್ಯ, ಚಿಕ್ಕ ಆದಾಯದ ಸರಿಯಾದ ಬಳಕೆ ಹಾಗೂ ಸಣ್ಣ ಉಳಿತಾಯವನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸುವುದರಿಂದ ಮಾತ್ರ ಸಾಧ್ಯವಾಗುತ್ತದೆ.[೪೨]

ಅಸಂಪ್ರದಾಯಿಕ ಬಡ್ಡಿ ಲೇವಾದೇವಿದಾರರ ಪ್ರಮುಖ ಉದ್ದೇಶವು ಇಲ್ಲಿ ಒಂದು ಆರ್ಥಿಕ ನಿಬಂಧನೆಯನ್ನು ಸಾಲಪಡೆದವರಲ್ಲಿ ಉಂಟುಮಾಡುವುದು. ಅಂದರೆ ಸಾಲಪಡೆದವನು ಮರುಪಾವತಿ ಮಾಡುವಲ್ಲಿ ತೊಂದರೆಗೊಳಗಾಗುವುದು ಹಾಗೂ ಅವನ ಆದಾಯದ ಸ್ಥಿತಿಯಲ್ಲಿ ಸಂಕಷ್ಟತೆಯನ್ನು ಹೊಂದಿದಾಗ ಹಣದ ಪೂರೈಕೆಯಲ್ಲಿ ಅಡೆತಡೆಯುಂಟಾಗಿ ಬಡ್ಡಿದರವನ್ನು ಹೆಚ್ಚಿಸುವುದು. ಸಾಲವನ್ನು ನೀಡುವಲ್ಲಿ ಹಲವಾರು ಷರತ್ತು ಮತ್ತು ನಿಬಂಧನೆಗಳನ್ನು ಸಾಲಗಾರರ ಮೇಲೆ ಹೇರಿದಾಗ ಸಾಲಗಾರನು ಅಸಲನ್ನೇ ತಲುಪಿಸಲು ಆಗದೇ ತನ್ನ ಜಾಮೀನುದಾರನನ್ನು ಕಳೆದುಕೊಂಡು ಮತ್ತೊಂದು ಸಾಲವನ್ನು ತೆಗೆಯಲು ಮುಂದಾಗುತ್ತಾನೆ. ಹಣಕಾಸಿನ ಸಂಸ್ಥೆಗಳು ಬಡಜನತೆಗೆ ಬಳಕೆಗಳಿಗಾಗಿ ಸಾಲವನ್ನು ನೀಡಲು ಮುಂದಾಗದ ಕಾರಣ, ಗ್ರಾಮೀಣ ಮಾರುಕಟ್ಟೆಗಳನ್ನು ಬಡ್ಡಿ ಲೇವಾದೇವಿದಾರರೇ ಸಂಪೂರ್ಣವಾಗಿ ನಿಯಂತ್ರಣದಲ್ಲಿಟ್ಟುಕೊಂಡಿರುತ್ತಾರೆ.

ಹಲವಾರು ಕಾರಣಗಳಿಂದಾಗಿ ಹಣಕಾಸಿನ ಸಂಸ್ಥೆಗಳು ಈ ಸಾಲ ತಲುಪಿಸುವ ಮಾರುಕಟ್ಟೆಯನ್ನು ತಲುಪಲು ಮುಂದಾಗುತ್ತಿಲ್ಲ. ಅಲ್ಲಿರುವ ಕಟ್ಟಳೆಗಳು, ನಿಬಂಧನೆಗಳು ಈ ಮಾರುಕಟ್ಟೆಯ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಇದಲ್ಲದೇ ಶಾಖೆಗಳ ವ್ಯವಸ್ಥಾಪಕರಿಗೆ ನೇರವಾಗಿ ಸೇವೆಯಾಗಲೀ ಹಾಗೂ ನಿಯಂತ್ರಣವಾಗಲೀ ಮಾಡಲಾಗುವುದಿಲ್ಲ. ಇದಕ್ಕೆ ಕಾರಣಗಳು ಈ ಕೆಳಗಿನಂತಿವೆ.

೧. ಸಿಬ್ಬಂದಿಯ ಕೊರತೆ.

೨. ಸಿಬ್ಬಂದಿಗಳಿಗೆ ಗ್ರಾಮೀಣ ಗ್ರಾಹಕರನ್ನು ತಲುಪುವ ವಿಧಾನಗಳ ತಾಂತ್ರಿಕತೆಯ ಕೊರತೆ.

೩. ಇವರ ಕಾರ್ಯಚಟುವಟಿಕೆಯ ಮುಖಾಂತರ ಯೋಜನೆಗಳನ್ನು ಬೆಳವಣಿಗೆ ತರಲು ಯಾವುದೇ ಆರ್ಥಿಕ ಬೆಳವಣಿಗೆಯು ಕಂಡುಬರುವುದಿಲ್ಲ.

೪. ಇದಕ್ಕಾಗಿ ಸತತ ಪರಿಶ್ರಮದ ಅಗತ್ಯವಿದೆ.

೫. ಯೋಜನೆಗಳನ್ನು ಸರಿಯಾದ ನಿಟ್ಟಿನಲ್ಲಿ ಕಾರ್ಯರೂಪಕ್ಕೆ ತಂದರೆ ಮಾತ್ರ ಗುರಿ ತಲುಪಲು ಸಾಧ್ಯ. ಇದರಲ್ಲಿ ಯೋಜನೆಗಳ ಕೊರತೆಯನ್ನು ಇಲ್ಲಿ ಕಾಣಬಹುದಾಗಿದೆ.

ಗ್ರಾಮೀಣ ಬಡತನ ಪರಮಾವಧಿ

ಗ್ರಾಮೀಣ ಬಡತನದಲ್ಲಿ ಹಲವಾರು ಛಾಯೆಗಳನ್ನು ಕಾಣಬಹುದು. ಆದರೆ ಬಡವರಲ್ಲಿ ಬಡವರೆಂದರೆ 'ಭೂಮಿ' ಇಲ್ಲದವರು, ಇವರನ್ನು ಬಡತನ ರೇಖೆಗಿಂತಲೂ ಕೆಳಗಿರುವ ಸೀಮಾಂತ ಕಾರ್ಮಿಕರು ಅಥವಾ ಭೂರಹಿತ ಕಾರ್ಮಿಕರೆಂದು ಕರೆಯಬಹುದು. ಅವರು ತಮ್ಮ ದೇಹದ ಪರಿಶ್ರಮದ ಆಧಾರದ ಮೇಲೆಯೇ ಅವರ ಜೀವನ ಅವಲಂಬಿಸಿರುತ್ತದೆ. ಭೂಮಿ ಹೊಂದಿರದ ಬಡರೈತರು ಅತೀ ಕಡಿಮೆ ಆರ್ಥಿಕ ತಲಹದಿಯನ್ನು ಅವಲಂಬಿಸಿರುವುದರಿಂದ ಅವರ ಆರ್ಥಿಕ ಸ್ಥಿತಿಯ ಸುಧಾರಣೆಗೆ ಅವರಿಗೆ ಹಣಕಾಸಿನ ಸಂಪನ್ಮೂಲಗಳು ತಲುಪಬೇಕು ಹಾಗೂ ಅವರ ದೈಹಿಕ ಪರಿಶ್ರಮಕ್ಕೆ ಅನುಕೂಲಕರವಾದ ಬೆಂಬಲದ ಅಗತ್ಯವೂ ಅವಶ್ಯ.[೪೩]

ಇಂದಿನ ವ್ಯವಸ್ಥೆಯಲ್ಲಿ ಹಲವರಿಗೆ ಸಾಲದ ಸಂಪನ್ಮೂಲಗಳ ದೊರೆಯುವಿಕೆಯಲ್ಲಿ ನಿರ್ಬಂದಗಳಿವೆ. ಅವರಿಗೆ ಹಲವಾರು ಸರಕಾರ ಯೋಜನೆಗಳಾದ ಐಆರ್‌ಡಿಪಿ, ಪಿಎಮ್‌ಆವೈ, ಜೆಆರ್‌ವೈ ಮುಂತಾದವುಗಳಿಂದ ಲಾಭ ಪಡೆದು ಮರುಪಾವತಿ ಮಾಡುವ ಸಾಮರ್ಥ್ಯವಿದ್ದರೂ, ಅಡೆತಡೆಗಳು ಉಂಟುಮಾಡಲಾಗುತ್ತಿದೆ. ಬಹು ಗ್ರಾಮೀಣ ಬಡಜನತೆಗೆ ಈ ಸಾಲದ ಯೋಜನೆಗಳ ಅನುಕೂಲತೆಗಳು ಪಡೆದುಕೊಳ್ಳಲು ಆಗುತ್ತಿಲ್ಲ. ಇದಕ್ಕೆ ಕಾರಣ ಹಿಂದೆ ಪಡೆದ ಸಾಲಗಳು ಸರಿಯಾದ ಸಮಯಕ್ಕೆ ಮರುಪಾವತಿಯಾಗದಿರುವುದು. ಈ ಯೋಜನೆಗಳ ಬಗ್ಗೆ ಸರಿಯಾದ ಜ್ಞಾನವಿಲ್ಲದಿರುವುದು. ಬ್ಯಾಂಕು/ಬ್ಯಾಂಕು ಉದ್ಯೋಗಿಗಳೊಂದಿಗೆ ಸಂಪರ್ಕದ ಕೊರತೆ. ಇದಲ್ಲದೆ ಬಡಜನರ ಅವಸರದ ಹಣದ ಅವಶ್ಯಕತೆಗಳಿಗೆ ಬ್ಯಾಂಕುಗಳು ಸಾಲವನ್ನು ಒದಗಿಸುತ್ತಿಲ್ಲ. ಆದಕಾರಣ ಅವರ ಆದಾಯವು ತುಂಬಾ ಕಡಿಮೆ ಮಟ್ಟದಲ್ಲಿದ್ದು, ಕೇವಲ ಕಡಿಮೆ ಉಳಿತಾಯವನ್ನು ಆರ್ಥಿಕ ಅಡಿಪಾಯ ಬೆಳೆಸಲು ಹೂಡಿಕೆ ಮಾಡಬಹುದು.

ಬಡಜನತೆಯು ಸ್ವ-ಸಾಮರ್ಥ್ಯ ಉಳ್ಳವರಾಗಿದ್ದಾರೆ. ಒಗ್ಗಟ್ಟಿನಲ್ಲಿ ಬಲದ ಮುಖಾಂತರ, ಎಲ್ಲಾ ಕಾರ್ಮಿಕರ ಶ್ರಮದ ಒಸ್ನೆಲೆಯನ್ನು ಹೊಂದಿರುವುದರಿಂದ ಜನಸಂಖ್ಯೆಯ ಬಹುಮುಖ್ಯವಾದ ಬೆಳವಣಿಗೆಯ ಅಂಗವಾಗಿದ್ದಾರೆ. ಆದರೆ ಪರಿಶ್ರಮವು ಸೂಕ್ತ ಪ್ರತಿಫಲವನ್ನು ನೀಡುವುದಿಲ್ಲ. ಏಕೆಂದರೆ ಹಣಕಾಸಿನ ಸಂಪನ್ಮೂಲಗಳು ಶ್ರೀಮಂತರ ಹಿಡಿತದಲ್ಲಿರುತ್ತವೆ. ಆದಕಾರಣ ಬಡಜನತೆಯ ಸಾಲದ ಅವಶ್ಯಕತೆಗಳ ಪೂರೈಕೆಗಾಗಿ ಒಂದು ಆದರ್ಶಯುತ ಹಣಕಾಸಿನ (ಸಾಲದ) ಯೋಜನೆಗಳನ್ನು ಹುಟ್ಟಿಕೊಳ್ಳುವುದು ಅವಶ್ಯಕ. ಇದರಿಂದ ಸಾಲದ ಪಡೆದ ಗ್ರಾಹಕ ಸರಿಯಾದ ನಿಟ್ಟಿನಲ್ಲಿ ಸಾಲದ ಬಳಕೆ

ಮಾಡುತ್ತಾನೆ. ಆದರೆ ಇಲ್ಲಿ ಆದಾಯಗಳಲ್ಲಿ ಮಹತ್ವದ ವ್ಯತ್ಯಾಸಗಳನ್ನು ಕಾಣಬಹುದು. ಇದಕ್ಕೆ ಕಾರಣ ಗ್ರಾಹಕನು ತನಗೆ ಬಂದ ಲಾಭದ ಬಹುಮುಖ್ಯ ಭಾಗವನ್ನು ಉಳಿತಾಯ ಮಾಡುತ್ತಾನೆ.

ಬಡಜನತೆಗೆ ಸಾಲದ ಯೋಜನೆಗಳ ಸಾಮಾನ್ಯ ನಕಾರಾತ್ಮಕ ಅಭಿಪ್ರಾಯಗಳು

೧. ತರಬೇತಿ, ಮಾರುಕಟ್ಟೆ, ಸಾರಿಗೆ ವ್ಯವಸ್ಥೆ, ತಾಂತ್ರಿಕತೆ, ಶಿಕ್ಷಣವಿಲ್ಲದೆ ಕೇವಲ ಸಾಲಪೂರೈಕೆಯಿಂದ ಸಾಧನೆಯು ಸಾಧ್ಯವಿಲ್ಲ.

೨. ಮರುಪಾವತಿಯ ಸಾಮರ್ಥ್ಯ ಹೊಂದದ ಬಡಜನತೆಗೆ ಸಾಲ ಒದಗಿಸುವುದು ಬೆಳವಣಿಗೆಗೆ ಪೂರಕವಲ್ಲ.

೩. ಸಾಮಾಜಿಕ ಅವಶ್ಯಕತೆಗಳು ಹಾಗೂ ಬಳಕೆಗಾಗಿ ಸಾಲವು ಬೇರೆ ಮಾರ್ಗಗಳಿಗೆ ವಿನಿಯೋಗಿಸುವ ಸಾಧ್ಯತೆಗಳು ಕಂಡುಬರುತ್ತವೆ.

೪. ಕಡುಬಡತನವು ವ್ಯಕ್ತಿಯ ಮಾನಸಿಕ ಅಭಿವೃದ್ಧಿಯನ್ನು ಕುಂಟಿತಗೊಳಿಸುವುದಲ್ಲದೆ ಅವರ ಜೀವನ ಶೈಲಿಯಲ್ಲೂ ಕುಸಿತವನ್ನುಂಟು ಮಾಡುತ್ತದೆ.

೫. ಗ್ರಾಮೀಣ ಜನರ ಗುಂಪಿನ ಒಗ್ಗಟ್ಟು ಬಲವಾದ ಕಾರಣ, ಸಾಲದ ಯೋಜನೆಗಳ ಮುಖಾಂತರ ಬಡತನವನ್ನು ನಿರ್ಮೂಲನೆಗೊಳಿಸಬಹುದು.

೬. ಬಡಜನತೆಗೆ ಸ್ವ-ಉದ್ಯೋಗವನ್ನು ಆರಂಭಿಸಲು ಪ್ರೋತ್ಸಾಹಿಸಿದಾಗ, ಕೂಲಿ ಕಾರ್ಮಿಕರ ಕೊರತೆಯುಂಟಾಗಿ, ಕಾರ್ಮಿಕರ ವೇತನ ಹೆಚ್ಚಳದ ಕಾರಣದಿಂದ ಕೃಷಿಯ ಉತ್ಪಾದನಾ ವೆಚ್ಚವು ಹೆಚ್ಚಾಗುತ್ತದೆ.

೭. ಬಡಜನತೆಗಾಗಿ ಸಾಲ ಯೋಜನೆಗಳು ಹಣದುಬ್ಬರವನ್ನುಂಟು ಮಾಡಿ ಗ್ರಾಮೀಣ ಆರ್ಥಿಕತೆಯಲ್ಲಿ ಅಸಮತೋಲನವನ್ನುಂಟು ಮಾಡುತ್ತದೆ.

೮. ಮಹಿಳೆಯರಿಗೆ ಸಾಲದ ವ್ಯವಸ್ಥೆಯನ್ನು ಕಲ್ಪಿಸುವುದರಿಂದ ಸಾಂಪ್ರದಾಯಿಕ ಕುಟುಂಬಗಳಲ್ಲಿ ಮಹಿಳೆಯರ ಸ್ಥಾನದಲ್ಲಿ ಗೊಂದಲ ಉಂಟಾಗುತ್ತದೆ.

೯. ಸಾಲವು ಬಡಜನತೆಗೆ ಕೇವಲ ಅಲ್ಪಕಾಲದ ಮಟ್ಟಿಗೆ ಮಾತ್ರ ಸಹಕಾರಿಯಾಗುತ್ತದೆ.

೧೦. ಸಾಲಗಳ ಕಾರ್ಯಕ್ರಮಗಳ ಯಶಸ್ಸು ರಾಷ್ಟ್ರೀಯ ಆರ್ಥಿಕ ಯೋಜನೆಗಳ ಮೇಲೆ ಅವಲಂಬಿತವಾಗಿರುತ್ತದೆ.[೪೪]

ಯಾವುದೇ ಯೋಜನೆಗಳನ್ನು ನಿರೂಪಿಸುವಾಗ ನಿಕರವಾದ ಹಣಕಾಸಿನ ತತ್ವಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಕೇವಲ ಉದ್ದೇಶಗಳ ಪೂರೈಕೆಗಳಿಂದ ಮಾತ್ರ ಅಡಚಣೆಗಳು ಬಗೆಹರಿಯುವುದಿಲ್ಲ. ಇಲ್ಲಿ ಆದ್ಯತೆಗಳ ಬಗ್ಗೆ ಗಮನಹರಿಸುವುದು ಅವಶ್ಯಕ. ಉತ್ಪಾದನೆಯಲ್ಲಿ ಬೆಳವಣಿಗೆ ಹಾಗೂ ಲಾಭದಲ್ಲಿ ಬೆಳವಣಿಗೆಯಾದಾಗ ಮಾತ್ರ ಬಡಜನತೆಯು ಬೆಳವಣಿಗೆಯಡಿ ಸಾಗಲು ಸಾಧ್ಯ. ಬಡತನ ನಿರ್ಮೂಲನಾ ಕಾರ್ಯಕ್ರಮದಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಗ್ರಾಮೀಣ ಜನತೆಯು ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬೇಕು. ಕೇವಲ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಮಾತ್ರ ಗಮನ ನೀಡದೇ ಇತರೇ ಚಟುವಟಿಕೆಗಳಲ್ಲೂ ಭಾಗವಹಿಸಿ ಬೆಳವಣಿಗೆ ದಿಕ್ಕಿನಲ್ಲಿ ಕ್ರಮಿಸಿದಾಗ ಮಾತ್ರ ಉತ್ಪಾದನೆಯು ಅಧಿಕಗೊಳ್ಳುತ್ತದೆ. ಅವುಗಳು ಇಂತಿವೆ. ೧.

ನೈಸರ್ಗಿಕ ಸಂಪನ್ಮೂಲಗಳ ವ್ಯವಸ್ಥಿತ ಬಳಕೆ. ೨. ಮಾನವ ಸಂಪನ್ಮೂಲಗಳ ಸಮರ್ಪಕ ಬಳಕೆ. ೩. ಉಳಿತಾಯ ಮತ್ತು ಸಾಲದ ಯೋಜನೆಗಳು.

ಬಡಜತನಾ ನಿರ್ಮೂಲನಾ ಕಾರ್ಯಕ್ರಮಗಳಲ್ಲಿ ಬಡಜನತೆಯು ಸಕ್ರೀಯ ಪಾಲ್ಗೊಳ್ಳುವಿಕೆಯಿಂದ ಮಾತ್ರ ಯಶಸ್ಸು ತಲುಪಲು ಸಾಧ್ಯ. ಭಾಗವಹಿಸುವಿಕೆಯನ್ನು ನಾಲ್ಕು ವಿಧಗಳ ಮುಖಾಂತರ ಮಾಡಬಹುದು.

೧. ನಿರ್ಧಾರ ತೆಗೆದುಕೊಳ್ಳುವುದು. ಅಡಚಣೆಗಳನ್ನು ಗುರುತಿಸುವುದು, ಪರ್ಯಾಯ ಯೋಜನೆಗಳು, ಸಂಪನ್ಮೂಲಗಳ ವಿತರಣೆ.
೨. ಕಾರ್ಯರೂಪಗೊಳಿಸುವುದು, ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ, ಯೋಜನೆಗಳ ವ್ಯವಸ್ಥೆ ಹಾಗೂ ಯೋಜನೆಗಳ ಕಾರ್ಯರೂಪಗೊಳಿಸುವುದು.
೩. ವೈಯಕ್ತಿಕವಾಗಿ ಅಥವಾ ಗುಂಪುಗಳ ಮುಖಾಂತರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಇತರ ಪ್ರಯೋಜನೆಗಳನ್ನು ಪಡೆಯುವುದಕ್ಕೆ ಶ್ರಮಿಸುವುದು.
೪. ಈ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮುಖಾಂತರ ಕಂಡ ಯಶಸ್ಸಿನ ಬಗ್ಗೆ ಅರಿಯುವುದು.[೪೫]

ಸ್ವ-ಸಹಾಯ ಗುಂಪುಗಳ ಸ್ಥಾಪನೆಯ ಅವಶ್ಯಕತೆ

ವ್ಯಕ್ತಿಗತವಾಗಿ ಒಬ್ಬ ವ್ಯಕ್ತಿಗೆ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಕ್ಲಿಷ್ಟಕರ. ಆದರೆ ಗುಂಪುಗಳ ಸದಸ್ಯರಾಗುವುದರ ಮುಖಾಂತರ ಸೂಕ್ತವಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸಾಧ್ಯ. ಒಬ್ಬ ಬಡವ್ಯಕ್ತಿ ಹಲವಾರು ರೀತಿಯಲ್ಲಿ ತುಳಿತಕ್ಕೆ ಒಳಪಟ್ಟಿರುತ್ತಾನೆ. ಆದಕಾರಣ ಅವನಿಗೆ ಸಲಹೆಗಳ ಅವಶ್ಯಕತೆ ಕಂಡುಬರುತ್ತದೆ. ಒಂದು ಗುಂಪಿನ ಸದಸ್ಯನಾದಾಗ ಅವನಿಗೆ ಆತ್ಮಸ್ಥೈರ್ಯ, ವಿಶ್ವಾಸ ಮೂಡಿಬರುತ್ತದೆ. ಆದ್ದರಿಂದ ಸಾಲದ ಯೋಜನೆಯು ಬಡಜನತೆಗೆ ಗುಂಪುಗಳ ಮುಖಾಂತರ ಸಹಾಯ ಮಾಡುತ್ತಿದೆ.

ಸ್ವ-ಸಹಾಯದ ಪರಿಕಲ್ಪನೆಯ ಮೂಲಕ ಬಡತನ ನಿರ್ಮೂಲನೆಯನ್ನು ಮಾಡಬಹುದು. ಸ್ವ-ಸಹಾಯ ಮೂಲಕ ಒಬ್ಬ ವ್ಯಕ್ತಿಯ ಸಾಧನೆಯನ್ನು ಮಾಡಲು ಸಹಾಯ ಮಾಡುತ್ತದೆ. ಒಬ್ಬ ವ್ಯಕ್ತಿಯ ಹಣೆಬರಹ ನಿರ್ಧಾರವಾಗುವುದು ಅವನ ಪರಿಶ್ರಮದಿಂದಲೇ. ಆದಕಾರಣ ಎಲ್ಲಾ ವ್ಯಕ್ತಿಗಳನ್ನು ಗುಂಪಿನ ಮುಖಾಂತರ ಸಂಘಟಿಸುವುದರಿಂದ ಗುಂಪಿನ ಎಲ್ಲಾ ಸದಸ್ಯರೂ ಲಾಭವನ್ನು ಪಡೆಯುತ್ತಾರೆ. ಗುಂಪಿನ ನಿರ್ಧಾರ, ಗುಂಪಿನ ಚಟುವಟಿಕೆಗಳು ಹಾಗೂ ಎಲ್ಲರ ಒಳಿತಿಗಾಗಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು ಇದರ ಪ್ರಮುಖ ಉದ್ದೇಶವಾಗಿದೆ. ಈ ಸಂಘಟನೆಯು ಅಧಿಕಾರವನ್ನು ಹೊಂದಿದೆ. ಬಡಜನತೆಗೆ ಸಹಾಯ ಮಾಡುವ ಒಂದು ಪರಿಣಾಮಕಾರಿಯಾದ ಗುಂಪಾಗಿದೆ.

ಗ್ರಾಮೀಣ ಬಡಜನತೆಯ ಆರ್ಥಿಕ ತಳಹದಿಯನ್ನು ಬೆಳೆಸಲು ಹಲವಾರು ರೀತಿಯ ಹಣದ ವಿನಿಯೋಗಗಳನ್ನು ಸಾಲದ ಯೋಜನೆಗಳ ಮುಖಾಂತರ ಮಾಡಲಾಗುತ್ತಿದೆ. ಕಡಿಮೆ ಆದಾಯ/ ಕಡಿಮೆ

ಉಳಿತಾಯ/ ಕಡಿಮೆ ಹೂಡಿಕೆ ಎಲ್ಲವನ್ನು ಸಾಲಗಳು ನೀಡುವುದರ ಮುಖಾಂತರ ತಡೆಹಿಡಿಯಬಹುದು. ಸಾಲವನ್ನು ನೀಡುವುದರಿಂದ ಹೆಚ್ಚಿನ ಹೂಡಿಕೆ/ ಹೆಚ್ಚಿನ ಆದಾಯ/ ಉಳಿತಾಯವು ಸಾಧ್ಯ.

ಉಳಿತಾಯ ಮಾಡುವವರನ್ನು ಹಾಗೂ ಸಾಲ ಪಡೆಯುವವರನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಉಳಿತಾಯ ಮಾಡುವವರು ಬ್ಯಾಂಕಿನಲ್ಲಿ ಠೇವಣಿಗಳನ್ನು ಇಡುತ್ತಾರೆ ಮತ್ತು ಸಾಲ ಪಡೆಯುವವರು ಬ್ಯಾಂಕಿನಿಂದ ಹಣದ ರೂಪದಲ್ಲಿ ಸಾಲ ಪಡೆಯುತ್ತಾರೆ. ಅಂದರೆ ಉಳಿತಾಯ ಮಾಡುವ ವ್ಯಕ್ತಿಯು ಹಣ ವಿನಿಯೋಗಿಸುವವನು ಆಗಿರಬಹುದು. ಅವನ ವಿನಿಯೋಗವು ಚಿಕ್ಕ ಮಟ್ಟದ್ದಾಗಿದ್ದರೂ, ಅವನು ಮಾಡಿದ ಉಳಿತಾಯವನ್ನು ಯಾವ ಸಮಯದಲ್ಲಾದರೂ ಮರುವಾಪಸ್ಸು ಪಡೆಯಬಹುದು. ಗುಂಪಿನ ಮೇಲಿನ ಒತ್ತಡದಿಂದ ಸಾಲದ ಮರುಪಾವತಿಯ ಸುಲಭ ಸಾಧ್ಯ.

ಗುಂಪಿನ ಉಳಿತಾಯಗಳಿಂದ ಹಲವಾರು ಉದ್ದೇಶಗಳು ಈಡೇರುತ್ತವೆ.

೧. ಉಳಿತಾಯದ ಶಿಸ್ತನ್ನು ಗುಂಪಿನ ಸದಸ್ಯರಲ್ಲಿ ಸ್ವ-ಸಹಾಯ ಗುಂಪುಗಳು ಉಂಟುಮಾಡುತ್ತವೆ. ಉಳಿತಾಯವು ಒಬ್ಬ ವ್ಯಕ್ತಿಯ ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತದೆ. ಇದು ಗುಂಪಿನ ಪ್ರೋತ್ಸಾಹದಿಂದ ಮಾತ್ರ ಸಾಧ್ಯ.
೨. ಸಾಮಾನ್ಯ ವ್ಯವಹಾರದ ತೊಂದರೆಗಳಲ್ಲಿ ಉಳಿತಾಯವು ಸಹಕಾರಿಯಾಗುತ್ತದೆ. ಆದಾಯಗಳಲ್ಲಿ ಅಲ್ಪ ಬದಲಾವಣೆಗಳು, ಪ್ರಕೃತಿ ವಿಕೋಪಗಳ ಸಂದರ್ಭಗಳಾದ ಬರಗಾಲ, ನೆರೆಹಾವಳಿಗಳ ಸಮಯದಲ್ಲಿ ಉಳಿತಾಯವು ಉಪಯೋಗವಾಗುತ್ತದೆ.
೩. ಗುಂಪಿನ ಉಳಿತಾಯಗಳ ಮುಖಾಂತರ ಗುಂಪಿನ ಬಲವನ್ನು ಪ್ರದರ್ಶಿಸಬಹುದು.

ಸ್ವ-ಸಹಾಯ ಗುಂಪುಗಳ ಸ್ಥಾಪನೆಗೆ ಉಳಿತಾಯ ಮತ್ತು ಸಾಲವು ಸಹಕಾರಿಯಾಗಿದೆ. ಬಡಜನತೆಗೆ ಸ್ವ-ಸಹಾಯ ಗುಂಪುಗಳು ಸಾಲ ನೀಡುವ ಪ್ರಮುಖ ಮಾದರಿ ಎನಿಸಿದರೆ, ಸ್ವ-ಸಹಾಯ ಗುಂಪುಗಳ ಸ್ಥಾಪನೆಯು ಅತ್ಯವಶ್ಯಕ. ಈ ಗುಂಪಿನ ಸದಸ್ಯರುಗಳ ಸಂಖ್ಯೆಯು ೨೦ಕ್ಕೂ ಕಡಿಮೆ ಇರಬೇಕು ಹಾಗೂ ಒಂದೇ ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳವರಾಗಿರಬೇಕು. ಇದರಿಂದ ಸದಸ್ಯರ ನಡುವೆ ಪರಸ್ಪರ ಸಹಕಾರವು ಉಂಟಾಗುತ್ತದೆ.[೪೬]

ಸ್ವ-ಸಹಾಯ ಗುಂಪುಗಳು ಸ್ವತಃ ಮುಂದೆ ಬರಬೇಕು ಅಥವಾ ಸರಕಾರೇತರ ಸಂಸ್ಥೆಗಳ ಮುಖಾಂತರ ಸಾಲಗಳನ್ನು ಪಡೆಯಲು ಮುಂಬರಬೇಕು. ಸ್ವ ಸ್ಥಾಪನೆಯಾದ ಗುಂಪುಗಳಲ್ಲಿ ಒಗ್ಗಟ್ಟಿನಲ್ಲಿ ಬಲಪ್ರದರ್ಶನ ಕಂಡುಬರುತ್ತಿವೆ.

ಸ್ವಾವಲಂಬನೆಯಾಗಲು ಹಾಗೂ ಇತರ ಹಣಕಾಸಿನ ಸಂಸ್ಥೆಗಳ ಮೇಲೆ ಅವಲಂಭಿಸದಿರಲು ಬಲವಾದ ಉಳಿತಾಯ ಯೋಜನೆಗಳ ಅವಶ್ಯಕತೆಯಿದೆ. ಈ ಉಳಿತಾಯದ ಯೋಜನೆಗಳು ಹಣಕಾಸಿನ ಸಂಸ್ಥೆಗಳಿಂದ ಸಾಲ ಪಡೆಯುವುದನ್ನು ತಡೆಯುತ್ತವೆ ಎಂಬುದಲ್ಲ. ಆದರೆ ನಿಧಿಗಳ ಮೂಲಕ ಸದಸ್ಯರು ಹಣಕಾಸಿನ ಬಳಕೆಯಲ್ಲಿ ಶಿಸ್ತನ್ನು ಪರಿಪಾಲನೆ ಮಾಡಬಹುದು.

ಸ್ವ-ಸಹಾಯ ಗುಂಪುಗಳ ಸ್ಥಾಪನೆಯ ಅಂಶಗಳು

ಬಡ ವ್ಯಕ್ತಿಗಳಿಗೆ ಅಥವಾ ಗುಂಪುಗಳಿಗೆ ಉಳಿತಾಯ ಹಣವನ್ನು ರಕ್ಷಿಸಿಡಲು ಅವಕಾಶ ನೀಡಿದಾಗ, ಚಿಕ್ಕ ಹಣಕಾಸನ್ನು ವ್ಯವಸ್ಥಿತವಾಗಿ ಬಳಸುವುದನ್ನು ಕಾಣಬಹುದು. ಈ ನಂಬಿಕೆಯು ಹಲವಾರು ಸ್ವ-ಸಂಸ್ಥೆಗಳಿಂದ, ಸ್ವ-ಸಹಾಯ ಗುಂಪುಗಳ ಸ್ಥಾಪನೆಗಳಿಗೆ ಕಾರಣವಾದವು. ಈ ಸ್ವ-ಸಹಾಯ ಗುಂಪುಗಳು ಗ್ರಾಮೀಣ ಬಡಜನತೆಗೆ ಉಳಿತಾಯ ಮಾಡುವುದು, ಹಣವನ್ನು ಶಿಸ್ತುಬದ್ಧವಾಗಿ ವಿನಿಯೋಗಿಸಲು ಹಾಗೂ ತಮ್ಮ ಸ್ಥಿರ ನಿಧಿಗಳಿಂದಲೇ ಸಾಲವನ್ನು ಪಡೆದುಕೊಳ್ಳಲು ಸಹಾಯ ಮಾಡುತ್ತವೆ. ಸ್ವ-ಸಹಾಯ ಗುಂಪುಗಳ ಮುಖಾಂತರ ಆರ್ಥಿಕ ಚಟುವಟಿಕೆಗಳು, ಉಳಿತಾಯಗಳ ಉಪಯೋಗವು ಶಿಸ್ತುಬದ್ಧವಾಗಿ ನಡೆಯುತ್ತಿದೆ. ಸರ್ಕಾರೇತರ ಸಂಸ್ಥೆಗಳು ಸ್ವ-ಸಹಾಯ ಗುಂಪುಗಳ ಸದಸ್ಯರುಗಳಿಗೆ ಅಸಾಂಪ್ರದಾಯಿಕ ಶಿಕ್ಷಣವನ್ನು ಒದಗಿಸುವುದಲ್ಲದೇ ಅವರಲ್ಲಿ ಅರಿವನ್ನು ಮೂಡಿಸುವ ಕಾರ್ಯವನ್ನು ಮಾಡುತ್ತಿದೆ. ಇದರಿಂದ ಸದಸ್ಯರುಗಳು ಸ್ವ-ನಿರ್ಧಾರ ತೆಗೆದುಕೊಳ್ಳಲು ಶಕ್ತರಾಗಿ ಹಲವಾರು ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸಿ, ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಆದಕಾರಣ ಒಗ್ಗಟ್ಟಿನ ಧ್ವನಿಗಳಿಗೆ, ಸಾಧನೆಗಳಿಗೆ ಸ್ವ-ಸಹಾಯ ಗುಂಪುಗಳು ಒಂದು ವೇದಿಕೆಯಾಗಿವೆ.

ಸ್ವ-ಸಹಾಯ ಗುಂಪುಗಳು ಸಹಕಾರಿ ಸಂಘಗಳ ತತ್ವದ ಮಾದರಿಯಲ್ಲೇ ಕಾರ್ಯನಿರ್ವಹಿಸುತ್ತಿವೆ. ಇವು ಸಹಕಾರಿ ಸಂಘಗಳ ಯೋಜನೆಗಳಿಗಿಂತ ಯಶಸ್ಸನ್ನು ಸಾಧಿಸಿವೆ. ಇದಕ್ಕೆ ಕಾರಣ ಸ್ವ-ಸಹಾಯ ಗುಂಪುಗಳ ಸದಸ್ಯರುಗಳು ಒಂದೇ ಅಭಿಪ್ರಾಯಗಳನ್ನು ಉಳ್ಳವರಾಗಿದ್ದಾರೆ. ಅಂದರೆ ಇದು ಕೇವಲ ಮಹಿಳೆಯರಿಗೆ ಮಾತ್ರ ಸೇರಿದ ಗುಂಪಾಗಿರಬಹುದು. ಅಥವಾ ಒಂದೇ ಪಂಗಡಕ್ಕೆ ಅಥವಾ ಉಪಪಂಗಡಕ್ಕೆ ಸೇರಿದ ಗುಂಪಾಗಿರಬಹುದು ಇಲ್ಲವೇ ಒಂದೇ ಗ್ರಾಮಕ್ಕೆ ಸೇರಿದ ಗುಂಪಾಗಿರಬಹುದು. ಸ್ವ-ಸಹಾಯ ಗುಂಪುಗಳ ಸಾಮಾನ್ಯ ಲಕ್ಷಣವೆಂದರೆ, ಈ ಗುಂಪುಗಳು ಚಿಕ್ಕದಾಗಿರುವುದರಿಂದ ಒಗ್ಗಟ್ಟಿನಿಂದ ಶ್ರಮಿಸುವುದು ಕಂಡುಬರುತ್ತದೆ. ದೊಡ್ಡ ಸ್ವ-ಸಹಾಯ ಗುಂಪುಗಳು ಚಿಕ್ಕ ಗುಂಪುಗಳಾಗಿ ಚದುರಿರುವುದು ಕಂಡುಬಂದಿದೆ. ಇದಕ್ಕೆ ಜಾತಿ ಅಥವಾ ಕಸುಬುಗಳು ಕಾರಣವಾಗಿರಬಹುದು. ವ್ಯಕ್ತಿಗತವಾದ ಅವಶ್ಯಕತೆಗಳು ಹಾಗೂ ಗುಂಪಿನ ಸಹಕಾರಿಗಳಿಂದ ಒಂದು ಸಮತೋಲವನ್ನು ಕಾಣಬಹುದು. ಹಲವು ಸ್ವ-ಸಂಸ್ಥೆಗಳೂ ಈ ಗುಂಪುಗಳಿಗೆ ಪ್ರೋತ್ಸಾಹ ನೀಡುತ್ತಿವೆ. ಇಲ್ಲಿ ಸದಸ್ಯರು ಸಕ್ರಿಯವಾಗಿ ಭಾಗವಹಿಸುವಂತೆ ಮಾಡುತ್ತವೆ.[೯೨]

ಈ ಅಂಶಗಳು ಸಾಂಪ್ರದಾಯಿಕ ಕೋ-ಆಪರೇಟಿವ್ ಸಂಸ್ಥೆಗಳಲ್ಲಿ ಕಂಡುಬರುವುದಿಲ್ಲ. ಇದಕ್ಕೆ ಕಾರಣ ಇದರ ಗಾತ್ರವು ದೊಡ್ಡ ಮಟ್ಟದಲ್ಲಿರುವುದು ಹಾಗೂ ಇದರಲ್ಲಿ ಕಾರ್ಯನಿರ್ವಹಿಸುವುದರ ಅಧ್ಯಕ್ಷತೆ ಕೆಲವೊಮ್ಮೆ ಇಲ್ಲಿಯೂ ದುರ್ಬಳಕೆಗಳು ನಡೆಯುವುದು ಕಂಡುಬರುತ್ತದೆ. ಕೆಲವೊಮ್ಮೆ ಬಡವರ ಹಾಗೂ ಸಂಸ್ಥೆಯಲ್ಲಿರುವ ಸದಸ್ಯರ ನಡುವೆ ಸಂಘರ್ಷಗಳು ಕಂಡುಬರುತ್ತವೆ. ಆದರೆ ಕೋ-ಆಪರೇಟಿವ್ ಸಂಘಗಳಲ್ಲಿ ಬಡವರಿಗೆ ಯಾವ ಬೆಂಬಲವೂ ಕಂಡುಬರುವುದಿಲ್ಲ.

ಆದರೂ ಈ ಕೋ-ಆಪರೇಟಿವ್‌ಗಳಲ್ಲಿ ಬಡವರಿಗೆ ಸಾಲಗಳು, ಉಳಿತಾಯ ಖಾತೆಗಳು ಮುಂತಾದವುಗಳಿಗೆ ಅನುಕೂಲ ಮಾಡಿಕೊಟ್ಟರೂ ಸದಸ್ಯರು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ವಿಫಲರಾಗಿರುವುದು ಕಂಡುಬರುತ್ತದೆ. ಅವರು ಕೇವಲ ಸದಸ್ಯರಾಗಿಯೇ ಉಳಿದು ಮತ್ತೊಬ್ಬರ ನಿರ್ಧಾರವನ್ನವಲಂಬಿಸಿ ಜೀವನ ಮಾಡುವುದು ಕಂಡುಬರುತ್ತದೆ. ಸ್ವ-ಸಹಾಯ ಗುಂಪುಗಳ ಬಡಸದಸ್ಯರು ಮೂರು ವಿಧದ ಸಂದರ್ಭಗಳಲ್ಲಿ ತಮ್ಮನ್ನು ತಾವು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಕಂಡುಬರುತ್ತದೆ.

೧. ಕೃಷಿ, ಹೈನುಗಾರಿಕೆ, ಕರಕುಶಲ ಕಲೆ, ಚಿಕ್ಕವ್ಯಾಪಾರಗಳಲ್ಲಿ ಕಾರ್ಮಿಕರಾಗಿ ಶ್ರಮಿಸಲು ವ್ಯಕ್ತಿಗತವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ.
೨. ಎಲ್ಲರು ಸೇರಿ ವ್ಯವಹಾರವನ್ನು ಆರಂಭಿಸಲು ಹಣವನ್ನು ಹೂಡುವುದು. ಉದಾಹರಣೆಗೆ ಬಾವಿ ತೋಡಿಸಲು, ಕೃಷಿ ಸೇವಾ ಕೇಂದ್ರ ಮುಂತಾದವು. ಇಂತಹ ಸಂದರ್ಭಗಳಲ್ಲಿ ಪ್ರಮುಖವಾಗಿ ಕೃಷಿ ಮಾಡುವುದು ಕಂಡುಬಂದಿದೆ.
೩. ಗುಂಪು ಚಟುವಟಿಕೆಗಳಾದ ಸಾಮಾಜಿಕ ಪ್ರಗತಿ ಮುಂತಾದ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬಹುದು. ಪ್ರತಿ ಸದಸ್ಯರಿಗೂ ಜವಾಬ್ದಾರಿಯನ್ನು ಹಂಚಲಾಗಿರುತ್ತದೆ.[೪೮]

ಸ್ವ-ಸಹಾಯ ಗುಂಪುಗಳ ಅರ್ಥ

ಸ್ವ-ಸಹಾಯವೇ ಅತ್ಯುತ್ತಮ ಸಹಾಯ (Self-Help is the best help) ಎಂಬ ಮಾತು ಬಹಳ ಪ್ರಾಚೀನವಾದುದು. ಸ್ವ-ಸಹಾಯ ಪರಿಣಾಮಗಳು ಬಹಳ ವ್ಯಾಪಕವಾದುವುಗಳಾಗಿರುತ್ತವೆ. ಜನರು ತಮಗೆ ತಾವೇ ಸಹಾಯ ಮಾಡಿಕೊಂಡಾಗ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ವಿಕಾಸದ ಸಾಧನೆಯ ಜೊತೆಯಲ್ಲಿ ಅವರಲ್ಲಿ ಸ್ವಾಭಿಮಾನವೂ ಹೆಡೆಯೆತ್ತಿ ನಿಲ್ಲಬಲ್ಲದು.

ಒಂದು ನಿರ್ಧಿಷ್ಟವಾದ ಧ್ಯೇಯ ಮತ್ತು ಉದ್ದೇಶವನ್ನು ಹೊಂದಿದ್ದು, ತಮಗೆ ತಾವೇ ಸಹಾಯವನ್ನು ಮಾಡಿಕೊಳ್ಳುವ ಸಮಾನ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನುಳ್ಳ ಸಮಾನ ಆಸಕ್ತಿ ಮತ್ತು ಮನಸ್ಸನ್ನು ಹೊಂದಿರುವ ಹಾಗೂ ಸಮಾನ ಚಿಂತನೆಯಿರುವ ಸದಸ್ಯರನ್ನೊಳಗೊಂಡ ಜನರ ಒಂದು ಸಮೂಹವನ್ನು 'ಸ್ವ-ಸಹಾಯ ಗುಂಪು' ಎಂದು ಕರೆಯಲಾಗುತ್ತದೆ. ಒಂದು ಸ್ವ-ಸಹಾಯ ಗುಂಪು ಹತ್ತರಿಂದ ಇಪ್ಪತ್ತರವರೆಗೆ ಸದಸ್ಯರನ್ನು ಒಳಗೊಂಡಿರುವ ಸಮೂಹವಾಗಿರುತ್ತದೆ. ಈ ಸದಸ್ಯರ ವಯಸ್ಸು ೧೮ರಿಂದ ೬೦ ವರ್ಷಗಳ ಒಳಗಿರಬೇಕು.[೪೯]

ನಬಾರ್ಡ್‌ನ ನಿರ್ವಚನದ ಪ್ರಕಾರ, ಏಕರೂಪಿ ವರ್ಗಕ್ಕೆ ಸೇರಿದ ಮತ್ತು ಒಟ್ಟಿಗೆ ಸಾಮಾನ್ಯ ಸಮಸ್ಯೆಗಳನ್ನು ಎದುರಿಸಲು ಸಿದ್ಧರಿರುವ ೨೦ ಅಥವಾ ಅದಕ್ಕಿಂತ ಕಡಿಮೆ ಸದಸ್ಯರ ಗುಂಪೇ ಸ್ವ-ಸಹಾಯ ಗುಂಪು. ಇವು ನಿಯಮಿತವಾಗಿ ಉಳಿತಾಯ ಮಾಡುತ್ತವೆ ಮತ್ತು ಹೀಗೆ ಉಳಿತಾಯ ಮಾಡಿದ ಮೊತ್ತವನ್ನು ಸದಸ್ಯರಿಗೆ ಬಡ್ಡಿ ಆಧಾರಿತ ಸಾಲ ನೀಡಲು ಬಳಸುತ್ತವೆ. ಈ ಪ್ರಕ್ರಿಯೆಯಿಂದ ಹಣಕಾಸು

ನಿರ್ವಹಣೆಯ ಅಗತ್ಯ ನಿಯಮಗಳನ್ನು, ಅಗತ್ಯಗಳ ಆಧ್ಯತಾ ಶ್ರೇಣಿಯನ್ನು ಸಿದ್ಧಪಡಿಸುವುದನ್ನು, ಮರುಪಾವತಿಯ ಕ್ರಮಗಳನ್ನು ಸ್ವಯಂ-ನಿರ್ಧರಿಸುವ ಪರಿಯನ್ನು ಮತ್ತು ಲೆಕ್ಕಪತ್ರಗಳನ್ನು ವ್ಯವಸ್ಥಿತವಾಗಿಡುವ ಕ್ರಮವನ್ನು ಸದಸ್ಯರು ಮೈಗೂಡಿಸಿಕೊಳ್ಳುವುದಕ್ಕೆ ನೆರವಾಗುತ್ತದೆ. ಇದರಿಂದಾಗಿ ಹಣಕಾಸು ವ್ಯವಹಾರದ ಶಿಸ್ತನ್ನು ಮತ್ತು ಸಾಲದ ಚರಿತ್ರೆಯನ್ನು ರೂಪಿಸಬಹುದಾಗಿದೆ. ಸದಸ್ಯರ ಉಳಿತಾಯದಿದಂಲೇ ಬಹುರೂಪಿಯಾಗಿ ಅವರಿಗೆ ಸಾಲ ನೀಡಲು ಬ್ಯಾಂಕಿಗೆ ಬೇಕಾದ ಉತ್ತೇಜನ ಇದರಿಂದ ದೊರೆಯುತ್ತದೆ ಮತ್ತು ಯಾವುದೇ ಭದ್ರತೆಯಿಲ್ಲದೆ ವ್ಯವಹಾರ ಮಾಡುವುದು ಇದರಿಂದ ಸಾಧ್ಯವಾಗುತ್ತದೆ.[೫೦] ಎಂದು ಸ್ವ-ಸಹಾಯ ಗುಂಪುಗಳ ಬಗ್ಗೆ ತನ್ನ ವ್ಯಾಖ್ಯಾನ ನೀಡಿದೆ.

ಭಾರತದಂತಹ ಅಲ್ಪಾಭಿವೃದ್ಧಿ ಹೊಂದಿದ ದೇಶದಲ್ಲಿ ಬಡತನದ ನಿವಾರಣೆಯು ಬಹುಮುಖ ಆಕ್ರಮಗಳನ್ನು ಅಪೇಕ್ಷಿಸುತ್ತದೆ ಹಾಗೂ ಹತ್ತು ಹಲವು ನಿಷ್ಠರ ಕಾರ್ಯಕ್ರಮಗಳ ಯಶಸ್ವೀ ಅನುಷ್ಠಾನವನ್ನು ಬಯಸುತ್ತದೆ. ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ದೇಶದಲ್ಲಿ ಜಾರಿಗೊಳಿಸಲಾದ ಬಡತನ ನಿವಾರಣೆಯ ಮತ್ತು ಉದ್ಯೋಗ ಸೃಷ್ಟಿಯ ಕಾರ್ಯಕ್ರಮಗಳು ಸಹಸ್ರಾರು. ಆದರೆ ಸ್ವಲ್ಪಮಟ್ಟಿನ ಯಶಸ್ವಿಗೆ ಮಾತ್ರ ಪಾತ್ರವಾಗಿವೆ. ಇಂತಹ ಕಾರ್ಯಕ್ರಮಗಳು ಕೇವಲ ಗುರಿ ಅಭಿಮುಖವಾಗಿದ್ದುದು, ಜನರ ಪಾಲ್ಗೊಳ್ಳುವಿಕೆಯ ಕೊರತೆ, ಸ್ಥಳೀಯ ಸಂಪನ್ಮೂಲಗಳ ಬಳಕೆಗೆ ಸರಿಯಾದ ಅವಕಾಶ ಕಲ್ಪಿಸದಿದ್ದರು, ತರಬೇತಿ ಮತ್ತು ಉದ್ಯೋಗ ಸೃಷ್ಟಿಯ ಕಾರ್ಯಕ್ರಮಗಳ ನಡುವೆ ಸಮರ್ಪಕವಾದ ಸಂಪರ್ಕಕೊಂಡಿಯನ್ನು ಅಭಿವೃದ್ಧಿ ಪಡಿಸಲು ವಿಫಲತೆ ಮುಂತಾದವು. ಈ ಕಾರ್ಯಕ್ರಮಗಳು ಸಂಪೂರ್ಣ ಫಲಪ್ರದವಾಗದೇ ಇರಲು ಕಾರಣಗಳಾಗಿರಬಹುದು.

ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಸ್ವ-ಸಹಾಯ ಗುಂಪುಗಳ ಪ್ರತ್ಯೇಕ ಸ್ಥಾನದಲ್ಲಿ ನಿಲ್ಲುತ್ತವೆ ಮತ್ತು ಬಡತನ ನಿವಾರಣೆಯಲ್ಲಿ ಮಹತ್ವ ಪೂರ್ಣವಾದ ಪಾತ್ರವನ್ನು ನಿರ್ವಹಿಸುತ್ತವೆ.

ಸ್ವ-ಸಹಾಯ ಗುಂಪುಗಳು ಕೃಷಿ ಕಾರ್ಮಿಕರ, ಗ್ರಾಮೀಣ ಪ್ರದೇಶಗಳ ಅಸಂಘಟಿತ ಕಾರ್ಮಿಕರ, ಗ್ರಾಮೀಣ ಮಹಿಳೆಯರ, ಭೂರಹಿತರ, ಅಸಂಘಟಿತ ಕುಶಲಕರ್ಮಿಗಳ ಮತ್ತು ಒಟ್ಟಾರೆಯಾಗಿ ಬಡವರ ಬದುಕನ್ನು ಹಸನುಗೊಳಿಸಲು ಸಾರ್ಥಕ ವೇದಿಕೆಗಳಾಗಿ ಪರಿಣಮಿಸಿವೆ.[೫೧]

ಸ್ವ-ಸಹಾಯ ಸಂಘಗಳನ್ನು ಯಾರು ರಚಿಸಬಹುದು?

ಸಾಧಾರಣವಾಗಿ ಸ್ವ-ಸಹಾಯ ಸಂಘಗಳನ್ನು ಆಯಾಯಾ ಪ್ರದೇಶಗಳಲ್ಲಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಆರೋಗ್ಯ ಇತ್ಯಾದಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಅಂಗನವಾಡಿ ಕಾರ್ಯಕರ್ತರು ಪ್ರಾರಂಭಿಸಬಹುದು.

ಗ್ರಾಮೀಣ ಬಡವರೊಡನೆ ಒಡನಾಡುವ, ಅವರಿಗಾಗಿ ಅವರೊಡನೆ ಕೆಲಸ ಮಾಡಲು ಸಿದ್ಧವಿರುವ ಯಾವುದೇ ವ್ಯಕ್ತಿ–ಸಂಸ್ಥೆಗಳೂ ಸ್ವ–ಸಹಾಯ ಸಂಘಗಳನ್ನು ರಚಿಸಬಬಹುದು.[೫೨]

ಸ್ವ–ಸಹಾಯ ಗುಂಪುಗಳಲ್ಲಿ ಮಹಿಳಾ ಗುಂಪುಗಳದ್ದೇ ಮೈಲುಗೈ. ಭಾರತದಲ್ಲಿ ಒಟ್ಟಾರೆಯಾಗಿ ಗಮನಿಸಿದರೆ ಒಟ್ಟು ಸ್ವ–ಸಹಾಯ ಗುಂಪುಗಳಲ್ಲಿ ಸುಮಾರು ಶೇಕಡಾ.೯೦ರಷ್ಟು ಮಹಿಳಾ ಗುಂಪುಗಳು ಮತ್ತು ಶೇ.೧೦ರಷ್ಟು ಮಾತ್ರ ಪುರುಷ ಗುಂಪುಗಳು ಇರುವುದು ಕಂಡುಬರುತ್ತದೆ. ಕನಾಟಕ ರಾಜ್ಯದಲ್ಲಿ ಒಟ್ಟು ಸ್ವ–ಸಹಾಯ ಗುಂಪುಗಳಲ್ಲಿ ಸುಮಾರು ಶೇ.೮೨ರಷ್ಟು ಮಹಿಳಾ ಗುಂಪುಗಳ ಮತ್ತು ಸುಮಾರು ಶೇ.೧೮ರಷ್ಟು ಪುರುಷ ಗುಂಪುಗಳಾಗಿವೆ. ಆದರೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮಹಿಳಾ ಗುಂಪುಗಳ ಪ್ರಮಾಣ ಸುಮಾರು ಶೇ.೬೦ರಷ್ಟು ಮತ್ತು ಪುರುಷ ಗುಂಪುಗಳ ಪ್ರಮಾಣ ಸುಮಾರು ಶೇ.೪೦ರಷ್ಟು ಇದೆ. ಉಡುಪಿ ಜಿಲ್ಲೆಯಲ್ಲಿ ಇದು ಕ್ರಮವಾಗಿ ಶೇ.೭೦ರಷ್ಟು ಮತ್ತು ಶೇ.೩೦ರಷ್ಟು ಇದೆ. ಉಳಿದ ಪ್ರತಿಯೊಂದು ಜಿಲ್ಲೆಯಲ್ಲಿ ಒಟ್ಟು ಗುಂಪುಗಳಲ್ಲಿ ಮಹಿಳಾ ಗುಂಪುಗಳ ಪ್ರಮಾಣ ಸುಮಾರು ಶೇ.೯೦ರಷ್ಟು ಮತ್ತು ಪುರುಷ ಗುಂಪುಗಳ ಪ್ರಮಾಣ ಸುಮಾರು ಶೇ.೧೦ರಷ್ಟು ಮಾತ್ರ ಇರುತ್ತದೆ.[೫೨]

ಸ್ವ–ಸಹಾಯ ಗುಂಪುಗಳ ಉದ್ದೇಶಗಳು

೧. ಸಂಘದ ಸದಸ್ಯರಲ್ಲಿ ಉಳಿತಾಯ ಮನೋಭಾವನೆಯನ್ನು ಬೆಳೆಸುವುದು.

೨. ಉಳಿತಾಯ ಹಣದ ಸಂಗ್ರಹಣೆ ಮಾಡುವುದು.

೩. ಸರಿಯಾದ ಸಮಯಕ್ಕೆ ಸಾಲ ಸೌಲಭ್ಯ ಒದಗಿಸುವುದು.

೪. ಗುಂಪು ಚಟುವಟಿಕೆಗಳನ್ನು ಸ್ವ–ಅಭಿವೃದ್ಧಿಯತ್ತ ಗಮನಹರಿಸುವುದು.

೫. ಬಡತನ ನಿವಾರಣೆಯ ಅಗತ್ಯ ಅವಕಾಶಗಳನ್ನು ಕಲ್ಪಿಸಿಕೊಳ್ಳುವುದು.

೬. ಗ್ರಾಮೀಣ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು.

೭. ಸದಸ್ಯರ ಆರ್ಥಿಕ ಉನ್ನತಿಯನ್ನು ಸಾಧಿಸುವುದು.

೮. ಅನಕ್ಷರಸ್ಥ ಸದಸ್ಯರನ್ನು ಅಕ್ಷರಸ್ಥರನ್ನಾಗಿ ಮಾಡುವುದು.

೯. ಸರ್ಕಾರಿ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವುದು.

೧೦. ಸದಸ್ಯರ ಕಸುಬಿಗೆ ಅವಶ್ಯಕವಾದ ಸಾಲ ಸೌಲಭ್ಯದ ವ್ಯವಸ್ಥೆ ಮಾಡುವುದು ಹಾಗೂ ಸೂಕ್ತ ತಿಳುವಳಿಕೆ ಮತ್ತು ತರಬೇತಿ ಏರ್ಪಡಿಸಿ, ಬಳಕೆಯ ತಿಳುವಳಿಕೆ ನೀಡುವುದು.

ಸ್ವ–ಸಹಾಯ ಗುಂಪುಗಳ ಲಕ್ಷಣಗಳು

೧. ಬಡಜನರು ಸೇರಿ ಕಟ್ಟಿರುವ ಸಣ್ಣ ಸಣ್ಣ ಗುಂಪುಗಳು (೧೦ರಿಂದ ೨೦ರ ಒಳಗೆ ಸದಸ್ಯರು).

೨. ಸಮಾನ ಹಿನ್ನೆಲೆಯುಳ್ಳ ಸದಸ್ಯರ ಗುಂಪುಗಳು (ಸಾಮಾನ್ಯವಾಗಿ ಸಮಾನ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯನ್ನು ಹೊಂದಿರುವ ಸದಸ್ಯರನ್ನೊಳಗೊಂಡ ಗುಂಪು).

೩. ಸ್ವಯಂ ಭಾಗವಹಿಸುವಿಕೆ.

೪. ಸಣ್ಣ ಉಳಿತಾಯಗಳನ್ನು ಉತ್ತೇಜಿಸುವುದು ಹಾಗೂ ಸಾಮಾನ್ಯ ನಿಧಿಯನ್ನು ಸ್ಥಾಪಿಸುವುದು.

೫. ಪರಸ್ಪರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು ಮತ್ತು ಸಹಾಯ ಮಾಡಿಕೊಳ್ಳುವುದು.

೬. ಆಂತರಿಕ ಸಾಲ ವಿತರಣೆ.

೭. ಉತ್ಪಾದನೆ ಮತ್ತು ಅನುಭೋಗಕ್ಕಾಗಿ ಸಾಲಗಳನ್ನು ಒದಗಿಸುವುದು.

೮. ಗುಂಪಿನಲ್ಲಿ ಒಮ್ಮತದಿಂದ ನಿರ್ಧಾರ ಕೈಗೊಳ್ಳುವುದು.

೯. ಎಲ್ಲಾ ಸದಸ್ಯರು ಸಮಾನವಾಗಿ ಜವಾಬ್ದಾರಿಯನ್ನು ಅರಿತು ಭಾಗವಹಿಸುವುದು.[೫೫]

ಸ್ವ-ಸಹಾಯ ಗುಂಪುಗಳ ನಿಯಮಗಳು

೧. ಪ್ರತಿಯೊಂದು ಸ್ವ-ಸಹಾಯ ಗುಂಪಿಗೂ ತನ್ನದೇ ಆದ ಒಂದು ಹೆಸರಿರಬೇಕು.

೨. ಸ್ವ-ಸಹಾಯ ಗುಪಿನ ಸದಸ್ಯರ ೧೦ರಿಂದ ೨೦ ಆಗಿರುತ್ತದೆ.

೩. ಸ್ವ-ಸಹಾಯ ಗುಂಪಿನ ಸದಸ್ಯರಾಗಲು ವ್ಯಕ್ತಿಯ ವಯಸ್ಸು ೧೮ ವರ್ಷಕ್ಕೆ ಮೇಲ್ಪಟ್ಟಿರಬೇಕು.

೪. ಪ್ರತಿವಾರ ಸಭೆಗೆ ಕಡ್ಡಾಯವಾಗಿ ಹಾಜರಾಗಬೇಕು.

೫. ಸಂಘವು ನಿರ್ಧರಿಸಿದ ಪ್ರಮಾಣದ ಹಣವನ್ನು ಪ್ರತಿವಾರ ಉಳಿತಾಯ ಮಾಡಬೇಕು.

೬. ಒಂದು ಸಂಘಕ್ಕೆ ಪ್ರತಿನಿಧಿ-೧, ಪ್ರತಿನಿಧಿ-೨, ಎಂದು ಸದಸ್ಯರಿರಬೇಕು.

೭. ಪ್ರತಿ ಗುಂಪು ಲೆಕ್ಕಪತ್ರಗಳನ್ನು ಮತ್ತು ವ್ಯವಹಾರದ ಪುಸ್ತಕಗಳನ್ನು ನಿರ್ವಹಿಸಬೇಕು.

೮. ಪ್ರತಿವಾರವೂ ಕೂಡಿಹಾಕಿದ ಉಳಿತಾಯದ ಹಣವನ್ನು ಬ್ಯಾಂಕಿನಲ್ಲಿರುವ ಗುಂಪಿನ ಜೊತೆಗೆ ಜಮಾ ಮಾಡಬೇಕು.

೯. ಸಾಲ ಪಡೆದುಕೊಂಡರೆ ಸಾಲ ತೀರಿಸಬೇಕು.[೫೬]

ಸ್ವ-ಸಹಾಯ ಗುಂಪುಗಳ ಸಾಮರ್ಥ್ಯಗಳು

೧. ಮಹಿಳೆಯರ ಸಾಮಾಜಿಕ, ಆರ್ಥಿಕ ಸಬಲೀಕರಣದ ಮೂಲಕ ಸ್ವ-ಸಹಾಯ ಗುಂಪುಗಳ ಸಾಮಾನ್ಯವಾಗಿ ಸಮಾಜದಲ್ಲಿ ಲಿಂಗ ಸಮಾನತೆ ಭರವಸೆಯನ್ನು ಮೂಡಿಸುತ್ತವೆ.

೨. ಸ್ವ-ಸಹಾಯ ಗುಂಪುಗಳ ಮೂಲಕ ಕಡಿಮೆ ಆರ್ಥಿಕ ಬಂಡವಾಳದಿಂದ ದೊಡ್ಡ ಆರ್ಥಿಕ ಪ್ರಯೋಜನಗಳನ್ನು ಪಡೆದುಕೊಳ್ಳಬಹುದು.

೩. ಸ್ವ-ಸಹಾಯ ಗುಂಪುಗಳ ಸದಸ್ಯರ ನಡುವಿನ ಸಮಗ್ರತೆಯನ್ನು ನಿರ್ಮಿಸಲು ಅಥವಾ ಹೆಚ್ಚು ಜನರು ಅಥವಾ ಅದೇ ಕಡಿಮೆ ಸಾಮಾಜೋ-ಆರ್ಥಿಕ ಹಿನ್ನೆಲೆ, ಇದು ಸಾಮಾನ್ಯವಾಗಿ ಗ್ರಾಮೀಣ ಹಳ್ಳಿಗಳಲ್ಲಿ ಸಾಮಾಜಿಕ ಸಮಗ್ರತೆ ಕಡೆಗೆ ದಾರಿ.

೪. ಸ್ವ-ಸಹಾಯ ಗುಂಪುಗಳು ಗ್ರಾಮೀಣ ಬಡಜನರಿಗೆ ಜೀವನಾಧಾರ ಅವಕಾಶಗಳ ಪರಿಧಿಯನ್ನು ವಿಸ್ತರಿಸುತ್ತವೆ.

೫. ಸ್ವ-ಸಹಾಯ ಗುಂಪುಗಳ ಹೊಸ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿಸಿ, ಈಗಿರುವ ಸಮುದಾಯ ಸಂಪನ್ಮೂಲಗಳನ್ನು ಪರಿಣಾಮಕಾರಿ ಮತ್ತು ದಕ್ಷವಾಗಿ ಬಳಸಿಕೊಳ್ಳುತ್ತವೆ.

೬. ಸ್ವ-ಸಹಾಯ ಗುಂಪಿನ ಸದಸ್ಯರ ನಡುವಿನ ಬಲವಾದ ಸಮಗ್ರತೆ ಮತ್ತು ಒಗ್ಗಟ್ಟು ಕೆಲವೊಮ್ಮೆ ಸಮಾಜದ ಅನಾರೋಗ್ಯಕರವಾದ ಅಭ್ಯಾಸಗಳ ವಿರುದ್ಧ ಸಾಮಾಜಿಕ ಚಳುವಳಿಗೆ ದಾರಿಯಾಗುತ್ತದೆ.

೭. ಸ್ವ-ಸಹಾಯ ಗುಂಪುಗಳ ಸಿದ್ಧಾಂತ ಅವರ ಸಾಮಾಜೋ-ಆರ್ಥಿಕ ಸಬಲೀಕರಣಕ್ಕಾಗಿ ಒಳಗೊಳ್ಳುವಿಕೆ ಮತ್ತು ಕಡಿಮೆ ಆರ್ಥಿಕ ಶ್ರೇಣಿಯಲ್ಲಿ ಅಥವಾ ಸಮಾಜದ ಅತ್ಯಂತ ದುರ್ಬಲ ವಿಭಾಗದಿಂದ ಜನರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತದೆ.[೫೭]

ಸ್ವ-ಸಹಾಯ ಗುಂಪುಗಳ ದೌರ್ಬಲ್ಯಗಳು

೧. ಬ್ಯಾಂಕುಗಳಿಂದ ತೆಗೆದುಕೊಂಡ ಸಾಲ ಮರಳಿ ಪಡೆಯಲು ಸ್ವ-ಸಹಾಯ ಗುಂಪಿನ ಸದಸ್ಯರ ನಡುವೆ ಒಲವು ಹೆಚ್ಚಿಸಬೇಕು.

೨. ಬ್ಯಾಂಕುಗಳಿಂದ ಪಡೆದ ಸಾಲವನ್ನು ಸರಿಯಾದ ಸಮಯದಲ್ಲಿ ಮರುಪಾವತಿಸಲು ವಿಫಲಗೊಂಡಿವೆ. ಆದ್ದರಿಂದ ಸ್ವ-ಸಹಾಯ ಗುಂಪುಗಳಿಗೆ ನಿಧಿ ಒದಗಿಸಲು ಗ್ರಾಮೀಣ ಬ್ಯಾಂಕು ನಿರಾಸಕ್ತಿಯನ್ನು ತೋರುತ್ತಿದೆ.

೩. ಸೂಕ್ತ ಮತ್ತು ಲಾಭದಾಯಕ ಜೀವನಾಧಾರ ಆಯ್ಕೆಯನ್ನು ತೆಗೆದುಕೊಳ್ಳಲು ಸ್ವ-ಸಹಾಯ ಗುಂಪಿನ ಸದಸ್ಯರ ನಡುವೆ ಜ್ಞಾನ ಮತ್ತು ಸರಿಯಾದ ದೃಷ್ಟಿಕೋನದ ಕೊರತೆ ಇದೆ.

೪. ಸಾಲ ಒದಗಿಸುವ ಬ್ಯಾಂಕುಗಳಿಂದ ಸ್ವ-ಸಹಾಯ ಗುಂಪಿನ ಮೇಲೆ ನಿಯಮಿತ ಮೇಲ್ವಿಚಾರಣೆಯ ಕೊರತೆ.

೫. ಸ್ವ-ಸಹಾಯ ಗುಂಪಿನ ಸದಸ್ಯರ ಮಧ್ಯೆ ತಮ್ಮ ಸಮುದಾಯಕ್ಕೆ ಸಂಪನ್ಮೂಲಗಳ ಬಗ್ಗೆ ಜಾಗೃತಿ ಕೊರತೆ ಇದೆ. ಅವುಗಳನ್ನು ಬಿಟ್ಟು ಸಾಮಾನ್ಯವಾಗಿ ಕೇವಲ ಕನಿಷ್ಟ ಲಾಭ ಉತ್ಪಾದಿಸುವ ಆದಾಯ ಚಟುವಟಿಕೆಗಳಲ್ಲಿ ಸೀಮಿತ ಆಯ್ಕೆಗಳನ್ನು ಹೊಂದಿರುತ್ತಾರೆ.[೫೮]

ಸ್ವ-ಸಹಾಯ ಗುಂಪುಗಳ ಸವಾಲುಗಳು

೧. ಗ್ರಾಮೀಣ ಸಮಾಜದಲ್ಲಿ ಭಾಗಶಃ ಅಥವಾ ಪಕ್ಷಪಾತ ಮನೋಧರ್ಮ ಹೆಚ್ಚಾಗಿ ಇರುತ್ತದೆ. ಸಾಮಾನ್ಯವಾಗಿ ಸ್ವ-ಸಹಾಯ ಗುಂಪಿಗೆ ಸೇರಲು ಅಥವಾ ಮನೆಯ ಹೊರಗೆ ಆದಾಯದ ಕಾರ್ಯಯೋಜನೆಗಳನ್ನು ತೆಗೆದುಕೊಳ್ಳಲು ಮಹಿಳೆಯರಿಗೆ ಅಡೆತಡೆಗಳಿರುತ್ತವೆ.

೨. ಜೀವನೋಪಾಯದ ಅವಕಾಶಗಳ ಸಲುವಾಗಿ ನವೀನ ಆಯ್ಕೆಗಳನ್ನು ಅನ್ವೇಷಿಸಲು ಅಥವಾ ಆರ್ಥಿಕವಾಗಿ ಲಾಭದಾಯಕ ಯೋಜನೆಗಳನ್ನು ರೂಪಿಸಲು ಸ್ವ-ಸಹಾಯ ಗುಂಪಿನ ಸದಸ್ಯರ ಅಸಮರ್ಥತೆ.

೩. ಏಕೆಂದರೆ ಸರಿಯಾದ ಸಂಪರ್ಕದ ಕೊರತೆಯಿಂದ ಗ್ರಾಮೀಣ ಬ್ಯಾಂಕುಗಳು ನಮ್ಮ ರಾಷ್ಟ್ರದ ಪ್ರದೇಶಗಳ ಪ್ರತ್ಯೇಕತೆ ಅಥವಾ ಹಳ್ಳಿಗಳನ್ನು ತಲುಪಲು ಸಾಧ್ಯವಿಲ್ಲ. ಆಗಾಗ್ಗೆ ಗ್ರಾಮೀಣ ಬ್ಯಾಂಕುಗಳು ಹಣಕಾಸಿನ ಮೂಲಗಳ ಕೊರತೆಯಿಂದಾಗಿ ಇಂತಹ ಹಳ್ಳಿಗಳಲ್ಲಿ ಸ್ವ-ಸಹಾಯ ಗುಂಪುಗಳ ರಚನೆ ಪ್ರೋತ್ಸಾಹಿಸುವುದಿಲ್ಲ.

೪. ಆಗಾಗ್ಗೆ ಸ್ವ-ಸಹಾಯ ಗುಂಪಿನ ಸದಸ್ಯರ ಹಣ ದುರುಪಯೋಗ ಪ್ರಕರಣಗಳು ಇವೆ, ಇದರಿಂದ ಸ್ವ-ಸಹಾಯ ಗುಂಪಿನ ರಚನೆ, ಚೈತನ್ಯವನ್ನು ಕುಂದಿಸುತ್ತದೆ ಎಂದು ವರದಿ ಇದೆ.

೫. ಕೆಲವೊಮ್ಮೆ ಸರಕಾರದ ಇತರ ಆದಾಯದ ಯೋಜನೆಗಳ ಜೊತೆಗೆ ಸ್ವ-ಸಹಾಯ ಗುಂಪಿನ ರಚನೆ, ಚೈತನ್ಯವನ್ನು ನೀಡುವ ಕಡೆಗೆ ಗಮನಹರಿಸದೆ ವಿಫಲಗೊಂಡಿದೆ.[೫೯]

೫.೪. ಸ್ತ್ರೀಶಕ್ತಿ ಸ್ವ-ಸಹಾಯ ಸಂಘಗಳ ಪರಿಕಲ್ಪನೆ

ಸಮಾಜದ ಬಡ ಕುಟುಂಬದ ಸಾಮಾಜಿಕ ಅಥವಾ ಆರ್ಥಿಕ ಹಿನ್ನೆಲೆಯುಳ್ಳ ಸಮಾನ ಮನಸ್ಸಿನ ಪರಸ್ಪರ ವಿಶ್ವಾಸದಿಂದ ಕೂಡಿದ ೫ರಿಂದ ೨೦ ಜನ ಮಹಿಳೆಯರು ಒಂದೆಡೆ ಸೇರಿ ತಮ್ಮ ಆರ್ಥಿಕ ಅಭಿವೃದ್ಧಿಗಾಗಿ ಸ್ವ ಇಚ್ಛೆಯಿಂದ ರಚಿಸಿಕೊಂಡ ಗುಂಪುಗಳು ಸ್ತ್ರೀಶಕ್ತಿ ಸಂಘದ ಸದಸ್ಯರಾಗಲು ಅರ್ಹರಾಗಿರುತ್ತಾರೆ.

ತಮ್ಮ ತಮ್ಮ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ನಿಯಮಗಳನ್ನು ಕ್ರೋಢೀಕರಿಸಿಕೊಂಡು ತಮ್ಮ ತಮ್ಮಲ್ಲಿ ಸ್ವ-ಸಹಾಯ ಕಲ್ಪಿಸಿಕೊಳ್ಳುವ ಗುಂಪು ಇದಾಗಿದೆ. ಪರಸ್ಪರ, ವಿಶ್ವಾಸ, ಸಾಮಾನ ಆಸಕ್ತಿ, ಸ್ವಯಂ ಜಾಗೃತಿಯಿಂದ ಕೂಡಿದ ಈ ೧೫ರಿಂದ೨೦ ಮಹಿಳೆಯರ ಗುಂಪು ತಮ್ಮದೇ ಆದ ರೀತಿ-ನೀತಿ ನಿಯಮಗಳಿಗೆ ಒಳಪಟ್ಟಿರಬೇಕು. ನಿಗಧಿತವಾಗಿ ಉಳಿತಾಯ ಮಾಡುವುದು. ತಮ್ಮದೇ ಹಣವನ್ನು ಸ್ವ-ಸಹಾಯ ತತ್ವದ ಮೂಲಕ ಸಾಲ ನೀಡುವುದು. ಸಾಮಾನ್ಯ ನಿಧಿಯನ್ನು ರೂಢಿಸುವುದು. ಒಮ್ಮತದ ತೀರ್ಮಾನದಿಂದ ಎಲ್ಲಾ ಸಮಸ್ಯೆಗಳನ್ನು ತಮ್ಮಲ್ಲೇ ಬಗೆಹರಿಸಿಕೊಂಡು ಅಭಿವೃದ್ಧಿ ಸಾಧಿಸುವುದು ಗುಂಪಿನ ಪ್ರಮುಖ ಲಕ್ಷಣಗಳಾಗಿವೆ. ಗುಂಪಿನ ಸದಸ್ಯರಿಗೆ ನೀಡಿದ ಸಾಲಕ್ಕೆ ಬಡ್ಡಿದರ ನಿಗದಿಪಡಿಸುವುದು

ಗುಂಪಿನ ನಿರ್ಧಾರವಾಗಿರುತ್ತದೆ. ಹಾಗೂ ನಾಯಕತ್ವ ವೀಕೇಂದ್ರಿಕರಣವಾಗಿರುತ್ತದೆ. ಗುಂಪಿನಲ್ಲಿ ವಿವಿಧ ದಾಖಲಾತಿಗಳನ್ನು ನಿರ್ವಹಿಸಿ ಯಾವುದಾದರೊಂದು ಬ್ಯಾಂಕಿನಲ್ಲಿ ಜಂಟಿ ಉಳಿತಾಯ ಖಾತೆಯನ್ನು ಪ್ರಾರಂಭಿಸಬೇಕಾಗುತ್ತದೆ.

ಸ್ವ-ಸಹಾಯ ಗುಂಪಿಗೆ ಸೇರುವ ಸಮಯದಲ್ಲಿ ಸದಸ್ಯರ ಪ್ರವೇಶ ಪತ್ರದಲ್ಲಿ ದಾಖಲು ಮಾಡಬೇಕಾಗಿರುತ್ತದೆ. ಹಾಗೂ ಪ್ರತಿಯೊಬ್ಬ ಸದಸ್ಯರು ವೈಯಕ್ತಿಕ ಉಳಿತಾಯ ಮತ್ತು ಸಾಲದ ಪುಸ್ತಕವನ್ನು ಹೊಂದಿರಬೇಕು. ಗುಂಪಿನ ಉಳಿತಾಯ ಮತ್ತು ಸಾಲದ ವಹಿವಾಟಿಗಾಗಿ ಪ್ರತಿ ಗುಂಪು ಉಳಿತಾಯ ಖಾತೆ ಪುಸ್ತಕ, ರಸೀದಿ ಪುಸ್ತಕ, ಪಾವತಿ ರಸೀದಿ ಪುಸ್ತಕ, ನಗದು ಜಮಾ-ಖರ್ಚು ಖಾತೆ ಪುಸ್ತಕ, ಸಾಲದ ಅರ್ಜಿ ನಮೂನೆ ಪುಸ್ತಕ, ಸಾಲದ ಖಾತೆ ಪುಸ್ತಕಗಳನ್ನು ಹೊಂದಿದ್ದು. ಈ ಎಲ್ಲಾ ದಾಖಲಾತಿಗಳನ್ನು ಸರಿಯಾಗಿ ನಿರ್ವಹಿಸುತ್ತಿರಬೇಕು. ಒಂದು ವೇಳೆ ಗುಂಪಿನ ಸದಸ್ಯರು/ಪ್ರತಿನಿಧಿಗಳಿಗೆ ದಾಖಲಾತಿ ನಿರ್ವಹಣೆ ಸಾಧ್ಯವಾಗದಿದ್ದಲ್ಲಿ ಬೇರೆಯೊಬ್ಬರನ್ನು ಇದಕ್ಕಾಗಿ ನೇಮಿಸಿಕೊಳ್ಳಬೇಕು. ಇದು ಸ್ತ್ರೀಶಕ್ತಿ ಸಂಘಗಳ ಷರತ್ತು.[೬೦]

ಸ್ತ್ರೀಶಕ್ತಿ ಯೋಜನೆಯ ಉದ್ದೇಶಗಳು

೧. ಮಹಿಳೆಯರಿಗೆ ಆರ್ಥಿಕ ಪ್ರಗತಿಯನ್ನು ಸಾಧಿಸುವಂತಹ ಸಾಮಾಜಿಕ ಬದಲಾವಣೆಗೆ ಸೂಕ್ತ ವಾತಾವರಣವನ್ನು ಮೂಡಿಸುವಂತಹ ಪ್ರಕ್ರಿಯೆಯನ್ನು ಬಲಪಡಿಸುವುದು.

೨. ರಾಜ್ಯಾದ್ಯಂತ ಸ್ವ-ಸಹಾಯ ಮಹಿಳಾ ಗುಂಪುಗಳನ್ನು ರಚಿಸುವುದು ಹಾಗೂ ಅವರಲ್ಲಿ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆ ಮೂಡಿಸಿ ಸಂಪನ್ಮೂಲಗಳ ಮೇಲೆ ಹತೋಟಿ ಹಾಗೂ ಸಾಮೀಪ್ಯವನ್ನು ಸಾಧಿಸುವುದು.

೩. ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಮಹಿಳೆಯರನ್ನು ತೊಡಗಿಸುವುದರ ಮೂಲಕ ಬಡ ಮಹಿಳೆಯರ ಆದಾಯವನ್ನು ಹೆಚ್ಚಿಸಿ, ಅವರಲ್ಲಿ ಆರ್ಥಿಕ ಸ್ಥಿರತೆಯನ್ನು ಮೂಡಿಸುವುದು. ತನ್ಮೂಲಕ ಬಡತನ ನಿವಾರಣೆ ಮಾಡುವುದು.

೪. ವಿವಿಧ ಇಲಾಖೆಗಳನ್ನು ಒಮ್ಮುಖಗೊಳಿಸುವುದರ ಮೂಲಕ ಮಹಿಳಾ ಗುಂಪಿನ ಸದಸ್ಯರುಗಳಿಗೆ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಫಲ ದೊರೆಯುವಂತೆ ಅವಕಾಶ ಕಲ್ಪಿಸುವುದು ಹಾಗೂ ಸಾಲ ನೀಡುವಂತಹ ಸಂಸ್ಥೆಗಳಿಗೆ ಸಾಮೀಪ್ಯ ಒದಗಿಸುದರ ಜೊತೆಗೆ ಸಾಲ ದೊರೆಯುವಂತೆ ಕ್ರಮ ಕೈಗೊಳ್ಳುವುದು.

ಗುಂಪುಗಳ ಉಳಿತಾಯ ಮತ್ತು ಆಂತರಿಕ ಸಾಲ

ಕರ್ನಾಟಕ ರಾಜ್ಯದ ೩೦ ಜಿಲ್ಲೆಯ ೧೭೬ ತಾಲ್ಲೂಕುಗಳ ಗ್ರಾಮೀಣ ಪ್ರದೇಶದಲ್ಲಿ ರಚನೆಯಾಗಿರುವ ೧.೪೦ ಲಕ್ಷ ಗುಂಪುಗಳಲ್ಲಿ ೨೦.೭೩ಲಕ್ಷ ಸದಸ್ಯರಿದ್ದು, ಇವರ ಯೋಜನೆಯ ಪ್ರಾರಂಭದಿಂದ ಇದುವರೆಗೆ ಒಟ್ಟು ರೂ. ೮೩೫.೨೫ಕೋಟಿ ಉಳಿತಾಯವನ್ನು ಮಾಡಿರುತ್ತಾರೆ.

ಸಮಾಜದ ಬಡತನ ರೇಖೆಗಿಂತರ ಕೆಳಗೆ ವಾಸಿಸುತ್ತಿರುವ ಗ್ರಾಮೀಣ ಮಹಿಳೆಯರನ್ನು ಹಾಗೂ ಭೂರಹಿತ ಮಹಿಳಾ ಕೃಷಿ ಕಾರ್ಮಿಕರು, ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು, ವಿಧವೆಯರು, ಏಡ್ಸ್ ಪೀಡಿತ, ನಿರ್ಗತಿಕ, ಅಂಗವಿಕಲ, ಪರಿಶಿಷ್ಟ ಜಾತಿ, ಪರಿಶಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಮಹಿಳಾ ಸದಸ್ಯರು, ಮಧ್ಯಪಾನ ಮಾಡುವ ಅಥವಾ ಮಾದಕ ವಸ್ತುಗಳನ್ನು ಸೇವಿಸುವ ವ್ಯಕ್ತಿ ಇರುವ ಕುಟುಂಬದ ೧೫-೨೦ ಮಹಿಳೆಯರು ಒಟ್ಟು ಸೇರಿ ಗುಂಪನ್ನು ರಚಿಸಿಕೊಂಡಿದ್ದಾರೆ. ಗುಂಪುಗಳ ಸದಸ್ಯರು ಪ್ರತಿವಾರ ಸಭೆ ಸೇರುತ್ತಿದ್ದು, ಕನಿಷ್ಠ ೧೦ ರೂಗಳನ್ನು ಉಳಿತಾಯ ಮಾಡುತ್ತಿದ್ದಾರೆ. ಉಳಿತಾಯದ ಮೊತ್ತವನ್ನು ಸದಸ್ಯರು ವೈಯಕ್ತಿಕ ಸಾಲ ಹಾಗೂ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಲು ಬಳಸುತ್ತಿದ್ದು, ಸದಸ್ಯರು ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿ ಮಾಡುವ ಬಗ್ಗೆ ಅಂಗನವಾಡಿ ಕಾರ್ಯಕರ್ತೆಯರು, ಮೇಲ್ವಿಚಾರಕಿಯರು, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಉಸ್ತುವಾರಿ ಹಾಗೂ ಮೇಲ್ವಿಚಾರಣೆ ಮಾಡುತ್ತಾರೆ.

ಸುತ್ತಿನಿಧಿ

ಕನಿಷ್ಠ ಆರು ತಿಂಗಳ ಉಳಿತಾಯ ನಿರ್ವಹಿಸಿರುವ ಪ್ರತಿಯೊಂದು ಗುಂಪಿಗೆ ಸುತ್ತುನಿಧಿಯಾಗಿ ರೂ. ೫,೦೦೦ ಹಾಗೂ ಇತ್ತೀಚೆಗೆ ೨೫೦೦೦ರೂಪಾಯಿಗಳನ್ನು ನೀಡಲಾಗುತ್ತಿದೆ.

ಯೋಜನೆಯ ಅನುಷ್ಠಾನ ಮತ್ತು ಉಸ್ತುವಾರಿ

ರಚನೆಗೊಂಡ ಸ್ವ-ಸಹಾಯ ಗುಂಪುಗಳನ್ನು ಉಸ್ತುವಾರಿ ಮಾಡಲು ರಾಜ್ಯಮಟ್ಟದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರ ಮುಖ್ಯ ಕಾರ್ಯದರ್ಶಿಗಳೂ ಸೇರಿದಂತೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಸದಸ್ಯರಾಗಿರುವ ರಾಜ್ಯಮಟ್ಟದ ಚಾಲನೆ ಸಮಿತಿ ಇದ್ದು, ಈ ಸಮಿತಿಗೆ ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಸದಸ್ಯ ಕಾರ್ಯದಶಿಗಳಾಗಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ಹಾಗೂ ಸಂಬಂಧಿತ ಜಿಲ್ಲಾ ಮಟ್ಟದ ಅಧಿಕಾರಿಗಳು ಸದಸ್ಯರಾಗಿರುವ ಸಮಿತಿ ಇದಾಗಿದ್ದು, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಈ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಸಂಬಂಧಿತ ಅಧಿಕಾರಿಗಳು ಸದಸ್ಯರಾಗಿರುವ ಸಮಿತಿ ಇದ್ದು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಈ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿದ್ದು, ಯೋಜನೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ. ಯೋಜನೆಯ ಪರಿಶೀಲನಾ ಕಾರ್ಯವನ್ನು ನಡೆಸಲು ಗಣಕ ಯಂತ್ರದಲ್ಲಿ ವ್ಯಾಪಕ ಮಾಹಿತಿ ಜಾಲವನ್ನು ಸೃಷ್ಟಿಸಲಾಗಿದೆ.

ಗುಂಪುಗಳ ಬಲವರ್ಧನೆ

ಸ್ವ-ಸಹಾಯ ಗುಂಪುಗಳ ರಚನೆಯ ನಂತರ ಗುಂಪುಗಳ ಬಲವರ್ಧನೆಗಾಗಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸಹಕಾರಿಯಾಗುವಂತೆ ಮಾರ್ಗದರ್ಶನ ನೀಡಲಾಗುತ್ತಿದೆ. ಗುಂಪುಗಳು ಕಡ್ಡಾಯವಾಗಿ ಉಳಿತಾಯ ಮಾಡುವುದು, ಬ್ಯಾಂಕ್ ಖಾತೆ ತೆರೆದು, ಸಣ್ಣ ಪ್ರಮಾಣದಲ್ಲಿ ಆಂತರಿಕ ಸಾಲ ಪಡೆದು ಆದಾಯೋತ್ಪನ್ನ ಚಟುವಟಿಕೆಯನ್ನು ಹಮ್ಮಿಕೊಂಡು ಆರ್ಥಿಕ ಬಲವರ್ಧನೆ ಹೊಂದುವ ನಿಟ್ಟಿನಲ್ಲಿ ಯಶಸ್ವಿಯಾಗುವಂತೆ ನೋಡಿಕೊಳ್ಳಲಾಗಿದೆ. ಹಲವಾರು ಯೋಜನೆಗಳ ಮೂಲಕ ಆರ್ಥಿಕ, ಸಾಮಾಜಿಕವಾಗಿ ಬೆಂಬಲ ನೀಡುತ್ತಾ ಬಂದಿದೆ.

ಬ್ಯಾಕ್ ಲಿಂಕೇಜ್

ಗುಂಪುಗಳನ್ನು ಪ್ರಾರಂಭಿಸುವ ಹಂತದಲ್ಲಿಯೇ ಆಯಾ ಪ್ರದೇಶದಲ್ಲಿ ಬರುವ ಪ್ರಮುಖ ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರಿ ಬ್ಯಾಂಕುಗಳೊಂದಿಗೆ ಸ್ವ-ಸಹಾಯ ಗುಂಪುಗಳಿಗೆ ಸಂಪರ್ಕವನ್ನು ಕಲ್ಪಿಸಿ, ಸಾಲವನ್ನು ಪಡೆದು ವಿವಿಧ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅನುಕೂಲವನ್ನು ಒದಗಿಸಿದೆ.

ಅಧಿಕ ಉಳಿತಾಯ ಮಾಡಿರುವ ಗುಂಪುಗಳಿಗೆ ಪ್ರೋತ್ಸಾಹಧನ

ಗುಂಪುಗಳಲ್ಲಿ ಉಳಿತಾಯ ಮನೋಭಾವನೆಯನ್ನು ಪ್ರೋತ್ಸಾಹಿಸಲು, ರೂ. ೭೫,೦೦೦ರಿಂದ ರೂ.೧.೦೦ ಲಕ್ಷದವರೆಗೆ ಉಳಿತಾಯ ಮಾಡಿರುವ ಗುಂಪುಗಳಿಗೆ ತಲಾ ರೂ.೧೫೦೦೦ರೂಗಳ ಹಾಗೂ ರೂ.೧.೦೦ ಲಕ್ಷಕ್ಕೂ ಹೆಚ್ಚು ಉಳಿತಾಯ ಮಾಡಿರುವ ಗುಂಪುಗಳಿಗೆ ತಲಾ ರೂ.೨೦.೦೦೦ಗಳ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

ತರಬೇತಿ

ಸ್ತ್ರೀಶಕ್ತಿ ಯೋಜನೆಯ ಅನುಷ್ಠಾನದ ಬಗ್ಗೆ ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಗುಂಪಿನ ಸದಸ್ಯರಿಗೆ ಓರಿಯಂಟೇಶನ್, ಲಿಂಗತ್ವ, ನಾಯಕತ್ವ, ಸಂವಹನ, ಲೆಕ್ಕಪತ್ರ ನಿರ್ವಹಣೆ, ಸಾಲ ನಿರ್ವಹಣೆ ಮತ್ತು ಸಾಮಾಜಿಕ ವಿಷಯಗಳ ಬಗ್ಗೆ ವಿವಿಧ ಹಂತಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಆದಾಯೋತ್ಪನ್ನ ಚಟುವಟಿಕೆಯನ್ನು ಹಮ್ಮಿಕೊಂಡು ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಲು ಅನುವಾಗುವಂತೆ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ನೀಡಲಾಗುತ್ತಿದೆ.[೬೧]

ಹಾಜರಿ ಪುಸ್ತಕ

ವಾರದ ಸಭೆಗಳಲ್ಲಿ ಸದಸ್ಯರ ಹಾಜರಾತಿಯನ್ನು ದಾಖಲಿಸಲು ಹಾಜರಾತಿ ಪುಸ್ತಕವನ್ನು ನಿರ್ವಹಣೆ ಮಾಡಬೇಕಾಗಿರುತ್ತದೆ. ಹಾಜರಾತಿ ಪುಸ್ತಕದಲ್ಲಿ ಎಲ್ಲಾ ಸದಸ್ಯರ ಹೆಸರುಗಳನ್ನು ಒಂದರ ಕೆಳಗೊಂದರಂತೆ

ಬರೆದಿರಬೇಕು. ಅಂದರೆ ವಾರದ ಸಭೆಯ ದಿನಾಂಕವನ್ನು ಪುಟದಲ್ಲಿ ಮೇಲುಗಡೆ ನಮೂದಿಸಿ ಅದರ ಕೆಳಗಡೆ ಹಾಜರಾತಿ ಎಂದು ಬರೆದು, ಸಭೆ ಪ್ರಾರಂಭವಾದ ಕೂಡಲೇ ಪ್ರತಿನಿಧಿಯೊಬ್ಬರು ಎಲ್ಲರ ಹೆಸರನ್ನು ಒಂದಾದ ಮೇಲೊಂದರಂತೆ ಕೂಗಬೇಕು. ಸಭೆಗೆ ಹಾಜರಾದ ಸದಸ್ಯರ ಹೆಸರಿನ ಮುಂದೆ (Present) ಎಂದು ಅಥವಾ ರೈಟ್ ಗುರುತನ್ನು ( ) ಹಾಕಬೇಕು. ಗೈರು ಹಾಜರಾದವರ ಹೆಸರಿನ ಮುಂದೆ 'A' (Absent) ಎಂದು ನಮೂದಿಸಬೇಕು. ಸಭೆಗೆ ಹಾಜರಾಗದ ಬಗ್ಗೆ ಮೊದಲೇ ಅನುಮತಿ ಪಡೆದವರಿಗೆ 'L'(Leave) ಎಂದು ನಮೂದಿಸಬಹುದು. ಈ ಎಲ್ಲಾ ಚಟುವಟಿಕೆಗಳನ್ನು ಗುಂಪಿನ ವಿದ್ಯಾವಂತ ಸದಸ್ಯರು ಇಲ್ಲವೇ ವಿದ್ಯೆಕಲಿತ ತಮ್ಮ ಗಂಡಂದಿರ ಸಹಾಯದಿಂದ ಚಟುವಟಿಕೆಗಳನ್ನು ನಿರ್ವಹಿಸುತ್ತಾರೆ.

ಅನೇಕ ಗುಂಪುಗಳಲ್ಲಿ ಸಭಾ ನಡವಳಿಕೆಯ ಪುಸ್ತಕದಲ್ಲಿಯೇ ಹಾಜರಾದ ಸದಸ್ಯರ ಸಹಿಗಳನ್ನು ಪಡೆದುಕೊಳ್ಳುವ ಪದ್ಧತಿ ಇದೆ.

ನಗದು ಪುಸ್ತಕ

ನಗದು ಪುಸ್ತಕವು ಹಣದ ವ್ಯವಹಾರದ ಒಂದು ಅತಿ ಮುಖ್ಯ ದಾಖಲೆಯಾಗಿದೆ. ಅದು ಜಮಾ ಮತ್ತು ಖರ್ಚಿನ ಎರಡು ಭಾಗಗಳನ್ನು ಒಳಗೊಂಡಿರುತ್ತದೆ. ಪುಸ್ತಕದ ಎಡಭಾಗದಲ್ಲಿ ಜಮಾ ವಿವರಗಳನ್ನು ಮತ್ತು ಬಲಭಾಗದಲ್ಲಿ ಖರ್ಚಿನ ವಿವರಗಳನ್ನು ನಮೂದಿಸಲಾಗುತ್ತದೆ. ಗುಂಪಿಗೆ ಹಣವು ಜಮಾ ಆಗಿರುವ ಮತ್ತು ಗುಂಪಿನಿಂದ ಹಣ ಪಾವತಿಯಾಗಿರುವ ಆಧಾರದಲ್ಲಿ ಈ ಪುಸ್ತಕವನ್ನು ಬರೆಯಲಾಗುತ್ತದೆ. ಪ್ರತಿಯೊಂದು ವ್ಯವಹಾರಕ್ಕೂ ಓಚರ್ ಸಂಖ್ಯೆಯನ್ನು ನಮೂದಿಸಲಾಗುತ್ತದೆ.

ಜಮಾ ಮತ್ತು ಎರಡೂ ಹೊಂದಾಣಿಕೆಯಾಗುವ ರೀತಿಯಲ್ಲಿ ನಗದು ಪುಸ್ತಕವನ್ನು ಬರೆಯಬೇಕಾಗುತ್ತದೆ. ಅಂದರೆ ಯಾವುದೇ ದಿನದ ವ್ಯವಹಾರದ ಕೊನೆಯಲ್ಲಿ ನಗದು ಶಿಲ್ಕು ಜಮಾ ಮತ್ತು ಖರ್ಚಿನ ಕಾಲಂಗಳಲ್ಲಿ ಹೊಂದಾಣಿಕೆಯಾಗಿದ್ದು, ಒಂದೇ ಮೊಬಲಗು ಆಗಿರಬೇಕು.[೨]

ಸ್ವ-ಸಹಾಯ ಸಂಘ-ಬ್ಯಾಂಕ್ ಸಂಪರ್ಕ

ಗ್ರಾಮೀಣ ಮಟ್ಟದಲ್ಲಿ ಕೆಲಸ ಮಾಡುತ್ತಿರುವ ಸ್ವ-ಸಹಾಯ ಗುಂಪುಗಳು ತಮ್ಮ ಕಿರುಹಣಕಾಸು ಚಟುವಟಿಕೆಗಳಿಗೆ ಸ್ಥಳೀಯ ಬ್ಯಾಂಕುಗಳ ಜೊತೆ ಸಂಪರ್ಕವನ್ನಿರಿಸಿಕೊಳ್ಳುತ್ತವೆ. ೧೯೯೨ರಲ್ಲಿ ರಿಜರ್ವ್ ಬ್ಯಾಂಕು ಆಫ್ ಇಂಡಿಯಾ ಸುತ್ತೋಲೆಯ ಮೂಲಕ ಬ್ಯಾಂಕುಗಳಿಗೆ ಸ್ವ-ಸಹಾಯ ಗುಂಪುಗಳ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆಯಲು ಅನುಮತಿ ಕೊಟ್ಟಿತು. ಇದರಂತೆ ಸ್ವ-ಸಹಾಯ ಸಂಘಗಳು ರೂಪಗೊಂಡ ಕೂಡಲೇ ಬ್ಯಾಂಕುಗಳಲ್ಲಿ ಉಳಿತಾಯ ಖಾತೆಯನ್ನು ತೆರೆಯುತ್ತವೆ. ಇದಲ್ಲದೆ ಬ್ಯಾಂಕುಗಳು ಅನೇಕ ಸ್ವ-ಸಹಾಯ ಗುಂಪುಗಳನ್ನು ಪ್ರಾಯೋಜಿಸಿವೆ. ಬ್ಯಾಂಕುಗಳು ಮತ್ತು ಸ್ವ-ಸಹಾಯ ಗುಂಪುಗಳು ನಿರಂತರವಾಗಿ ಸಂಪರ್ಕವನ್ನಿಟ್ಟುಕೊಂಡು ಕಿರುಹಣಕಾಸು ಚಟುವಟಿಕೆಯನ್ನು ನಿರ್ವಹಿಸಲು ರಾಷ್ಟ್ರೀಯ

ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ನಬಾರ್ಡ್) ನಾಯಕತ್ವವನ್ನು ಒದಗಿಸುತ್ತದೆ. ಈ ಕಾರ್ಯಕ್ರಮ ೧೯೯೨ರಲ್ಲಿ ಜಾರಿಯಾಯಿತು. ಇದರ ಅನ್ವಯ ಬ್ಯಾಂಕುಗಳು ಸ್ವ-ಸಹಾಯ ಸಂಘಗಳಿಗೆ ಉತ್ತಮ ಸಾಲಸೌಲಭ್ಯ ನೀಡುತ್ತದೆ. ಹೀಗೆ ದೊರಕುವ ಬ್ಯಾಂಕ್ ಸಾಲದಿಂದ ಸಂಘದ ಸದಸ್ಯರುಗಳಿಗೆ ಅವರವರ ಅವಶ್ಯಕತೆಗಳಿಗೆ ಹಾಗೂ ಅವರದೇ ಆದ ಸಣ್ಣ ಉದ್ದಿಮೆಗಳನ್ನು ಸ್ಥಾಪಿಸಲು ಅಗತ್ಯವಾದ ಹೆಚ್ಚಿನ ಬಂಡವಾಳ ಸಿಗುತ್ತದೆ. ಇದರಿಂದಾಗಿ "ಬಡವರೊಡನೆ ಬ್ಯಾಂಕಿಂಗ್" ಎಂಬ ಧ್ಯೇಯ ವ್ಯಾಖ್ಯೆಯು ಸರಾಗ ಹಾಗೂ ಅರ್ಥ ಪೂರ್ಣವಾಗುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್ (ತನ್ನ ೨ ಏಪ್ರೀಲ್ ೧೯೯೬ ಸುತ್ತೋಲೆಯ ಮೂಲಕ) ಸ್ವ-ಸಹಾಯ ಸಂಘಗಳಿಗೆ ನೀಡುವ ಸಾಲಗಳನ್ನು ತಮ್ಮ ಸಾಮಾನ್ಯ ವ್ಯವಹಾರದಲ್ಲೊಂದಾಗಿ ಪರಿಗಣಿಸಬೇಕಾಗಿ ದೇಶದ ಎಲ್ಲಾ ವಾಣಿಜ್ಯ ಬ್ಯಾಂಕುಗಳಿಗೆ ನಿರ್ದೇಶಿಸಿದೆ. ಹೀಗೆ ಸ್ವ-ಸಹಾಯ ಸಂಘಗಳಿಗೆ ಕೊಡುವ ಸಾಲಗಳನ್ನು ದುರ್ಬಲ ವರ್ಗದವರಿಗೆ ಕೊಟ್ಟ ಆದ್ಯತಾವಲಯ ಸಾಲವೆಂದು ಪರಿಗಣಿಸಬಹುದೆಂದೂ ತಿಳಿಸಿದೆ. ಬ್ಯಾಂಕುಗಳು ಹೀಗೆ ಸ್ವ-ಸಹಾಯ ಸಂಘಗಳಿಗೆ ನೀಡುವ ಸಾಲ ಕಾರ್ಯಕ್ರಮಗಳನ್ನು ತಮ್ಮ ನಿಗಮಯೋಜನೆಯ ಒಂದು ಅಂಗವಾಗಿ ಪರಿಗಣಿಸಿ, ಸಿಬ್ಬಂದಿ ವರ್ಗದವರಿಗೆ ಅಗತ್ಯವಾದ ತರಬೇತಿ ಒದಗಿಸಬೇಕು ಹಾಗೂ ಕಾಲಕಾಲಕ್ಕೆ ಪ್ರಗತಿಯನ್ನು ಪರಿಶೀಲಿಸಬೇಕೆಂದು ತಿಳಿಸಿದೆ. ಇದೇ ರೀತಿ ದೇಶದ ಎಲ್ಲಾ ಸಹಕಾರಿ ಹಾಗೂ ಕ್ಷೇತ್ರೀಯ ಗ್ರಾಮೀಣ ಬ್ಯಾಂಕುಗಳಿಗೆ ನಬಾರ್ಡ್ ಸೂಕ್ತ ಮಾರ್ಗದರ್ಶನ ನೀಡುತ್ತಿದೆ.[೬೩]

ಬ್ಯಾಂಕುಗಳು ಸ್ವ-ಸಹಾಯ ಸಂಘಗಳಿಗೆ ಜಂಟಿಯಾಗಲು ಕಾರಣಗಳು

ಗ್ರಾಮೀಣ ಪ್ರದೇಶಗಳಿಗೆ ಹಣಕಾಸಿನ ಸಹಾಯವನ್ನು ಕಲ್ಪಿಸಲು ಪ್ರಮುಖವಾದ ತೊಂದರೆಯೆಂದರೆ ಸಾಲವನ್ನು ತಲುಪಿಸಲು ವಹಿವಾಟಿನ ಖರ್ಚು ಅಧಿಕ ಹಾಗೂ ಹೆಚ್ಚಿನ ಗ್ರಾಹಕರಿಗೆ ಆಗಾಗ ಸಣ್ಣ ಸಾಲಗಳ ಬೇಡಿಕೆಯನ್ನಿಡುತ್ತಿರುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಹರಿದು ಹಂಚಿ ಹೋಗಿರುವ ಈ ಗ್ರಾಹಕರ ಸಣ್ಣ ಉಳಿತಾಯಗಳಿಗೆ ಸಹಕರಿಸುವ ವೆಚ್ಚವೇ ಹೆಚ್ಚು. ಇಲ್ಲಿ ಉಳಿತಾಯ ಮಾಡುವ ಹಾಗೂ ಸಾಲ ಪಡೆದುಕೊಳ್ಳುವ ಗ್ರಾಹಕರಿಗೂ ವಹಿವಾಟಿನ ಖರ್ಚು ಹೆಚ್ಚು. ಏಕೆಂದರೆ ಸಣ್ಣಸಾಲಗಳಿಗೆ ದೂರದಲ್ಲಿರುವ ಬ್ಯಾಂಕುಗಳು ತಲುಪಬೇಕು. ಇತ್ತೀಚಿನ ಅಧ್ಯಯನಗಳಿಂದ ತಿಳಿಯುವುದೇನೆಂದರೆ ಬಡತನ ನಿರ್ಮೂಲನಾ ಕಾರ್ಯಕ್ರಮದಲ್ಲಿ ಬಡಜನರು ವಾಣಿಜ್ಯ ಬ್ಯಾಂಕುಗಳಿಂದ ಸಾಲವನ್ನು ಪಡೆಯುವಾಗ ವಹಿವಾಟಿನ ವೆಚ್ಚ ಶೇ.೨೪.೬ರಷ್ಟು. ಉಳಿತಾಯ ಯೋಜನೆಯಲ್ಲಿ ವಹಿವಾಟಿನ ವೆಚ್ಚ ಶೇ.೧೦ರಷ್ಟು. ಇದು ಸಹ ತಿಂಗಳಿಗೊಮ್ಮೆ ವಹಿವಾಟು ನಡೆದಾಗ ತಗುಲಿದ ಅಂದಾಜಿನ ವೆಚ್ಚ.

ಅಧಿಕ ವಹಿವಾಟಿನ ವೆಚ್ಚ ಮಾತ್ರವಲ್ಲದೆ ಚಿಕ್ಕ ಗ್ರಾಹಕರಿಗೆ ಹಣ ಸಹಾಯ ಮಾಡುವಲ್ಲಿ ಅನೇಕ ಸಮಸ್ಯೆಗಳು ಎದುರಿಸಬೇಕು. ಉದಾಹರಣೆಗೆ, ಜಮೀನಿನ ಕೊರತೆ, ಸಾಲವನ್ನು ಪಡೆಯಲು ಗ್ರಾಹಕರಿಂದ

ಬ್ಯಾಂಕಿಗೆ ಮಾಹಿತಿಗಳನ್ನು ನೀಡುವಲ್ಲಿ ವಿಫಲತೆ. ಹೀಗೆ ಮುಂತಾದ ತೊಂದರೆಗಳಿಂದ ಸಾಂಪ್ರದಾಯಿಕ ಬ್ಯಾಂಕ್ ವ್ಯವಸ್ಥೆಯು ಸರಿಯಾಗಿ ಬಡಜನತೆಯನ್ನು ತಲುಪುತ್ತಿಲ್ಲ.

ಹಾಗೆಯೇ ಬಡಜನತೆ ಬ್ಯಾಂಕ್ ಮೇಲಿನ ಕಲ್ಪನೆಯು, ಬ್ಯಾಂಕ್ ಕಾರ್ಯ ನಡೆಸುವುದು ಕೇವಲ ಹಣ ಉಳ್ಳವರಿಗಾಗಿ ಎಂಬ ತಪ್ಪು ಕಲ್ಪನೆಯಿಂದ ಬಡಜನರು ಬ್ಯಾಂಕನ್ನು ತಲುಪುತ್ತಿಲ್ಲ. ದೈಹಿಕ ಮತ್ತು ಸಾಮಾಜಿಕ ಅಂತರವು ಬ್ಯಾಂಕ್ ಅನ್ನು ತಲುಪುವಲ್ಲಿ ತಡೆ ಉಂಟುಮಾಡುತ್ತಿದೆ.

ಬಡಜನತೆಯ ಸಾಲದ ಅವಶ್ಯಕತೆಯನ್ನು ಸಾಮಾಜಿಕ, ಆರ್ಥಿಕ ಪರಿಸ್ಥಿತಿಗನುಗುಣವಾಗಿ ನಿರ್ಧರಿಸಬೇಕು. ಸಾಲವನ್ನು 'ಉತ್ಪಾದನಾ' ಕಾರ್ಯಕ್ರಮಗಳಿಗೆ ನಿರ್ಧರಿಸಬೇಕೋ ಅಥವಾ 'ಬಳಕೆಗಾಗಿ' ನೀಡಬೇಕೋ ಎನ್ನುವುದು ಅಸ್ಪಷ್ಟವಾಗಿರುವುದರಿಂದ ಸಾಲವನ್ನು ನೀಡುವಲ್ಲಿ ತೊಂದರೆಯಾಗುತ್ತಿದೆ. ಈ ಕಾರಣಕ್ಕಾಗಿ ಸಾಂಪ್ರದಾಯಿಕ ಬ್ಯಾಂಕಿಂಗ್ ಪದ್ಧತಿಯು ಬಹುತೇಕ ಬಡಜನತೆಯನ್ನು ತಲುಪದೇ ಹೊರ ಉಳಿದಿದೆ. ಇದರ ಪರಿಣಾಮವಾಗಿ ಅಸಾಂಪ್ರದಾಯಿಕ ಮೂಲಗಳಿಂದ ಸಾಲವನ್ನು ಪಡೆಯಲಾಗುತ್ತಿದೆ. ಈ ಸಾಲ ಬಲು ಸುಲಭವಾಗಿ ಯಾವುದೇ ರೀತಿಯ ಜಾಮೀನುಗಳಿಲ್ಲದೇ, ಲೆಕ್ಕಪತ್ರಗಳಿಲ್ಲದೇ ನಡೆದು ಹೋಗುತ್ತದೆ. ಕಾರಣ ಲೇವಾದೇವಿದಾರ ಹಾಗೂ ಗ್ರಾಹಕನ ನಡುವೆ ನೇರ ಸಂಪರ್ಕವಿರುತ್ತದೆ. ಆದರೆ ಇಲ್ಲಿ ಬಡ್ಡಿದರವು ವಿಪರೀತವಾಗಿ ಗ್ರಾಹಕನು ಮೋಸ ಹೋಗುವ ಸ್ಥಿತಿ ತಲುಪುತ್ತಾನೆ.

ಈ ಒಂದು ಸಾಂಪ್ರದಾಯಿಕ ಹಾಗೂ ಅಸಂಪ್ರದಾಯಿಕ ಮೂಲಗಳಿಂದಾಗುವ ತೊಂದರೆಗಳಿಂದ ಸ್ವ-ಸಹಾಯ ಗುಂಪುಗಳು ಪ್ರಾರಂಭವಾಗಿ ಅದರ ಜಂಟಿ ಆಯೋಜನೆಯಾಯಿತು. ಬೇರೆ ಬ್ಯಾಂಕ್‌ಗಳೊಂದಿಗೆ ಜಂಟಿಯಾಗುವ ಮೊದಲು ಸ್ವ-ಸಹಾಯ ಗುಂಪುಗಳ ಶಿಸ್ತುಬದ್ಧವಾಗಿ ಸದಸ್ಯರನ್ನು ಒಗ್ಗೂಡಿಸಿ ಜಂಟಿಯಾಗುವುದಕ್ಕೆ ಒಂದು ವಾತಾವರಣವನ್ನು ಸೃಷ್ಟಿಸಬೇಕು.[೬೪]

ಸ್ವ-ಸಹಾಯ ಗುಂಪುಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು

ಮಾನವ ಅಭಿವೃದ್ಧಿಯಲ್ಲಿ ಯೋಜನೆಗಳು, ಮಾನವ ಅಭಿವೃದ್ಧಿ ವಲಯಗಳಲ್ಲಿ ಪ್ರಮುಖ ಪಾತ್ರಧಾರಿಗಳಾಗಿ ಕಾರ್ಯಪ್ರವೃತ್ತವಾಗಿವೆ ಮತ್ತು ಆ ಮೂಲಕ ಅವು ಸಾರ್ವಜನಿಕ ಪ್ರಯತ್ನಗಳಿಗೆ ಪೂರಕವಾಗಿ ಕೆಲಸ ಮಾಡುತ್ತಿವೆ. ಪುನರ್ ಸಂಚಾಲಿತ ಪ್ರಯತ್ನಗಳು ಅಭಿವೃದ್ಧಿಗೆ ಹೆಚ್ಚಿನ ಸಹಭಾಗಿತ್ವ ಮತ್ತು ಸಶಕ್ತೀಕರಣ ಗುಣವನ್ನು ಒದಗಿಸುತ್ತವೆ.

ಸರ್ಕಾರಿ ಅಥವಾ ಅರೆ ಸರ್ಕಾರಿ ಸಂಸ್ಥೆಗಳ ವ್ಯಾಪ್ತಿಯ ಹೊರಗಿರುವ ಸಾಮಾಜಿಕ ಸೇವೆಯನ್ನು ಮೂಲ ಉದ್ದೇಶವಾಗಿಟ್ಟುಕೊಂಡ ಸಂಘಟನೆಗಳನ್ನೇ ಸರ್ಕಾರೇತರ ಸೇವಾ ಸಂಸ್ಥೆಗಳೆನ್ನಬಹುದು. ಮೆಕ್ಸಿಕೋ ಸಮ್ಮೇಳನ ಮಹಿಳೆಯರ ಸ್ಥಾನವನ್ನು ಉತ್ತಮಪಡಿಸುವಲ್ಲಿ ಸರ್ಕಾರೇತರ ಸಂಸ್ಥೆಗಳ ಅಗತ್ಯವಿದೆ ಎಂದು ಮನಗಂಡಿತು. ಸರ್ಕಾರೇತರ ಸಂಸ್ಥೆಗಳು ವಿಶ್ವ ಸಂಸ್ಥೆಯ ಮಾನವ ಹಕ್ಕುಗಳನ್ನು ಸಂರಕ್ಷಿಸುವಲ್ಲಿ, ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಹಾಗೂ ಶಾಂತಿ ಸಾಧನೆಯಲ್ಲಿ ಮಹಿಳೆಯರು ಪಾಲ್ಗೊಳ್ಳುವಂತೆ

ಮಾಡಲು ಮತ್ತು ಮಹಿಳೆಯರು ಪಾಲ್ಗೊಳ್ಳದಿದ್ದರೆ ಪ್ರಗತಿ ಸಾಧ್ಯವಿಲ್ಲ ಎಂಬ ಅಂಶಗಳನ್ನು ಸರ್ಕಾರಕ್ಕೆ ಸರ್ಕಾರೇತರ ಸಂಸ್ಥೆಗಳು ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾದವು.[೬೫]

ಇದನ್ನು ಮನಗಂಡು ಸ್ವಾತಂತ್ರ ಪಡೆದ ಕೆಲವೇ ವರ್ಷಗಳ ನಂತರ ಸರ್ಕಾರ ಕೇಂದ್ರ ಸಮಾಜ ಕಲ್ಯಾಣ ಮಂಡಳಿಗಳಿಗೆ ನೆರವಾಗಲು ಸ್ವಯಂ ಸೇವಾ ಸಂಸ್ಥೆಗಳು ಸ್ಥಾಪನೆಯಾಗಲು ಅನುಕೂಲಮಾಡಿಕೊಟ್ಟಿವೆ. ಮಹಿಳೆಯರ ಮೇಲೆ ಆಗುವಂತಹ ದೌರ್ಜನ್ಯಗಳ ವಿರುದ್ಧ ಹೋರಾಡಲು ಹಾಗೂ ಮಹಿಳಾ ಸಬಲೀಕರಣದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಮಹತ್ವದ ಪಾತ್ರವನ್ನು ವಹಿಸುತ್ತಿವೆ. ದೇಶದಲ್ಲಿ ಮಹಿಳೆಯರ ಹಿತಾಸಕ್ತಿಗಾಗಿ ೧೦,೦೦೦ ಸ್ವಯಂ ಸೇವಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.[೬೬] ಅವುಗಳಲ್ಲಿ ಪ್ರಮುಖವಾದದು ಮೈರಾಡ ಎಂಬ ಸಂಸ್ಥೆ. ಈ ಸಂಸ್ಥೆಯು ಬಾಂಗ್ಲದೇಶ ಗ್ರಾಮೀಣ ಬ್ಯಾಂಕಿನ ಯಶಸ್ಸಿನಿಂದ ಪ್ರೇರಣೆಗೊಂಡು ೧೯೮೪ರಲ್ಲಿ ಮೊದಲ ಸ್ವ-ಸಹಾಯ ಗುಂಪುಗಳನ್ನು ಆರಂಭಿಸಿ, ಸದಸ್ಯರುಗಳಿಗೆ ಕ್ರಮಬದ್ಧ ತರಬೇತಿ ನೀಡುವ ವ್ಯವಸ್ಥೆಯನ್ನು ಮಾಡಲಾಯಿತು.[೬೭] ಜೊತೆಗೆ ಅವರನ್ನು ಸ್ವಯಂ ಉದ್ಯೋಗಿಗಳಾಗಿ ರೂಪಿಸಿಕೊಳ್ಳಲು ಸಾಮಾಜೋ-ಆರ್ಥಿಕ ಕಾರ್ಯಕ್ರಮ, ವೃತ್ತಿಪರ ತರಬೇತಿಗಳನ್ನು ಕೊಡುವುದರ ಮುಖಾಂತರ ಪ್ರೇರೇಪಿಸುತ್ತಿವೆ.[೬೮] ಸ್ವ-ಸಹಾಯ ಗುಂಪುಗಳ ರಚನೆ ಮತ್ತು ಅಭಿವೃದ್ಧಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರವನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ. ಸಹಸ್ರಾರು ಸ್ವಯಂ ಸೇವಾ ಸಂಸ್ಥೆಗಳು ಸ್ವ-ಸಹಾಯ ಪ್ರೇರೇಪಣಾ ಸಂಸ್ಥೆಗಳಾಗಿ ಕೆಲಸ ಮಾಡುತ್ತಿವೆ. ಅಂದರೆ ಈ ಸಂಸ್ಥೆಗಳೇ ಜನರನ್ನು ಪ್ರೇರೇಪಿಸಿ ಸ್ವ-ಸಹಾಯ ಗುಂಪುಗಳನ್ನು ರಚಿಸುತ್ತಿವೆ. ಗಮನಾರ್ಹ ವಿಷಯವೆಂದರೆ, ಅನೇಕ ಸ್ವಯಂ ಸೇವಾ ಸಂಸ್ಥೆಗಳಿಗೆ ಸರ್ಕಾರದಿಂದ ಮತ್ತು ಸರ್ಕಾರಕ್ಕೆ ಸಂಬಂಧಿಸಿದ ಸಂಸ್ಥೆಗಳಿಂದ ಸರಿಯಾದ ಪ್ರೋತ್ಸಾಹ ದೊರೆಯದಿದ್ದಾಗಲೂ ಸಹ ಸ್ವಯಂ ಪ್ರೇರಣೆಯಿಂದ ಸ್ವ-ಸಹಾಯ ಗುಂಪುಗಳನ್ನು ರಚಿಸಿ, ಅವುಗಳ ಸದಸ್ಯರೊಡನೆ ನಿಕಟ ಸಂಬಂಧವನ್ನಿರಿಸಿಕೊಂಡು ಅವರ ಏಳಿಗೆಗಾಗಿ ಶ್ರಮಿಸುತ್ತಿವೆ.[೬೯] ೧. ವಾರದ ಸಭೆಗಳಿಗೆ ಭೇಟಿ ನೀಡುವ ಮತ್ತು ಗುಂಪುಗಳ ಸದಸ್ಯರಿಗೆ ಉಪಯುಕ್ತ ಮಾಹಿತಿ ನೀಡುವ ಕೆಲಸಗಳನ್ನು ಸ್ವಯಂ ಸೇವಾ ಸಂಸ್ಥೆಗಳು ನಿರ್ವಹಿಸುತ್ತಿವೆ. ೨. ಗುಂಪುಗಳ ಮೌಲ್ಯಮಾಪನ ಅಥವಾ ವರ್ಗೀಕರಣದ ಕಾರ್ಯವನ್ನು ಸ್ವಯಂ ಸೇವಾ ಸಂಸ್ಥೆಗಳು ಬಹಳ ಅಚ್ಚುಕಟ್ಟಾಗಿ ಮಾಡುತ್ತಿವೆ. ೩. ಗ್ರಾಮಪಂಚಾಯತಿ, ಬ್ಯಾಂಕುಗಳು, ವ್ಯವಸಹಾಯ ಸೇವಾ ಸಹಕಾರ ಸಂಘಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಪಂಚಾಯತಿ ಮುಂತಾದ ಸಂಸ್ಥೆಗಳೊಡನೆ ಮತ್ತು ಇಲಾಖೆಗಳೊಡನೆ ಪರಿಣಾಮಕಾರಿ ಸಂಬಂಧವನ್ನಿಟ್ಟುಕೊಂಡು ಸ್ವಯಂ ಸೇವಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ೪. ಈ ಸಂಸ್ಥೆಗಳು ಸ್ವ-ಸಹಾಯ ಗುಂಪುಗಳ ಸದಸ್ಯರಿಗೆ, ಬ್ಯಾಂಕಿನ ಸಿಬ್ಬಂದಿಗೆ, ಸರ್ಕಾರಿ ಅಧಿಕಾರಿಗಳಿಗೆ ಮತ್ತು ಜನ ಪ್ರತಿನಿಧಿಗಳಿಗೆ ಸ್ವ-ಸಹಾಯ ಗುಂಪುಗಳ ಬಗ್ಗೆ ಉತ್ತಮವಾದ ತರಬೇತಿಯನ್ನು ಒದಗಿಸುತ್ತಿವೆ.

ಸಾಲವನ್ನು ಸದ್ಬಳಕೆ ಮಾಡಿಕೊಳ್ಳುವ ಬಗ್ಗೆ ಮತ್ತು ಗುಂಪು ಚಟುವಟಿಕೆಗಳ ನಿರ್ವಹಣೆಯ ಬಗ್ಗೆ ಸ್ವಯಂ ಸೇವಾ ಸಂಸ್ಥೆಗಳು ಪರಿಣಾಮಕಾರಿಯಾದ ಮಾಹಿತಿಯನ್ನು ಒದಗಿಸುತ್ತಿವೆ. ಸಾಲ ಜೋಡಣೆಯೂ ಕೆಲವು ಸಂದರ್ಭಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಆಗುತ್ತಿದೆ. ಈ ಸಂಸ್ಥೆಗಳು ಪ್ರೇರೇಪಿಸಿದ ಗುಂಪುಗಳಿಗೆ ಬ್ಯಾಂಕುಗಳು ಸಾಲವನ್ನು ನೀಡುವಾಗ ನೇರವಾಗಿ ಗುಂಪುಗಳಿಗೆ ನೀಡದೆ ಸ್ವಯಂ ಸೇವಾ ಸಂಸ್ಥೆಗಳಿಗೆ ಸಾಲವನ್ನು ಒದಗಿಸುವ ಪದ್ಧತಿ ಬಹಳ ವ್ಯಾಪಕವಾಗಿ ಅಸ್ತಿತ್ವದಲ್ಲಿತ್ತು. ಈಗಲೂ ಸಹ ಈ ಪದ್ಧತಿ ಸ್ವಲ್ಪಮಟ್ಟಿಗೆ ಅಸ್ತಿತ್ವದಲ್ಲಿದೆ.[೨೦]

ಅನೇಕ ಸ್ವಯಂ ಸೇವಾ ಸಂಸ್ಥೆಗಳು ಮಹಿಳೆಯರಿಗೆ ವೃತ್ತಿಪರ ತರಬೇತಿಗಳನ್ನು ನೀಡುತ್ತಿವೆ. ಇದರಿಂದ ಅವರು ಕೆಲವು ಕೇಂದ್ರಗಳಲ್ಲಿ ಕೌಶಲ್ಯಗಳನ್ನು ಬಳಸಿಕೊಂಡು ಆರೋಗ್ಯಕರ ಹಣವನ್ನು ಗಳಿಸಲು ಅನುಕೂಲಮಾಡಿಕೊಟ್ಟಿವೆ. ಇಂತಹ ಸನ್ನಿವೇಶ ಸೃಷ್ಟಿಸಿದರೆ ಭಾರತದಲ್ಲಿ ಖಂಡಿತವಾಗಿಯೂ ಮಹಿಳಾ ಸಬಲೀಕರಣವನ್ನು ತರುತ್ತದೆ. "ದಿದಿಮಾ" ಅವರು ಸ್ವತಂತ್ರ ಮಹಿಳೆ ಉತ್ತಮ ಸಮಾಜ ಹಾಗೂ ಉತ್ತಮ ದೇಶವನ್ನಾಗಿ ಮಾಡಬಹುದು ಎಂದು ಹೇಳಿದ್ದಾರೆ.[೨೧]

ಸ್ವ-ಸಹಾಯ ಗುಂಪುಗಳು ಮತ್ತು ಮಹಿಳಾ ಸಬಲೀಕರಣ

ಮಹಿಳಾ ಸಬಲೀಕರಣದ ಪರಿಕಲ್ಪನೆಯ ಕ್ಲಿಷ್ಟತೆಯನ್ನು ಹಲವಾರು ವಿವರಣೆಗಳಿಂದ ಹಾಗೂ ಕ್ರಮಬದ್ಧ ಅಧ್ಯಯನಗಳಿಂದ ಅರ್ಥಮಾಡಿಕೊಳ್ಳಬಹುದು. ಮಹಿಳಾ ಸಬಲೀಕರಣದ ಮೇಲೆ ಹಣಕಾಸಿನ ಪ್ರಭಾವವು ಒಂದು ಅಪೂರ್ಣವಾದ ಪರಿಕಲ್ಪನೆಯಾಗಿ ಉಳಿದಿರುವುದು ಆಶ್ಚರ್ಯಕರವೇನಲ್ಲ. ವಿಶ್ವಬ್ಯಾಂಕಿನ ವ್ಯಾಖ್ಯೆ ಹಾಗೂ ಕಬೀರ್ ಅವರ ಸಬಲೀಕರಣದ ಸೂಕ್ಷ್ಮ ವಿವರಣೆಯನ್ನು ಗಮನಿಸಿ, ದಕ್ಷಿಣ ಏಷ್ಯಾದ ಪರಿಸ್ಥಿತಿಗನುಗುಣವಾಗಿ ಒಂದು ಅಧ್ಯಯನವು ಮಹಿಳಾ ಸಬಲೀಕರಣದ ಬಗ್ಗೆ ತುಂಬಾ ಪರಿಪೂರ್ಣವಾದ ವಿವರಣೆಯನ್ನು ನೀಡುತ್ತದೆ. ಈ ವಿವರಣೆಯ ಪ್ರಕಾರ, ಇಂದಿನ ಸಂಸ್ಕೃತಿ ಹಾಗೂ ಸಮಾಜದ ಕಟ್ಟಳೆಗಳು ಮಹಿಳಾ ಸಬಲೀಕರಣಕ್ಕೆ ಒಂದು ಸವಾಲಾಗಿ ಪರಿಣಮಿಸಿದೆ. ಮಹಿಳೆಯರ ಪಾತ್ರಗಳಿಂದ ಹೊರಹೊಮ್ಮಿದ ಫಲಿತಾಂಶಗಳಿಗನುಗುಣವಾಗಿ ಒಂದು ಸಮುದಾಯದ ಬೆಳವಣಿಗೆಯನ್ನು, ಮಹಿಳಾ ಸಬಲೀಕರಣದ ಜೊತೆ ನೇರವಾದ ವಿಶ್ಲೇಷಣೆಯನ್ನು ಮಾಡಲಾಗಿದೆ.

ಉದಾಹರಣೆಗೆ ಕೆಲವು ಕಾರ್ಯಕ್ರಮಗಳಾದ ಮಕ್ಕಳ ಪೌಷ್ಟಿಕತೆಯ ಸುಧಾರಣೆಯಲ್ಲಿ ಮಹಿಳೆಯರ ಪಾತ್ರ ಹಾಗೂ ಸಾಮರ್ಥ್ಯವನ್ನು ಕಾಣಬಹುದು. ಆದರೆ ಸಮಾಜದ ಕಟ್ಟಳೆಗಳ ಮಧ್ಯ ಈ ಪಾತ್ರವನ್ನು ಮಹಿಳೆಯು ನಿರ್ವಹಿಸಬೇಕಾಗುತ್ತದೆ. ಒಬ್ಬ ಮಹಿಳೆಯು ಇಂತಹ ಉತ್ತಮ ಚಟುವಟಿಕೆಗಳನ್ನು ನಿಭಾಯಿಸಬಹುದಾದರೆ, ಇದು ಅವಳ ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತದೆ. ಈ ಆತ್ಮಸ್ಥೈರ್ಯವು ಅವಳನ್ನು ಸ್ವ-ಸಹಾಯ ಗುಂಪುಗಳ ಮೂಲಕ ಸಬಲೀಕರಣದಕಡೆಗೆ ಕೊಂಡೊಯ್ಯುತ್ತದೆ. ಹಾಗೆಯೇ ಸಮುದಾಯದ ಅಭಿವೃದ್ಧಿ ಚಟುವಟಿಕೆಗಳನ್ನು ಮಾಡಲು ಸ್ವ-ಸಹಾಯ ಗುಂಪುಗಳು ಮುಂದೆ ಬಂದಿವೆ.

ಉದಾಹರಣೆಗೆ, ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಿದರೆ, ಮಹಿಳೆಯರ ಸಮಯದ ವಿನಿಯೋಗದಲ್ಲಿ ಉಳಿತಾಯವಾಗಿ, ಕುಟುಂಬದ ಸದಸ್ಯರ ಹಾಗೂ ಮಕ್ಕಳ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣುತ್ತೇವೆ. ಈ ಚಟುವಟಿಕೆಗಳಿಂದ ಕೇವಲ ಕುಟುಂಬದ ಕಲ್ಯಾಣವಾಗುವುದೇ ಹೊರತು ಮಹಿಳೆಯರ ಸಬಲೀಕರಣವು ನೇರವಾಗಿ ಆಗುವುದಿಲ್ಲ. ಈ ವ್ಯಾಖ್ಯೆಗನುಗುಣವಾಗಿ ನಿಜವಾದ ಸಬಲೀಕರಣದ ಚಟುವಟಿಕೆಗಳು ಯಾವುದೆಂದರೆ ಸಮಾಜದ ಕಟ್ಟಳೆಗಳನ್ನು ಮೀರಿ ಮಹಿಳೆಯರ ಜೀವನಮಟ್ಟದಲ್ಲಿ ಉತ್ತಮವಾದ ಸುಧಾರಣೆಯಾಗುವುದು.[೨೨] ಈ ನಿಟ್ಟಿನಲ್ಲಿ ಸರ್ಕಾರ ಮಹಿಳೆಯರು ಉದ್ಯಮಶೀಲತ್ವ, ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳುವುದರ ಮೂಲಕ ಮಹಿಳಾ ಸಬಲೀಕರಣವನ್ನು ಹೊಂದಲು ಅನೇಕ ಮನೆಬೆಳಕು, ಉದ್ಯೋಗಿನಿ, ವಿಕಾಸಿನಿ, ಯಶಸ್ವಿನಿ ಮತ್ತು ಅರುಣೋಧಯ ಯೋಜನೆಗಳನ್ನು ಜಾರಿಗೆ ತಂದಿದೆ. ಆದರೆ ಈ ಕಾರ್ಯಕ್ರಮಗಳು ಫಲಾನುಭವಿ ಆಯ್ಕೆಯ ಪ್ರಕ್ರಿಯೆಯಲ್ಲಿ ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳ ಮಧ್ಯಪ್ರವೇಶದಿಂದ ಸಮಷ್ಠಿಯಲ್ಲಿ ಯಾವ ಪ್ರಯೋಜನವಾಗಿಲ್ಲ. ಇವುಗಳು ಕೇವಲ ಸೀಮಿತ ಸಂಖ್ಯೆಯ ವಿಶೇಷ ಕಾರ್ಯಕ್ರಮಗಳೇ ಹೊರತು ಸಮಗ್ರ ಮಹಿಳಾ ಸಮುದಾಯದ ಅಭಿವೃದ್ಧಿ ಕಾರ್ಯಕ್ರಮಗಳಲ್ಲ. ಅದಕ್ಕೆ ಸಾಮೂಹಿಕ ಕಾರ್ಯಕ್ರಮವಾದ 'ಸ್ವ-ಸಹಾಯ ಸಮೂಹ' ಅಥವಾ 'ಸ್ವ-ಸಹಾಯ ಗುಂಪು' ಮಹಿಳಾ ಸರ್ವಾಂಗೀಣ ಅಭಿವೃದ್ಧಿಗೆ ಸಾಧನಕಾರಿ.[೨೩]

ಈ ಉದ್ದೇಶದಿಂದಾಗಿ ಇತ್ತೀಚೆಗೆ ಮಹಿಳೆಯರಿಂದ ಮಹಿಳೆಯರಿಗಾಗಿ ಎಂಬ ಪರಿಕಲ್ಪನೆಯೊಂದಿಗೆ ಭಾರತದ ಅಂದಿನ ಪ್ರಧಾನ ಮಂತ್ರಿ ದಿವಂಗತ ಇಂಧಿರಾಗಾಂಧೀಯವರ ೯೬ನೇ ಜನ್ಮದಿನೋತ್ಸವ ಅಂಗವಾಗಿ ನವೆಂಬರ್ ೧೯ ೨೦೧೩ರಂದು ಪ್ರಧಾನಮಂತ್ರಿ ಮನಮೋಹನ್‌ಸಿಂಗ್ ಮತ್ತು ಹಣಕಾಸಿನ ಮಂತ್ರಿ ಚಿದಂಬರಂ ಅವರು ದೇಶದ ಏಳು ರಾಜ್ಯಧಾನಿ (ಮುಂಬೈ, ಕಲ್ಕತ್ತಾ, ಲಕ್ನೋ, ಗುಹಾತಿ, ಚೆನ್ನೈ, ಬೆಂಗಳೂರು ಮತ್ತು ಅಹಮದಾಬಾದ್) ನಗರಗಳಲ್ಲಿ ಏಕಕಾಲಕ್ಕೆ ಮೊದಲ ಭಾರತೀಯ ಮಹಿಳಾ ಬ್ಯಾಂಕನ್ನು ಪ್ರಾರಂಭಿಸಲಾಯಿತು. ಇದರ ಮುಖ್ಯ ಉದ್ದೇಶ ಮಹಿಳೆಯರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ಒದಗಿಸುವುದರ ಮೂಲಕ ನಾಯಕತ್ವ ಗುಣಗಳನ್ನು ಬೆಳೆಸುವುದಾಗಿದೆ.[೨೪] ಇತ್ತೀಚಿನ ೨೦೧೫-೧೬ನೇ ಸಾಲಿನಲ್ಲಿ ದೇಶದಲ್ಲಿ ೭೫ ಭಾರತೀಯ ಮಹಿಳಾ ಬ್ಯಾಂಕುಗಳ ಉಪ ಕಛೇರಿಗಳಿವೆ.[೨೫]

ಸ್ವ-ಸಹಾಯ ಗುಂಪುಗಳು ಮತ್ತು ಹಣಕಾಸಿನ ಒಳಗೊಳ್ಳುವಿಕೆ

ಭಾರತದಲ್ಲಿ ಹಲವಾರು ಗ್ರಾಮೀಣ ಬ್ಯಾಂಕಿನ ಶಾಖೆಗಳಿದ್ದರೂ ಹಾಗೂ ಇವು ಬಡಜನತೆಯ ಅವಶ್ಯಕತೆಗಳನ್ನು ಪೂರೈಸುತ್ತಿದ್ದರೂ ಮತ್ತು ಈ ಬಡಜನತೆಗೆ ಸಾಲದ ಮೊತ್ತವು ಸಣ್ಣ ಮೊತ್ತದ ಅವಶ್ಯಕತೆಗಳಾಗಿದ್ದು, ಇವರಿಗೆ ಸಾಲದ ಅವಶ್ಯಕತೆಗಳನ್ನು ತೃಪ್ತಿಕರವಾಗಿ ಪೂರೈಸಲಾಗುತ್ತಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ ಶೇ.೧೦೦ರಷ್ಟು ಸಾಧನೆಯು ಒಂದು ಸವಾಲಾಗಿದೆ. ಈ ಕಾರಣಕ್ಕಾಗಿ ಹಲವಾರು

ಪರ್ಯಾಯ ಯೋಜನೆಗಳ ಬಗ್ಗೆ ಯೋಚಿಸಲಾಯಿತು. ಹಾಗೂ ಇಲ್ಲಿ ಹೊಸಪದ್ಧತಿ ಮತ್ತು ವಿಧಾನಗಳು, ಉಳಿತಾಯ ಹಾಗೂ ಸಾಲದ ಉತ್ಪನ್ನಗಳು, ಪೂರಕ ಸೇವೆಗಳು ಹೊಸ ಶೈಲಿಯ ಮೂಲಕ ಬಡಜನರ ಅವಶ್ಯಕತೆಗಳನ್ನು ಪೂರೈಸುವ ಯೋಜನೆಗಳನ್ನು ರೂಪಿಸಲಾಯಿತು. ಇದರ ಪರಿಣಾಮವಾಗಿ ನಬಾರ್ಡ್ ಸ್ವ-ಸಹಾಯ ಗುಂಪು ಹಾಗೂ ಬ್ಯಾಂಕಿನ ಜಂಟಿ ಯೋಜನೆಯನ್ನು ೧೯೯೨ರಲ್ಲಿ ಆರಂಭಿಸಿತು. ಈ ಯೋಜನೆಯ ಮುಖಾಂತರ ಹಣಕಾಸಿನ ವಹಿವಾಟನ್ನು ಭಾರತದ ಸಾಂಪ್ರದಾಯಿಕ ಬ್ಯಾಂಕುಗಳು, ಇದರಲ್ಲಿ ಪಬ್ಲಿಕ್ ಹಾಗೂ ಸರಕಾರೇತರ ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಕೋ-ಅಪರೇಟಿವ್ ಬ್ಯಾಂಕುಗಳು ಅಸಂಪ್ರದಾಯಿಕ ಸಂಸ್ಥೆಯಾದ ಸ್ವ-ಸಹಾಯ ಗುಂಪಿನೊಂದಿಗೆ ಜಂಟಿಯಾಗಿ ಇದರ ಸದಸ್ಯರುಗಳು ಬ್ಯಾಂಕಿನ ಗ್ರಾಹಕರಾಗಿ ಕಾರ್ಯನಿರ್ವಹಿಸುವುದನ್ನು ಕಾಣಬಹುದು.

ಸ್ವ-ಸಹಾಯ ಗುಂಪುಗಳು ೧೦-೨೦ ಜನ ಒಂದು ಕಿರು ಅಸಂಪ್ರದಾಯಿಕ ಸಂಸ್ಥೆಯಾಗಿದ್ದು, ಒಂದೇ ಆಸಕ್ತಿಯನ್ನು ಒಳಗೊಂಡಿರುವ ಸದಸ್ಯರನ್ನು ಅಂದರೆ ಒಂದು ಸಾಮಾಜೋ-ಆರ್ಥಿಕ ಹಿನ್ನೆಲೆಯುಳ್ಳವರ ಗುಂಪಾಗಿದ್ದು, ಇವರೆಲ್ಲರೂ ಪರಸ್ಪರ ಸಹಾಯ ಒಗ್ಗಟ್ಟು ಹಾಗೂ ಜಂಟಿ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ ಆರ್ಥಿಕ ಲಾಭವನ್ನು ಗಳಿಸುವುದಕ್ಕಾಗಿ ಶ್ರಮಿಸುತ್ತಾರೆ. ಈ ಸ್ವ-ಸಹಾಯ ಗುಂಪುಗಳು ಸಾಮಾನ್ಯ ನಿಧಿಯನ್ನು ಸಂಗ್ರಹಿಸಿ ಬ್ಯಾಂಕಿನಲ್ಲಿ ಖಾತೆಯನ್ನು ಗುಂಪಿನ ಹೆಸರಿನಲ್ಲಿ ತೆಗೆಯಲಾಗುತ್ತದೆ. ಕಾರಣ ಒಂದು ಚಿಕ್ಕ ಉದ್ದಿಮೆಯನ್ನು ಆರಂಭಿಸುವುದಕ್ಕಾಗಿ ಅಥವಾ ಜೀವನಾವಶ್ಯಾಕತೆಗಳನ್ನು ಪೂರೈಸಿಕೊಳ್ಳುವುದಾಕ್ಕಾಗಿ, ಸಾಮಾನ್ಯವಾಗಿ ಅವರು ಉಳಿತಾಯವನ್ನು ಕ್ರಮವಾಗಿ ಜಮಾ ಮಾಡುತ್ತಾ ಹೊಗುತ್ತಾರೆ. ಸಾಮಾನ್ಯವಾಗಿ ಸ್ವ-ಸಹಾಯ ಗುಂಪಿನ ಸದಸ್ಯರು ಪ್ರತಿತಿಂಗಳಿಗೆ ೨೦ರಿಂದ ೧೦೦ ವರೆಗೆ ಉಳಿತಾಯವನ್ನು ಮಾಡುತ್ತಾ ಹೋಗುತ್ತಾರೆ. ಈ ಸಂಗ್ರಹಿಸಿದ ಹಣವನ್ನು ತಾವು ತೆಗೆದುಕೊಂಡು ಉತ್ಪನ್ನ, ಬಂಡವಾಳದ ಸಾಲಗಳಿಗೆ ಬಡ್ಡಿಯನ್ನು ಕಟ್ಟಲು ವಿನಿಯೋಗಿಸಲಾಗುತ್ತದೆ. ಈ ಬ್ಯಾಂಕಿನ ಸೇವೆಯನ್ನು ಸರಳವಾಗಿ, ಸುಲಭವಾಗಿ ಲಭ್ಯವಾಗುವಂತೆ ಮಾಡಲಾಗಿದೆ ಹಾಗೂ ಬಡಜನರು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅತೀ ಸರಳವಾಗಿ ಲಭ್ಯವಾಗುವಂತೆ ಮಾಡಲಾಗಿದೆ. ಈ ಜಂಟಿ ಆಯೋಜನೆಯಿಂದ ಬ್ಯಾಂಕುಗಳಿಗೆ ಆಗುವ ಲಾಭವೆಂದರೆ ಸಾಲದ ಅವಶ್ಯಕತೆಗಳ ಬಗ್ಗೆ ಅಂದಾಜು ಮಾಡುವ ಸಫಲತೆ, ಬಡ್ಡಿ, ಮೇಲ್ವಿಚಾರಣೆ ಹಾಗೂ ಮರುಪಾವತಿ, ಸಾಂಪ್ರದಾಯಿಕ ಪೇಪರ್ ಕೆಲಸದಿಂದ ಮುಕ್ತಿ ಹಾಗೂ ವಹಿವಾಟಿನ ವೆಚ್ಚದಲ್ಲಿ ಉಳಿತಾಯ[೭೬]

೧೯೯೨ರ ರಿಂದಲೂ ಸ್ವ-ಸಹಾಯ ಗುಂಪು-ಬ್ಯಾಂಕು ಜಂಟಿ ಆಯೋಜನೆಯ ಮುಖಾಂತರ ಬಡಜನತೆಗೆ ಕಿರು-ಸಾಲವನ್ನು ಪೂರೈಸಲಾಗುತ್ತಿದೆ. ಸ್ವ-ಸಹಾಯ ಗುಂಪು ಬ್ಯಾಂಕು ಜಂಟಿ ಆಯೋಜನೆಯು ಅತ್ಯಂತ ಪರಿಣಾಮಕಾರಿಯಾದ ಯೋಜನೆಯೆಂದು ಹೇಳಬಹುದು. ಯಾವ ಸ್ಥಳದಲ್ಲಿ

ಬ್ಯಾಂಕುಗಳ ಸೇವೆಗಳ ಕೊರತೆಯಿದೆಯೋ ಆ ಸ್ಥಳಗಳಿಗೂ ಕಿರು ಹಣಕಾಸಿನ ಸೇವೆಯನ್ನು ಈ ಜಂಟಿ ಆಯೋಜನೆಯು ತಲುಪಿಸುತ್ತದೆ. ಸ್ವ-ಸಹಾಯ ಗುಂಪು-ಬ್ಯಾಂಕು ಜಂಟಿ ಮಾದರಿಯನ್ನು ನಬಾರ್ಡ್ ಆರಂಭಿಸಿದ್ದು, ಈ ಮಾದರಿಯನ್ನು ಒಂದು ಪ್ರಮುಖವಾದ ಯಶಸ್ವಿ ಕಿರುಹಣಕಾಸಿನ ಮಾದರಿಯೆಂದು ಜಗತ್ತಿನಾದ್ಯಾಂತ ಪರಿಗಣಿಸಲಾಗಿದೆ.

ಮಹಿಳೆ ಮತ್ತು ಅಭಿವೃದ್ಧಿ

ಲಿಂಗಾಧಾರಿತ ಕ್ರಮ ವಿಭಜನೆ, ಮಹಿಳೆಯ ಮನೆ ಕೆಲಸವನ್ನು ಉತ್ಪಾದನೆಯೆಂದು ಪರಿಗಣಿಸದಿರುವುದು, ಮಹಿಳೆ ಮತ್ತು ಪುರುಷರ ದುಡಿಮೆಗೆ ಸಿಗುವ ಅಸಮಾನ ಪ್ರತಿಫಲ, ಮಹಿಳೆಯರನ್ನು ದಿನನಿತ್ಯ ಅದುಮಿಡುವ ಪುರುಷ ಪ್ರಧಾನ ಮೌಲ್ಯಗಳು ಇವೆಲ್ಲವನ್ನೂ ವಿಮೆನ್ ಇನ್ ಡೆವಲಪ್‌ಮೆಂಟ್ ದೃಷ್ಟಿಕೋನದ ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲವೆಂದು ಮಹಿಳೆ ಮತ್ತು ಅಭಿವೃದ್ಧಿ ಅಥವಾ ವಿಮಮೆನ್ ಅಂಡ್ ಡೆವೆಲಪ್‌ಮೆಂಟ್ ದೃಷ್ಟಿಕೋನ ಮುಂಚೂಣಿಗೆ ಬಂದಿದೆ.[22] ಇತ್ತೀಚಿನ ದಶಕಗಳಲ್ಲಿ ಮಹಿಳಾ ಕಲ್ಯಾಣ ಕಾರ್ಯಕ್ರಮಗಳಿಗೆ ನೀಡುತ್ತಿದ್ದ ಪ್ರಾಮುಖ್ಯತೆ ಕ್ರಮೇಣ ಸಶಕ್ತತೆ ಮತ್ತು ಸುಸ್ಥಿರ ಅಭಿವೃದ್ಧಿಯಂತಹ ಪ್ರಗತಿಪರ ಪರಿಕಲ್ಪನೆಗಳಿಗೆ ಸರಕಾರದ ನೀತಿಯಲ್ಲಿ ಆದ್ಯತೆಯನ್ನು ನೀಡುತ್ತಿರುವುದು ಗಮನಾರ್ಹ. ಈ ನಿಟ್ಟಿನಲ್ಲಿ ಬಡತನ ರೇಖೆಗಿಂತಲೂ ಕೆಳಗಿರುವ ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರ ಸರ್ವತೋಮುಖ ಅಭಿವೃದ್ಧಿ ಹಾಗೂ ಸ್ವಾವಲಂಬನೆಗೆ ಅಳವಡಿಸಿಕೊಂಡಿರುವ ಯೋಜನೆಯೇ ಸ್ವ-ಸಹಾಯ ಪದ್ಧತಿ ಆಧಾರಿತ ಸ್ವ-ಸಹಾಯ ಗುಂಪುಗಳು. ನಮ್ಮ ದೇಶದಾದ್ಯಂತ ಈ ಸ್ವ-ಸಹಾಯ ಗುಂಪುಗಳು ಆಂದೋಳನ ರೂಪದಲ್ಲಿ ವಿಸ್ತಾರಹೊಂದಿ ಗ್ರಾಮೀಣ ಮಹಿಳೆಯರಲ್ಲಿ ಅದರಲ್ಲೂ ವಿಶೇಷವಾಗಿ ಕೃಷಿಕಾರ್ಮಿಕ ವರ್ಗದಲ್ಲಿ ಅತ್ಯಂತ ಜನಪ್ರಿಯವಾಗುತ್ತಿವೆ. ಗ್ರಾಮೀಣ ಮಹಿಳೆಯರಲ್ಲಿ ಅದರಲ್ಲೂ ಪರಿಶಿಷ್ಟ ಮಹಿಳೆಯರಲ್ಲಿ ಅನಕ್ಷರತೆ ಹೆಚ್ಚಿದೆ. ಅವರಿಗೆ ಸಾಕ್ಷರತೆ, ಸ್ವಾತಂತ್ರ್ಯ ಸ್ವಾವಲಂಬನೆ ಮತ್ತು ನಾಯಕತ್ವದತ್ತ ಅವರನ್ನು ನಿಯೋಜಿಸಿಕೊಳ್ಳಲು ತಳಮಟ್ಟದ ಆರ್ಥಿಕ ಬುನಾದಿಯಾದ ಸ್ವ-ಸಹಾಯ ಪದ್ಧತಿಯು ಅತ್ಯಂತ ಪ್ರಯೋಗಿಕ ಮತ್ತು ಫಲಿತಾಂಶದಾಯಕ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಗ್ರಾಮೀಣ ಮಹಿಳೆಯರು ರಾಷ್ಟ್ರೀಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ವಂಚಿತ ವರ್ಗವಾಗಿ ಪರಿಣಮಿಸಿದ್ದಾರೆ. ಇದಕ್ಕೆ ಕಾರಣ ಅವರ ಅನಕ್ಷರತೆ, ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆ, ಸ್ವಾತಂತ್ರ್ಯ ಹೀನತೆ ಇತ್ಯಾದಿ ಸಾಮಾಜಿಕ ಕಂಟಕಗಳು, ಅನಿಷ್ಟ ಪಾರಂಪರಿಕ ನಂಬಿಕೆಗಳು ಇನ್ನೂ ಮುಂತಾದವು. ಇವುಗಳೆಲ್ಲವನ್ನು ಹಂತ ಹಂತವಾಗಿ ನಿವಾರಿಸಿ ಮಹಿಳೆಯರನ್ನು ಸಮಾನತೆ, ಸ್ವಾವಲಂಬನೆಯತ್ತ ಸಾಗಿಸುವುದಕ್ಕೆ ಆರ್ಥಿಕ ಚಟುವಟಿಕೆಯ ಒಂದು ಘಟಕವಾದ ಸ್ವ-ಸಹಾಯ ಗುಂಪುಗಳನ್ನು ರಚಿಸಲಾಗಿದೆ. ಈ ಪುಟ್ಟ ಆರ್ಥಿಕ ಘಟಕವಾದ ಸ್ವ-ಸಹಾಯ ಗುಂಪುಗಳ ಯೋಜನೆ ಗ್ರಾಮೀಣ ಪ್ರದೇಶದಲ್ಲಿ ಯಶಸ್ವಿಯಾಗಿ ಜಾರಿಗೊಂಡು ಸಾಫಲ್ಯತೆಯನ್ನು ಗಣನೀಯವಾಗಿ ಸಾಧಿಸಿದೆ. ಭಾರತದೇಶದ ವಿವಿಧ

ಅಭಿವೃದ್ಧಿ ಯೋಜನೆಗಳಲ್ಲಿ ಗ್ರಾಮೀಣಾಭಿವೃದ್ಧಿಗೆ ಪ್ರಥಮ ಆದ್ಯತೆ ನೀಡಿದ್ದರೂ ಗ್ರಾಮೋದ್ಯೋಗ ಭರವಸೆ ಕಾರ್ಯಕ್ರಮದಡಿಯಲ್ಲಿ ಮೊದಲು ಗ್ರಾಮೀಣ ಮಹಿಳೆಯರಿಗೆ ಉದ್ಯೋಗಾವಕಾಶಗಳು ದೊರೆತವು. ಆ ಮುಖಾಂತರ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಮಹಿಳೆಯರು ಭಾಗವಹಿಸುವ ಅವಕಾಶಗಳು ಸ್ವಲ್ಪ ಪ್ರಮಾಣದಲ್ಲಿ ಲಭ್ಯವಾದವು. ೧೯೫೧-೫೬ರಿಂದ ಪ್ರಾರಂಭವಾದ ಪಂಚವಾರ್ಷಿಕ ಯೋಜನೆಗಳ ಅಡಿಯಲ್ಲಿ ಪ್ರಪ್ರಥಮವಾಗಿ ಸಮುದಾಯ ಅಭಿವೃದ್ಧಿ (Communty Development) ಯೋಜನೆ ೧೯೫೨ರಿಂದ ಪ್ರಾರಂಭಗೊಂಡು ೧೯೬೩ರಲ್ಲಿ ರಾಷ್ಟ್ರೀಯ ಉದ್ಯೋಗ ಯೋಜನೆ (NES), ಸಣ್ಣ ಹಾಗೂ ಸೀಮಾಂತ ರೈತರ ಅಭಿವೃದ್ಧಿ ಯೋಜನೆ (೧೯೭೧-೭೨), ಟ್ರೈಸಂ (Trysem) ಗ್ರಾಮೀಣ ಯುವಕರಿಗೆ ಸ್ವ ಉದ್ಯೋಗ ತರಬೇತಿ (೧೯೭೯), ಬರಗಾಲ ಪೀಡಿತ ಪ್ರದೇಶ ಅಭಿವೃದ್ಧಿ ಯೋಜನೆ (DPAP), ರಾಷ್ಟ್ರೀಯ ಉದ್ಯೋಗ ಕಾರ್ಯಕ್ರಮ (NREP–೧೯೮೦), ಗ್ರಾಮೀಣ ಭೂರಹಿತ ಕೃಷಿಕಾಯರ್ಮಿಕರ ಉದ್ಯೋಗ ಭರವಸೆ ಕಾರ್ಯಕ್ರಮ (RLEGP ೧೯೮೩–೮೪), ಜವಾಹರ್ ರೋಜಗಾರ್ ಯೋಜನೆ (JRY–ಹಿಂದಿನ NREP ಮತ್ತು RLGEP ಕಾರ್ಯಕ್ರಮಗಳನ್ನು ವಿಲೀನಗೊಳಿಸಿ ೧೯೮೯–೯೦), ಗ್ರಾಮೀಣ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ (DWACRA–೧೯೯೦–೯೧), ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (IRDP–೧೯೮೦) ಇತ್ಯಾದಿ ಅಭಿವೃದ್ಧಿ ಯೋಜನೆಗಳು ರಾಷ್ಟ್ರಾದ್ಯಂತ ಜಾರಿಗೊಂಡರೂ ಮಹಿಳಾಭಿವೃದ್ಧಿಯಲ್ಲಿ ಹೇಳಿಕೊಳ್ಳುವಷ್ಟು ಪ್ರಗತಿ ಸಾಧ್ಯವಾಗಲಿಲ್ಲ. ಗ್ರಾಮೀಣ ಮಹಿಳೆಯರ ಸಮಸ್ಯೆಗಳು ಸುಧಾರಣೆಯಾಗಿಲ್ಲ. ಇದರಿಂದಾಗಿ ಪ್ರತ್ಯೇಕ ಮಹಿಳಾಭಿವೃದ್ಧಿ ಯೋಜನೆಗಳು ರೂಪಿತಗೊಂಡು ಜಾರಿಗೆ ಬಂದವು. ಅವುಗಳಲ್ಲಿ ಉಲ್ಲೇಖ ಮಾಡಬಹುದಂತಹ ಕಾರ್ಯಕ್ರಮಗಳೆಂದರೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮುಖಾಂತರ ಜಾರಿಗೊಂಡಿರುವ ಮನೆಬೆಳಕು, ಉದ್ಯೋಗಿನಿ, ವಿಕಾಸಿನಿ, ಯಶಸ್ವಿನಿ, ಅರುಣೋದಯ ಇತ್ಯಾದಿಗಳು. ಇವು ಸೀಮಿತ ಕಾರ್ಯಕ್ರಮಗಳಾಗಿ ಇಡೀ ತಾಲೂಕಿಗೆ ಪ್ರತಿವರ್ಷ ೧೦ರಿಂದ ೧೫ ಮಹಿಳೆಯರಿಗೆ (ಬಡತನ ರೇಖೆಗಿಂತ ಕೆಳಗಿನ ವರಮಾನದವರಿಗೆ) ವೈಯಕ್ತಿಕ ಸಾಲಗಳನ್ನು ಬ್ಯಾಂಕುಗಳ ಮೂಲಕ ನೀಡಿ, ಇಲಾಖೆಯ ವತಿಯಿಂದ ಸಹಾಯಧನ ನೀಡುವುದು. ಸಹಾಯಧನ ಕಳೆದು ಉಳಿದ ಸಾಲದ ಹಣವನ್ನು ಫಲಾನುಭವಿ ಮಹಿಳೆ ನಿರ್ದಿಷ್ಟ ಕಂತುಗಳಲ್ಲಿ ಬಡ್ಡಿ ಸಹಿತ ಮರುಪಾವತಿ ಮಾಡುವುದು. ಸಾಲದ ಸದುಪಯೋಗದಿಂದ ಆರ್ಥಿಕ ಚಟುವಟಿಕೆಗಳನ್ನು ಮಾಡಿ ಗಳಿಸಿದ ಆದಾಯದಲ್ಲಿ ಜೀವನ ನಿರ್ವಹಣೆಗೆ ಬಳಸಿ, ಉಳಿಸಿದ ಹಣವನ್ನು ಸಾಲ ಮರುಪಾವತಿಗೆ ತೊಡಿಸುವ ಮೂಲಕ ಮಹಿಳಾಭಿವೃದ್ಧಿ ಸಾಧಿಸುವುದು. ಆದರೆ ಈ ಕಾರ್ಯಕ್ರಮಗಳು ಫಲಾನುಭವಿ ಆಯ್ಕೆಯ ಪ್ರಕ್ರಿಯೆಯಲ್ಲಿ ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳ ಮಧ್ಯಪ್ರವೇಶದಿಂದ ಸಮಷ್ಟಿಯಲ್ಲಿ ಯಾವ ಪ್ರಯೋಜನವಾಗಿಲ್ಲ. ಇವುಗಳು ಕೇವಲ ಸೀಮಿತ ಸಂಖ್ಯೆಯ ನಿಗದಿತ ಕಾರ್ಯಕ್ರಮಗಳೇ ಹೊರತು ಸಮಗ್ರ ಮಹಿಳಾ ಸಮುದಾಯದ ಅಭಿವೃದ್ಧಿ ಕಾರ್ಯಕ್ರಮಗಳಲ್ಲ.

ಆದ್ದರಿಂದ ಸಾಮೂಹಿಕ ಕಾರ್ಯಕ್ರಮವಾದ ಸ್ವ-ಸಹಾಯ ಸಮೂಹ ಅಥವಾ ಸ್ವ-ಸಹಾಯ ಸಂಘ/ಗುಂಪುಗಳು ಮಹಿಳಾ ಸರ್ವಾಂಗೀಣ ಅಭಿವೃದ್ಧಿಗೆ ಸಹಾಯಕಾರಿ ಎಂದು ಹೇಳಬಹುದು.

ಒಟ್ಟಾರೆ ಗ್ರಾಮದ ಸಾಹುಕಾರರಿಂದ ಸಾಲ ಪಡೆದ ಬಡವರು ಸಾಲವನ್ನು ತೀರಿಸಲಾಗದೆ ಗಂಡ, ಹೆಂಡತಿ, ಮಕ್ಕಳು ಅದೇ ಸಾಹುಕಾರನ ಮನೆಯಲ್ಲಿ ಜೀತದಾಳುಗಳಾಗಿ ದುಡಿದು ಸಾಲದ ಬಡ್ಡಿ, ಚಕ್ರಬಡ್ಡಿ ಕಟ್ಟುತ್ತಾ ಕಡುಬಡತನದಲ್ಲಿ ಜೀವನ ನಿರ್ವಹಣೆ ಮಾಡುತ್ತಿದ್ದ ಮಹಿಳೆಯರು, ಸ್ವ-ಸಹಾಯ ಗಂಪುಗಳು (ಸಂಘಗಳು)ನ್ನು ಕಟ್ಟಿಕೊಂಡು (ಇಪ್ಪತ್ತು ಜನ ಮಹಿಳೆಯರು ಸೇರಿ) ತಮ್ಮ ಸಂಘದಿಂದಲೆ ಕಡಿಮೆ ಬಡ್ಡಿಯಲ್ಲಿ ಸಾಲಪಡೆದುಕೊಂಡು ಶ್ರೀಮಂತರು ನೀಡುತ್ತಿದ್ದ ಅಧಿಕ ಬಡ್ಡಿಯ ಸಾಲದಿಂದ ಮುಕ್ತಿ ಪಡೆಯುವುದರ ಜೊತೆಗೆ ತಮ್ಮ ಸ್ವ-ಸಹಾಯ ಸಂಘಗಳ ಅಭಿವೃದ್ಧಿ ಕಡೆಗೆ ಗಮನ ನೀಡುತ್ತಿದ್ದರು. ಇದರಿಂದ ಈ ಕುಟುಂಬಗಳು ಬಡತನದಿಂದ ಚೇತರಿಸಿಕೊಂಡು ತಮ್ಮ ಕೌಟುಂಬಿಕ ಜೀವನ ನಿರ್ವಹಣೆಯನ್ನು ಮಾಡುತ್ತಿದ್ದರು. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಸ್ವ-ಸಹಾಯ ಸಂಘಗಳ ಬಗೆಗೆ ಮಹಿಳಾ ಬಡಕುಟುಂಬಗಳಲ್ಲಿ ಭರವಸೆ ಮೂಡಿತು. ಒಂದು ಕಾಲದಲ್ಲಿ ಲೇವಾದೇವಿಗಾರರು ಮತ್ತು ವ್ಯಾಪಾರಿಗಳಿಂದ ಸಾಲಪಡೆದ ಬಡವರು ಸಾಲದಲ್ಲೇ ಹುಟ್ಟಿ ಸಾಲದಲ್ಲೆ ಸಾಯುತ್ತಿದ್ದರು. ಇಂತಹ ಸಂದಿಗ್ಧ ಸಮಯದಲ್ಲಿ ಅವರಿಗೆ ಸ್ವ-ಸಹಾಯ ಸಂಘಗಳೆ ನೆರವಾದದ್ದು ಪರಸ್ಪರ ಸಹಾಯ ಸಹಕಾರದಿಂದ ಲೇವಾದೇಪಿದಾರರಿಂದ ಮತ್ತು ಅಧಿಕ ಬಡ್ಡಿಯ ಸಾಲದಿಂದ ಮುಕ್ತಿಪಡೆಯಲು ಸಾಧ್ಯವಾಯಿತು.

ಕೊನೆ ಟಿಪ್ಪಣಿಗಳು

1. www lnvestopedia. Com
೨. ಥಾಮಸ್ ಫಿಷರ್ ಮತ್ತು ಎಮ್.ಎಸ್.ಶ್ರೀರಾಮ್, ಬಿಯಾಂಡ್ ಮೈಕ್ರೋ ಕ್ರೆಡಿಟ್ (ಪುಟಿಂಗ್ ಡೆವೆಲಪ್‌ಮೆಂಟ್ ಬ್ಯಾಂಕು ಇಂಟು ಮೈಕ್ರೋ-ಫೈನಾನ್ಸ್) ವಿಸ್ತಾರ ಪಬ್ಲಿಕೇಷನ್ಸ್, ನ್ಯೂಹದೆಲಿ, ೨೦೦೨, ಪು.ಸಂ. ೨೩
೩. ಕರಮಕರ್ ಕೆ.ಜಿ; ಭಾರತದಲ್ಲಿ ಸೂಕ್ಷ್ಮಹಣಕಾಸು, ಸೇಜ್ ಪಬ್ಲಿಕೇಷನ್ ಇಂಡಿಯಾ ಪ್ರೈ ಲಿಮಿಟೆಡ್, ೨೦೦೮, ಪು.ಸಂ. ೩೭
೪. ರಾಜೀವ್ ಐ.ಎನ್. ಜರ್ನಲ್ ಆಫ್ ಕರ್ನಾಟಕ ಸ್ಟಡೀಸ್, (ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ) ವ್ಯಾ-೩, ನಂ.೩, ಮತ್ತು ವ್ಯಾ ೩, ನಂ-೧. ಮೇ ೨೦೦೫- ಏಪ್ರಿಲ್ ೨೦೦೬, ಪು.ಸಂ. ೧೩೭
೫. ಅದೇ ಪುಟ ಸಂಖ್ಯೆ ೩೭
೬. ಅದೇ ಪುಟ ಸಂಖ್ಯೆ ೧೩೭

೭. ಅದೇ ಪುಟ ಸಂಖ್ಯೆ ೧೩೮

೮. ಅದೇ ಪುಟ ಸಂಖ್ಯೆ ೧೩೯

೯. ಕಾರ್ತಿಕ್‌ದಾಸ್, ಮೈಕ್ರೋ ಕ್ರೆಡಿಟ್ ದ ಇಂಜನ್ ಆಫ್ ಇನ್‌ಕ್ಲೂಸಿವ್ ಗ್ರೋಥ್, ಕುರುಕ್ಷೇತ್ರ, ಎ ಜರ್ನಲ್ ಆನ್ ರೂರಲ್ ಡೆವಲಪ್‌ಮೆಂಟ್, ವ್ಯಾ. ೬೧, ನಂ. ೯, ಜುಲೈ ೨೦೧೩, ಪು.ಸಂ. ೧೨ ಮತ್ತು ೧೩

೧೦. www.new. Nic . in. pdf page. No. ೧೩

೧೧. ಅದೇ ಪುಟ ಸಂಖ್ಯೆ ೧೪

೧೨. ಅದೇ ಪುಟ ಸಂಖ್ಯೆ ೧೬

೧೩. ಅದೇ ಪುಟ ಸಂಖ್ಯೆ ೧೫

೧೪. ಗೀತಾ ಸಿ. ಮಹಿಳಾ ಆರ್ಥಿಕ ಸಬಲೀಕರಣದಲ್ಲಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘಗಳ ಪಾತ್ರ, ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಪು.ಸಂ. ೭೩

೧೫. ಚಂದ್ರಶೇಖರ ಟಿ.ಆರ್. ಕರ್ನಾಟಕದ ಹೊಸ ಸರ್ಕಾರದ ಮುಂದಿರುವ ಸವಾಲುಗಳು ಹೊಸತು, ತಿಂಗಳ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ (ನವಕರ್ನಾಟಕ, ಪ್ರಕಾಶನ,) ಜೂನ್-ಜುಲೈ ೨೦೧೩, ಪು.ಸಂ. ೯

೧೬. ಚಂದ್ರಶೇಖರ ಟಿ.ಆರ್. ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦ ಪು.ಸಂ. ೬೩

೧೭. ಬಬಿತ ಅಗರವಾಲ, ಭಾರತೀಯ ಆರ್ಥಿಕತೆಯಲ್ಲಿ ಗ್ರಾಮೀಣ ಮಹಿಳೆ ಎ.ಬಿ.ಡಿ. ಪಬ್ಲಿಕೇಷನ್ಸ್, ಜೈಪುರ, ೨೦೦೮ ಪು.ಸಂ. ೧೧೮

೧೮. ಪೂರ್ವೋಕ್ತ ಚಂದ್ರಶೇಖರ ಟಿ. ಆರ್. ಪು.ಸ.೦ ೨೮

೧೯. ಶ್ರೀನಿವಾಸ ಎಚ್ ಕೊಪ್ಪಳ, ಮಹಿಳಾ ಸಬಲೀಕರಣ, ಆರ್ಥಿಕ ಅಭಿವೃದ್ಧಿ ಮತ್ತು ಸ್ಥಾನಮಾನಗಳು, ಶಿಕ್ಷಣ ಸೌಧ, ಗದಗ, ವ್ಯಾ ೫, ಇಸ್ಯೂ-೧, ಜೂನ್ ೨೦೧೫, ಪು.ಸಂ. ೧೪

೨೦. ಒಡೆಯರ್ ಡಿ ಹೆಗ್ಗಡೆ ಮತ್ತು ಚಂದ್ರಶೇಖರ್. ಮಹಿಳೆ ಮತ್ತು ಸಾಮಾಜಿಕ ಅಭಿವೃದ್ಧಿ (ಅರ್ಜುನ್ ಪಬ್ಲಿಸಿಂಗ್ ಹೌಸ್. ಮೈಸೂರು). ೨೦೦೮. ಪು.ಸಂ. ೮

೨೧. ಪೂರ್ವೋಕ್ತ ಶ್ರೀನಿವಾಸ ಎಚ್. ಕೊಪ್ಪಳ. ಪು.ಸಂ. ೧೪

೨೨. ಇಂದಿರಾ ಎಸ್. ಮಹಿಳೆ ಮತ್ತು ಸವಾಲುಗಳು, (ಶ್ರುತಿಲೋಕ ಪ್ರಕಾಶನ, ಮೈಸೂರು,) ೨೦೧೦, ಪು.ಸಂ. ೮

೨೩. ಪೂರ್ವೋಕ್ತ ಗೀತಾ ಸಿ. ಪು.ಸಂ. ೨೩

೨೪. www Microfinance gateway. Org/mfg en-paper-can Micro finace empower women? Self help Groups in India by R.B. swain 81, pdf p.no. 62

25. Anns J. women and the qunlity of life : one Norm or two. In Nussbaum, Martha and A sen (edited). The quality of life, oxford University press, 1993, P.No. 280-296

೨೬. ಪೂರ್ವೋಕ್ತ, Microfinance gateway p.no. 63

27. http://info.world bank org/etools/bspan/presentation view. Asp? PID=936 and EID=482. Social capital, empowerment and community driven development

28. http://inweb 18. world bank. Org/ESSD/sdvext. Nsf/ 68 by Doc neme/ what is Empowerment Four Areas of Practies

29. ಪೂರ್ವೋಕ್ತ, Microfinance gateway p.no. 64

೩೦. ಅದೇ ಪುಟ ಸಂಖ್ಯೆ ೬೫

೩೧. ಪೂರ್ವೋಕ್ತ, ಗೀತಾ ಸಿ. ಪು.ಸಂ. ೭೭

೩೨. ಅದೇ ಪುಟ ಸಂಖ್ಯೆ ೭೮

೩೩. ಅದೇ ಪುಟ ಸಂಖ್ಯೆ ೭೯

೩೪. ಅದೇ ಪುಟ ಸಂಖ್ಯೆ ೮೩

೩೫. ಅದೇ ಪುಟ ಸಂಖ್ಯೆ ೮೪

೩೬. ಅದೇ ಪುಟ ಸಂಖ್ಯೆ ೮೫

೩೭. ಅದೇ ಪುಟ ಸಂಖ್ಯೆ ೮೬

೩೮. ಪೂರ್ವೋಕ್ತ, Microfinance gateway p.no. 65-66

೩೯. ಅದೇ ಪುಟ ಸಂಖ್ಯೆ ೬೭

೪೦. ಅದೇ ಪುಟ ಸಂಖ್ಯೆ ೬೭

೪೧. ಅದೇ ಪುಟ ಸಂಖ್ಯೆ ೬೮

೪೨. ಕರಮಕರ್ ಕೆ.ಜಿ ಗ್ರಾಮೀಣ ಸಾಲ ಮತ್ತು ಸ್ವ-ಸಹಾಯ ಗುಂಪುಗಳು. ಸೇಜ್ ಪಬ್ಲಿಕೇಷನ್ಸ್ ಇಂಡಿಯಾ ಪ್ರೈ. ಲಿ. ೨೦೦೧, ಪು.ಸಂ. ೨೦೭

೪೩. ಅದೇ ಪುಟ ಸಂಖ್ಯೆ ೨೦೮

೪೪. ಅದೇ ಪುಟ ಸಂಖ್ಯೆ ೨೦೮-೨೦೯

೪೫. ಅದೇ ಪುಟ ಸಂಖ್ಯೆ ೨೧೦

೪೬. ಅದೇ ಪುಟ ಸಂಖ್ಯೆ ೨೦೯-೨೧೦

೪೭. ಅದೇ ಪುಟ ಸಂಖ್ಯೆ ೨೧೧

೪೮. ಅದೇ ಪುಟ ಸಂಖ್ಯೆ ೨೧೧-೨೧೨

೪೯. ಕೃಷ್ಣಯ್ಯಗೌಡ ಎಚ್.ಆರ್. ಸ್ವ-ಸಹಾಯ ಗುಂಪುಗಳು-ಚಿಂದಿಯಿಂದ ಸಿರಿತನದೆಡೆಗಿನ ಒಂದು ಕತೆ, (ಗುರುಕೃಪ ಪ್ರಕಾಶನ, ಮೈಸೂರು,) ೨೦೦೪, ಪು.ಸಂ.೧೦

೫೦. ಕರ್ನಾಟಕದ ಮಾನವ ಆಭಿವೃದ್ಧಿ ವರದಿ ೨೦೦೫, ಪು.ಸಂ. ೩೧೭

೫೧. ಪೂರ್ವೋಕ್ತ, ಕೃಷ್ಣಯ್ಯಗೌಡ ಎಚ್.ಆರ್. ಪು.ಸಂ. ೧೫

೫೨. ಜಯವಂತ ನಾಯಕ ಮತ್ತು ನಾರಾಯಣ ಯಾಜಿ, ಗ್ರಾಮೀಣ ಆಭಿವೃದ್ಧಿ, ಮಂಗಳ ಪ್ರಚಾರೋಪನ್ಯಾಸ ಮಾಲಿಕೆ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ೨೦೧೦, ಪು.ಸಂ. ೪೪-೪೫

೫೩. ಪೂರ್ವೋಕ್ತ, ಕೃಷ್ಣಯ್ಯಗೌಡ ಎಚ್.ಆರ್. ಪು.ಸಂ. ೧೧

೫೪. ಪೂರ್ವೋಕ್ತ, ಗೀತಾ ಸಿ. ಪು. ಸಂ. ೧೨೨

೫೫. ಪೂರ್ವೋಕ್ತ ಜಯವಂತ ನಾಯಕ ಮತ್ತು ನಾರಾಯಣ ಯಾಜಿ, ಪು.ಸಂ. ೪೧-೪೨

೫೬. ಪೂರ್ವೋಕ್ತ, ಗೀತಾ ಸಿ. ಪು. ಸಂ. ೧೨೩

೫೭. ಅನುಪಮ್ ಹಜ್ರ ಸುಸ್ಥಿರ ಗ್ರಾಮೀಣ ಅಭಿವೃದ್ಧಿಗೆ ಹೊಸ ಆಯಾಮಗಳನ್ನು ಸೇರಿಸುವಿಕೆ ಕುರುಕ್ಷೇತ್ರ ಜುಲೈ ೨೦೧೩, ಪು.ಸಂ. ೩

೫೮. ಅದೇ ಪುಟ ಸಂಖ್ಯೆ ೪

೫೯. ಅದೇ ಪುಟ ಸಂಖ್ಯೆ ೬

೬೦. ಪೂರ್ವೋಕ್ತ, ಗೀತಾ ಸಿ. ಪು.ಸಂ. ೧೩೦-೧೩೧

೬೧. ಸ್ತ್ರೀಶಕ್ತಿ ಯೋಜನೆ. ರಾಜ್ಯ ಪುರಸ್ಕೃತ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಬೆಂಗಳೂರು ಪು.ಸಂ. ೧-೨

೬೨. ಪೂರ್ವೋಕ್ತ, ಕೃಷ್ಣಯ್ಯಗೌಡ ಎಚ್.ಆರ್. ಪು.ಸಂ. ೮೨–೮೪

೬೩. ಪೂರ್ವೋಕ್ತ, ಜಯವಂತ ನಾಯಕ ಮತ್ತು ನಾರಾಯಣ ಯಾಜಿ, ಪು.ಸಂ. ೮೭–೮೮

೬೪. ಪೂರ್ವೋಕ್ತ, ರಾಜೀವ್ ಐ.ಎನ್. ಪು.ಸಂ. ೧೫೧–೧೫೨

೬೫. ಪೂರ್ವೋಕ್ತ, ಗೀತಾ ಸಿ. ಪು.ಸಂ. ೯೪

66. www asmgroup edu. In /income%202013…/incon 13-HR-027. PDF.P.No.7

67. https://www.lfad.org. the role played by IFAD by Aloysins P. Fernadez PDF. P.No.08

68. ಪೂರ್ವೋಕ್ತ, www asmgroup edu. In p.no. 07

೬೯. ಪೂರ್ವೋಕ್ತ, ಕೃಷ್ಣಯ್ಯಗೌಡ ಎಚ್.ಆರ್. ಪು.ಸಂ ೧೦೩

೭೦. ಅದೇ ಪುಟ ಸಂಖ್ಯೆ ೧೦೪

೭೧. ಪೂರ್ವೋಕ್ತ, www asmgroup edu. In p.no. 7

೭೨. ಪೂರ್ವೋಕ್ತ, www microfinancegateway.org. p.no. 75

೭೩. ವೆಂಕಟಯ್ಯ ಅಪ್ಪಗೆರೆ, ಗ್ರಾಮೀಣ ಮಹಿಳಾಭಿವೃದ್ಧಿಯಲ್ಲಿ ಸ್ವ–ಸಹಾಯ ಗುಂಪುಗಳ ಪಾತ್ರ, ಮಹಾಪ್ರಬಂಧ, ೨೦೦೨, ಪು.ಸಂ. ೩

74. www business-standard. Com/baratiya-Mahila-bank-Starts-with-7 branches

75. https: //en. Wikipedia.org/wiki/Barathiya-Mahila-bank.

76. Rahul sarania and Dr. sharabanti Maity, self Help Groups and Financial Inclusion-A stndy in Baksa district of Assam, International Journal of Hunanities and Social Science Studies (IJHSSS). A peer-re viewed Bi-monthly Bi-lingual Research Journal. Volume-I Issue-III, November 2014, p.no=138.

೭೭. ಎಂ. ಚಂದ್ರಪೂಜಾರಿ, ಅಭಿವೃದ್ಧಿ, ೨೦೧೬, ಪು.ಸಂ. ೮೮

೭೮. ಪೂರ್ವೋಕ್ತ, ವೆಂಕಟಯ್ಯ ಅಪ್ಪಗೆರೆ. ಪು.ಸಂ. ೨–೩

ಅಧ್ಯಾಯ : ಆರು

ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಸಾಮಾಜಿಕ ಸ್ಥಾನಮಾನ

ಅಧ್ಯಾಯ : ಆರು

ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಸಾಮಾಜಿಕ ಸ್ಥಾನಮಾನ

ಪ್ರಸ್ತುತ ಅಧ್ಯಾಯದಲ್ಲಿ ಸ್ತ್ರೀಶಕ್ತಿ ಗುಂಪುಗಳಲ್ಲಿನ ಪರಿಶಿಷ್ಟ ಮಹಿಳೆಯರ ಮತ್ತು ಗುಂಪಿನ ಸದಸ್ಯರಲ್ಲದ ಪರಿಶಿಷ್ಟ ಮಹಿಳೆಯರ ಸ್ಥಾನಮಾನವನ್ನು ನೋಡುವ ಉದ್ದೇಶದೊಂದಿಗೆ ಹೊಸಪೇಟೆ ತಾಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಹಾಗೂ ಕೂಡ್ಲಿಗಿ ತಾಲೂಕಿನ ಚಿರತಗುಂಡು ಮತ್ತು ರಾಂಪುರ ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿನ ಮಹಿಳೆಯರನ್ನು ಪ್ರಶ್ನಾವಳಿ ಮೂಲಕ ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮುಖ್ಯವಾಗಿ ಅವರ ಜಾತಿ ಮತ್ತು ಸಮಾಜದಲ್ಲಿ ಇವರಿಗಿರುವ ಸ್ಥಾನಮಾನವನ್ನು ಗುರುತಿಸಲಾಗಿದೆ. ಜಾತಿಯು ಸಾಮಾಜಿಕ ಸ್ತರವಿನ್ಯಾಸದ ಒಂದು ರೂಪವಾಗಿದ್ದು, ಏಣಿ-ಶ್ರೇಣಿಗಳಿಂದ ಕೂಡಿದ ವ್ಯವಸ್ಥೆಯಾಗಿದೆ. ಹಿಂದೂ ಸಮಾಜವು ಜಾತಿ-ಉಪಜಾತಿಗಳೆಂಬ ಅಸಂಖ್ಯಾತ ಸಮೂಹಗಳನ್ನು ಒಳಗೊಂಡಿದೆ. ಮೇಲು ಮತ್ತು ಕೀಳು, ಶ್ರೇಷ್ಠ ಮತ್ತು ಕನಿಷ್ಟ, ಪವಿತ್ರ-ಅಪವಿತ್ರ ಎಂಬ ಭಾವನೆಯ ಮೇಲೆ ಜಾತಿ ವ್ಯವಸ್ಥೆ ರೂಪಿತವಾಗಿದೆ. ಇದರ ವಿರುದ್ದ ಸರಕಾರ ಅಸ್ಪೃಶ್ಯತೆಯ ಆಚರಣೆಯನ್ನು ಸಾಂವಿಧಾನಿಕ ನಿಯಮಗಳ ೧೭ನೇ ವಿಧಿ ಮೂಲಕ ತೊಡೆದು ಹಾಕಲಾಗಿದೆ. ಅಸ್ಪೃಶ್ಯತಾ ನಿರ್ಮೂಲನಾ ಕಾಯ್ದೆ (೧೯೫೫)ಯು ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸರಕಾರ ಕಾಯ್ದೆಗಳನ್ನು ಜಾರಿಗೆ ತಂದಿದೆ. ಆದರೆ ಸಾಮಾಜಿಕ ವ್ಯವಸ್ಥೆಯಲ್ಲಿ ಅವುಗಳು ಅನುಷ್ಠಾನಗೊಳ್ಳಲು ಹಲವು ಸಾಮಾಜಿಕ ಸಮಸ್ಯೆ ಎದುರಾಗುತ್ತಿರುವ ಸಾಧ್ಯತೆ ಹೆಚ್ಚು ಗಮನಿಸಬಹುದಾಗಿದೆ. ಏಕೆಂದರೆ ಜಾತಿ ವ್ಯವಸ್ಥೆಯು ತುಂಬಾ ಬಲಿಷ್ಠವಾಗಿರುವುದು ಮತ್ತು ಈ ಬಗೆಯ ಕಾಯಿದೆಗಳ ಬಗೆಗೆ ವ್ಯವಸ್ಥೆಯು ಹೊಂದಿರುವ ನಿರ್ಲಕ್ಷವೂ ಕೂಡ ಅಸ್ಪೃಶ್ಯತೆ ಜೀವಂತವಾಗಿರಲು ಕಾರಣವಾಗಿದೆ. ಇದು ಕೇವಲ ಅಸ್ಪೃಶ್ಯತೆಗೆ ಮಾತ್ರ ಸಂಬಂಧಿಸಿದ್ದಲ್ಲ. ಬದಲಾಗಿ ಕೆಳಸ್ತರದ ಸಮುದಾಯಗಳು ಮೇಲ್ ಸ್ತರಕ್ಕೆ ಬರಲು ಹಲವಾರು ಅಭಿವೃದ್ಧಿ ಯೋಜನೆಗಳು ಜಾರಿಗೆ ಬಂದರೂ ಸಹ ಅವುಗಳ ಪ್ರಯೋಜನ ಮಾತ್ರ ತಳಸಮುದಾಯಗಳಿಗೆ ದೊರೆಯುತ್ತಿಲ್ಲ. ಮುಖ್ಯವಾಗಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕಾದ ಅಧಿಕಾರಿ ವರ್ಗ ಅವುಗಳ ಬಗೆಗೆ ಹೊಂದಿರುವ ನಿರ್ಲಕ್ಷ ಇದಕ್ಕೆ ಕಾರಣವಾದರೆ. ಇನ್ನೊಂದು ಮುಖ್ಯ ಕಾರಣ ಯೋಜನೆಗಳ ಬಗೆಗೆ ಜನರಲ್ಲಿ ಸಂಪೂರ್ಣವಾದ ಅರಿವು ಇಲ್ಲದೇ ಇರುವುದು. ಇದು ಜನರನ್ನು ಇದ್ದ ಸ್ಥಳದಲ್ಲಿಯೇ ಇರುವಂತೆ ನೋಡಿಕೊಳ್ಳುತ್ತಿದೆ. ಹಾಗಾಗಿ ಪ್ರಗತಿಪರ ಅಥವಾ ಅಭಿವೃದ್ಧಿ ಪರವಾದ ಯಾವುದೇ ಯೋಜನೆಗಳು ಜಾರಿಯಾದರೂ ಸಹ ಅವುಗಳು

ಸರಿಯಾದ ಸಮಯಕ್ಕೆ, ಸರಿಯಾದ ಸಮುದಾಯಕ್ಕೆ ದೊರೆಯುತ್ತಿಲ್ಲ. ಇದು ಕೇವಲ ಒಂದು ಸಮುದಾಯಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಈ ಬಗೆಯ ದೋಷಗಳು ಮಹಿಳಾ ಪರ ಯೋಜನೆಗಳ ಸಂದರ್ಭದಲ್ಲಿಯೂ ಗೋಚರಿಸುತ್ತಿರುವುದು ವಿಪರ್ಯಾಸವೇ ಸರಿ. ಇಂತಹ ಸಂದರ್ಭದಲ್ಲಿ ಮಹಿಳೆಯರ ಸಾಮಾಜಿಕ ಸ್ಥಾನಮಾನದ ಕುರಿತು ಮಾತನಾಡುವುದು ಉಪಯುಕ್ತವಾದ ಸಂಗತಿಯಾಗಿದೆ. ಅಂದರೆ ಪ್ರತೀ ಗ್ರಾಮಗಳಲ್ಲಿಯೂ ಸ್ತ್ರೀಶಕ್ತಿ ಸಂಘಗಳಿವೆ. ಇವುಗಳಲ್ಲಿ ಸದಸ್ಯತ್ವವನ್ನು ಪಡೆದುಕೊಂಡ ಮಹಿಳಾ ಸದಸ್ಯರುಗಳಲ್ಲಿ ಪರಿಶಿಷ್ಟ ಜಾತಿ/ಪಂಗಡದ ಮಹಿಳೆಯರು ಇದ್ದಾರೆ. ಸರ್ಕಾರಗಳು ರೂಪಿಸುವ ಅಭಿವೃದ್ಧಿಪರ ಯೋಜನೆಗಳು ಈ ಸಂಘಗಳ ಸದಸ್ಯರುಗಳಿಗೆ ತಲುಪುತ್ತಿಲ್ಲ ಎನ್ನುವುದಾದರೆ ಅದಕ್ಕಿರುವ ಕಾರಣಗಳೇನು? ಇವುಗಳ ಪ್ರಯೋಜನವನ್ನು ಪಡೆಯದ ಪರಿಶಿಷ್ಟ ಮಹಿಳೆಯರ ಸಾಮಾಜಿಕ ಸ್ಥಾನಮಾನ ಯಾವ ಹಂತದಲ್ಲಿದೆ? ಸ್ತ್ರೀಶಕ್ತಿ ಸಂಘದ ಸದಸ್ಯರಾದ ಪರಿಶಿಷ್ಟ ಮಹಿಳೆಯರಿಗೂ ಮತ್ತು ಗುಂಪಿಗೆ ಸೇರದ ಮಹಿಳೆಯರಿಗೂ ಸಾಮಾಜಿಕ ಸ್ಥಾನಮಾನದಲ್ಲಿ ಇರುವಂತಹ ಭಿನ್ನತೆ ಅಥವಾ ವ್ಯತ್ಯಾಸಗಳೇನು? ಪರಿಶಿಷ್ಟ ಮಹಿಳೆಯರ ಸಮಾಜಿಕ ಸ್ಥಾನಮಾನ ಸುಧಾರಿಸುವಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಬಹುದು ಎಂಬಂತಹ ಹಲವಾರು ಅಂಶಗಳನ್ನು ತಿಳಿಯುವ ಉದ್ದೇಶವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಸರಕಾರ ಪರಿಶಿಷ್ಟ ಮಹಿಳೆಯರನ್ನು ಆರ್ಥಿಕವಾಗಿ ಸದೃಡಗೊಳಿಸಲು ಸ್ತ್ರೀಶಕ್ತಿ ಯೋಜನೆಯನ್ನು ಜಾರಿಗೆ ತಂದಿದೆ. ಇದರಿಂದ ಗ್ರಾಮೀಣ ಮತ್ತು ನಗರ ಪ್ರದೇಶದ ಮಹಿಳೆಯರಿಗೆ ತುಂಬಾ ಉಪಯುಕ್ತವಾಗಿದೆ. ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿನ ಪರಿಶಿಷ್ಟ ಮಹಿಳೆಯರು ಈ ಯೋಜನೆಯ ಫಲಾನುಭವಿಗಳಾಗಿ ತಮ್ಮ ಆರ್ಥಿಕ ಸ್ಥಿತಿ ಉತ್ತಮಪಡಿಸಿಕೊಳ್ಳುತ್ತಿರುವುದು ಅನೇಕ ಅಧ್ಯಯನಗಳಿಂದ ತಿಳಿದುಬಂದಿದೆ. ಆದರೆ ಈ ಯೋಜನೆಯ ಲಾಭವನ್ನು ಪಡೆದ ಮಹಿಳೆಯರ ಸಂಖ್ಯೆ ಬೆರಳಣಿಕೆಯಷ್ಟು ಎಂಬ ಸತ್ಯವೂ ಕಣ್ಣೆದುರಿಗೆ ಇದೆ. ಇದಕ್ಕೆ ಕಾರಣ ಪರಿಶಿಷ್ಟ ಮಹಿಳೆಯರು ಅನಕ್ಷರಸ್ಥರಾಗಿರುವುದು. ಆರ್ಥಿಕವಾಗಿ ಅಬಲೆಯರಾಗಿದ್ದು, ಸಾಮಾಜಿಕ ಜಾತಿವ್ಯವಸ್ಥೆಯ ಕೆಳಸ್ತರದ ಸ್ಥಾನಮಾನ ಹೊಂದಿರುತ್ತಾರೆ.

ಸಾಮಾನ್ಯ ಮಾಹಿತಿ

ಕೋಷ್ಟಕ : ೧ ಗುಂಪಿಗೆ ಸೇರಿದ ಮಹಿಳೆಯರ ಜಾತಿಯ ವಿವರ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು		ಕೂಡ್ಲಿಗಿ ತಾಲೂಕು	
		ಸಂಖ್ಯೆ	ಶೇ	ಸಂಖ್ಯೆ	ಶೇ
೦೧	ಪರಿಶಿಷ್ಟ ಜಾತಿ	೬೦	೫೦	೬೦	೫೦
೦೨	ಪರಿಶಿಷ್ಟ ಪಂಗಡ	೬೦	೫೦	೬೦	೫೦
	ಒಟ್ಟು	೧೨೦	೧೦೦	೧೨೦	೧೦೦

ಮೂಲ: ಕ್ಷೇತ್ರ ಕಾರ್ಯ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಸಣಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ ಗುಂಪಿಗೆ ಸೇರಿದ ಪರಿಶಿಷ್ಟ ಜಾತಿಗೆ ಸೇರಿದ ೩೦ ಮಹಿಳೆಯರನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಹಾಗೆಯೇ ಅದೇ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಪಂಗಡದ ಗುಂಪಿಗೆ ಸೇರಿದ ೩೦ ಮಹಿಳೆಯರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇದೇ ತಾಲೂಕಿನಲ್ಲಿ ಬರುವ ಜಿ.ನಾಗಲಾಪುರ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ ಗುಂಪಿನ ಪರಿಶಿಷ್ಟ ಜಾತಿಗೆ ಸೇರಿದ ೩೦ ಮಹಿಳೆಯರನ್ನು ಹಾಗೂ ಪರಿಶಿಷ್ಟ ಪಂಗಡದ ೩೦ ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಒಟ್ಟಾರೆಯಾಗಿ ಹೊಸಪೇಟೆ ತಾಲೂಕಿನ ಗುಂಪಿನ ಸದಸ್ಯರು ೬೦ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ೬೦ ಮಹಿಳೆಯರಿದ್ದಾರೆ. ಅದೇ ರೀತಿ ಕೂಡ್ಲಿಗಿ ತಾಲ್ಲೂಕಿನಲ್ಲಿ ೬೦ ಮಹಿಳೆಯರು ಪರಿಶಿಷ್ಟ ಜಾತಿಗೆ ಹಾಗೂ ೬೦ ಮಹಿಳೆಯರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ.

ಕೋಷ್ಟಕ : ೧.೧ ಗುಂಪಿಗೆ ಸೇರದ ಮಹಿಳೆಯರ ಜಾತಿಯ ವಿವರ

ಕ್ರ.ಸಂ	**ಸೂಚಕಗಳು**	**ಹೊಸಪೇಟೆ ತಾಲೂಕು**		**ಕೂಡ್ಲಿಗಿ ತಾಲೂಕು**	
		ಸಂಖ್ಯೆ	ಶೇ	ಸಂಖ್ಯೆ	ಶೇ
೦೧	ಪರಿಶಿಷ್ಟ ಜಾತಿ	೬೦	೫೦	೬೦	೫೦
೦೨	ಪರಿಶಿಷ್ಟ ಪಂಗಡ	೬೦	೫೦	೬೦	೫೦
ಒಟ್ಟು		೧೨೦	೧೦೦	೧೨೦	೧೦೦

ಮೂಲ: ಕ್ಷೇತ್ರ ಕಾರ್ಯ

ಬಳ್ಳಾರಿ ಜಿಲ್ಲೆಯಲ್ಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಸಣಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರದ ಪರಿಶಿಷ್ಟ ಜಾತಿಗೆ ಸೇರಿದ ೩೦ ಮಹಿಳೆಯರು ಹಾಗೂ ಪರಿಶಿಷ್ಟ ಪಂಗಡದ ೩೦ ಮಹಿಳೆಯರನ್ನು ಹಾಗೆಯೇ ಇದೇ ತಾಲೂಕಿನಲ್ಲಿ ಜಿ.ನಾಗಲಾಪುರ ಪಂಚಾಯತಿ ವ್ಯಾಪ್ತಿಯಲ್ಲಿ ಗುಂಪಿಗೆ ಸೇರದ ಪರಿಶಿಷ್ಟ ಜಾತಿಗೆ ಸೇರಿದ ೩೦ ಮಹಿಳೆಯರು ಮತ್ತು ಪರಿಶಿಷ್ಟ ಪಂಗಡದ ೩೦ ಮಹಿಳೆಯರನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ. ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ಚಿರತಗುಂಡು ಪಂಚಾಯತಿ ವ್ಯಾಪ್ತಿಯಲ್ಲಿಬರುವ ಗುಂಪಿಗೆ ಸೇರದ ಪರಿಶಿಷ್ಟ ಜಾತಿಗೆ ಸೇರಿದ ೩೦ ಮಹಿಳೆಯರು ಹಾಗೂ ಪರಿಶಿಷ್ಟ ಪಂಗಡದ ೩೦ ಮಹಿಳೆಯರನ್ನು ಅದರಂತೆ ಇದೇ ತಾಲೂಕಿನಲ್ಲಿ ಬರುವ ಇನ್ನೊಂದು ಚಿರತಗುಂಡು ಪಂಚಾಯಿತಿ ವ್ಯಾಪ್ತಿಯಲ್ಲಿ ಗುಂಪಿಗೆ ಸೇರದ ಪರಿಶಿಷ್ಟ ಜಾತಿಗೆ ಸೇರಿದ ೩೦ ಮಹಿಳೆಯರು ಹಾಗೂ ಪರಿಶಿಷ್ಟ ಪಂಗಡದ ೩೦ ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಒಟ್ಟಾರೆಯಾಗಿ ಹೊಸಪೇಟೆ ತಾಲೂಕಿನ ೬೦ ಮಹಿಳೆಯರು ಪರಿಶಿಷ್ಟ

ಜಾತಿಗೆ ಹಾಗೂ ೬೦ ಮಹಿಳೆಯರು ಪರಿಶಿಷ್ಟ ಪಂಗಡಕ್ಕೆ ಹಾಗೆಯೇ ಕೂಡ್ಲಿಗಿ ತಾಲೂಕಿನ ೬೦ ಮಹಿಳೆಯರು ಪರಿಶಿಷ್ಟ ಜಾತಿಗೆ ಮತ್ತು ೬೦ ಮಹಿಳೆಯರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ.

ಕೋಷ್ಟಕ : ೨ ಗುಂಪಿಗೆ ಸೇರಿದ ಮಹಿಳೆಯರ ವಯೋಮಿತಿ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ	ಶೇ.	ಎಸ್.ಟಿ	ಶೇ.	ಒಟ್ಟು	ಎಸ್ ಸಿ.	ಶೇ	ಎಸ್ .ಟಿ	ಶೇ	ಒಟ್ಟು
೦೧	೨೦ರಿಂದ ೩೦	೨೦	೩೩.೩೩	೧೭	೨೮.೩೩	೩೭	೦೯	೧೫	೧೨	೨೦	೨೧
೦೨	೩೧ರಿಂದ ೪೦	೧೯	೩೧.೬೭	೨೧	೩೫	೪೦	೨೭	೪೫	೧೬	೨೬.೬೭	೪೩
೦೩	೪೧ರಿಂದ ೫೦	೧೩	೨೧.೬೭	೧೯	೩೧.೬೭	೩೨	೧೩	೨೧. ೬೭	೧೮	೩೦	೩೧
೦೪	೫೧ರಿಂದ ೬೦	೦೮	೧೩.೩೩	೦೩	೫	೧೧	೧೧	೧೮.೩ ೩	೧೪	೨೩.೩೩	೨೫
		೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಕೋಷ್ಟಕ ೨ರಲ್ಲಿ ಹೊಸಪೇಟೆ ತಾಲೂಕಿನಲ್ಲಿ ಎರಡು ಪಂಚಾಯತಿಗಳು ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿನ ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮಹಿಳೆಯರು ಯಾವ ವಯೋಮಿತಿಯವರಾಗಿದ್ದಾರೆ ಎಂಬುದನ್ನು ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ ೩೩.೩೩ರಷ್ಟು ಹಾಗೂ ಪರಿಶಿಷ್ಟ ಪಂಗಡದ ಶೇ.೨೮.೩೩ರಷ್ಟು ಮಹಿಳೆಯರು ೨೦ರಿಂದ ೩೦ರ ವರೆಗಿನ ವಯೋಮಿತಿಯವರಾಗಿದ್ದಾರೆ. ಅದೇ ರೀತಿಯಾಗಿ ೩೧ರಿಂದ ೪೦ರ ವರೆಗಿನ ವಯೋಮಾನದವರು ಪ.ಜಾತಿಯ ಶೇ.೩೧.೬೭ರಷ್ಟು ಮತ್ತು ಪ.ಪಂಗಡದ ಶೇ.೩೫ರಷ್ಟು ಮಹಿಳೆಯರು ಇರುವುದು ಕಂಡುಬರುತ್ತದೆ. ಇನ್ನುಳಿದ ಪರಿಶಿಷ್ಟ ಮಹಿಳೆಯರು ೪೧ರಿಂದ ೫೦ ಹಾಗೂ ೫೧ರಿಂದ ೬೦ರ ವಯೋಮಾನದವರಾಗಿದ್ದಾರೆ. ಹಾಗೆಯೇ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೪೫ರಷ್ಟು ಮತ್ತು ಪ.ಪಂಗಡದ ಶೇ.೨೬.೬೭ರಷ್ಟು ಮಹಿಳೆಯರು ೩೧ರಿಂದ ೪೦ರ ವರೆಗಿನ ವಯೋಮಾನದವರಿದ್ದಾರೆ. ಅದೇರೀತಿ ೪೧ರಿಂದ ೫೦ರವರೆಗಿನ ವಯೋಮಾನದವರು ಪ.ಜಾತಿಯ ಶೇ.೨೬.೬೭ರಷ್ಟು ಪ.ಪಂಗಡದ ಶೇ.೩೦ರಷ್ಟು ಮಹಿಳೆಯರಿದ್ದಾರೆ. ಇನ್ನುಳಿದಂತೆ ೨೦ರಿಂದ ೩೦ ಮತ್ತು ೫೧ರಿಂದ ೬೦ರ ವರೆಗಿನ ವಯೋಮಾನದವರು ಇರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಪರಿಶಿಷ್ಟ ಮಹಿಳೆಯರು ೩೧ರಿಂದ ೪೦ರ ವರೆಗಿನ ವಯೋಮಾನದವರು ಹೆಚ್ಚಾಗಿರುವುದು ಕೋಷ್ಟಕವನ್ನು ಗಮನಿಸಿದರೆ ತಿಳಿಯುಬರುತ್ತದೆ. ಇದು ಸ್ತ್ರೀಶಕ್ತಿ ಗುಂಪುಗಳಲ್ಲಿನ ಸದಸ್ಯರುಗಳಿಗೆ ಸಂಬಂಧಿಸಿದ ವಯೋಮಾನದ ವಿವರಣೆಯಾದರೆ, ಇನ್ನು ಸ್ತ್ರೀಶಕ್ತಿ

ಗುಂಪಿಗೆ ಸೇರದ ಮಹಿಳೆಯರ ವಯೋಮಿತಿಯನ್ನು ಗುರುತಿಸಿಕೊಳ್ಳುವುದೂ ಕೂಡ ಅಗತ್ಯವಾಗಿದೆ. ಇದನ್ನು ಕೆಳಗಿನ ಕೋಷ್ಟಕದಲ್ಲಿ ಸೂಚಿಸಲಾಗಿದೆ.

ಕೋಷ್ಟಕ : ೨.೧ ಗುಂಪಿಗೆ ಸೇರದ ಮಹಿಳೆಯರ ವಯೋಮಿತಿ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್. ಟಿ	ಶೇ	ಒಟ್ಟು
೦೧	೨೦ರಿಂದ ೩೦	೧೪	೨೩.೩೩	೨೫	೪೧.೬೭	೩೯	೧೧	೧೮.೩೩	೧೫	೨೫	೨೬
೦೨	೩೧ರಿಂದ ೪೦	೧೭	೨೮.೩೩	೧೭	೨೮.೩೩	೩೪	೧೪	೨೩.೩೩	೧೯	೩೧.೬೭	೩೩
೦೩	೪೧ರಿಂದ ೫೦	೨೧	೩೫	೧೦	೧೬.೬೭	೩೧	೨೫	೪೧.೬೭	೧೬	೨೬.೬೬	೪೧
೦೪	೫೧ರಿಂದ ೬೦	೦೮	೧೩.೩೩	೦೮	೧೩.೩೩	೧೬	೧೦	೧೬.೬೭	೧೦	೧೬.೬೭	೨೦
		೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ಕೂಡ್ಲಿಗಿ ತಾಲೂಕಿನಲ್ಲಿ ನಾಲ್ಕು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ವಯೋಮಿತಿಯನ್ನು ಕೋಷ್ಟಕ ೨.೧ರಲ್ಲಿ ತೋರಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ೨೦ರಿಂದ ೩೦ರ ವರೆಗೆನ ವಯೋಮಿತಿಯವರು ಪರಿಶಿಷ್ಟ ಜಾತಿಯ ಶೇ.೨೩.೩೩ರಷ್ಟು ಮತ್ತು ಪರಿಶಿಷ್ಟ ಪಂಗಡದ ಪ.ಪಂಗಡದ ಶೇ.೪೧.೬೭ರಷ್ಟು ಮಹಿಳೆಯರು ಇರುವುದು ಕಂಡುಬಂದಿದೆ. ಹಾಗೆಯೇ ೩೧ರಿಂದ ೪೦ರ ವರೆಗಿನ ವಯೋಮಾನದವರು ಪ.ಜಾತಿಯ ಶೇ.೨೮.೩೩ರಷ್ಟು ಮತ್ತು ಪ.ಪಂಗಡದ ಶೇ.೨೮.೩೩ರಷ್ಟು ಮಹಿಳೆಯರಿದ್ದಾರೆ. ಇನ್ನುಳಿದ ೪೧ರಿಂದ ೫೦ ಹಾಗೂ ೫೧ರಿಂದ ೬೦ರ ವರೆಗಿನ ವಯೋಮಾನದವರಿದ್ದಾರೆ. ಒಟ್ಟಾರೆಯಾಗಿ ಹೊಸಪೇಟೆ ತಾಲೂಕಿನಲ್ಲಿ ೨೦ರಿಂದ ೩೦ರ ವರೆಗಿನ ವಯೋಮಾನದ ಪರಿಶಿಷ್ಟ ಮಹಿಳೆಯರು ಅಧಿಕ ಸಂಖ್ಯೆಯಲ್ಲಿರುವುದು ಕಂಡುಬರುತ್ತದೆ. ಅದೇ ರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ೩೧ರಿಂದ ೪೦ರ ವಯೋಮಾನದರ ಪ.ಜಾತಿಯ ಶೇ.೨೩.೩೩ರಷ್ಟು ಹಾಗೂ ಪ.ಪಂಗಡದ ಶೇ.೩೧.೬೭ರಷ್ಟು ಮಹಿಳೆಯರಿದ್ದಾರೆ. ಹಾಗೆಯೇ ೪೧ರಿಂದ ೫೦ರ ವರೆಗಿನ ವಯೋಮಿತಿಯವರು ಪ.ಜಾತಿಯ ಶೇ.೪೧.೬೭ರಷ್ಟು ಮತ್ತು ಪ.ಪಂಗಡದ ಶೇ.೨೬.೬೬ರಷ್ಟು ಮಹಿಳೆಯರು ಇರುವುದು ಕಂಡುಬಂದಿದೆ. ಇನ್ನುಳಿದಂತೆ ೨೦ರಿಂದ ೩೦ ಹಾಗೂ ೫೧ರಿಂದ ೬೦ರ ವರೆಗಿನ ವಯೋಮಾನದ ಪರಿಶಿಷ್ಟ ಮಹಿಳೆಯರು ಇರುವುದು ಈ ಮೇಲಿನ ಕೋಷ್ಟಕದಿಂದ ತಿಳಿದುಬರುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ೪೧ರಿಂದ ೫೧ರಿಂದ ವಯೋಮಾನದ ಪರಿಶಿಷ್ಟ ಮಹಿಳೆಯರು ಇರುವುದು ಕಂಡುಬರುತ್ತದೆ.

ಒಟ್ಟಾರೆಯಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ಆಯ್ದ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ಮಹಿಳೆಯರಿಗೆ ಹಾಗೂ ಸೇರದ ಪರಿಶಿಷ್ಟ ಮಹಿಳೆಯರ ವಯೋಮಿತಿಯನ್ನು

ಹೋಲಿಕೆ ಮಾಡಿ ನೋಡುವುದಾದರೆ ಹೊಸಪೇಟೆ ತಾಲೂಕಿನಲ್ಲಿ ಗುಂಪಿಗೆ ಸೇರಿದ ಪರಿಶಿಷ್ಟ ಜಾತಿ ಮಹಿಳೆಯರು ೨೦ರಿಂದ ೩೦ ಮತ್ತು ೩೧ರಿಂದ ೪೦ರ ವರೆಗಿನ ವಯೋಮಾನದವರು ಶೇ.೩೩.೩೩ರಷ್ಟು ಹಾಗೂ ಪರಿಶಿಷ್ಟ ಪಂಗಡದ ಮಹಿಳೆಯರು ೩೧ರಿಂದ ೪೦ ಹಾಗೂ ೪೧ರಿಂದ ೫೦ರ ವರೆಗಿನ ವಯೋಮಿತಿಯವರು ಶೇ.೩೩ರಷ್ಟು ಇರುವುದು ಕಂಡುಬರುತ್ತದೆ. ಅಂದರೆ ಸ್ತ್ರೀಶಕ್ತಿ ಗುಂಪುಗಳಲ್ಲಿ ಪ.ಜಾತಿಯ ಮಹಿಳೆಯರು ೨೦ರಿಂದ ೪೦ರ ಒಳಗಿನ ವಯೋಮಾನದವರು ಹಾಗೂ ಪ.ಪಂಗಡದ ಮಹಿಳೆಯರು ೩೧ರಿಂದ ೫೦ರ ಒಳಗಿನ ವಯೋಮಿತಿಯವರು ಅಧಿಕ ಸಂಖ್ಯೆಯಲ್ಲಿದ್ದಾರೆ. ಹೊಸಪೇಟೆ ತಾಲೂಕಿನಲ್ಲಿ ಗುಂಪಿಗೆ ಸೇರದ ಪ.ಜಾತಿಯ ಮಹಿಳೆಯರು ೪೧ರಿಂದ ೫೦ರ ಒಳಗಿನ ಮಹಿಳೆಯರು ಶೇ.೩೫(೨೧)ರಷ್ಟು ಹಾಗೂ ಪ.ಪಂಗಡದ ಮಹಿಳೆಯರು ೨೦ರಿಂದ ೩೦ರ ಒಳಗಿನ (ಶೇ.೪೧.೬೭(೨೫)ರಷ್ಟು) ವಯೋಮಿತಿಯವರು ಅಧಿಕ ಸಂಖೆಯಲ್ಲಿದ್ದಾರೆ. ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ಗುಂಪಿಗೆ ಸೇರಿದ ಪ.ಜಾತಿ ಮಹಿಳೆಯರು ೩೧ರಿಂದ ೪೦ರ ಒಳಗಿನ ವಯೋಮಾನದವರು(ಶೇ.೪೫ರಷ್ಟು) ಹಾಗೂ ಪ.ಪಂಗಡದ ಮಹಿಳೆಯರು ೪೧ರಿಂದ ೫೦ರ ಒಳಗಿನ ವಯೋಮಿತಿಯವರು(ಶೇ.೩೦ರಷ್ಟು) ಅಧಿಕ ಸಂಖ್ಯೆಯಲ್ಲಿದ್ದಾರೆ. ಗುಂಪಿಗೆ ಸೇರದ ಪ.ಜಾತಿ ಮಹಿಳೆಯರು ೪೧ರಿಂದ ೫೦(ಶೇ.೨೪.೬೭ರಷ್ಟು)ರ ಒಳಗಿನ ಹಾಗೂ ಪ.ಪಂಗಡದ ಮಹಿಳೆಯರು ೩೧ರಿಂದ ೪೦(ಶೇ.೩೧.೬೭ರಷ್ಟು)ರ ಒಳಗಿನ ವಯೋಮಾನದವರು ಬಹುತೇಕ ಸಂಖ್ಯೆಯಲ್ಲಿರುವುದು ಈ ಮೇಲಿನ ಕೋಷ್ಟಕಗಳಿಂದ ತಿಳಿದುಬರುತ್ತದೆ.

ಕೋಷ್ಟಕ : ೩ ಗುಂಪಿಗೆ ಸೇರಿದ ಮಹಿಳೆಯರ ವೈವಾಹಿಕ ಸಂಬಂಧ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್ .ಟಿ	ಶೇ	ಒಟ್ಟು
೦೧	ವಿವಾಹಿತೆ	೩೪	೫೬.೬೭	೩೯	೬೫	೭೩	೩೭	೬೧.೬೬	೪೦	೬೬.೬೭	೭೭
೦೨	ಅವಿವಾಹಿತೆ	೦೫	೮.೩೩	೦೨	೩.೩೩	೦೭	೦೬	೧೦	೦೫	೮.೩೩	೧೧
೦೩	ವಿವಾಹವಿಚ್ಛೇದನ	–	–	–	–	–	–	–	–	–	–
೦೪	ದೇವದಾಸಿ	೦೬	೧೦	೦೨	೩.೩೩	೦೮	೦೭	೧೧.೬೭	೦೫	೮.೩೩	೧೨
೦೫	ವಿಧವೆ	೧೫	೨೫	೧೭	೨೮.೩೩	೩೨	೧೦	೧೬.೬೭	೧೦	೧೬.೬೭	೨೦
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕ ೩ರಲ್ಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳಾ ಸದಸ್ಯರ ವೈವಾಹಿಕ ಸಂಬಂಧವನ್ನು ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೫೬.೬೭ರಷ್ಟು ಹಾಗೂ ಪ.ಪಂಗಡದ ಶೇ.೬೫ರಷ್ಟು ಮಹಿಳೆಯರು ವಿವಾಹಿತರಾಗಿದ್ದಾರೆ. ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ

ಶೇ.೬೬.೬೭ರಷ್ಟು ಮತ್ತು ಪ.ಪಂಗಡದ ಶೇ.೬೬.೬೭ರಷ್ಟು ಮಹಿಳೆಯರು ವಿವಾಹಿತರಾಗಿರುವುದು ಕಂಡುಬರುತ್ತದೆ. ಹಾಗೆಯೇ ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೨೫ರಷ್ಟು ಹಾಗೂ ಪ.ಪಂಗಡದ ಶೇ.೨೮.೩೩ರಷ್ಟು ಮಹಿಳೆಯರು ಅದರಂತೆ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೧೬.೬೭ರಷ್ಟು ಮತ್ತು ಪ.ಪಂಗಡದ ಶೇ.೧೬.೬೭ರಷ್ಟು ಮಹಿಳೆಯರು ವಿಧವೆಯರಾಗಿದ್ದಾರೆ. ಇನ್ನುಳಿದಂತೆ ಅವಿವಾಹಿತೆ, ದೇವದಾಸಿಯವರು ಇರುವುದು ತಿಳಿದುಬಂದಿದೆ. ಒಟ್ಟಾರೆಯಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲುಕುಗಳ ನಾಲ್ಕು ಪಂಚಾಯತಿಗಳಲ್ಲಿ ವಿವಾಹಿತ ಪರಿಶಿಷ್ಟ ಮಹಿಳೆಯರು ಅಧಿಕ ಸಂಖ್ಯೆಯಲ್ಲಿರುವುದು ಕೋಷ್ಟಕದಿಂದ ತಿಳಿಯಬಹುದು.

ಕೋಷ್ಟಕ : ೩.೧ ಗುಂಪಿಗೆ ಸೇರದ ಮಹಿಳೆಯರ ವೈವಾಹಿಕ ಸಂಬಂಧ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ವಿವಾಹಿತೆ	೩೮	೬೩.೩೩	೪೨	೭೦	೮೦	೪೪	೭೩.೩೩	೪೦	೬೬.೬೭	೮೪
೦೨	ಅವಿವಾಹಿತೆ	೦೫	೮.೩೩	೦೨	೩.೩೩	೦೭	೦೬	೧೦	೦೮	೧೩.೩೩	೧೪
೦೩	ವಿವಾಹವಿಚ್ಛೇದನ	–	–	–	–	–	–	–	–	–	–
೦೪	ದೇವದಾಸಿ	೦೫	೮.೩೩	೦೪	೬.೬೭	೦೯	೦೭	೧೧.೬೭	೦೨	೩.೩೩	೦೯
೦೫	ವಿಧವೆ	೧೨	೨೦	೧೨	೨೦	೨೪	೦೩	೦೫	೧೦	೧೬.೬೭	೧೩
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ಮತ್ತು ಕೂಡ್ಲಿಗಿ ತಾಲುಕುಗಳಲ್ಲಿರುವ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ವೈವಾಹಿಕ ಸಂಬಂಧವನ್ನು ವಿಶ್ಲೇಷಿಸಲಾಗಿದೆ. ಹೊಸಪೇಟೆ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ.ಜಾತಿಯ ಶೇ.೬೩.೩೩ರಷ್ಟು ಹಾಗೂ ಪ.ಪಂಗಡದ ಶೇ.೭೦ರಷ್ಟು ಮಹಿಳೆಯರು ವಿವಾಹಿತರಾಗಿದ್ದಾರೆ. ಇದೇರೀತಿಯಾಗಿ ಪ.ಜಾತಿಯ ಶೇ.೨೦ರಷ್ಟು ಮತ್ತು ಪ.ಪಂಗಡದ ಶೇ.೨೦ರಷ್ಟು ಮಹಿಳೆಯರು ವಿಧವೆಯರಾಗಿದ್ದಾರೆ. ಇನ್ನುಳಿದಂತೆ ಅವಿವಾಹಿತೆ ಮತ್ತು ದೇವದಾಸಿ ಮಹಿಳೆಯರಿದ್ದಾರೆ. ಹಾಗೆಯೇ ಕೂಡ್ಲಿಗಿ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ.ಜಾತಿಯ ಶೇ.೭೩.೩೩ರಷ್ಟು ಹಾಗೂ ಪ.ಪಂಗಡದ ಶೇ.೬೬.೬೭ರಷ್ಟು ಮಹಿಳೆಯರು ವಿವಾಹಿತರಾಗಿದ್ದಾರೆ. ಅದೇ ರೀತಿಯಾಗಿ ಪ.ಜಾತಿಯ ಶೇ.೧೦ರಷ್ಟು ಮತ್ತು ಪ.ಪಂಗಡದ ಶೇ.೧೩.೩೩ರಷ್ಟು ಮಹಿಳೆಯರು ಅವಿವಾಹಿತೆಯರು ಇದ್ದಾರೆ. ಇನ್ನುಳಿದಂತೆ ದೇವದಾಸಿ ಮತ್ತು ವಿಧವೆಯರು ಇದ್ದಾರೆ. ಒಟ್ಟಾರೆಯಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ವಿವಾಹಿತೆ, ಅವಿವಾಹಿತೆ ಹಾಗೂ ವಿಧವೆಯ ಪರಿಶಿಷ್ಟ ಮಹಿಳೆಯರು ಅಧಿಕ ಸಂಖ್ಯೆಯಲ್ಲಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬಂದಿದೆ.

ಭಾರತೀಯ ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ವಿವಾಹಕ್ಕೆ ತುಂಬಾ ಮಹತ್ವವನ್ನು ಕೊಡಲಾಗಿದೆ. ಮುಖ್ಯವಾಗಿ ವಿವಾಹ ಎಂಬುದು ಜೀವನದ ಮಹತ್ವದ ಘಟ್ಟವಾಗಿ ಮಾರ್ಪಟ್ಟಿದೆ. ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿನ ನಾಲ್ಕು ಗ್ರಾಮ ಪಂಚಾಯತಿಗಳಲ್ಲಿನ ಸ್ತ್ರೀಶಕ್ತಿ ಗುಂಪುಗಳಲ್ಲಿ ಸದಸ್ಯರಾಗಿರುವವರನ್ನು ಅವಲೋಕಿಸಿದಾಗ, ಇವರಲ್ಲಿ ವಿವಾಹಕ್ಕೆ ಒಳಗಾದವರು, ಅವಿವಾಹಿತರು, ವಿಚ್ಛೇದಿತರು, ದೇವದಾಸಿ ಮಹಿಳೆಯರು ಮತ್ತು ವಿಧವೆಯರೂ ಸಹ ಇರುವುದನ್ನು ಕಾಣಬಹುದಾಗಿದೆ. ಮುಖ್ಯವಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ಆಯ್ದ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಅಧ್ಯಯನಕ್ಕೆ ಒಳಪಟ್ಟ(ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ ಶೇ.೫೬.೬೭ರಷ್ಟು, ಎಸ್.ಟಿ ಶೇ.೬೫ರಷ್ಟು ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ ಶೇ.೬೧.೬೬, ಎಸ್.ಟಿ ಶೇ.೬೬.೬೭ರಷ್ಟು) ಗುಂಪಿಗೆ ಸೇರಿದ ಮತ್ತು ಗುಂಪಿಗೆ ಸೇರದ (ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ ಶೇ.೬೩.೩೩ರಷ್ಟು, ಎಸ್.ಟಿ ಶೇ.೭೦ರಷ್ಟು ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ ಶೇ.೭೨.೩೩, ಎಸ್.ಟಿ ಶೇ.೬೬.೬೭ರಷ್ಟು) ಪರಿಶಿಷ್ಟ ಮಹಿಳೆಯರ ವಿವಾಹಿತರ ಸಂಖ್ಯೆ ಅಧಿಕವಾಗಿರುವುದನ್ನು ಈ ಮೇಲಿನ ಎರಡು ಕೋಷ್ಟಕಗಳಲ್ಲಿ ನೋಡಬಹುದು. ಈ ಎರಡು ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ವಿವಾಹ ವಿಚ್ಛೇದನವನ್ನು ಪಡೆದಿರುವುದು ಕಂಡುಬಂದಿಲ್ಲ.

ಮೇಲಿನ ಎರಡೂ ಕೋಷ್ಟಕಗಳಲ್ಲಿ ಸೂಚಿಸಿರುವಂತೆ ದೇವದಾಸಿ ಮಹಿಳೆಯರು ಸಮಾಜದಿಂದ ಅಂಚಿಗೆ ತಳ್ಳಲ್ಪಟ್ಟಿದ್ದರೂ ಸಹ ಅವರು ತಮ್ಮ ಆರ್ಥಿಕತೆಯನ್ನು ಹೆಚ್ಚಿಸಿಕೊಂಡು ಸ್ವಾವಲಂಬಿ ಜೀವನವನ್ನು ನಡೆಸುವ ಉದ್ದೇಶದಿಂದಾಗಿ ಸ್ತ್ರೀಶಕ್ತಿ ಗುಂಪುಗಳಲ್ಲಿ ಸದಸ್ಯರಾಗಿ ಸೇರಿಕೊಂಡಿದ್ದಾರೆ. ಸ್ತ್ರೀಶಕ್ತಿ ಗುಂಪಿಗೆ ಸೇರದೆ ಇರುವ ದೇವದಾಸಿ ಮಹಿಳೆಯರು ಆರ್ಥಿಕವಾಗಿ ಅಷ್ಟೇನೂ ಮುಂದುವರೆಯದಿರುವುದು ಕಂಡುಬಂದಿದೆ. ಅಂದರೆ ಇವರು ಗುಂಪುಗಳಿಂದ ಹೊರಗುಳಿಯುವುದರಿಂದ ಯಾವುದೇ ರೀತಿಯ ಉಳಿತಾಯವನ್ನು ಮಾಡಿರುವುದಿಲ್ಲ. ಆದುದರಿಂದ ದೇವದಾಸಿ ಮಹಿಳೆಯರು ಆರ್ಥಿಕ ಮಟ್ಟ ಸುಧಾರಿಸದಿರುವುದು ಕಂಡುಬಂದಿದೆ. ಮುಂದುವರೆದಂತೆ ಅವಿವಾಹಿತರು ಎಂದರೆ ೨೦ ವರ್ಷ ವಯಸ್ಸನ್ನು ಮೀರಿದ ಮಹಿಳೆಯರಾಗಿದ್ದಾರೆ. ಇವರ ಸಂಖ್ಯೆ ತುಂಬಾ ಕಡಿಮೆ ಇದೆ. ಅದೇ ರೀತಿಯಲ್ಲಿ(ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ ಶೇ.೨೫ರಷ್ಟು, ಎಸ್.ಟಿ ಶೇ.೨೮.೩೩ರಷ್ಟು ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ ಶೇ.೧೬.೬೭. ಎಸ್.ಟಿ ಶೇ.೧೬.೬೭ರಷ್ಟು) ಗುಂಪಿಗೆ ಸೇರಿದ ಮತ್ತು (ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ ಶೇ.೨೦ರಷ್ಟು, ಎಸ್.ಟಿ ಶೇ.೨೦ರಷ್ಟು ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ ಶೇ.೫, ಎಸ್.ಟಿ ಶೇ.೧೬.೬೭ರಷ್ಟು) ಗುಂಪಿಗೆ ಸೇರದ ಮಹಿಳೆಯರಲ್ಲಿ ವಿಧವೆಯರೂ ಸಹ ಕಂಡುಬಂದಿದ್ದು, ಇವರೂ ಕೂಡಾ ಸಮಾಜದಲ್ಲಿ ತಮ್ಮನ್ನು ತಾವು ನಿರೂಪಿಸಿಕೊಳ್ಳಲು ಮುಂದುವರೆದಿದ್ದಾರೆ. ಏಕೆಂದರೆ ಭಾರತೀಯ

ಸಂಪ್ರದಾಯದಲ್ಲಿ ವಿಧವೆಯರನ್ನು ನೋಡುವ ದೃಷ್ಟಿಕೋನ ತುಂಬಾ ಭಯಾನಕವಾದುದು. ಅದರ ನಡುವೆಯೇ ಅವರು ತಮ್ಮ ಬದುಕನ್ನು ಕಟ್ಟಿಕೊಳ್ಳುವ ಬಗೆ ಸಾಂಪ್ರದಾಯಿಕ ವ್ಯವಸ್ಥೆಯ ಮೌಲ್ಯಗಳನ್ನು ಒಡೆದು ಹಾಕುವ ನೆಲೆಯಲ್ಲಿರುವುದನ್ನು ಕಾಣಬಹುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ದೇವದಾಸಿಯರು, ವಿಧವೆಯರು ಇರುವ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಹಂತದಲ್ಲಿ ಗುರುತಿಸಲ್ಪಡುವಂತಹ ಸಮುದಾಯವೆಂದು ಗುರುತಿಸಲಾಗಿದೆ. ಇವರು ವ್ಯವಸ್ಥೆಯಲ್ಲಿ ಪುರುಷನ ಅಭಿಲಾಷೆಗಳಿಗೆ ತಕ್ಕಂತೆ ಜೀವಿಸುವುದು. ಯಾವುದೇ ಸಭೆ ಸಮಾರಂಭಗಳಿಗೆ ಅವರ ಪ್ರವೇಶ ನಿಷಿದ್ಧ ಎಂಬ ಮೌಲ್ಯಗಳು ಈ ಮಹಿಳೆಯರನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಕುಗ್ಗಿಹೋಗುವಂತೆ ಮಾಡಿವೆ. ಆದರೆ ಸ್ತ್ರೀಶಕ್ತಿ ಗುಂಪುಗಳಲ್ಲಿ ಇವರುಗಳು ಸದಸ್ಯರಾಗುವುದರ ಮೂಲಕ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಆದರೆ ಸ್ತ್ರೀಶಕ್ತಿ ಗುಂಪುಗಳಿಗೆ ಸೇರದೆ ಇರುವ ಮಹಿಳೆಯರಲ್ಲಿ ಆತ್ಮ ವಿಶ್ವಾಸ ಕಡಿಮೆ ಇರುವುದನ್ನು ಗುರುತಿಸಲಾಗಿದೆ. ಒಟ್ಟಾರೆಯಾಗಿ ಸ್ತ್ರೀಶಕ್ತಿ ಗುಂಪುಗಳಲ್ಲಿ ವಿವಾಹಿತೆಯರು, ಅವಿವಾಹಿತೆಯರು, ವಿಧವೆಯರು, ದೇವದಾಸಿಯರು ಇರುವುದನ್ನು ಕಾಣಬಹುದಾಗಿದೆ. ಈ ಬಗೆಯ ಒಳಗೊಳ್ಳುವಿಕೆ ಅಭಿವೃದ್ಧಿಗೆ ಧನಾತ್ಮಕವಾದ ಅಂಶಗಳನ್ನು ಒದಗಿಸಿಕೊಡುತ್ತದೆ.

ಕೋಷ್ಟಕ : ೪ ಗುಂಪಿಗೆ ಸೇರಿದ ಮಹಿಳೆಯರ ಕುಟುಂಬದ ವಿಧ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ವಿಭಕ್ತ ಕುಟುಂಬ	೫೮	೯೬.೬೭	೫೭	೯೫	೧೧೫	೫೭	೯೫	೫೫	೯೧.೬೭	೧೧೨
೦೨	ಅವಿಭಕ್ತ ಕುಟುಂಬ	೦೨	೩.೩೩	೦೩	೦೫	೦೫	೦೩	೦೫	೦೫	೮.೩೩	೦೮
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಸಂದರ್ಶನ ಮಾಡಿದ ಗುಂಪಿನ ಪರಿಶಿಷ್ಟ ಮಹಿಳಾ ಸದಸ್ಯರು ಯಾವ ವಿಧವಾದ ಕುಟುಂಬವನ್ನು ಹೊಂದಿದ್ದಾರೆ ಎಂಬುದನ್ನು ಕೋಷ್ಟಕ ೪ರಲ್ಲಿ ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೯೬.೬೭ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೯೫ರಷ್ಟು ಮಹಿಳೆಯರು ಹಾಗೆಯೇ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೯೫ರಷ್ಟು ಮತ್ತು ಪ.ಪಂಗಡದ ಶೇ.೯೧.೬೭ರಷ್ಟು ಮಹಿಳೆಯರು ವಿಭಕ್ತ ಕುಟುಂಬವನ್ನು ಹೊಂದಿದ್ದಾರೆ. ಅದೇ ರೀತಿಯಾಗಿ ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೩.೩೩ರಷ್ಟು ಹಾಗೂ ಪ.ಪಂಗಡದ ಶೇ.೫ರಷ್ಟು ಮಹಿಳೆಯರು ಹಾಗೆಯೇ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ

ಶೇ.೫ರಷ್ಟು ಮತ್ತು ಪ.ಪಂಗಡದ ಶೇ.೮.೩೩ರಷ್ಟು ಮಹಿಳೆಯರು ಅವಿಭಕ್ತ ಕುಟುಂಬವನ್ನು ಹೊಂದಿರುವುದು ತಿಳಿದುಬರುತ್ತದೆ.

ಕೋಷ್ಟಕ : ೪.೧ ಗುಂಪಿಗೆ ಸೇರದ ಮಹಿಳೆಯರ ಕುಟುಂಬದ ವಿಧ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್ .ಟಿ	ಶೇ	ಒಟ್ಟು
೦೧	ವಿಭಕ್ತ ಕುಟುಂಬ	೫೬	೩೯.೩೩	೫೬	೯೩.೩೩	೧೧೨	೫೬	೯೩.೩೩	೫೮	೯೬.೬೭	೧೧೪
೦೨	ಅವಿಭಕ್ತ ಕುಟುಂಬ	೦೪	೬.೬೭	೦೪	೬.೬೭	೦೮	೦೪	೬.೬೭	೦೨	೩.೩೩	೦೬
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕದಲ್ಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಕುಟುಂಬದ ವಿಧವನ್ನು ತಿಳಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಎರಡು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ.ಜಾತಿಯ ಶೇ.೯೩.೩೩ರಷ್ಟು ಹಾಗೂ ಪ.ಪಂಗಡದ ಶೇ.೯೩.೩೩ರಷ್ಟು ಮಹಿಳೆಯರು ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ.ಜಾತಿಯ ಶೇ.೯೩.೩೩ರಷ್ಟು ಹಾಗೂ ಪ.ಪಂಗಡದ ಶೇ.೯೬.೬೭ರಷ್ಟು ಮಹಿಳೆಯರು ವಿಭಕ್ತ ಕುಟುಂಬವನ್ನು ಹೊಂದಿರುವುದು ಕಂಡುಬರುತ್ತದೆ. ಹಾಗೆಯೇ ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೬.೬೭ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೬.೬೭ರಷ್ಟು ಮಹಿಳೆಯರು ಅವಿಭಕ್ತ ಕುಟುಂಬವನ್ನು ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೬.೬೭ರಷ್ಟು ಹಾಗೂ ಪ.ಪಂಗಡದ ಶೇ.೩.೩೩ರಷ್ಟು ಮಹಿಳೆಯರು ಅವಿಭಕ್ತ ಕುಟುಂಬವನ್ನು ಹೊಂದಿದ್ದಾರೆ.

ಕುಟುಂಬವೆಂಬುದು ಸಮಾಜದ ಅತ್ಯಂತ ಚಿಕ್ಕ ಘಟಕವೆಂದು ಈಗಾಗಲೇ ಗುರುತಿಸಲ್ಪಟ್ಟಿದೆ. ವ್ಯವಸ್ಥೆಯಲ್ಲಿ ಯಾವುದೇ ವಿಷಯ ಆರಂಭವಾಗಬೇಕಾದರೂ, ಅದು ಕುಟುಂಬದ ಹಂತದಿಂದಲೇ ಆರಂಭವಾಗುತ್ತವೆ. ಮುಖ್ಯವಾಗಿ ಕುಟುಂಬದಲ್ಲಿ ಎರಡು ವಿಧಗಳಿರುವುದನ್ನು ಗುರುತಿಸಬಹುದು. ಮೊದಲನೆಯದು ಅವಿಭಕ್ತ ಕುಟುಂಬವಾದರೆ, ಎರಡನೆಯದು ವಿಭಕ್ತ ಕುಟುಂಬವಾಗಿದೆ. ೨೧ನೇಯ ಶತಮಾನದಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ನೋಡಲು ಅಸಾಧ್ಯ. ಆದರೂ ಕೆಲವು ಸಮುದಾಯಗಳಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ನೋಡಬಹುದಾಗಿದೆ. ಮುಖ್ಯವಾಗಿ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಒಟ್ಟು ನಾಲ್ಕು ಗ್ರಾಮ ಪಂಚಾಯತಿಗಳಲ್ಲಿ ಕ್ಷೇತ್ರಾಧ್ಯಯನ ಮಾಡಿದ ಸಂದರ್ಭದಲ್ಲಿ ಸ್ತ್ರೀಶಕ್ತಿ ಗುಂಪುಗಳಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳಾ ಸದಸ್ಯರಲ್ಲಿ ಒಟ್ಟು ೧೩ ಕುಟುಂಬಗಳು ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ಹೊಂದಿರುವುದು ಕಂಡುಬರುತ್ತಿದೆ. ಹಾಗೆಯೇ ಗುಂಪಿಗೆ ಸೇರದ ಮಹಿಳಾ

ಕುಟುಂಬಗಳಲ್ಲಿಯೂ ಸಹ ೧೪ ಕುಟುಂಬಗಳು ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ಹೊಂದಿರುವುದನ್ನು ಕೋಷ್ಟಕದಿಂದ ಗುರುತಿಸಬಹುದು. ಆದರೆ ವಾಸ್ತವದಲ್ಲಿ ಕೆಲವು ಕುಟುಂಬಗಳನ್ನು ಹೊರತುಪಡಿಸಿ ಮಿಕ್ಕೆಲ್ಲಾ ಕುಟುಂಬಗಳು ವಿಭಕ್ತ ಕುಟುಂಬಗಳಾಗಿವೆ. ಈ ಕುಟುಂಬಗಳಲ್ಲಿ ಒಂದೇ ತಲೆಮಾರಿನ ಜನರು ವಾಸವಿರುವುದನ್ನು ಕಾಣಬಹುದು. ಮುಖ್ಯವಾಗಿ ವ್ಯವಸ್ಥೆಯಲ್ಲಿ ಏಕವ್ಯಕ್ತಿ ಕುಟುಂಬಗಳು ಸಹ ಇರುವುದು ಕಂಡುಬರುತ್ತದೆ. ಇದರ ವ್ಯಾಪ್ತಿಗೆ ದೇವದಾಸಿ ಮಹಿಳೆ, ವಿಧವೆಯರು ಮುಂತಾದವರು ಒಳಗೊಳ್ಳುತ್ತಾರೆ. ಒಟ್ಟಾರೆಯಾಗಿ ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳು ಕ್ಷೇತ್ರ ವ್ಯಾಪ್ತಿಯಲ್ಲಿ ಇರುವುದು ಕಂಡುಬಂದಿದೆ.

ಗುಂಪಿಗೆ ಸೇರಿದ ಮಹಿಳೆಯರ ಸಾಮಾಜಿಕ ಸ್ಥಾನಮಾನ

ಕೊಷ್ಟಕ : ೫ ಸಾಮಾಜಿಕ ಸ್ಥಾನಮಾನ (ಮನೆ)

ಕ್ರಸಂ	ಸೂಚಕಗಳು			ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
				ಹೌದು		ಇಲ್ಲ			ಹೌದು			ಇಲ್ಲ	
				ಸಂಖ್ಯೆ	ಶೇ	ಸಂಖ್ಯೆ	ಶೇ	ಒಟ್ಟು	ಸಂಖ್ಯೆ	ಶೇ	ಸಂಖ್ಯೆ	ಶೇ	ಒಟ್ಟು
೦೧	ಮೇಲ್ಜಾತಿ ಕುಟುಂಬ ದೊಳಗೆ ಪ್ರವೇಶ		ಎಸ್.ಸಿ.	–	–	೬೦	೧೦೦	೬೦	–	–	೬೦	೧೦೦	೬೦
			ಎಸ್.ಟಿ	೫೦	೮೩.೩೩	೧೦	೧೬.೬೭	೬೦	೫೨	೮೬.೬೭	೦೮	೧೩.೩೩	೬೦
೦೨	ಮೇಲ್ಜಾತಿಯವರು ಸಂಬೋಧಿಸುವ ಬಗ್ಗೆ	ಎಸ್.ಸಿ	ಏಕವಚನ	೪೦	೬೬.೬೭	–	–	೪೦	೪೫	೭೫	–	–	೪೫
			ಬಹುವಚನ	೨೦	೩೩.೩೩	–	–	೨೦	೧೫	೨೫	–	–	೧೫
		ಎಸ್.ಟಿ	ಏಕವಚನ	೧೮	೩೦	–	–	೧೮	೧೦	೧೬.೬೭	–	–	೧೦
			ಬಹುವಚನ	೪೨	೭೦	–	–	೪೨	೫೦	೮೩.೩೩	–	–	೧೦
೦೩	ದೇವಸ್ಥಾನಗಳಿಗೆ ಪ್ರವೇಶ		ಎಸ್.ಸಿ	–	–	೬೦	೧೦೦	೬೦	–	–	೬೦	೧೦೦	೬೦
			ಎಸ್.ಟಿ	೬೦	೧೦೦	–	–	೬೦	೬೦	೧೦೦	–	–	೬೦
೦೪	ಸಾರ್ವಜನಿಕ ಬಾವಿ ಅಥವಾ ಕೊಳವೆ ಬಿಂದ ನೀರು ತರುವ ಅವಕಾಶ		ಎಸ್.ಟಿ	೩೨	೫೩.೩೩	೨೮	೪೬.೬೭	೬೦	೧೮	೩೦	೪೨	೭೦	೬೦
			ಎಸ್.ಸಿ	೬೦	೧೦೦	–	–	೬೦	೬೦	೧೦೦	–	–	೬೦
೦೫	ಬಟ್ಟೆಗಳನ್ನು ಮಡಿವಾಳರು ಒಗೆಯುವುದು		ಎಸ್.ಟಿ	೦೫	೮.೩೩	೫೫	೯೧.೬೭	೬೦	೦೪	೬.೬೭	೫೬	೯೩.೩೩	೬೦
			ಎಸ್.ಸಿ	೬೦	೧೦೦	–	–	೬೦	೬೦	೧೦೦	–	–	೬೦

ಮೂಲ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕ ೫ರಲ್ಲಿ ಹೊಸಪೇಟೆ ತಾಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಹಾಗೂ ಕೂಡ್ಲಿಗಿ ತಾಲೂಕಿನ ಚಿರತಗುಂಡು ಮತ್ತು ರಾಂಪುರ ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರ ಸಾಮಾಜಿಕ ಸ್ಥಾನಮಾನವನ್ನು ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೧೦೦ರಷ್ಟು ಮಹಿಳೆಯರು ಮೇಲ್ಜಾತಿ (ಬ್ರಾಹ್ಮಣ, ಲಿಂಗಾಯತ ಮತ್ತು ಒಕ್ಕಲಿಗ)ಯ ಮನೆಯೊಳಗೆ ಪ್ರವೇಶವಿಲ್ಲ ಎಂದು ತಿಳಿಸಿದ್ದಾರೆ. ಪ.ಪಂಗಡದ ಶೇ.೮೩ರಷ್ಟು ಮಹಿಳೆಯರು

ಪ್ರವೇಶವಿದೆ. ಎಂದು ಹಾಗೂ ಶೇ.೧೬.೬೭ರಷ್ಟು ಮಹಿಳೆಯರು ಪ್ರವೇಶವಿಲ್ಲ ಎಂದಿದ್ದಾರೆ. ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೧೦೦ರಷ್ಟು ಮಹಿಳೆಯರು ಮೇಲ್ಜಾತಿಯವರ ಮನೆಯೊಳಗೆ ಪ್ರವೇಶವಿಲ್ಲ ಎಂದಿದ್ದಾರೆ ಪ.ಪಂಗಡದ ಶೇ.೮೬.೬೭ರಷ್ಟು ಮಹಿಳೆಯರು ಪ್ರವೇಶವಿದೆ ಎಂದು, ಶೇ.೧೩.೩೩ರಷ್ಟು ಮಹಿಳೆಯರು ಪ್ರವೇಶವಿಲ್ಲ ಎಂದು ತಿಳಿಸಿದ್ದಾರೆ.

ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೬೬.೬೭ರಷ್ಟು ಮಹಿಳೆಯರನ್ನು ಮೇಲ್ಜಾತಿಯವರು ಏಕವಚನದಿಂದ, ಶೇ.೩೩.೩೩ರಷ್ಟು ಮಹಿಳೆಯರನ್ನು ಬಹುವಚನದಿಂದ ಸಂಬೋಧಿಸುತ್ತಾರೆ. ಹಾಗೆಯೇ ಪ.ಪಂಗಡದ ಶೇ.೩೦ರಷ್ಟು ಮಹಿಳೆಯರನ್ನು ಏಕವಚನದಿಂದ, ಶೇ.೭೦ರಷ್ಟು ಮಹಿಳೆಯರನ್ನು ಬಹುವಚನದಿಂದ ಸಂಬೋಧಿಸುತ್ತಾರೆ. ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೭೫ರಷ್ಟು ಮಹಿಳೆಯರನ್ನು ಏಕವಚನದಿಂದ ಶೇ.೨೫ರಷ್ಟು ಮಹಿಳೆಯರನ್ನು ಬಹುವಚನದಿಂದ ಸಂಬೋಧಿಸುತ್ತಾರೆ ಎಂದು ತಿಳಿಸಿದ್ದಾರೆ. ಪ.ಪಂಗಡದ ಶೇ.೧೬.೬೭ರಷ್ಟು ಮಹಿಳೆಯರು ಏಕವಚನದಿಂದ, ಶೇ.೮೩.೩೩ರಷ್ಟು ಮಹಿಳೆಯರು ಬಹುವಚನದಿಂದ ನಮ್ಮನ್ನು ಸಂಬೋಧಿಸಲ್ಪಡುತ್ತಿದ್ದಾರೆಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ.

ಹೊಸಪೇಟೆ ತಾಲೂಕು ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ.ಜಾತಿಯ ಶೇ.೧೦೦ರಷ್ಟು ಮಹಿಳೆಯರು ನಮಗೆ ದೇವಸ್ಥಾನದ ಒಳಗೆ ಪ್ರವೇಶವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಿಪಡಿಸಿದ್ದಾರೆ. ಈ ಎರಡು ತಾಲೂಕುಗಳಲ್ಲಿ ಪ.ಪಂಗಡದ ಶೇ.೧೦೦ರಷ್ಟು ಮಹಿಳೆಯರು ನಮಗೆ ದೇವಸ್ಥಾನದ ಒಳಗೆ ಪ್ರವೇಶವಿದೆ ಎಂದು ತಿಳಿಸಿದ್ದಾರೆ.

ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೫೩.೩೩ರಷ್ಟು ಮಹಿಳೆಯರು ಸಾರ್ವಜನಿಕ ಬಾವಿ ಅಥವಾ ಕೊಳವೆಯಿಂದ ನೀರು ತರಲು ಅವಕಾಶವಿದೆ ಎಂದು, ಶೇ.೪೬ರಷ್ಟು ಮಹಿಳೆಯರು ಅವಕಾಶವಿಲ್ಲ ಎಂದಿದ್ದಾರೆ. ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೩೦ರಷ್ಟು ಮಹಿಳೆಯರು ಅವಕಾಶವಿದೆ ಎಂದು, ಶೇ.೭೦ರಷ್ಟು ಮಹಿಳೆಯರು ಅವಕಾಶವಿಲ್ಲ ಎಂದು ತಿಳಿಸಿದ್ದಾರೆ. ಹಾಗೆಯೇ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಪ.ಪಂಗಡದ ಶೇ.೧೦೦ರಷ್ಟು ಮಹಿಳೆಯ ನಮಗೆ ಸಾರ್ವಜನಿಕ ಬಾವಿ ಅಥವಾ ಕೊಳವೆಗಳಿಂದ ನೀರು ತರಲು ಅವಕಾಶವಿದೆ ಎಂದು ಹೇಳಿದ್ದಾರೆ.

ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೮.೩೩ರಷ್ಟು ಮಹಿಳೆಯ ಬಟ್ಟೆಗಳನ್ನು ಮಡಿವಾಳರು ಒಗೆಯುತ್ತಾರೆಂದು. ಶೇ.೯೧.೬೭ರಷ್ಟು ಮಹಿಳೆಯರು ಒಗೆಯುವುದಿಲ್ಲ ಎಂದು ತಿಳಿಸಿದ್ದಾರೆ. ಅದೇ ರೀತಿಯಾಗಿ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೬.೬೭ರಷ್ಟು ಮಹಿಳೆಯರು ಹೌದು ಎಂದು. ಶೇ.೯೩.೩೩ರಷ್ಟು ಮಹಿಳೆಯರು ಇಲ್ಲ ಎಂದು ಹೇಳಿದ್ದಾರೆ. ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ

ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ.ಪಂಗಡದ ಶೇ.೧೦೦ರಷ್ಟು ಮಹಿಳೆಯರು ನಮ್ಮ ಬಟ್ಟೆಗಳನ್ನು ಮಡಿವಾಳರು ಒಗೆಯುತ್ತಾರೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಗುಂಪಿಗೆ ಸೇರದ ಮಹಿಳೆಯರ ಸಾಮಾಜಿಕ ಸ್ಥಾನಮಾನ

ಕೋಷ್ಟಕ-೫.೧. ಸಾಮಾಜಿಕ ಸ್ಥಾನಮಾನ (ಮನೆ)

ಕ್ರ ಸಂ	ಸೂಚಕಗಳು			ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
				ಹೌದು		ಇಲ್ಲ			ಹೌದು		ಇಲ್ಲ		
				ಸಂಖ್ಯೆ	ಶೇ	ಸಂಖ್ಯೆ	ಶೇ	ಒಟ್ಟು	ಸಂಖ್ಯೆ	ಶೇ	ಸಂಖ್ಯೆ	ಶೇ	ಒಟ್ಟು
೦೧	ಮೇಲ್ಜಾತಿ ಕುಟುಂಬ ದೊಳಗೆ ಪ್ರವೇಶ		ಎಸ್.ಸಿ.	–	–	೬೦	೧೦೦	೬೦	–	–	೬೦	೧೦೦	೬೦
			ಎಸ್.ಟಿ	೪೦	೬೬.೬೭	೨೦	೩೩.೩೩	೬೦	೩೨	೫೩.೩೩	೨೮	೪೬.೬೭	೬೦
೦೨	ಮೇಲ್ಜಾತಿ ಯವರು ಸಂಬೋಧಿ ಸುವ ಬಗ್ಗೆ	ಎಸ್ ಸಿ	ಏಕವಚನ	೫೫	೯೧.೬೭	–	–	೫೫	೫೦	೮೩.೩೩	–	–	೫೦
			ಬಹುವಚನ	೦೫	೮.೩೩	–	–	೦೫	೧೦	೧೬.೬೭	–	–	೧೦
		ಎಸ್ ಟಿ	ಏಕವಚನ	೨೦	೩೩.೩೩	–	–	೨೦	೦೫	೮.೩೩	–	–	೦೫
			ಬಹುವಚನ	೪೦	೬೬.೬೭	–	–	೪೦	೫೫	೯೧.೬೭	–	–	೫೫
೦೩	ದೇವಸ್ಥಾನಗಳಿಗೆ ಪ್ರವೇಶ		ಎಸ್.ಸಿ	–	–	೬೦	೧೦೦	೬೦	–	–	೬೦	೧೦೦	೬೦
			ಎಸ್.ಟಿ	೬೦	೧೦೦	–	–	೬೦	೬೦	೧೦೦	–	–	೬೦
೦೪	ಸಾರ್ವಜನಿಕ ಬಾವಿ ಅಥವಾ ಕೊಳವೆ ಯಿಂದ ನೀರು ತರುವ ಅವಕಾಶ		ಎಸ್.ಟಿ	೪೨	೭೦	೧೮	೩೦	೬೦	೦೯	೧೫	೫೧	೮೫	೬೦
			ಎಸ್.ಸಿ	೬೦	೧೦೦	–	–	೬೦	೬೦	೧೦೦	–	–	೬೦
೦೫	ಬಟ್ಟೆಗಳನ್ನು ಮಡಿವಾಳರು ಒಗೆಯುವುದು		ಎಸ್.ಟಿ	೧೦	೧೬.೬೭	೫೦	೮೩.೩೩	೬೦	೦೫	೮.೩೩	೫೫	೯೧.೬೭	೬೦
			ಎಸ್.ಸಿ	೬೦	೧೦೦	–	–	೬೦	೬೦	೧೦೦	–	–	೬೦

ಮೂಲ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕ ೫.೧ರಲ್ಲಿ ಹೊಸಪೇಟೆ ತಾಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಹಾಗೂ ಕೂಡ್ಲಿಗಿ ತಾಲೂಕಿನ ಚಿರತಗುಂಡು ಮತ್ತು ರಾಂಪುರ ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರ ಸಾಮಾಜಿಕ ಸ್ಥಾನಮಾನವನ್ನು ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೧೦೦ರಷ್ಟು ಮಹಿಳೆಯರು ಮೇಲ್ಜಾತಿ (ಬ್ರಾಹ್ಮಣ, ಲಿಂಗಾಯತ ಮತ್ತು ಒಕ್ಕಲಿಗ)ಯ ಮನೆಯೊಳಗೆ ಪ್ರವೇಶವಿಲ್ಲ ಎಂದು ತಿಳಿಸಿದ್ದಾರೆ. ಪ.ಪಂಗಡದ ಶೇ.೬೬.೬೭ರಷ್ಟು ಮಹಿಳೆಯರು ಪ್ರವೇಶವಿದೆ ಎಂದು ಹಾಗೂ ಶೇ.೩೩.೩೩ರಷ್ಟು ಮಹಿಳೆಯ ಪ್ರವೇಶವಿಲ್ಲ ಎಂದಿದ್ದಾರೆ. ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೧೦೦ರಷ್ಟು ಮಹಿಳೆಯರು ಮೇಲ್ಜಾತಿಯವರ ಮನೆಯೊಳಗೆ ಪ್ರವೇಶವಿಲ್ಲ ಎಂದಿದ್ದಾರೆ. ಪ.ಪಂಗಡದ ಶೇ.೫೩.೩೩ರಷ್ಟು ಮಹಿಳೆಯರು ಪ್ರವೇಶವಿದೆ ಎಂದು. ಶೇ.೪೬.೬೭ರಷ್ಟು ಮಹಿಳೆಯರು ಪ್ರವೇಶವಿಲ್ಲ ಎಂದು ತಿಳಿಸಿದ್ದಾರೆ.

ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೯೧.೬೭ರಷ್ಟು ಮಹಿಳೆಯರನ್ನು ಮೇಲ್ಜಾತಿಯವರು ಏಕವಚನದಿಂದ, ಶೇ.೮.೩೩ರಷ್ಟು ಮಹಿಳೆಯರನ್ನು ಬಹುವಚನದಿಂದ ಸಂಬೋಧಿಸುತ್ತಾರೆ. ಹಾಗೆಯೇ ಪ.ಪಂಗದ ಶೇ.೩೩.೩೩ರಷ್ಟು ಮಹಿಳೆಯರನ್ನು ಏಕವಚನದಿಂದ, ಶೇ.೬೬.೬೭ರಷ್ಟು ಮಹಿಳೆಯರನ್ನು ಬಹುವಚನದಿಂದ ಸಂಬೋಧಿಸುತ್ತಾರೆ. ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೮೩.೩೩ರಷ್ಟು ಮಹಿಳೆಯರು ಏಕವಚನದಿಂದ, ಶೇ.೧೬.೬೭ರಷ್ಟು ಮಹಿಳೆಯರು ಬಹುವಚನದಿಂದ ಸಂಬೋಧಿಸುತ್ತಾರೆ ಎಂದು ತಿಳಿಸಿದ್ದಾರೆ. ಪ.ಪಂಗಡದ ಶೇ.೮.೩೩ರಷ್ಟು ಮಹಿಳೆಯರು ಏಕವಚನದಿಂದ, ಶೇ.೯೧.೬೭ರಷ್ಟು ಮಹಿಳೆಯರು ಬಹುವಚನದಿಂದ ನಮ್ಮನ್ನು ಸಂಬೋಧಿಸುತ್ತಾರೆಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ.

ಹೊಸಪೇಟೆ ತಾಲೂಕು ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ.ಜಾತಿಯ ಶೇ.೧೦೦ರಷ್ಟು ಮಹಿಳೆಯರು ನಮಗೆ ದೇವಸ್ಥಾನದ ಒಳಗೆ ಪ್ರವೇಶವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಿಪಡಿಸಿದ್ದಾರೆ. ಈ ಎರಡು ತಾಲೂಕುಗಳಲ್ಲಿ ಪ.ಪಂಗಡದ ಶೇ.೧೦೦ರಷ್ಟು ಮಹಿಳೆಯರು ನಮಗೆ ದೇವಸ್ಥಾನದ ಒಳಗೆ ಪ್ರವೇಶವಿದೆ ಎಂದು ತಿಳಿಸಿದ್ದಾರೆ.

ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೭೦ರಷ್ಟು ಮಹಿಳೆಯರು ಸಾರ್ವಜನಿಕ ಬಾವಿ ಅಥವಾ ಕೊಳವೆಯಿಂದ ನೀರು ತರಲು ಅವಕಾಶವಿದೆ ಎಂದು, ಶೇ.೩೦ರಷ್ಟು ಮಹಿಳೆಯರು ಅವಕಾಶವಿಲ್ಲ ಎಂದಿದ್ದಾರೆ. ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೧೫ರಷ್ಟು ಮಹಿಳೆಯರು ಅವಕಾಶವಿದೆ ಎಂದು, ಶೇ.೮೫ರಷ್ಟು ಮಹಿಳೆಯರು ಅವಕಾಶವಿಲ್ಲ ಎಂದು ತಿಳಿಸಿದ್ದಾರೆ. ಹಾಗೆಯೇ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಪ.ಪಂಗಡದ ಶೇ.೧೦೦ರಷ್ಟು ಮಹಿಳೆಯ ನಮಗೆ ಸಾರ್ವಜನಿಕ ಬಾವಿ ಅಥವಾ ಕೊಳವೆಗಳಿಂದ ನೀರು ತರಲು ಅವಕಾಶವಿದೆ ಎಂದು ಹೇಳಿದ್ದಾರೆ.

ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೧೬.೬೭ರಷ್ಟು ಮಹಿಳೆಯ ಬಟ್ಟೆಗಳನ್ನು ಮಡಿವಾಳರು ಒಗೆಯುತ್ತಾರೆಂದು, ಶೇ.೮೩.೩೩ರಷ್ಟು ಮಹಿಳೆಯರು ಒಗೆಯುವುದಿಲ್ಲ ಎಂದು ತಿಳಿಸಿದ್ದಾರೆ. ಅದೇ ರೀತಿಯಾಗಿ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೮.೩೩ರಷ್ಟು ಮಹಿಳೆಯರು ಹೌದು ಎಂದು, ಶೇ.೯೧.೬೭ರಷ್ಟು ಮಹಿಳೆಯರು ಇಲ್ಲ ಎಂದು ಹೇಳಿದ್ದಾರೆ. ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ.ಪಂಗಡದ ಶೇ.೧೦೦ರಷ್ಟು ಮಹಿಳೆಯರು ನಮ್ಮ ಬಟ್ಟೆಗಳನ್ನು ಮಡಿವಾಳರು ಒಗೆಯುತ್ತಾರೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿನ ನಾಲ್ಕು ಗ್ರಾಮಪಂಚಾಯತಿಗಳಲ್ಲಿನ ಜಾತಿವ್ಯವಸ್ಥೆಯ ಸ್ವರೂಪವನ್ನು ಮೇಲಿನ ಕೋಷ್ಟಕಗಳು ಸೂಚಿಸುತ್ತವೆ. ಮುಖ್ಯವಾಗಿ ನಗರ ಪ್ರದೇಶಗಳಲ್ಲಿ ಜಾತಿಯ ಸಂಕೋಲೆಗಳು ಸ್ವಲ್ಪ ಮಟ್ಟಿಗೆ ಸಡಿಲಗೊಂಡಿವೆಯಾದರೂ.

ಗ್ರಾಮೀಣ ಭಾಗಗಳಲ್ಲಿ ಇವುಗಳು ತುಂಬಾ ಬಿಗಿಯಾಗಿರುವುದನ್ನು ಕಾಣಬಹುದು. ಮೇಲ್ಜಾತಿ, ಕೆಳಜಾತಿ, ದಲಿತರು, ಅಸ್ಪೃಶ್ಯರು ಈ ಬಗೆಯ ಆಲೋಚನಾ ನೆಲೆಗಳು ತುಂಬಾ ಸಂಕೀರ್ಣವಾಗಿರುವುದು ಕಂಡುಬರುತ್ತದೆ. ಮೇಲಿನ ಕೋಷ್ಟಕಗಳಲ್ಲಿನ ಅಂಶಗಳನ್ನು ಗಮನಿಸುವುದಾದರೆ ಎಸ್.ಸಿ. ಮತ್ತು ಎಸ್.ಟಿ. ಸಮುದಾಯಗಳನ್ನು ದಲಿತ ಸಮುದಾಯಗಳು ಎಂದು ಪರಿಗಣಿಸಲಾಗಿಯಾದರೂ ಅವಕಾಶಗಳ ಸಂದರ್ಭದಲ್ಲಿ ಮತ್ತು ವ್ಯವಸ್ಥೆಯ ಸ್ಥರವಿನ್ಯಾಸದಲ್ಲಿ ಎಸ್.ಸಿ. ಸಮುದಾಯವನ್ನು ತುಂಬಾ ಕಡೆಗಣಿಸಿರುವುದನ್ನು ಕಾಣಬಹುದು. ಮುಖ್ಯವಾಗಿ ಮೇಲ್ಜಾತಿಯವರು ಕೆಳಜಾತಿಯ ಮಹಿಳೆಯರನ್ನು ಅದರಲ್ಲಿಯೂ ಸ್ತ್ರೀಶಕ್ತಿ ಗುಂಪಿನ(ಶೇ.೮೦ರಷ್ಟು) ಸದಸ್ಯರನ್ನು ತಮ್ಮ ಮನೆಯೊಳಗೆ ಪ್ರವೇಶಿಸುವುದನ್ನೂ ಸಹ ನಿಷೇಧಿಸಲಾಗಿದೆ. ಕೆಲವು ಮಹಿಳೆಯರಿಗೆ ಮೇಲ್ಜಾತಿಯವರು ಮನೆಯೊಳಗೆ ಪ್ರವೇಶ ನೀಡುತ್ತಾರೆ. ಹಾಗೇನೂ ಬೇಧಭಾವ ಮಾಡುವುದಿಲ್ಲ ಎಂದು ಹೇಳುತ್ತಾರಾದರೂ ವಾಸ್ತವದಲ್ಲಿ ಅವರ ಸಂಖ್ಯೆ ತುಂಬಾ(ಶೇ.೨೦ರಷ್ಟು) ಕಡಿಮೆ ಇದೆ. ಮುಖ್ಯವಾಗಿ ವ್ಯವಸ್ಥೆಯಲ್ಲಿ ಕೆಳಜಾತಿಯ ಸಮುದಾಯಗಳನ್ನು ಶೋಷಿಸುವ ನೆಲೆಯಲ್ಲಿ ಕಾಣಲಾಗುತ್ತದೆ. ಅದರಲ್ಲಿಯೂ ಮಹಿಳೆಯರನ್ನು ತಮ್ಮ ಜೀತದಾಳುಗಳಂತೆ ಕಾಣುವುದು ಇನ್ನೂ ಜೀವಂತವಾಗಿದೆ. ಮೇಲ್ಜಾತಿಯ ಕುಟುಂಬದೊಳಗೆ ಪ್ರವೇಶ, ಮೇಲ್ಜಾತಿಯವರು ಸಂಬೋಧಿಸುವ ಬಗೆ, ದೇವಸ್ಥಾನಗಳಿಗೆ ಪ್ರವೇಶ, ಸಾರ್ವಜನಿಕ ನಲ್ಲಿಗಳಿಂದ ನೀರು ತರುವ ಅವಕಾಶ, ಈ ಎಲ್ಲಾ ಸಂದರ್ಭಗಳಲ್ಲಿ ದಲಿತ ಮಹಿಳೆಯರು ಹೆಚ್ಚು ಶೋಷಣೆಗೆ ಒಳಗಾಗುತ್ತಿದ್ದಾರೆ. ಮುಖ್ಯವಾಗಿ ಈ ಮಹಿಳೆಯರು ದಲಿತ ಪುರುಷರಿಗಿಂತಲೂ ಹೆಚ್ಚಿನ ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಇದು ಸ್ತ್ರೀಶಕ್ತಿ ಗುಂಪಿನ ಸದಸ್ಯರು ಮತ್ತು ಗುಂಪಿಗೆ ಸೇರದೇ ಇರುವಂತಹ ಮಹಿಳೆಯರು ಈ ಎರಡೂ ಸಂದರ್ಭದಲ್ಲಿಯೂ ದಲಿತ ಮಹಿಳೆಯರ ಸ್ಥಿತಿ ಒಂದೇ ಆಗಿರುತ್ತದೆ. ಏಕೆಂದರೆ ದಲಿತರು ಅಥವಾ ಎಸ್.ಸಿ. ಸಮುದಾಯವೆಂದರೆ ಅದು ಅಸ್ಪೃಶ್ಯ ಸಮುದಾಯ ಎಂಬ ಧೋರಣೆ ಸಾಂಪ್ರದಾಯಿಕ ವ್ಯವಸ್ಥೆಯದ್ದು. ಹಾಗಾಗಿಯೇ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿನ ನಾಲ್ಕು ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿನ ಎಸ್.ಸಿ. ಸಮುದಾಯವನ್ನು ತುಂಬಾ ಅಮಾನವೀಯವಾಗಿ ನಡೆಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಅದೇ ರೀತಿಯಲ್ಲಿ ಎಸ್.ಟಿ. ಸಮುದಾಯದ ಮಹಿಳೆಯರಿಗೆ ಈ ಬಗೆಯ ನಿಯಂತ್ರಣ ಇಲ್ಲದಿರುವುದು ಕಂಡುಬರುತ್ತಿದೆ. ಮೇಲಿನ ಎರಡೂ ಕೋಷ್ಟಕಗಳಲ್ಲಿ ಸೂಚಿಸಿರುವಂತೆ ಎಸ್.ಟಿ. ಸಮುದಾಯದ ಕೆಲವು ಮಹಿಳೆಯರು ಕೆಲವು ವಲಯಗಳಿಗೆ ಪ್ರವೇಶ ನಿಷೇಧಿಸಿರುವ ಬಗೆಗೆ ತಿಳಿಸುತ್ತಾರೆ. ಬದಲಾಗಿ ಬಹುತೇಕ ಮಹಿಳೆಯರು ಎಲ್ಲಾ ಸಂದರ್ಭಗಳಲ್ಲಿಯೂ ಎಸ್.ಸಿ. ಸಮುದಾಯದ ಮಹಿಳೆಯರು ಅನುಭವಿಸಿದ ನೋವುಗಳನ್ನೇನೂ ಅನುಭವಿಸಿಲ್ಲ. ಒಟ್ಟಾರೆಯಾಗಿ ಗುಂಪಿಗೆ ಸೇರಿದ ಮಹಿಳೆಯರು ಮತ್ತು ಗುಂಪಿಗೆ ಸೇರದ ಮಹಿಳೆಯರು ಇವರಿಬ್ಬರನ್ನೂ ಗಮನಿಸಿದಾಗ ಸಾಮಾಜಿಕವಾಗಿ ರೂಢಿಯಲ್ಲಿರುವ ಜಾತಿಯ ಕಟ್ಟಳೆಗಳು, ಸಂಕೋಲೆಗಳು ಗ್ರಾಮೀಣ ಭಾಗದಲ್ಲಿ

ಹೆಚ್ಚಾಗಿರುವುದನ್ನು ಕಾಣಬಹುದು. ಅವುಗಳಲ್ಲಿ ಯಾವುದೇ ವ್ಯತ್ಯಾಸಗಳನ್ನು ಕಾಣಲು ಸಾಧ್ಯವಿಲ್ಲ. ಪ್ರತಿಯೊಂದು ಗ್ರಾಮಗಳಲ್ಲಿಯೂ ಕುಡಿಯುವ ನೀರಿನ ಸೌಲಭ್ಯಗಳನ್ನು ಮಾಡಿಕೊಡಲಾಗಿರುತ್ತದೆ. ಇದು ಖಾಸಗೀಯಾಗಿರಬಹುದು (ಮನೆಗೊಂದು ಪ್ರತ್ಯೇಕ ನಲ್ಲಿಗಳು) ಅಥವಾ ಸಾಮುದಾಯಿಕವಾಗಿರಬಹುದು. ಇಂತಹ ಸಂದರ್ಭದಲ್ಲಿ ಎಸ್.ಸಿ. ಮತ್ತು ಎಸ್.ಟಿ ಸಮುದಾಯದ ಬಹಳಷ್ಟು ಕುಟುಂಬಗಳು ಮನೆಗೊಂದು ಪ್ರತ್ಯೇಕ ನಲ್ಲಿಗಳನ್ನು ಹೊಂದುವುದು ತುಂಬಾ ಕಷ್ಟದ ಸಂಗತಿ. ಹಾಗಾಗಿ ಅವರು ಸಾಮುದಾಯಿಕವಾಗಿ ಉಪಯೋಗಿಸುವಂತಹ ನೀರಿನ ಟ್ಯಾಂಕ್‌ಗಳನ್ನು ಅವಲಂಬಿಸುವುದು ಅನಿವಾರ್ಯವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಎಸ್.ಸಿ. ಸಮುದಾಯದ ಮಹಿಳೆಯರಿಗೆ(ಅದು ಗುಂಪಿಗೆ ಸೇರಿದ ಮತ್ತು ಸೇರದ ಮಹಿಳೆಯರನ್ನು ಒಳಗೊಂಡಂತೆ) ಸಾರ್ವಜನಿಕವಾಗಿ ನಲ್ಲಿಗಳಿಂದ ಕುಡಿಯುವ ನೀರನ್ನು ಪಡೆಯುವುದು(ಶೇ.೭೦ರಷ್ಟು) ನಿಷಿದ್ಧವಾಗಿರುವುದನ್ನು ಗಮನಿಸಿದರೆ, ೨೧ನೇ ಶತಮಾನದ ಜಾಗತೀಕರಣ, ಖಾಸಗೀಕರಣ ಮತ್ತು ಆಧುನೀಕರಣದ ಸಂದರ್ಭದಲ್ಲಿ ಇಂತಹ ಪರಿಸ್ಥಿತಿ ಕಾಣಲು ಸಾಧ್ಯವಾಗುತ್ತಿದೆ ಎಂದರೆ ಅದು ಮನುಕುಲಕ್ಕೆ ಹಿಡಿದ ಕನ್ನಡಿಯಂತಿದೆ. ಇದೊಂದು ಅಮಾನವೀಯ ಸಂಗತಿಯಾಗಿದೆ. ಈ ಬಗೆಯ ಸಂಗತಿಗಳಿಂದ ಹೊರಬರಬೇಕಾದರೆ ಶಿಕ್ಷಣವೊಂದೇ ಮಾರ್ಗ.

ಸಾಮಾಜಿಕ ಅಭಿವೃದ್ಧಿ

ಕೋಷ್ಟಕ : ೬ ಗುಂಪಿಗೆ ಸೇರಿದ ಮಹಿಳೆಯರ ಶಿಕ್ಷಣದ ವಿವರ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್. ಸಿ.	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್. ಟಿ	ಶೇ	ಒಟ್ಟು
೦೧	ಅನಕ್ಷರಸ್ಥರು	೪೦	೬೬.೬೭	೪೪	೭೩.೩೩	೮೪	೪೨	೭೦	೪೫	೭೫	೮೭
೦೨	೧ರಿಂದ ೫ನೇ ತರಗತಿ	೦೮	೧೩.೩೩	೦೫	೮.೩೩	೧೨೩	೧೦	೧೬.೬೭	೦೭	೧೧.೬೭	೧೭
೦೩	೬ರಿಂದ ೮ನೇ ತರಗತಿ	೦೫	೮.೩೩	೦೩	೦೫	೦೮	೦೪	೬.೬೬	೦೩	೦೫	೦೭
೦೪	೯ರಿಂದ ೧೦ನೇ ತರಗತಿ	೦೬	೧೦	೦೭	೧೧.೬೭	೧೩	೦೪	೬.೬೭	೦೨	೩.೩೩	೦೬
೦೫	ಪಿಯುಸಿ	೦೧	೧.೬೭	೦೧	೧.೬೭	೦೨	–	–	೦೨	೩.೩೩	೦೨
೦೬	ಪದವಿ	–	–	–	–	–	–	–	೦೧	೧.೬೭	೦೧
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರ ಶಿಕ್ಷಣದ ಮಟ್ಟವನ್ನು ಕೋಷ್ಟಕ ೬ರಲ್ಲಿ ತೋರಿಸಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೬೬.೬೭ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೭೩.೩೩ರಷ್ಟು ಮಹಿಳೆಯರು ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೭೦ರಷ್ಟು

ಮಹಿಳೆಯರು ಮತ್ತು ಪ.ಪಂಗಡದ ಶೇ.೭೫ರಷ್ಟು ಮಹಿಳೆಯರು ಅನಕ್ಷರಸ್ಥರಾಗಿದ್ದಾರೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೧೩.೩೩ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೮.೩೩ರಷ್ಟು ಮಹಿಳೆಯರು ಪೂರ್ವ ಪ್ರಾಥಮಿಕ (೧ರಿಂದ ೫) ಶಿಕ್ಷಣವನ್ನು ಪಡೆದಿದ್ದಾರೆ. ಹಾಗೆಯೇ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೧೬.೬೭ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೧೧.೬೭ರಷ್ಟು ಮಹಿಳೆಯರು ಪೂರ್ವ ಪ್ರಾಥಮಿಕ (೧ರಿಂದ ೫) ಶಿಕ್ಷಣವನ್ನು ಪಡೆದಿದ್ದಾರೆ. ಅದೇರೀತಿಯಾಗಿ ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೮.೩೩ರಷ್ಟು ಮಹಿಳೆಯರು ಹಾಗೂ ಪ. ಪಂಗಡದ ಶೇ.೫ರಷ್ಟು ಮಹಿಳೆಯರು ಹಾಗೆಯೇ ಕೂಡ್ಲಿಗಿ ತಾಲೂಕಿನ ಪ.ಜಾತಿ ಶೇ.೬.೬೭ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೫ರಷ್ಟು ಮಹಿಳೆಯರು ಹಿರಿಯ ಪ್ರಾಥಮಿಕ (೬ರಿಂದ ೮) ಶಿಕ್ಷಣವನ್ನು ಪಡೆದಿದ್ದಾರೆ. ಇನ್ನುಳಿದಂತೆ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ೯ರಿಂದ ೧೦ ಹಾಗೂ ಪಿಯುಸಿ ಮತ್ತು ಪದವಿ ಶಿಕ್ಷಣವನ್ನು ಪಡೆದಿದ್ದಾರೆ. ಈ ಎರಡು ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಸ್ನಾತಕೋತ್ತರ ಪದವಿ ಮತ್ತು ತಾಂತ್ರಿಕ ಶಿಕ್ಷಣವನ್ನು ಪಡೆದಿರುವುದಿಲ್ಲ. ಒಟ್ಟಾರೆಯಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಅನಕ್ಷರಸ್ಥರಾಗಿರುವುದು ಕೋಷ್ಟಕದಿಂದ ತಿಳಿದುಬರುತ್ತದೆ.

ಸಾಮಾಜಿಕ ಅಭಿವೃದ್ಧಿ

ಕೋಷ್ಟಕ : ೬.೧ ಗುಂಪಿಗೆ ಸೇರದ ಮಹಿಳೆಯರ ಶಿಕ್ಷಣದ ವಿವರ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್. ಸಿ.	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್. ಟಿ	ಶೇ	ಒಟ್ಟು
೦೧	ಅನಕ್ಷರಸ್ಥರು	೪೬	೭೬.೬೭	೪೦	೬೬.೬೭	೮೬	೪೨	೭೦	೪೫	೭೫	೮೭
೦೨	೧ರಿಂದ ೫ನೇ ತರಗತಿ	೧೦	೧೬.೬೭	೧೪	೨೩.೩೩	೨೪	೦೮	೧೩.೩೩	೦೬	೧೦	೧೪
೦೩	೬ರಿಂದ ೮ನೇ ತರಗತಿ	೦೨	೩.೩೩	೦೬	೧೦	೦೮	೦೫	೮.೩೩	೦೪	೬.೬೭	೦೯
೦೪	೯ರಿಂದ ೧೦ನೇ ತರಗತಿ	೦೨	೩.೩೩	--	--	೦೨	೦೫	೮.೩೩	೦೫	೮.೩೩	೧೦
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕ ೬.೧ರಲ್ಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಶಿಕ್ಷಣದ ಮಟ್ಟವನ್ನು ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೭೬.೬೭ರಷ್ಟು ಹಾಗೂ ಪ.ಪಂಗಡದ ಶೇ.೬೬.೬೭ರಷ್ಟು ಮಹಿಳೆಯರು ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೭೦ರಷ್ಟು ಮತ್ತು ಪ.ಪಂಗಡದ ಶೇ.೭೫ರಷ್ಟು ಮಹಿಳೆಯರು ಅನಕ್ಷರತೆಯನ್ನು ಹೊಂದಿದ್ದಾರೆ. ಹಾಗೆಯೇ ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೧೬.೬೭ರಷ್ಟು

ಮತ್ತು ಪ.ಪಂಗಡದ ಶೇ.೨೩.೩೩ರಷ್ಟು ಮಹಿಳೆಯರು ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೧೩.೩೩ರಷ್ಟು ಹಾಗೂ ಪ.ಪಂಗಡದ ಶೇ.೧೦ರಷ್ಟು ಮಹಿಳೆಯರು ಪೂರ್ವಪ್ರಾಥಮಿಕ (೧ರಿಂದ ೫) ಶಿಕ್ಷಣವನ್ನು ಪಡೆದಿದ್ದಾರೆ. ಇನ್ನುಳಿದಂತೆ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಪಡೆದಿದ್ದಾರೆ. ಈ ಎರಡು ತಾಲೂಕುಗಳಲ್ಲಿ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಮತ್ತು ತಾಂತ್ರಿಕ ಶಿಕ್ಷಣವನ್ನು ಯಾವುದೇ ಪರಿಶಿಷ್ಟ ಮಹಿಳೆ ಪಡೆಯದೇ ಇರುವುದು ಕಂಡುಬಂದಿದೆ. ಒಟ್ಟಾರೆಯಾಗಿ ಈ ಎರಡು ತಾಲೂಕುಗಳಲ್ಲಿ ಅನಕ್ಷರಸ್ಥರು ಹೆಚ್ಚಾಗಿ ಕಂಡುಬರುತ್ತಾರೆ.

ಭಾರತದಲ್ಲಿ ಶಿಕ್ಷಣ ವ್ಯವಸ್ಥೆ ಖಾಸಗೀಕರಣಕ್ಕೆ ಒಳಪಟ್ಟು, ಇಂದು ಪ್ರತೀಹಳ್ಳಿ ಹಳ್ಳಿಗಳಲ್ಲಿಯೂ ಶೈಕ್ಷಣಿಕ ಕೇಂದ್ರಗಳನ್ನು ಕಾಣುವಂತಾಗಿದೆ. ಹಾಗಾಗಿ ಗ್ರಾಮದ ಪ್ರತಿಯೊಂದು ಕುಟುಂಬದಲ್ಲಿಯೂ ಶಿಕ್ಷಣ ಪಡೆದವರನ್ನು ಅಥವಾ ಶಿಕ್ಷಣಕ್ಕೆ ತೆರೆದುಕೊಂಡವರನ್ನು ಕಾಣಲಾಗುತ್ತದೆ. ಆದರೆ ಇಲ್ಲಿ ಒಂದು ಅಂಶವನ್ನು ಗಮನಿಸಬೇಕಾದ ಸಂಗತಿಯೆಂದರೆ, ಶಿಕ್ಷಣವನ್ನು ಕೊಡಿಸುವುದರಲ್ಲಿನ ತಾರತಮ್ಯ. ಮುಖ್ಯವಾಗಿ ಕುಟುಂಬದಲ್ಲಿ ಹುಡುಗರಿಗೆ ಇರುವ ಆದ್ಯತೆ ಹುಡುಗಿಯರಿಗೆ ಇಲ್ಲದಾಗಿದೆ. ಹಾಗಾಗಿ ಗ್ರಾಮೀಣ ಭಾಗದ ಮಹಿಳೆಯರು ಶಿಕ್ಷಣಕ್ಕೆ ತೆರೆದುಕೊಳ್ಳುವುದಾಗಲೀ ಅಥವಾ ಉನ್ನತ ಶಿಕ್ಷಣಕ್ಕೆ ಕಾಲಿಡುವಂತದ್ದಾಗಲೀ ಕಷ್ಟದ ಸಂಗತಿಯಾಗಿದೆ. ಆದರೂ ಪ್ರತೀ ಶೈಕ್ಷಣಿಕ ವರ್ಷದಲ್ಲಿ ಪುರುಷರಿಗಿಂತ ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿ ಮುಂದಿರುವುದು ಕಂಡುಬರುತ್ತಿದೆ. ಇಲ್ಲಿ ಮಹಿಳೆಯರೇನೋ ಶೈಕ್ಷಣಿಕವಾಗಿ ಮುಂದುವರೆಯುತ್ತಿದ್ದಾರೆ ನಿಜ. ಆದರೆ ಈ ಮುಂದುವರಿಕೆ ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಕಂಡುಬರುತ್ತಿದೆಯೋ ಅಥವಾ ನಗರ ಪ್ರದೇಶದ ಮಹಿಳೆಯರಲ್ಲಿ ಕಂಡುಬರುತ್ತಿದೆಯೋ ಎಂಬುದನ್ನು ಗಮನಿಸಿದಾಗ, ನಗರ ಪ್ರದೇಶದ ಮಹಿಳೆಯರು (೨೦೧೧ರ ಜನಗಣತಿ ಪ್ರಕಾರ ಹೊಸಪೇಟೆ ತಾಲೂಕಿನಲ್ಲಿ ಶೇ.೭೦.೨೬ ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಶೇ.೭೪.೧೧ರಷ್ಟು) ಹೆಚ್ಚಿನ ಸಂಖ್ಯೆಯಲ್ಲಿ ಮುಂದುವರೆಯುತ್ತಿರುವುದು ಕಂಡುಬರುತ್ತಿದೆ. ಗ್ರಾಮೀಣ ಭಾಗದ ಮಹಿಳೆಯರಲ್ಲಿ(೨೦೧೧ರ ಅಂಕಿಅಂಶಗಳ ಪ್ರಕಾರ ಹೊಸಪೇಟೆ ತಾಲೂಕು ಶೇ.೪೯.೫೬ ಮತ್ತು ಕೂಡ್ಲಿಗಿ ತಾಲೂಕು ಶೇ.೫೬.೪೯ರಷ್ಟು) ಮೌಲ್ಯಗಳು ಆವರಿಸಿಕೊಂಡಿರುವುದರಿಂದ ಉನ್ನತ ಶಿಕ್ಷಣಕ್ಕೆ ತೆರೆದುಕೊಳ್ಳುವುದು ಕಷ್ಟದ ಸಂಗತಿಯಾಗಿದೆ. ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಗ್ರಾಮ ಪಂಚಾಯತಿಗಳಲ್ಲಿನ ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮಹಿಳಾ ಸದಸ್ಯರನ್ನು ಮತ್ತು ಗುಂಪಿಗೆ ಸೇರದ ಮಹಿಳೆಯರನ್ನು ಗಮನಿಸಿದರೆ, ಅನಕ್ಷರಸ್ಥರ ಸಂಖ್ಯೆ(ಸರಾಸರಿಯಾಗಿ ಶೇ.೭೦ರಷ್ಟು) ಅಧಿಕವಾಗಿರುವುದನ್ನು ಕಾಣಬಹುದು. ಇದಕ್ಕೆ ಕಾರಣ ಮಹಿಳೆಯರಲ್ಲಿ ನಮ್ಮಲ್ಲಿನ ಸಾಮಾಜಿಕ ವ್ಯವಸ್ಥೆ ಮಹಿಳೆಯರನ್ನು ನೋಡುವ ದೃಷ್ಟಿಕೋನದ ಫಲವಾಗಿ ಅವರು ಶಿಕ್ಷಣಕ್ಕೆ ತೆರೆದುಕೊಳ್ಳದಿರುವುದನ್ನು ಗುರುತಿಸಬಹುದಾಗಿದೆ. ಮುಖ್ಯವಾಗಿ ಹೆಣ್ಣು ಬೇರೊಂದು ಮನೆಯ ಸ್ವತ್ತು, ಇನ್ನೊಂದು ಮನೆಯ ದೀಪವನ್ನು ಬೆಳಗುವವಳು.

ಮಹಿಳೆಗೆ ಎಷ್ಟೇ ಓದಿಸಿದರೂ ಅಡುಗೆ ಮಾಡುವುದು ತಪ್ಪಲ್ಲ. ಈ ಬಗೆಯ ಮನೋಭಾವನೆಯ ಕಾರಣವಾಗಿ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿರುವುದನ್ನು ಕಾಣಬಹುದು. ಈ ಕಾರಣಕ್ಕಾಗಿ ಪ್ರಾಥಮಿಕ ಶಿಕ್ಷಣದಿಂದ ಎಷ್ಟೋ ಮಹಿಳೆಯರು ವಂಚಿತರಾಗುತ್ತಿರುವುದು ಕಂಡುಬರುತ್ತಿದೆ. ಇದು ಮಹಿಳೆಯರ ಇಡೀ ಜೀವನದ ಮೇಲೆ ಪರಿಣಾಮವನ್ನು ಬೀರುತ್ತದೆ. ಎರಡೂ ತಾಲೂಕುಗಳಲ್ಲಿನ ನಾಲ್ಕು ಗ್ರಾಮಪಂಚಾಯತಿಗಳನ್ನು ಗಮನಿಸುವುದಾದರೆ ಉನ್ನತ ಶಿಕ್ಷಣದವರೆಗೆ ವಿದ್ಯಾಭ್ಯಾಸವನ್ನು ಪಡೆದುಕೊಂಡವರು ಕೇವಲ ಒಬ್ಬರೇ ಇರುವುದನ್ನು ಕಾಣಬಹುದು. ಅಂದರೆ ಇದು ಮಹಿಳೆಯರ ಶಿಕ್ಷಣಕ್ಕೆ ಸಂಬಂಧಿಸಿದಂತೆ ವ್ಯವಸ್ಥೆಯ ದೃಷ್ಟಿಕೋನ ಹೇಗಿದೆ ಎಂಬುದನ್ನು ತಿಳಿಯಬಹುದಾಗಿದೆ. ಸ್ತ್ರೀಶಕ್ತಿ ಗುಂಪುಗಳಲ್ಲಿ ಅನಕ್ಷರಸ್ಥರ ಸಂಖ್ಯೆ ಅಧಿಕವಾಗಿದೆಯಾದರೂ ಅವರು ತಮ್ಮ ಸಹಿಯನ್ನು ತಾವೇ ಮಾಡುವ ಹಂತಕ್ಕೆ ಬಂದಿದ್ದಾರೆ. ಇದು ಅವರಿಗೆ ಅನಿವಾರ್ಯ ಕೂಡ. ಜೊತೆಗೆ ಬ್ಯಾಂಕ್‌ಗಳಿಗೆ ತೆರಳಿ ಹಣದ ಲೇವಾದೇವಿಯನ್ನು ಮಾಡುವ ಹಂತಕ್ಕೆ ತಲುಪಿರುವುದು ಒಂದು ಆಶಾದಾಯಕ ಸಂಗತಿಯಾಗಿದೆ. ಹಾಗೆಯೇ ಸ್ತ್ರೀಶಕ್ತಿ ಗುಂಪುಗಳಿಗೆ ಸೇರದೇ ಇರುವಂತಹ ಮಹಿಳೆಯರಲ್ಲಿ ಈ ಬಗೆಯ ಬದಲಾವಣೆಗಳನ್ನು ಕಾಣಲು ಸಾಧ್ಯವಿಲ್ಲ. ಹಾಗಾಗಿ ಸ್ತ್ರೀಶಕ್ತಿ ಗುಂಪುಗಳಲ್ಲಿನ ಮಹಿಳೆಯರು ಸ್ವಲ್ಪ ಮಟ್ಟಿಗಾದರೂ ತಮ್ಮಲ್ಲಿ ಬದಲಾವಣೆಯನ್ನು ಮಾಡಿಕೊಂಡಿರುವುದನ್ನು ಕಾಣಬಹುದಾಗಿದೆ.

ಆರೋಗ್ಯ

ಕೋಷ್ಟಕ : ೭ ಗುಂಪಿಗೆ ಸೇರಿದ ಮಹಿಳೆಯರ ಹೆರಿಗೆ ಪ್ರಕ್ರಿಯೆ (ಸಾಂಸ್ಥಿಕ ಹೆರಿಗೆ)

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ಮನೆಯಲ್ಲಿ	೩೪	೫೬.೬೭	೩೦	೫೦	೬೪	೩೭	೬೧.೬೭	೪೦	೬೬.೬೭	೭೭
೦೨	ಸರಕಾರಿ ಆಸ್ಪತ್ರೆ	೨೨	೩೬.೬೬	೨೫	೪೧.೬೭	೪೭	೧೭	೨೮.೩೩	೧೨	೨೦	೨೯
೦೩	ಖಾಸಗಿ ಆಸ್ಪತ್ರೆ	೦೪	೬.೬೬	೦೫	೮.೩೩	೦೯	೦೬	೧೦	೦೮	೧೩.೩೩	೧೪
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ತಾಲೂಕಿನ ಎರಡು ಪಂಚಾಯತಿಗಳ ಮತ್ತು ಕೂಡ್ಲಿಗಿ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರ ಆರೋಗ್ಯಕ್ಕೆ ಸಂಬಂಧಿಸಿದಂತೆ ಅವರ ಹೆರಿಗೆ ಸಮಯದಲ್ಲಿ ಎಲ್ಲಿ ಮತ್ತು ಯಾವ ಆಸ್ಪತ್ರೆಯಲ್ಲಿ ಮಾಡಿಸುತ್ತಾರೆ ಎಂಬುದನ್ನು ಕೋಷ್ಟಕ ೭ರಲ್ಲಿ ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೫೬.೬೭ರಷ್ಟು ಮತ್ತು ಪ.ಪಂಗಡದ ಶೇ.೫೦ರಷ್ಟು ಮಹಿಳೆಯರು, ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೬೧.೬೭ರಷ್ಟು ಹಾಗೂ ಪ.ಪಂಗಡದ ಶೇ.೬೬.೬೭ರಷ್ಟು ಮಹಿಳೆಯರು ಹೆರಿಗೆಯನ್ನು ತಮ್ಮ

ಮನೆಯಲ್ಲಿಯೇ ಮಾಡಿಸಿದ್ದಾರೆ. ಹಾಗೆಯೇ ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೩೬.೬೬ರಷ್ಟು ಹಾಗೂ ಪ.ಪಂಗಡದ ಶೇ.೪೧.೬೭ರಷ್ಟು ಮಹಿಳೆಯರು ಅದರಂತೆಯೇ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೨೮.೩೩ರಷ್ಟು ಮತ್ತು ಪ.ಪಂಗಡದ ಶೇ.೨೦ರಷ್ಟು, ಇನ್ನುಳಿದಂತೆ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಹೆರಿಗೆಯನ್ನು ಖಾಸಗಿ ಆಸ್ಪತ್ರೆಯಲ್ಲಿ ಮಾಡಿಸಿರುವುದು ಕಂಡುಬಂದಿದೆ. ಒಟ್ಟಾರೆಯಾಗಿ ಎರಡು ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಹೆರಿಗೆಯನ್ನು ಹೆಚ್ಚಾಗಿ ಮನೆಯಲ್ಲೇ ಮತ್ತು ಸರಕಾರಿ ಆಸ್ಪತ್ರೆಯಲ್ಲೇ ಮಾಡಿಸಿರುವುದು ಕೋಷ್ಟಕದಿಂದ ತಿಳಿದುಬರುತ್ತದೆ.

ಆರೋಗ್ಯ

ಕೋಷ್ಟಕ : ೭.೧ ಗುಂಪಿಗೆ ಸೇರದ ಮಹಿಳೆಯರ ಹೆರಿಗೆ ಪ್ರಕ್ರಿಯೆ (ಸಾಂಸ್ಥಿಕ ಹೆರಿಗೆ)

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್ .ಟಿ	ಶೇ	ಒಟ್ಟು
೦೧	ಮನೆಯಲ್ಲಿ	೩೮	೩೮.೩೩	೪೪	೭೩.೩೪	೮೨	೩೬	೬೦	೩೯	೬೫	೭೫
೦೨	ಸರಕಾರಿ ಆಸ್ಪತ್ರೆ	೨೧	೩೫	೧೪	೨೩.೩೩	೩೫	೨೪	೪೦	೧೭	೨೮.೩೩	೪೧
೦೩	ಖಾಸಗಿ ಆಸ್ಪತ್ರೆ	೦೧	೧.೬೭	೦೨	೩.೩೩	೦೩	–	–	೦೪	೬.೬೭	೦೪
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ತಾಲೂಕಿನ ಎರಡು ಪಂಚಾಯತಿಗಳ ಮತ್ತು ಕೂಡ್ಲಿಗಿ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಆರೋಗ್ಯಕ್ಕೆ ಸಂಬಂಧಿಸಿಂದತೆ ಅವರ ಹೆರಿಗೆ ಸಮಯದಲ್ಲಿ ಎಲ್ಲಿ ಮತ್ತು ಯಾವ ಆಸ್ಪತ್ರೆಯಲ್ಲಿ ಮಾಡಿಸುತ್ತಾರೆ ಎಂಬುದನ್ನು ಕೋಷ್ಟಕ ೭.೧ರಲ್ಲಿ ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೬೮.೩೩ರಷ್ಟು ಮತ್ತು ಪ.ಪಂಗಡದ ಶೇ.೭೩.೩೪ರಷ್ಟು ಮಹಿಳೆಯರು, ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೬೦ರಷ್ಟು ಹಾಗೂ ಪ.ಪಂಗಡದ ಶೇ.೬೫ರಷ್ಟು ಮಹಿಳೆಯರು ಹೆರಿಗೆಯನ್ನು ತಮ್ಮ ಮನೆಯಲ್ಲಿಯೇ ಮಾಡಿಸಿದ್ದಾರೆ. ಹಾಗೆಯೇ ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೩೫ರಷ್ಟು ಹಾಗೂ ಪ.ಪಂಗಡದ ಶೇ.೨೩.೩೩ರಷ್ಟು ಮಹಿಳೆಯರು ಅದರಂತೆಯೇ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೪೦ರಷ್ಟು ಮತ್ತು ಪ.ಪಂಗಡದ ಶೇ.೨೮.೩೩ರಷ್ಟು, ಇನ್ನುಳಿದಂತೆ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಹೆರಿಗೆಯನ್ನು ಖಾಸಗಿ ಆಸ್ಪತ್ರೆಯಲ್ಲಿ ಮಾಡಿಸಿರುವುದು ಕಂಡುಬಂದಿದೆ. ಒಟ್ಟಾರೆಯಾಗಿ ಎರಡು ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಹೆರಿಗೆಯನ್ನು ಹೆಚ್ಚಾಗಿ ಮನೆಯಲ್ಲೇ ಮತ್ತು ಸರಕಾರಿ ಆಸ್ಪತ್ರೆಯಲ್ಲೇ ಮಾಡಿಸಿರುವುದು ಕೋಷ್ಟಕದಿಂದ ತಿಳಿದುಬರುತ್ತದೆ.

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕು ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿನ ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಆರೋಗ್ಯವನ್ನು ಕುರಿತಂತೆ ಬಹಳ ಮುಖ್ಯವಾಗಿ

ಹೆರಿಗೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ನೋಡುವುದಾದರೆ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸಿದ ಮಹಿಳೆಯರ ಸಂಖ್ಯೆ ತುಂಬಾ ಕಡಿಮೆ ಇದೆ. ಅಂದರೆ ಈ ಮಹಿಳೆಯರು ಮನೆಗಳಲ್ಲಿಯೇ ಅಧಿಕ ಸಂಖ್ಯೆಯಲ್ಲಿ(ಶೇ.೩೦ರಿಂದ ಶೇ.೬೦ರಷ್ಟು) ಹೆರಿಗೆಯನ್ನು ಮಾಡಿಸುತ್ತಿರುವುದು ಕಂಡುಬಂದಿದೆ. ಆದರೆ NRHM (National Rural Health Mission)ನ ಅಡಿಯಲ್ಲಿ ಕುಟುಂಬಗಳಲ್ಲಿ ನಡೆಯುವ ಹೆರಿಗೆ ಪ್ರಕ್ರಿಯೆಯನ್ನು ತಪ್ಪಿಸುವುದು, ಆ ಮೂಲಕ ತಾಯಿ ಮರಣ ಮತ್ತು ಶಿಶು ಮರಣ ಪ್ರಮಾಣವನ್ನು ಕಡಿಮೆ ಮಾಡುವ ಉದ್ದೇಶವನ್ನು ಹೊಂದಿದೆ. ಆದರೆ ಈ ಯೋಜನೆಯ ಬಗೆಗೆ ಯಾವುದೇ ಅರಿವಿರದ ಮಹಿಳೆಯರು ಇದರ ಲಾಭವನ್ನು ಪಡೆಯುವಲ್ಲಿ ವಿಫಲವಾಗಿರುವುದನ್ನು ಕೋಷ್ಟಕದಿಂದ ತಿಳಿಯಬಹುದು. ಬಹಳ ಮುಖ್ಯವಾಗಿ ಸ್ತ್ರೀಶಕ್ತಿ ಗುಂಪುಗಳಲ್ಲಿ ಸದಸ್ಯರಾದ ಎಸ್.ಸಿ ಮತ್ತು ಎಸ್.ಟಿ ಸಮುದಾಯದ ಮಹಿಳೆಯರು ಆರ್ಥಿಕವಾಗಿ ತುಂಬಾ ಹಿಂದುಳಿದವರಾಗಿರುತ್ತಾರೆ. ಆ ಕಾರಣಕ್ಕಾಗಿ ಮತ್ತು ಕೆಲವು ಮೂಢನಂಬಿಕೆಗಳ ಕಾರಣಕ್ಕಾಗಿ ಮನೆಯಲ್ಲಿಯೇ ಹೆರಿಗೆ ಮಾಡಿಸುವ ಪ್ರಕ್ರಿಯೆಗೆ ಮುಂದಾಗುತ್ತಾರೆ. ಜೊತೆಗೆ ಆಸ್ಪತ್ರೆಗೆ ಹೋದರೆ ಸಿಜರಿಯನ್ ಮಾಡುತ್ತಾರೆ ಎಂಬ ಭಯ ಗ್ರಾಮೀಣ ಭಾಗದ ಜನರಲ್ಲಿ ಇರುವುದನ್ನು ಕಾಣಬಹುದು. ಅಂದರೆ ಸ್ವಾಭಾವಿಕ ಹೆರಿಗೆಯ ಮೂಲಕ ಮಗುವಿನ ಜನನವಾದರೆ ತಾಯಿ ಮಕ್ಕಳು ಚೆನ್ನಾಗಿರುತ್ತಾರೆ ಎಂಬ ಮೂಢ ನಂಬಿಕೆಯ ಕಾರಣವಾಗಿ ಮನೆಯಲ್ಲಿಯೇ ಹೆರಿಗೆ ಮಾಡಿಸಲು ಮುಂದಾಗುತ್ತಿರುವುದು ಕಂಡುಬರುತ್ತಿದೆ. ಕೆಲವು ಮಹಿಳೆಯರು(ಶೇ.೨೦ರಿಂದ ಶೇ.೩೦ರಷ್ಟು) ಸರ್ಕಾರಿ ಆಸ್ಪತ್ರೆಗಳನ್ನು ಅವಲಂಬಿಸಿದ್ದಾರೆ. ಕೆಲವು ಮಹಿಳೆಯರು(ಶೇ.೪ರಿಂದ ಶೇ.೧೦ರಷ್ಟು) ಖಾಸಗೀ ಆಸ್ಪತ್ರೆಯಲ್ಲಿ ಹೆರಿಗೆಗಳನ್ನು ಮಾಡಿಸಿರುವುದು ತಿಳಿದುಬರುತ್ತದೆ. ಆದರೆ ಇವರ ಪ್ರಮಾಣ ತುಂಬಾನೇ ಕಡಿಮೆ. ಮುಖ್ಯವಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಕಂಡುಬರುವ ಮೂಲ ಸೌಕರ್ಯಗಳ ಅಲಭ್ಯತೆಯಿಂದಾಗಿ ಅಲ್ಲಿ ವೈಧ್ಯಕೀಯ ಚಿಕಿತ್ಸೆಯನ್ನು ಪಡೆಯಲು ಮುಂದಾಗದಿರುವುದು ಕಂಡುಬಂದಿದೆ. ಒಟ್ಟಾರೆಯಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿನ ನಾಲ್ಕು ಗ್ರಾಮಪಂಚಾಯತಿಗಳಲ್ಲಿ ಸ್ತ್ರೀಶಕ್ತಿ ಗುಂಪುಗಳಿಗೆ ಸೇರಿದ ಮತ್ತು ಸೇರದೇ ಇವರು ಮಹಿಳೆಯರು ಹೆಚ್ಚಾಗಿ ತಮ್ಮ ಕುಟುಂಬಗಳಲ್ಲಿಯೇ ಹೆರಿಗೆ ಪ್ರಕ್ರಿಯೆಯನ್ನು ನಡೆಸಿರುವುದು ಕಂಡುಬಂದಿದೆ. ಬಹಳ ಮುಖ್ಯವಾಗಿ NRHM ಜಾರಿಗೆ ಬಂದು ಹಲವಾರು ವರ್ಷಗಳು ಕಳೆದಿದ್ದರೂ ಸಹ ಇಂದಿಗೂ ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಅದರ ಬಗೆಗೆ ಅರಿವು ಇಲ್ಲದಂತಾಗಿದೆ ಮತ್ತು ಸರಕಾರಿ ಇಲಾಖೆಗಳಲ್ಲಿ ವೈದ್ಯರನ್ನು ಒಳಗೊಂಡಂತೆ ಮೂಲ ಸೌಲಭ್ಯಗಳು ಇಲ್ಲದೇ ಇರುವುದು ಕೂಡ ಮನೆಗಳಲ್ಲಿಯೇ ಹೆರಿಗೆಗಳಾಗುವುದು ಕಂಡುಬರುತ್ತದೆ.

ಕೋಷ್ಟಕ : ೮ ಗುಂಪಿಗೆ ಸೇರಿದ ಮಹಿಳೆಯರ ಆರೋಗ್ಯ ತಪಾಸಣೆ.

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ .	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್ .ಟಿ	ಶೇ	ಒಟ್ಟು
೦೧	ಸರಕಾರಿ ಆಸ್ಪತ್ರೆ	೪೬	೭೬.೬೭	೪೫	೭೫	೯೧	೪೮	೮೦	೪೭	೭೮.೩೩	೯೫
೦೨	ಖಾಸಗಿ ಆಸ್ಪತ್ರೆ	೧೪	೨೩.೩೩	೧೫	೨೫	೨೯	೧೨	೨೦	೧೩	೨೧.೬೭	೨೫
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕ ೮ರಲ್ಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರ ಆರೋಗ್ಯಕ್ಕೆ ಸಂಬಂಧಿಸಿದಂತೆ ಅವರ ಆರೋಗ್ಯದಲ್ಲಿ ಏನಾದರೂ ಏರುಪೇರುಗಳಾದರೆ ಅಂತಹ ಸಮಯದಲ್ಲಿ ಅವರು ಯಾವ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆ ಮಾಡಿಸುತ್ತಾರೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಹೊಸಪೇಟೆ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ.ಜಾತಿಯ ಶೇ.೭೬.೬೭ರಷ್ಟು ಮತ್ತು ಪ.ಪಂಗಡದ ಶೇ.೭೫ರಷ್ಟು ಮಹಿಳೆಯರು ಅದರಂತೆ ಕೂಡ್ಲಿಗಿ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಪ.ಜಾತಿಯ ಶೇ.೮೦ರಷ್ಟು ಮತ್ತು ಪ.ಪಂಗಡದ ಶೇ.೭೮.೩೩ರಷ್ಟು ಮಹಿಳೆಯರು ತಮ್ಮ ಆರೋಗ್ಯ ತಪಾಸಣೆಗಾಗಿ ಸರಕಾರಿ ಆಸ್ಪತ್ರೆಗೆ ಹೋಗುತ್ತಿರುವುದು ಕಂಡುಬಂದಿದೆ. ಹಾಗೆಯೇ ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೨೩.೩೩ರಷ್ಟು ಹಾಗೂ ಪ.ಪಂಗಡದ ಶೇ.೨೫ರಷ್ಟು, ಅದೇ ಪ್ರಕಾರ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೨೦ರಷ್ಟು ಮತ್ತು ಪ.ಪಂಗಡದ ಶೇ.೨೧.೬೭ರಷ್ಟು ಮಹಿಳೆಯರು ಆರೋಗ್ಯ ತಪಾಸಣೆಯನ್ನು ಖಾಸಗೀ ಆಸ್ಪತ್ರೆಯಲ್ಲಿ ಮಾಡಿಸುತ್ತಿರುವುದು ತಿಳಿದುಬಂದಿದೆ. ಒಟ್ಟಾರೆಯಾಗಿ ಈ ಎರಡು ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ತಮ್ಮ ಆರೋಗ್ಯ ತಪಾಸಣೆಯನ್ನು ಸರಕಾರಿ ಆಸ್ಪತ್ರೆಯಲ್ಲಿ ಮಾಡಿಸುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ.

ಕೋಷ್ಟಕ : ೮.೧ ಗುಂಪಿಗೆ ಸೇರದ ಮಹಿಳೆಯರ ಆರೋಗ್ಯ ತಪಾಸಣೆ.

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್. ಸಿ.	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್ .ಟಿ	ಶೇ	ಒಟ್ಟು
೦೧	ಸರಕಾರಿ ಆಸ್ಪತ್ರೆ	೪೯	೮೧.೬೭	೫೦	೮೩.೩೩	೯೯	೪೮	೮೦	೫೪	೯೦	೧೦೨
೦೨	ಖಾಸಗಿ ಆಸ್ಪತ್ರೆ	೧೧	೧೮.೩೩	೧೦	೧೬.೬೭	೨೧	೧೨	೨೦	೦೬	೧೦	೧೮
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕ ೮.೧ರಲ್ಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಆರೋಗ್ಯಕ್ಕೆ ಸಂಬಂಧಿಸಿದಂತೆ ಅವರ ಆರೋಗ್ಯದಲ್ಲಿ ಏನಾದರೂ ಏರುಪೇರುಗಳಾದರೆ ಅಂತಹ ಸಮಯದಲ್ಲಿ ಅವರು ಯಾವ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆ ಮಾಡಿಸುತ್ತಾರೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಹೊಸಪೇಟೆ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ.ಜಾತಿಯ ಶೇ.೮೧.೬೭ರಷ್ಟು ಮತ್ತು ಪ.ಪಂಗಡದ ಶೇ.೮೩.೩೩ರಷ್ಟು ಮಹಿಳೆಯರು, ಅದರಂತೆ ಕೂಡ್ಲಿಗೆ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಪ.ಜಾತಿಯ ಶೇ೮೦ರಷ್ಟು ಮತ್ತು ಪ.ಪಂಗಡದ ಶೇ.೯೦ರಷ್ಟು ಮಹಿಳೆಯರು ತಮ್ಮ ಆರೋಗ್ಯ ತಪಾಸಣೆಗಾಗಿ ಸರಕಾರಿ ಆಸ್ಪತ್ರೆಗೆ ಹೋಗುತ್ತಿರುವುದು ಕಂಡುಬಂದಿದೆ. ಹಾಗೆಯೇ ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೧೮.೩೩ರಷ್ಟು ಹಾಗೂ ಪ.ಪಂಗಡದ ಶೇ.೧೬.೬೭ರಷ್ಟು, ಅದೇ ಪ್ರಕಾರ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೨೦ರಷ್ಟು ಮತ್ತು ಪ.ಪಂಗಡದ ಶೇ.೧೦ರಷ್ಟು ಮಹಿಳೆಯರು ಆರೋಗ್ಯ ತಪಾಸಣೆಯನ್ನು ಖಾಸಗೀ ಆಸ್ಪತ್ರೆಯಲ್ಲಿ ಮಾಡಿಸುತ್ತಿರುವುದು ತಿಳಿದುಬಂದಿದೆ. ಒಟ್ಟಾರೆಯಾಗಿ ಈ ಎರಡು ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ತಮ್ಮ ಆರೋಗ್ಯ ತಪಾಸಣೆಯನ್ನು ಸರಕಾರಿ ಆಸ್ಪತ್ರೆಯಲ್ಲಿ ಮಾಡಿಸುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ.

ಕೋಷ್ಟಕ : ೯ ಗುಂಪಿಗೆ ಸೇರಿದ ಮಹಿಳೆಯರ ಕುಟುಂಬಗಳ ಪಡಿತರ ಚೀಟಿ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ಬಿ.ಪಿ.ಎಲ್	೪೯	೮೧.೬೭	೫೪	೯೦	೧೦೩	೩೭	೬೧.೬೭	೩೯	೬೫	೭೬
೦೨	ಎ.ಪಿ.ಎಲ್	–	–	–	–	–	–	–	–	–	–
೦೩	ಅಂತ್ಯೋದಯ	೧೧	೧೮.೩೩	೦೬	೧೦	೧೭	೨೩	೩೮.೩೩	೨೧	೩೫	೪೪
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ತಾಲೂಕಿನಲ್ಲಿ ಎರಡು ಪಂಚಾಯತಿಗಳು ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ಮಹಿಳೆಯರು ಯಾವ ರೀತಿಯ ಪಡಿತರ ಚೀಟಿಗಳನ್ನು ಹೊಂದಿದ್ದಾರೆ ಎಂಬುದನ್ನು ಈ ಮೇಲಿನ ಕೋಷ್ಟಕದಲ್ಲಿ ತೋರಿಸಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೮೧.೬೭ರಷ್ಟು ಹಾಗೂ ಪ.ಪಂಗಡದ ಶೇ.೯೦ರಷ್ಟು ಮಹಿಳೆಯರು ಅದರಂತೆ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೬೧.೬೭ರಷ್ಟು ಮತ್ತು ಪ.ಪಂಗಡದ ಶೇ.೬೫ರಷ್ಟು ಮಹಿಳೆಯರು ಬಿ.ಪಿ.ಎಲ್ (ಬಿಲೋ ಪಾವರ್ಟಿ ಲೈನ್) ಪಡಿತರ ಚೀಟಿಯನ್ನು ಹೊಂದಿದ್ದಾರೆ. ಉಳಿದ ಈ ಎರಡು ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಅಂತ್ಯೋದಯ ಪಡಿತರ ಚೀಟಿಯನ್ನು ಹೊಂದಿರುವುದು ಕಂಡುಬರುತ್ತದೆ.

ಕೋಷ್ಟಕ : ೯.೧. ಗುಂಪಿಗೆ ಸೇರದ ಮಹಿಳೆಯರ ಕುಟುಂಬಗಳ ಪಡಿತರ ಚೀಟಿ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್ .ಟಿ	ಶೇ	ಒಟ್ಟು
೦೧	ಬಿ.ಪಿ.ಎಲ್	೪೭	೭೮.೩೩	೪೫	೭೫	೯೨	೩೪	೫೬.೬೭	೩೦	೫೦	೬೪
೦೨	ಎ.ಪಿ.ಎಲ್	–	–	–	–	–	–	–	–	–	–
೦೩	ಅಂತ್ಯೋದಯ	೧೩	೨೧.೬೭	೧೫	೨೫	೨೮	೨೬	೪೩.೩೩	೩೦	೫೦	೫೬
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ತಾಲೂಕಿನಲ್ಲಿ ಎರಡು ಪಂಚಾಯತಿಗಳು ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರದ ಮಹಿಳೆಯರು ಯಾವ ರೀತಿಯ ಪಡಿತರ ಚೀಟಿಗಳನ್ನು ಹೊಂದಿದ್ದಾರೆ ಎಂಬುದನ್ನು ಈ ಮೇಲಿನ ಕೋಷ್ಟಕದಲ್ಲಿ ತೋರಿಸಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೭೮.೩೩ರಷ್ಟು ಹಾಗೂ ಪ.ಪಂಗಡದ ಶೇ.೭೫ರಷ್ಟು ಮಹಿಳೆಯರು, ಅದರಂತೆ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೫೬.೬೭ರಷ್ಟು ಮತ್ತು ಪ.ಪಂಗಡದ ಶೇ.೫೦ರಷ್ಟು ಮಹಿಳೆಯರು ಬಿ.ಪಿ.ಎಲ್ (ಬಿಲೋಪಾವರ್ಟಿ ಲೈನ್) ಪಡಿತರ ಚೀಟಿಯನ್ನು ಹೊಂದಿದ್ದಾರೆ. ಉಳಿದ ಈ ಎರಡು ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಅಂತ್ಯೋದಯ ಪಡಿತರ ಚೀಟಿಯನ್ನು ಹೊಂದಿರುವುದು ಕಂಡುಬರುತ್ತದೆ.

ಕೋಷ್ಟಕ : ೧೦ ಗುಂಪಿಗೆ ಸೇರಿದ ಮಹಿಳೆಯರ ವಸತಿ (ಮನೆಯ ಸ್ವರೂಪ)

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್ .ಟಿ	ಶೇ	ಒಟ್ಟು
೦೧	ಗುಡಿಸಲು	೨೬	೪೩.೩೩	೨೦	೩೩.೩೩	೪೬	೨೭	೪೫	೧೮	೩೦	೪೫
೦೨	ಮಣ್ಣಿನ ಮನೆ	೦೫	೮.೩೩	೦೭	೧೧.೬೭	೧೨	೦೩	೦೫	೦೯	೧೫	೧೨
೦೩	ಶೀಟಿನ ಮನೆ	೨೯	೪೮.೩೪	೩೦	೫೦	೫೯	೩೦	೫೦	೨೪	೪೦	೫೪
೦೪	ಆರ್.ಸಿ.ಸಿ. ಮನೆ	–	–	೦೩	೦೫	೦೩	–	–	೦೯	೧೫	೦೯
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಕೋಷ್ಟಕ ೧೦ರಲ್ಲಿ ಹೊಸಪೇಟೆ ತಾಲೂಕಿನಲ್ಲಿ ಎರಡು ಪಂಚಾಯತಿಗಳು ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರ ವಸತಿಯ ವಿವರವನ್ನು ತಿಳಿಸಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೪೩.೩೩ರಷ್ಟು ಹಾಗೂ ಪ.ಪಂಗಡದ ಶೇ.೩೩.೩೩ರಷ್ಟು ಮಹಿಳೆಯರು. ಅದರಂತೆ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ..೪೫ರಷ್ಟು ಮತ್ತು ಪ.ಪಂಗಡದ ಶೇ.೩೦ರಷ್ಟು ಮಹಿಳೆಯರು ಗುಡಿಸಲು ಮನೆಯಲ್ಲಿ ವಾಸಿಸುತ್ತಿದ್ದಾರೆ. ಹಾಗೆಯೇ ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೪೮.೩೪ರಷ್ಟು ಹಾಗೂ ಪ.ಪಂಗಡದ ಶೇ.೫೦ರಷ್ಟು

ಮತ್ತು ಅದೇ ಪ್ರಕಾರ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೫೦ರಷ್ಟು ಮತ್ತು ಪ.ಪಂಗಡದ ಶೇ.೪೦ರಷ್ಟು ಮಹಿಳೆಯರು ಶೀಟಿನ ಮನೆಯಲ್ಲಿ ವಾಸಿಸುತ್ತಿದ್ದಾರೆ. ಇನ್ನುಳಿದಂತೆ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಮಣ್ಣಿನ ಮನೆಯಲ್ಲಿ ಹಾಗೂ ಆರ್.ಸಿ.ಸಿ. ಮನೆಯಲ್ಲಿ ವಾಸಿಸುತ್ತಿರುವುದು ಕೋಷ್ಟಕದಿಂದ ತಿಳಿದುಬರುತ್ತದೆ. ಒಟ್ಟಾರೆಯಾಗಿ ಈ ಎರಡು ತಾಲೂಕುಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಗುಡಿಸಲು ಮತ್ತು ಶೀಟಿನ ಮನೆಯಲ್ಲಿ ವಾಸಿಸುತ್ತಿರುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ.

ಕೋಷ್ಟಕ : ೧೦.೧. ಗುಂಪಿಗೆ ಸೇರದ ಮಹಿಳೆಯರ ವಸತಿ (ಮನೆಯ ಸ್ವರೂಪ)

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್ .ಟಿ	ಶೇ	ಒಟ್ಟು
೦೧	ಗುಡಿಸಲು	೩೦	೫೦	೩೩	೫೫	೬೩	೪೦	೬೬.೬೭	೪೨	೭೦	೮೨
೦೨	ಮಣ್ಣಿನ ಮನೆ	೦೨	೩.೩೩	೦೭	೧೧.೬೭	೦೯	೦೧	೧.೬೭	೦೫	೮.೩೩	೦೬
೦೩	ಶೀಟಿನ ಮನೆ	೨೮	೪೬.೬೭	೨೦	೩೩.೩೩	೪೮	೧೯	೩೧.೬೬	೧೩	೨೧.೬೭	೩೨
೦೪	ಆರ್.ಸಿ.ಸಿ. ಮನೆ	–	–	–	–	–	–	–	–	–	–
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಕೋಷ್ಟಕ ೧೦.೧.ರಲ್ಲಿ ಹೊಸಪೇಟೆ ತಾಲೂಕಿನಲ್ಲಿ ಎರಡು ಪಂಚಾಯತಿಗಳು ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ವಸತಿಯ ವಿವರವನ್ನು ತಿಳಿಸಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೫೦ರಷ್ಟು ಹಾಗೂ ಪ.ಪಂಗಡದ ಶೇ.೫೫ರಷ್ಟು ಮಹಿಳೆಯರು, ಅದರಂತೆ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೬೬.೬೭ರಷ್ಟು ಮತ್ತು ಪ.ಪಂಗಡದ ಶೇ.೭೦ರಷ್ಟು ಮಹಿಳೆಯರು ಗುಡಿಸಲು ಮನೆಯಲ್ಲಿ ವಾಸಿಸುತ್ತಿದ್ದಾರೆ. ಹಾಗೆಯೇ ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೪೬.೬೭ರಷ್ಟು ಹಾಗೂ ಪ.ಪಂಗಡದ ಶೇ.೩೩.೩೩ರಷ್ಟು ಮತ್ತು ಅದೇ ಪ್ರಕಾರ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೩೧.೬೬ರಷ್ಟು ಮತ್ತು ಪ.ಪಂಗಡದ ಶೇ.೨೧.೬೭ರಷ್ಟು ಮಹಿಳೆಯರು ಶೀಟಿನ ಮನೆಯಲ್ಲಿ ವಾಸಿಸುತ್ತಿದ್ದಾರೆ. ಇನ್ನುಳಿದಂತೆ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಮಣ್ಣಿನ ಮನೆಯಲ್ಲಿ ವಾಸಿಸುತ್ತಿರುವುದು ಕೋಷ್ಟಕದಿಂದ ತಿಳಿದುಬರುತ್ತದೆ. ಒಟ್ಟಾರೆಯಾಗಿ ಈ ಎರಡು ತಾಲೂಕುಗಳಲ್ಲಿ ಗುಂಪಿಗೆ ಸೇರದ ಅಧಿಕ ಸಂಖ್ಯೆಯಲ್ಲಿ ಪರಿಶಿಷ್ಟ ಮಹಿಳೆಯರು ಗುಡಿಸಲು ಮತ್ತು ಶೀಟಿನ ಮನೆಯಲ್ಲಿ ವಾಸಿಸುತ್ತಿರುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ.

ಈ ಮೇಲಿನ ಕೋಷ್ಟಕ ೯, ೯.೧ ಮತ್ತು ಕೋಷ್ಟಕ ೧೦, ೧೦.೧ಗಳಲ್ಲಿ ಹೊಸಪೇಟೆ ಹಾಗೂ ಕೂಡ್ಲಿಗಿ ತಾಲೂಕುಗಳ ಆಯ್ದ ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮತ್ತು

ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಹೊಂದಿರುವ ಪಡಿತರ ಚೀಟಿ ಹಾಗೂ ಅವರ ಮನೆಯ ಸ್ವರೂಪದ ಕುರಿತು ಚರ್ಚಿಸಲಾಗಿದೆ. ಟೈಮ್ಸ್ ಆಫ್ ಇಂಡಿಯಾ (ದಿನಾಂಕ: ಆಗಷ್ಟ್ ೧೦, ೨೦೧೬)ವರದಿ ಪ್ರಕಾರ, ಕರ್ನಾಟಕದಲ್ಲಿ ೮೦ರಿಂದ ೯೦ಲಕ್ಷ ಬಿ.ಪಿ.ಎಲ್. ಕುಟುಂಬಗಳು ಇವೆ. ಈ ಪಡಿತರ ಚೀಟಿಗಳನ್ನು ಹೊಂದಿರುವ ಕುಟುಂಬಗಳಿಗೆ ವಿಶೇಷವಾದ ಯೋಜನೆಗಳು ಜಾರಿಯಲ್ಲಿರುವುದನ್ನು ಕಾಣಬಹುದು. ಮುಖ್ಯವಾಗಿ ವಸತಿ ಯೋಜನೆಗಳು, ಉದ್ಯೋಗಕ್ಕೆ ಸಂಬಂಧಿಸಿದ ಯೋಜನೆಗಳು ಹೀಗೆ ಹಲವಾರು ಯೋಜನೆಗಳು ಬಡತನ ರೇಖೆಗಿಂತ ಕೆಳಗಿನ ಹಂತದಲ್ಲಿರುವ ಕುಟುಂಬಗಳಿಗೆ ಹೆಚ್ಚಿನ ಆಧ್ಯತೆಯನ್ನು ನೀಡುತ್ತಲಿವೆ. ಮೇಲಿನ ಕೋಷ್ಟಕಗಳಿಂದ ಮುಖ್ಯವಾಗಿ ಬಿ.ಪಿ.ಎಲ್. ಪಡಿತರ ಚೀಟಿಯನ್ನು ಹೊಂದಿರುವ ಕುಟುಂಬಗಳಿಗೂ ಮತ್ತು ಅವರು ಹೊಂದಿರುವ ಮನೆಯ ಸ್ವರೂಪಕ್ಕೂ ತುಂಬಾ ವ್ಯತ್ಯಾಸವಿರುವುದನ್ನು ಕಾಣಬಹುದು. ಏಕೆಂದರೆ ಬಿ.ಪಿ.ಎಲ್. ಕಾರ್ಡನ್ನು ಹೊಂದಿರುವ ಕುಟುಂಬಗಳು ಇಂದಿಗೂ ಗುಡಿಸಲು ಮನೆಗಳಲ್ಲಿ ಇರುವುದನ್ನು ಕಾಣಬಹುದು. ಅಂದರೆ ಸರ್ಕಾರ ಜಾರಿಗೆ ತಂದಿರುವ ವಸತಿ ಯೋಜನೆಗಳ ಫಲಾನುಭವಿಗಳಾಗಲು ಇಂದಿಗೂ ಸಾಧ್ಯವಾಗದಿರುವುದು ಕಂಡುಬರುತ್ತದೆ. ಮುಖ್ಯವಾಗಿ ಸ್ತ್ರೀಶಕ್ತಿ ಸಂಘಗಳಿಗೆ ಸೇರಿದ ಮಹಿಳೆಯರು ಸಹ ಗುಡಿಸಲು ಮನೆಗಳಲ್ಲಿ ಇರುವುದನ್ನು ಕಾಣಬಹುದು. ಅಂದರೆ ಸರ್ಕಾರದ ಯೋಜನೆಗಳ ಲಾಭವನ್ನು ಪಡೆಯಲು ಇಂದಿಗೂ ಅವರಿಂದ ಸಾಧ್ಯವಾಗದಿರುವುದನ್ನು ನೋಡಿದರೆ, ಆ ಯೋಜನೆಗಳ ಬಗೆಗೆ ಅವರಿಗೆ ಅರಿವಿಲ್ಲದಿರುವುದು ಕಂಡುಬರುತ್ತದೆ. ಅಂದರೆ ಕುಟುಂಬದಲ್ಲಿ ಮಹಿಳೆಯರು ಯಾವಾಗಲೂ ಪುರುಷನ ಅಡಿಯಾಳಾಗಿಯೇ ಇರುವುದರಿಂದ ಮುಖ್ಯವಾಹಿನಿಯಲ್ಲಿ ಜಾರಿಯಲ್ಲಿರುವಂತಹ ಯಾವುದೇ ಯೋಜನೆಗಳ ಬಗೆಗೆ ಅವರಿಗೆ ಅರಿವು ಮೂಡದಂತೆ ವ್ಯವಸ್ಥೆ ನೋಡಿಕೊಳ್ಳುತ್ತಿರುತ್ತದೆ. ಹಾಗಾಗಿಯೇ ಸ್ತ್ರೀಶಕ್ತಿ ಸಂಘದ ಸದಸ್ಯರಾಗಿರಬಹುದು ಅಥವಾ ಸಂಘಗಳಿಂದ ಹೊರಗಿರುವವರಾಗಿರಬಹುದು ಇವರ್ಯಾರಿಗೂ ಅಭಿವೃದ್ಧಿ ಯೋಜನೆಗಳ ಬಗೆಗೆ ಸಂಪೂರ್ಣವಾದ ಅರಿವು ಇಲ್ಲದಿರುವುದು ಕಂಡುಬರುತ್ತದೆ. ಮುಖ್ಯವಾಗಿ ಸ್ತ್ರೀಶಕ್ತಿ ಸಂಘಗಳು ಕೇವಲ ಹಣವನ್ನು ಕೂಡಿಡುವ ಮತ್ತು ಅದನ್ನು ಸಾಲವಾಗಿ ಕೊಡುವ ಮತ್ತು ಸಾಲದ ಮೇಲಿನ ಬಡ್ಡಿಯನ್ನು ಸಂಗ್ರಹಿಸಿ, ಕೊನೆಯಲ್ಲಿ ಒಟ್ಟು ಹಣವನ್ನು ಹಂಚಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಿರುವುದು ಕಂಡುಬರುತ್ತಿದೆ. ಹೀಗೆ ಮಾಡುವುದರಿಂದ ಸ್ತ್ರೀಶಕ್ತಿ ಸಂಘಗಳ ರಚನೆಯ ಆಶಯವೇ ಸಾಕಾರಗೊಳ್ಳುವುದಿಲ್ಲ. ಹಾಗೆಯೇ ಸ್ತ್ರೀಶಕ್ತಿ ಸಂಘಗಳು ಕಡ್ಡಾಯವಾಗಿ ಸಭೆಗಳನ್ನು ಮಾಡದೇ ಇರುವುದನ್ನು ಕಾಣಬಹುದು. ಒಂದುವೇಳೆ ಮಾಡಿದರೂ ಇವುಗಳು ಹಣ ಸಂಗ್ರಹಕ್ಕೆ ಮಾತ್ರ ಸೀಮಿತವಾಗಿವೆ. ಆದರೆ ಇದರ ಬದಲಾಗಿ ಮಹಿಳಾ ಪರವಾದಂತಹ ಹಲವಾರು ಕಾನೂನುಗಳ ಕುರಿತಂತೆ ಮತ್ತು ಆಗಾಗ್ಗೆ ರೂಪಿಸಲ್ಪಡುವ ಅಭಿವೃದ್ಧಿ ಯೋಜನೆಗಳ ಕುರಿತಂತೆ ಯಾವುದೇ ಬಗೆಯ ಚರ್ಚೆಗಳಾಗಲೀ ಅಥವಾ ವಿಷಯಗಳ ವಿನಿಮಯಗಳಾಗಲೀ ನಡೆಯದಿರುವುದು ಕಂಡುಬರುತ್ತದೆ.

ಹಾಗಾಗಿಯೇ ಸ್ತ್ರೀಶಕ್ತಿ ಸಂಘಗಳ ಸದಸ್ಯರು ಅಭಿವೃದ್ಧಿಯ ಕುರಿತಾದ ಯೋಜನೆಗಳ ಬಗೆಗೆ ಯಾವುದೇ ಅರಿವನ್ನು ಹೊಂದದಂತಹ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಯಾರೂ ಹೊಣೆಗಾರರಲ್ಲ. ಬದಲಾಗಿ ಸಂಘದ ಸದಸ್ಯರೇ ಕಾರಣರಾಗುತ್ತಾರೆ. ಹಾಗಾಗಿಯೇ ಇಂದಿಗೂ ಕೆಲವು ಮಹಿಳೆಯರು ಸ್ತ್ರೀಶಕ್ತಿ ಸಂಘಗಳ ಸದಸ್ಯರು ಆಗಿದ್ದರೂ ಸಹ ಅವರ ಕುಟುಂಬದ ಸ್ವರೂಪವನ್ನು ನೋಡುವುದಾದರೆ ಅವರು ಇಂದಿಗೂ ಗುಡಿಸಲು ಮನೆಗಳಲ್ಲಿ ವಾಸವಾಗಿರುವುದನ್ನು ಕಾಣಬಹುದು. ಮುಖ್ಯವಾಗಿ ಗುಡಿಸಲು ಮುಕ್ತ ರಾಜ್ಯವನ್ನಾಗಿ ಮಾಡಲು ವಸತಿ ಯೋಜನೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಆದರೆ ಇವುಗಳ ಅರಿವು ಇಲ್ಲದೆಯೇ ಇಂದಿಗೂ ಅವುಗಳ ಪ್ರಯೋಜನವನ್ನು ಪಡೆಯದಂತಹ ಸ್ಥಿತಿಯಲ್ಲಿದ್ದಾರೆ. ಇದು ಅವರ ಬಡತನದ ಸ್ಥಿತಿಯನ್ನು ಸೂಚಿಸುತ್ತದೆ. ಅಂದರೆ ಮಹಿಳೆಯರು ಬಡತನದಿಂದ ನರಳುತ್ತಿದ್ದಾರೆ ಎಂಬುದನ್ನು ಗುರುತಿಸಬಹುದು.

ಕೋಷ್ಟಕ : ೧೧ ಗುಂಪಿಗೆ ಸೇರಿದ ಮಹಿಳೆಯರ ಶೌಚಾಲಯಗಳ ವ್ಯವಸ್ಥೆ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್ .ಟಿ	ಶೇ	ಒಟ್ಟು
೦೧	ವೈಯಕ್ತಿಕ ಶೌಚಾಲಯ	೦೧	೧.೬೭	೦೩	೦೫	೦೪	–	–	೦೫	೮.೩೩	೦೫
೦೨	ಸಮುದಾಯ ಶೌಚಾಲಯ	೦೮	೧೩.೩೩	೦೬	೧೦	೧೪	೦೭	೧೧.೬೭	೦೮	೧೩.೩೩	೧೫
೦೩	ಬಯಲು ಶೌಚಾಲಯ	೫೧	೮೫	೫೧	೮೫	೧೦೨	೫೩	೮೮.೩೩	೪೭	೭೮.೩೩	೧೦೦
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕದಲ್ಲಿ ಹೊಸಪೇಟೆ ತಾಲೂಕಿನಲ್ಲಿ ಎರಡು ಪಂಚಾಯತಿಗಳು ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರ ಶೌಚಾಲಯದ ವ್ಯವಸ್ಥೆಯನ್ನು ತೋರಿಸಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೧೩.೩೩ರಷ್ಟು ಹಾಗೂ ಪ.ಪಂಗಡದ ಶೇ.೧೦ರಷ್ಟು ಮಹಿಳೆಯರು, ಅದರಂತೆ ಕೂಡ್ಲಿಗಿ ತಾಲೂಕಿನ ಪ.ಜಾತಿ ಶೇ.೧೧.೬೭ರಷ್ಟು ಹಾಗೂ ಪ.ಪಂಗಡದ ಶೇ.೧೩.೩೩ರಷ್ಟು ಮಹಿಳೆಯರು ಸಮುದಾಯದ ಶೌಚಾಲಯಕ್ಕೆ ಹೋಗುತ್ತಿದ್ದಾರೆ. ಹಾಗೆಯೇ ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೮೫ರಷ್ಟು ಹಾಗೂ ಪ.ಪಂಗಡದ ಶೇ.೮೫ರಷ್ಟು ಮಹಿಳೆಯರು. ಅದೇ ಪ್ರಕಾರ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೮೮.೩೩ರಷ್ಟು ಮತ್ತು ಪ.ಪಂಗಡದ ಶೇ.೭೮.೩೩ರಷ್ಟು ಮಹಿಳೆಯರು ಬಯಲು ಶೌಚಾಲಯಕ್ಕೆ ಹೋಗುತ್ತಿದ್ದಾರೆ. ಇನ್ನುಳಿದಂತೆ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ವೈಯಕ್ತಿಕ ಶೌಚಾಲಯಗಳನ್ನು ಹೊಂದಿರುವುದು ಕೋಷ್ಟಕದಿಂದ

ತಿಳಿದುಬರುತ್ತದೆ. ಒಟ್ಟಾರೆಯಾಗಿ ಎರಡು ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಸಮುದಾಯ ಶೌಚಾಲಯಕ್ಕೆ ಹೋಗುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ.

ಕೋಷ್ಟಕ : ೧೧.೧ ಗುಂಪಿಗೆ ಸೇರದ ಮಹಿಳೆಯರ ಶೌಚಾಲಯಗಳ ವ್ಯವಸ್ಥೆ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ವೈಯಕ್ತಿಕ ಶೌಚಾಲಯ	೦೧	೧.೬೭	೦೧	೧.೬೭	೦೨	–	–	೦೧	೧.೬೭	೦೧
೦೨	ಸಮುದಾಯ ಶೌಚಾಲಯ	೦೯	೧೫	೧೦	೧೬.೬೬	೧೯	೦೬	೧೦	೦೯	೧೫	೧೫
೦೩	ಬಯಲು ಶೌಚಾಲಯ	೫೦	೮೩.೩೩	೪೯	೮೧.೬೭	೯೯	೫೪	೯೦	೫೦	೮೩.೩೩	೧೦೪
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕದಲ್ಲಿ ಹೊಸಪೇಟೆ ತಾಲೂಕಿನಲ್ಲಿ ಎರಡು ಪಂಚಾಯತಿಗಳು ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಶೌಚಾಲಯದ ವ್ಯವಸ್ಥೆಯನ್ನು ತೋರಿಸಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೧೫ರಷ್ಟು ಹಾಗೂ ಪ.ಪಂಗಡದ ಶೇ.೧೬.೬೬ರಷ್ಟು ಮಹಿಳೆಯರು, ಅದರಂತೆ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೧೦ರಷ್ಟು ಹಾಗೂ ಪ.ಪಂಗಡದ ಶೇ.೧೫ರಷ್ಟು ಮಹಿಳೆಯರು ಸಮುದಾಯದ ಶೌಚಾಲಯಕ್ಕೆ ಹೋಗುತ್ತಿದ್ದಾರೆ. ಹಾಗೆಯೇ ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೮೩.೩೩ರಷ್ಟು ಹಾಗೂ ಪ.ಪಂಗಡದ ಶೇ.೮೧.೬೭ರಷ್ಟು ಮಹಿಳೆಯರು, ಅದೇ ಪ್ರಕಾರ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೯೦ರಷ್ಟು ಮತ್ತು ಪ.ಪಂಗಡದ ಶೇ.೮೩.೩೩ರಷ್ಟು ಮಹಿಳೆಯರು ಬಯಲು ಶೌಚಾಲಯಕ್ಕೆ ಹೋಗುತ್ತಿದ್ದಾರೆ. ಇನ್ನುಳಿದಂತೆ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ವೈಯಕ್ತಿಕ ಶೌಚಾಲಯಗಳನ್ನು ಹೊಂದಿರುವುದು ಕೋಷ್ಟಕದಿಂದ ತಿಳಿದುಬರುತ್ತದೆ. ಒಟ್ಟಾರೆಯಾಗಿ ಎರಡು ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಸಮುದಾಯ ಶೌಚಾಲಯಕ್ಕೆ ಹೋಗುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ.

ಶೌಚಾಲಯಗಳು ಪ್ರತಿಯೊಂದು ಕುಟುಂಬಕ್ಕೂ ಅಗತ್ಯವಾದ ಮೂಲ ಸೌಕರ್ಯವಾಗಿದೆ. ಆದರೆ ಗ್ರಾಮೀಣ ಭಾಗಗಳಲ್ಲಿ ಮಹಿಳೆಯರು ಇಂದಿಗೂ ಶೌಚಾಲಯಗಳ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಮುಖ್ಯವಾಗಿ ಈ ಸಮಸ್ಯೆ ಪುರುಷರಿಗಿಂತ ಮಹಿಳೆಯರಿಗೇ ಹೆಚ್ಚಾಗಿ ಕಾಡುವುದನ್ನು ಕಾಣಬಹುದು. ಇದಕ್ಕೆ ಪರಿಹಾರವೆಂಬಂತೆ ಗ್ರಾಮೀಣ ಭಾಗದ ಮಹಿಳೆಯರು ಶೌಚಾಲಯಕ್ಕಾಗಿ ಬಯಲನ್ನು ಆಶ್ರಯಿಸಿದ್ದಾರೆ. ಆದರೆ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಯಾವುದೇ ಕ್ರಮಗಳಿಗೆ ಮುಂದಾಗದಿರುವುದೂ

ಒಂದು ವಿಪರ್ಯಾಸದ ಸಂಗತಿ. ಭಾರತ ಸರ್ಕಾರವು ಬಹಿರ್ದೆಸೆ ಮುಕ್ತ ಸಮಾಜವನ್ನು ನಿರ್ಮಿಸುವ ಕೆಲಸಕ್ಕೆ ಮುಂದಾಗಿರುವುದು ಒಂದು ಉತ್ತಮ ಕೆಲಸವೇ ಸರಿ. ಆದರೆ ಇದರ ಅರಿವನ್ನು ಹೆಚ್ಚಿನ ಸಂಖ್ಯೆಯ ಜನರು ಹೊಂದದೇ ಇರುವುದನ್ನು ಕಾಣಬಹುದು. ಹಾಗಾಗಿಯೇ ಗ್ರಾಮೀಣ ಭಾಗಗಳಲ್ಲಿ ವೈಯಕ್ತಿಕ ಶೌಚಾಲಯಗಳು ಇಲ್ಲದೇ ಇರುವುದು ಕಂಡುಬರುತ್ತದೆ. ಮುಖ್ಯವಾಗಿ ಕೇವಲ ಅರಿವು ಮಾತ್ರ ಇದಕ್ಕೆ ಕಾರಣವಾಗುವುದಿಲ್ಲ, ಬದಲಾಗಿ ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕೆ ಬೇಕಾಗುವ ಸ್ಥಳ, ಆರ್ಥಿಕ ಮಟ್ಟ ಮತ್ತು ಕುಟುಂಬಗಳಲ್ಲಿನ ಪುರುಷರ ಇಚ್ಛಾಶಕ್ತಿ ಇವುಗಳೂ ಸಹ ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕೆ ಅಡ್ಡಿಯುಂಟುಮಾಡುತ್ತಿವೆ. ಹಾಗಾಗಿ ಮಹಿಳೆಯರ ಸಮಸ್ಯೆಗಳನ್ನು ಕುರಿತಾದ ಅರಿವು ಪುರುಷ ವ್ಯವಸ್ಥೆಗೆ ಇರಬೇಕಾದ ಅನಿವಾರ್ಯತೆ ಇದೆ. ಇದರ ಹೊರತಾಗಿ ಮಹಿಳೆಯರು ಸರ್ಕಾರದ ಯಾವ ಲಾಭವನ್ನೂ ಪಡೆಯಲು ಸಾಧ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ವ್ಯವಸ್ಥೆ ರೂಪಿತಗೊಂಡಿದೆ. ಆದರೆ ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮಹಿಳೆಯರು ಈ ಬಗೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ಸಹ ಅವರು ತಮ್ಮ ಸಮಸ್ಯೆಗಳಿಂದ ಹೊರಬರಲು ಯಾವೊಂದು ಪ್ರಯತ್ನವನ್ನೂ ಮಾಡದಿರುವುದು ಕಂಡುಬರುತ್ತಿದೆ. ಸರ್ಕಾರಗಳು ಆಗಾಗ್ಗೆ ಯೋಜನೆಗಳನ್ನು ರೂಪಿಸುತ್ತಲೇ ಇರುತ್ತವೆ. ಆದರೆ ಅವುಗಳು ಅನುಷ್ಠಾನಗೊಳ್ಳುವ ಹಂತದಲ್ಲಿ ಸೋಲುತ್ತಿವೆ. ಒಟ್ಟಾರೆಯಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನ ನಾಲ್ಕು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಸ್ತ್ರೀಶಕ್ತಿ ಗುಂಪುಗಳಿಗೆ ಸೇರಿದ ಮತ್ತು ಸೇರದೇ ಇರುವಂತಹ ಮಹಿಳಾ ಕುಟುಂಬಗಳಲ್ಲಿ ಬಹುತೇಕ ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯಗಳು ಇಲ್ಲದೇ ಇರುವುದನ್ನು ಕಾಣಬಹುದಾಗಿದೆ.

ಕೋಷ್ಟಕ : ೧೨ ಗುಂಪಿಗೆ ಸೇರಿದ ಮಹಿಳೆಯರ ನೀರಿನ ಸೌಲಭ್ಯ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್ .ಟಿ	ಶೇ	ಒಟ್ಟು
೦೧	ವೈಯಕ್ತಿಕ ನಲ್ಲಿಗಳು	೦೬	೧೦	೦೯	೧೫	೧೫	೦೪	೬.೬೭	೦೪	೬.೬೭	೦೮
೦೨	ಸಾರ್ವಜನಿಕ ನಲ್ಲಿಗಳು/ ಟ್ಯಾಂಕುಗಳು	೫೪	೯೦	೫೧	೮೫	೧೦೫	೫೬	೯೩.೩೩	೫೬	೯೩.೩೩	೧೧೨
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿನ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರಿಗೆ ಇರುವ ನೀರಿನ ಸೌಲಭ್ಯವನ್ನು ಈ ಮೇಲಿನ ಕೋಷ್ಟಕದಲ್ಲಿ ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೧೦ರಷ್ಟು ಹಾಗೂ ಪ.ಪಂಗಡದ ಶೇ.೧೫ರಷ್ಟು ಮಹಿಳೆಯರು, ಅದರಂತೆಯೇ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೬.೬೭ರಷ್ಟು ಮತ್ತು ಪ.ಪಂಗಡದ

ಶೇ.೬.೬೭ರಷ್ಟು ಮಹಿಳೆಯರು ತಮ್ಮ ಮನೆಗಳಲ್ಲಿ ವೈಯಕ್ತಿಕ ನಲ್ಲಿಗಳನ್ನು ಹೊಂದಿದ್ದಾರೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೯೦ರಷ್ಟು ಹಾಗೂ ಪ.ಪಂಗಡದ ಶೇ.೮೫ರಷ್ಟು ಮಹಿಳೆಯರು ಹಾಗೆಯೇ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೯೩.೩೩ರಷ್ಟು ಮತ್ತು ಪ.ಪಂಗಡದ ಶೇ.೯೩.೩೩ರಷ್ಟು ಮಹಿಳೆಯರು ನೀರಿಗಾಗಿ ಸಾರ್ವಜನಿಕ ನಲ್ಲಿಗಳನ್ನು ಅಥವಾ ಟ್ಯಾಂಕುಗಳನ್ನು ಅವಲಂಬಿಸಿರುವುದು ಕಂಡುಬಂದಿದೆ. ಒಟ್ಟಾರೆಯಾಗಿ ಈ ಎರಡು ತಾಲೂಕುಗಳಲ್ಲಿ ಅಧಿಕ ಸಂಖ್ಯೆಯ ಪರಿಶಿಷ್ಟ ಮಹಿಳೆಯರು ನೀರಿಗಾಗಿ ಸಾರ್ವಜನಿಕ ನಲ್ಲಿಗಳನ್ನು ಅವಲಂಭಿಸಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ.

ಕೋಷ್ಟಕ : ೧೨.೧ ಗುಂಪಿಗೆ ಸೇರದ ಮಹಿಳೆಯರ ನೀರಿನ ಸೌಲಭ್ಯ

ಕ್ರಸಂ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ವೈಯಕ್ತಿಕ ನಲ್ಲಿಗಳು	೦೪	೬.೬೭	೦೭	೧೧.೬೭	೧೧	೦೩	೦೫	೦೩	೩.೩೩	೦೫
೦೨	ಸಾರ್ವಜನಿಕ ನಲ್ಲಿಗಳು/ಟ್ಯಾಂಕುಗಳು	೫೬	೯೩.೩೩	೫೩	೮೮.೩೩	೧೦೯	೫೭	೯೫	೫೮	೯೬.೬೭	೧೧೫
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿನ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರಿಗೆ ಇರುವ ನೀರಿನ ಸೌಲಭ್ಯವನ್ನು ಈ ಮೇಲಿನ ಕೋಷ್ಟಕದಲ್ಲಿ ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೬.೬೭ರಷ್ಟು ಹಾಗೂ ಪ.ಪಂಗಡದ ಶೇ.೧೧.೬೭ರಷ್ಟು ಮಹಿಳೆಯರು, ಅದರಂತೆಯೇ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೫ರಷ್ಟು ಮತ್ತು ಪ.ಪಂಗಡದ ಶೇ.೩.೩೩ರಷ್ಟು ಮಹಿಳೆಯರು ತಮ್ಮ ಮನೆಗಳಲ್ಲಿ ವೈಯಕ್ತಿಕ ನಲ್ಲಿಗಳನ್ನು ಹೊಂದಿದ್ದಾರೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೯೩.೩೩ರಷ್ಟು ಹಾಗೂ ಪ.ಪಂಗಡದ ಶೇ.೮೮.೩೩ರಷ್ಟು ಮಹಿಳೆಯರು ಹಾಗೆಯೇ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೯೫ರಷ್ಟು ಮತ್ತು ಪ.ಪಂಗಡದ ಶೇ.೯೬.೬೭ರಷ್ಟು ಮಹಿಳೆಯರು ನೀರಿಗಾಗಿ ಸಾರ್ವಜನಿಕ ನಲ್ಲಿಗಳನ್ನು ಅಥವಾ ಟ್ಯಾಂಕುಗಳನ್ನು ಅವಲಂಬಿಸಿರುವುದು ಕಂಡುಬಂದಿದೆ. ಒಟ್ಟಾರೆಯಾಗಿ ಈ ಎರಡು ತಾಲೂಕುಗಳಲ್ಲಿ ಅಧಿಕ ಸಂಖ್ಯೆಯ ಪರಿಶಿಷ್ಟ ಮಹಿಳೆಯರು ನೀರಿಗಾಗಿ ಸಾರ್ವಜನಿಕ ನಲ್ಲಿಗಳನ್ನು ಅವಲಂಭಿಸಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ.

ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ಆಯ್ದ ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರಿಗೆ ಇರುವ ನೀರಿನ ಸೌಲಭ್ಯವನ್ನು ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಗುಂಪಿಗೆ ಸೇರಿದ ಎಸ್.ಸಿ(ಶೇ.೯೦), ಎಸ್.ಟಿ(ಶೇ.೮೫) ಹಾಗೂ ಗುಂಪಿಗೆ ಸೇರದ

ಎಸ್.ಸಿ(ಶೇ.೯೩.೩೩), ಎಸ್.ಟಿ(ಶೇ.೮೮.೩೩) ಹಾಗೆಯೇ ಕೂಡ್ಲಿಗಿ ತಾಲೂಕಿನಲ್ಲಿ ಗುಂಪಿಗೆ ಸೇರಿದ ಎಸ್.ಸಿ(ಶೇ.೯೩.೩೩), ಎಸ್.ಟಿ(ಶೇ.೯೩.೩೩) ಹಾಗೂ ಗುಂಪಿಗೆ ಸೇರದ ಎಸ್.ಸಿ(ಶೇ.೯೫), ಎಸ್.ಟಿ(ಶೇ.೯೬.೬೭ರಷ್ಟು) ಪರಿಶಿಷ್ಟ ಮಹಿಳೆಯರು ನೀರಿಗಾಗಿ ಸಾರ್ವಜನಿಕನಲ್ಲಿಗಳನ್ನು ಅವಲಂಬಿಸಿದ್ದಾರೆ. ಒಟ್ಟಾರೆಯಾಗಿ ಈ ಎರಡು ತಾಲೂಕುಗಳ ಆಯ್ದ ಗ್ರಾಮಪಂಚಾಯತಿಗಳಲ್ಲಿ ಗುಂಪಿಗೆ ಸೇರಿದ ಮತ್ತು ಸೇರದ ಮಹಿಳೆಯರುಬಧಿಕ ಸಂಖ್ಯೆಯಲ್ಲಿ ನೀರಿಗಾಗಿ ಸಾರ್ವಜನಿಕ ನಲ್ಲಿಗಳನ್ನು ಅಥವಾ ಟ್ಯಾಂಕುಗಳನ್ನು ಅವಲಂಬಿಸಿರುವುದು ಕಂಡುಬಂದಿದೆ. ಒಟ್ಟಾರೆಯಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿನ ಸ್ತ್ರೀಶಕ್ತಿ ಗುಂಪುಗಳಿಗೆ ಸೇರಿದ ಮಹಿಳೆಯರು ಮತ್ತು ಗುಂಪಿಗೆ ಸೇರದೇ ಇರುವಂತಹ ಮಹಿಳೆಯರ ಸಾಮಾಜಿಕ ಸ್ಥಾನಮಾನ ಯಾವ ಹಂತದಲ್ಲಿ ಇದೆ ಎಂಬುದನ್ನು ಮೇಲಿನ ಎಲ್ಲಾ ಕೋಷ್ಟಕಗಳಿಂದ ತಿಳಿದುಬರುತ್ತದೆ.

ಅಧ್ಯಾಯ : ಏಳು

ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಆರ್ಥಿಕ ಸ್ಥಿತಿಗತಿ

ಅಧ್ಯಾಯ : ಏಳು

ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಆರ್ಥಿಕ ಸ್ಥಿತಿಗತಿ

ಪ್ರತಿಯೊಂದು ಸಮುದಾಯದಲ್ಲಿ ಮಹಿಳೆಯರು ಆರ್ಥಿಕವಾಗಿ ಸದೃಢರಾಗಲೇಬೇಕು. ಕಾರಣ ವಾಸ್ತವದಲ್ಲಿ ಕುಟುಂಬದ ಎಲ್ಲಾ ಆಗು-ಹೋಗುಗಳನ್ನು ಮಹಿಳೆಯರೇ ನಿರ್ವಹಿಸಿಕೊಂಡು ಹೋಗುತ್ತಿರುತ್ತಾರೆ. ಆ ಕಾರಣಕ್ಕಾಗಿ ಮಹಿಳೆಯರು ಯಾವಾಗಲೂ ಕುಟುಂಬದ ಹಿತಕ್ಕಾಗಿ ತಮ್ಮ ಆರ್ಥಿಕ ಸ್ಥಿತಿ ಉತ್ತಮ ಪಡಿಸಿಕೊಳ್ಳಲು ಹವಣಿಸುತ್ತಿರುತ್ತಾರೆ. ಹಾಗಾಗಿ ಗ್ರಾಮೀಣ ಪ್ರದೇಶದ ಮಹಿಳೆಯರು ಈ ನಿಟ್ಟಿನಲ್ಲಿ ಮುಂದುವರೆಯಲು ಹಲವಾರು ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದಾರೆ. ತಮ್ಮ ದುಡಿತದಿಂದ ಬಂದ ಹಣವನ್ನು ಕುಟುಂಬಕ್ಕೆ ವಿನಿಯೋಗಿಸಿಕೊಳ್ಳುವುದರ ಜೊತೆಗೆ ಅಲ್ಪ ಸ್ವಲ್ಪ ಹಣವನ್ನು ಕೂಡಿಟ್ಟುಕೊಳ್ಳುತ್ತಾರೆ. ಹೀಗೆ ಕೂಡಿಟ್ಟ ಹಣವನ್ನು ಸದಸ್ಯ ಮಹಿಳೆಯರು ಸ್ತ್ರೀಶಕ್ತಿ ಸಂಘಗಳಲ್ಲಿ ಜಮಾವಣೆ ಮಾಡುತ್ತಾರೆ. ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಮಾಡುವ ಎಲ್ಲಾ ಮಹಿಳೆಯರು ಈ ಸ್ತ್ರೀಶಕ್ತಿ ಸಂಘಗಳಿಗೆ ಸೇರಿರುತ್ತಾರೆ ಎಂದು ಹೇಳಲಾಗುವುದಿಲ್ಲ. ಯಾರಿಗೆ ಇವುಗಳಲ್ಲಿ ಆಸಕ್ತಿ ಇರುವವರು ಮತ್ತು ಆರ್ಥಿಕವಾಗಿ ಸಂಕಷ್ಟದಲ್ಲಿರುವವರು ಸ್ತ್ರೀಶಕ್ತಿ ಸಂಘಗಳ ಸದಸ್ಯರಾಗಿರುತ್ತಾರೆ. ಉಳಿದಂತೆ ಈ ಸಂಘಗಳಿಂದ ಹೊರಗುಳಿದಿರುತ್ತಾರೆ. ಮುಖ್ಯವಾಗಿ ಈ ಅಧ್ಯಾಯದಲ್ಲಿ ಪರಿಶಿಷ್ಟ ಮಹಿಳೆಯರು ಸಂಘಗಳಲ್ಲಿ ಪಾಲ್ಗೊಳ್ಳುವ ಮೂಲಕ ಹಾಗೂ ಸಂಘದ ಸದಸ್ಯರಲ್ಲದ ಪರಿಶಿಷ್ಟ ಮಹಿಳೆಯರು ಸಂಘಗಳಿಗೆ ದೂರವಿರುವುದರಿಂದ ಆರ್ಥಿಕವಾಗಿ ಯಾವ ರೀತಿಯಲ್ಲಿ ಜೀವನವನ್ನು ಸಾಗಿಸುತ್ತಿದ್ದಾರೆ ಎನ್ನುವುದನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ. ಪ್ರತಿಯೊಂದು ಸಮಾಜದಲ್ಲಿ ವಿಭಿನ್ನವಾದ ಜಾತಿ, ಸಮುದಾಯಕ್ಕೆ ಸೇರಿದ ಜನರಿರುತ್ತಾರೆ. ವಿಭಿನ್ನ ಜಾತಿಗೆ ಸೇರಿದ ಜನರು ವಿಭಿನ್ನವಾದ ಜೀವನಮಟ್ಟವನ್ನು ಹೊಂದಿರುತ್ತಾರೆ. ಇದೇ ರೀತಿಯಾಗಿ ಅವರು ಸಮಾಜದ ಆಗು-ಹೋಗುಗಳಿಗೆ ಬೇರೆ ಬೇರೆ ರೀತಿಯಾಗಿ ಸ್ಪಂದಿಸುತ್ತಾರೆ. ಆದ್ದರಿಂದ ಗುಂಪಿನ ಸದಸ್ಯರು ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಆರ್ಥಿಕ ಸ್ಥಿತಿಗತಿ ತಿಳಿಯುವ ಪ್ರಯತ್ನ ಮಾಡಲಾಗಿದೆ.

ಕೋಷ್ಟಕ ೧ ಗುಂಪಿಗೆ ಸೇರಿದ ಮಹಿಳೆಯರ ಆದಾಯದ ಮೂಲ

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್. ಟಿ	ಶೇ	ಒಟ್ಟು
೦೧	ಕೂಲಿ	೫೬	೯೩.೩೩	೪೧	೬೮.೩೩	೯೭	೫೭	೯೫	೫೦	೮೩.೩೩	೧೦೭
೦೨	ಟೈಲರಿಂಗ್	೦೨	೩.೩೩	೦೪	೬.೬೭	೦೬	೦೧	೧.೬೭	೦೫	೮.೩೩	೦೬
೦೩	ಹೈನುಗಾರಿಕೆ	೦೧	೧.೬೭	೦೯	೧೫	೧೦	–	–	೦೨	೩.೩೩	೦೨
೦೪	ಹೊಟೇಲ್	–	–	೦೨	೩.೩೩	೦೨	–	–	೦೧	೧.೬೭	೦೧
೦೫	ಸಣ್ಣ ವ್ಯಾಪಾರ (ತರಕಾರಿ ಮಾರುವುದು ಸಣ್ಣ ಅಂಗಡಿ)	೦೧	೧.೬೭	೦೪	೬.೬೭	೦೫	೦೨	೩.೩೩	೦೨	೩.೩೩	೦೪
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಹಾಗೂ ಕೂಡ್ಲಿಗಿ ತಾಲೂಕಿನ ಚಿರತಗುಂಡು ಮತ್ತು ರಾಂಪುರ ಗ್ರಾಮ ಪಂಚಾಯತಿಗಳಲ್ಲಿನ ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮಹಿಳೆಯರ ತಮ್ಮ ಆದಾಯದ ಮೂಲವನ್ನು ಕೋಷ್ಟಕ ೧ರಲ್ಲಿ ತೋರಿಸಲಾಗಿದೆ. ಹೊಸಪೇಟೆ ತಾಲೂಕಿನ ಎರಡೂ ಗ್ರಾಮಪಂಚಾಯತಿಗಳಲ್ಲಿ ಪ.ಜಾತಿ ಮಹಿಳೆಯರು ಶೇ.೯೩.೩೩ರಷ್ಟು ಹಾಗೂ ಪ.ಪಂಗಡದ ಮಹಿಳೆಯರು ಶೇ.೬೮.೩೩ರಷ್ಟು ಕೂಲಿಯನ್ನೇ ಅವಲಂಬಿಸಿ ತಮ್ಮ ಜೀವನವನ್ನು ಮುಂದುವರಿಸುತ್ತಿದ್ದಾರೆ. ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿ ಮಹಿಳೆಯರು ಶೇ.೯೫ರಷ್ಟು ಮತ್ತು ಪ.ಪಂಗಡ ಶೇ.೮೩.೩೩ರಷ್ಟು ಮಹಿಳೆಯರು ಕೂಲಿಯಿಂದಲೇ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಒಟ್ಟಾರೆಯಾಗಿ ಮೇಲಿನ ಕೋಷ್ಟಕದಲ್ಲಿ ತೋರಿಸಿದಂತೆ ಗುಂಪಿಗೆ ಸೇರಿದ ಪ.ಜಾತಿ ಮತ್ತು ಪ.ಪಂಗಡ ಮಹಿಳೆಯರ ತಮ್ಮ ಆದಾಯದ ಮೂಲ ಕೂಲಿಯೇ ಹೆಚ್ಚಾಗಿ ಕಂಡುಬಂದಿದೆ. ಇನ್ನುಳಿದಂತೆ ಇವರ ಕುಟುಂಬಕ್ಕೆ ಟೈಲರಿಂಗ್, ಹೈನುಗಾರಿಕೆ, ಹೋಟೆಲ್ ಮತ್ತು ಸಣ್ಣ ವ್ಯಾಪಾರ (ತರಕಾರಿ ಮಾರುವುದು, ಸಣ್ಣ ಡಬ್ಬಿ ಅಂಗಡಿ ಮುಂತಾದವುಗಳು) ಆದಾಯದ ಮೂಲಗಳಾಗಿವೆ. ಎರಡೂ ತಾಲೂಕುಗಳಲ್ಲಿ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಕೂಲಿ ಕೆಲಸ ಮಾಡುತ್ತಲೇ ಸ್ತ್ರೀಶಕ್ತಿ ಗುಂಪುಗಳಲ್ಲಿ ಅಲ್ಪಸ್ವಲ್ಪ ಉಳಿತಾಯವನ್ನು ಮಾಡುತ್ತಿರುವುದು ಕಂಡಬಂದಿದೆ.

ಕೋಷ್ಟಕ ೧.೧. ಗುಂಪಿಗೆ ಸೇರದ ಮಹಿಳೆಯರ ಆದಾಯದ ಮೂಲ

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್. ಸಿ	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್. ಟಿ	ಶೇ	ಒಟ್ಟು
೦೧	ಕೂಲಿ	೫೮	೯೬.೬೭	೫೨	೮೬.೬೭	೧೧೦	೪೭	೭೮.೩೩	೪೯	೮೧.೬೭	೯೬
೦೨	ಟೈಲರಿಂಗ್	೦೧	೧.೬೭	೦೩	೫	೦೪	೦೧	೧.೬೭	೦೬	೧೦	೦೭
೦೩	ಹೈನುಗಾರಿಕೆ	೦೧	೧.೬೬	೦೨	೩.೩೩	೦೩	೦೦	–	೦೪	೬.೬೭	೦೪
೦೪	ಹೋಟೇಲ್	–	–	೦೧	೧.೬೭	೦೧	೦೨	೩.೩೩	೦೧	೧.೬೬	೦೩
೦೫	ಸಣ್ಣ ವ್ಯಾಪಾರ (ತರಕಾರಿ ಮಾರುವುದು ಸಣ್ಣ ಅಂಗಡಿ)	–	–	೦೨	೩. ೩೩	೦೨	೧೦	೧೬.೬೭	–	–	೧೦
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ತಾಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಹಾಗೂ ಕೂಡ್ಲಿಗಿ ತಾಲೂಕಿನ ಚಿರತಗುಂಡು ಮತ್ತು ರಾಂಪುರ ಗ್ರಾಮ ಪಂಚಾಯತಿಗಳಲ್ಲಿನ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಕುಟುಂಬಕ್ಕೆ ಇರುವ ಆದಾಯದ ಮೂಲವನ್ನು ಕೋಷ್ಟಕ ೧.೧ರಲ್ಲಿ ತೋರಿಸಲಾಗಿದೆ. ಪ.ಜಾತಿ ಶೇ.೯೬.೬೭ರಷ್ಟು ಮತ್ತು ಪ.ಪಂಗಡ ಶೇ.೮೬.೬೭ರಷ್ಟು ಮಹಿಳೆಯರ ಕುಟುಂಬಕ್ಕೆ ಕೂಲಿಯೇ ಆದಾಯದ ಮೂಲವಾಗಿದೆ. ಹಾಗೆಯೇ ಕೂಡ್ಲಿಗಿ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರದ ಪ.ಜಾತಿ ಶೇ.೭೮.೩೩ರಷ್ಟು ಮತ್ತು ಪ.ಪಂಗಡ ಶೇ.೮೧.೬೭ರಷ್ಟು ಮಹಿಳೆಯರ ಕುಟುಂಬಕ್ಕೆ ಕೂಲಿಯೇ ಆದಾಯದ ಮೂಲವಾಗಿದೆ. ಇನ್ನುಳಿದ ಟೈಲರಿಂಗ್, ಹೈನುಗಾರಿಕೆ, ಹೋಟೆಲ್ ಮತ್ತು ಸಣ್ಣ ವ್ಯಾಪಾರ (ತರಾಕಿರ ಮಾರುವುದು, ಸಣ್ಣ ಡಬ್ಬಿ ಅಂಗಡಿ) ಮುಂತಾದವುಗಳನ್ನು ಇವರ ಕುಟುಂಬಕ್ಕೆ ಆದಾಯದ ಮೂಲಗಳಾಗಿವೆ. ಒಟ್ಟಾರೆಯಾಗಿ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಕೂಲಿಯಾದರಿತ ಕೆಲಸದಲ್ಲಿ ತೊಡಗಿಕೊಂಡಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬಂದಿದೆ.

ಆದಾಯ ಒಬ್ಬ ವ್ಯಕ್ತಿಯ ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ಅಳೆಯುವ ಪ್ರಮುಖ ಸಾಧನವಾಗಿದೆ. ಆದಾಯಕ್ಕೋಸ್ಕರ ಪ್ರತಿಯೊಬ್ಬರು ಶ್ರಮಪಡಬೇಕಾಗುತ್ತದೆ. ಅದರಲ್ಲೂ ವಿಶೇಷವಾಗಿ ಮಹಿಳೆಯರು ಆದಾಯವನ್ನು ಗಳಿಸುವಲ್ಲಿ ಅತ್ಯಂತ ಶ್ರಮವಹಿಸಬೇಕಾಗುತ್ತದೆ. ಕುಟುಂಬದ ಜವಾಬ್ದಾರಿಯನ್ನು ಹೊತ್ತು ಹಗಲಿಡೀ ದುಡಿದು ಮಕ್ಕಳ ಲಾಲನೆ-ಪಾಲನೆ ಮಾಡಬೇಕಾಗುತ್ತದೆ. ಅದರಲ್ಲೂ ಸ್ತ್ರೀಶಕ್ತಿ ಗುಂಪುಗಳಿಗೆ ಸೇರಿದ ಪರಿಶಿಷ್ಟ ಮಹಿಳೆಯರು ನಿಧಾನಗತಿಯಲ್ಲಿ ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಆದರೆ ಗುಂಪುಗಳಿಂದ ಹೊರಗುಳಿದ ಪರಿಶಿಷ್ಟ ಮಹಿಳೆಯರ ಪಾಡಂತೂ ಅತ್ಯಂತ ಶೋಚನೀಯವಾಗಿದೆ.

ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ(ಶೇ.೯೩.೩), ಎಸ್.ಟಿ(ಶೇ.೬೮.೩೩) ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ(ಶೇ.೯೫), ಎಸ್.ಟಿ(ಶೇ.೮೩.೩೩ರಷ್ಟು) ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಕೂಲಿ ಕೆಲಸ ಮಾಡಿ ಅದರಿಂದ ಗುಂಪುಗಳ ಮೂಲಕ ಉಳಿತಾಯ ಮಾಡಿ ಅವರ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುತ್ತಿದ್ದಾರೆ. ಗುಂಪುಗಳಿಂದ ಸಾಲ ಪಡೆದು ಹೈನುಗಾರಿಕೆ, ಹೋಟೆಲ್, ಸಣ್ಣವ್ಯಾಪಾರ ಮಾಡುವುದರ ಮುಖಾಂತರ ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಆದರೆ ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ(ಶೇ.೯೬.೬೭), ಎಸ್.ಟಿ(ಶೇ.೮೬.೬೭) ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ(ಶೇ.೭೮.೩೩), ಎಸ್.ಟಿ(ಶೇ.೮೧.೬೭ರಷ್ಟು) ಗುಂಪುಗಳಿಗೆ ಸೇರದ ಪರಿಶಿಷ್ಟ ಮಹಿಳೆಯರು ಕೂಲಿ ಮಾಡಿ ಗಳಿಸಿದ ಹಣದಲ್ಲೇ ಅತ್ಯಂತ ಕಡುಬಡತನದಲ್ಲಿ ಜೀವನವನ್ನು ಸಾಗಿಸುತ್ತಿರುವುದು ಕಂಡುಬಂದಿದೆ. ಈ ಪ್ರದೇಶದಲ್ಲಿ ಕೂಲಿಯಲ್ಲಿ ಪುರುಷರ ಹಾಗೂ ಮಹಿಳೆಯರ ನಡುವೆ ತಾರತಮ್ಯ ಇರುವುದು ಕಂಡುಬರುತ್ತದೆ. ಅಂದರೆ ಮಹಿಳೆಯರು ತಮ್ಮ ಜೀವನಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಆದಾಯದ ಮೂಲ ಅಸಂಘಟಿತ ವಲಯದ್ದಾಗಿದೆ. ಇಲ್ಲಿ ಎಲ್ಲಾ ಬಗೆಯ ತಾರತಮ್ಯಗಳು ಇರುವುದನ್ನು ಕಾಣಬಹುದು. ಅಂದರೆ ವೇತನದಲ್ಲಿ, ಕೆಲಸ ಮಾಡುವ ಸ್ವರೂಪದಲ್ಲಿ, ಸೇವೆಗಳ ವಿಷಯದಲ್ಲಿ ಎಲ್ಲಾ ಸಂದರ್ಭಗಳಲ್ಲೂ ತಾರತಮ್ಯವಿರುವುದನ್ನು ಕಾಣಬಹುದು. ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರು ಎಷ್ಟೇ ದುಡಿದರೂ ಸಹ ಅವರ ದುಡಿತದಿಂದ ಬಂದಂತಹ ಆದಾಯವನ್ನು ಖರ್ಚು ಮಾಡುವಂತಹ ಸ್ವಾತಂತ್ರ್ಯವನ್ನು ಪಡೆದುಕೊಂಡಿರದೇ ಇರುವುದನ್ನು ಕಾಣಬಹುದು. ಹಾಗಾಗಿಯೇ ಮಹಿಳೆಯರು ಸ್ತ್ರೀಶಕ್ತಿ ಸಂಘಗಳಲ್ಲಿನ ಸದಸ್ಯತ್ವದ ಕಾರಣದಿಂದ ಅಲ್ಪಸ್ವಲ್ಪ ಹಣವನ್ನು ಉಳಿತಾಯ ಮಾಡುತ್ತಿದ್ದಾರೆ. ಇದೇ ಅವರ ಸಬಲತೆಗೆ ಕಾರಣವಾಗುತ್ತಿರುವುದು ಕಂಡುಬರುತ್ತಿದೆ. ಇನ್ನು ಸ್ತ್ರೀಶಕ್ತಿ ಸಂಘಗಳಿಗೆ ಸೇರದೇ ಇರುವಂತಹ ಮಹಿಳೆಯರ ಪರಿಸ್ಥಿತಿಯಂತೂ ತುಂಬಾ ಚಿಂತಾಜನಕವಾಗಿದೆ. ಅಂದರೆ ಇವರು ತಾವು ದುಡಿದ ಹಣವನ್ನು ಕುಟುಂಬಕ್ಕೆ ವಿನಿಯೋಗ ಮಾಡಿಕೊಳ್ಳುವುದರ ಜೊತೆಗೆ ಆ ಹಣವನ್ನು ತಮ್ಮ ಸ್ವಂತ ಖರ್ಚಿಗಾಗಿ ಬಳಸುವಂತಹ ಅಥವಾ ಉಳಿತಾಯ ಮಾಡುವಂತಹ ಯಾವುದೇ ಸ್ವಾತಂತ್ರ್ಯವನ್ನು ಪಡೆದುಕೊಂಡಿರದೇ ಇರುವುದನ್ನು ಕಾಣಬಹುದಾಗಿದೆ. ಒಟ್ಟಾರೆಯಾಗಿ ಸ್ತ್ರೀಶಕ್ತಿ ಗುಂಪುಗಳಿಗೆ ಸೇರಿದ ಮಹಿಳೆಯರು ಮತ್ತು ಸಂಘಗಳಿಗೆ ಸೇರದೇ ಇರುವಂತಹ ಮಹಿಳೆಯರ ಆರ್ಥಿಕ ಸ್ಥಿತಿಗತಿಗಳಲ್ಲಿ ತುಂಬಾ ಭಿನ್ನತೆ ಇರುವುದನ್ನು ಕಾಣಬಹುದು.

ಕೋಷ್ಟಕ ೨ ಗುಂಪಿಗೆ ಸೇರಿದ ಮಹಿಳೆಯರ ಸಾಲದ ಮೂಲ

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್. ಸಿ	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್. ಟಿ	ಶೇ	ಒಟ್ಟು
೦೧	ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್	೧೮	೩೦	೧೯	೩೧.೬೭	೩೭	೧೭	೨೮.೩೩	೧೫	೨೫	೩೨
೦೨	ಸಿಂಡಿಕೇಟ್ ಬ್ಯಾಂಕ್	೧೫	೨೫	೧೫	೨೫	೩೦	೧೩	೨೧.೬೭	೧೭	೨೮.೩೩	೩೦
೦೩	ಸ್ಟೇಟ್ ಬ್ಯಾಂಕ್ ಆಫ್ ಮೈಸೂರು	೧೦	೧೬.೬೭	೧೪	೨೩.೩೩	೨೪	೧೦	೧೬.೬೭	೧೪	೨೩.೩೩	೨೪
೦೪	ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್	೧೭	೨೮.೩೩	೧೨	೨೦	೨೯	೨೦	೩೩.೩೩	೧೪	೨೩.೩೩	೩೪
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಕೋಷ್ಟಕ ೨ರಲ್ಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ನಾಲ್ಕು ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರ ಸಾಲದ ಮೂಲವನ್ನು ವಿವರಿಸಲಾಗಿದೆ. ಈ ಎರಡು ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಹೆಚ್ಚಾಗಿ ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್‌ನಲ್ಲಿ ಸಾಲವನ್ನು ಪಡೆದುಕೊಂಡಿದ್ದಾರೆ. ಇನ್ನುಳಿದಂತೆ ಸಿಂಡಿಕೇಟ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತು ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್‌ನಲ್ಲಿ ಇವರು ಸಾಲವನ್ನು ತೆಗೆದುಕೊಂಡಿದ್ದಾರೆ. ಒಟ್ಟಾರೆಯಾಗಿ ಎರಡು ತಾಲೂಕಿನ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ ಗುಂಪಿನ ಪರಿಶಿಷ್ಟ ಮಹಿಳೆಯರು ಬ್ಯಾಂಕುಗಳನ್ನು ಹೊರತುಪಡಿಸಿದರೆ ಬೇರೆ ಯಾವುದೇ ಖಾಸಗೀ ವ್ಯಕ್ತಿಗಳ (ಜಮೀನ್ದಾರರು, ಹಣದ ಲೇವಾದೇವಿದಾರರು ಮುಂತಾದ) ಬಳಿ ಸಾಲವನ್ನು ಪಡೆಯದಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮಾಹಿತಿದಾರರು ತಿಳಿಸಿದ್ದಾರೆ.

ಕೋಷ್ಟಕ ೨.೧ ಗುಂಪಿಗೆ ಸೇರದ ಮಹಿಳೆಯರ ಸಾಲದ ಮೂಲ

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್. ಸಿ	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್. ಟಿ	ಶೇ	ಒಟ್ಟು
೦೧	ಸಂಬಂಧಿಕರು	೧೦	೧೬.೬೭	೦೯	೦೫	೧೯	೧೨	೨೦	೧೫	೨೫	೨೭
೦೨	ಹಣದ ಲೇವಾದೇವಿಗಾರರು	೧೧	೧೮.೩೩	೧೫	೨೫	೨೬	೧೦	೧೬.೬೭	೧೭	೨೮.೩೩	೨೭
೦೩	ಜಮೀನ್ದಾರರು	೩೯	೬೫	೩೪	೫೬.೬೭	೭೩	೩೮	೬೩.೩೮	೨೮	೪೬.೬೭	೬೬
೦೪	ವಾಣಿಜ್ಯ ಬ್ಯಾಂಕುಗಳು	–	–	–	–	–	–	–	–	–	–
೦೫	ಇತರೆ ಸಂಸ್ಥೆಗಳು	–	–	೦೨	೩.೩೩	೦೨	–	–	–	–	–
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಮೇಲಿನ ಕೋಷ್ಟಕ ೨.೧ರಲ್ಲಿ ಹೊಸಪೇಟೆ ತಾಲೂಕು ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ಬರುವ ಗುಂಪಿಗೆ ಸೇರದ ಮಹಿಳೆಯರು ತಮ್ಮ ಕುಟುಂಬಕ್ಕಾಗಿ ತೆಗೆದುಕೊಳ್ಳುವ ಸಾಲದ ಮೂಲಗಳನ್ನು ವಿವರಿಸಲಾಗಿದೆ. ಸಂಬಂಧಿಕರ ಹತ್ತಿರ ಪ.ಜಾತಿ ಶೇ.೧೬.೬೭ರಷ್ಟು ಮತ್ತು ಪ.ಪಂಗಡ ಶೇ.೧೫ರಷ್ಟು ಮಹಿಳೆಯರು ತಮ್ಮ ಕುಟುಂಬಗಳ ನಿರ್ವಹಣೆಗಾಗಿ ಸಾಲವನ್ನು ತೆಗೆದುಕೊಳ್ಳುತ್ತಾರೆ. ಅದೇರೀತಿ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿ ಶೇ.೨೦ರಷ್ಟು ಹಾಗೂ ಶೇ.೨೫ರಷ್ಟು ಮಹಿಳೆಯರು ಅವರ ಸಂಬಂಧಿಕರ ಹತ್ತಿರ ಸಾಲವನ್ನು ತೆಗೆದುಕೊಳ್ಳುತ್ತಾರೆ. ಹಾಗೆಯೇ ಹೊಸಪೇಟೆ ತಾಲೂಕಿನಲ್ಲಿ ಜಮೀನ್ದಾರರ ಬಳಿ ಪ.ಜಾತಿ ಶೇ.೬೫ರಷ್ಟು ಮತ್ತು ಪ.ಪಂಗಡ ಶೇ.೫೬.೬೭ರಷ್ಟು ಮಹಿಳೆಯರು ಸಾಲವನ್ನು ಪಡೆದುಕೊಳ್ಳುತತ್ತಾರೆ. ಕೂಡ್ಲಿಗಿ ತಾಲೂಕಿನಲ್ಲಿ ಜಮೀನ್ದಾರರ ಬಳಿ ಪ.ಜಾತಿ ಶೇ.೬೩.೩೮ರಷ್ಟು ಹಾಗೂ ಪ.ಪಂಗಡ ಶೇ.೪೬.೬೭ರಷ್ಟು ಮಹಿಳೆಯರು ಸಾಲವನ್ನು ತೆಗೆದುಕೊಳ್ಳುತ್ತಾರೆ. ಒಟ್ಟಾರೆಯಾಗಿ ಮುಂದುವರಿದ ತಾಲೂಕು ಹೊಸಪೇಟೆ ಹಾಗೂ ಹಿಂದುಳಿದ ತಾಲೂಕು ಕೂಡ್ಲಿಗಿಯಲ್ಲಿ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಎತೇಚ್ಛವಾಗಿ ಜಮೀನ್ದಾರರ ಹತ್ತಿರ ತಮ್ಮ ಕುಟುಂಬದ ನಿರ್ವಹಣೆಗಾಗಿ ಬಡ್ಡಿ ರೂಪದಲ್ಲಿ ಸಾಲವನ್ನು ಪಡೆಯುತ್ತಿರುವುದು ತಿಳಿದುಬಂದಿದೆ. ತದನಂತರ ಈ ಎರಡು ತಾಲೂಕುಗಳಲ್ಲಿನ ಪರಿಶಿಷ್ಟ ಮಹಿಳೆಯರು ಹಣದ ಲೇವಾದೇವಿಗಾರರ ಹತ್ತಿರ ಸಾಲವನ್ನು ಪಡೆಯುತ್ತಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬಂದಿದೆ. ಇನ್ನುಳಿದಂತೆ ಇವರ ಕುಟುಂಬಕ್ಕೆ ಮೂಲಗಳು ಇತರೆ ಸಂಸ್ಥೆಗಳು (ಧಾರ್ಮಿಕ ದತ್ತಿನಿಧಿಗಳು (ದೇವಾಲಯಗಳ ಟ್ರಸ್ಟ್)).

ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರ ಸಾಲದ ಮೂಲವನ್ನು ಚರ್ಚಿಸಲಾಗಿದೆ. ಪರಿಶಿಷ್ಟ ಮಹಿಳೆಯರು ಗುಂಪುಗಳಿಗೆ ಸೇರಿದ ನಂತರ ಬ್ಯಾಂಕುಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಸಾಲವನ್ನು ತೆಗೆದುಕೊಂಡಿದ್ದಾರೆ. ಇವರು ಗುಂಪಿಗೆ ಸೇರಿದ ನಂತರ ಜಮೀನ್ದಾರರು, ಹಣದ ಲೇವಾದೇವಿಗಾರರು ಮುಂತಾದವರ ಹತ್ತಿರ ಯಾವುದೇ ರೀತಿಯ ಸಾಲವನ್ನು ತೆಗೆದುಕೊಳ್ಳದಿರುವುದು ಕಂಡುಬಂದಿದೆ. ಹಣದ ಲೇವಾದೇವಿಗಾರರು ವಿಧಿಸುವ ಅಧಿಕ ಬಡ್ಡಿದರದಿಂದ ಪಾರಾಗಿದ್ದಾರೆ. ಆದರೆ ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ(ಶೇ.೬೫), ಎಸ್.ಟಿ(ಶೇ.೫೬.೬೭) ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ(ಶೇ.೬೩.೩೮), ಎಸ್.ಟಿ(ಶೇ.೪೬.೬೭)ರಷ್ಟು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಮಾತ್ರ ಜಮೀನ್ದಾರರ ಹತ್ತಿರ ಸಾಲವಾಗಿ ಹಣವನ್ನು ಪಡೆಯುತ್ತಿದ್ದಾರೆ. ಎಲ್ಲಾ ಜಮೀನ್ದಾರರು ಎಲ್ಲರಿಗೂ ಸಾಲವಾಗಿ ಹಣವನ್ನು ಕೊಡದಿರುವುದು ತಿಳಿದುಬರುತ್ತದೆ. ಜಮೀನ್ದಾರರು ಸಾಲವಾಗಿ ಪಡೆದ ಹಣವನ್ನು ಯಾರು ಮರುಪಾವತಿ ಮಾಡಲು ಸಮರ್ಥರೋ ಅವರಿಗೆ ಮಾತ್ರ ಸಾಲ ಕೊಡುತ್ತಾರೆ. ಇವರು ಹಣವನ್ನು ಇಂತಿಷ್ಟು ಎಂದು ಕೊಟ್ಟು, ಕೊಟ್ಟ ಹಣಕ್ಕೆ ಬಡ್ಡಿಯನ್ನು ವಸೂಲಿ ಮಾಡುತ್ತಾರೆ. ಇದರಿಂದ ಇನ್ನೂ ಹೆಚ್ಚು ಸಾಲಗಾರರಾಗುತ್ತಾರೆ. ಅಲ್ಲದೆ ವಾಣಿಜ್ಯ ಬ್ಯಾಂಕುಗಳು ಇವರಿಗೆ ಸಾಲ ಕೊಡುವುದಿಲ್ಲ. ಕಾರಣ ಇವರ

ಹತ್ತಿರ ಚರ ಅಥವಾ ಸ್ಥಿರಾಸ್ತಿ ಇಲ್ಲದಿರುವುದರಿಂದ ಬ್ಯಾಂಕುಗಳು ಸಾಲ ಕೊಡಲು ಮುಂದೆ ಬರುತ್ತಿಲ್ಲ. ಹಾಗಾಗಿ ಬಂಧುಗಳ ಹತ್ತಿರ ವ್ಯವಹಾರ ಮಾಡುತ್ತಾರೆ. ಒಂದು ವೇಳೆ ಸಾಲವಾಗಿ ಪಡೆದ ಹಣವನ್ನು ಮರುಪಾವತಿ ಮಾಡಲು ಸಾಧ್ಯವಾಗದಿದ್ದರೆ, ಬಂಧುಗಳ ಹತ್ತಿರ ತಮ್ಮ ಕಷ್ಟ ಸುಖಗಳನ್ನು ಹೇಳಿಕೊಳ್ಳುವುದರ ಮೂಲಕ ಮುಂದಿನ ವರ್ಷಕ್ಕೆ ವರ್ಗಾಯಿಸುತ್ತಾರೆ. ಆದರೆ ಜಮೀನ್ದಾರರ ಹತ್ತಿರ ಮತ್ತು ಹಣದ ಲೇವಾದೇವಿಗಾರರ ಹತ್ತಿರ ಈ ರೀತಿಯ ವ್ಯವಹಾರ ಸಾಧ್ಯವಿಲ್ಲ. ಅವರ ಹತ್ತಿರ ತಿಂಗಳಿಗೆ, ಆರು ತಿಂಗಳಿಗೆ, ವರ್ಷಕ್ಕೆ ಇಂತಿಷ್ಟು ಎಂದು ಪಾವತಿಸಲೇಬೇಕು. ಹಾಗಾಗಿ ಮಾಹಿತಿದಾರರು ಸಂಬಂಧಿಕರುಗಳ ಹತ್ತಿರ ವ್ಯವಹಾರ ಸ್ವಲ್ಪಮಟ್ಟಿಗೆ ಉತ್ತಮ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಒಂದು ಸಾರಿ ಸಾಲದ ಸಂಕಷ್ಟದಲ್ಲಿ ಸಿಕ್ಕಿಹಾಕಿಕೊಂಡರೆ ಜೀವನವಿಡೀ ಇದರಲ್ಲೇ ಒದ್ದಾಡಬೇಕಾಗುತ್ತದೆ. ಹಾಗಾಗಿ ಸಾಲದಲ್ಲೆ ಹುಟ್ಟಿ ಸಾಲದಲ್ಲೇ ಸಾಯುವ ಪರಿಸ್ಥಿತಿ ಎದುರಾಗುತ್ತಿದೆ. ಇದನ್ನು ತಪ್ಪಿಸುವ ಉದ್ದೇಶದಿಂದಲೇ ರಾಜ್ಯ ಸರಕಾರ ಸ್ತ್ರೀಶಕ್ತಿ ಯೋಜನೆಯನ್ನು ೨೦೦೦-೦೧ನೇ ವರ್ಷದಲ್ಲಿ ಜಾರಿಗೆ ತಂದಿದೆ. ಈ ಗುಂಪುಗಳಲ್ಲಿ ಸದಸ್ಯತ್ವ ಪಡೆಯುವುದರಿಂದ ಹಣದ ಲೇವಾದೇವಿಗಾರರ ಬಂಧನದಿಂದ ವಿಮುಕ್ತರಾಗಲು ಅವಕಾಶವಿರುತ್ತದೆ.

ಸಂಘಗಳ ಸದಸ್ಯರಲ್ಲದ ಮಹಿಳೆಯರು ಈ ಬಗೆಯಲ್ಲಿ ಖಾಸಗೀ ವ್ಯಕ್ತಿಗಳಿಂದ ಸಾಲಗಳನ್ನು ಮಾಡುತ್ತಿರುವುದರಿಂದ ಅವರು ಯಾವುದೇ ರೀತಿಯಲ್ಲಿ ಆರ್ಥಿಕವಾಗಿ ಮುಂದುವರೆಯಲು ಸಾಧ್ಯವಾಗುತ್ತಿಲ್ಲ. ಹಾಗಾಗಿಯೇ ಇವರು ತುಂಬಾ ಬಡತನದಲ್ಲಿಯೇ ಜೀವನ ಕಳೆಯುವಂತಹ ಪರಿಸ್ಥಿತಿಯನ್ನು ಕಾಣಬಹುದಾಗಿದೆ. ಸ್ತ್ರೀಶಕ್ತಿ ಸಂಘಗಳಿಗೆ ಸೇರಿದ ಮಹಿಳೆಯರು ಬ್ಯಾಂಕುಗಳಿಂದ ಸಾಲವನ್ನು ಪಡೆಯುತ್ತಿದ್ದಾರೆ. ಇದರಿಂದ ಅವರ ಸಾಲದ ಹೊರೆಯು ಸಹ ಕಡಿಮೆ. ಹಾಗೂ ಮರುಪಾವತಿ ಮಾಡುವಂತಹ ವಿಧಾನವೂ ಸಹ ಸುಲಭವಾಗಿರುತ್ತದೆ. ಹಾಗಾಗಿಯೇ ಸ್ತ್ರೀಶಕ್ತಿ ಸಂಘಗಳಲ್ಲಿನ ಸದಸ್ಯರು ಬ್ಯಾಂಕುಗಳಿಂದ ಸಾಲವನ್ನು ಪಡೆದುಕೊಂಡು ತಮ್ಮ ಅಗತ್ಯಗಳನ್ನು ಸುಲಭವಾಗಿ ಈಡೇರಿಸಿಕೊಳ್ಳುತ್ತಿದ್ದಾರೆ. ಒಟ್ಟಾರೆಯಾಗಿ ಸ್ತ್ರೀಶಕ್ತಿ ಸಂಘಗಳಿಗೆ ಸೇರಿದ ಮಹಿಳೆಯರು ಮತ್ತು ಸಂಘಗಳಿಗೆ ಸೇರದೇ ಇರುವಂತಹ ಮಹಿಳೆಯರು ಸಾಲವನ್ನು ಪಡೆಯುವಂತಹ ವಿಧಾನದಲ್ಲಿ ತುಂಬಾ ವ್ಯತ್ಯಾಸವಿರುವುದನ್ನು ಕಾಣಬಹುದು.

ಕೋಷ್ಟಕ ೩ ಮಹಿಳಾ ಸದಸ್ಯರು ಗುಂಪುಗಳಿಂದ ಪಡೆದ ಸಾಲದ ಮೊತ್ತ

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್. ಸಿ	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್. ಟಿ	ಶೇ	ಒಟ್ಟು
೦೧	೧೦೦೦ ರಿಂದ ೫೦೦೦	೦೨	೩.೩೩	೧.೬೭	೦೩	೦೪	೬.೬೭	೦೨	೩.೩೩	೦೬	೩೦
೦೨	೫೦೦೦೧ರಿಂದ ೧೦,೦೦೦	೨೧	೩೫	೨೭	೪೫	೪೮	೧೯	೩೧.೬೭	೨೫	೪೧.೬೭	೪೪
೦೩	೧೦,೦೦೧ರಿಂದ ೧೫೦೦೦	೦೮	೧೩.೩೩	೦೭	೧೧.೬೭	೧೫	೧೦	೧೬.೬೬	೧೨	೨೦	೨೨
೦೪	೧೫೦೦೧ರಿಂದ ೨೦೦೦೦	೦೯	೧೫	೧೦	೧೬.೬೭	೧೯	೧೨	೨೦	೧೪	೨೩.೩೩	೨೬
೦೫	೨೦೦೦೧ ರಿಂದ ೨೫೦೦೦	೧೮	೩೦	೧೫	೨೫	೩೩	೧೫	೨೫	೦೭	೧೧.೬೭	೨೨
೦೬	೨೫೦೦೦ಕ್ಕಿಂತ ಅಧಿಕ	೦೨	೩.೩೩	–	–	೦೨	–	–	–	–	–
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಕೋಷ್ಟಕ ೩ರಲ್ಲಿ ಮುಂದುವರಿದ ತಾಲೂಕು ಹೊಸಪೇಟೆ ಮತ್ತು ಹಿಂದುಳಿದ ತಾಲೂಕು ಆಗಿರುವ ಕೂಡ್ಲಿಗಿಯಲ್ಲಿ ಬರುವ ನಾಲ್ಕು ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ಮಹಿಳೆಯರು ಬ್ಯಾಂಕುಗಳಿಂದ ಅಥವಾ ಗುಂಪುಗಳಿಂದ ಪಡೆದುಕೊಂಡ ಸಾಲದ ಮೊತ್ತವನ್ನು ತೋರಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿ ಮಹಿಳೆಯರು ಶೇ.೩೫ರಷ್ಟು ಪ.ಪಂಗಡದ ಶೇ.೪೫ರಷ್ಟು ಮಹಿಳೆಯರು ಗುಂಪುಗಳಿಂದ ೫೦೦೧ರಿಂದ ೧೦,೦೦೦ರೂಗಳ ವರೆಗೆ ಸಾಲವನ್ನು ಪಡೆದುಕೊಂಡಿದ್ದಾರೆ. ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿ ಮಹಿಳೆಯರು ಶೇ.೩೧.೬೭ರಷ್ಟು ಮತ್ತು ಪ.ಪಂಗಡದ ಶೇ.೪೧.೬೭ರಷ್ಟು ಮಹಿಳೆಯರು ಸಾಲವನ್ನು ತೆಗೆದುಕೊಂಡಿದ್ದಾರೆ. ಇನ್ನುಳಿದಂತೆ ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿ ಮಹಿಳೆಯರು ಶೇ.೩೦ರಷ್ಟು ಪ.ಪಂಗಡದ ಶೇ.೨೫ರಷ್ಟು ಮಹಿಳೆಯರು, ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿ ಮಹಿಳೆಯರು ಶೇ.೨೫ರಷ್ಟು ಮತ್ತು ಪ.ಪಂಗಡ ಶೇ.೧೧.೬೭ರಷ್ಟು ಮಹಿಳೆಯರು ೨೦೦೦೧ರಿಂದ ೨೫೦೦೦ರೂಗಳ ವರೆಗೆ ಗುಂಪುಗಳಿಂದ ಸಾಲವನ್ನು ಪಡೆದುಕೊಂಡಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಗರಿಷ್ಟ ಪ್ರಮಾಣದಲ್ಲಿ ೫೦೦೧ರಿಂದ ೧೦೦೦೦ರೂಗಳವರೆಗೆ ಮಾತ್ರ ಬ್ಯಾಂಕುಗಳಿಂದ ಅಥವಾ ಗುಂಪುಗಳಿಂದ ಸಾಲವನ್ನು ಪಡೆದಿರುವುದು ಮೇಲಿನ ಕೋಷ್ಟದಿಂದ ಕಂಡುಬರುತ್ತದೆ. ಸ್ತ್ರೀಶಕ್ತಿ ಗುಂಪುಗಳ ಸದಸ್ಯರ ಬಳಿ ಯಾವುದೇ ರೀತಿಯಾದ ಆಸ್ತಿಗಳು ಇಲ್ಲದೇ ಇರುವುದರಿಂದ ವಾಣಿಜ್ಯ ಬ್ಯಾಂಕುಗಳು ಗುಂಪುಗಳಿಗೆ ಕಡಿಮೆ ಮೊತ್ತದ ಸಾಲವನ್ನು ಕೊಡುತ್ತಿದೆ. ಮುಖ್ಯ ಸಂಗತಿಯೆಂದರೆ ಗುಂಪಿನ ಸದಸ್ಯರಲ್ಲಿ ಶಿಕ್ಷಣವನ್ನು ಪಡೆದಿರುವಂತರಹ ಸದಸ್ಯರು ನಾಯಕಿಯರಾಗಿ ಸಾಲದ ಹಂಚಿಕೆಯಲ್ಲಿ ಅಸಮಾನತೆಯನ್ನು

ತೋರುತ್ತಿದ್ದಾರೆ. ಅಂದರೆ ಅವರಿಗೆ ಬೇಕಾದವರಿಗೆ ಮಾತ್ರ ಹೆಚ್ಚಿನ ಸಾಲದ ಮೊತ್ತವನ್ನು ಹಾಗೂ ಬೇರೆ ಸದಸ್ಯರಿಗೆ ಕಡಿಮೆ ಸಾಲದ ಮೊತ್ತವನ್ನು ನೀಡುತ್ತಿದ್ದಾರೆ. ಆದ್ದರಿಂದ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುತ್ತಿಲ್ಲ. ಜೊತೆಗೆ ಸದಸ್ಯರ ಮಧ್ಯೆ ಸಹಕಾರದ ಕೊರತೆ ಏರ್ಪಟ್ಟು ಗುಂಪುಗಳು ಚದುರಿಹೋಗುತ್ತಿರುವುದು ಕಂಡುಬಂದಿದೆ.

ಕೋಷ್ಟಕ : ೪ ಗುಂಪುಗಳ ಸಂಖ್ಯೆ, ಉಳಿತಾಯ ಮತ್ತು ಸಾಲಗಳ ವಿವರ

ಹೊಸಪೇಟೆ ತಾಲ್ಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಗ್ರಾಮಪಂಚಾಯತಿಗಳು			ಕೂಡ್ಲಿಗಿ ತಾಲ್ಲೂಕಿನ ಚಿರತಗುಂಡು ಮತ್ತು ರಾಂಪುರ ಗ್ರಾಮಪಂಚಾಯತಿಗಳು		
ಗುಂಪುಗಳ ಸಂಖ್ಯೆ	ಒಟ್ಟು ಉಳಿತಾಯ ಲಕ್ಷಗಳಲ್ಲಿ	ಒಟ್ಟು ಸಾಲ ಲಕ್ಷಗಳಲ್ಲಿ	ಗುಂಪುಗಳ ಸಂಖ್ಯೆ	ಒಟ್ಟು ಉಳಿತಾಯ ಲಕ್ಷಗಳಲ್ಲಿ	ಒಟ್ಟು ಸಾಲ ಲಕ್ಷಗಳಲ್ಲಿ
೪೫	೩೪೬೮೫೫೦	೨೯೧೩೦೪೯	೩೪	೨೩೮೦೪೦೩	೧೮೨೭೭೩೦

ಮೂಲ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕದಲ್ಲಿ ಹೊಸಪೇಟೆ ತಾಲ್ಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಪಂಚಾಯತಿಗಳಲ್ಲಿ ೪೫ ಸ್ತ್ರೀಶಕ್ತಿ ಗುಂಪುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಗುಂಪುಗಳು ೩೪೬೮೫೫೦ ಲಕ್ಷ ರೂ.ಗಳನ್ನು ಉಳಿತಾಯ ಮಾಡಿರುತ್ತವೆ. ಆದರೆ ಕೆಲವು ಗುಂಪುಗಳು ನಿಧಾನಗತಿಯಲ್ಲಿ ಉಳಿತಾಯವನ್ನು ಮಾಡುತ್ತಿವೆ. ಈ ಎಲ್ಲಾ ಗುಂಪುಗಳು ವಾಣಿಜ್ಯ ಬ್ಯಾಂಕುಗಳಲ್ಲಿ ೨೯೧೩೦೪೯ ಲಕ್ಷ ರೂ.ಗಳಷ್ಟು ಸಾಲವನ್ನು ತೆಗೆದುಕೊಂಡಿವೆ. ಅದೇರೀತಿಯಾಗಿ ಕೂಡ್ಲಿಗಿ ತಾಲ್ಲೂಕಿನ ಚಿರತಗುಂಡು ಹಾಗೂ ರಾಂಪುರ ಪಂಚಾಯತಿಗಳ ವ್ಯಾಪ್ತಿಯಲ್ಲಿ ೩೪ ಸ್ತ್ರೀಶಕ್ತಿ ಗುಂಪುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಎರಡು ಪಂಚಾಯತಿಗಳಲ್ಲಿ ಒಟ್ಟು ೨೩೮೦೪೦೩ ಲಕ್ಷ ರೂ.ಗಳಷ್ಟು ಹಾಗೂ ೧೮೨೭೭೩೦ ಲಕ್ಷ ರೂ.ಗಳಷ್ಟು ಬ್ಯಾಂಕುಗಳಲ್ಲಿ ಸಾಲವನ್ನು ತೆಗೆದುಕೊಂಡಿರುವುದು ಈ ಮೇಲಿನ ಕೋಷ್ಟಕದಿಂದ ತಿಳಿದುಬರುತ್ತದೆ.

ಕೋಷ್ಟಕ ೫ ಗುಂಪಿಗೆ ಸೇರಿದ ಮಹಿಳೆಯರು ತೆಗೆದುಕೊಂಡ ಸಾಲದ ಹಣದ ವಿನಿಯೋಗ

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ಮಕ್ಕಳ ಶಿಕ್ಷಣಕ್ಕಾಗಿ	೩೧	೫೧.೬೭	೧೫	೨೫	೪೬	೨೭	೪೫	೨೦	೩೩.೩೩	೪೭
೦೨	ಮನೆಯ ದಿನ ನಿತ್ಯದ ಖರ್ಚಿಗಾಗಿ	೦೮	೧೩.೩೩	೦೬	೧೦	೧೪	೧೪	೨೩.೩೩	೧೬	೨೬.೬೭	೩೦
೦೩	ಹೈನುಗಾರಿಕೆ	೦೧	೧.೬೭	೦೯	೧೫	೧೦	–	–	೦೨	೩.೩೩	೦೨
೦೪	ಸಣ್ಣ ವ್ಯಾಪರಕ್ಕಾಗಿ	೦೧	೧.೬೭	೦೬	೧೦	೦೭	೦೨	೩.೩೩	೦೨	೩.೩೩	೦೪
೦೫	ಕುಟುಂಬದ ಸಾಲದ ಮರು ಪಾವತಿಗಾಗಿ	೧೯	೩೧.೬೬	೨೪	೪೦	೪೩	೧೭	೨೮.೩೩	೨೦	೬೬.೬೭	೩೭
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಕೋಷ್ಟಕ ೫ರಲ್ಲಿ ಮುಂದುವರಿದ ತಾಲೂಕಾದ ಹೋಸಪೇಟೆ ಮತ್ತು ಹಿಂದುಳಿದ ತಾಲೂಕು ಆಗಿರುವ ಕೂಡ್ಲಿಗಿ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ ಗುಂಪುಗಳಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಬ್ಯಾಂಕುಗಳಿಂದ ಅಥವಾ ಗುಂಪುಗಳಿಂದ ಪಡೆದುಕೊಂಡ ಸಾಲವನ್ನು ಯಾವ ಯಾವ ಕಾರ್ಯ ಚಟುವಟಿಕೆಗಳಿಗಾಗಿ ವಿನಿಯೋಗಿಸಿದ್ದಾರೆ ಎಂಬುದನ್ನು ತೋರಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿ ಶೇ.೫೧.೬೭ರಷ್ಟು ಮಹಿಳೆಯರು. ಹಾಗೂ ಪ.ಪಂಗಡ ಶೇ.೨೫ರಷ್ಟು ಮಹಿಳೆಯರು ಗುಂಪುಗಳಿಂದ ತೆಗೆದುಕೊಂಡ ಸಾಲವನ್ನು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ವ್ಯಯಿಸಿದ್ದಾರೆ. ಹಾಗೆಯೇ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿ ಶೇ.೪೫ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೩೩.೩೩ರಷ್ಟು ಮಹಿಳೆಯರು ತೆಗೆದುಕೊಂಡ ಸಾಲವನ್ನು ಮಕ್ಕಳ ಶಿಕ್ಷಣಕ್ಕಾಗಿ ಖರ್ಚುಮಾಡಿದ್ದಾರೆ. ಇನ್ನುಳಿದಂತೆ ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿ ಶೇ.೩೧.೬೬ರಷ್ಟು ಮಹಿಳೆಯರು ಹಾಗೂ ಪ.ಪಂಗಡ ಶೇ.೨೮.೩೩ರಷ್ಟು ಮಹಿಳೆಯರು, ಹಾಗೆಯೇ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿ ಶೇ.೨೮.೩೩ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೬೬.೬೭ರಷ್ಟು ಮಹಿಳೆಯರು ಗುಂಪುಗಳಿಂದ ತೆಗೆದುಕೊಂಡ ಸಾಲವನ್ನು ತಮ್ಮ ಕುಂಟುಂಬದ ಸಾಲದ ಮರಪಾವತಿಗಾಗಿ ವಿನಿಯೋಗಿಸಿದ್ದಾರೆ. ಒಟ್ಟಾರೆಯಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ತೆಗೆದುಕೊಂಡ ಸಾಲವನ್ನು ಮಕ್ಕಳ ಶಿಕ್ಷಣಕ್ಕಾಗಿ ಹಾಗೂ ತಮ್ಮ ಕುಟುಂಬದ ಸಾಲದ ಮರುಪಾವತಿಗಾಗಿ ವ್ಯಯಿಸಿರುವುದು ಈ ಮೇಲಿನ ಕೋಷ್ಟಕದಿಂದ ತಿಳಿದುಬರುತ್ತದೆ.

ಕೋಷ್ಟಕ ೫.೧ ಗುಂಪಿಗೆ ಸೇರದ ಮಹಿಳೆಯರು ತೆಗೆದುಕೊಂಡ ಸಾಲ ಹಣದ ವಿನಿಯೋಗ

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್. ಸಿ	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್. ಟಿ	ಶೇ	ಒಟ್ಟು
೦೧	ಮಕ್ಕಳ ಶಿಕ್ಷಣಕ್ಕಾಗಿ	೦೨	೩.೩೩	೦೩	೦೫	೦೫	೦೧	೧.೬೭	೦೨	೩.೩೩	೦೩
೦೨	ಮನೆಯ ದಿನನಿತ್ಯ ಖರ್ಚಿಗಾಗಿ	೧೪	೨೩.೩೩	೧೬	೨೬.೬೭	೩೦	೧೯	೩೧.೬೭	೨೪	೪೦	೪೩
೦೩	ಹಬ್ಬ ಹರಿದಿನಕ್ಕೆ	೨೬	೪೩.೩೩	೨೬	೪೩.೩೩	೫೨	೨೫	೪೧.೬೬	೨೦	೩೩.೩೩	೪೫
೦೪	ಕುಟುಂಬದ ಸಾಲದ ಮರುಪಾವತಿಗಾಗಿ	೦೮	೧೩.೩೩	೧೦	೧೬.೬೭	೧೮	೦೯	೧೫	೦೪	೬.೬೭	೧೩
೦೫	ಮಕ್ಕಳ ಮದುವೆಗಾಗಿ	೧೦	೧೬.೬೭	೦೫	೮.೩೩	೧೫	೦೬	೧೦	೧೦	೧೬.೬೭	೧೬
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ತಾಲೂಕು ಮತ್ತು ಕೂಡ್ಲಿಗಿ ತಾಲೂಕಿನ ನಾಲ್ಕು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಜಮಿದ್ದಾರರು. ಹಣದ ಲೇವಾದೇವಿಗಾರರು ಮತ್ತು

ಸಂಬಂಧಿಕರ ಬಳಿ ತೆಗೆದುಕೊಂಡ ಸಾಲದ ಹಣವನ್ನು ಯಾವ ಕಾರ್ಯಗಳಿಗಾಗಿ ವಿನಿಯೋಗಿಸಿದ್ದಾರೆ ಎಂಬುದನ್ನು ಕೋಷ್ಟಕ ೫.೧ರಲ್ಲಿ ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿ ಶೇ.೨೩.೩೩ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೨೬.೬೭ರಷ್ಟು ಮಹಿಳೆಯರು ತೆಗೆದುಕೊಂಡ ಸಾಲವನ್ನು ಅವರ ಮನೆಯ ದಿನನಿತ್ಯ ಖರ್ಚಿಗಾಗಿ ಬಳಸಿಕೊಂಡಿದ್ದಾರೆ. ಹಾಗೆಯೇ ಕೂಡ್ಲಿಗಿ ತಾಲ್ಲೂಕಿನ ಪ.ಜಾತಿಯ ಶೇ.೩೧.೬೭ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೪೦ರಷ್ಟು ಮಹಿಳೆಯರು ಸಾಲವನ್ನು ಅವರ ಮನೆಯ ದಿನನಿತ್ಯ ಖರ್ಚಿಗಾಗಿ ವ್ಯಯಿಸಿದ್ದಾರೆ. ಅದೇರೀತಿಯಾಗಿ ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೪೩.೩೩ರಷ್ಟು ಮಹಿಳೆಯರು ಹಾಗೆಯೇ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೪೧.೬೬ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೩೩.೩೩ರಷ್ಟು ಮಹಿಳೆಯರು ತೆಗೆದುಕೊಂಡಿರುವ ಸಾಲದ ಹಣವನ್ನು ಹಬ್ಬಹರಿದಿನಗಳಿಗಾಗಿ ವ್ಯಯಿಸಿದ್ದಾರೆ. ಇನ್ನುಳಿದ ಮಹಿಳೆಯರು ಮಕ್ಕಳ ಶಿಕ್ಷಣಕ್ಕಾಗಿ, ಕುಟುಂಬ ಸಾಲದ ಮರುಪಾವತಿಗಾಗಿ ಮತ್ತು ಮಕ್ಕಳ ಮದುವೆ ಸಮಾರಂಭಗಳಿಗಾಗಿ ವ್ಯಯಿಸುತ್ತಿರುವುದು ಮೇಲಿನ ಕೋಷ್ಟಕದಲ್ಲಿ ನೋಡಬಹುದು. ಒಟ್ಟಾರೆಯಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ತೆಗೆದುಕೊಂಡಿರುವ ಸಾಲದ ಹಣವನ್ನು ಹಬ್ಬಹರಿದಿನಗಳಿಗಾಗಿ ಮತ್ತು ಅವರ ಮನೆಯ ದಿನನಿತ್ಯ ಖರ್ಚಿಗಾಗಿ ಬಳಸಿಕೊಂಡಿರುವುದು ತಿಳಿದುಬಂದಿದೆ. ಎರಡೂ ತಾಲೂಕುಗಳಲ್ಲಿ ಮಕ್ಕಳ ಶಿಕ್ಷಣಕ್ಕಾಗಿ ಒಟ್ಟಾರೆ ಶೇ.೩ರಷ್ಟು ಮಹಿಳೆಯರು ಸಾಲವನ್ನು ವ್ಯಯಿಸಿರುವುದು ಕಂಡುಬಂದಿದೆ.

ಮಹಿಳೆ ಮನೆಯ ಒಳಗೂ ಮತ್ತು ಹೊರಗೂ ದುಡಿಯುವಂತಹ ನಿರಂತರ ಪ್ರಕ್ರಿಯೆಯಲ್ಲಿ ತೊಡಗಿರುವುದು ಕಂಡುಬಂದಿದೆ. ಗುಂಪಿನ ಸದಸ್ಯರು ಮತ್ತು ಗುಂಪಿಗೆ ಸೇರದ ಮಹಿಳೆಯರು ಯಾವ ಕಾರಣಗಳಿಗಾಗಿ ಸಾಲವನ್ನು ತೆಗೆದುಕೊಳ್ಳುತ್ತಾರೆ ಹಾಗೂ ತೆಗೆದುಕೊಂಡ ಸಾಲವನ್ನು ಯಾವ ಅಗತ್ಯಗಳ ಪೂರೈಕೆಗಾಗಿ ವ್ಯಯಮಾಡುತ್ತಾರೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಗುಂಪಿಗೆ ಸೇರಿದ ನಂತರ ಎರಡು ತಾಲೂಕುಗಳ ಪರಿಶಿಷ್ಟ ಮಹಿಳೆಯರು ಶಿಕ್ಷಣದ ಮಹತ್ವ ತಿಳಿದು ಗುಂಪುಗಳಿಂದ ಪಡೆದುಕೊಂಡ ಸಾಲವನ್ನು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ(ಶೇ.೫೧.೬೭), ಎಸ್.ಟಿ(ಶೇ.೨೫) ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ(ಶೇ.೪೫), ಎಸ್.ಟಿ(ಶೇ.೬೬.೬೭ರಷ್ಟು) ಹಾಗೂ ಕುಟುಂಬದ ಸಾಲದ ಮರುಪಾವತಿಗಾಗಿ ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ(ಶೇ.೩೧.೬೬), ಎಸ್.ಟಿ(ಶೇ.೨೪) ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ(ಶೇ.೨೮.೩೩), ಎಸ್.ಟಿ(ಶೇ.೬೬.೬೭ರಷ್ಟು) ವ್ಯಯಿಸಿರುವುದು ಕಂಡುಬಂದಿದೆ. ಆದರೆ ಹೊಸಪೇಟೆ ತಾಲೂಕಿನಲ್ಲಿ ಗುಂಪಿಗೆ ಸೇರದ ಎಸ್.ಸಿ(ಶೇ.೨೩.೩೩), ಎಸ್.ಟಿ(ಶೇ.೨೬.೬೭) ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ(ಶೇ.೩೧.೬೭), ಎಸ್.ಟಿ(ಶೇ.೪೦ರಷ್ಟು) ಪರಿಶಿಷ್ಟ ಮಹಿಳೆಯರು ಜಮೀನ್ದಾರರ ಹತ್ತಿರ ತೆಗೆದುಕೊಂಡ ಸಾಲದ ಹಣವನ್ನು ಮನೆಯ ದಿನನಿತ್ಯ ಖರ್ಚಿಗಾಗಿ, ಹಾಗೆಯೇ ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ(ಶೇ.೪೩.೩೩).

ಎಸ್.ಟಿ(ಶೇ.೪೩.೩೩) ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ(ಶೇ.೪೧.೬೬), ಎಸ್.ಟಿ(ಶೇ.೩೩.೩೩ರಷ್ಟು) ಹಬ್ಬ ಹರಿದಿನಗಳಿಗಾಗಿ ಹೆಚ್ಚಾಗಿ ಖರ್ಚು ಮಾಡುತ್ತಿದ್ದಾರೆ. ಕಾರಣ ಪರಸ್ಪರ ಅಭಿಪ್ರಾಯಗಳ ಕೊರತೆ ಇದೆ. ಆದ್ದರಿಂದ ಗುಂಪುಗಳನ್ನು ಕಟ್ಟುವುದರಿಂದ ಎಲ್ಲಾ ಮಹಿಳೆಯರು ಒಂದೆಡೆ ಸೇರಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಾರೆ. ಇದರಿಂದ ತಮ್ಮ ಕುಟುಂಬವನ್ನು ಬಡತನದಿಂದ ಹೇಗೆ ಮುಕ್ತಿಗೊಳಿಸಬಹುದೆಂದು ತಿಳಿದುಕೊಳ್ಳಲು ಸಹಕಾರಿಯಾಗುತ್ತದೆ. ಈ ಮೇಲಿನ ಎರಡೂ ಕೋಷ್ಟಕಗಳಿಂದ ತಿಳಿದುಬರುವ ಅಂಶವೆಂದರೆ, ಮಾಹಿತಿದಾರರು ಸಾಲ ತೆಗೆದುಕೊಳ್ಳುವ ಕಾರಣಗಳಿಗೂ ಹಾಗೂ ಖರ್ಚಿನಲ್ಲಿ ತೊಡಗುವುದರ ರೀತಿಗೂ ಕೆಲವು ಅಂಶಗಳ ಪ್ರಮಾಣದಲ್ಲಿ ಹೊಂದಾಣಿಕೆ ಇದೆ. ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಮಕ್ಕಳ ವಿದ್ಯಾಭ್ಯಾಸಕ್ಕೆ ಸಾಲವನ್ನು ತೆಗೆದುಕೊಳ್ಳುತ್ತಾರೆ. ಹಾಗೂ ಅಷ್ಟೇ ಪ್ರಮಾಣದಲ್ಲಿ ಖರ್ಚಿನಲ್ಲಿಯೂ ತೊಡಗಿದ್ದಾರೆ. ತೆಗೆದುಕೊಂಡ ಸಾಲವನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ ಬೇಕಾದ ಬಟ್ಟೆ, ಪುಸ್ತಕ ಸಾಮಗ್ರಿಗಳು, ಲೇಖನಿಗಳು ಹಾಗೂ ಶುಲ್ಕವನ್ನು ಭರಿಸುವುದಕ್ಕೆ ಇತರೆ ಖರ್ಚಿಗಾಗಿ ಹಣವನ್ನು ವ್ಯಯಮಾಡಬೇಕಾಗಿರುತ್ತದೆ. ಆದ್ದರಿಂದ ಅವರು ಗುಂಪುಗಳಿಂದ ಪಡೆದ ಸಾಲದ ಹಣ ಕಡಿಮೆ ಬಿದ್ದು, ಸಂಬಂಧಿಕರ ಹತ್ತಿರ ಮತ್ತೆ ಸಾಲ ಪಡೆದು, ಪಡೆದಂತಹ ಹಣವನ್ನು ಮಕ್ಕಳ ವಿದ್ಯಾಭ್ಯಾಸಕ್ಕೆಂದು ಖರ್ಚುಮಾಡುತ್ತಾರೆ. ಹಾಗೆಯೇ ಇನ್ನಿತರ ಅಂಶಗಳೆಂದರೆ ವಿವಾಹ, ಮನೆಯ ದಿನನಿತ್ಯದ ಖರ್ಚು, ಅಂದರೆ ದವಸ ಧಾನ್ಯಗಳು, ಉರುವಲು, ಎಣ್ಣೆ, ಸೋಪು ಹೀಗೆ ಹಲವಾರು ವಸ್ತುಗಳನ್ನು ಪೂರೈಸಲು ಸಾಲವಾಗಿ ಪಡೆಯುವುದರ ಜೊತೆಗೆ ಖರ್ಚಿನಲ್ಲಿಯೂ ತೊಡಗಿದ್ದಾರೆ. ನಂತರ ಹೈನುಗಾರಿಕೆಯಲ್ಲಿ ಮತ್ತು ಸಣ್ಣ ವ್ಯಾಪಾರ (ತರಕಾರಿ ಮಾರಾಟ, ಸಣ್ಣ ಡಬ್ಬಿ ಅಂಗಡಿ, ಹೂ ಮಾರಾಟ)ದಲ್ಲಿ ಹಣವನ್ನು ವ್ಯಯಮಾಡುತ್ತಾರೆ. ಇನ್ನೊಂದು ವಿಶೇಷವೆಂದರೆ ಕುಟುಂಬದ ಸಾಲ ತೀರಿಸಲು ಸಹ ಗುಂಪುಗಳಿಂದ ಸಾಲ ಪಡೆಯುತ್ತಾರೆ. ಒಟ್ಟಾರೆಯಾಗಿ ಗುಂಪಿಗೆ ಸೇರಿದ ನಂತರ ಎಲ್ಲಾ ಸದಸ್ಯರು ಒಟ್ಟಿಗೆ ಸೇರುವುದರಿಂದ ಪರಸ್ಪರ ಅಭಿಪ್ರಾಯಗಳು ಹಂಚಿಕೊಳ್ಳುವುದರ ಜೊತೆಗೆ ಆರ್ಥಿಕವಾಗಿ ಸಬಲರಾಗುತ್ತಾರೆ. ಮತ್ತು ಸಾಮಾಜಿಕ ಪ್ರಜ್ಞೆ ಮೂಡಿ ಗುಂಪುಗಳಿಂದ ತೆಗೆದುಕೊಂಡ ಸಾಲದಿಂದ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುತ್ತಿದ್ದಾರೆ.

ಕೋಷ್ಟಕ ೬ ಗುಂಪಿಗೆ ಸೇರಿದ ಮಹಿಳೆಯರು ಹೊಂದಿದ ಆಸ್ತಿ

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ಎತ್ತುಗಳು	೦೪	೬.೬೭	೦೫	೮.೩೩	೦೯	೦೨	೩.೩೩	೦೭	೧೧.೬೭	೦೯
೦೨	ಹಸುಗಳು	೦೨	೩.೩೩	೦೪	೬.೬೭	೦೬	–	–	೦೮	೧೩.೩೩	೦೮
೦೩	ಎಮ್ಮೆಗಳು	೦೩	೦೫	೦೯	೧೫	೧೨	೦೧	೧.೬೭	೧೦	೧೬.೬೭	೧೧
೦೪	ಮೇಕೆಗಳು	೦೮	೧೩.೩೩	೦೨	೩.೩೩	೧೦	೦೯	೧೫	೦೫	೮.೩೩	೧೪
೦೫	ಕುರಿಗಳು	೧೦	೧೬.೬೭	೦೧	೧.೬೭	೧೧	೧೨	೨೦	೦೭	೧೧.೬೭	೧೯
೦೬	ಕೋಳಿಗಳು	೩೩	೫೫	೩೯	೬೫	೭೨	೩೬	೬೦	೨೩	೩೮.೩೩	೫೯
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಮೇಲಿನ ಕೋಷ್ಟಕ ೬೭ರಲ್ಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನ ಸ್ತ್ರೀಶಕ್ತಿ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಹೊಂದಿದ ಆಸ್ತಿಯ ವಿವರವನ್ನು ತೋರಿಸಲಾಗಿದೆ. ಮುಂದುವರಿದ ತಾಲೂಕು ಆಗಿರುವ ಹೊಸಪೇಟೆ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ.ಜಾತಿಯ ಶೇ.೫೫ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೧೫ರಷ್ಟು ಮಹಿಳೆಯರು ಎಮ್ಮೆಗಳನ್ನು ಹೊಂದಿದ್ದಾರೆ. ಅದೇರೀತಿಯಾಗಿ ಪ.ಜಾತಿಯ ಶೇ.೫೫ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೬೫ರಷ್ಟು ಮಹಿಳೆಯರು ಕೋಳಿಗಳನ್ನು ಹೊಂದಿದ್ದಾರೆ. ಒಟ್ಟಾರೆಯಾಗಿ ಹೊಸಪೇಟೆ ತಾಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಹೆಚ್ಚಾಗಿ ಕೋಳಿಗಳನ್ನು ಹೊಂದಿರುವುದು ಹಾಗೂ ಎಮ್ಮೆಗಳನ್ನು ಕಡಿಮೆ ಪ್ರಮಾಣದಲ್ಲಿ ಹೊಂದಿರುವುದು ತಿಳಿದುಬಂದಿದೆ. ಇನ್ನುಳಿದಂತೆ ಎತ್ತುಗಳು, ಹಸುಗಳು, ಮೇಕೆಗಳು ಮತ್ತು ಕುರಿಗಳನ್ನು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಹೊಂದಿರುವುದು ಮೇಲಿನ ಕೋಷ್ಟಕದಿಂದ ತಿಳಿದುಬರುತ್ತದೆ. ಹಾಗೆಯೇ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೨೦ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೧೧.೬೭ರಷ್ಟು ಮಹಿಳೆಯರು ಕುರಿಗಳನ್ನು ಹೊಂದಿದ್ದಾರೆ. ಅದೇರೀತಿಯಾಗಿ ಪ.ಜಾತಿಯ ಶೇ.೬೦ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೩೮.೩೩ರಷ್ಟು ಮಹಿಳೆಯರು ಕೋಳಿಗಳನ್ನು ಹೊಂದಿದ್ದಾರೆ. ಇನ್ನುಳಿದಂತೆ ಎತ್ತುಗಳು, ಹಸುಗಳು, ಎಮ್ಮೆಗಳು ಮತ್ತು ಮೇಕೆಗಳನ್ನು ಕಡಿಮೆ ಪ್ರಮಾಣದ ಪರಿಶಿಷ್ಟ ಮಹಿಳೆಯರು ಹೊಂದಿದ್ದಾರೆ. ಒಟ್ಟಾರೆಯಾಗಿ ಕೂಡ್ಲಿಗಿ ತಾಲೂಕಿನ ಚಿರತಗುಂಡು ಮತ್ತು ರಾಂಪುರ ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಪರಿಶಿಷ್ಟ ಮಹಿಳೆಯರು ಹೆಚ್ಚಾಗಿ ಕೋಳಿಗಳನ್ನು ಹೊಂದಿದ್ದಾರೆ. ಕುರಿಗಳನ್ನು ಕಡಿಮೆ ಪ್ರಮಾಣದಲ್ಲಿ ಹೊಂದಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬಂದಿದೆ.

ಕೋಷ್ಟಕ ೬.೧. ಗುಂಪಿಗೆ ಸೇರದ ಮಹಿಳೆಯರು ಹೊಂದಿದ ಆಸ್ತಿ

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ಎತ್ತುಗಳು	೦೩	೦೫	೦೪	೬.೬೭	೦೭	೦೧	೧.೬೭	೦೬	೧೦	೦೭
೦೨	ಹಸುಗಳು	೦೨	೩.೩೩	೦೩	೦೫	೦೫	–	–	೦೭	೧೧.೬೭	೦೭
೦೩	ಎಮ್ಮೆಗಳು	೦೨	೩.೩೩	೦೭	೧೧.೬೭	೦೯	೦೧	೧.೬೭	೦೮	೧೩.೩೩	೦೯
೦೪	ಮೇಕೆಗಳು	೦೭	೧೧.೬೭	೦೨	೩.೩೩	೦೯	೦೮	೧೩.೩೩	೦೪	೬.೬೭	೧೨
೦೫	ಕುರಿಗಳು	೦೮	೧೩.೩೩	೦೧	೧.೬೭	೦೯	೧೧	೧೮.೩೩	೦೭	೧೧.೬೭	೧೮
೦೬	ಕೋಳಿಗಳು	೩೮	೬೩.೩೩	೪೩	೭೧.೬೭	೮೧	೩೯	೬೫	೨೮	೪೬.೬೬	೬೭
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನ ಗುಂಪಿಗೆ ಸೇರದ ಮಹಿಳೆಯರು ಹೊಂದಿದ ಆಸ್ತಿಯ ವಿವರವನ್ನು ಕೋಷ್ಟಕ ೬.೧ರಲ್ಲಿ ವಿಶ್ಲೇಷಿಸಲಾಗಿದೆ. ಹೊಸಪೇಟೆ ತಾಲೂಕಿನ ಎರಡು ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಪ.ಜಾತಿಯ ಶೇ.೧೩.೩೩ರಷ್ಟು ಮಹಿಳೆಯರು ಹಾಗೂ ಪ.ಪಂಗಡದ

ಶೇ.೧.೬೭ರಷ್ಟು ಮಹಿಳೆಯರು ತಮ್ಮ ಮನೆಯಲ್ಲಿ ಕುರಿಗಳನ್ನು ಹೊಂದಿದ್ದಾರೆ. ಕೂಡ್ಲಿಗಿ ತಾಲೂಕಿನ ಎರಡು ಪಂಚಾಯತಿಯಲ್ಲಿ ಬರುವ ಪ.ಜಾತಿಯ ಶೇ.೧೮.೩೩ರಷ್ಟು ಮತ್ತು ಪ.ಪಂಗಡದ ಶೇ.೧೧.೬೭ರಷ್ಟು ಮಹಿಳೆಯರು ಕುರಿಗಳನ್ನು ಹೊಂದಿರುವುದು ಕಂಡುಬಂದಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೬೩.೩೩ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೭೧.೬೭ರಷ್ಟು ಮಹಿಳೆಯರು ಕೋಳಿಗಳನ್ನು ಹೊಂದಿದ್ದಾರೆ. ಹಾಗೆಯೇ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೬೫ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೪೬.೬೭ರಷ್ಟು ಮಹಿಳೆಯರು ಕೋಳಿಗಳನ್ನು ಹೊಂದಿರುವುದು ಕಂಡುಬಂದಿದೆ. ಇನ್ನುಳಿದಂತೆ ಎತ್ತುಗಳು, ಹಸುಗಳು, ಎಮ್ಮೆಗಳು ಮತ್ತು ಮೇಕೆಗಳನ್ನು ಕಡಿಮೆ ಪ್ರಮಾಣದಲ್ಲಿ ಪರಿಶಿಷ್ಟ ಮಹಿಳೆಯರು ಹೊಂದಿರುವುದು ಕೋಷ್ಟಕದಿಂದ ತಿಳಿದುಬರುತ್ತದೆ. ಈ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರದ ಮಹಿಳೆಯರು ಕೂಡಾ ಹೆಚ್ಚಿನ ಸಂಖ್ಯೆಯಲ್ಲಿ ಕೋಳಿಗಳನ್ನು ಹೊಂದಿರುವುದು ಕಂಡುಬಂದಿದೆ.

ಒಂದು ಕುಟುಂಬದ ಆರ್ಥಿಕ ಅಂಶಗಳನ್ನು ತಿಳಿಯುವಾಗ ಜಾನುವಾರುಗಳ ವಿವರವು ಮುಖ್ಯವಾಗುತ್ತದೆ. ಏಕೆಂದರೆ ಜಾನುವಾರುಗಳಿಂದ ಅನೇಕ ರೀತಿಯ ಲಾಭಗಳಿವೆ. ನಮ್ಮಲ್ಲಿ ಮೊದಲಿಗೆ ಪಶುಪಾಲನೆಯೇ ರೂಢಿಯಲ್ಲಿದ್ದುದು ತಿಳಿದ ವಿಷಯ. ಜಾನುವಾರುಗಳನ್ನು ಸಾಕುವುದರಿಂದ ಅನೇಕ ರೀತಿಯ ಅನುಕೂಲಗಳನ್ನು ಪಡೆದುಕೊಳ್ಳಬಹುದು. ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ, ಹಸು ಮತ್ತು ಎಮ್ಮೆಗಳನ್ನು ಸಾಕುವುದರಿಂದ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಅನುಕೂಲಕರ. ಹಾಗಾಗಿ ಜಾನುವಾರುಗಳನ್ನು ಸಾಕುವುದರಿಂದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಪಶುಪಾಲನೆ ಒಂದು ಪುರಾತನ ಕಸುಬಾಗಿತ್ತು. ಗ್ರಾಮೀಣ ಪ್ರದೇಶದಲ್ಲಿ ಇವರಿಗೆ ಜಾನುವಾರುಗಳನ್ನು ಕಟ್ಟಲು, ಕಾಯಲು ಸ್ಥಳಾವಕಾಶಗಳು ಇರುತ್ತವೆ. ಅಲ್ಲದೇ ಇವುಗಳನ್ನು ನೋಡಿಕೊಳ್ಳಲು ಅಂದರೆ ಪಾಲನೆ ಮಾಡಲು ಮಕ್ಕಳಿರುತ್ತಾರೆ ಅಥವಾ ಮನೆಯ ಹಿರಿಯರು ಇರುತ್ತಾರೆ. ಹಾಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಜಾನುವಾರುಗಳನ್ನು ಕಾಣಬಹುದು. ಇಷ್ಟಿದ್ದರೂ ಇವುಗಳ ಉಪಯೋಗಗಳ ಬಗ್ಗೆ ಗುಂಪಿಗೆ ಸೇರಿದ ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರಿಗೆ ಸರಿಯಾದ ಮಾಹಿತಿ ಇರುವುದಿಲ್ಲ ಎಂಬ ಅಂಶವು ಇಲ್ಲಿ ಗಮನಾರ್ಹ. ಆದ್ದರಿಂದ ಈ ವರ್ಗದ ಜನ ಇವುಗಳಿಗೆ ಹೆಚ್ಚು ಮಹತ್ವ ಕೊಡದಿರುವುದನ್ನು ಗಮನಿಸಬಹುದು.

ಕೋಷ್ಟಕ ೭ ಗುಂಪಿಗೆ ಸೇರಿದ ಮಹಿಳೆಯರ ದಿನಬಳಕೆಯ ವಸ್ತುಗಳು

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ಮಂಚ	೦೩	೦೫	೦೪	೬.೬೭	೦೭	೦೧	೧.೬೬	೦೪	೬.೬೭	೦೫
೦೨	ಟೇಬಲ್	–	–	–	–	–	–	–	–	–	–
೦೩	ಕುರ್ಚಿ	೦೬	೧೦	೦೫	೮.೩೩	೧೧	೦೪	೬.೬೭	೦೬	೧೦	೧೦
೦೪	ಟಿ.ವಿ.	೦೪	೬.೬೭	೦೭	೧೧.೬೭	೧೧	೦೨	೩.೩೩	೦೯	೧೫	೧೧
೦೫	ಗಡಿಯಾರ	೦೨	೩.೩೩	೦೧	೧.೬೬	೦೩	೦೩	೦೫	೦೫	೮.೩೩	೦೮
೦೬	ಮಿಕ್ಸಿ	೨೦	೩೩.೩೩	೨೨	೩೬.೬೭	೪೨	೧೦	೧೬.೬೭	೧೨	೨೦	೨೨
೦೭	ಗ್ಯಾಸ್ ಸ್ಟವ್	೧೬	೨೬.೬೭	೧೬	೨೬.೬೭	೩೨	೧೮	೩೦	೧೮	೩೦	೩೬
೦೮	ಬಟ್ಟೆ ಹೊಲಿಯುವ ಯಂತ್ರ	೦೨	೩.೩೩	೦೩	೦೫	೦೫	೦೧	೧.೬೭	೦೩	೦೫	೦೪
೦೯	ಮೋಟಾರ್ ಸೈಕಲ್	೦೧	೧.೬೭	೦೨	೩.೩೩	೦೩	೦೨	೩.೩೩	೦೨	೩.೩೩	೦೪
೧೦	ಸೈಕಲ್	೦೬	೧೦	–	–	೦೬	೧೯	೩೧.೬೭	೦೧	೧.೬೭	೨೦
೧೧	ಫ್ರಿಜ್ಜ್	–	–	–	–	–	–	–	–	–	–
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಕೋಷ್ಟಕ ೭ರಲ್ಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಮನೆಯಲ್ಲಿ ದಿನನಿತ್ಯ ಬಳಸುತ್ತಿದ್ದ ವಸ್ತುಗಳ ವಿವರವನ್ನು ತೋರಿಸಲಾಗಿದೆ. ಹೊಸಪೇಟೆ ತಾಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಪ.ಜಾತಿಯ ಶೇ.೩೩.೩೩ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೩೬.೬೭ರಷ್ಟು ಮಹಿಳೆಯರು ಮಿಕ್ಸಿಯನ್ನು ದಿನಬಳಕೆಯ ವಸ್ತುವನ್ನಾಗಿ ಬಳಸುತ್ತಿದ್ದಾರೆ. ಹಾಗೆಯೇ ಕೂಡ್ಲಿಗಿ ತಾಲೂಕಿನ ಸಣಾಪುರ ಹಾಗೂ ಜಿ.ನಾಗಲಾಪುರ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಪ.ಜಾತಿಯ ಶೇ.೧೬.೬೭ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೨೦ರಷ್ಟು ಮಹಿಳೆಯರು ಮಿಕ್ಸಿಯನ್ನು ಬಳಸುತ್ತಿರುವುದು ಕಂಡುಬಂದಿದೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೨೬.೬೭ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೨೬.೬೭ರಷ್ಟು ಮಹಿಳೆಯರು ತಮ್ಮ ಮನೆಯಲ್ಲಿ ಗ್ಯಾಸ್‌ಸ್ಟವ್‌ನ್ನು ಬಳಸುತ್ತಿದ್ದಾರೆ. ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೩೦ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೩೦ರಷ್ಟು ಮಹಿಳೆಯರು ಗ್ಯಾಸ್‌ಸ್ಟವ್‌ನ್ನು ಬಳಸುತ್ತಿರುವುದು ಕಂಡುಬಂದಿದೆ. ಇನ್ನುಳಿದ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ಪರಿಶಿಷ್ಟ ಮಹಿಳೆಯರು ಮಂಚ, ಟೇಬಲ್, ಕುರ್ಚಿ, ಟಿ.ವಿ. ಗಡಿಯಾರ, ಬಟ್ಟೆ ಒಲೆಯುವ ಯಂತ್ರ, ಮೋಟಾರ್ ಸೈಕಲ್ ಮತ್ತು ಸೈಕಲ್ ಮುಂತಾದ ವಸ್ತುಗಳನ್ನು ಕಡಿಮೆ ಪ್ರಮಾಣದಲ್ಲಿ ಪರಿಶಿಷ್ಟ ಮಹಿಳೆಯರು ತಮ್ಮ ಮನೆಯ ವಸ್ತುಗಳನ್ನಾಗಿ ಬಳಕೆ ಮಾಡುತ್ತಿರುವುದು ಕೋಷ್ಟಕದಲ್ಲಿ ಕಂಡುಬರುತ್ತದೆ. ಒಟ್ಟಾರೆಯಾಗಿ ಹೊಸಪೇಟೆ ತಾಲೂಕಿನಲ್ಲಿ ಪರಿಶಿಷ್ಟ ಮಹಿಳೆಯರು ಮಿಕ್ಸಿಯನ್ನು ಹಾಗೂ ಕೂಡ್ಲಿಗಿ

ತಾಲೂಕಿನಲ್ಲಿ ಪರಿಶಿಷ್ಟ ಮಹಿಳೆಯರು ಗ್ಯಾಸ್‌ಸ್ಟವ್‌ನ್ನು ಬಳಸುತ್ತಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬಂದಿದೆ.

ಕೋಷ್ಟಕ ೭.೧ ಗುಂಪಿಗೆ ಸೇರದ ಮಹಿಳೆಯರ ದಿನಬಳಕೆಯ ವಸ್ತುಗಳು

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ಮಂಚ	೦೨	೩.೩೩	೦೩	೦೫	೦೫	೦೨	೩.೩೩	೦೨	೩.೩೩	೦೪
೦೨	ಟೇಬಲ್	–	–	–	–	–	–	–	–	–	–
೦೩	ಕುರ್ಚಿ	೦೫	೮.೩೩	೦೪	೬.೬೭	೦೮	೦೩	೦೫	೧೫	೨೫	೧೮
೦೪	ಟಿ.ವಿ.	೦೪	೬.೬೭	೦೬	೧೦	೧೦	೦೪	೬.೬೭	೧೦	೬.೬೭	೧೪
೦೫	ಗಡಿಯಾರ	೦೩	೦೫	೦೫	೮.೩೩	೦೮	೦೪	೬.೬೭	೦೨	೩.೩೩	೦೬
೦೬	ಮಿಕ್ಸಿ	೧೯	೩೧.೬೭	೨೦	೩೩.೩೩	೩೯	೧೦	೧೬.೬೭	೧೪	೨೩.೩೩	೨೪
೦೭	ಗ್ಯಾಸ್ ಸ್ಟವ್	೧೬	೨೬.೬೬	೧೬	೨೬.೬೬	೩೨	೧೧	೧೮.೩೩	೧೦	೬.೬೭	೨೧
೦೮	ಬಟ್ಟೆ ಹೊಲಿಯುವ ಯಂತ್ರ	೦೨	೩.೩೩	೦೪	೬.೬೭	೦೬	೦೧	೧.೬೭	೦೨	೩.೩೩	೦೩
೦೯	ಮೋಟಾರ್ ಸೈಕಲ್	೦೧	೧.೬೭	೦೨	೩.೩೩	೦೩	೦೨	೩.೩೩	೦೧	೧.೬೭	೦೩
೧೦	ಸೈಕಲ್	೦೮	೧೩.೩೩	–	–	೦೮	೨೩	೩೮.೩೩	೦೪	೬.೬೭	೨೭
೧೧	ಫ್ರಿಜ್ಜ್	–	–	–	–	–	–	–	–	–	–
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಕೋಷ್ಟಕ ೭.೧ರಲ್ಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ತಮ್ಮ ಮನೆಯಲ್ಲಿ ದಿನನಿತ್ಯ ಬಳಸುತ್ತಿದ್ದ ವಸ್ತುಗಳ ವಿವರವನ್ನು ತೋರಿಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೩೧.೬೭ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೩೩.೩೩ರಷ್ಟು ಮಹಿಳೆಯರು ಮಿಕ್ಸಿಯನ್ನು ಬಲಸುತ್ತಿದ್ದಾರೆ. ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೧೬.೬೭ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೨೩.೩೩ರಷ್ಟು ಮಹಿಳೆಯರು ಮಿಕ್ಸಿಯನ್ನು ಬಳಸುತ್ತಿರುವುದು ಕಂಡುಬಂದಿದೆ. ಹಾಗೆಯೇ ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೨೬.೬೬ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೨೬.೬೬ರಷ್ಟು ಮಹಿಳೆಯರು ತಮ್ಮ ಮನೆಯಲ್ಲಿ ಗ್ಯಾಸ್‌ಸ್ಟವ್‌ನ್ನು ಬಳಸುತ್ತಿರುವುದು ತಿಳಿದುಬಂದಿದೆ. ಹಾಗೆಯೇ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೧೮.೩೩ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೬.೬೭ರಷ್ಟು ಮಹಿಳೆಯರು ತಮ್ಮ ಮನೆಯಲ್ಲಿ ಗ್ಯಾಸ್‌ಸ್ಟವ್ ನ್ನು ಬಳಸುತ್ತಿದ್ದಾರೆ. ಇನ್ನುಳಿದಂತೆ ಎರಡು ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ತಮ್ಮ ಮನೆಯಲ್ಲಿ ದಿನಬಳಕೆಯ ವಸ್ತುಗಳನ್ನಾಗಿ ಮಂಚ ಟೇಬಲ್, ಕುರ್ಚಿ, ಟಿ.ವಿ. ಗಡಿಯಾರ, ಬಟ್ಟೆ ಹೊಲಿಯುವ ಯಂತ್ರ, ಮೋಟಾರ್ ಸೈಕಲ್ ಮತ್ತು ಸೈಕಲ್ ಮುಂತಾದವುಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸುತ್ತಿದ್ದಾರೆ.

ಒಟ್ಟಾರೆಯಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಹೆಚ್ಚಾಗಿ ಮಿಕ್ಸಿ ಹಾಗೂ ಗ್ಯಾಸ್‌ಸ್ಟವ್‌ನ್ನು ಅವರ ಮನೆಯ ದಿನನಿತ್ಯದ ಬಳಕೆಯ ವಸ್ತುಗಳನ್ನಾಗಿ ಬಳಸುತ್ತಿರುವುದು ತಿಳಿದುಬಂದಿದೆ.

ಮನುಷ್ಯನಿಗೆ ಮೂಲಭೂತ ಸೌಲಭ್ಯಗಳು ಎಷ್ಟು ಮುಖ್ಯವೋ ಹಾಗೆ ಮನೆಗೆ ದಿನ ಬಳಕೆಯ ವಸ್ತುಗಳು ಅಷ್ಟೇ ಮುಖ್ಯವಾಗಿದೆ. ಹಾಗಾಗಿ ಗುಂಪಿಗೆ ಸೇರಿದ ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಮನೆಯಲ್ಲಿರುವ ದಿನಬಳಕೆಯ ವಸ್ತುಗಳ ವಿವರಗಳನ್ನು ತಿಳಿಯುವುದು ಸಂಶೋಧನೆಯ ದೃಷ್ಟಿಯಿಂದ ಬಹಳ ಮುಖ್ಯವಾಗಿದೆ. ಬಡತನದ ರೇಖೆಗಿಂತ ಕೆಳಗಿನ ಸ್ತರದಲ್ಲಿರುವ ಮಹಿಳೆಯರು ಹಲವಾರು ಮೂಲಭೂತ ಸೌಲಭ್ಯಗಳ ಕೊರತೆಯಿಂದ ನರಳುತ್ತಿದ್ದಾರೆ. ಅದರಲ್ಲೂ ಪರಿಶಿಷ್ಟ ಮಹಿಳೆಯರ ಜೀವನ ಬಹಳ ದುಸ್ಥಿತಿಯಲ್ಲಿರುವುದು ಕಂಡುಬರುತ್ತದೆ. ಆದ್ದರಿಂದ ಅಧ್ಯಯನ ದೃಷ್ಟಿಯಿಂದ ಇವರ ಆರ್ಥಿಕ ಸ್ಥಿತಿಗತಿಯನ್ನು ತಿಳಿದುಕೊಳ್ಳಲು ದಿನ ಬಳಕೆಯ ವಸ್ತುಗಳು ಸಹ ಪ್ರಭಾವ ಬೀರಿರುವುದರಿಂದ ಇದಕ್ಕೆ ಸಂಬಂಧಪಟ್ಟ ಅಂಶಗಳನ್ನು ವಿವರಿಸಲಾಗಿದೆ. ಇಲ್ಲಿ ಮಾಹಿತಿದಾರರ ದೃಷ್ಟಿಯಿಂದ ದಿನ ಬಳಕೆಯ ವಸ್ತುಗಳೆಂದು ಕೆಲವುಗಳನ್ನು ವಿಂಗಡಿಸಲಾಗಿದೆ. ಅವುಗಳಲ್ಲಿ ಮೇಲೆ ತಿಳಿಸಿದಂತೆ ಕೆಲವುಗಳನ್ನು ಮಾತ್ರ ನಮೂದಿಸಿ ಅಧ್ಯಯನ ಮಾಡಿದಾಗ, ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರ ಮನೆಯಲ್ಲಿ ಕೆಲವು ದಿನಬಳಕೆಯ ವಸ್ತುಗಳನ್ನು ಕೆಲವೇ ಮಹಿಳೆಯರು ಹೊಂದಿರುವುದು ಮೇಲಿನ ಎರಡೂ ಕೋಷ್ಟಕಗಳಿಂದ ತಿಳಿದುಬರುತ್ತದೆ. ಎರಡೂ ತಾಲೂಕುಗಳ ಪರಿಶಿಷ್ಟ ಮಹಿಳೆಯರು ಗುಂಪಿಗೆ ಸೇರಿದ ಮೇಲೆ ಆರ್ಥಿಕ ಸ್ಥಿತಿ ಸುಧಾರಿಸುವುರಿಂದ ಟಿ.ವಿ. ೨೨ ಜನ, ಮಿಕ್ಸಿ ೬೪ ಜನ, ೬೮ ಜನ ಗ್ಯಾಸ್ ಸ್ಟವ್‌ಗಳನ್ನು ಹೊಂದಿರುವವರರ ಪ್ರಮಾಣ ಹೆಚ್ಚು. ಆದರೆ ಗುಂಪುಗಳಿಂದ ಹೊರಗುಳಿದ ಪರಿಶಿಷ್ಟ ಮಹಿಳೆಯರು ಟಿ.ವಿ. (೨೪ಜನ) ಮಿಕ್ಸಿ (೬೩ ಜನ) ಗ್ಯಾಸ್ ಸ್ಟವ್ (೫೩ ಜನ)ಗಳನ್ನು ಹೊಂದಿರುವುದು ಕಂಡುಬರುತ್ತದೆ. ಇನ್ನುಳಿದಂತೆ ಮಂಚ, ಕುರ್ಚಿ, ಟೇಬಲ್, ಗ್ಯಾಸ್ ಸ್ಟವ್, ಸೈಕಲ್ ಮೋಟಾರ್, ಬಟ್ಟೆ ಹೊಲಿಯುವ ಯಂತ್ರ, ಮಿಕ್ಸಿಯಂತಹ ವಸ್ತುಗಳು ಕೆಲವರ ಮನೆಯಲ್ಲಿ ಇರುವುದು ಕಂಡುಬರುತ್ತದೆ. ಮೇಲಿನ ಎರಡು ಕೋಷ್ಟಕಗಳಲ್ಲಿ ತಿಳಿಸಿದ ದಿನಬಳಕೆಯ ವಸ್ತುಗಳು ಇಂದಿನ ಆಧುನಿಕ ಕಾಲಕ್ಕೆ ಸಿಲುಕಿಕೊಂಡಿರುವ, ಅದರಲ್ಲೂ ಆರ್ಥಿಕ ಮಟ್ಟು ಉತ್ತಮವಾಗಿರುವ ಮನೆಗಳಲ್ಲಿ ಅಥವಾ ಕುಟುಂಬಗಳಲ್ಲಿ ಸಹಜವಾಗಿ ಇರುವಂತಹ ಅಥವಾ ಹೊಂದಿರುವಂತಹ ವಸ್ತುಗಳೆ. ಆದರೆ ಪರಿಶಿಷ್ಟ ಮಹಿಳೆಯರ ಮನೆಗಳಲ್ಲಿ ಎಲ್ಲಿ ಬರಬೇಕು ಈ ವಸ್ತುಗಳು. ಆದರೂ ಗುಂಪಿಗೆ ಸೇರಿದ ನಂತರ ಪರಿಶಿಷ್ಟ ಮಹಿಳೆಯರು ನಿಧಾನಗತಿಯಲ್ಲಿ ಆರ್ಥಿಕವಾಗಿ ಮುಂದೆ ಬರುತ್ತಿರುವುದು ಹಾಗೂ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಬಡತನದಲ್ಲಿ ಸಿಲುಕಿಕೊಂಡಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿದೆ.

ಕೋಷ್ಟಕ ೮ ಗುಂಪಿಗೆ ಸೇರಿದ ಮಹಿಳೆಯರ ಇಂಧನದ ಬಳಕೆ

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್. ಟಿ	ಶೇ	ಒಟ್ಟು
೦೧	ಎಲ್.ಪಿ.ಜಿ	೧೬	೨೬.೬೭	೨೬. ೬೭	೩೨	೧೮	೩೦	೧೮	೩೦	೩೬	೦೫
೦೨	ಉರುವಲು	೩೪	೫೬.೬೭	೩೫	೫೮.೩೩	೬೯	೨೮	೪೬.೬೭	೨೫	೪೧.೬೭	೫೩
೦೩	ಸೀಮೆ ಎಣ್ಣೆ ಸ್ಟವ್	೧೦	೧೬.೬೬	೦೯	೧೫	೧೯	೧೪	೨೩.೩೩	೧೭	೨೮.೩೩	೩೧
೦೪	ವಿದ್ಯುತ್ ಸ್ಟವ್	–	–	–	–	–	–	–	–	–	–
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಕೋಷ್ಟಕ ೮ರಲ್ಲಿ ಹೊಸಪೇಟೆ ತಾಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಹಾಗೂ ಕೂಡ್ಲಿಗಿ ತಾಲೂಕಿನ ಚಿರತಗುಂಡು ರಾಂಪುರ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ಮಹಿಳೆಯರು ತಮ್ಮ ಮನೆಯಲ್ಲಿ ಅಡುಗೆಯನ್ನು ತಯಾರಿಸಲು ಯಾವ ಇಂಧನವನ್ನು ಬಳಸುತ್ತಿದ್ದಾರೆ ಎಂಬುದನ್ನು ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಎರಡು ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಪ.ಜಾತಿಯ ಶೇ.೨೬.೬೭ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೨೬.೬೭ರಷ್ಟು ಮಹಿಳೆಯರು ಅಡುಗೆಯನ್ನು ತಯಾರಿಸಲು ಎಲ್.ಪಿ.ಜಿಯನ್ನು ಬಳಸುತ್ತಿರುವುದು ಕಂಡುಬಂದಿದೆ. ಹಾಗೆಯೇ ಕೂಡ್ಲಿಗಿ ತಾಲೂಕಿನ ಎರಡು ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಪ.ಜಾತಿಯ ಶೇ.೩೦ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೩೦ರಷ್ಟು ಮಹಿಳೆಯರು ಎಲ್.ಪಿ.ಜಿಯನ್ನು ಬಳಸುತ್ತಿದ್ದಾರೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೫೬.೬೭ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೫೮.೩೩ರಷ್ಟು ಮಹಿಳೆಯರು ಉರುವಲು ಅಥವಾ ಕಟ್ಟಿಗೆಯಿಂದಲೇ ಆಹಾರವನ್ನು ತಯಾರಿಸಿಕೊಳ್ಳುತ್ತಿದ್ದಾರೆ. ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೪೬.೬೭ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೪೧.೬೭ರಷ್ಟು ಮಹಿಳೆಯರು ಉರುವಲನ್ನೇ ಬಳಸುತ್ತಿದ್ದಾರೆ. ಇನ್ನುಳಿದಂತೆ ಎರಡೂ ತಾಲೂಕುಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಸೀಮೆಎಣ್ಣೆ ಸ್ಟವ್‌ನ್ನು ಬಳಸುತ್ತಿದ್ದಾರೆ. ಒಟ್ಟಾರೆಯಾಗಿ ಎರಡು ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರು ಉರುವಲು ಅಥವಾ ಕಟ್ಟಿಗೆಯಿಂದಲೇ ತಮ್ಮ ಕುಟುಂಬಕ್ಕೆ ಆಹಾರವನ್ನು ತಯಾರಿಸಿಕೊಳ್ಳುತ್ತಿರುವುದು ಕಂಡುಬಂದಿದೆ.

ಕೋಷ್ಟಕ ೮.೧ ಗುಂಪಿಗೆ ಸೇರದ ಮಹಿಳೆಯರ ಇಂಧನದ ಬಳಕೆ

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್. ಟಿ	ಶೇ	ಒಟ್ಟು
೦೧	ಎಲ್.ಪಿ.ಜಿ	೧೦	೧೬.೬೭	೧೨	೨೦	೨೨	೦೫	೮.೩೩	೦೯	೧೫	೧೪
೦೨	ಉರುವಲು	೩೬	೬೦	೩೫	೫೮.೩೩	೭೧	೩೯	೬೫	೩೩	೫೫	೭೨
೦೩	ಸೀಮೆ ಎಣ್ಣೆ ಸ್ಟವ್	೧೪	೨೩.೩೩	೧೩	೨೧.೬೭	೨೭	೧೬	೨೬.೬೭	೧೮	೩೦	೩೪
೦೪	ವಿದ್ಯುತ್ ಸ್ಟವ್	–	–	–	–	–	–	–	–	–	–
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ತಾಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಹಾಗೂ ಕೂಡ್ಲಿಗಿ ತಾಲೂಕಿನ ಚಿರತಗುಂಡು ಮತ್ತು ರಾಂಪುರ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ತಮ್ಮ ಮನೆಯಲ್ಲಿ ಆಹಾರವನ್ನು ಯಾವ ಇಂಧನದಿಂದ ತಯಾರಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಕೋಷ್ಟಕ ೮.೧.ರಲ್ಲಿ ವಿಶ್ಲೇಷಿಸಲಾಗಿದೆ. ಹೊಸಪೇಟೆ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ.ಜಾತಿಯ ಶೇ.೧೬.೬೭ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೨೦ರಷ್ಟು ಮಹಿಳೆಯರು ಎಲ್.ಪಿ.ಜಿ.ಯನ್ನು ಬಳಸುತ್ತಿರುವುದು ಕಂಡುಬಂದಿದೆ. ಹಾಗೆಯೇ ಪ.ಜಾತಿಯ ಶೇ.೬೦ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೫೮.೩೩ರಷ್ಟು ಮಹಿಳೆಯರು ಉರುವಲು ಅಥವಾ ಕಟ್ಟಿಗೆಯಿಂದ ಆಹಾರವನ್ನು ತಯಾರಿಸಿಕೊಳ್ಳುತ್ತಿದ್ದಾರೆ. ಇನ್ನುಳಿದ ಪರಿಶಿಷ್ಟ ಮಹಿಳೆಯರು ಸೀಮೆಎಣ್ಣೆ ಸ್ಟವ್‌ನ್ನು ಬಳಸುತ್ತಿರುವುದು ತಿಳಿದುಬಂದಿದೆ. ಒಟ್ಟಾರೆಯಾಗಿ ಹೊಸಪೇಟೆ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ತಮಗೆ ಆಹಾರವನ್ನು ತಯಾರಿಸಿಕೊಳ್ಳಲು ಉರುವಲು ಅಥವಾ ಕಟ್ಟಿಗೆಯನ್ನೇ ಬಳಸುತ್ತಿರುವುದು ಹಾಗೂ ಇದಕ್ಕಿಂತ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಎಲ್.ಪಿ.ಜಿಯನ್ನು ಬಳಸುತ್ತಿರುವುದು ಮೇಲಿನ ಕೋಷ್ಟಕದಿಂದ ತಿಳಿದುಬರುತ್ತದೆ. ಕೂಡ್ಲಿಗಿ ತಾಲೂಕಿನ ಎರಡು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಪ.ಜಾತಿಯ ಶೇ.೬೫ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೫೫ರಷ್ಟು ಮಹಿಳೆಯರು ಉರುವಲು ಅಥವಾ ಕಟ್ಟಿಗೆಯನ್ನು ಬಳಸುತ್ತಿದ್ದಾರೆ. ಅದರಂತೆ ಪ.ಜಾತಿಯ ಶೇ.೨೬.೬೭ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೩೦ರಷ್ಟು ಮಹಿಳೆಯರು ಸೀಮೆ ಎಣ್ಣೆ ಸ್ಟವ್‌ನ್ನು ಆಹಾರವನ್ನು ತಯಾರಿಸಿಕೊಳ್ಳಲು ಬಳಸುತ್ತಿರುವುದು ಕಂಡುಬಂದಿದೆ. ಒಟ್ಟಾರೆಯಾಗಿ ತಾಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಮಹಿಳೆಯರು ತಮಗೆ ಆಹಾರವನ್ನು ತಯಾರಿಸಿಕೊಳ್ಳಲು ಉರುವಲು ಅಥವಾ ಕಟ್ಟಿಗೆಯನ್ನೇ ಬಳಸುತ್ತಿರುವುದು ತಿಳಿದುಬಂದಿದೆ. ಇದಕ್ಕಿಂತ ಸ್ವಲ್ಪ ಕಡಿಮೆ ಪ್ರಮಾಮದಲ್ಲಿ ಸೀಮೆಎಣ್ಣೆ ಸ್ಟವ್‌ನ್ನು ಬಳಸುತ್ತಿರುವುದು ಮೇಲಿನ ಕೋಷ್ಟಕದಿಂದ ತಿಳಿದುಬರುತ್ತದೆ.

ಎರಡೂ ತಾಲೂಕುಗಳ ಆಯ್ದ ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ ಗುಂಪುಗಳಿಗೆ ಸೇರಿದ ನಂತರ ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ(ಶೇ.೨೬.೬೭), ಎಸ್.ಟಿ(ಶೇ.೩೨) ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ(ಶೇ.೧೮), ಎಸ್.ಟಿ(ಶೇ.೩೬ರಷ್ಟು) ಪರಿಶಿಷ್ಟ ಮಹಿಳೆಯರು ಸ್ವಲ್ಪ ಪ್ರಮಾಣದಲ್ಲಿ ಆರ್ಥಿಕವಾಗಿ ಸದೃಢರಾಗಿ ತಮ್ಮ ಕುಟುಂಬಕ್ಕೆ ಆಹಾರವನ್ನು ತಯಾರಿಸಿಕೊಳ್ಳಲು ಎಲ್.ಪಿ.ಜಿ.ಯನ್ನು ಬಳಸುತ್ತಿರುವುದು ಕಂಡುಬಂದಿದೆ. ಆದರೆ ಈ ಪ್ರಮಾಣ ಹೊಸಪೇಟೆ ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಬೆರಳೆಣಿಕೆಯಷ್ಟು ಮಾತ್ರ ಕಂಡುಬರುತ್ತಾರೆ(ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ(ಶೇ.೧೬.೬೭), ಎಸ್.ಟಿ(ಶೇ.೨೦) ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ(ಶೇ.೮.೩೩), ಎಸ್.ಟಿ(ಶೇ.೧೫ರಷ್ಟು)). ಕಾರಣ ಇವರು ಗುಂಪುಗಳಿಂದ ದೂರವಿದ್ದು, ಆರ್ಥಿಕವಾಗಿ ಹಿಂದುಳಿದಿದ್ದಾರೆ. ಜೊತೆಗೆ ಕೂಡ್ಲಿಗಿ ತಾಲೂಕಿನ ಸುತ್ತಮುತ್ತಲು ಇರುವ ಪ್ರದೇಶ ಬಯಲು ಭೂಮಿಯಿಂದ ಕೂಡಿರುವುದರಿಂದ ಇವರಿಗೆ ಯಾವುದೇ ರೀತಿಯ ಉದ್ಯೋಗವಿರುವುದಿಲ್ಲ. ಆದ್ದರಿಂದ ಪರಿಶಿಷ್ಟ ಮಹಿಳೆಯರು ಬಡತನ ರೇಖೆಯ ಕೆಳಗೆಯೇ ಇದ್ದಾರೆ. ಹೊಸಪೇಟೆ ತಾಲೂಕಿನ ಪ್ರದೇಶ ನೀರಾವರಿ ಇರುವುದರಿಂದ ಹಣಕಾಸಿನ ವಹಿವಾಟು ಮತ್ತು ಇಲ್ಲಿನ ಜನರಿಗೆ ಉದ್ಯೋಗಾವಕಾಶಗಳು ಹೆಚ್ಚಿವೆ. ಆದ್ದರಿಂದ ಆರ್ಥಿಕವಾಗಿ ಸದೃಢರಾಗುತ್ತಿದ್ದಾರೆ. ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರಿಗೆ ಹೋಲಿಸಿದರೆ ಗುಂಪಿಗೆ ಸೇರಿದ ಮಹಿಳೆಯರು ಆರ್ಥಿಕವಾಗಿ ಸಬಲರಾಗುತ್ತಿರುವುದು ಈ ಮೇಲಿನ ಕೋಷ್ಟಕಗಳಿಂದ ತಿಳಿದುಬರುತ್ತದೆ.

ಕೋಷ್ಟಕ ೯ ಗುಂಪಿಗೆ ಸೇರಿದ ಮಹಿಳೆಯರ ವಿದ್ಯುತ್ ಬಳಕೆ

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ನಾವೇ ತೆಗೆದು ಕೊಂಡಿದ್ದು	೧೬	೨೬.೬೭	೨೨	೩೬.೬೭	೩೮	೧೨	೨೦	೧೮	೩೦	೩೦
೦೨	ಸರಕಾರಿ ಯೋಜನೆಯಲ್ಲಿ ಪಡೆದದ್ದು	೧೪	೭೩.೩೩	೩೮	೬೩.೩೩	೮೨	೪೮	೮೦	೪೨	೭೦	೯೦
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಕೋಷ್ಟಕ ೯ರಲ್ಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿನ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ಮಹಿಳೆಯರ ವಿದ್ಯುತ್ ಬಳಕೆಯ ವಿವರವನ್ನು ತೋರಿಸಲಾಗಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೨೬.೬೭ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೩೬.೬೭ರಷ್ಟು ಮಹಿಳೆಯರು ನಮ್ಮ ಮನೆಗೆ ವಿದ್ಯುತ್ ಸೌಲಭ್ಯವನ್ನು ನಾವೇ ತೆಗೆದುಕೊಂಡಿದ್ದೇವೆ ಎಂದು ತಿಳಿಸಿದ್ದಾರೆ. ಹಾಗೆಯೇ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೨೦ರಷ್ಟು ಮಹಿಳೆಯರು ಹಾಗೂ

ಪ.ಪಂಗಡದ ಶೇ.೩೦ರಷ್ಟು ಮಹಿಳೆಯರು ವಿದ್ಯುತ್ ಸೌಲಭ್ಯವನ್ನು ನಾವೇ ತೆಗೆದುಕೊಂಡಿದ್ದೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೭೩.೩೩ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೬೩.೩೩ರಷ್ಟು ಮಹಿಳೆಯರು ವಿದ್ಯುತ್ ಸೌಲಭ್ಯವನ್ನು ಸರಕಾರಿ ಯೋಜನೆ (ಭಾಗ್ಯಜೋತಿ)ಯಲ್ಲಿ ಪಡೆದಿದ್ದೇವೆ ಎಂದು ತಿಳಿಸಿದ್ದಾರೆ. ಹಾಗೆಯೇ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೮೦ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೭೦ರಷ್ಟು ಮಹಿಳೆಯರು ನಮ್ಮ ಮನೆಗೆ ವಿದ್ಯುತ್ ಸೌಲಭ್ಯವನ್ನು ಸರಕಾರದ ಯೋಜನೆಯಡಿಯಲ್ಲಿ ಪಡೆದಿದ್ದೇವೆ ಎಂದು ಹೇಳಿದ್ದಾರೆ. ಒಟ್ಟಾರೆಯಾಗಿ ಎರಡೂ ತಾಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಮಹಿಳೆಯರು ಅವರು ಮನೆಗಳಿಗೆ ವಿದ್ಯುತ್ ಸೌಲಭ್ಯವನ್ನು ಸರಕಾರಿ ಯೋಜನೆ (ಭಾಗ್ಯಜೋತಿ)ಯ ಅಡಿಯಲ್ಲಿ ಪಡೆದಿರುವುದು ಈ ಮೇಲಿನ ಕೊಷ್ಟಕವನ್ನು ಗಮನಿಸಿದಾಗ ತಿಳಿದುಬರುತ್ತದೆ.

ಕೋಷ್ಟಕ ೯.೧ ಗುಂಪಿಗೆ ಸೇರದ ಮಹಿಳೆಯರ ವಿದ್ಯುತ್ ಬಳಕೆ

ಕ್ರಸ	ಸೂಚಕಗಳು	ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
		ಎಸ್.ಸಿ	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ನಾವೇ ತೆಗೆದು ಕೊಂಡಿದ್ದು	೧೧	೧೮.೩೩	೨೦	೩೩.೩೩	೩೧	೧೦	೧೬.೬೭	೧೫	೨೫	೨೫
೦೨	ಸರಕಾರಿ ಯೋಜನೆಯಲ್ಲಿ ಪಡೆದದ್ದು	೪೯	೮೧.೬೭	೪೦	೬೬.೬೭	೮೯	೫೦	೮೩.೩೩	೪೫	೭೫	೯೫
	ಒಟ್ಟು	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕ ೯.೧ರಲ್ಲಿ ಹೊಸಪೇಟೆ ತಾಲೂಕಿನಲ್ಲಿ ಎರಡು ಪಂಚಾಯತಿಗಳು ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಅವರ ಮನೆಗಳಿಗೆ ಯಾವ ಯೋಜನೆಯಡಿಯಲ್ಲಿ ವಿದ್ಯುತ್ ಸೌಲಭ್ಯವನ್ನು ಪಡೆದಿದ್ದಾರೆ ಎಂಬುದನ್ನು ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೧೮.೩೩ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೩೩.೩೩ರಷ್ಟು ಮಹಿಳೆಯರು ಹಾಗೆಯೇ ಪ.ಜಾತಿಯ ಶೇ.೧೬.೬೭ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೨೫ರಷ್ಟು ಮಹಿಳೆಯರು ನಮ್ಮ ಮನೆಗೆ ವಿದ್ಯುತ್ ಸೌಲಭ್ಯವನ್ನು ನಾವೇ ತೆಗೆದುಕೊಂಡಿದ್ದೇವೆ ಎಂದು ತಿಳಿಸಿದ್ದಾರೆ. ಅದರಂತೆ ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೮೨.೬೭ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೮೩.೩೩ರಷ್ಟು ಮಹಿಳೆಯರು ಹಾಗೆಯೇ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೮೩.೩೩ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೭೫ರಷ್ಟು ಮಹಿಳೆಯರು ವಿದ್ಯುತ್ ಸೌಲಭ್ಯವನ್ನು ಸರಕಾರದ ಯೋಜನೆಯ ಅಡಿಯಲ್ಲಿ ಪಡೆದಿದ್ದೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಟ್ಟಾರೆಯಾಗಿ ಎರಡೂ ತಾಲೂಕುಗಳಲ್ಲಿ ಗುಂಪಿಗೆ ಸೇರದ ಪರಿಶಿಷ್ಟ

ಮಹಿಳೆಯರು ತಮ್ಮ ಮನೆಗಳಿಗೆ ಸರಕಾರದ ಯೋಜನೆ ಅಡಿಯಲ್ಲಿ ವಿದ್ಯುತ್ ಸೌಲಭ್ಯವನ್ನು ಪಡೆದುಕೊಂಡರುವುದು ಮೇಲಿನ ಕೋಷ್ಟಕದಿಂದ ತಿಳಿದಾಕೊಳ್ಳಬಹುದು.

ಹೊಸಪೇಟೆ ತಾಲೂಕಿನ ಎರಡು ಪಂಚಾಯತಿಗಳು ಮತ್ತು ಕೂಡ್ಲಿಗಿ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ನಂತರ ಪರಿಶಿಷ್ಟ ಮಹಿಳೆಯರು ಸ್ವಲ್ಪ ಪ್ರಮಾಣದಲ್ಲಿ ಆರ್ಥಿಕವಾಗಿ ಸದೃಢರಾಗಿ ೬೮ ಸದಸ್ಯರು ತಮ್ಮ ಮನೆಗಳಿಗೆ ತಾವೇ ಸ್ವತಃ ವಿದ್ಯುತ್ ಸಂಪರ್ಕವನ್ನು ತೆಗೆದುಕೊಂಡಿದ್ದಾರೆ. ಆದರೂ ಇನ್ನು ೧೭೨ ಸದಸ್ಯರು ಆರ್ಥಿಕವಾಗಿ ಸದೃಢರಾಗದಿರುವುದು ಕಂಡುಬರುತ್ತದೆ. ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನ ನಾಲ್ಕು ಆಯ್ದ ಪಂಚಾಯತಿಗಳ ವ್ಯಾಪ್ತಿಯಲ್ಲಿ ೫೬ ಪರಿಶಿಷ್ಟ ಮಹಿಳೆಯರು ಮನೆಗಳಿಗೆ ತಾವೇ ಸ್ವತಃ ವಿದ್ಯುತ್ ಸಂಪರ್ಕವನ್ನು ತೆಗೆದುಕೊಂಡಿದ್ದು, ೧೮೨ ಪರಿಶಿಷ್ಟ ಮಹಿಳೆಯರು ಸರಕಾರದ ಭಾಗ್ಯಜ್ಯೋತಿ ಯೋಜನೆಯಲ್ಲಿ ವಿದ್ಯುತ್ ಸಂಪರ್ಕವನ್ನು ತೆಗೆದುಕೊಂಡಿದ್ದಾರೆ. ಒಟ್ಟಾರೆಯಾಗಿ ಪರಿಶಿಷ್ಟ ಮಹಿಳೆಯರು ಗುಂಪಿಗೆ ಸೇರಿದ ಮಹಿಳೆಯರಿಗೆ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರನ್ನು ಹೋಲಿಸಿದಾಗ ಗುಂಪಿಗೆ ಸೇರಿದ ನಂತರ ನಿಧಾನಗತಿಯಲ್ಲಿ ಆರ್ಥಿಕವಾಗಿ ಸಬಲರಾಗುತ್ತಿರುವುದು ಮತ್ತು ತಮ್ಮ ಕುಟುಂಬಗಳನ್ನು ಬಡತನದಿಂದ ಮುಕ್ತಗೊಳಿಸಲು ಸಾಧ್ಯವಾಗುತ್ತಿದೆ.

ಕೋಷ್ಟಕ ೧೦ ಗುಂಪುಗಳು ಆರ್ಥಿಕ ಚಟುವಟಿಕೆಗಳನ್ನು ಮಾಡಿರುವುದರ ಕುರಿತು ಮಾಹಿತಿ

ಕ್ರಸ	**ಸೂಚಕಗಳು**	**ಹೊಸಪೇಟೆ ತಾಲೂಕು**		**ಕೂಡ್ಲಿಗಿ ತಾಲೂಕು**		
		ಸಂಖ್ಯೆ	**ಶೇ**	**ಸಂಖ್ಯೆ**	**ಶೇ**	**ಒಟ್ಟು**
೦೧	ಹೌದು	–	–	–	–	
೦೨	ಇಲ್ಲ	೧೨೦	೧೦೦	೧೨೦	೧೦೦	೨೪೦
	ಒಟ್ಟು	೧೨೦	೧೦೦	೧೨೦	೧೦೦	೨೪೦

ಮೂಲ : ಕ್ಷೇತ್ರ ಕಾರ್ಯ

ಕೋಷ್ಟಕ ೧೦ರಲ್ಲಿ ಹೊಸಪೇಟೆ ತಾಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಹಾಗೂ ಕೂಡ್ಲಿಗಿ ತಾಲೂಕಿನ ಚಿರತಗುಂಡು ಮತ್ತು ರಾಂಪುರ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಸ್ತ್ರೀಶಕ್ತಿ ಗುಂಪುಗಳು ಮಾಡಿರುವ ಆರ್ಥಿಕ ಚಟುವಟಿಕೆಗಳ ಕುರಿತು ವಿವರವನ್ನು ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಎರಡು ಪಂಚಾಯತಿಗಳು ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ ಗುಂಪುಗಳಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಒಟ್ಟಾರೆ ೨೪೦ರಷ್ಟು ಪರಿಶಿಷ್ಟ ಮಹಿಳಾ ಸದಸ್ಯರು ನಾವು ಗುಂಪುಗಳ ಮೂಲಕ ಯಾವುದೇ ರೀತಿಯ ಆರ್ಥಿಕ ಚಟುವಟಿಕೆಗಳನ್ನು ಕೈಗೊಂಡಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕಾರಣ ಗುಂಪುಗಳಿಗೆ ಬ್ಯಾಂಕುಗಳಿಂದ ಕಡಿಮೆ ಪ್ರಮಾಣದಲ್ಲಿ ಸಾಲವನ್ನು ವಿತರಿಸುತ್ತಿವೆ. ಆದಕಾರಣ ಕಡಿಮೆ ಮೊತ್ತದಿಂದ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ

ಹಣದ ಕೊರತೆ ಎದುರಾಗುತ್ತಿದೆ ಎಂದು ಪರಿಶಿಷ್ಟ ಮಹಿಳಾ ಸದಸ್ಯರು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿಸಿದ್ದಾರೆ. ಸ್ತ್ರೀಶಕ್ತಿ ಗುಂಪಿನ ಸದಸ್ಯರು ನಾವು ಯಾವುದೇ ಆರ್ಥಿಕ ಚಟುವಟಿಕೆಗಳನ್ನು ಕೈಗೊಂಡಿಲ್ಲ ಎಂದು ಹೇಳಿದ್ದಾರೆ. ಕಾರಣ ನಮಗೆ ಅಕ್ಷರಜ್ಞಾನ ಇಲ್ಲ. ಆದ್ದರಿಂದ ನಾವು ಏನು ಮಾಡುಬೇಕೆಂಬುದು ತಿಳಿಯುತ್ತಿಲ್ಲ. ಸರಕಾರ ಆಗಿರಲಿ ಅಥವಾ ಸರಕಾರೇತರ ಸಂಸ್ಥೆಗಳ ಆಧಿಕಾರಿಗಳು ಕೇವಲ ಉಳಿತಾಯ ಮಾಡುವುದಕ್ಕೆ ಹೇಳುತ್ತಾರೆ ವಿನಃ ಯಾವುದೇ ತರಬೇತಿ ನೀಡುತ್ತಿಲ್ಲ. ಒಂದು ವೇಳೆ ತರಬೇತಿ ಕೊಟ್ಟರೂ, ಗುಂಪಿನ ಎಲ್ಲಾ ಸದಸ್ಯರಲ್ಲಿ ಕೇವಲ ೨ರಿಂದ ೩ಜನ ಸದಸ್ಯರಿಗೆ ಮಾತ್ರ ತರಬೇತಿ ಕೊಡುತ್ತಾರೆ. ವಿಶೇಷವಾಗಿ ಅಕ್ಷರ ಜ್ಞಾನವನ್ನು ಕಲಿಸುತ್ತಿಲ್ಲ. ಹೀಗಾಗಿ ಗುಂಪಿಗೆ ಸೇರಿದ ಬಹುತೇಕ ಪರಿಶಿಷ್ಟ ಮಹಿಳೆಯರು ಅನಕ್ಷರಸ್ತರಾಗಿರುವುದರಿಂದ ಯಾವುದೇ ರೀತಿ ಆರ್ಥಿಕ ಚಟುವಟಿಕೆಗಳನ್ನು ಕೈಗೊಂಡಿಲ್ಲ. ಇದರ ಜೊತೆಗೆ ಸದಸ್ಯರ ನಡುವೆ ಸಹಕಾರದ ಕೊರತೆ ಮತ್ತು ಜಾತಿ ತಾರತಮ್ಯದಿಂದ ಗುಂಪುಗಳಿಂದ ಅತೃಪ್ತರಾಗಿಯೇ ಉಳಿದಿದ್ದಾರೆ. ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಸ್ವಲ್ಪ ಪ್ರಮಾಣದಲ್ಲಾದರೂ ಆರ್ಥಿಕವಾಗಿ ಸುಧಾರಿಸಿಕೊಂಡಿದ್ದಾರೆ. ಆದರೆ ಗುಂಪುಗಳಿಂದ ಹೊರಗೆ ಉಳಿದ ಪರಿಶಿಷ್ಟ ಮಹಿಳೆಯರು ಸ್ಥಿತಿಯಂತೂ ಚಿಂತಾಜನಕವಾಗಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬಂದಿದೆ.

ಅಧ್ಯಾಯ : ಎಂಟು

ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ರಾಜಕೀಯ ಸಬಲೀಕರಣ

ಅಧ್ಯಾಯ : ಎಂಟು

ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ರಾಜಕೀಯ ಸಬಲೀಕರಣ

ರಾಜಕೀಯ ಅಥವಾ ರಾಜಕಾರಣ ಎಂಬುದು ನಾಗರೀಕ ಸಮಾಜವು ರೂಪಿಸಿಕೊಂಡಿರುವ ಅತಿಮುಖ್ಯವೂ, ಅನಿವಾರ್ಯವೂ ಆದ ಸಾಮಾಜಿಕ ಸಂಸ್ಥೆಯಾಗಿದೆ. ಸಮಾಜದಲ್ಲಿರುವ ಎಲ್ಲರೂ ಲಿಂಗಭೇದವೆಣಿಸದೆ ರಾಜಕೀಯವಾಗಿ ಪರಿಜ್ಞಾನವುಳ್ಳವರಾಗಿದ್ದಾಗಲೇ ಅಲ್ಲಿ ಅಭಿವೃದ್ಧಿ ಸಾಧ್ಯ. ಇದರಿಂದ ಜನರು ತಮ್ಮ ಹಕ್ಕು ಬಾಧ್ಯತೆಯನ್ನು ಸರಿಯಾಗಿ ಅನುಭವಿಸಲು ಸಹಕಾರಿಯಾಗುತ್ತದೆ. ಸ್ತ್ರೀ ಪುರುಷರಿಬ್ಬರೂ ಒಂದು ದೇಶದ ಅಭಿವೃದ್ಧಿಯ ಅವಿಭಾಜ್ಯ ಅಂಗಗಳಾಗಿದ್ದು, ಅಧಿಕಾರ ನೀಡುವಲ್ಲಿ ಎಡವಿದೆ. ಹೀಗಾಗಲು ಕಾರಣ ಎಲ್ಲಾ ಅಧಿಕಾರ ಕೇಂದ್ರಗಳ ಮೇಲೆ ಸಂಪೂರ್ಣವಾದ ಹಿಡಿತವನ್ನು ಹೊಂದುವ ಮೂಲಕ ಪುರುಷನು ಸಮಾಜದ ಎಲ್ಲಾ ಹಂತಗಳಲ್ಲಿ ತನ್ನ ಪರವಾದ ನಿರ್ಧಾರಗಳನ್ನು ರೂಪಿಸಿಕೊಳ್ಳಲು ಚರಿತ್ರೆಯುದ್ದಕ್ಕೂ ಯತ್ನಿಸಿದ್ದಾನೆ. ದೇಶಕ್ಕೆ ಸ್ವಾತಂತ್ರ್ಯ ಬಂದು ೭೦ ವರ್ಷಗಳಲ್ಲಿ ಭಾರತೀಯ ಸ್ತ್ರೀಯ ಸ್ಥಾನಮಾನಗಳು ಕೆಲವು ಕ್ಷೇತ್ರಗಳಲ್ಲಿ ಸುಧಾರಿಸುತ್ತಿವೆಯಾದರೂ ಅವಳಿನ್ನೂ ರಾಜಕೀಯವಾಗಿ ಅತ್ಯಂತ ನಿರ್ಲಕ್ಷಕ್ಕೊಳಗಾಗಿದ್ದಾಳೆ. ಹಾಗಾಗಿ ಒಂದು ವ್ಯವಸ್ಥೆಯ ಮೇಲೆ ಹಿಡಿತ ಸಾಧಿಸುವುದು ನಿಜವಾದ ಅರ್ಥದಲ್ಲಿ ಅಧಿಕಾರ ಕೇಂದ್ರಿತವಾದ ರಾಜಕೀಯ ಕ್ಷೇತ್ರದ ಮೇಲೆ ಹಿಡಿತದಿಂದಲೇ ಸಾಧ್ಯವಾಗುತ್ತದೆ. ರಾಜಕೀಯದಲ್ಲಿ ಮಹಿಳೆಯರಿಗೆ ಸರಿಸಮಾನ ಸ್ಥಾನಮಾನಗಳನ್ನು ನೀಡದೇ ಇರುವುದು ಶತಮಾನಗಳ ಇತಿಹಾಸ. ಪುರುಷ ಪ್ರಧಾನ ಸಮಾಜದ ಫಲವಾಗಿ ಮಹಿಳೆ ಅನೇಕ ಅವಕಾಶಗಳಿಂದ ವಂಚಿತಳಾಗುತ್ತಾ ದ್ವಿತೀಯ ದರ್ಜೆಯ ಪ್ರಜೆಯಂತೆ ಬದುಕುತ್ತಾ ಬಂದಿದ್ದಾಳೆ. ತನ್ನದೇ ಬದುಕಿನ ನಿರ್ಣಯಗಳನ್ನು ತೆಗೆದುಕೊಳ್ಳಲಾಗದಂತಹ ಸಮಾಜದ ಕಟ್ಟುಪಾಡುಗಳಲ್ಲಿ ಬಂಧಿಯಾಗಿದ್ದಾಳೆ. ಸಾಮಾಜಿಕವಾಗಿ, ಆರ್ಥಿಕವಾಗಿ ಪುರುಷರ ಪರಾವಲಂಬಿಯೇ ಆಗುತ್ತಾ ಬಂದ ಮಹಿಳೆ ಅದರಿಂದ ಹೊರಬರಲು ಜಗತ್ತಿನಾದ್ಯಂತ ಎಷ್ಟೆಲ್ಲಾ ಹೋರಾಟ ನಡೆಸಬೇಕಾಗಿ ಬಂದದ್ದನ್ನು ಗಮನಿಸಿದಾಗ ಇದರ ಅರ್ಥ ಇನ್ನೂ ವ್ಯಾಪಕವಾಗುತ್ತದೆ. ಸುಮಾರು ೧೮೪೮ರ ಸಮಯದಲ್ಲಿ ನ್ಯೂಯಾರ್ಕಿನಲ್ಲಿ ಮತದಾನದ ಹಕ್ಕಿಗಾಗಿ ಮಹಿಳೆಯರು ಧ್ವನಿ ಎತ್ತಿದರೂ, ೧೯೧೭ರ ಹೊತ್ತಿಗೆ ಕೇವಲ ೧೫ (WWW.Worldatlas.com. Corsican Republic(Now part of France) 1755, Pitcairn Island 1838, Isle of man 1881, Cook Islands 1893, New Zealand 1893, Australia

1902, Finland 1906, Norway 1913, Denmark 1915, Armenia 1917, Estonia 1917, Latvia 1917, Netherlands 1917, Russia 1917 and Canada 1917) ರಾಷ್ಟ್ರಗಳಲ್ಲಿ ಮಾತ್ರ ಮಹಿಳೆಯರಿಗೆ ಮತದಾನದ ಹಕ್ಕು ದೊರೆಯಿತು. ಹಾಗೂ ಭಾರತದಲ್ಲಿ ಅಮೇರಿಕಾದ ಪ್ರಭಾವದ ಅಡಿಯಲ್ಲಿ, ೧೯೪೫ರಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ನೀಡಲಾಯಿತು. ಆದರೆ ಕೇವಲ ವಿಧ್ಯಾವಂತ ಮಹಿಳೆಯರಿಗೆ ಮಾತ್ರವಿತ್ತು. ನಂತರ ಮಹಿಳಾ ಮತದಾರರ ನಿರ್ಬಂಧಗಳನ್ನು ೧೯೬೫ರಲ್ಲಿ ತೆಗೆದುಹಾಕಲಾಯಿತು, ಭಾರತ ೧೯೪೭ರಲ್ಲಿ ಯುನೈಟೆಡ್ ಕಿಂಗ್‌ಡಮ್‌ನಿಂದ ಸ್ವಾತಂತ್ರ್ಯ ಪಡೆದ ಮೇಲೆ ಎಲ್ಲಾ ಪರುಷರು ಹಾಗೂ ಮಹಿಳೆಯರಿಗೆ ಸಮಾನ ಮತದಾನದ ಹಕ್ಕುಗಳನ್ನು ನೀಡಿತು(Women's Suffrage-wikipedia.org). ಮಹಿಳೆಗೆ ರಾಜಕೀಯದಲ್ಲಿ ಅವಕಾಶ ಸಿಕ್ಕಲ್ಲಿ ರಾಷ್ಟ್ರ ಹಾಗೂ ರಾಜ್ಯಮಟ್ಟದ ರಾಜಕೀಯದಲ್ಲಿ ಅಭೂತಪೂರ್ವ ಸಾಧನೆ, ಆಡಳಿತ ನಡೆಸುತ್ತಾ ತಮ್ಮ ಹಿರಿಮೆಯನ್ನು ಮೆರೆದಿದ್ದಾಳೆ. ಒಂದು ಕಡೆ ಹೀಗೆ ಹೇಳುತ್ತಾರೆ, ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬುದು ಸಾಕ್ಷರತೆಯ ಆಂದೋಲನದ ಮುಖ್ಯ ಘೋಷಣೆ. "ಹೆಣ್ಣೊಂದು ಅಧಿಕಾರದ ಚುಕ್ಕಾಣಿ ಹಿಡಿದರೆ ನವಸಮಾಜಕ್ಕೆ ಒಂದು ಹೆಜ್ಜೆ ಮುಂದಿಟ್ಟಂತೆ" ಎಂಬ ಭಾವ ಮೂಡಿದಾಗ ಮಾತ್ರ ಲಿಂಗಭೇದವಿಲ್ಲದ ಸಮಾಜ ಕಾಣಲು ಸಾಧ್ಯ. ಆದುದರಿಂದ ಪ್ರಸ್ತುತ ಅಧ್ಯಯನದಲ್ಲಿ ಸ್ತ್ರೀಶಕ್ತಿ ಗುಂಪಿನ ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ರಾಜಕೀಯ ಸಹಭಾಗಿತ್ವ ಹಾಗೂ ಸಬಲೀಕರಣವನ್ನು ಅರಿಯುವುದು ಪ್ರಸ್ತುತ ಅಧ್ಯಯನದ ಆಶಯವಾಗಿದೆ.

ಕೋಷ್ಟಕ : ೧ ಗುಂಪಿಗೆ ಸೇರಿದ ಮಹಿಳೆಯರು ಸ್ಥಳೀಯ ಸಂಘ ಸಂಸ್ಥೆಗಳಿಗೆ ಸದಸ್ಯತ್ವದ ಕುರಿತು

ಕ್ರಸ	ಸೂಚಕಗಳು		ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
			ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ಸಂಘ-ಸಂಸ್ಥೆಳಲ್ಲಿ ಸದಸ್ಯತ್ವ ಪಡೆದಿದ್ದಿರಾ	ಹೌದು	-	-	-	-	-	-	-	-	-	-
		ಇಲ್ಲ	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦
	ಒಟ್ಟು		೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕ ೧ರಲ್ಲಿ ಹೊಸಪೇಟೆ ತಾಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಹಾಗೂ ಕೂಡ್ಲಿಗಿ ತಾಲೂಕಿನ ಚಿರತಗುಂಡು ಮತ್ತು ರಾಂಪುರ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ ಗುಂಪುಗಳ ಪರಿಶಿಷ್ಟ ಮಹಿಳೆಯರು ಯಾವುದಾದರೂ ಸಂಘ-ಸಂಸ್ಥೆಗಳಿಗೆ ಸದಸ್ಯತ್ವವನ್ನು ಹೊಂದಿದ್ದಾರೆಯೇ ಎಂಬುದನ್ನು ವಿವರಿಸಲಾಗಿದೆ. ಹೊಸಪೇಟೆ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಶೇ.೧೦೦ರಷ್ಟು ಪರಿಶಿಷ್ಟ ಮಹಿಳೆಯರು ಯಾವುದೇ ಸಂಘ ಸಂಸ್ಥೆ (ಮಹಿಳಾ ಮಂಡಲ,

ಸಹಕಾರಿ ಸಂಘ, ಜಿಲ್ಲಾ ಪಂಚಾಯತಿ ಮತ್ತು ಗ್ರಾಮಪಂಚಾಯತಿ ಮುಂತಾದವು)ಗಳಿಗೆ ಸದಸ್ಯತ್ವವನ್ನು ಹೊಂದಿಲ್ಲ ಎಂದು ತಿಳಿಸಿದ್ದಾರೆ. ಹಾಗೆಯೇ ಕೂಡ್ಲಿಗಿ ತಾಲೂಕಿನ ಎರಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಶೇ.೧೦೦ರಷ್ಟು ಪರಿಶಿಷ್ಟ ಮಹಿಳೆಯರು ಸಂಘ–ಸಂಸ್ಥೆಗಳಿಗೆ ಸದಸ್ಯತ್ವವನ್ನು ಪಡೆಯದೇ ಇರುವುದು ಕಂಡುಬಂದಿದೆ.

ಕೋಷ್ಟಕ : ೧.೧ ಗುಂಪಿಗೆ ಸೇರದ ಮಹಿಳೆಯರು ಸ್ಥಳೀಯ ಸಂಘ ಸಂಸ್ಥೆಗಳಿಗೆ ಸದಸ್ಯತ್ವದ ಕುರಿತು

ಕ್ರಸಂ	ಸೂಚಕಗಳು		ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
			ಎಸ್. ಸಿ.	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್. ಟಿ	ಶೇ	ಒಟ್ಟು
೦೧	ಸಂಘ–ಸಂಸ್ಥೆಳಲ್ಲಿ ಸದಸ್ಯತ್ವ ಪಡೆದಿದ್ದಿರಾ	ಹೌದು	–	–	–	–	–	–	–	–	–	–
		ಇಲ್ಲ	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦
	ಒಟ್ಟು		೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ತಾಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಹಾಗೂ ಕೂಡ್ಲಿಗಿ ತಾಲೂಕಿನ ಚಿರತಗುಂಡು ಮತ್ತು ರಾಂಪುರ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಯಾವುದಾದರೂ ಸಂಘ–ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಹೊಂದಿದ್ದಾರೆಯೇ ಎಂಬುದನ್ನು ಕೋಷ್ಟಕ ೧.೧ರಲ್ಲಿ ವಿಶ್ಲೇಷಿಸಲಾಗಿದೆ. ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಶೇ.೧೦೦ರಷ್ಟು ಯಾವುದೇ ಸಂಘ–ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಹೊಂದಿಲ್ಲ ಎಂಬುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ.

ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ಸ್ತ್ರೀಶಕ್ತಿ ಸಂಘಗಳನ್ನು ಹೊರತು ಪಡಿಸಿ ಯಾವುದೇ ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಪಡೆದಿಲ್ಲವೆಂದು ತಿಳಿಸಿದ್ದಾರೆ. ಕಾರಣ ಮಹಿಳಾ ಸ್ವ–ಸಹಾಯ ಗುಂಪುಗಳಿಂದ ಆರ್ಥಿಕವಾಗಿ ಸದೃಢಗೊಂಡ ಪರಿಶಿಷ್ಟ ಮಹಿಳೆಯರು ರಾಜಕೀಯವಾಗಿ ತಮ್ಮನ್ನು ತಾವು ಗುರುತಿಸಿಕೊಳ್ಳಲು ಪ್ರಯತ್ನಿಸಿದರೂ ದಲಿತರು ಎಂಬ ಕಾರಣಕ್ಕಾಗಿ ಅವರಿಗೆ ಸಂಘ ಸಂಸ್ಥೆಗಳಲ್ಲಿ ಯಾವುದೇ ಸ್ಥಾನಮಾನಗಳು ಇಂದಿಗೂ ಸಿಗದಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬಂದಿದೆ.

ಕೋಷ್ಟಕ : ೨ ಗುಂಪಿಗೆ ಸೇರಿದ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ

ಕ್ರಸಂ	ಸೂಚಕಗಳು		ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
			ಎಸ್. ಸಿ.	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್. ಟಿ	ಶೇ	ಒಟ್ಟು
೦೧	ಮತ ಚಲಾಯಿಸಲು ಭಾಗವಹಿಸುವ ಬಗೆ	ಹೌದು	೬೦	೧೦೦	೬೦	೧೦೦	೧೨೦	೫೪	೯೦	೫೦	೮೩.೩೩	೧೦೪
		ಇಲ್ಲ	–	–	–	–	–	೦೬	೧೦	೧೦	೧೬.೬೭	೧೬
೦೨	ಚುನಾವಣಾ ಪ್ರಕಾರದಲ್ಲಿ ಭಾಗವಹಿಸುವ ಬಗೆ	ಹೌದು	೩೨	೫೩.೩೩	೩೦	೫೦	೬೨	೨೫	೪೧.೩೭	೧೮	೩೦	೪೩
		ಇಲ್ಲ	೨೮	೪೬.೬೭	೩೦	೫೦	೫೮	೩೫	೫೮.೩೩	೪೨	೭೦	೭೭
೦೩	ಚನಾವಣೆಯಲ್ಲಿ ಸ್ವರ್ಧಿಸಲು ಇಚ್ಚಿಸುವ ಬಗೆ	ಹೌದು	೦೧	೧.೬೭	೧೨	೨೦	೧೩	–	–	೧೭	೨೮.೩೩	೧೭
		ಇಲ್ಲ	೫೯	೯೮.೩೩	೪೮	೮೦	೧೦೭	೬೦	೧೦೦	೪೩	೭೧.೬೭	೧೦೩
೦೪	ಗ್ರಾಮಸಭೆಗಳಲ್ಲಿ ಭಾಗವಹಿಸುವ ಬಗೆ	ಹೌದು	೫೦	೮೩.೩೩	೫೧	೮೫	೧೦೧	೪೭	೭೮.೩೩	೫೩	೮೮.೩೩	೧೦೦
		ಇಲ್ಲ	೧೦	೧೬.೬೭	೦೯	೧೫	೧೯	೧೩	೨೧.೬೭	೦೭	೧೧.೬೭	೨೦
೦೫	ಗ್ರಾಮದ ಅಭಿವೃದ್ಧಿಯಲ್ಲಿ ರಾಜಕೀಯ ಪಾಲ್ಗೊಳ್ಳುವಿಕೆ	ಹೌದು	೩೪	೫೬.೬೭	೩೭	೬೧.೬೭	೭೧	೩೯	೬೫	೪೧	೬೮.೩೩	೮೦
		ಇಲ್ಲ	೨೬	೪೩.೩೩	೨೩	೩೮.೩೩	೪೯	೨೧	೩೫	೧೯	೩೧.೬೭	೪೦

ಮೂಲ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕ ೨ರಲ್ಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ಬರುವ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ರಾಜಕೀಯ ಭಾಗವಿಸುವಿಕೆಯ ವಿವರವನ್ನು ವಿಶ್ಲೇಷಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿ ಮತ್ತು ಪ.ಪಂಗಡದ ಶೇ.೧೦೦ರಷ್ಟು ಮಹಿಳೆಯರು ಚುನಾವಣೆ ಸಂದರ್ಭದಲ್ಲಿ ಮತ ಚಲಾಯಿಸಲು ಭಾಗವಹಿಸಿರುವುರದು ಕಂಡುಬಂದಿದೆ. ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೯೦ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೮೩.೩೩ರಷ್ಟು ಮಹಿಳೆಯರು ಮತ ಚಲಾಯಿಸಲು ಭಾಗವಹಿಸಿದ್ದಾರೆ. ಪ.ಜಾತಿಯ ಶೇ.೧೦ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೧೬.೬೭ರಷ್ಟು ಮಹಿಳೆಯರು ಚುನಾವಣಾ ಸಂದರ್ಭದಲ್ಲಿ ಮತದಾನ ಮಾಡಿಲ್ಲವೆಂದು ತಿಳಿಸಿದ್ದಾರೆ. ಅದೇ ರೀತಿಯಾಗಿ ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೫೩.೩೩ರಷ್ಟು ಮಹಿಳೆಯರು ಮತ್ತು

ಪ.ಪಂಗಡದ ಶೇ.೫೦ರಷ್ಟು ಮಹಿಳೆಯರು ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿರುವುದು ಕಂಡುಬಂದಿದೆ. ಪ.ಜಾತಿಯ ಶೇ.೪೬.೪೭ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೫೦ರಷ್ಟು ಮಹಿಳೆಯರು ಚನಾವಣಾ ಪ್ರಚಾರದಲ್ಲಿ ಭಾಗವಹಿಸದೇ ಇರುವುದು ತಿಳಿದುಬಂದಿದೆ. ಹಾಗೆಯೇ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೪೧.೬೭ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೩೦ರಷ್ಟು ಮಹಿಳೆಯರು ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದಾರೆ. ಪ.ಜಾತಿಯ ಶೇ.೫೮.೩೩ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೭೦ರಷ್ಟು ಮಹಿಳೆಯರು ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿಲ್ಲ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೧.೬೭ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೨೦ರಷ್ಟು ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಪ.ಜಾತಿಯ ಶೇ.೯೮.೩೩ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೮೦ರಷ್ಟು ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸಲು ಇಷ್ಟವಿಲ್ಲ ಎಂದಿದ್ದಾರೆ. ಕೂಡ್ಲಿಗಿ ತಾಲೂಕಿನಲ್ಲಿ ಪ.ಪಂಗಡದ ಶೇ.೨೮.೩೩ರಷ್ಟು ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಪ.ಜಾತಿಯ ಶೇ.೧೦೦ರಷ್ಟು ಮತ್ತು ಪ.ಪಂಗಡದ ಶೇ.೭೧.೬೭ರಷ್ಟು ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸಲು ಇಷ್ಟವಿಲ್ಲ ಎಂದಿದ್ದಾರೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೮೩.೩೩ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೮೫ರಷ್ಟು ಮಹಿಳೆಯರು ಗ್ರಾಮ ಸಭೆಗಳಲ್ಲಿ ಭಾಗವಹಿಸಿದ್ದಾರೆ. ಪ.ಜಾತಿಯ ಶೇ.೧೬.೬೭ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೧೫ರಷ್ಟು ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸಿಲ್ಲ ಎಂದು ತಿಳಿಸಿದ್ದಾರೆ. ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೭೮.೩೩ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೮೮.೩೩ರಷ್ಟು ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸಿದ್ದಾರೆ. ಪ.ಜಾತಿಯ ಶೇ.೨೧.೬೭ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೧೧.೬೭ರಷ್ಟು ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸದೇ ಇರುವುದು ಕಂಡುಬಂದಿದೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೫೬.೬೭ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೬೧.೬೭ರಷ್ಟು ಮಹಿಳೆಯರು ರಾಜಕೀಯ ವ್ಯಕ್ತಿಗಳ ಜೊತೆ ಸೇರಿ ಗ್ರಾಮದ ಅಭಿವೃದ್ಧಿಯ ನೈರ್ಮಲ್ಯ, ಮಧ್ಯಪಾನ ನಿಷೇಧ, ಪಾಲಕರಲ್ಲಿ ಶಿಕ್ಷಣದ ಜಾಗೃತಿ ಮುಂತಾದ)ಲ್ಲಿ ಭಾಗವಹಿಸುತ್ತಿರುವುದು ಕಂಡುಬಂದಿದೆ. ಪ.ಜಾತಿಯ ಶೇ.೪೩.೩೩ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೩೮.೩೩ರಷ್ಟು ಮಹಿಳೆಯರು ಗ್ರಾಮದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿಲ್ಲ ಎಂದು ತಿಳಿಸಿದ್ದಾರೆ. ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೬೫ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೬೮.೩೩ರಷ್ಟು ಮಹಿಳೆಯರು ಗ್ರಾಮದ ಅಭಿವೃದ್ಧಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಪ.ಜಾತಿಯ ಶೇ.೩೫ರಷ್ಟು ಮಹಿಳೆಯರು ಮತ್ತು ಪ.ಪಂಗಡದ

ಶೇ.೩೧.೬೭ರಷ್ಟು ಮಹಿಳೆಯರು ಗ್ರಾಮದ ಅಭಿವೃದ್ಧಿಯಲ್ಲಿ ಭಾಗವಹಿಸದೇ ಇರುವುದು ಕೋಷ್ಟಕದಿಂದ ತಿಳಿದುಬರುತ್ತದೆ.

ಕೋಷ್ಟಕ : ೨.೧. ಗುಂಪಿಗೆ ಸೇರದ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ

ಕ್ರಸ	ಸೂಚಕಗಳು		ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
			ಎಸ್. ಸಿ.	ಶೇ	ಎಸ್. ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್. ಟಿ	ಶೇ	ಒಟ್ಟು
೦೧	ಮತ ಚಲಾಯಿಸಲು ಭಾಗವಹಿಸುವ ಬಗೆ	ಹೌದು	೫೨	೮೬.೬೭	೫೫	೯೧.೬೭	೧೦೭	೫೦	೮೩.೩೩	೫೦	೮೩.೩೩	೧೦೦
		ಇಲ್ಲ	೦೮	೧೩.೩೩	೦೫	೮.೩೩	೧೩	೧೦	೧೬.೬೭	೧೦	೧೬.೬೭	೨೦
೦೨	ಚುನಾವಣಾ ಪ್ರಕಾರದಲ್ಲಿ ಭಾಗವಹಿಸುವ ಬಗೆ	ಹೌದು	೨೦	೩೩.೩೩	೨೫	೪೧೬೭	೪೫	೧೮	೩೦	೧೭	೨೮.೩೩	೩೫
		ಇಲ್ಲ	೪೦	೬೬.೬೭	೩೫	೫೮.೩೩	೭೫	೪೨	೭೦	೪೩	೭೧.೬೭	೮೫
೦೩	ಚನಾವಣೆಯಲ್ಲಿ ಸ್ವರ್ಧಿಸಲು ಇಚ್ಚಿಸುವ ಬಗೆ	ಹೌದು	–	–	–	–	–	–	–	–	–	–
		ಇಲ್ಲ	೬೦	೧೦೦	೬೦	೧೨೦	೬೦	೧೦೦	೬೦	೧೦೦	೬೦	೧೨೦
೦೪	ಗ್ರಾಮಸಭೆಗಳಲ್ಲಿ ಭಾಗವಹಿಸುವ ಬಗೆ	ಹೌದು	೧೫	೨೫	೧೧	೧೮.೩೩	೨೬	೨೦	೩೩.೩೩	೦೯	೧೫	೨೯
		ಇಲ್ಲ	೪೫	೭೫	೪೯	೮೪.೬೭	೯೪	೪೦	೬೬.೬೭	೫೧	೮೫	೯೧
೦೫	ಗ್ರಾಮದ ಅಭಿವೃದ್ಧಿಯಲ್ಲಿ ರಾಜಕೀಯ ಪಾಲ್ಗೊಳ್ಳುವಿಕೆ	ಹೌದು	೦೪	೬.೬೭	೦೬	೧೦	೧೦	೦೩	೫	೧೦	೧.೬೭	೧೩
		ಇಲ್ಲ	೫೬	೯೩.೩೩	೫೪	೯೦	೧೧೦	೫೭	೯೫	೫೦	೮೩.೩೩	೧೦೭

ಮೂಲ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕ ೨.೧ರಲ್ಲಿ ಹೊಸಪೇಟೆ ತಾಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಹಾಗೂ ಕೂಡ್ಲಿಗಿ ತಾಲೂಕಿನ ಚಿರತಗುಂಡು ಮತ್ತು ರಾಂಪುರ ಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಕುರಿತು ವಿಶ್ಲೇಷಿಸಲಾಗಿದೆ. ಮುಖ್ಯವಾಗಿ ಎರಡೂ ತಾಲೂಕುಗಳಲ್ಲಿನ ನಾಲ್ಕು ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿನ ಸ್ತ್ರೀಶಕ್ತಿ ಸಂಘದ ಸದಸ್ಯರು ಮತ್ತು ಸಂಘಗಳಿಂದ ಹೊರಗೆ ಇರುವಂತಹ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯು ತುಂಬಾ ಕಡಿಮೆ ಇರುವುದು ಕಂಡುಬರುತ್ತದೆ. ಅಂದರೆ ರಾಜಕೀಯ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಮತಚಲಾಯಿಸುವುದು, ಚುನಾವಣಾ ಪ್ರಚಾರದಲ್ಲಿ ಭಾಗವಹಿಸುವುದು, ಚುನಾವಣಾ ಸ್ಪರ್ಧೆ, ಗ್ರಾಮ ಸಭೆಗಳಲ್ಲಿ ಭಾಗವಹಿಸುವುದು ಮತ್ತ ಗ್ರಾಮದ ಅಭಿವೃದ್ಧಿಗೆ ಸಂಬಂಧಿಸಿದಂತೆ ರಾಜಕೀಯ ಪಾಲ್ಗೊಳ್ಳುವಿಕೆ ಈ ಎಲ್ಲಾ ಅಂಶಗಳನ್ನು ಮಾನದಂಡವಾಗಿ ಮಾಡಿಕೊಂಡಿದ್ದು, ಮತಚಲಾಯಿಸುವ ಪ್ರಕ್ರಿಯೆಗೆ

ಸಂಬಂಧಿಸಿದಂತೆ ಹೊಸಪೇಟೆ ತಾಲೂಕಿನ ಎರಡೂ ಗ್ರಾಮಪಂಚಾಯತಿಗಳಲ್ಲಿ ಎಸ್.ಸಿ. ಸಮುದಾಯದ ಶೇ.೮೬.೬೭ರಷ್ಟು ಮಹಿಳೆಯರು ಈಗಾಗಲೇ ಮತದಾನ ಪ್ರಕ್ರಿಯೆಯಲ್ಲಿ ಮತಗಳನ್ನು ಚಲಾಯಿಸಿರುವುದು ಕಂಡುಬಂದಿದೆ. ಹಾಗೆಯೇ ಎಸ್.ಟಿ. ಸಮುದಾಯದ ಮಹಿಳೆಯರು ಶೇ.೯೧.೬೭ರಷ್ಟು ಮತದಾನದ ಪ್ರಕ್ರಿಯೆಯಲ್ಲಿ ಈಗಾಗಲೇ ತೊಡಗಿಸಿಕೊಂಡಿದ್ದಾರೆ. ಹಾಗೆಯೇ ಕೂಡ್ಲಿಗಿ ತಾಲೂಕಿನ ಎರಡೂ ಗ್ರಾಮಪಂಚಾಯತಿಗಳಲ್ಲಿ ಮತದಾನದ ಪ್ರಕ್ರಿಯೆಯಲ್ಲಿ ತೊಡಗಿಕೊಂಡವರ ಪ್ರಮಾಣ ಸಮನಾಗಿರುವುದನ್ನು ಗುರುತಿಸಲಾಗಿದೆ. ಹಾಗೆಯೇ ಚನಾವಣಾ ಪ್ರಚಾರಕ್ಕೆ ಸಂಬಂಧಿಸಿದಂತೆ ಪ್ರಚಾರದಲ್ಲಿ ಭಾಗವಹಿಸದೇ ಇರುವ ಮಹಿಳೆಯರ ಸಂಖ್ಯೆಯೇ ಅಧಿಕವಾಗಿದೆ. ಅಂದರೆ ನಾಲ್ಕು ಗ್ರಾಮಪಂಚಾಯತಿಗಳನ್ನು ಒಟ್ಟಾಗಿ ತೆಗೆದುಕೊಂಡಾಗ ಎಸ್.ಸಿ. ಮತ್ತು ಎಸ್.ಟಿ. ಮತ್ತು ಎಸ್.ಟಿ. ಸಮುದಾಯದ ಮಹಿಳೆಯರು ಶೇ.೭೦ಕ್ಕಿಂತ ಅಧಿಕ ಪ್ರಮಾಣದಲ್ಲಿ ಭಾಗವಹಿಸಿರುವುದು ಕಂಡುಬರುತ್ತಿದೆ. ಚನಾವಣೆಯಲ್ಲಿ ಸ್ವರ್ಧಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಯಾವೊಬ್ಬ ಮಹಿಳೆಯು ಕೂಡ ಒಪ್ಪದಿರುವುದು ಕಂಡುಬರುತ್ತದೆ. ಬಹಳ ಮುಖ್ಯವಾಗಿ ಗ್ರಾಮ ಸಂಭೆಗಳಲ್ಲಿ ಭಾಗವಹಿಸುವಿಕೆಯ ಬಗ್ಗೆಯೂ ಕೂಡ ನಿರಾಸಕ್ತಿ ಇರುವುದನ್ನು ಕೋಷ್ಟಕದಲ್ಲಿ ಕಾಣಬಹುದು. ಅಂದರೆ ಶೇ.೮೦ಕ್ಕಿಂತ ಅಧಿಕ ಮಹಿಳೆಯರು ಗ್ರಾಮಸಭೆಗಳಿಂದ ದೂರ ಇದ್ದಾರೆ. ಕೊನೆಯಲ್ಲಿ ಗ್ರಾಮದ ಅಭಿವೃದ್ಧಿಗಾಗಿ ರಾಜಕೀಯ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದಂತೆ ಹೊಸಪೇಟೆ ತಾಲೂಕಿನ ಎರಡೂ ಗ್ರಾಮ ಪಂಚಾಯತಿಗಳಲ್ಲಿನ ಎಸ್.ಸಿ. ಸಮುದಾಯದ ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣ ಶೇ.೬.೬೭ರಷ್ಟಿದ್ದು ಎಸ್.ಟಿ. ಸಮುದಾಯದ ಮಹಿಳೆಯರ ಪ್ರಮಾಣ ಶೇ.೧೦ರಷ್ಟಿದೆ. ಹಾಗೆಯೇ ಕೂಡ್ಲಿಗಿ ತಾಲೂಕಿನ ಎರಡೂ ಗ್ರಾಮ ಪಂಚಾಯತಿಗಳಲ್ಲಿಯೂ ಇದರ ಪ್ರಮಾಣ ತುಂಬಾ ಕಡಿಮೆಯಿದೆ. ಅಂದರೆ ಎಸ್.ಸಿ ಸಮುದಾಯದ ಮಹಿಳೆಯರ ಪ್ರಮಾಣ ಮತ್ತು ಎಸ್.ಟಿ. ಸಮುದಾಯದ ಮಹಿಳೆಯರ ಪ್ರಮಾಣ ಕ್ರಮವಾಗಿ ಶೇ.೫ ಮತ್ತು ಶೇ.೧.೬೭ರಷ್ಟಿರುವುದು ಕಂಡುಬರುತ್ತಿದೆ. ಅಂದರೆ ಈ ಶೇಕಡಾ ಪ್ರಮಾಣವನ್ನು ಹೊರತುಪಡಿಸಿ ಹೊಸಪೇಟೆ ತಾಲೂಕಿನಲ್ಲಿ ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ಕ್ರಮವಾಗಿ ೧೧೦ರಷ್ಟು ಮತ್ತು ೧೦೭ರಷ್ಟು ಮಹಿಳೆಯರು ಭಾಗವಹಿಸದೇ ಇರುವುದನ್ನು ಗುರುತಿಸಲಾಗಿದೆ.

ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯನ್ನು ಇಲ್ಲಿ ಚರ್ಚಿಸಲಾಗಿದೆ. ಇಲ್ಲಿ ಬಹುಸಂಖ್ಯಾತ ಮಹಿಳೆಯರು ತಮ್ಮ ಗಂಡಂದಿರ ಇಚ್ಛೆಗೆ ಅನುಗುಣವಾಗಿ ಮತ ಚಲಾಯಿಸುತ್ತಿದ್ದಾರೆ. ಗುಂಪಿನ ಸದಸ್ಯರು ಸಭೆ ಸೇರಿ ಮತ ಚಲಾಯಿಸುವುದರ ಬಗ್ಗೆ ಸಭೆ ನಡೆಸಿ ಇಂಥವರಿಗೆ ಮಾತ್ರ ಮತ ಹಾಕಬೇಕು ಎಂದು ನಿರ್ಧಾರ ತೆಗೆದುಕೊಂಡರೂ, ಅವರ ಇಷ್ಟದ ಪ್ರಕಾರ ಮತ ಚಲಾಯಿಸಲು ತಮ್ಮ ಗಂಡಂದಿರು ಅಡ್ಡಿಪಡಿಸುತ್ತಾರೆ. ರಾಜಕೀಯ ನಾಯಕರಿಗೆ ಇವರು ಒಂದು ರೀತಿಯ ಓಟು ಬ್ಯಾಂಕ್ ಇದ್ದ ಹಾಗೆ. ಹಾಗಾಗಿ ಕುಟುಂಬದ

ಮುಖ್ಯಸ್ಥನನ್ನು ಭೇಟಿಯಾದರೆ ಸಾಕು ಆಗ ಕುಟುಂಬದ ಹಿರಿಯರಿಗೆ ಹಣ ಅಥವಾ ಕುಡಿಯುವುದಕ್ಕೆ ಬ್ರ್ಯಾಂದಿ (ವೈನ್) ಕೊಟ್ಟರೆ ಸಾಕು ಅವರ ಪರ ಮತ ಚಲಾಯಿಸಲು ಹೇಳುತ್ತಾರೆ. ಹಾಗಾಗಿ ಮಹಿಳೆಯರು ಅವರ ಅಭಿಪ್ರಾಯದಂತೆ ಮತ ಚಲಾಯಿಸುತ್ತಾರೆ. ಗುಂಪಿಗೆ ಸೇರಿದ(ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ ಶೇ.೧೦ರಷ್ಟು, ಎಸ್.ಟಿ ಶೇ.೧೬.೬೭ರಷ್ಟು) ಮತ್ತು ಗುಂಪಿಗೆ ಸೇರದ(ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ ಶೇ.೧೩.೩೩, ಎಸ್.ಟಿ ಶೇ.೮.೩೩ ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ ಶೇ.೧೬.೬೭, ಎಸ್.ಟಿ ಶೇ.೧೬.೬೭ರಷ್ಟು) ಪರಿಶಿಷ್ಟ ಮಹಿಳೆಯರು ಯಾವುದಾದರೂ ನಗರಕ್ಕೆ ದುಡಿಯುವುದಕ್ಕೆ ವಲಸೆ ಹೋದ ಸಮಯದಲ್ಲಿ ಚುನಾವಣೆ ಗುರುತಿನ ಚೀಟಿಯನ್ನು ಅಥವಾ ಜನಗಣತಿಯನ್ನು ಮಾಡುವುದಕ್ಕೆ ಬಂದಂತಹ ಅಧಿಕಾರಿಗಳಿಗೆ ಮನೆ ಪಕ್ಕದಲ್ಲಿರುವವರು ಇವರು ಊರು ಬಿಟ್ಟು ಹೋಗಿದ್ದಾರೆ ಮತ್ತೆ ಬರುವುದಿಲ್ಲ ಎಂದೆಲ್ಲಾ ಹೇಳುತ್ತಾರೆ. ಹಾಗಾಗಿ ನಾವು ಜನಸಂಖ್ಯಾ ಪಟ್ಟಿಯಲ್ಲಿ ಅಥವಾ ಗುರುತಿನ ಚೀಟಿ ಇಲ್ಲದೇ ಇರುವುದರಿಂದ ನಾವು ಮತ ಚಲಾಯಿಸಿಲ್ಲ ಎಂದು ತಿಳಿಸಿದ್ದಾರೆ. ರಾಜಕೀಯ ನಾಯಕರು ಸ್ವ-ಸಹಾಯ ಗುಂಪುಗಳಿಗೆ ಇಂತಿಷ್ಟು ಹಣವನ್ನು ಕೊಟ್ಟು ಅವರ ಪಕ್ಷದ ಪರವಾಗಿ ಪ್ರಚಾರ ಮಾಡುವುದಕ್ಕೆ ಹೇಳುತ್ತಾರೆ. ಅದರ ಪ್ರಕಾರ ಗುಂಪಿನ ಎಲ್ಲಾ ಸದಸ್ಯರು ಅವರ ಪಕ್ಷದ ಪರವಾಗಿ ಪ್ರಚಾರದಲ್ಲಿ ಭಾಗವಹಿಸುತ್ತಾರೆ. ಇದರಲ್ಲಿಯೂ ಕೂಡ ತಮ್ಮ ಗಂಡಂದಿರು ವಿರೋಧ ವ್ಯಕ್ತಪಡಿಸುತ್ತಿರುವುದು ಕಂಡುಬಂದಿದೆ. ಗುಂಪಿಗೆ ಸೇರದ ಮಹಿಳೆಯರು ಅಂತೂ ಅದರ ಗೋಜಿಗೆ ಹೋಗುವುದಿಲ್ಲ. ಕಾರಣ ಪುರುಷ ಪ್ರಧಾನ ವ್ಯವಸ್ಥೆಯ ಧೋರಣೆ. ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಚುನಾವಣಾ ಅಭ್ಯರ್ಥಿಯಾಗಿ ಸ್ಪರ್ಧಿಸಲು ಇಷ್ಟವಿದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಒಂದು ವಿಶೇಷ. ಆದರೆ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಇಷ್ಟವಿಲ್ಲ ಎಂದು ತಿಳಿಸಿದ್ದಾರೆ. ಪರಿಶಿಷ್ಟ ಮಹಿಳೆಯರಿಗೆ ಪ್ರಜಾತಾಂತ್ರಿಕ ವ್ಯವಸ್ಥೆಯ ಗಂಧಗಾಳಿಯು ಇಲ್ಲದ ಇವರಿಗೆ ಚನಾವಣೆಯಲ್ಲಿ ಸ್ಪರ್ಧಿಸುವಂತಹ ಮನೋಸ್ಥಿತಿಯಾದರೂ ಹೇಗೆ ಬಂದಿತು. ಇದಕ್ಕಿಂತ ಮುಖ್ಯವಾಗಿ ನಮ್ಮ ಸಾಮಾಜಿಕ ಕಟ್ಟುಪಾಡುಗಳಲ್ಲಿ ಮಹಿಳೆಯರು ಅಷ್ಟೊಂದು ಸ್ವತಂತ್ರವಾಗಿ ಯೋಚಿಸುವಂತಹ ವಾತಾವರಣ ಎಲ್ಲಿಯಾದರೂ ದೊರಕಿದೆಯೇ? ಅದರಲ್ಲೂ ಪರಿಶಿಷ್ಟ ಮಹಿಳೆಯರು ದಿನನಿತ್ಯ ಜೀವನದ ಅಳಿವು-ಉಳಿವಿನ ಬಗ್ಗೆ ಯೋಚಿಸುವುದನ್ನು ಬಿಟ್ಟು, ಈ ರಾಜಕೀಯ ಚಿಂತೆ ನಮಗೇಕೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ ಶೇ.೮೩.೩೩ರಷ್ಟು, ಎಸ್.ಟಿ ಶೇ.೮೫ರಷ್ಟು ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ ಶೇ.೭೮.೩೩ರಷ್ಟು, ಎಸ್.ಟಿ ಶೇ.೮೮.೩೩ರಷ್ಟು ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಗ್ರಾಮ ಸಭೆಗಳಲ್ಲಿ ಭಾಗವಹಿಸುತ್ತಾ ಗ್ರಾಮದ ಜನರಿಗೆ ಗ್ರಾಮದ ಅಭಿವೃದ್ಧಿ, ಶಿಕ್ಷಣದ ಮಹತ್ವ, ನೈರ್ಮಲ್ಯ ಮುಂತಾದ ಅಂಶಗಳ ಬಗ್ಗೆ ಅರಿವನ್ನು ಮೂಡಿಸುತ್ತಿದ್ದಾರೆ. ಆದರೆ ಹೊಸಪೇಟೆ ತಾಲೂಕಿನಲ್ಲಿ ಎಸ್.ಸಿ ಶೇ.೭೫ರಷ್ಟು, ಎಸ್.ಟಿ ಶೇ.೮೪.೬೭ರಷ್ಟು ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಎಸ್.ಸಿ ಶೇ.೬೬.೬೭ರಷ್ಟು, ಎಸ್.ಟಿ ಶೇ.೮೫ರಷ್ಟು

ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸದೇ ಇರುವುದು ಕಂಡುಬಂದಿದೆ. ರಾಜಕೀಯವೆಂಬುದೆಲ್ಲವು ಪುರುಷನ ಸ್ವತ್ತಾಗಿರುವುದರಿಂದ ಇಂತಹ ಕಡೆಗಳಲ್ಲಿ ಹೆಣ್ಣು ಕಾಣೆಯಾಗಿದ್ದಾಳೆ. ದಲಿತ ಮಹಿಳೆಯರಿಗೆ ಇಂತಹ ಮನೋಭಾವನೆಗೆ, ಭಾವನಿಷ್ಟಕ್ಕೆ ಮೂಲಕಾರಣ ಎಂದರೆ, ಪುರುಷ ಕೇಂದ್ರಿತ ಮಾದರಿಗಳಿಂದಲೇ ಮಹಿಳೆಯ ಅನುಭವ, ಸಂವೇದನೆಗಳನ್ನು ನಿರಾಕರಿಸಿ ಅವಳ ಮೇಲೆ ಹಿಡಿತ ಸಾಧಿಸುವ ಮೂಲಕ ರಾಜಕೀಯ ಸಹಭಾಗಿತ್ವಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವುದು ಕಂಡುಬಂದಿದೆ. ಇಲ್ಲಿ ಮುಖ್ಯವಾಗಿ ತಿಳಿದುಬಂದಿರುವ ಅಂಶವೆಂದರೆ, ಗುಂಪುಗಳ ಅಥವಾ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಏನಾದರೂ ರಾಜಕೀಯ ವ್ಯಕ್ತಿಗಳ ಜೊತೆಗೆ ಮಾತನಾಡಿದರೆ ಅಥವಾ ಹೋದರೆ ನಮ್ಮ ಗಂಡಂದಿರು ಅವರ ಹತ್ತಿರ ಯಾಕೆ ಮಾತನಾಡುತ್ತೀಯ, ಅವನಿಗೂ ನಿನಗು ಏನು ಸಂಬಂಧ ಅವನ ಜೊತೆಗೆ ಅನೈತಿಕ ಸಂಬಂಧ ಇದೆ ಎಂದು ಮಾನಸಿಕ ಕಿರುಕುಳ ಕೊಡುತ್ತಾರೆ ಎಂದು ಗುಂಪಿನ ಸದಸ್ಯರು ತಿಳಿಸಿರುವುದು ಕಂಡುಬಂದಿದೆ.

ಪುರುಷ ಪ್ರಧಾನತೆಯಿಂದ ಕೂಡಿರುವ ವ್ಯವಸ್ಥೆಯಲ್ಲಿ ಮಹಿಳೆಯು ನಿರ್ಲಕ್ಷ್ಯಕ್ಕೆ ಒಳಗಾಗಿ ಅಂಚಿಗೆ ತಳ್ಳಲ್ಪಟ್ಟಿದ್ದಾಳೆ. ಮಹಿಳೆಯರ ಒಟ್ಟು ಸಶಕ್ತೀಕರಣದಲ್ಲಿ ಅವರ ರಾಜಕೀಯ ಸಶಕ್ತೀಕರಣವು ಒಂದು ಭಾಗವಾಗಿದೆ. ರಾಜಕೀಯ ಸಶಕ್ತೀಕರಣವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ, ಪಾತ್ರ, ಪ್ರಾತಿನಿಧ್ಯ, ಮತದಾನ, ಚುನಾವಣೆಗೆ ಸ್ಪರ್ಧಿಸುವುದು, ನಿರ್ಧಾರ ಕೈಗೊಳ್ಳುವ ಸ್ಥಾನಗಳನ್ನು ಹೊಂದುವುದು, ರಾಜಕೀಯ ವಿಚಾರಧಾರೆಯನ್ನು ಬೆಳೆಸುವುದು, ನಾಯಕತ್ವವನ್ನು ವಹಿಸುವುದು ಮುಂತಾದವುಗಳನ್ನು ಗುಣಾತ್ಮಕವಾಗಿ ಹಾಗೂ ಪರಿಮಾಣಾತ್ಮಕವಾಗಿ ನೋಡಿದರೆ ಪರಿಶಿಷ್ಟ ಮಹಿಳೆಯರು ರಾಜಕೀಯ ಸಶಕ್ತತೆಯಲ್ಲಿ ಹಿಂದುಳಿದಿರುವುದು ಕಂಡುಬರುತ್ತದೆ.

ಕೋಷ್ಟಕ : ೩ ಗುಂಪಿಗೆ ಸೇರಿದ ಮಹಿಳೆಯರ ರಾಜಕೀಯ ಅರಿವು

ಕ್ರಸಂ	ಸೂಚಕಗಳು		ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
			ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ಈಗಿನ ಗ್ರಾಮ ಪಂಚಾಯತಿಲ್ಲಿ ಸದಸ್ಯರ ಸಂಖ್ಯೆ ಕುರಿತು	ಗೊತ್ತಿದೆ	೧೪	೨೩.೩೩	೨೦	೩೩.೩೩	೩೪	೧೬	೨೬.೬೭	೨೫	೪೧.೬೭	೪೧
		ಗೊತ್ತಿಲ್ಲ	೪೬	೭೬.೬೭	೪೦	೬೬.೬೭	೮೬	೪೪	೭೩.೩೩	೩೫	೫೮.೩೩	೭೯
೦೨	ಈಗಿನ ಗ್ರಾಮ ಪಂಚಾಯತಿಯ ಅಧ್ಯಕ್ಷರು ಯಾರು	ಗೊತ್ತಿದೆ	೨೪	೪೦	೨೫	೪೧.೬೭	೪೯	೨೦	೩೩.೩೩	೩೨	೫೩.೩೩	೫೨
		ಗೊತಿಲ್ಲ	೩೬	೬೦	೩೫	೫೮.೩೩	೭೧	೪೦	೬೬.೬೭	೨೮	೪೬.೬೭	೬೮
೦೩	ನಿಮ್ಮ [illegible] ಯಾವ	ಗೊತ್ತಿದೆ	೦೪	೬.೬೭	೦೯	೧೫	೧೩	೦೧	೧.೬೭	೧೨	೨೦	೧೩
		ಗೊತ್ತಿ	೫೬	೯೩.	೫೧	೮೫	೧೦೭	೫೯	೯೮.	೪೮	೮೦	೧೦೭

	ಕ್ಷೇತ್ರಕ್ಕೆ ಬರುತ್ತದೆ	ಲ್ಲ		೩೩					೩೩			
೦೪	ನಿಮ್ಮ ಕ್ಷೇತ್ರದ ಶಾಸಕರು ಯಾರು	ಗೊತ್ತಿದೆ	೧೯	೩೧.೬೭	೨೨	೩೬.೬೭	೪೧	೨೦	೩೩.೩೩	೨೮	೪೬.೬೭	೪೮
		ಗೊತ್ತಿಲ್ಲ	೪೧	೬೮.೩೩	೩೮	೬೩.೩೩	೭೯	೪೦	೬೬.೬೭	೩೨	೫೩.೩೩	೭೨
೦೫	ರಾಜ್ಯದ ಮುಖ್ಯ ಮಂತ್ರಿಯಾರು	ಗೊತ್ತಿದೆ	೫೪	೯೦	೬೦	೧೦೦	೧೧೪	೫೦	೮೩.೩೩	೬೦	೧೦೦	೧೧೦
		ಗೊತ್ತಿಲ್ಲ	೦೬	೧೦	–	–	೦೬	೧೦	೧೬.೬೭	–	–	೧೦
೦೬	ಭಾರತ ದೇಶದ ಪ್ರಧಾನ ಮಂತ್ರಿ ಯಾರು	ಗೊತ್ತಿದೆ	೦೮	೧೩.೩೩	೧೪	೨೩.೩೩	೨೨	೧೦	೧೬.೬೭	೧೭	೨೮.೩೩	೨೭
		ಗೊತ್ತಿಲ್ಲ	೫೨	೮೬.೬೭	೪೬	೭೬.೬೭	೯೮	೫೦	೮೩.೩೩	೪೩	೭೧.೬೭	೯೩
	ಒಟ್ಟು											

ಮೂಲ : ಕ್ಷೇತ್ರ ಕಾರ್ಯ

ಕೋಷ್ಟಕ ೩ರಲ್ಲಿ ಹೊಸಪೇಟೆ ತಾಲೂಕು ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರಿದ ಮಹಿಳೆಯರಿಗೆ ಇರುವ ರಾಜಕೀಯ ತಿಳುವಳಿಕೆ ಕುರಿತು ವಿಶ್ಲೇಷಿಸಲಾಗಿದೆ. ಹೊಸಪೇಟೆ ತಾಲೂಕಿನ ಎರಡು ಪಂಚಾಯತಿಗಳಲ್ಲಿ ಪ.ಜಾತಿಯ ಶೇ.೭೬.೬೭ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೬೬.೬೭ರಷ್ಟು ಮಹಿಳೆಯರು ಗ್ರಾಮ ಪಂಚಾಯತಿಗೆ ಆಯ್ಕೆ ಆಗಿರುವ ಸದಸ್ಯರ ಸಂಖ್ಯೆ ಗೊತ್ತಿಲ್ಲ ಎಂದು ತಿಳಿಸಿದ್ದಾರೆ. ಹಾಗೆಯೇ ಕೂಡ್ಲಿಗಿ ತಾಲೂಕಿನ ಎರಡು ಪಂಚಾಯತಿಗಳಲ್ಲಿ ಪ.ಜಾತಿಯ ಶೇ.೭೩.೩೩ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೫೮.೩೩ರಷ್ಟು ಮಹಿಳೆಯರು ಪಂಚಾಯತಿಯ ಸದಸ್ಯರ ಸಂಖ್ಯೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಎರಡು ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರಿಗೆ ಸ್ಥಳೀಯ ಮಟ್ಟದಲ್ಲಿ ರಾಜಕೀಯ ಅರಿವಿನ ಕೊರತೆ ಕಾಣುತ್ತದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೬೦ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೫೮.೩೩ರಷ್ಟು ಮಹಿಳೆಯರು ಹಾಗೆಯೇ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೬೬.೬೭ರಷ್ಟು ಹಾಗೂ ಪ.ಪಂಗಡದ ಶೇ.೪೬.೬೭ರಷ್ಟು ಮಹಿಳೆಯರು ಗ್ರಾಮಪಂಚಾಯತಿಯ ಅಧ್ಯಕ್ಷರು ಯಾರಿದ್ದಾರೆ ಎಂಬುದು ಗೊತ್ತಿಲ್ಲ ಎಂದು ತಿಳಿಸಿದ್ದಾರೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿ ಮತ್ತು ಪ.ಪಂಗಡದ ಮಹಿಳೆಯರಿಗೆ ರಾಜಕೀಯದ ಬಗ್ಗೆ ತಿಳುವಳಿಕೆ ಸಮನಾಗಿದೆ. ಆದರೆ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಮಹಿಳೆಯರಿಗೆ ರಾಜಕೀಯ ತಿಳುವಳಿಕೆ (ಶೇ.೩೩.೩೩) ಇದೆ. ಪ.ಪಂಗಡದ ಮಹಿಳೆಯರಿಗೆ ರಾಜಕೀಯ ತಿಳುವಳಿಕೆ (ಶೇ.೫೩.೩೩) ಹೆಚ್ಚಾಗಿದೆ. ಅಂದರೆ ಈ ತಾಲೂಕಿನಲ್ಲಿ ಪ.ಜಾತಿಯ ಮಹಿಳೆಯರಿಗೆ ಹೋಲಿಸಿದಾಗ ಪ.ಪಂಗಡದ ಮಹಿಳೆಯರಿಗೆ ರಾಜಕೀಯ ತಿಳುವಳಿಕೆ ಹೆಚ್ಚಾಗಿದೆ ಎಂಬುದು ಕೋಷ್ಟಕದಿಂದ ತಿಳಿದುಬರುತ್ತದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೯೩.೩೩ರಷ್ಟು ಮಹಿಳೆಯರು ಮತ್ತು ಪ.ಪಗಂಡದ ಶೇ.೮೫ರಷ್ಟು ಮಹಿಳೆಯರು ನಮ್ಮ

ಊರು ಯಾವ ಕ್ಷೇತ್ರಕ್ಕೆ ಬರುತ್ತದೆ ಎಂಬುದು ಗೊತ್ತಿಲ್ಲ ಎಂದು ತಿಳಿಸಿದ್ದಾರೆ. ಹಾಗೆಯೇ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೯೮.೩೩ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೮೦ರಷ್ಟು ಮಹಿಳೆಯರಿಗೆ ಅವರು ಊರು ಕ್ಷೇತ್ರಕ್ಕೆ ಬರುತ್ತದೆ ಎಂಬುವ ತಿಳುವಳಿಕೆ ಇಲ್ಲದೇ ಇರುವುದು ಕಂಡುಬಂದಿದೆ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೬೮.೩೩ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೬೩.೩೩ರಷ್ಟು ಮಹಿಳೆಯರಿಗೆ ತಮ್ಮ ಕ್ಷೇತ್ರದ ಶಾಸಕರು ಯಾರೆಂಬುದು ಗೊತ್ತಿಲ್ಲ. ಹಾಗೆಯೇ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೬೬.೬೭ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೫೩.೩೩ರಷ್ಟು ಮಹಿಳೆಯರಿಗೆ ಕ್ಷೇತ್ರದ ಶಾಸಕರ ಬಗ್ಗೆ ತಿಳುವಳಿಕೆಯಿಲ್ಲ. ಹೊಸಪೇಟೆ ತಾಲೂಕಿನ ಪ.ಜಾತಿಯ ಶೇ.೯೦ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೧೦೦ರಷ್ಟು ಮಹಿಳೆಯರು ರಾಜ್ಯದ ಮುಖ್ಯಮಂತ್ರಿ ಯಾರೆಂಬುದು ಗೊತ್ತಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದೇ ರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೮೩.೩೩ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೧೦೦ರಷ್ಟು ಮಹಿಳೆಯರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಯಾರೆಂಬುದು ಗೊತ್ತಿದೆ ಎಂದು ತಿಳಿಸಿದ್ದಾರೆ. ಹಾಗೆಯೇ ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೮೬.೬೭ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೭೬.೬೭ರಷ್ಟು ಮಹಿಳೆಯರಿಗೆ ಅದೇ ರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೮೩.೩೩ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೭೧.೬೭ರಷ್ಟು ಮಹಿಳೆಯರಿಗೆ ಭಾರತ ದೇಶದ ಪ್ರಧಾನಮಂತ್ರಿ ಯಾರೆಂಬುದು ಗೊತ್ತಿಲ್ಲ ಎಂದು ಮೇಲಿನ ಕೋಷ್ಟಕದಿಂದ ತಿಳಿದುಬಂದಿದೆ. ಒಟ್ಟಾರೆಯಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಪರಿಶಿಷ್ಟ ಮಹಿಳೆಯರಿಗೆ ಸ್ಥಳೀಯ ಮಟ್ಟದಲ್ಲಿ ರಾಜಕೀಯ ತಿಳುವಳಿಕೆ ಕಡಿಮೆ ಇರುವುದು ಕಂಡುಬಂದಿದೆ. ರಾಜ್ಯಮಟ್ಟದಲ್ಲಿ ರಾಜಕೀಯ ತಿಳುವಳಿಕೆ ಇದೆ. ಆದರೆ ರಾಷ್ಟ್ರಮಟ್ಟದಲ್ಲಿ ಈ ಎರಡು ತಾಲೂಕುಗಳಲ್ಲಿನ ಪರಿಶಿಷ್ಟ ಮಹಿಳೆಯರಿಗೆ ರಾಜಕೀಯ ತಿಳುವಳಿಕೆ ಅತ್ಯಂತ ಕಡಿಮೆ ಇರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬಂದಿದೆ.

ಕೋಷ್ಟಕ : ೩.೧ ಗುಂಪಿಗೆ ಸೇರದ ಮಹಿಳೆಯರು ರಾಜಕೀಯ ಅರಿವು

ಕ್ರಸ	ಸೂಚಕಗಳು		ಹೊಸಪೇಟೆ ತಾಲೂಕು					ಕೂಡ್ಲಿಗಿ ತಾಲೂಕು				
			ಎಸ್.ಸಿ.	ಶೇ	ಎಸ್.ಟಿ	ಶೇ	ಒಟ್ಟು	ಎಸ್ ಸಿ.	ಶೇ	ಎಸ್.ಟಿ	ಶೇ	ಒಟ್ಟು
೦೧	ಈಗಿನ ಗ್ರಾಮ ಪಂಚಾಯತಿಲ್ಲಿ ಸದಸ್ಯರ ಸಂಖ್ಯೆ ಕುರಿತು	ಗೊತ್ತಿದೆ	೦೫	೮.೩೩	೦೮	೧೩.೩೩	೧೩	೧೦	೧೬.೬೭	೧೯	೩೧.೬೭	೨೯
		ಗೊತ್ತಿಲ್ಲ	೫೫	೯೧.೬೭	೫೨	೮೬.೬೭	೧೦೭	೫೦	೮೩.೩೩	೪೧	೬೮.೩೩	೯೧
೦೨	ಈಗಿನ ಗ್ರಾಮ ಪಂಚಾಯತಿಯ ಅಧ್ಯಕ್ಷರು ಯಾರು	ಗೊತ್ತಿದೆ	೧೬	೨೬.೬೭	೧೯	೩೧.೬೭	೩೫	೧೨	೨೦	೨೬	೪೩.೩೩	೩೮
		ಗೊತಿಲ್ಲ	೪೪	೭೩.೩೩	೪೧	೬೮.೩೩	೮೫	೪೮	೮೦	೩೪	೫೬.೬೭	೮೨

೧೩	ನಿಮ್ಮ ಊರು ಯಾವ ಕ್ಷೇತ್ರಕ್ಕೆ ಬರುತ್ತದೆ	ಗೊತ್ತಿದೆ	–	–	೦೨	೩.೩೩	೦೨	೦೧	೧.೬೭	೧೦	೧೬.೬೭	೧೧
		ಗೊತ್ತಿಲ್ಲ	೬೦	೧೦೦	೫೮	೯೬.೬೭	೧೧೮	೫೯	೯೮.೩೩	೫೦	೮೩.೩೩	೧೦೯
೧೪	ನಿಮ್ಮ ಕ್ಷೇತ್ರದ ಶಾಸಕರು ಯಾರು	ಗೊತ್ತಿದೆ	–	–	–	–	–	–	–	–	–	–
		ಗೊತ್ತಿಲ್ಲ	೬೦	೧೦೦	೬೦	೧೦೦	೧೨೦	೬೦	೧೦೦	೬೦	೧೦೦	೧೨೦
೧೫	ರಾಜ್ಯದ ಮುಖ್ಯ ಮಂತ್ರಿಯಾರು	ಗೊತ್ತಿದೆ	೨೦	೩೩.೩೩	೨೨	೩೬.೬೭	೪೨	೧೦	೧೬.೬೭	೨೧	೩೫	೩೧
		ಗೊತ್ತಿಲ್ಲ	೪೦	೬೬.೬೭	೩೮	೬೩.೩೩	೭೮	೫೦	೮೩.೩೩	೩೯	೬೫	೮೯
೧೬	ಭಾರತ ದೇಶದ ಪ್ರಧಾನ ಮಂತ್ರಿ ಯಾರು	ಗೊತ್ತಿದೆ	೦೨	೩.೩೩	೦೨	೩.೩೩	೦೪	೦೭	೧೧.೬೭	೧೧	೧೮.೬೭	೧೮
		ಗೊತ್ತಿಲ್ಲ	೫೮	೯೬.೬೭	೫೮	೯೬.೬೭	೧೧೬	೫೩	೮೮.೩೩	೪೯	೮೧.೬೭	೧೦೨

ಮೂಲ : ಕ್ಷೇತ್ರ ಕಾರ್ಯ

ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರದ ಮಹಿಳೆಯರಿಗೆ ಇರುವ ರಾಜಕೀಯ ತಿಳುವಳಿಕೆ ಬಗ್ಗೆ ಕೋಷ್ಟಕ ೩.೧ರಲ್ಲಿ ತೋರಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೯೧.೬೭ರಷ್ಟು ಮಹಿಳೆಯರು ಮತ್ತು ಪ.ಪಂಗಡದ ಶೇ.೮೬.೬೭ರಷ್ಟು ಮಹಿಳೆಯರು ಹಾಗೆಯೇ ಕೂಡ್ಲಿಗಿ ತಾಲೂಕಿನಲ್ಲಿ ಪ.ಜಾತಿಯ ಶೇ.೮೩.೩೩ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೬೮.೩೩ರಷ್ಟು ಮಹಿಳೆಯರು ಸ್ಥಳೀಯ ಮಟ್ಟದ ಪಂಚಾಯತಿಯಲ್ಲಿ ಸದಸ್ಯರ ಸಂಖ್ಯೆ ಗೊತ್ತಿಲ್ಲವೆಂದು ಹೇಳಿರುವುದು ಕಂಡುಬಂದಿದೆ. ಹೊಸಪೇಟೆ ತಾಲೂಕಿನಲ್ಲಿ ಪ.ಜಾತಿಯ ಶೇ.೭೩.೩೩ರಷ್ಟು ಮಹಿಳೆಯರು ಹಾಗೂ ಪ.ಪಂಗಡದ ಶೇ.೬೮.೩೩ರಷ್ಟು ಮಹಿಳೆಯರು ಅದೇರೀತಿಯಾಗಿ ಕೂಡ್ಲಿಗಿ ತಾಲೂಕಿನ ಪ.ಜಾತಿಯ ಶೇ.೮೦ರಷ್ಟು ಮತ್ತು ಪ.ಪಂಗಡದ ಶೇ.೫೬.೬೭ರಷ್ಟು ಮಹಿಳೆಯರಿಗೆ ಪಂಚಾಯತಿಯ ಅಧ್ಯಕ್ಷರು ಯಾರೆಂಬುದು ಗೊತ್ತಿಲ್ಲ ಎರಡು ತಾಲೂಕುಗಳ ನಾಲ್ಕು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರಿಗೆ ಸ್ಥಳೀಯ, ರಾಜ್ಯ, ಮತ್ತು ರಾಷ್ಟ್ರಮಟ್ಟದಲ್ಲಿ ರಾಜಕೀಯ ತಿಳುವಳಿಕೆಯ ಕೊರತೆ ಎದ್ದು ಕಾಣುತ್ತಿದೆ. ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬೆರಳೆಣಿಕೆಯಷ್ಟು ಪರಿಶಿಷ್ಟ ಮಹಿಳೆಯರಿಗೆ ರಾಜಕೀಯ ತಿಳುವಳಿಕೆ ಇರುವುದು ಕೋಷ್ಟಕವನ್ನು ಗಮನಿಸಿದರೆ ತಿಳಿದುಬರುತ್ತದೆ.

ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ಆಯ್ದ ಗ್ರಾಮ ಪಂಚಾಯಿತಗಳ ವ್ಯಾಪ್ತಿಯಲ್ಲಿ ಬರುವ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ಯಾರೊಬ್ಬರೂ ಕೂಡ ಯಾವುದೇ ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿಲ್ಲದಿರುವುದು ಕಂಡುಬಂದಿದೆ. ಹೀಗಾಗಿ ಮಹಿಳೆಯರ ರಾಜಕೀಯ

ಪ್ರಜ್ಞೆಯ ಕುರಿತು ವಿವರಿಸಬೇಕಾಗಿದೆ. ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರಿಗೆ ಗ್ರಾಮಪಂಚಾಯತಿಗಳ ಸದಸ್ಯರ ಸಂಖ್ಯೆ, ಅಧ್ಯಕ್ಷರು, ನಮ್ಮ ಕ್ಷೇತ್ರ, ದೇಶದ ಪ್ರಧಾನ ಮಂತ್ರಿ ಯಾರೆಂಬುದು ತಿಳುವಳಿಕೆ ಇರುವುದಿಲ್ಲ. ಆದರೆ ಯಾವ ಪಂಚಾಯತಿಯಲ್ಲಿ (ಉದಾಹರಣೆಗೆ, ಚಿರತಗುಂಡು) ಪರಿಶಿಷ್ಟ ಜಾತಿ ಅಥವಾ ಪಂಗಡದ ಮಹಿಳೆ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಅಥವಾ ಪಂಚಾಯತಿಗೆ ಅಧ್ಯಕ್ಷೆಯಾದರೆ ಅಥವಾ ಸದಸ್ಯೆಯಾದರೆ ಮಾತ್ರ ಅವರ ಬಗ್ಗೆ ತಿಳಿದುಕೊಳ್ಳುತ್ತಾರೆ. ಇಲ್ಲವಾದರೆ ಅದರ ಕಡೆಗೆ ಗಮನಹರಿಸುವುದಿಲ್ಲ. ಆದರೆ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರಿಗೆ ರಾಜ್ಯದ ಮುಖ್ಯಮಂತ್ರಿ ಯಾರೆಂಬುದು ತಿಳುವಳಿಕೆ ಇದೆ. ಕಾರಣ ಗುಂಪಿನ ಸದಸ್ಯರು ವಾರದ ಅಥವಾ ತಿಂಗಳ ಸಭೆಯಲ್ಲಿ ಸಮಾಜದ ಆಗು ಹೋಗುಗಳ ಬಗ್ಗೆ ಚರ್ಚೆಮಾಡುತ್ತಾರೆ. ಆದರೆ ಸ್ಥಳೀಯ ರಾಜಕೀಯ ಬಗ್ಗೆ ಚರ್ಚೆಮಾಡದಿರುವುದು ಒಂದು ವಿಶೇಷ. ಗಾಂಧಿ ಹೇಳುವಂತೆ ಹೆಣ್ಣು ಬೇರೆ ಗಂಡು ಬೇರೆ. ಆದರೆ ಇನ್ನೂರು ಸಮಾನರು ಇದ್ದು ಎಷ್ಟು ಸೂಕ್ತ ವಿಷಯವೆಂದರೆ ಸಮಾನತೆ ಎಂದು ವಿಭಿನ್ನತೆ ಮರೆತರೆ ಕರ್ತವ್ಯಲೋಪವಾಗುತ್ತದೆ. ವಿಭಿನ್ನತೆ ಎಂದು ಸಮಾನತೆ ಮರೆತರೆ ಹಕ್ಕು ಕಳೆದುಹೋಗುತ್ತದೆ. ಈ ಎರಡರ ಸಮನ್ವಯವನ್ನು ಕಾಪಾಡಿಕೊಳ್ಳುವುದು ಇಂದಿನ ಮಹಿಳೆಯರ ಅತಿ ದೊಡ್ಡ ಸವಾಲು. ನಾನು ಮಹಿಳೆ ಎಂದು ಗೊತ್ತಿದೆ, ಆದರೆ ಅದು ನನ್ನ ಮಿತಿ ಎಂದು ಗೊತ್ತಿಲ್ಲ ಎಂಬ ಅರಿವು ಮಹಿಳಾ ಜಾಗೃತಿಗೆ ಅನಿವಾರ್ಯವಾದದ್ದು, ದಿನನಿತ್ಯದ ಜಂಜಾಟಗಳೆಂಬ, ಕರ್ತವ್ಯ ಜವಾಬ್ದಾರಿಗಳೆಂಬ ಅನುದಿನದ ಅಂತರ ಗಂಗೆಯನ್ನು ದಾಟಿ ಸ್ವ-ಪ್ರಜ್ಞೆ ಬೆಳೆಸಿಕೊಳ್ಳುವುದು ಮಹಿಳೆಗೆ ಅಷ್ಟೇನೂ ಸುಲಭವಲ್ಲ. ಅವಳ ಬಿಡುಗಡೆಯ ಮೊದಲ ಹೆಜ್ಜೆ ಸ್ವ ಬಿಡುಗಡೆ. ಏಕೆಂದರೆ ಮಹಿಳೆ ತನ್ನ ಅಸ್ತಿತ್ವದ ಕುರಿತು ಯೋಚಿಸುವುದೇ ಪಾಪಕರ ಎನ್ನುವಂತಹ ವಾತಾವರಣ ನಿರ್ಮಿಸಲಾಗಿದೆ. ಅವಳೇನಿದ್ದರೂ ಕುಟುಂಬ, ಪತಿ, ಮಕ್ಕಳ ಪಾಲನೆ ಕುರಿತಾಗಿ ಯೋಚಿಸಬೇಕೇ ಹೊರತು, ಸಮಾಜದ ಕುರಿತು ಯೋಚಿಸುವುದು ಅವಳ ಜವಾಬ್ದಾರಿಯಲ್ಲ ಎಂದು ಸಮಾಜವೂ ನಂಬಿ ಅವಳನ್ನು ನಂಬಿಸಿಬಿಟ್ಟಿದೆ. ಮಹಿಳೆಗೆ ರಾಜಕೀಯ ಪ್ರಜ್ಞೆ ಬೆಳೆದರೆ ಸಾಲದು, ಬದಲಾಗಿ ರಾಜಕೀಯ ಭಾಗವಹಿಸುವಿಕೆಗೆ ಅವಕಾಶ ಕೊಡಬೇಕು. ಸರಕಾರ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವ ದೃಷ್ಟಿಯಿಂದ ಸಂವಿಧಾನದತ್ತವಾಗಿ ಶೇ.೩೩ರಷ್ಟು ಮೀಸಲಾತಿ ಕೊಟ್ಟಿದೆ. ಈ ಮಹಿಳಾ ಮೀಸಲಾತಿ ರಾಜಕೀಯ ಪ್ರಜ್ಞೆ ಬೆಳೆಸಲು ಸಹಕಾರಿಯೇ? ಒಂದುವೇಳೆ ಮೀಸಲಾತಿ ಬಂದರೂ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವೇ? ಮಹಿಳೆಗೆ ಸಂಘಟನೆಯ ಕೊರತೆ ಎಲ್ಲಾ ಕಾಲದಲ್ಲೂ ಕಾಡಿದೆ. ಮಹಿಳಾ ಮೀಸಲಾತಿ ಸಂಘಟನಾತ್ಮಕ ವೇಗೋತ್ಕರ್ಷಕ್ಕೆ ನೆರವಾದರೆ, ರಾಜಕೀಯ ಪ್ರಜ್ಞೆ ಬೆಳೆಸಲು ಪರೋಕ್ಷವಾಗಿ ಕಾರಣವಾಗುತ್ತದೆ. ಮೀಸಲಾತಿ ಒಂದು ಉಪಕರಣ ಅಷ್ಟೇ. ಅದೊಂದರಿಂದಲೇ ಸಬಲೀಕರಣ ಸಾಧ್ಯವಿಲ್ಲ. ಸಾಮಾಜಿಕ ನ್ಯಾಯದ ಸಲುವಾಗಿ ಸೃಷ್ಟಿಯಾದ ಮೀಸಲಾತಿ ನೀತಿಯನ್ನೇ ಆಳುವ ವರ್ಗ ವಿರೂಪಗೊಳಿಸಿದೆ. ಶೋಷಿತರ ಕಣ್ಣೊರೆಸುವ ಒಂದು ತಂತ್ರವನ್ನುವಲ್ಲಿಗೆ

ಮೀಸಲಾತಿ ಬಂದು ನಿಂತಿದೆ. ಪರಿಣಾಮಕಾರಿ ಮೀಸಲಾತಿ ಜಾರಿಯಾಗದೇ ಇರುವುದು ಇಂದಿನ ತಳಸಮುದಾಯಗಳ ಅರ್ಥಕ್ಕರ್ಥ ಸಮಸ್ಯೆಗಳಿಗೆ ಕಾರಣವಾಗಿದೆ. ಕಟ್ಟಿಗೆ, ಅಕ್ಕಿ ಎರಡನ್ನೂ ಒಟ್ಟಿಗೆ ಇಟ್ಟರೆ ಮಾತ್ರಕ್ಕೆ ಅನ್ನ ಬೇಯದು. ಬೇಯುವವರೆಗೆ ನಿರಂತರ ಶಾಖ ಅಗತ್ಯ. ಬದಲಾವಣೆ ಕಾನೂನುರೀತ್ಯ ಆದ ಹಾಗೆಯೇ ಸಮಾಜದ ಅಂತಸ್ಸತ್ವ ಕೂಡಾ ಬದಲಾಗಬೇಕು. ಇಲ್ಲದಿದ್ದಲ್ಲಿ ಗಂಡನ ಹಿಂದೆ ಅಡಗಿ ನಿಂತು, ಆತ ಹೇಳಿದ ಕಡೆಯಲ್ಲೆಲ್ಲ ಸುಮ್ಮನೆ ರುಜು ಹಾಕುವ ಮಹಿಳೆಯರು ಕಾಣಸಿಗುತ್ತಾರೆ. ತನಗೆ ದಕ್ಕಿರುವ ಸ್ಥಾನದ ಘನತೆ ಮತ್ತು ಮಹತ್ವದ ಅರಿವು ಮಹಿಳೆಗೆ ಮೂಡಬೇಕು. ಬೌದ್ಧಿಕ ದಾಸ್ಯದಿಂದ ಹೊರಬರಬೇಕು. ನಿರ್ಣಾಯಕ ಘಳಿಗೆಗಳಲ್ಲಿ ತನ್ನ ಧ್ವನಿ ಕೇಳಿಸುವಂತಾಗಬೇಕು. ಆಗ ಮಾತ್ರ ಮಹಿಳೆಗೆ ಯಶಸ್ಸು ದೊರೆಯುತ್ತದೆ. ಇತರ ಕ್ಷೇತ್ರಗಳಲ್ಲಿ ಮಹಿಳೆಯರನ್ನು ಮುಂದೆ ತರುವಂತೆ, ರಾಜಕೀಯದಲ್ಲಿ ತರಲು ಸಾಧ್ಯವಿಲ್ಲ. ಬೇರೆಡೆಗಿಂತ ಹೆಚ್ಚಿನ ಅಡ್ಡಿಗಳು ಇಲ್ಲಿವೆ. ಪುರುಷ ಪ್ರಧಾನ ವ್ಯವಸ್ಥೆ ಬಲವಾಗಿ ಬೇರೂರಿದ್ದು, ಹಣ ಮತ್ತು ಅಧಿಕಾರ ಕೇಂದ್ರಬಿಂದುವಾದ ರಾಜಕೀಯ ಕ್ಷೇತ್ರವು ಮಹಿಳೆಯರಿಗೆ ಅಷ್ಟು ಸುಲಭವಾಗಿ ಪ್ರವೇಶ ನೀಡುವುದಿಲ್ಲ. ಮಹಿಳೆಯರಿಗೆ ದೊಡ್ಡ ಸವಾಲಾಗಿರುವ ಈ ಕ್ಷೇತ್ರವು ಅನೇಕ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಕೌಟುಂಬಿಕ, ರಾಜಕೀಯ ಹಿನ್ನೆಲೆಯಿರುವ, ಇಲ್ಲವೆ ಪುರುಷ ಸಾಮರ್ಥ್ಯಕ್ಕೆ ಸೆಡ್ಡು ಹೊಡೆಯುವ ಸಾಮರ್ಥ್ಯವಿರುವ ಹೆಣ್ಣುಮಕ್ಕಳು ಮಾತ್ರ ರಾಜಕೀಯ ಪ್ರವೇಶಿಸಲು ಸಾಧ್ಯ. ದಲಿತ ಮಹಿಳೆಯರು ತಾವಾಗಿ ರಾಜಕೀಯದಲ್ಲಿ ತೊಡಗುತ್ತೇವೆ ಎಂದರೆ ಅದು ಕಷ್ಟಸಾಧ್ಯದ ಮಾತು. ಹಣಬಲ, ತೋಳ್ಬಲವೆ ಹೆಚ್ಚು ಪ್ರಬಲವಾಗಿರುವ ರಾಜಕೀಯ ಕ್ಷೇತ್ರದಲ್ಲಿ ಅವರೆಡೂ ಇಲ್ಲದೆ ಅಲ್ಲಿ ಉಳಿಯುದಾಗಲಿ, ಅಧಿಕಾರ ಸ್ಥಾನ ಪಡೆಯುದಾಗಲಿ ಕಷ್ಟ. ಹೀಗೆ ಮಹಿಳಾ ಸಮುದಾಯದಿಂದ ಮಾನವ ಸಂಪನ್ಮೂಲದಲ್ಲಿ ದೊಡ್ಡ ನಷ್ಟವಾಗಿರುವುದನ್ನು ಅರ್ಥಶಾಸ್ತ್ರಜ್ಞರೆ ಒಪ್ಪಿಕೊಳ್ಳುತ್ತಾರೆ. ಸಾಮಾಜಿಕ, ಆರ್ಥಿಕ, ರಾಜಕೀಯಗಳಲ್ಲಿ ಭಾಗವಹಿಸುವಿಕೆಯಲ್ಲಿ ಮಹಿಳೆಯರನ್ನು ಹೊರಗಿಟ್ಟು ನೋಡಲು ಸಾಧ್ಯವೇ ಇಲ್ಲ ಎಂದು ಹೇಳಿದ್ದಾರೆ.

ಅಧ್ಯಾಯ : ಒಂಭತ್ತು

ಸಮಾರೋಪ

ಅಧ್ಯಾಯ : ಒಂಭತ್ತು

ಸಮಾರೋಪ

ಮಹಿಳೆ ಸ್ವಾವಲಂಬಿಯಾಗಿ ತನಗೆ ಬೇಕಾಗುವ ಎಲ್ಲಾ ಅಗತ್ಯಗಳನ್ನು ಈಡೇರಿಸಿಕೊಳ್ಳುವ ವಾತಾವರಣ ಸೃಷ್ಟಿಯಾದರೆ ಮಾತ್ರ ಪಿತೃಪ್ರಧಾನ ವ್ಯವಸ್ಥೆಯಿಂದ ಹೊರಬರಲು ಸಾಧ್ಯವಾಗುತ್ತದೆ. ವಿಶೇಷವಾಗಿ ಗ್ರಾಮೀಣ ಪ್ರದೇಶದ ಪರಿಶಿಷ್ಟ ಮಹಿಳೆಯರು ತಮ್ಮ ಕುಟುಂಬದ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಇತರರನ್ನು ಅವಲಂಬಿಸದೇ ಸನ್ನಿವೇಶಕ್ಕೆ ತಕ್ಕಂತೆ ಸ್ವಂತ ನಿರ್ಧಾರ ತೆಗೆದುಕೊಳ್ಳುವ ಮತ್ತು ತಮ್ಮ ದುಡಿಮೆಯ ಹಣವನ್ನು ತನಗೆ ಇಷ್ಟಬಂದಂತೆ ಖರ್ಚುಮಾಡುವ ಸ್ವಾತಂತ್ರ್ಯವನ್ನು ಹೊಂದಬೇಕಾಗಿದೆ. ಏಕೆಂದರೆ ಕುಟುಂಬದಲ್ಲಿ ತಂದೆಯ ಪಾತ್ರಕ್ಕಿಂತ ತಾಯಿಯ ಪಾತ್ರ ತುಂಬಾ ಮುಖ್ಯವಾಗಿದೆ. ಸಂತಾನೋತ್ಪತ್ತಿಗೆ ಸಂಬಂಧಪಟ್ಟಂತೆ ಗರ್ಭಧರಿಸಿ ಒಂಬತ್ತು ತಿಂಗಳುಗಳ ಕಾಲ ಮಗುವನ್ನು ತನ್ನ ಉದರದಲ್ಲಿಯೇ ರಕ್ಷಣೆ ಮಾಡುವುದು, ಮಕ್ಕಳಿಗೆ ಜನ್ಮ ನೀಡುವುದು, ತನ್ನ ಎದೆಹಾಲನ್ನು ಉಣಿಸುವುದು, ಪೋಷಣೆ, ಪಾಲನೆ ಮುಂತಾದ ಕೆಲಸದಲ್ಲಿ ತನ್ನ ಇಡೀ ಜೀವನವನ್ನು ಕಳೆಯುತ್ತಾಳೆ. ಈ ಎಲ್ಲಾ ಹಂತದಲ್ಲಿಯೂ ಮಹಿಳೆಯರಿಗೆ ಯಾವುದೇ ಸ್ವಾತಂತ್ರ್ಯವಾಗಲೀ, ಅಧಿಕಾರಗಳಾಗಲೀ ಇಲ್ಲವಾಗಿವೆ. ಆದರೂ ಇವೆಲ್ಲವುಗಳ ಮಧ್ಯೆ ಅಂದರೆ ಮನೆಯ ಕೆಲಸಗಳ ಜೊತೆಗೆ ಮನೆಯ ಹೊರಗೆ ಹೋಗಿ ದುಡಿಯುವುದನ್ನು ಕಾಣುತ್ತೇವೆ. ಮನೆಯ ಹೊರಗಿನ ದುಡಿಮೆಯಲ್ಲಿ ತೊಡಗಿಕೊಂಡರೂ ಸಹ ಅದರಿಂದ ಬರುವಂತಹ ಆದಾಯ ಪುನಃ ತಂದೆಯ ಅಥವಾ ಗಂಡನ ಪಾಲಾಗುತ್ತದೆ. ಅದರ ಮೇಲಿನ ಹಕ್ಕನ್ನು ಸಹ ಕಳೆದುಕೊಂಡಿರುವುದು ವಿಪರ್ಯಾಸದ ಸಂಗತಿ. ಪರಿಸ್ಥಿತಿ ಹೀಗಿರುವಾಗ ತನ್ನ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಕಷ್ಟಸಾಧ್ಯ. ಆದ್ದರಿಂದ ಕುಟುಂಬದಲ್ಲಿ ಪುರುಷನಿಗೆ ಸರಿಸಮಾನವಾದ ಸ್ಥಾನಮಾನವನ್ನು ನಿರ್ಮಿಸಿಕೊಳ್ಳುವ ಅನಿವಾರ್ಯತೆ ಇದೆ.

ಮಹಿಳೆಯು ಹಲವಾರು ರೀತಿಯಲ್ಲಿ ತುಳಿತಕ್ಕೆ ಒಳಪಟ್ಟಿದ್ದಾಳೆ. ವೈಯಕ್ತಿಕವಾಗಿ ಒಬ್ಬ ಮಹಿಳೆ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಕ್ಲಿಷ್ಟಕರ. ಹೀಗಾಗಿ ಮಹಿಳೆಯರಿಗೆ ಸ್ತ್ರೀಶಕ್ತಿ ಗುಂಪುಗಳು ಆತ್ಮಸ್ಥೈರ್ಯ, ವಿಶ್ವಾಸ, ನಿರ್ಧಾರ ತೆಗೆದುಕೊಳ್ಳುವ ಮನೋಭಾವವನ್ನು ಬೆಳೆಸುತ್ತವೆ. ಇದಕ್ಕೆ ಪೂರಕವಾಗಿಯೇ ರಾಜ್ಯ ಸರಕಾರ ಸ್ತ್ರೀಶಕ್ತಿ ಯೋಜನೆಯನ್ನು ಜಾರಿಗೆ ತಂದಿವೆ. ಈ ಯೋಜನೆಯಿಂದ

ಸದಸ್ಯರ ಬಡತನದ ನಿರ್ಮೂಲನೆಯ ಜೊತೆಗೆ ಆರ್ಥಿಕ ಸಬಲರನ್ನಾಗಿ ಮಾಡಬಹುದು. ಗುಂಪುಗಳ ಮೂಲಕ ಸದಸ್ಯರ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ. ಒಬ್ಬ ವ್ಯಕ್ತಿಯ ಹಣೆಬರಹವು ನಿರ್ಧಾರವಾಗುವುದು ಅವನ ಪರಿಶ್ರಮದಿಂದಲೇ. ಆದಕಾರಣ ಎಲ್ಲಾ ಮಹಿಳೆಯರನ್ನು ಗುಂಪಿನ ಮುಖಾಂತರ ಸಂಘಟಿಸುವುದರಿಂದ ಗುಂಪಿನ ಎಲ್ಲಾ ಸದಸ್ಯರೂ ಲಾಭವನ್ನು ಪಡೆಯುತ್ತಾರೆ. ಗುಂಪಿನ ನಿರ್ಧಾರ, ಗುಂಪಿನ ಚಟುವಟಿಕೆಗಳು ಹಾಗೂ ಎಲ್ಲರ ಒಳಿತಿಗಾಗಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರ ಮೂಲಕ ಗ್ರಾಮೀಣ ಭೂರಹಿತ ಪರಿಶಿಷ್ಟ ಮಹಿಳೆಯರನ್ನು ಸಶಕ್ತರನ್ನಾಗಿಸುವಲ್ಲಿ ಸ್ತ್ರೀಶಕ್ತಿ ಗುಂಪುಗಳು ಪ್ರಮುಖ ಪಾತ್ರ ವಹಿಸುತ್ತಿವೆ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳ ಆಯ್ದ ನಾಲ್ಕು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಯನ್ನು ನೋಡುವ ಪ್ರಯತ್ನ ಅಧ್ಯಯನದಲ್ಲಿ ಮಾಡಲಾಗಿದೆ. ಹೊಸಪೇಟೆ ತಾಲೂಕಿನ ಸಣಾಪುರ ಮತ್ತು ಜಿ.ನಾಗಲಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು ೬೩ ಸ್ತ್ರೀಶಕ್ತಿ ಗುಂಪುಗಳಿವೆ. ಈ ಗುಂಪುಗಳಲ್ಲಿ ೯೫೬ ರಷ್ಟು ಮಹಿಳೆಯರಿದ್ದಾರೆ. ಇವರಲ್ಲಿ ೩೦೭ ಪರಿಶಿಷ್ಟ ಜಾತಿ ಹಾಗೂ ೧೭೯ ಪರಿಶಿಷ್ಟ ಪಂಗಡದ ಮಹಿಳೆಯರಿದ್ದಾರೆ. ಈ ಎರಡು ಪಂಚಾಯತಿಗಳಲ್ಲಿ ಪ್ರತೀ ಪಂಚಾಯತಿಯಿಂದ ಪರಿಶಿಷ್ಟ ಜಾತಿ ೩೦ ಸದಸ್ಯರನ್ನು ಹಾಗೂ ಪರಿಶಿಷ್ಟ ಪಂಗಡದ ೩೦ ಸದಸ್ಯರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಒಟ್ಟಾರೆಯಾಗಿ ಈ ಎರಡು ಪಂಚಾಯತಿಗಳಿಂದ ೧೨೦ ಪರಿಶಿಷ್ಟ ಮಹಿಳೆಯರನ್ನು ಹಾಗೂ ಇದೇ ರೀತಿಯಾಗಿ ಗುಂಪಿಗೆ ಸೇರದ ೧೨೦ ಪರಿಶಿಷ್ಟ ಮಹಿಳೆಯರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕೂಡ್ಲಿಗಿ ತಾಲೂಕಿನ ಚಿರತಗುಂಡು ಮತ್ತು ರಾಂಪುರ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಒಟ್ಟು ೪೧ ಸ್ತ್ರೀಶಕ್ತಿ ಗುಂಪುಗಳಿದ್ದು, ಈ ಗುಂಪುಗಳಲ್ಲಿ ೬೦೩ ಮಹಿಳಾ ಸದಸ್ಯರಿದ್ದಾರೆ. ಇವರಲ್ಲಿ ೧೫೭ ಪರಿಶಿಷ್ಟ ಜಾತಿ ಮತ್ತು ೨೭೩ ಪರಿಶಿಷ್ಟ ಪಂಗಡದ ಮಹಿಳೆಯರಿದ್ದಾರೆ. ಈ ಮೇಲೆ ಹೇಳಿದ ಹಾಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಒಟ್ಟಾರೆಯಾಗಿ ಈ ತಾಲೂಕುಗಳ ನಾಲ್ಕು ಪಂಚಾಯತಿಗಳಿಂದ ಒಟ್ಟು ೨೪೦ ಸ್ತ್ರೀಶಕ್ತಿ ಗುಂಪಿನ ಸದಸ್ಯರನ್ನು ಹಾಗೂ ೨೪೦ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಾಲಾಗಿದೆ. ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ ಗುಂಪುಗಳಲ್ಲಿ ಎಲ್ಲಾ ಜಾತಿಯ ಮಹಿಳೆಯರಿದ್ದಾರೆ. ಶ್ರೇಣಿಕೃತ ವ್ಯವಸ್ಥೆಯಲ್ಲಿ ಸಮಾಜದ ಕಟ್ಟಕಡೆಯ ಸಮುದಾಯಗಳಾದ ಪರಿಶಿಷ್ಟ ಜಾತಿಯ ಮಹಿಳೆಯರನ್ನು ಸ್ತ್ರೀಶಕ್ತಿ ಗುಂಪುಗಳಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಸಣಾಪುರ, ಜಿ.ನಾಗಲಾಪುರ, ಚಿರತಗುಂಡು ಮತ್ತು ರಾಂಪುರ ಗ್ರಾಮಗಳಲ್ಲಿ ಮಹಿಳೆಯರನ್ನು ಮೇಲ್ಜಾತಿ (ಲಿಂಗಾಯತ, ಬ್ರಾಹ್ಮಣ, ಮುಸ್ಲಿಂ, ಕುರುಬ, ಪರಿಶಿಷ್ಟ ಪಂಗಡ ಇತ್ಯಾದಿ)ಯವರ ಮನೆಯೊಳಗೆ ಪ್ರವೇಶದ ನಿರ್ಬಂಧ ಹೇರಿದ್ದಾರೆ.

ಆದರೆ ಮೇಲ್ಜಾತಿಯವರ ಮನೆಯ ಅಂಗಳದಲ್ಲಿ ಕಸ ಗೂಡಿಸುವುದು, ತೊಳೆಯುವುದು ಮುಂತಾದ ಕೆಲಸ ಕಾರ್ಯಗಳನ್ನು ಮಾಡಲು ಪ್ರವೇಶವಿದೆ. ಪ್ರತಿಬಾರಿ ಗುಂಪಿನ ವ್ಯವಹಾರವನ್ನು ಮಾಡುವ ವೇದಿಕೆಯಾಗಿರುವ ದೇವಾಲಯ ಅಥವಾ ಮೇಲ್ಜಾತಿಯವರ ಮನೆಯ ಅಂಗಳದಲ್ಲಿ ಪರಿಶಿಷ್ಟ ಜಾತಿ ಮಹಿಳೆಯರನ್ನು ಹೊರಗಡೆ ನಿಲ್ಲಿಸಿ ಗುಂಪಿನ ವ್ಯವಹಾರಗಳನ್ನು ಮಾಡುತ್ತಾರೆ. ಎಲ್ಲಾ ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಜಾತಿಯ ತಾರತಮ್ಯ ನೀತಿಯಿಂದ ಹಾಗೂ ಗುಂಪಿನ ವ್ಯವಹಾರಗಳನ್ನು ಮಾಡುವ ಸಂದರ್ಭದಲ್ಲಿ ಸಾಮಾಜಿಕ ಜಾಗೃತಿ ಅಂದರೆ ಮಕ್ಕಳ ಶಿಕ್ಷಣದ ಕುರಿತು ಅರಿವು ಮೂಡಿಸುವುದು, ಜಾತಿ ವ್ಯವಸ್ಥೆಯ ನಿರ್ಮೂಲನೆ ಮುಂತಾದವುಗಳ ಬಗ್ಗೆ ಇವರು ಹೇಳಿದರೆ ಮೇಲ್ಜಾತಿ ಮಹಿಳಾ ಸದಸ್ಯರು ನಿಮಗೆ ಏನು ಗೊತ್ತಿಲ್ಲ ಸುಮ್ಮನಿರಿ ಎಂದು ಇವರ ಮೇಲೆ ಕುಪಿತಗೊಳ್ಳುತ್ತಾರೆ. ಇದರಿಂದ ಬೇಸತ್ತು ಕೆಲವು ಮಹಿಳೆಯರು ಸ್ತ್ರೀಶಕ್ತಿ ಗುಂಪುಗಳಿಂದ ಹೊರಗೆ ಉಳಿಯುತ್ತಿದ್ದಾರೆ. ಆದರೆ ಪರಿಶಿಷ್ಟ ಪಂಗಡದ ಮಹಿಳೆಯರನ್ನು ಎಲ್ಲಾ ಸ್ಥಳಗಳಲ್ಲಿ ಮುಕ್ತವಾಗಿ ಪ್ರವೇಶವನ್ನು ಕೊಟ್ಟಿರುವುದರಿಂದ ಇವರು ಗುಂಪುಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದು ಕಂಡುಬಂದಿದೆ. ಪರಿಶಿಷ್ಟ ಜಾತಿ ಮಹಿಳೆಯರನ್ನು ಸಣಾಪುರ ಹೊರತುಪಡಿಸಿ ಉಳಿದ ಜಿ.ನಾಗಲಾಪುರ, ಚಿರತಗುಂಡು ಮತ್ತು ರಾಂಪುರ ಗ್ರಾಮಗಳಲ್ಲಿ ಮೇಲ್ವರ್ಗದ ಮನೆಗಳು ಅಥವಾ ಬೀದಿಗಳಲ್ಲಿರುವ ಕೊಳವೆ ಅಥವಾ ಬಾವಿಗಳಲ್ಲಿ ನೀರು ತರುವುದಕ್ಕೆ ನಿರ್ಬಂಧವನ್ನು ಹೇರಿರುವುದು ಕಂಡುಬಂದಿದೆ. ಅದೇ ರೀತಿಯಾಗಿ ಪರಿಶಿಷ್ಟ ಜಾತಿಯವರನ್ನು ಇಂದಿಗೂ ದೇವಸ್ಥಾನಗಳು, ಹೋಟೆಲ್‌ಗಳು, ಮೇಲ್ಜಾತಿಯ ಸಭೆ ಸಮಾರಂಭಗಳಲ್ಲಿ ನಿಷೇಧವನ್ನು ವಿಧಿಸಿದ್ದಾರೆ. ಶ್ರೇಣಿಕೃತ ವ್ಯವಸ್ಥೆಯಲ್ಲಿ ಪರಿಶಿಷ್ಟ ಜಾತಿಯ ಸಮುದಾಯವನ್ನು ಶೇ.೬೬ರಷ್ಟು ಮತ್ತು ಪರಿಶಿಷ್ಟ ಪಂಗಡದ ಸಮುದಾಯವನ್ನು ಶೇ.೩೦ರಷ್ಟು ಮಹಿಳೆಯರನ್ನು ಮೇಲ್ವರ್ಗದ ಜನರು ಏಕವಚನದಿಂದ ಸಂಬೋಧಿಸುತ್ತಿರುವುದು ತಿಳಿದುಬಂದಿದೆ. ಸಂವಿಧಾನದ ೧೭ನೇ ವಿಧಿಯನ್ವಯ ಅಸ್ಪೃಶ್ಯತೆಯ ಆಚರಣೆಯನ್ನು ಮಾಡುವುದು ಅಪರಾದ. ಆದರೆ ಈ ಆಚರಣೆ ಮೇಲುನೋಟಕ್ಕೆ ಕಡಿಮೆಯಾದರೂ ಸಾಮಾಜಿಕವಾಗಿ ಇದನ್ನು ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಮಹಿಳೆಯರು ಯಾವುದಾದರೂ ದುಡಿಮೆಯಲ್ಲಿ ಗುರುತಿಸಿಕೊಳ್ಳಬೇಕಾದರೆ ಶಿಕ್ಷಣ ಬಹಳ ಮುಖ್ಯ. ಹೀಗಾಗಿ ಅಧ್ಯಯನಕ್ಕೆ ಒಳಪಟ್ಟ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ಅನಕ್ಷರಸ್ಥರಾಗಿರುವುದು ಅಧ್ಯಯನದಿಂದ ತಿಳಿದುಬಂದಿದೆ. ೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮಹಿಳಾ ಸಾಕ್ಷರತಾ ಮಟ್ಟ ಶೇ.೫೬.೫೮ರಷ್ಟು ಹಾಗೂ ಪರಿಶಿಷ್ಟ ಪಂಗಡದ ಮಹಿಳಾ ಸಾಕ್ಷರತಾ ಮಟ್ಟ ಶೇ.೫೨.೯೮ರಷ್ಟು ಇದೆ. ಹಾಗೆಯೇ ೨೦೧೧ರ ಅಂಕಿ ಅಂಶಗಳ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮಹಿಳೆ ಸಾಕ್ಷರತಾ ದರ ಶೇ.೪೭.೮೯ರಷ್ಟು ಮತ್ತು ಪರಿಶಿಷ್ಟ ಮಹಿಳಾ ಸಾಕ್ಷರತಾ ದರ ಶೇ.೪೫.೫೦ರಷ್ಟು ಇದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಾಕ್ಷರತಾ

ಪ್ರಮಾಣವು ರಾಜ್ಯದ ಸರಾಸರಿಗಿಂತ ಕಡಿಮೆ ಇರುವುದು ತಿಳಿದುಬರುತ್ತದೆ. ೨೦೧೧ರ ಅಂಕಿ ಅಂಶಗಳ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಹೊಸಪೇಟೆ ತಾಲೂಕು ಪರಿಶಿಷ್ಟ ಜಾತಿ ಶೇ.೪೦.೫೬ರಷ್ಟು ಮತ್ತು ಪರಿಶಿಷ್ಟ ಪಂಗಡ ಶೇ.೪೨.೦೨ರಷ್ಟು ಹಾಗೂ ಕೂಡ್ಲಿಗಿ ತಾಲೂಕಿನಲ್ಲಿ ಪರಿಶಿಷ್ಟ ಜಾತಿ ಶೇ.೪೩.೧೬ರಷ್ಟು ಹಾಗೂ ಪರಿಶಿಷ್ಟ ಪಂಡದ ಶೇ.೫೬.೫೦ರಷ್ಟು ಮಹಿಳೆಯರ ಸಾಕ್ಷರತಾ ಮಟ್ಟವಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ನಾಲ್ಕು ಗ್ರಾಮ ಪಂಚಾಯಿತಿಗಳ (೨೦೧೧ರ ಅಂಕಿ ಅಂಶಗಳ ಪ್ರಕಾರ ಸಣಾಪುರ ಪರಿಶಿಷ್ಟ ಜಾತಿ ಮಹಿಳೆಯರ ಶೇ.೧೦ರಷ್ಟು ಮತ್ತು ಪರಿಶಿಷ್ಟ ಪಂಗಡದ ಶೇ.೧೫.೦೪ರಷ್ಟು, ಜಿ.ನಾಗಲಾಪುರ ಪರಿಶಿಷ್ಟ ಜಾತಿ ಶೇ.೦೫.೧೮ರಷ್ಟು ಹಾಗೂ ಪರಿಶಿಷ್ಟ ಪಂಗಡ ಶೇ.೨೪.೦೧ರಷ್ಟು, ಚಿರತಗುಂಡು ಗ್ರಾಮದಲ್ಲಿ ಪರಿಶಿಷ್ಟ ಜಾತಿ ಶೇ.೦೪.೧೦ರಷ್ಟು ಮತ್ತು ಪರಿಶಿಷ್ಟ ಪಂಗಡ ಶೇ.೧೪ರಷ್ಟು ಹಾಗೂ ರಾಂಪುರದಲ್ಲಿ ಪರಿಶಿಷ್ಟ ಜಾತಿ ಶೇ.೧೮.೧೪ ರಷ್ಟು ಮತ್ತು ಪರಿಶಿಷ್ಟ ಪಂಗಡ ಶೇ.೨೩.೫೬ ರಷ್ಟು) ವ್ಯಾಪ್ತಿಯಲ್ಲಿ ಮಹಿಳೆಯರ ಪ್ರಮಾಣವಿದೆ. ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಾಕ್ಷರತಾ ಪ್ರಮಾಣವನ್ನು ಈ ಮೇಲಿನ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶಿಕ್ಷಣದ ಮಟ್ಟಕ್ಕೆ ಹೋಲಿಸಿದರೆ ಅತ್ಯಂತ ಕಡಿಮೆ ಇರುವುದು ಕಂಡುಬರುತ್ತದೆ. ಅಧ್ಯಯನಕ್ಕೆ ಒಳಪಟ್ಟ ಗುಂಪಿಗೆ ಸೇರಿದ ಮತ್ತು ಸೇರದ ಬಹುತೇಕ ಪರಿಶಿಷ್ಟ ಮಹಿಳೆಯರು ಅನಕ್ಷರಸ್ಥರಾಗಿದ್ದಾರೆ. ಮಹಿಳೆಯರ ಸ್ಥಿತಿಯನ್ನು ಉತ್ತಮ ಪಡಿಸಲು ದೊರೆಯಬೇಕಾದ ನೆರವಿನ ಕುರಿತು ಹೇಳುವುದಾದರೆ ಅಕ್ಷರ ಕಲಿಸುವ ಕಾರ್ಯಕ್ರಮಗಳು ಬೇಕು ಎಂಬುದು ಹೆಚ್ಚಿನ ಸಂಖ್ಯೆಯ ಸದಸ್ಯರ ಅಭಿಪ್ರಾಯವಾಗಿರುವುದು ತಿಳಿದುಬಂದಿದೆ. ಗ್ರಾಮೀಣ ಪ್ರದೇಶದ ಪರಿಶಿಷ್ಟ ಮಹಿಳೆಯರ ಆರ್ಥಿಕ ಸ್ಥಿತಿ ಉತ್ತಮವಾಗಬೇಕಾದರೆ ಅವರು ಓದಲು ಬರೆಯಲು ಕಲಿಯಬೇಕು. ಒಟ್ಟಾರೆಯಾಗಿ ಅಕ್ಷಸ್ಥರಾಗಬೇಕು ಎಂಬ ಅಭಿಪ್ರಾಯ ನಿಜವಾಗಿಯೂ ಕೂಡ ಸ್ತ್ರೀಶಕ್ತಿ ಗುಂಪಿನ ಸದಸ್ಯರು ಸಾಕ್ಷರತೆಯ ಮಹತ್ವವನ್ನು ಅರ್ಥಮಾಡಿಕೊಂಡಿರುವುದು ತಿಳಿದುಬಂದಿದೆ. ಇದರ ಜೊತೆಗೆ ಅನಕ್ಷರಸ್ಥರಾದವರು ಕೂಲಿ ಕೆಲಸದಲ್ಲಿ ನಿರತರಾದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಶಿಕ್ಷಣ ಪಡೆಯದಿದ್ದರೂ ಕೂಡ ಬಂದ ಅಲ್ಪ ಆದಾಯದಿಂದಲೇ ಜೀವನ ಸಾಗಿಸಬೇಕಾಗಿರುವುದರಿಂದ ಅವರ ಮತ್ತು ಕುಟುಂಬದ ಹಿತದೃಷ್ಟಿಯಿಂದ ಖರ್ಚು ಮಾಡುವ ಹಣದಲ್ಲಿ ಸ್ವಲ್ಪ ಹಣವನ್ನು ಉಳಿತಾಯ ಮಾಡಬೇಕಾಗುತ್ತದೆ. ಹೀಗಾಗಿ ಇವರಿಗೆ ಸ್ತ್ರೀಶಕ್ತಿ ಗುಂಪಿನಂತಹ ಗುಂಪು ಅನಿವಾರ್ಯ ಎಂಬುದು ತಿಳಿದುಬಂದಿದೆ. ಸ್ತ್ರೀಶಕ್ತಿ ಗುಂಪುಗಳಲ್ಲಿ ಸದಸ್ಯತ್ವ ಪಡೆದ ನಂತರ ಸದಸ್ಯರ ಮಕ್ಕಳ ಉಡುಗೆ ತೊಡುಗೆಯಲ್ಲಿ ಬದಲಾವಣೆಯಾಗಿದೆ. ಆದರೆ ಗುಂಪುಗಳಿಂದ ಹೊರಗುಳಿದ ಮಹಿಳೆಯರ ಮಕ್ಕಳ ಉಡುಗೆ ತೊಡುಗೆಯಲ್ಲಿ ಯಾವುದೇ ರೀತಿಯ ಬದಲಾವಣೆಯಾಗಿಲ್ಲ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮತ್ತು ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಆರೋಗ್ಯವನ್ನು ಕುರಿತಂತೆ ಬಹಳ ಮುಖ್ಯವಾಗಿ ಹೆರಿಗೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ನೋಡುವುದಾದರೆ, ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರ ಸಂಖ್ಯೆ ತುಂಬಾ ಕಡಿಮೆ ಇದೆ. ಅಂದರೆ ಈ ಮಹಿಳೆಯರು ತಮ್ಮ ಮನೆಗಳಲ್ಲಿಯೇ ಅಧಿಕ ಸಂಖ್ಯೆಯಲ್ಲಿ ಹೆರಿಗೆಯನ್ನು ಮಾಡಿಸುತ್ತಿದ್ದಾರೆ. ಸ್ತ್ರೀಶಕ್ತಿ ಗುಂಪುಗಳಲ್ಲಿ ಸದಸ್ಯರಾದ ಮತ್ತು ಗುಂಪುಗಳಿಗೆ ದೂರವಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಆರ್ಥಿಕವಾಗಿ ತುಂಬಾ ಹಿಂದುಳಿದವರಾಗಿರುತ್ತಾರೆ. ಈ ಕಾರಣಕ್ಕಾಗಿ ಮತ್ತು ಮೂಡನಂಬಿಕೆಗಳ ಕಾರಣಕ್ಕಾಗಿ ಮನೆಯಲ್ಲಿಯೇ ಹೆರಿಗೆ ಮಾಡಿಸುವ ಪ್ರಕ್ರಿಯೆಗೆ ಮುಂದಾಗುತ್ತಾರೆ. ಜೊತೆಗೆ ಆಸ್ಪತ್ರೆಗೆ ಹೋದರೆ ಸಿಜರಿಯನ್ ಮಾಡುತ್ತಾರೆ ಎಂಬ ಭಯ ಗ್ರಾಮೀಣ ಭಾಗದ ಜನರಲ್ಲಿ ಇರುವುದು ಕಾಣಬಹುದು. ಅಂದರೆ ಸ್ವಾಭಾವಿಕ ಹೆರಿಗೆಯ ಮೂಲಕ ಮಗುವಿನ ಜನನವಾದರೆ ತಾಯಿ ಮಕ್ಕಳು ಚೆನ್ನಾಗಿರುತ್ತಾರೆಂಬ ನಂಬಿಕೆಯ ಕಾರಣಕ್ಕಾಗಿ ಮನೆಯಲ್ಲಿಯೇ ಹೆರಿಗೆ ಮಾಡಿಸಲು ಮುಂದಾಗುತ್ತಿರುವುದು ಕಂಡುಬರುತ್ತದೆ. ಆದರೆ ಅವರ ಆರೋಗ್ಯದಲ್ಲಿ ಏನಾದರೂ ಏರುಪೇರಾದರೆ ಬಹುತೇಕ ಸಂಖ್ಯೆಯಲ್ಲಿ ಸರಕಾರಿ ಆಸ್ಪತ್ರೆಯಲ್ಲೇ ಆರೋಗ್ಯದ ತಪಾಸಣೆಯನ್ನು ಮಾಡಿಸುತ್ತಿದ್ದಾರೆ.

ಟೈಮ್ಸ್ ಆಫ್ ಇಂಡಿಯಾ (ದಿನಾಂಕ : ಆಗಷ್ಟ್ ೧೦, ೨೦೧೬) ವರದಿ ಪ್ರಕಾರ ಕರ್ನಾಟಕದಲ್ಲಿ ೮೦ ರಿಂದ ೯೦ ಲಕ್ಷ ಬಿ.ಪಿ.ಎಲ್ ಕುಟುಂಬಗಳು ಇವೆ. ೨೦೧೪ ರ ಬಳ್ಳಾರಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ ಪ್ರಕಾರ ಬಳ್ಳಾರಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ೨,೩೫,೩೯೦ (ಶೇ.೮೦.೭೮ರಷ್ಟು) ಕುಟುಂಬಗಳು ಬಿ.ಪಿ.ಎಲ್. ಚೀಟಿಗಳನ್ನು ಹೊಂದಿದ್ದಾರೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ೨೯೬೨ (ಶೇ.೮೩.೬೦ರಷ್ಟು), ಕೂಡ್ಲಿಗಿ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ೪೩೮೭೦ (ಶೇ.೯೧.೭೭ರಷ್ಟು) ಕುಟುಂಬಗಳು ಬಿ.ಪಿ.ಎಲ್. ಚೀಟಿಗಳನ್ನು ಹೊಂದಿದ್ದಾರೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಬಿ.ಪಿ.ಎಲ್ ಕಾರ್ಡ್‌ಗಳನ್ನು ಹೊಂದಿದ್ದಾರೆ. ಕರ್ನಾಟಕದ ಅಭಿವೃದ್ಧಿ ವರದಿಯು ಅಂದಾಜಿಸಿದಂತೆ, ಬಳ್ಳಾರಿ ಜಿಲ್ಲೆಯ ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿನ ಒಟ್ಟು ಬಡವರ ಪ್ರಮಾಣದಲ್ಲಿ ಹೆಚ್ಚಿನ ಪಾಲನ್ನು ಪಡೆದುಕೊಳ್ಳುತ್ತದೆ. ಇದು ರಾಜ್ಯಕ್ಕೆ ಮತ್ತು ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದರೆ, ಬಳ್ಳಾರಿ ಜಿಲ್ಲೆಯಲ್ಲಿ ಬಡತನ ಪ್ರಮಾಣವು ಅಧಿಕಾವಾಗಿರುವುದನ್ನು ತೋರಿಸುತ್ತದೆ. ವಾಸ್ತವಿಕವಾಗಿ ಶೇ.೪೪ಕ್ಕಿಂತ ಅಧಿಕ ಪ್ರಮಾಣದ ಕುಟುಂಬ ಘಟಕಗಳು ಬಡತನವನ್ನು ಹೊಂದಿರುವ ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆಯು ಕೂಡ ಒಂದಾಗಿದೆ (ಯೋಜನಾ ಆಯೋಗ. ಕೆಡಿಆರ್-೨೦೦೫) ಮತ್ತು ತಾಲೂಕು ಮಟ್ಟದಲ್ಲಿ ಬಡತನವನ್ನು ಅಂದಾಜಿಸುವುದು ಇನ್ನೂ ಕಷ್ಟಕರವಾಗಿದೆ. ಪಡಿತರ

ಕಾರ್ಡುಗಳನ್ನು ಹೊಂದಿದ ಕುಟುಂಬಗಳಿಗೆ ಆಹಾರ ಧಾನ್ಯಗಳನ್ನು ರಿಯಾಯಿತಿ ದರದಲ್ಲಿ ಪಡೆಯಲು ಮತ್ತು ಹಲವಾರು ಲಾಭಗಳನ್ನು ಹೊಂದಲು ಒಂದು ಸಾಧನವಾಗಿರುವುದರಿಂದ ಪ್ರತಿಯೊಂದು ಬಡ ಕುಟುಂಬ ಘಟಕಗಳು ಅದನ್ನು ಹೊಂದಲು ಬಯಸುತ್ತವೆ.

ಯೋಗ್ಯ ವಸತಿಯು, ವ್ಯಕ್ತಿಗಳಿಗೆ ನೈಸರ್ಗಿಕ ಮತ್ತು ಆರ್ಥಿಕ ಹೊಡೆತಗಳನ್ನು ತಡೆದುಕೊಳ್ಳುವ ಸಾಮರ್ಥ್ಯವನ್ನು ಕೊಡಬಹುದು. ಇದರ ಅರ್ಥ ಕೇವಲ ಕುಟುಂಬಗಳನ್ನು ನೈಸರ್ಗಿಕ ವಿಕೋಪಗಳಿಂದ ರಕ್ಷಿಸುವುದಲ್ಲ. ಆದರೆ ವಸತಿಯು ಜನರಿಗೆ ಒಂದು ಇರುವಿಕೆಯನ್ನು ಕೊಟ್ಟು, ಮಾನಸಿಕ ಶಕ್ತಿಯನ್ನು ನೀಡಿ, ವಿಕೋಪಗಳ ವಿರುದ್ಧ ಹೋರಾಡುವ ಮತ್ತು ಆಶಾದಾಯಕವಾಗಿ ಬದುಕುವ ತಳಪಾಯವನ್ನು ಒದಗಿಸುತ್ತದೆ. ವಸತಿಯನ್ನು ನಿರಾಕರಿಸುವುದರಿಂದ ಜನರ ಯೋಗ್ಯತೆಯನ್ನು ಕಡಿಮೆಗೊಳಿಸಿದಂತಾಗುತ್ತದೆ. ತತ್ಪರಿಣಾಮವಾಗಿ ಜೀವನ ಮಟ್ಟದ ಮೇಲೆ ಪರಿಣಾಮವನ್ನು ಬೀರುತ್ತದೆ. ಈ ಹಿನ್ನೆಲೆಯಲ್ಲಿ ಹೊಸಪೇಟೆ ತಾಲೂಕು ಮತ್ತು ಕೂಡ್ಲಿಗಿ ತಾಲೂಕುಗಳ ನಾಲ್ಕು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರ ವಸತಿಯ ಸ್ಥಿತಿಗತಿಯನ್ನು ನೋಡಲಾಗಿದೆ. ಈ ನಾಲ್ಕು ಪಂಚಾಯತಿಗಳಲ್ಲಿ ಪರಿಶಿಷ್ಟ ಮಹಿಳೆಯರು ಗುಡಿಸಲು ಮನೆಗಳಲ್ಲಿ ವಾಸಮಾಡುತ್ತಿದ್ದು, ಈ ಗುಡಿಸಲುಗಳು ವಾಸ ಮಾಡುವುದಕ್ಕೆ ಯೋಗ್ಯವಾಗಿಲ್ಲ. ಜನರಿಗೆ ಶಾಂತಿಯುತ ಜೀವನಕ್ಕೆ ಮನೆಗಳ ಗುಣಮಟ್ಟ ಮಹತ್ವದ ಪಾತ್ರವನ್ನು ವಹಿಸುತ್ತದೆ. ಪರಿಶಿಷ್ಟ ಪಂಗಡದ ಮಹಿಳೆಯರು ಗುಡಿಸಲುಗಳಲ್ಲಿ ವಾಸವಾಗಿದ್ದರೂ ಸಹ ಗುಣಮಟ್ಟದ ಅಥವಾ ವಾಸ ಮಾಡಲು ಯೋಗ್ಯವಾಗಿರುವ ಹಾಗೆ ನಿರ್ಮಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಕೆಲವು ಮಹಿಳೆಯರು ಸರಕಾರಿ ಯೋಜನೆಯ (ಆಶ್ರಯ ಯೋಜನೆ) ಅಡಿಯಲ್ಲಿ ಮತ್ತು ಗುಂಪುಗಳಿಂದ ಸಾಲವನ್ನು ತೆಗೆದುಕೊಂಡು ಶೀಟಿನ ಮನೆಗಳನ್ನು ನಿರ್ಮಿಸಿಕೊಂಡಿರುವುದು ಕಂಡುಬರುತ್ತದೆ. ಆದರೆ ಬಹುತೇಕ ಮಹಿಳೆಯರಿಗೆ ಸರಕಾರಿ ಯೋಜನೆಗಳ ಬಗ್ಗೆ ಅರಿವಿಲ್ಲದಿರುವುದು ಕಂಡುಬರುತ್ತದೆ. ಸೀಟಿನ ಮನೆಗಳನ್ನು ನಿರ್ಮಿಸಿಕೊಂಡಿರುವುದು ಕಂಡುಬರುತ್ತದೆ. ಆದರೆ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ವಾಸಮಾಡಲು ಅಯೋಗ್ಯವಾಗಿರುವಂತಹ ಮನೆಗಳಲ್ಲಿ ವಾಸಮಾಡುತ್ತಿರುವುದು ತಿಳಿದುಬಂದಿದೆ. ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಿಸಿಕೊಂಡರೂ ಅವು ವಾಸ ಮಾಡುವುದಕ್ಕೆ ಯೋಗ್ಯವಾಗಿಲ್ಲ. ಶೌಚಾಲಯಗಳು ಪ್ರತಿಯೊಂದು ಕುಟುಂಬಕ್ಕೂ ಅಗತ್ಯವಾದ ಮೂಲ ಸೌಕರ್ಯವಾಗಿದೆ. ಆದರೆ ಗ್ರಾಮೀಣ ಭಾಗಗಳಲ್ಲಿ ಮಹಿಳೆಯರು ಇಂದಿಗೂ ಶೌಚಾಲಯಗಳ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಮುಖ್ಯವಾಗಿ ಪರಿಶಿಷ್ಟ ಮಹಿಳೆಯರಿಗೆ ಹೆಚ್ಚಾಗಿ ಕಾಡುವುದನ್ನು ಕಾಣಬಹುದು. ಗ್ರಾಮೀಣ ಭಾಗದ ಮಹಿಳೆಯರು ಶೌಚಾಲಯಕ್ಕಾಗಿ ಬಯಲು ಪ್ರದೇಶವನ್ನು ಆಶ್ರಯಿಸಿದ್ದಾರೆ. ಈ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಭಾರತ ಸರಕಾರವು ಬಹಿರ್ದೆಸೆ ಮುಕ್ತ ಸಮಾಜವನ್ನು ನಿರ್ಮಿಸುವ ಕೆಲಸಕ್ಕೆ ಮುಂದಾಗಿದೆ. ಆದರೆ ಇದರ ಅರಿವು ಬಹುತೇಕ

ಮಹಿಳೆಯರು ಹೊಂದದೇ ಇರುವುದನ್ನು ಕಾಣಬಹುದು. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕ್ಷೇತ್ರದಲ್ಲಿ ಪರಿಶಿಷ್ಟ ಮಹಿಳೆಯರಿಗೆ ಮುಖ್ಯವಾಗಿ ಕೇವಲ ಅರಿವು ಮಾತ್ರ ಇದಕ್ಕೆ ಕಾರಣವಾಗಿಲ್ಲ. ಬದಲಾಗಿ ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕೆ ಬೇಕಾಗುವ ಸ್ಥಳ ಮತ್ತು ಆರ್ಥಿಕ ಮಟ್ಟ ಇವುಗಳೂ ಸಹ ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕೆ ಅಡ್ಡಿಯನ್ನುಂಟುಮಾಡುತ್ತಿವೆ ಎಂಬುದು ತಿಳಿದುಬಂದಿದೆ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಸಣಾಪುರ ಜಿ.ನಾಗಲಾಪುರ, ಚಿರತಗುಂಡು ಮತ್ತು ರಾಂಪುರ ಪಂಚಾಯತಿಗಳ ವ್ಯಾಪ್ತಿಯಲ್ಲಿ ಪರಿಶಿಷ್ಟ ಮಹಿಳೆಯರ ಕುಟುಂಬಗಳಿಗೆ ಕುಡಿಯುವ ನೀರಿನ ಮೂಲ ಆಧಾರವು ನಲ್ಲಿಗಳಿಂದ, ಕೈ ಪಂಪ್‌ಗಳಿಂದ, ಕೊಳವೆ ಬಾವಿಗಳಿಂದ, ತೆರೆದ ಬಾವಿಗಳಲ್ಲಿ ಮತ್ತು ಟ್ಯಾಂಕ್‌ಗಳಿಂದ ಶೇ.೯೦ರಷ್ಟು ಕುಟುಂಬಗಳು ಈ ಮೂಲಗಳನ್ನು ಅವಲಂಬಿಸಿವೆ. ಈ ಪ್ರದೇಶವು ಅಂತರ್ಜಲವನ್ನು ಅವಲಂಬಿಸಿದ್ದರಿಂದ ಸ್ಥಳೀಯ ಸಂಸ್ಥೆಗಳು ಅದನ್ನು ನಲ್ಲಿಗಳ ಮುಖಾಂತರ ಸರಬರಾಜು ಆಗುವಂತೆ ಸೌಲಭ್ಯಗಳನ್ನು ಕಲ್ಪಿಸಿದೆ. ನಲ್ಲಿಯಿಂದ ನೀರು ಲಭ್ಯತೆಯು ಕುಟುಂಬಗಳ ವಸತಿ ಆವರಣದಲ್ಲಿ ಅಥವಾ ವಸತಿ ಸ್ಥಳದ ಹತ್ತಿರದಲ್ಲಿ ಲಭ್ಯವಿದೆ. ಆದಾಗ್ಯೂ ಬಹುತೇಕ ಕುಟುಂಬಗಳು ವಸತಿ ಸ್ಥಳದಿಂದ ಬಹುದೂರವಿರುವ ಸಾರ್ವಜನಿಕ ನಲ್ಲಿಗಳು ಅಥವಾ ಟ್ಯಾಂಕುಗಳಿಂದ ನೀರನ್ನು ಪಡೆದುಕೊಳ್ಳುತ್ತಿದ್ದಾರೆ. ಹಾಗೆಯೇ ಲಭ್ಯವಿದ್ದ ನೀರಿನ ಗುಣಮಟ್ಟವು ಕಡಿಮೆ ದರ್ಜೆಯದ್ದಾಗಿದೆ. ಇದು ಸಾಮಾನ್ಯವಾಗಿ ಜನರ ಆರೋಗ್ಯದ ಮೇಲೆ ಮತ್ತು ಅವರ ಯೋಗಕ್ಷೇಮದ ಮೇಲೆ ಪ್ರಭಾವ ಬೀರುತ್ತಿದೆ.

ಆದಾಯ ಒಬ್ಬ ವ್ಯಕ್ತಿಯ ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ಅಳೆಯುವ ಪ್ರಮುಖ ಸಾಧನವಾಗಿದೆ. ಹಾಗಾಗಿ ಹೊಸಪೇಟೆ ತಾಲೂಕಿನ ಸಣಾಪುರ, ಜಿ.ನಾಗಲಾಪುರ ಹಾಗೂ ಕೂಡ್ಲಿಗಿ ತಾಲೂಕಿನ ಚಿರತಗುಂಡು ಮತ್ತು ರಾಂಪುರ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿಗೆ ಸೇರಿದ ಹಾಗೂ ಸೇರದ ಪರಿಶಿಷ್ಟ ಮಹಿಳೆಯರ ಆರ್ಥಿಕ ಸ್ಥಿತಿಯನ್ನು ಇಲ್ಲಿ ಚರ್ಚಿಸಲಾಗಿದೆ. ಹೊಸಪೇಟೆ ತಾಲೂಕಿನ ಎರಡು ಆಯ್ದ ಪಂಚಾಯತಿಗಳಲ್ಲಿ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಗುಂಪುಗಳಲ್ಲಿ ಸದಸ್ಯತ್ವ ಪಡೆದುಕೊಂಡು ಜೊತೆ ಜೊತೆಗೆ ಕೂಲಿ ಕೆಲಸವನ್ನು ಕೂಡ ಮಾಡಿ ಗುಂಪುಗಳ ಮೂಲಕ ಉಳಿತಾಯವನ್ನು ಮಾಡುವುದರ ಮೂಲಕ ಮಹಿಳೆಯರು ನಿಧಾನಗತಿಯಲ್ಲಿ ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಈ ಮಹಿಳೆಯರ ಕುಟುಂಬಗಳಿಗೆ ಹೆಚ್ಚಾಗಿ ಕೂಲಿಯಿಂದಲೇ ಆದಾಯ ಬರುತ್ತಿದೆ. ಇನ್ನುಳಿದಂತೆ ಟೈಲರಿಂಗ್, ಹೈನುಗಾರಿಕೆ, ಹೋಟೆಲ್, ತರಕಾರಿ ಮಾರಾಟದಿಂದ ಸ್ವಲ್ಪ ಪ್ರಮಣದಲ್ಲಿ ಆದಾಯ ಬರುತ್ತದೆ. ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಕುಟುಂಬಗಳಿಗೂ ಕೂಡ ಕೂಲಿಯೇ ಜೀವನಾಧಾರವಾಗಿದೆ. ಇವರು ಕೂಲಿಯಿಂದ ಬಂದ ಆದಾಯದಿಂದ ತಮ್ಮ ಕುಟುಂಬಗಳನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ಆದರೆ ಈ ಮಹಿಳೆಯರು ಯಾವುದೇ ರೀತಿಯ ಉಳಿತಾಯವನ್ನು ಮಾಡುವುದಿಲ್ಲ. ಒಂದು ವೇಳೆ ಅವರಲ್ಲಿಯೇ ಉಳಿದ ಅಲ್ಪ ಸ್ವಲ್ಪ ಹಣವನ್ನು ಉಳಿಸಿಕೊಂಡರೂ ತಮ್ಮ

ಗಂಡಂದಿರು ಕುಡಿಯುವದಕ್ಕೋ, ಜೂಜಾಟಕ್ಕೋ ಇನ್ನು ಯಾವುದೋ ಕೆಲಸಕ್ಕೆ ತೆಗೆದುಕೊಂಡು ಹೋಗುತ್ತಾರೆ. ಆದರೆ ಗುಂಪುಗಳ ಮೂಲಕ ಉಳಿತಾಯ ಮಾಡಿದರೆ ಇಂತಹ ಸಮಸ್ಯೆಗಳು ಎದುರಾಗುವುದಿಲ್ಲ. ಆದ್ದರಿಂದ ಇವರು ಗುಂಪುಗಳಿಂದ ಹೊರಗೆ ಉಳಿಯುವುದರಿಂದ ಪರಿಶಿಷ್ಟ ಮಹಿಳೆಯರು ಆರ್ಥಿಕವಾಗಿ ಸದೃಢರಾಗುತ್ತಿಲ್ಲ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಪರಿಶಿಷ್ಟ ಮಹಿಳೆಯನ್ನು ನೀವು ಗುಂಪುಗಳಲ್ಲಿ ಏಕೆ ಸದಸ್ಯತ್ವವನ್ನು ಪಡೆದಿಲ್ಲ ಎಂದು ಕೇಳಿದಾಗ ಆ ಮಹಿಳೆಯರು ಹೀಗೆ ಹೇಳುತ್ತಾರೆ. ಗುಂಪುಗಳಲ್ಲಿ ವಿವಿಧ ಜಾತಿಗೆ ಸೇರಿದ ಮಹಿಳೆಯರು ಇರುವುದರಿಂದ ಇವರ ನಡುವೆ ಸಹಕಾರದ ಸಮಸ್ಯೆ ಎದುರಾಗುತ್ತದೆ. ಆದ್ದರಿಂದ ಸದಸ್ಯರು ಜಗಳವಾಡಿ ಗುಂಪುಗಳಿಂದ ಹೊರಗೆ ಹೋಗುತ್ತಿರುವುದು ನಾವು ನೋಡಿದ್ದೇವೆ. ಆದುದರಿಂದ ನಮ್ಮ ಗಂಡಂದಿರು ನಾವು ಅಕ್ಕ ಪಕ್ಕದ ಮನೆಯವರು ಒಂದೇ ಕುಟುಂಬದ ಹಾಗೆ ಇದ್ದೇವೆ, ಗುಂಪುಗಳಿಗೆ ಸೇರಿ ಒಬ್ಬರಿಗೊಬ್ಬರು ಜಗಳವಾಡಿ ನಿಷ್ಠೂರ ಯಾಕೆ ಅಂತಾ ಗುಂಪುಗಳಿಗೆ ಸೇರಬೇಡಿ ಅಂತ ಹೇಳುತ್ತಾರೆ. ಇನ್ನೊಂದು ಮುಖ್ಯವಾದ ಸಂಗತಿ ಎಂದರೆ ಸಣಾಪುರ, ಜಿ.ನಾಗಲಾಪುರ, ಚಿರತಗುಂಡು ಪಂಚಾಯತಿಗಳ ವ್ಯಾಪ್ತಿಯಲ್ಲಿ ಮಹಿಳೆಯರಿಗೆ ಗುಂಪುಗಳಿಂದಾಗುವ ಲಾಭಗಳು ಹಾಗೂ ಯಾವ ರೀತಿ ಆರ್ಥಿಕ ಸದೃಢರಾಗಬಹುದು ಎಂಬ ತಿಳುವಳಿಕೆ ಇವರಿಗೆ ಇಲ್ಲದಿರುವುದು ಕಂಡುಬಂದಿದೆ.

ಕೂಡ್ಲಿಗಿ ತಾಲೂಕಿನ ಚಿರತಗುಂಡು ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಗುಡ್ಡದ ಬೋರಯ್ಯನ ಹಟ್ಟಿ ಎಂಬ ಗ್ರಾಮದಲ್ಲಿ ಗುಂಪಿಗೆ ಸೇರಿದ ಬೊಸೆಮಲ್ಲಮ್ಮ ಅವರು ಹೇಳಿದಂತೆ, ಗುಂಪಿನ ಎಲ್ಲಾ ಸದಸ್ಯರು ಸಂಗ್ರಹಿಸಿದ ಅಥವಾ ಉಳಿತಾಯ ಮಾಡಿದ ಹಣವನ್ನು ಅದೇ ಗುಂಪಿನ ನಾಯಕಿಗೆ ನೀನು ಬ್ಯಾಂಕಿಗೆ ಹೋಗಿ ಈ ಹಣವನ್ನು ಜಮಾ ಮಾಡಿ ಬಾ ಎಂದು ಕೊಟ್ಟರೆ, ಕೊಟ್ಟಿದ್ದ ಹಣವನ್ನೆಲ್ಲ ತೆಗೆದುಕೊಂಡು ನಗರ ಪ್ರದೇಶಗಳಿಗೆ ದುಡಿಯುವುದಕ್ಕೆ ಹೋಗುತ್ತಾರೆ. ಮತ್ತೆ ಅವರು ತಿರುಗಿ ನಮ್ಮ ಊರಿಗೆ ಬಂದಾಗ ನಾವು ಕೊಟ್ಟಿದ್ದ ಹಣವನ್ನು ಕೊಡು ನಾವೇ ಹೋಗಿ ಬ್ಯಾಂಕಲ್ಲಿ ಜಮಾ ಮಾಡುತ್ತೇವೆ ಎಂದು ಕೇಳಿದರೆ, ನನ್ನ ಹತ್ತಿರ ಈಗ ಇಲ್ಲ, ಆಮೇಲೆ ಕೊಡುತ್ತೇನೆ ಇಲ್ಲವಾದರೆ ನನ್ನ ಮಗ ಬಂದ ಮೇಲೆ ಕೊಡುತ್ತೇನೆ ಎಂದೆಲ್ಲ ಹೇಳುತ್ತಾರೆ. ನಾವು ಗುಂಪಿನ ಎಲ್ಲಾ ಸದಸ್ಯರು ಸ್ವಲ್ಪ ಜೋರಾಗಿ ಕೇಳಿದರೆ, ಆ ನಾಯಕಿ ನನಲ್ಲಿ ಈಗ ಇಲ್ಲ, ಏನು ಮಾಡಿಕೊಳ್ಳುತ್ತೀರೋ ಮಾಡಿಕೊಳ್ಳಿ, ಇಲ್ಲದಿದ್ದರೆ ಪೋಲೀಸ್ ಕೇಸ್ ಮಾಡಿ ಎಂದು ಹೇಳುತ್ತಾರೆ. ಆದುದರಿಂದ ಇಂತಹ ನಾಯಕಿಯರನ್ನು ಬಿಟ್ಟು ನಾವು ಗುಂಪುಗಳಿಂದ ಹೊರಗೆ ಇರುವಂತಹ ಮಹಿಳೆಯರನ್ನು ನೀವು ಗುಂಪುಗಳಿಗೆ ಸೇರಿ ಎಂದರೆ ನಮಗೆ ಯಾಕೆ ಬಿಡಮ್ಮ. ನೀವೇ ಮೋಸ ಹೋಗುತ್ತಿದ್ದೀರಿ ಮತ್ತೆ ನಾವೇಕೆ ಬಂದು ಮೋಸ ಹೋಗಲಿ ಎಂದು ಹೇಳುತ್ತಿದ್ದಾರೆಂದು ತಿಳಿಸಿದ್ದಾರೆ.

ನಾಲ್ಕು ಆಯ್ದ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಪರಿಶಿಷ್ಟ ಮಹಿಳೆಯರು ಸ್ತ್ರೀಶಕ್ತಿ ಗುಂಪುಗಳಲ್ಲಿ ಸೇರಿದ ನಂತರ ಅಧಿಕ ಸಂಖ್ಯೆಯಲ್ಲಿ ವಾಣಿಜ್ಯ ಬ್ಯಾಂಕುಗಳಲ್ಲೇ ಸಾಲವನ್ನು ಪಡೆಯುತ್ತಿದ್ದಾರೆ. ಬ್ಯಾಂಕುಗಳಲ್ಲಿ ಪಡೆದ ಸಾಲವನ್ನು ಸಮಯಕ್ಕೆ ಸರಿಯಾಗಿ ಪಾವತಿಸುತ್ತಿರುವುದು ಕಂಡುಬಂದಿದೆ. ಗುಂಪುಗಳಿಗೆ ಸೇರುವ ಮೂಲಕ ಜಮೀನ್ದಾರರು ಮತ್ತು ಹಣದ ಲೇವಾದೇವಿಗಾರರ ಕಪಿಮುಷ್ಟಿಯಿಂದ ಪಾರಾಗುತ್ತಿದ್ದಾರೆ. ಆದರೆ ಗುಂಪುಗಳಿಂದ ಹೊರಗುಳಿದ ಪರಿಶಿಷ್ಟ ಮಹಿಳೆಯರು ಮಾತ್ರ ಜಮೀನ್ದಾರರು ಮತ್ತು ಹಣದ ಲೇವಾದೇವಿಗಾರರ ಹತ್ತಿರ ಸಾಲವಾಗಿ ಹಣವನ್ನು ಪಡೆಯುತ್ತಿದ್ದಾರೆ. ಇವರು ಹಣವನ್ನು ಇಂತಿಷ್ಟು ಎಂದು ಕೊಟ್ಟು, ಕೊಟ್ಟ ಹಣಕ್ಕೆ ಬಡ್ಡಿಯನ್ನು ವಸೂಲಿ ಮಾಡುತ್ತಾರೆ. ಇದರಿಂದ ಇನ್ನೂ ಹೆಚ್ಚು ಸಾಲಗಾರರಾಗುತ್ತಿದ್ದಾರೆ. ಹಾಗೆಯೇ ಕೆಲವು ಮಹಿಳೆಯರಿಗೆ ವಾಣಿಜ್ಯ ಬ್ಯಾಂಕುಗಳು ಸಾಲ ಕೊಡುತ್ತಿಲ್ಲ. ಕಾರಣ ಇವರ ಹತ್ತಿರ ಚರ ಅಥವಾ ಸ್ಥಿರಾಸ್ತಿ ಇಲ್ಲದಿರುವುದರಿಂದ ಬ್ಯಾಂಕುಗಳು ಸಾಲ ಕೊಡಲು ಮುಂದೆ ಬರುತ್ತಿಲ್ಲ. ಆದರೆ ಗುಂಪಿನ ಸದಸ್ಯರಿಗೆ ಬ್ಯಾಂಕುಗಳು ಸಾಲ ಕೊಡುತ್ತವೆ. ಏಕೆಂದರೆ ಇವರಿಗೆ ಚರ ಅಥವಾ ಸ್ಥಿರಾಸ್ತಿ ಬೇಕಾಗಿರುವುದಿಲ್ಲ. ಇವರಿಗೆ ಬೇಕಾಗಿರುವುದು ನಂಬಿಕೆ ಆದುದರಿಂದ ನಂಬಿಕೆಯೇ ಬಂಡವಾಳವಾಗುತ್ತದೆ. ಆದುದರಿಂದ ಖಾಸಗಿ ವ್ಯಕ್ತಿಗಳಿಂದ ಸಾಲವನ್ನು ಪಡೆಯುತ್ತಿರುವುದರಿಂದ ಅವರು ಯಾವುದೇ ರೀತಿಯಲ್ಲಿ ಆರ್ಥಿಕವಾಗಿ ಸದೃಢರಾಗಲು ಸಾಧ್ಯವಾಗುತ್ತಿಲ್ಲ. ಜಮೀನ್ದಾರರ ಹತ್ತಿರ ಸಾಲವಾಗಿ ಪಡೆದ ಹಣವನ್ನು ಒಂದು ವೇಳೆ ಮರುಪಾವತಿ ಮಾಡಲು ಸಾಧ್ಯವಾಗದಿದ್ದರೆ ತಮ್ಮ ಮಕ್ಕಳನ್ನು ಇವರ ಮನೆಯಲ್ಲಿ ಜೀತದಾಳುಗಳಾಗಿ ನೇಮಿಸುತ್ತಾರೆ. ಹೀಗೆ ತಮ್ಮ ಇಡೀ ಕುಟುಂಬದ ಸದಸ್ಯರು ಸಾಲದಲ್ಲೇ ಹುಟ್ಟಿ ಸಾಲದಲ್ಲೇ ಸಾಯುವ ಪರಿಸ್ಥಿತಿ ಎದುರಾಗುತ್ತಿದೆ. ಇದನ್ನು ತಪ್ಪಿಸುವ ಉದ್ದೇಶದಿಂದಲೇ ರಾಜ್ಯ ಸರಕಾರ ಸ್ತ್ರೀಶಕ್ತಿ ಯೋಜನೆಯನ್ನು ೨೦೦೦-೦೧ನೇ ವರ್ಷದಲ್ಲಿ ಜಾರಿಗೆ ತಂದಿದೆ. ಈ ಯೋಜನೆಯಡಿಯಲ್ಲಿ ಗುಂಪುಗಳಲ್ಲಿ ಸದಸ್ಯತ್ವ ಪಡೆಯುವುದರಿಂದ ಹಣದ ಲೇವಾದೇವಿಗಾರರ ಬಂಧನದಿಂದ ವಿಮುಕ್ತರಾಗಲು ಅವಕಾಶವಿರುತ್ತದೆ.

ಅಧ್ಯಯನಕ್ಕೆ ಒಳಪಟ್ಟ ಸ್ತ್ರೀಶಕ್ತಿ ಗುಂಪಿನ ಸದಸ್ಯರು ಬ್ಯಾಂಕುಗಳಿಂದ ಅಥವಾ ಗುಂಪುಗಳಿಂದ ಸರಾಸರಿಯಾಗಿ ಶೇ.೪೪ರಷ್ಟು ಸದಸ್ಯರು ಸಾಲವನ್ನು ತೆಗೆದುಕೊಂಡಿದ್ದಾರೆ. ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಗುಂಪಿನ ಪರಿಶಿಷ್ಟ ಜಾತಿ ಮಹಿಳೆಯರು ಕಡಿಮೆ ಪ್ರಮಾಣದಲ್ಲಿ ಹಾಗೂ ಪರಿಶಿಷ್ಟ ಪಂಗಡದ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಸಾಲವನ್ನು ಪಡೆದುಕೊಂಡಿದ್ದಾರೆ. ಕಾರಣ ಏನೆಂಬುದು ತಿಳಿದುಕೊಂಡಾಗ ಗುಂಪುಗಳ ಸದಸ್ಯರು ಜಾತಿ ತಾರತಮ್ಯ ಹಾಗೂ ಗುಂಪಿನ ಸದಸ್ಯರಲ್ಲಿ ಶಿಕ್ಷಣವನ್ನು ಪಡೆದಿರುವಂತಹ ಸದಸ್ಯರು ನಾಯಕಿಯರಾಗಿ ಸಾಲದ ಹಂಚಿಕೆಯಲ್ಲಿ ಅಸಮಾನತೆಯನ್ನು ತೋರುತ್ತಿದ್ದಾರೆ. ಅಂದರೆ ಅವರಿಗೆ ಬೇಕಾದವರಿಗೆ ಅಥವಾ ಅವರ ವಿಶ್ವಾಸವನ್ನು ಗಳಿಸಿದವರಿಗೆ ಮಾತ್ರ ಹೆಚ್ಚಿನ ಸಾಲದ ಮೊತ್ತವನ್ನು ಹಾಗೂ ಬೇರೆ ಸದಸ್ಯರಿಗೆ ಕಡಿಮೆ ಸಾಲದ ಮೊತ್ತವನ್ನು ನೀಡುತ್ತಿರುವುದು

ತಿಳಿದುಬಂದಿದೆ. ಬ್ಯಾಂಕುಗಳಿಂದ ಪಡೆದುಕೊಂಡ ಸಾಲವನ್ನು ಎಲ್ಲಾ ಸದಸ್ಯರು ಸಮಯಕ್ಕೆ ಸರಿಯಾಗಿ ಪಾವತಿಸುತ್ತಿರುವುದು ಕಂಡುಬಂದಿದೆ.

ಸ್ತ್ರೀಶಕ್ತಿ ಗುಂಪಿನ ಸದಸ್ಯರು ಹೇಳುವಂತೆ ಅಕ್ಷರ ಕಲಿಸುವ ಕಾರ್ಯಕ್ರಮಗಳು ಬೇಕು ಅವುಗಳಿಂದ ಸರಕಾರದ ಹಲವು ಕಾರ್ಯಕ್ರಮಗಳ ಬಗ್ಗೆ, ಯೋಜನೆಗಳ ಬಗ್ಗೆ ತಿಳಿದುಕೊಳ್ಳಬಹುದು ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಅವರ ಆರ್ಥಿಕ ಸ್ಥಿತಿ ಉತ್ತಮವಾಗಬೇಕಾದರೆ ಶಿಕ್ಷಣದ ಅವಶ್ಯಕತೆ ಇದೆ. ಆದುದರಿಂದ ಗುಂಪಿನ ಸದಸ್ಯರು ಪಡೆದುಕೊಂಡ ಸಾಲವನ್ನು ಮಕ್ಕಳ ಶಿಕ್ಷಣಕ್ಕಾಗಿ ಖರ್ಚುಮಾಡಿದ್ದಾರೆ. ಹಾಗಾಗಿ ಹೊಸಪೇಟೆ ಹಾಗೂ ಕೂಡ್ಲಿಗಿ ತಾಲೂಕುಗಳ ನಾಲ್ಕು ಪಂಚಾಯತಿಯಲ್ಲಿ ಗುಂಪಿನ ಪರಿಶಿಷ್ಟ ಜಾತಿ ಮಹಿಳೆಯರು ಮಕ್ಕಳ ಶಿಕ್ಷಣಕ್ಕಾಗಿ ಹೆಚ್ಚು ಖರ್ಚು ಮಾಡಿದ್ದಾರೆ. ಆದರೆ ಪರಿಶಿಷ್ಟ ಪಂಗಡದ ಮಹಿಳೆಯರು ಶಿಕ್ಷಣಕ್ಕಾಗಿ ವ್ಯಯಿಸಿದ ಮೊತ್ತ ಕಡಿಮೆ. ಬದಲಾಗಿ ಕುಟುಂಬ ಮಾಡಿದ ಸಾಲದ ಮರುಪಾವತಿಗಾಗಿ ವ್ಯಯಿಸಿರುವುದು ಕಂಡುಬಂದಿದೆ. ಗುಂಪಿನ ಎಲ್ಲಾ ಸದಸ್ಯರು ಸಭೆ ಸೇರಿ ಒಬ್ಬರ ಅಭಿಪ್ರಾಯ ಮೊತ್ತಬ್ಬರು ಹಂಚಿಕೊಳ್ಳುವುದರಿಂದ ಮತ್ತು ತಮ್ಮ ಕುಟುಂಬಗಳು ಹೇಗೆ ಆರ್ಥಿಕವಾಗಿ ಸದೃಢವಾಗಬೇಕೆಂಬ ಅಂಶಗಳನ್ನು ಸಭೆಯಲ್ಲಿ ಚರ್ಚೆ ಮಾಡುತ್ತಾರೆ. ಆದುದರಿಂದ ಗುಂಪಿನ ಸದಸ್ಯರು ತೆಗೆದುಕೊಂಡ ಸಾಲವನ್ನು ಹೆಚ್ಚು ಪೋಲು ಮಾಡದೇ ಮರುಉತ್ಪಾದಕ ಚಟುವಟಿಕೆಗಳಿಗೆ ಬಳಸುತ್ತಾರೆ. ಆದರೆ ಗುಂಪುಗಳಿಂದ ಹೊರಗುಳಿದ ಪರಿಶಿಷ್ಟ ಮಹಿಳೆಯರ ಮಧ್ಯೆ ಅಭಿಪ್ರಾಯಗಳು ಹಂಚಿಕೆಯಾಗದೇ ಜಮೀನ್ದಾರರ ಹತ್ತಿರ ಪಡೆದುಕೊಂಡ ಸಾಲವನ್ನು ದುಂದುವೆಚ್ಚವಾಗಿ ಹಬ್ಬ ಹರಿದಿನಗಳು, ಮದುವೆ ಸಮಾರಂಭಗಳಿಗಾಗಿ ವ್ಯಯಿಸುತ್ತಾರೆ. ಆದ್ದರಿಂದ ಇವರು ಆರ್ಥಿಕವಾಗಿ ಸಬಲರಾಗುವಲ್ಲಿ ಎಡವುತ್ತಿದ್ದಾರೆ.

ಯಾವುದೇ ಒಂದು ಕುಟುಂಬದ ಆರ್ಥಿಕ ಅಂಶಗಳನ್ನು ತಿಳಿಯುವಾಗ ಆ ಕುಟುಂಬ ಹೊಂದಿರುವ ಚರ ಮತ್ತು ಸ್ಥಿರಾಸ್ತಿಗಳ ವಿವರವು ಮುಖ್ಯವಾಗುತ್ತದೆ. ಆದ್ದರಿಂದ ಎರಡು ತಾಲೂಕುಗಳ ಆಯ್ದ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ಹೊಂದಿದ ಆಸ್ತಿಯನ್ನು ಕುರಿತು ಚರ್ಚಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಪಶುಪಾಲನೆ ಒಂದು ಪುರಾತನ ಕಸುಬಾಗಿತ್ತು. ಜಾನುವಾರಗಳನ್ನು ಕಟ್ಟಲು, ಕಾಯಲು ಸ್ಥಳಾವಕಾಶಗಳು ಇರುತ್ತವೆ. ಆದರೆ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಬೆರಳಣಿಕೆಯಷ್ಟು ಮಾತ್ರ ಹಸುಗಳು, ಎಮ್ಮೆಗಳನ್ನು ಹೊಂದಿದ್ದಾರೆ. ಇವರು ಕುರಿ ಮತ್ತು ಕೋಳಿಗಳನ್ನು ಹೊಂದಿದ್ದಾರೆ. ಹಾಗೆಯೇ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಕೂಡ ಕೇವಲ ಕೋಳಿಗಳನ್ನು ಹೊಂದಿರುವುದು ಕಂಡುಬರುತ್ತದೆ. ಏಕೆಂದರೆ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರಿಗೆ ಇವುಗಳ ಉಪಯೋಗಗಳ ಬಗ್ಗೆ ಸರಿಯಾದ ಅರಿವು ಇಲ್ಲ ಎಂಬ ಅಂಶವು ಇಲ್ಲಿ ಗಮನಾರ್ಹ.

ಮನುಷ್ಯನಿಗೆ ಮೂಲಭೂತ ಸೌಲಭ್ಯಗಳು ಎಷ್ಟು ಮುಖ್ಯವೋ ಹಾಗೆ ಮನೆಗೆ ದಿನ ಬಳಕೆಯ ವಸ್ತುಗಳು ಅಷ್ಟೇ ಮುಖ್ಯವಾಗುತ್ತವೆ. ಹಾಗಾಗಿ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಕ್ಷೇತ್ರದಲ್ಲಿ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರ ಮನೆಗಳಲ್ಲಿ ದಿನಬಳಕೆಯ ವಸ್ತುಗಳ ವಿವರಗಳನ್ನು ತಿಳಿಸಲಾಗಿದೆ. ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಪರಿಶಿಷ್ಟ ಮಹಿಳೆಯರು ಗುಂಪುಗಳಿಗೆ ಸೇರಿದ ನಂತರ ಅಲ್ಪ ಸ್ವಲ್ಪ ಆರ್ಥಿಕವಾಗಿ ಸುಧಾರಿಸಿಕೊಂಡು ೬೮ ಸದಸ್ಯರು ಗ್ಯಾಸ್‌ಸ್ಟವ್‌ಅನ್ನು ಹೊಂದುವುದರ ಮೂಲಕ ತಮ್ಮ ಕುಟುಂಬಗಳನ್ನು ಬಡತನದಿಂದ ವಿಮುಕ್ತಿ ಪಡೆಯಲು ಶ್ರಮಪಡುತ್ತಿದ್ದಾರೆ. ಆದರೆ ಗುಂಪಿಗೆ ಸೇರದ ಪರಿಶಿಷ್ಟ ಜಾತಿಯ ೨೯ ಜನ ಪರಿಶಿಷ್ಟ ಪಂಗಡದ ೩೪ ಜನರು ಮಾತ್ರ ಮಿಕ್ಸಿಯನ್ನು ಹಾಗೆಯೇ ಗ್ಯಾಸ್‌ಸ್ಟವ್‌ನ್ನು ಪರಿಶಿಷ್ಟ ಜಾತಿಯ ೩೭ ಜನ ಪರಿಶಿಷ್ಟ ಪಂಗಡದ ೨೬ ಜನ ಮಹಿಳೆಯರು ಹೊಂದಿದ್ದಾರೆ. ಆರ್ಥಿಕ ಮಟ್ಟ ಉತ್ತಮವಾಗಿರುವ ಮನೆಗಳಲ್ಲಿ ಸಹಜವಾಗಿ ಇರುವಂತಹ ಅಥವಾ ಹೊಂದಿರುವಂತಹ ವಸ್ತುಗಳೆ. ಆದರೆ ಪರಿಶಿಷ್ಟ ಮಹಿಳೆಯರ ಮನೆಗಳಲ್ಲಿ ಎಲ್ಲಿ ಬರಬೇಕು ಈ ವಸ್ತುಗಳು. ನಾಲ್ಕು ಗ್ರಾಮಪಂಚಾಯತಿಗಳಲ್ಲಿ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ತಮ್ಮ ಕುಟುಂಬಕ್ಕೆ ಹೆಚ್ಚಾಗಿ ಉರುವಲು ಕಟ್ಟಿಗೆಯಿಂದಲೇ ಆಹಾರವನ್ನು ತಯಾರಿಸಿಕೊಳ್ಳುತ್ತಿದ್ದಾರೆ. ಆದರೆ ಕೆಲವು ಗುಂಪಿನ ಸದಸ್ಯರು ಆರ್ಥಿಕವಾಗಿ ಸದೃಢರಾಗಿ ಎಲ್.ಪಿ.ಜಿ ಯಿಂದ ಆಹಾರವನ್ನು ತಯಾರಿಸಿಕೊಳ್ಳುತ್ತಿದ್ದಾರೆ. ಶುದ್ಧ ಅಡುಗೆ ಇಂಧನವು ಕೇವಲ ಪರಿಸರವನ್ನು ಕಡಿಮೆ ಮಾಲಿನ್ಯಗೊಳಿಸುವುದಲ್ಲದೇ ಬಡವರಿಗೆ ಆರೋಗ್ಯದ ದೃಷ್ಟಿಯಿಂದ ಹೆಚ್ಚು ಮಹತ್ವದ್ದಾಗಿದೆ. ಕಟ್ಟಿಗೆ, ಸೀಮೆಎಣ್ಣೆ ಬಳಸುವುದರಿಂದ ಹೆಚ್ಚು ಮಾಲಿನ್ಯವಾಗುತ್ತದೆ. ಸಾಂಪ್ರದಾಯಿಕ ಅಡುಗೆ ಇಂಧನದಿಂದ ಆಧುನಿಕ ಅಡುಗೆ ಇಂಧನದ ಬಳಕೆಗೆ ಪರಿವರ್ತನೆಯು ಆರೋಗ್ಯ ದೃಷ್ಟಿಯಿಂದ ಮತ್ತು ಯೋಗಕ್ಷೇಮ ದೃಷ್ಟಿಯಿಂದ ಅಗತ್ಯವಾಗಿದೆ. ಆದ್ದರಿಂದ ಸರಕಾರವು ರಿಯಾಯಿತಿ ದರದಲ್ಲಿ ಶುದ್ಧ ಅಡುಗೆ ಇಂಧನವನ್ನು ಒದಗಿಸುವ ಕ್ರಮಗಳನ್ನು ಹೆಚ್ಚಿಸಿದೆ, ಆದರೂ ಭಯದಿಂದ, ಅಜ್ಞಾನದಿಂದ, ಲಭ್ಯತೆ ಕೊರತೆಯಿಂದ ಮತ್ತು ಹಣಕಾಸಿನ ಕೊರತೆಯಿಂದ ಕುಟುಂಬಗಳಲ್ಲಿ ಶುದ್ಧ ಅಡುಗೆ ಇಂಧನ ಬಳಕೆಯತ್ತ ಪರಿವರ್ತನೆ ನಿಧಾನವಿದೆ. ಅದರಲ್ಲೂ ವಿಶೇಷವಾಗಿ ಗ್ರಾಮೀಣ ಭಾಗದ ಪರಿಶಿಷ್ಟ ಮಹಿಳೆಯರಲ್ಲಿ ಹೆಚ್ಚಿದೆ.

ಆಧುನಿಕ ಸಮಾಜದಲ್ಲಿ ವಿದ್ಯುತ್ ಒಂದು ಮೂಲ ಅಗತ್ಯಗಳಲ್ಲಿ ಒಂದಾಗಿದೆ. ಹಾಗಾಗಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಗುಂಪಿಗೆ ಸೇರಿದ ನಂತರ ಪರಿಶಿಷ್ಟ ಜಾತಿ ಮಹಿಳೆಯರು ಸ್ವಲ್ಪ ಪ್ರಮಾಣದಲ್ಲಿ ಆರ್ಥಿಕವಾಗಿ ಸದೃಢವಾಗಿ ೨೮ ಸದಸ್ಯರು ಮತ್ತು ೪೦ ಪರಿಶಿಷ್ಟ ಪಂಗಡದ ಮಹಿಳೆಯರು ತಮ್ಮ ಮನೆಗಳಿಗೆ ತಾವೇ ಸ್ವತಃ ವಿದ್ಯುತ್ ಸಂಪರ್ಕವನ್ನು ತೆಗೆದುಕೊಂಡಿದ್ದಾರೆ. ಇನ್ನುಳಿದ ಪರಿಶಿಷ್ಟ ಮಹಿಳೆಯರು ಸರಕಾರದ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕವನ್ನು

ತೆಗೆದುಕೊಂಡಿದ್ದಾರೆ. ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಆರ್ಥಿಕವಾಗಿ ಹಿಂದುಳಿದಿದ್ದು, ಸರಕಾರಿ ಯೋಜನೆಯಡಿಯಲ್ಲಿ ತಮ್ಮ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಹೊಂದಿರುವುದು ತಿಳಿದುಬಂದಿದೆ.

ಎರಡು ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಸ್ತ್ರೀಶಕ್ತಿ ಗುಂಪುಗಳಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಯಾವುದೇ ರೀತಿಯ ಆರ್ಥಿಕ ಚಟುವಟಿಕೆಗಳನ್ನು ಮಾಡಿರುವುದಿಲ್ಲ. ಅಂದರೆ ಪುಟ್ಟಿ ನೇಯುವುದು, ಬೀಡಿಕಟ್ಟುವುದು, ಹಪ್ಪಳ ತಯಾರಿಕೆ, ಊಟದ ತಟ್ಟೆ ತಯಾರಿಕೆ, ಸೊಂಡಿಗೆ ತಯಾರಿಕೆ ಮುಂತಾದವುಗಳು. ಕಾರಣ ಬ್ಯಾಂಕುಗಳು ಗುಂಪುಗಳಿಗೆ ಕಡಿಮೆ ಮೊತ್ತದ ಹಣವನ್ನು ಸಾಲದ ರೂಪದಲ್ಲಿ ನೀಡುತ್ತಿವೆ. ಆದರೆ ಪುಟ್ಟಿ ನೇಯುವುದು ಮುಂತಾದ ಆರ್ಥಿಕ ಚಟುವಟಿಕೆಗಳನ್ನು ಮಾಡಲು ಅವರು ಕೊಟ್ಟಿರುವ ಕಡಿಮೆ ಹಣದ ಮೊತ್ತದಿಂದ ಸಾಧ್ಯವಾಗುವುದಿಲ್ಲ. ಇನ್ನೊಂದು ವಿಶೇಷ ಸಂಗತಿ ಎಂದರೆ ಗುಂಪಿನ ಎಲ್ಲಾ ಸದಸ್ಯರು ಅನಕ್ಷರಸ್ಥರಾಗಿರುವುದರಿಂದ ಇವರಿಗೆ ಜ್ಞಾನದ ಕೊರತೆಯಿದೆ. ಆದ್ದರಿಂದ ನಾವು ಏನು ಮಾಡಬೇಕೆಂಬುದು ತಿಳಿಯುತ್ತಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸರಕಾರ ಅಥವಾ ಸರಕಾರೇತರ ಸಂಸ್ಥೆಗಳ ಅಧಿಕಾರಿಗಳು ಕೇವಲ ಉಳಿತಾಯ ಮಾಡುವುದಕ್ಕೆ ಹೇಳುತ್ತಾರೆ ವಿನಃ ಯಾವುದೇ ರೀತಿಯ ತರಬೇತಿ ನೀಡುತ್ತಿಲ್ಲ. ಒಂದುವೇಳೆ ತರಬೇತಿ ಕೊಟ್ಟರೂ ಗುಂಪಿನ ಎಲ್ಲಾ ಸದಸ್ಯರಲ್ಲಿ ಕೇವಲ ೨ ರಿಂದ ೩ ಜನ ಸದಸ್ಯರಿಗೆ ಮಾತ್ರ ತರಬೇತಿ ಕೊಡುತ್ತಾರೆ ಎಂದು ತಿಳಿಸಿದ್ದಾರೆ.

ಬಳ್ಳಾರಿ ಜಿಲ್ಲೆಯಾದ್ಯಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ರಾಜಕೀಯವಾಗಿ ಭಾಗವಹಿಸುತ್ತಿದ್ದಾರೆ. ಉದಾಹರಣೆಗೆ, ಬಳ್ಳಾರಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಾಗಿ ಬಿ.ಅನಿತಾ(ಎಸ್.ಟಿ) ಜಿಲ್ಲಾ ಪಂಚಾಯಿತಿ ಸದಸ್ಯರಾಗಿ ಸರಸ್ವತಿ(ಎಸ್.ಸಿ) ಕಂಡುಬಂದರೆ, ಹೊಸಪೇಟೆ ತಾಲೂಕು ಪಂಚಾಯತಿ ಸದಸ್ಯರಾಗಿ ನಾಯಕರ ಸುಬ್ಬಮ್ಮ(ಎಸ್.ಟಿ) ಶ್ರೀಮತಿ ಗೌರಮ್ಮ(ಎಸ್.ಸಿ.). ಅದೇರೀತಿ ಕೂಡ್ಲಿಗಿ ತಾಲೂಕು ಪಂಚಾಯತಿ ಸದಸ್ಯರಾಗಿ ಹಾಲಮ್ಮ ವೈಸ್ ಪ್ರೆಸಿಡೆಂಟ್(ಎಸ್.ಟಿ) ಹಾಗೂ ಸದಸ್ಯರಾಗಿ ನಾಗರತ್ನಮ್ಮ(ಎಸ್.ಸಿ) ಅವರು ಗುರುತಿಸಿಕೊಂಡಿದ್ದಾರೆ. ಆದರೆ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡಿರುವ ಆಯ್ದ ನಾಲ್ಕು ಪಂಚಾಯತಿಗಳಲ್ಲಿ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ಯಾವುದೇ ಪಂಚಾಯತಿಗೆ ಚುನಾವಣೆಯಲ್ಲಿ ಸ್ಪರ್ಧಿಸದಿರುವುದು ಕಂಡುಬಂದಿದೆ. ಅಧ್ಯಯನಕ್ಕೆ ಒಳಪಟ್ಟ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ತಮ್ಮ ಗಂಡಂದಿರ ಇಚ್ಛೆಗೆ ಅನುಗುಣವಾಗಿ ಮತ ಚಲಾಯಿಸುತ್ತಿದ್ದಾರೆ. ಗುಂಪಿನ ಎಲ್ಲಾ ಸದಸ್ಯರು ಸಭೆಸೇರಿ ಮತ ಚಲಾಯಿಸುವುದರ ಕುರಿತು ಸಭೆ ನಡೆಸಿ ಇಂಥವರಿಗೆ ಮಾತ್ರ ಮತ ಹಾಕಬೇಕು ಎಂದು ನಿರ್ಧಾರ ತೆಗೆದುಕೊಂಡರೂ, ಅವರ ಇಷ್ಟದ ಪ್ರಕಾರ ಮತ ಚಲಾಯಿಸಲು ತಮ್ಮ ಗಂಡಂದಿರು ಅಡ್ಡಿಪಡಿಸುತ್ತಾರೆ. ರಾಜಕೀಯ ನಾಯಕರು ಸ್ವ-ಸಹಾಯ ಗುಂಪುಗಳಿಗೆ ಇಂತಿಷ್ಟು ಹಣವನ್ನು ಕೊಟ್ಟು ಅವರ ಪಕ್ಷದ ಪರವಾಗಿ ಪ್ರಚಾರ ಮಾಡುವುದಕ್ಕೆ ಹೇಳುತ್ತಾರೆ. ಆದರೆ ಚುನಾವಣಾ ಸಮಯದಲ್ಲಿ ಪ್ರಚಾರ ಮಾಡಿದರೂ, ಇವರಿಗೆ ಮತ

ಚಲಾಯಿಸುವಂತಿಲ್ಲ. ಬದಲಾತಿ ತಮ್ಮ ಗಂಡಂದಿರು ಹೇಳಿದ ಪಕ್ಷಕ್ಕೆ ಮತ ಚಲಾಯಿಸಬೇಕು. ಗುಂಪಿಗೆ ಸೇರಿದ ಮಹಿಳೆಯರು ಅಂತೂ ಅದರ ಗೋಜಿಗೆ ಹೋಗುವುದಿಲ್ಲ. ಕಾರಣ ಪುರುಷ ಪ್ರಧಾನ ವ್ಯವಸ್ಥೆಯ ದೋರಣೆ. ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ಚುನಾವಣಾ ಅಭ್ಯರ್ಥಿಯಾಗಿ ಸ್ಪರ್ಧಿಸಲು ಇಷ್ಟವಿದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಒಂದು ವಿಶೇಷ. ಆದರೆ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಇಷ್ಟವಿಲ್ಲ ಎಂದು ತಿಳಿಸಿದ್ದಾರೆ. ಮುಖ್ಯವಾಗಿ ನಮ್ಮ ಸಾಮಾಜಿಕ ಕಟ್ಟುಪಾಡುಗಳಲ್ಲಿ ಮಹಿಳೆಯರು ಅಷ್ಟೊಂದು ಸ್ವತಂತ್ರವಾಗಿ ಯೋಚಿಸುವಂತಹ ವಾತಾವರಣ ಎಲ್ಲಿಯಾದರೂ ದೊರಕಿದೆಯೇ? ಅದರಲ್ಲೂ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ದಿನನಿತ್ಯ ಜೀವನದ ಅಳಿವು–ಉಳಿವಿನ ಬಗ್ಗೆ ಯೋಚಿಸುವುದನ್ನು ಬಿಟ್ಟು, ಈ ರಾಜಕೀಯ ಚಿಂತೆ ನಮಗೇಕೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಗ್ರಾಮ ಸಭೆಗಳಲ್ಲಿ ಭಾಗವಹಿಸುತ್ತಾ ಗ್ರಾಮದ ಜನರಿಗೆ ಗ್ರಾಮದ ಅಭಿವೃದ್ಧಿ, ಶಿಕ್ಷಣದ ಮಹತ್ವ, ನೈರ್ಮಲ್ಯ ಮುಂತಾದ ಅಂಶಗಳ ಬಗ್ಗೆ ಅರಿವನ್ನು ಮೂಡಿಸುತ್ತಿದ್ದಾರೆ. ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಗ್ರಾಮ ಸಭೆಗಳಲ್ಲಿ ಭಾಗವಹಿಸದೇ ಇರುವುದು ಕಂಡುಬಂದಿದೆ. ರಾಜಕೀಯವೆಂಬುದೆಲ್ಲವು ಪುರುಷನ ಸ್ವತ್ತಾಗಿರುವುದರಿಂದ ಇಂತಹ ಕಡೆಗಳಲ್ಲಿ ಹೆಣ್ಣು ಕಾಣೆಯಾಗಿದ್ದಾಳೆ. ನಾಲ್ಕು ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಮುಖ್ಯವಾಗಿ ತಿಳಿದುಬಂದಿರುವ ಅಂಶವೆಂದರೆ, ಗುಂಪಿನ ಸದಸ್ಯರು ಗುಂಪುಗಳ ಅಥವಾ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಏನಾದರೂ ರಾಜಕೀಯ ವ್ಯಕ್ತಿಗಳ ಜೊತೆಗೆ ಚರ್ಚೆ ಮಾಡಲು ಹೋದರೆ ನಮ್ಮ ಗಂಡಂದಿರು ಅಥವಾ ಕುಟುಂಬದ ಯಜಮಾನ ಅವರ ಹತ್ತಿರ ಯಾಕೆ ಮಾತನಾಡುತ್ತೀಯ. ಅವನಿಗೂ ನಿನಗೂ ಏನು ಸಂಬಂಧ, ಅವನ ಜೊತೆಗೆ ಅನೈತಿಕ ಸಂಬಂಧ ಇದೆ ಎಂದು ಮಾನಸಿಕ ಕಿರುಕುಳ ಕೊಡುತ್ತಾರೆ ಎಂದು ಗುಂಪಿನ ಸದಸ್ಯರು ತಿಳಿಸಿದ್ದಾರೆ. ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರಿಗೆ ಗ್ರಾಮ ಪಂಚಾಯತಿಗಳ ಸದಸ್ಯರ ಸಂಖ್ಯೆ, ಅಧ್ಯಕ್ಷರು, ನಿಮ್ಮ ಕ್ಷೇತ್ರ, ದೇಶದ ಪ್ರಧಾನಮಂತ್ರಿ ಯಾರೆಂಬುದು ತಿಳುವಳಿಕೆ ಇಲ್ಲ. ಆದರೆ ಯಾವ ಪಂಚಾಯತಿಯಲ್ಲಿ (ಉದಾಹರಣೆಗೆ ಚಿರತಗುಂಡು) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ ಮಹಿಳೆ ಚುನಾವಣೆಗೆ ಸ್ಪರ್ದಿಸಿದ್ದಾರೆ ಅಥವಾ ಪಂಚಾಯತಿಯ ಅಧ್ಯಕ್ಷ ಅಥವಾ ಸದಸ್ಯೆಯರಾಗಿದ್ದಾರೆ ಅವರಿಗೆ ರಾಜ್ಯದ ಮತ್ತು ದೇಶದ ರಾಜಕೀಯದ ಬಗ್ಗೆ ಸ್ವಲ್ಪ ಪ್ರಮಾಣದ ಅರಿವು ಇರುವುದು ಕಂಡುಬಂದಿದೆ. ಆದರೆ ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರಿಗೆ ರಾಜ್ಯದ ಮುಖ್ಯಮಂತ್ರಿ ಯಾರೆಂಬುದು ತಿಳುವಳಿಕೆ ಇದೆ. ಕಾರಣ ಗುಂಪಿನ ಸದಸ್ಯರು ವಾರದ ಅಥವಾ ತಿಂಗಳ ಸಭೆಯಲ್ಲಿ ಸಮಾಜದ ಆಗು ಹೋಗುಗಳ ಬಗ್ಗೆ ಚರ್ಚೆ ಮಾಡುತ್ತಾರೆ. ಒಟ್ಟಾರೆಯಾಗಿ ಸ್ತ್ರೀಶಕ್ತಿ ಗುಂಪುಗಳು ಗ್ರಾಮೀಣ ಪ್ರದೇಶಗಳಲ್ಲಿ ಸಾವಿರಾರು ವರ್ಷಗಳಿಂದ ರೂಢಿಸಿಕೊಂಡು ಬಂದಿದ್ದ ಸಾಂಪ್ರದಾಯಗಳನ್ನು ಮೆಟ್ಟಿನಿಂತು ಬದಲಾವಣೆಯತ್ತ ಮುಖಮಾಡಿವೆ.

ಅಧ್ಯಯನದ ಫಲಿತಗಳು

೧. ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ೩೧ ರಿಂದ ೪೦ರ ವಯಸ್ಸಿನ ಒಳಗಿನವರಾಗಿದ್ದು, ಇವರು ಗುಂಪುಗಳಲ್ಲಿ ಉತ್ಸುಕರಾಗಿ ಪಾಲ್ಗೊಳ್ಳುತ್ತಿದ್ದಾರೆ.

೨. ಅಧ್ಯಯನಕ್ಕೆ ಒಳಪಟ್ಟ ಕ್ಷೇತ್ರದಲ್ಲಿ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ಬಹುತೇಕರು ವಿವಾಹಿತ ಮಹಿಳೆಯರಾಗಿದ್ದಾರೆ.

೩. ಗುಂಪಿಗೆ ಸೇರಿದ ಮತ್ತು ಸೇರದ ಹೆಚ್ಚಿನ ಪರಿಶಿಷ್ಟ ಮಹಿಳೆಯರು ವಿಭಕ್ತ ಕುಟುಂಬಗಳಲ್ಲಿ ವಾಸಿಸುತ್ತಿದ್ದಾರೆ.

೪. ಪರಿಶಿಷ್ಟ ಜಾತಿಯ ಮಹಿಳೆಯರು ಸ್ತ್ರೀಶಕ್ತಿ ಗುಂಪುಗಳಲ್ಲಿ ಸದಸ್ಯತ್ವವನ್ನು ಪಡೆದ ಮಾತ್ರಕ್ಕೆ ಮೇಲ್ವರ್ಗದ ಮನೆಯೊಳಗೆ ಬಿಟ್ಟುಕೊಳ್ಳದೆ ಇರುವುದು ಕಂಡುಬಂದಿದೆ.

೫. ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆಯಲ್ಲಿ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಿಗೆ ಮೇಲ್ವರ್ಗದ ಮನೆಯೊಳಗೆ ಪ್ರವೇಶವಿರುವುದು ಕಂಡುಬಂದಿದೆ.

೬. ಸಾಮಾಜಿಕವಾಗಿ ಸ್ತ್ರೀಶಕ್ತಿ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ಸಾಮಾಜಿಕ ವ್ಯವಸ್ಥೆಯಲ್ಲಿ ಒಂದೇ ಸಾಮಾಜಿಕ ಸ್ವರೂಪವನ್ನು ಹೊಂದಿರುವುದು ಕಂಡುಬರುತ್ತದೆ.

೭. ಸ್ತ್ರೀಶಕ್ತಿ ಗುಂಪುಗಳಲ್ಲಿ ವಿವಿಧ ಜಾತಿಯ ಮಹಿಳಾ ಸದಸ್ಯರು ಇರುವುದರಿಂದ ಪರಿಶಿಷ್ಟ ಮಹಿಳೆಯರನ್ನು ಮೇಲ್ವರ್ಗದ ಮಹಿಳೆಯರು ನಿರ್ಲಕ್ಷ ಮಾಡುತ್ತಾರೆ. ಇದರಿಂದ ಬಹಳಷ್ಟು ಮಹಿಳೆಯರು ಸಂಘಗಳಿಂದ ಹೊರಗುಳಿಯುತ್ತಿದ್ದಾರೆ.

೮. ಗುಂಪಿಗೆ ಸೇರಿದ ಮತ್ತು ಸೇರದ ಬಹುತೇಕ ಪರಿಶಿಷ್ಟ ಮಹಿಳೆಯರು ಅನಕ್ಷರಸ್ಥರಾಗಿರುವುದು ಕಂಡುಬಂದಿದೆ. ಇವರಲ್ಲಿ ಪರಿಶಿಷ್ಟ ಪಂಗಡದ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ.

೯. ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ತಮ್ಮ ಹೆರಿಗೆ ಸಂದರ್ಭದಲ್ಲಿ ತಮ್ಮ ತಮ್ಮ ಮನೆಯಲ್ಲೆ ಪ್ರಸೂತಿ ಆರೈಕೆ ನೆರವೇರಿಸುತ್ತಾರೆ. ಆದರೆ ಹೆಚ್ಚಿನ ಆರೋಗ್ಯ ತಪಾಸಣೆಗಳ ಅಗತ್ಯವೆನಿಸಿದಾಗ ಸಾರ್ವಜನಿಕ ಚಿಕಿತ್ಸಾಲಯಗಳನ್ನು ಅವಲಂಬಿಸುತ್ತಾರೆ.

೧೦. ಗುಂಪಿಗೆ ಸೇರಿದ ಮತ್ತು ಸೇರದ ಬಹುತೇಕ ಪರಿಶಿಷ್ಟ ಮಹಿಳಾ ಕುಟುಂಬ ಘಟಕಗಳು ಅನಿಲ ರಹಿತ ಪಡಿತರ ಚೀಟಿಗಳನ್ನು ಹೊಂದಿದ್ದಾರೆ.

೧೧. ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಆದರೆ ಗುಂಪಿಗೆ ಸೇರಿದ ನಂತರ ಆರ್ಥಿಕವಾಗಿ ಚೇತರಿಸಿಕೊಂಡು ಶೀಟಿನ ಮನೆಗಳನ್ನು ನಿರ್ಮಿಸಿಕೊಂಡಿರುವುದು ಕಂಡುಬಂದಿದೆ.

೧೨. ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ಬಹುತೇಕವಾಗಿ ಬಯಲು ಶೌಚಾಲಯಗಳನ್ನು ಅವಲಂಬಿಸಿದ್ದಾರೆ.

೧೩. ಅಧ್ಯಯನಕ್ಕೆ ಒಳಪಟ್ಟ ಕ್ಷೇತ್ರದಲ್ಲಿ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳಾ ಕುಟುಂಬಗಳು ಕುಡಿಯುವ ನೀರಿಗಾಗಿ ಶೇ.೯೦ರಷ್ಟು ಸಾರ್ವಜನಿಕ ನಲ್ಲಿಗಳನ್ನು ಅವಲಂಬಿಸಿರುವುದು ಕಂಡುಬಂದಿದೆ.

೧೪. ಕೂಡ್ಲಿಗಿ ತಾಲೂಕಿನ ರಾಂಪುರ ಪಂಚಾಯತಿ ವ್ಯಾಪ್ತಿಯಲ್ಲಿರುವ ಸ್ತ್ರೀಶಕ್ತಿ ಗುಂಪಿನ ಪರಿಶಿಷ್ಟ ಮಹಿಳೆಯರು ಸಮಾಜಮುಖಿ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅಂದರೆ ರಾಷ್ಟ್ರೀಯ ಹಬ್ಬಗಳಾದ ಆಗಸ್ಟ್ ೧೫ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ದಿನ, ಹಾಗೆಯೇ ವಿವಿಧ ರಾಷ್ಟ್ರನಾಯಕರುಗಳ ಜನ್ಮ ದಿನಾಚರಣೆಗಳನ್ನು ಆಚರಿಸುವ ಜೊತೆಗೆ, ವಿವಿಧ ಶಾಲೆಗಳಿಗೆ ತೆರಳಿ ಬಡ ವಿದ್ಯಾರ್ಥಿಗಳಿಗೆ ನೋಟುಪುಸ್ತಕ, ಸಮವಸ್ತ್ರ, ಸಹಿ ತಿನಿಸು ಮೊದಲಾದವುಗಳನ್ನು ಹಂಚಿ ಶೈಕ್ಷಣಿಕವಾಗಿ ಜಾಗೃತಿ ಮೂಡಿಸುತ್ತಿದ್ದಾರೆ.

೧೫. ಗ್ರಾಮೀಣ ಭಾಗದ ಕಲೆಗಳನ್ನು ಉಳಿಸಿ ಬೆಳೆಸುವಲ್ಲಿ ಈ ಮಹಿಳಾ ಸ್ತ್ರೀಶಕ್ತಿ ಗುಂಪುಗಳು ಮಹತ್ವದ ಪಾತ್ರವಹಿಸುತ್ತಿವೆ. ಉದಾಹರಣೆಗೆ, ರಾಂಪುರ ಗ್ರಾಮದಲ್ಲಿ ಪೌರಾಣಿಕ ನಾಟಕ, ಬಯಲು ನಾಟಕ ಏರ್ಪಡಿಸಿದಾಗ ಕಲಾವಿಧರಿಗೆ ವಸತಿ, ಊಟದ ವ್ಯವಸ್ಥೆಯನ್ನು ಕಲ್ಪಿಸಿ ಗ್ರಾಮೀಣ ಕಲೆಗಳನ್ನು ಉತ್ತೇಜಿಸುತ್ತಿದ್ದಾರೆ.

೧೬. ಆಯ್ದ ನಾಲ್ಕು ಪಂಚಾಯತಿಗಳಲ್ಲಿ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರಿಗೆ ಶೇ.೯೩ರಷ್ಟು ಕೃಷಿ ಕೂಲಿಯೇ ಇವರ ಜೀವನದ ಆಧಾರವಾಗಿದೆ.

೧೭. ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಸಾಂಸ್ಥಿಕ ಸಂಸ್ಥೆ (ವಾಣಿಜ್ಯ ಬ್ಯಾಂಕು) ಗಳಲ್ಲೇ ಸಾಲವನ್ನು ಪಡೆಯುತ್ತಿದ್ದಾರೆ. ಆದರೆ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಸಾಂಸ್ಥಿಕೇತರ (ಸಂಬಂಧಿಕರು, ಹಣದ ಲೇವಾದೇವಿಗಾರರು ಮತ್ತು ಜಮೀನ್ದಾರರು) ಸಂಸ್ಥೆಗಳಿಂದ ಸಾಲವನ್ನು ಪಡೆಯುತ್ತಿದ್ದಾರೆ.

೧೮. ಗುಂಪುಗಳಿಂದ ಅಥವಾ ಬ್ಯಾಂಕುಗಳಿಂದ ಪರಿಶಿಷ್ಟ ಮಹಿಳೆಯರು ೫೦೦೧ ರಿಂದ ೧೦೦೦೦ ರೂ ವರೆಗೆ ಮಾತ್ರ ಹೆಚ್ಚಾಗಿ ಸಾಲವನ್ನು ಪಡೆದಿದ್ದಾರೆ.

೧೯. ಸ್ತ್ರೀಶಕ್ತಿ ಗುಂಪುಗಳಲ್ಲಿನ ಸದಸ್ಯರಲ್ಲಿಯೇ ಹಲವು ಭಿನ್ನಾಭಿಪ್ರಾಯಗಳಿರುವುದನ್ನು ಕಾಣಲಾಗಿದೆ. ಅಂದರೆ ಈ ಸಂಘಗಳಲ್ಲಿ ಶಿಕ್ಷಣವನ್ನು ಪಡೆದಂತಹ ಮಹಿಳೆ ಸಂಘದ ಎಲ್ಲಾ ಚಟುವಟಿಕೆಗಳನ್ನು ನಿರ್ವಹಿಸುತ್ತಿರುತ್ತಾರೆ. ಇವರಿಂದಲೇ ಹಲವು ಬಗೆಯ ತಾರತಮ್ಯಗಳು ನಡೆಯುತ್ತಿವೆ. ಅಂದರೆ ಶಿಕ್ಷಣ ಪಡೆದಂತಹ ಅಥವಾ ಸಂಘದ ಎಲ್ಲಾ ದಾಖಲೆಗಳನ್ನು ನಿರ್ವಹಿಸಿಕೊಂಡು ಹೋಗುತ್ತಿರುವ

ಮಹಿಳೆಯರಿಗೆ ಅಥವಾ ಮೇಲ್ವರ್ಗದ ಮಹಿಳೆಯರಿಗೆ ಪರಿಶಿಷ್ಟ ಮಹಿಳೆಯರು ಪ್ರಶ್ನೆಯನ್ನು ಕೇಳಿದರೆ ಅಥವಾ ಅವರಿಗೆ ಎದುರು ಮಾತನಾಡಿದರೆ, ಅವರಿಗೆ ಸಿಗುವ ಸಾಲದಲ್ಲಿ ವ್ಯತ್ಯಾಸಗಳನ್ನು ಮಾಡುವಂತಹ ಮತ್ತು ಅವರ ಪರವಾಗಿ ಯಾರು ಮಾತನಾಡುತ್ತಾರೋ ಅವರಿಗೆ ಅಗತ್ಯಕ್ಕಿಂತಲೂ ಹೆಚ್ಚಿನ ಹಣವನ್ನು ಸಾಲವಾಗಿ ಕೊಡುತ್ತಿರುವುದು ಕಂಡುಬಂದಿದೆ. ಅಂದರೆ ಸಂಘಗಳಿಂದ ಸಾಲವನ್ನು ಕೊಡುವುದರಲ್ಲಿ ತಾರತಮ್ಯಗಳಿರುವುದು ಕಂಡುಬಂದಿದೆ.

೨೦. ಗುಂಪುಗಳಿಂದ ಅಥವಾ ಬ್ಯಾಂಕುಗಳಿಂದ ಪಡೆದ ಸಾಲದ ಹಣವನ್ನು ಮಕ್ಕಳ ಶಿಕ್ಷಣಕ್ಕಾಗಿ, ಕುಟುಂಬದ ಸಾಲದ ಮರುಪಾವತಿಗಾಗಿ ಮತ್ತು ಕುಟುಂಬದ ಆರ್ಥಿಕ ಚಟುವಟಿಕೆಗಳಲ್ಲಿ ವ್ಯಯಿಸುತ್ತಿದ್ದಾರೆ. ಆದರೆ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಜಮೀನ್ದಾರರ ಹತ್ತಿರ ತೆಗೆದುಕೊಂಡ ಸಾಲದ ಹಣವನ್ನು ಮನೆಯ ದಿನನಿತ್ಯ ಖರ್ಚಿಗಾಗಿ, ಹಬ್ಬ ಹರಿದಿನಗಳಿಗಾಗಿ, ದುಂದುವೆಚ್ಚವನ್ನು ಮಾಡುತ್ತಿದ್ದಾರೆ. ಆದುದರಿಂದ ಇವರು ಸಾಲದಲ್ಲಿಯೇ ಸಿಲುಕಿಕೊಂಡಿದ್ದಾರೆ.

೨೧. ಗುಂಪುಗಳಿಂದ ಪಡೆದ ಸಾಲದ ಹಣವನ್ನು ಹೆಚ್ಚಿನ ಬಡ್ಡಿಗೆ ಬೇರೆಯವರಿಗೆ ಕೊಡುತ್ತಿರುವುದು ಕಂಡುಬಂದಿದೆ.

೨೨. ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ಆಧುನಿಕ ಸಂದರ್ಭಕ್ಕನುಗುಣವಾಗಿ ಸರಕಾರಿ ಯೋಜನೆಗಳನ್ನು ಬಳಸಿಕೊಳ್ಳುವ ಮೂಲಕ ಹೆಚ್ಚಾಗಿ ಗ್ಯಾಸ್‌ಸ್ಟವ್‌ನ್ನು ಹೊಂದಿದ್ದಾರೆ. ಆದರೂ ಕೂಡ ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ಮಾತ್ರ ತಮ್ಮ ಕುಟುಂಬಕ್ಕೆ ಉರುವಲು ಕಟ್ಟಿಗೆಯಿಂದಲೇ ಆಹಾರವನ್ನು ತಯಾರಿಸಿಕೊಳ್ಳುತ್ತಿದ್ದಾರೆ.

೨೩. ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಹೆಚ್ಚಾಗಿ ಸರಕಾರಿ ಯೋಜನೆಗಳ ಅಡಿಯಲ್ಲಿ ವಿದ್ಯುತ್ ಸೌಲಭ್ಯವನ್ನು ಪಡೆದಿದ್ದಾರೆ. ಆದರೆ ಪರಿಶಿಷ್ಟ ಮಹಿಳೆಯರು ಗುಂಪಿಗೆ ಸೇರಿದ ನಂತರ ಆರ್ಥಿಕ ಮಟ್ಟ ಸುಧಾರಿಸಿಕೊಂಡು ತಮ್ಮ ಮನೆಗಳಿಗೆ ತಾವೇ ವಿದ್ಯುತ್ ಸಂಪರ್ಕವನ್ನು ತೆಗೆದುಕೊಂಡಿದ್ದಾರೆ.

೨೪. ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಯಾವುದೇ ರೀತಿಯ ಆರ್ಥಿಕ ಚಟುವಟಿಕೆ (ಪುಟ್ಟಿ ಹೆಣೆಯುವುದು, ಹಪ್ಪಳ ತಯಾರಿಕೆ ಮುಂತಾದವು)ಗಳನ್ನು ಅಂದರೆ ಸ್ವಯಂ ಉದ್ಯೋಗಗಳಲ್ಲಿ ತೊಡಗಿಕೊಂಡಿಲ್ಲ.

೨೫. ಸ್ತ್ರೀಶಕ್ತಿ ಗುಂಪುಗಳಿಂದ ಪರಿಶಿಷ್ಟ ಜಾತಿಗೆ ಸೇರಿದ ಸಮುದಾಯದವರು ಆರ್ಥಿಕವಾಗಿ ಸದೃಢಗೊಳ್ಳಲು ಒಂದು ವೇಳೆ ಕುಲಕಸುಬುಗಳಲ್ಲಿ ತೊಡಗಿ ಇಲ್ಲವೇ ತರಕಾರಿ ಮತ್ತು ಹೂ ಮೊದಲಾದವುಗಳನ್ನು ಮಾರಾಟ ಮಾಡಲು ಪ್ರಯತ್ನಿಸಿದರೂ ಕೂಡ ದಲಿತರೆಂಬ ಕಾರಣದಿಂದ

ಇವರಿಂದ ಯಾವುದೇ ವಸ್ತುಗಳನ್ನು ಮೇಲ್ವರ್ಗದ ಮಹಿಳೆಯರು ಖರೀದಿಸದಿರುವುದು ಕಂಡುಬಂದಿದೆ. ಉದಾಹರಣೆಗೆ ಸಣಾಪುರ, ಚಿರತಗುಂಡು ಮತ್ತು ರಾಂಪುರ ಪಂಚಾಯತಿಗಳು.

೨೬. ಸ್ತ್ರೀಶಕ್ತಿ ಸಂಘಗಳ ಸದಸ್ಯರಿಗೆ ಸರಕಾರದಿಂದಾಗಲೀ ಅಥವಾ ಸರಕಾರೇತರ ಸಂಸ್ಥೆಗಳಿಂದಾಗಲೀ ಸರಿಯಾದ ರೀತಿಯಲ್ಲಿ ತರಬೇತಿಗಳು ದೊರೆಯುತ್ತಿಲ್ಲ. ಬಹಳಷ್ಟು ಸಂದರ್ಭಗಳಲ್ಲಿ ತರಬೇತಿಗಳು ನಗರ ಪ್ರದೇಶಗಳಲ್ಲಿ ನಡೆಯುತ್ತಿವೆಯಾದ್ದರಿಂದ ಈ ತರಬೇತಿಗಳಿಗೆ ಭಾಗವಹಿಸಲು ಮಹಿಳೆಯರಿಗೆ ತುಂಬಾ ಕಷ್ಟದ ಸಂಗತಿಯಾಗಿರುತ್ತದೆ. ಮುಖ್ಯವಾಗಿ ಕುಟುಂಬದ ಪುರುಷ ಸದಸ್ಯರು ಇವುಗಳಿಗೆ ಕಳುಹಿಸಲು ಮುಂದಾಗದೇ ಎಷ್ಟೋ ಮಹಿಳೆಯರು ಹಲವಾರು ತರಬೇತಿಗಳಿಂದ ವಂಚಿತರಾಗುತ್ತಿದ್ದಾರೆ.

೨೭. ಅಧ್ಯಯನಕ್ಕೆ ಒಳಪಟ್ಟ ಎರಡು ತಾಲೂಕುಗಳ ನಾಲ್ಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಪರಿಶಿಷ್ಟ ಮಹಿಳೆಯರು ಯಾವುದೇ ಪಂಚಾಯತಿಗಳಿಗೆ (ಸ್ತ್ರೀಶಕ್ತಿ ಗುಂಪುಗಳನ್ನು ಹೊರತುಪಡಿಸಿ) ಸದಸ್ಯತ್ವವನ್ನು ಪಡೆದಿರುವುದಿಲ್ಲ.

೨೮. ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರು ಗ್ರಾಮ ಸಭೆಗಳಲ್ಲಿ ಹೆಚ್ಚಾಗಿ ಭಾಗವಹಿಸುತ್ತಿದ್ದಾರೆ. ಆದರೆ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸದಿರುವುದು ಕಂಡುಬಂದಿದೆ.

೨೯. ಗುಂಪಿಗೆ ಸೇರಿದ ಮತ್ತು ಸೇರದ ಪರಿಶಿಷ್ಟ ಮಹಿಳೆಯರು ಗ್ರಾಮದ ಅಭಿವೃದ್ಧಿ ವಿಚಾರಗಳನ್ನು ಯಾವುದೇ ರಾಜಕೀಯ ವ್ಯಕ್ತಿಗಳ ಜೊತೆಗೆ ಚರ್ಚೆ ಮಾಡಿದರೆ, ಆ ಮಹಿಳೆಯರ ಗಂಡಂದಿರು ಅಥವಾ ಕುಟುಂಬದ ಯಜಮಾನರು ಅವರೊಂದಿಗೆ ಅನೈತಿಕ ಸಂಬಂಧದ ಹಣೆಪಟ್ಟಿಯನ್ನು ಕಟ್ಟುವುದು ಕಂಡುಬಂದಿದೆ.

೩೦. ಹೈದರಾಬಾದ್-ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿರುವ ಸ್ತ್ರೀಶಕ್ತಿ ಗುಂಪುಗಳ ಸಮಸ್ಯೆ ಮತ್ತು ಸವಾಲುಗಳು ಭಿನ್ನವಿಲ್ಲದಿರುವುದು ಅಧ್ಯಯನ ಸಂದರ್ಭದಲ್ಲಿ ಕಂಡುಬಂದಿದೆ. ಅಂದರೆ ಗುಂಪಿಗೆ ಬಹುತೇಕ ಮಹಿಳೆಯರು ಅನಕ್ಷರಸ್ಥರಾಗಿರುವುದರಿಂದ ಸರಕಾರದಿಂದ ಸೌಲಭ್ಯಗಳನ್ನು ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ. ಜೊತೆಗೆ ಇಲ್ಲಿನ ಪಟ್ಟಭದ್ರ ಹಿತಾಸಕ್ತಿಗಳು ಇವರನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿರುವುದರಿಂದ ಮಹಿಳಾ ಸ್ತ್ರೀಶಕ್ತಿ ಸಂಘಗಳ ಮೂಲ ಆಶಯ ಸಾಕಾರಗೊಳ್ಳಲು ಸಾಧ್ಯವಾಗುತ್ತಿಲ್ಲ.

೩೧. ಪ್ರಸ್ತುತ ದಿನಮಾನಗಳಲ್ಲಿ ಮಹಿಳೆಯರಿಗೆ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯವಾಗಿ ಸದೃಢಗೊಳ್ಳಲು ಸ್ತ್ರೀಶಕ್ತಿ ಗುಂಪುಗಳು ವರವಾಗಿ ದೊರೆತಿರುವುದು ಸಂತಸದ

ಸಂಗತಿ. ಏಕೆಂದರೆ ಸ್ತ್ರೀಶಕ್ತಿ ಗುಂಪುಗಳಲ್ಲಿ ಗುರುತಿಸಿಕೊಳ್ಳದ ಮಹಿಳೆಯರಿಗೆ ಹೋಲಿಸಿದರೆ ಇವರು ಸಮಾಜದ ಎಲ್ಲಾ ವಲಯಗಳಲ್ಲಿ ಭಿನ್ನತೆಯಿಂದಿರುವುದು ಕಂಡುಬಂದಿದೆ.

ಸಲಹೆಗಳು

೧. ದೇವಸ್ಥಾನದ ಅಥವಾ ಮೇಲ್ವರ್ಗದ ಮನೆಗಳಲ್ಲಿ ಗುಂಪಿನ ಸಭೆಗಳು ನಡೆಯುತ್ತವೆ. ಅಂತಹ ಸಮಯದಲ್ಲಿ ಪರಿಶಿಷ್ಟ ಜಾತಿ ಮಹಿಳೆಯರು ಹೊರಗೆ ನಿಂತಿರುತ್ತಾರೆ. ಹಾಗಾಗಿ ಅವರು ಒಂದು ರೀತಿಯ ಅವಮಾನಕ್ಕೆ ಒಳಗಾಗುವಂತೆ ಮಾನಸಿಕವಾದ ಹಿಂಸೆ ಅನುಭವಿಸುತ್ತಾರೆ. ಆದುದರಿಂದ ಗುಂಪಿನ ಸಭೆಗಳಿಗೆ ಪ್ರತ್ಯೇಕ ಕೊಠಡಿ ನಿರ್ಮಿಸುವ ಅಗತ್ಯವಿದೆ.

೨. ಸಮಾಜದಲ್ಲಿ ದಲಿತರ ಮೇಲೆ ಸವಾರಿ ಮಾಡುತ್ತಿರುವ ಅಸ್ಪೃಶ್ಯತೆಯ ವಿರುದ್ಧ ಹೋರಾಡಲು ಸ್ತ್ರೀಶಕ್ತಿ ಗುಂಪಿನ ಸದಸ್ಯರನ್ನು ಜಾಗೃತಿಗೊಳಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

೩. ಸರಕಾರ ಗುಂಪುಗಳ ಸದಸ್ಯರಿಗೆ ನಗರ ಪ್ರದೇಶಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನೀಡಿತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿರುವ ಮಹಿಳೆಯರಿಗೆ ನಗರ ಪ್ರದೇಶಗಳಿಗೆ ಹೋಗಿ ತರಬೇತಿ ಪಡೆಯಲು ಸಮಸ್ಯೆಯಾಗುತ್ತಿದೆ. ಅದರಲ್ಲೂ ಸದಸ್ಯರ ಗಂಡಂದಿರು ಹೋಗುವುದಕ್ಕೆ ಅಡ್ಡಿ ವ್ಯಕ್ತಪಡಿಸುತ್ತಾರೆ. ಆದ್ದರಿಂದ ಇವರಿಗೆ ಗ್ರಾಮೀಣ ಮಟ್ಟದಲ್ಲೇ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.

೪. ಗುಂಪುಗಳು ಪಡೆದ ಸಾಲದ ಹಣದಿಂದ ಆದಾಯ ಉತ್ಪನ್ನ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುವಂತೆ ಕ್ರಮವಹಿಸಬೇಕು.

೫. ಸ್ತ್ರೀಶಕ್ತಿ ಗುಂಪುಗಳಲ್ಲಿ ಸದಸ್ಯತ್ವ ಪಡೆಯುವುದರಿಂದ ಹೇಗೆ ಆರ್ಥಿಕವಾಗಿ ಸಬಲರಾಗುತ್ತಾರೆ ಎಂಬುದನ್ನು ಬೀದಿ ನಾಟಕಗಳ ಮೂಲಕ ಜನರಿಗೆ ಅರಿವನ್ನು ಮೂಡಿಸಬೇಕು.

೬. ಸ್ತ್ರೀಶಕ್ತಿ ಗುಂಪುಗಳ ಸದಸ್ಯರು ಉತ್ಪಾದಿಸಿದ ವಸ್ತುಗಳನ್ನು ಮಾರಾಟ ಮಾಡಲು ಹೋಬಳಿ ಮಟ್ಟದಲ್ಲಿ ಮಾರುಕಟ್ಟೆಯ ಸೌಲಭ್ಯಗಳನ್ನು ಒದಗಿಸಬೇಕು.

೭. ಬ್ಯಾಂಕು ನೀಡುವ ಸಾಲದ ಮೊತ್ತವು ಕಡಿಮೆಯಿರುವುದರಿಂದ ಸ್ತ್ರೀಶಕ್ತಿ ಗುಂಪುಗಳಿಗೆ ಗರಿಷ್ಟ ಪ್ರಮಾಣದಲ್ಲಿ ಸಾಲವನ್ನು ಪೂರೈಸಬೇಕು.

೮. ಗ್ರಾಮೀಣ ಮಹಿಳೆಯರಿಗೆ ರಾಜಕೀಯದಲ್ಲಿ ಹೆಚ್ಚೆಚ್ಚು ಪಾಲ್ಗೊಳ್ಳುವಂತಾಗಲು ಸ್ತ್ರೀಶಕ್ತಿ ಗುಂಪುಗಳಿಂದ ಅಭ್ಯರ್ಥಿಗಳು ಸ್ಪರ್ಧಿಸುವಂತೆ ಅವರನ್ನು ಪ್ರೇರೇಪಿಸುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು.

ಅನುಬಂಧಗಳು

ಪರಾಮರ್ಶನ ಗ್ರಂಥಗಳು (ಕನ್ನಡ)
ಪರಾಮರ್ಶನ ಗ್ರಂಥಗಳು (ಇಂಗ್ಲೀಷ್)
ಅಂತರಜಾಲದ ಮಾಹಿತಿ
ವಕ್ತೃವಿವರ
ಪ್ರಶ್ನಾವಳಿ

ಪರಾಮರ್ಶನ ಗ್ರಂಥಗಳು(ಕನ್ನಡ)

೧. ಅಂಜೀನಪ್ಪ ಬಿ.ಎಚ್. ಮಹಿಳೆ ಮತ್ತು ದುಡಿಮೆ ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು, ೨೦೦೬

೨. ಅಗರವಾಲ ಬಿನ್. ಭೂಮಿಯ ಹಕ್ಕುಗಳು ಮತ್ತು ಲಿಂಗಸಮಾನತೆ, ಯೋಜನೆ, ಆಗಸ್ಟ್ ೨೦೦೧, ವ್ಯಾ-೪೫, ಪು.ಸಂ. ೩೫

೩. ಅನುಪಮ್ ಹಜ್ರ, ಸುಸ್ಥಿರ ಗ್ರಾಮೀಣ ಅಭಿವೃದ್ಧಿಗೆ ಹೊಸ ಆಯಾಮಗಳನ್ನು ಸೇರಿಸುವಿಕೆ, ಕುರುಕ್ಷೇತ್ರ, ಜುಲೈ ೨೦೧೩, ಪು.ಸಂ. ೩

೪. ಆನಂದ್ ತೇ ಉ್ತಂಬ್ಡೆ, ಅನುವಾದ ನಾ. ದಿವಾಕರ, ಜಾಗತೀಕರಣ ಮತ್ತು ದಲಿತರು, ಲಡಾಯಿ ಪ್ರಕಾಶನ, ಗದಗ, ೨೦೧೩

೫. ಇಂದಿರಾ ಎಸ್. ಮಹಿಳೆ ಮತ್ತು ಸಾವುಲುಗಳು, ಶ್ರುತಿಲೋಕ ಪ್ರಕಾಶನ, ಮೈಸೂರು, ೨೦೧೦ ಪು.ಸ.೦ ೮

೬. ಚಂದ್ರಪೂಜಾರಿ ಎಂ. ದಲಿತ ಮಾನವ ಅಭಿವೃದ್ಧಿ, ದಲಿತ ಹಕ್ಕುಗಳ ಸಮಿತಿ, ಕರ್ನಾಟಕ, ಜುಲೈ ೨೦೧೬

೭. ಚಂದ್ರಪೂಜಾರಿ ಎಂ. ಅಭಿವೃದ್ಧಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು ೨೦೧೬

೮. ಒಡೆಯರ್ ಡಿ ಹೆಗ್ಗಡೆ ಮತ್ತು ಚಂದ್ರಶೇಖರ್, ಮಹಿಳೆ ಮತ್ತು ಸಾಮಾಜಿಕ ಅಭಿವೃದ್ಧಿ, ಅರ್ಜುನ್ ಪಬ್ಲಿಷಿಂಗ್ ಹೌಸ್, ಮೈಸೂರು ೨೦೦೮, ಪು.ಸಂ. ೮

೯. ಕರಮಕರ್ ಕೆ.ಜಿ. ಭಾರತದಲ್ಲಿ ಸೂಕ್ಷ್ಮ ಹಣಕಾಸು, ಸೇಜ್ ಪಬ್ಲಿಕೇಷನ್ ಇಂಡಿಯಾ ಪ್ರೈ, ಲಿಮಿಟೆಡ್, ೨೦೦೮, ಪು.ಸಂ. ೩೭

೧೦. ಕರಮಕರ್ ಕೆ.ಜಿ. ಗ್ರಾಮೀಣ ಸಾಲ ಮತ್ತು ಸ್ವ-ಸಹಾ ಗುಂಪುಗಳು ಸೇಜ್ ಪಬ್ಲಿಕೇಷನ್ ಇಂಡಿಯಾ ಪ್ರೈ, ಲಿಮಿಟೆಡ್, ೨೦೦೧, ಪು.ಸ.೦ ೨೦೭

೧೧. ಕರ್ನಾಟಕದ ಮಾನವ ಅಭಿವೃದ್ಧಿ ವರದಿ ೨೦೦೫, ಪು.ಸಂ. ೩೧೭

೧೨. ಕಿಚಡಿ ಚನ್ನಪ್ಪ ಗ್ರಾಮ ಪಂಚಾಯತಿ: ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ ೨೦೧೪, ಪು.ಸಂ. ೫೧

೧೩. ಕೃಷ್ಣಯ್ಯಗೌಡ ಎಚ್.ಆರ್. ಸ್ವ-ಸಹಾಯ ಗುಂಪುಗಳು ಚಿಂದಿಯಿಂದ ಸಿರಿತನದೆಡೆಗಿನ ಒಂದು ಕತೆ ಗುರುಕೃಪ ಪ್ರಕಾಶನ ಮೈಸೂರು, ೨೦೦೪, ಪು.ಸಂ. ೧೦

೧೪. ಗೀತಾ ಸಿ. ಮಹಿಳಾ ಆರ್ಥಿಕ ಸಬಲೀಕರಣದಲ್ಲಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪುಗಳ ಪಾತ್ರ, ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ ೨೦೧೫, ಪು.ಸಂ. ೭೩

೧೫. ಚಂದ್ರಪೂಜಾರಿ ಎಂ. ಸಂಶೋಧನೆ ಏನು? ಏಕೆ? ಹೇಗೆ? ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೯

೧೬. ಚಂದ್ರಪೂಜಾರಿ ಎಂ. ಸಮುದಾಯ ಮತ್ತು ಸಹಭಾಗಿತ್ವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೧೭. ಚಂದ್ರಪೂಜಾರಿ ಎಂ. ಅಭಿವೃದ್ಧಿ ಸಿದ್ಧಾಂತಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭

೧೮. ಚಂದ್ರಶೇಖರ್ ಟಿ.ಆರ್. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿ–ಗತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೧೯. ಚಂದ್ರಶೇಖರ್ ಟಿ.ಆರ್. ಜನರನ್ನು ಒಳಗೊಳ್ಳುವ ಅಭಿವೃದ್ಧಿ, ಹೈದರಾಬಾದ್–ಕರ್ನಾಟಕ ಪ್ರದೇಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೨೦. ಚಂದ್ರಶೇಖರ ಟಿ.ಆರ್. ಕರ್ನಾಟಕದ ಹೊಸ ಸರಕಾರದ ಮುಂದಿರುವ ಸವಾಲುಗಳು ಹೊಸತು ತಿಂಗಳ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ ನವಕರ್ನಾಟಕ ಪ್ರಕಾಶನ, ಜೂನ್–ಜುಲೈ ೨೦೧೩, ಪು.ಸಂ. ೯

೨೧. ಚಂದ್ರಶೇಖರ್ ಟಿ.ಆರ್. ಲಿಂಗ ಸಂಬಂಧಿಗಳು ಮತ್ತು ಅಭಿವೃದ್ಧಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪು.ಸಂ ೬೩

೨೨. ಜಯವಂತ ನಾಯಕ ಮತ್ತು ನಾರಾಯಣ ಯಾಜಿ ಗ್ರಾಮೀಣ ಅಭಿವೃದ್ಧಿ ಮಂಗಳ ಪ್ರಚಾರೋಪನ್ಯಾಸ ಮಾಲಿಕೆ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ೨೦೧೦ ಪು.ಸ.ಂ ೪೪–೪೫

೨೩. ಜೋಗಿನಕಟ್ಟಿ ನಾಗರಾಜ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಅಭಿವೃದ್ಧಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ ೨೦೧೫, ಪು.ಸಂ. ೫೫

೨೪. ಬಳ್ಳಾರಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ ೨೦೧೪, ಬಳ್ಳಾರಿ ಜಿಲ್ಲಾ ಪಂಚಾಯತ್ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿತ ಇಲಾಖೆ, ಕರ್ನಾಟಕ ಸರಕಾರ, ಪು.ಸ.ಂ ೨೮

೨೫. ಬಳ್ಳಾರಿ ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ಅವಲೋಕನ ವರದಿ ೨೦೧೧–೧೨, ಜಿಲ್ಲಾ ಸಾಂಖ್ಯಿಕ ಅಧಿಕಾರಗಳ ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಬಳ್ಳಾರಿ ಪು.ಸಂ. ೧

೨೬. ಮಲ್ಲಿಕಾ ಎಸ್. ಘಂಟಿ. ಸಮಾಜ ಮಹಿಳೆ ಮತ್ತು ಸವಾಲುಗಳು, ಬಸವರಾಜ ಸಬರದ, ಬಳ್ಳಾರಿ ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲ್ಬರ್ಗಾ, ವಿಶ್ವವಿದ್ಯಾಲಯ, ಗುಲ್ಬರ್ಗ, ೨೦೦೫

೨೭. ಮಹಾದೇವ ಸಿ. ಮತ್ತು ಇತರರು ಹೊಸಪೇಟೆ ತಾಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨, ಪು.ಸಂ. ೧೧

೨೮. ಯರಿಸ್ವಾಮಿ ಎಂ. ಗ್ರಾಮಪಂಚಾಯತಿ ಮತ್ತು ಸಬಲೀಕರಣ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ೨೦೧೨, ಪು.ಸಂ. ೫೩

೨೯. ರಾಮ್ ಸುಂದರಪ್ಪ ಕಲಾಲ್, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ದಲಿತ ಮಹಿಳಾ ಪ್ರತಿನಿಧೀಕರಣ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ೨೦೦೯

೩೦. ವೆಂಕಟಯ್ಯ ಅಪ್ಪಗೆರೆ. ಗ್ರಾಮೀಣ ಮಹಿಳಾಭಿವೃದ್ಧಿಯಲ್ಲಿ ಸ್ವ–ಸಹಾಯ ಗುಂಪುಗಳ ಪಾತ್ರ, ಡಿ.ಲಿಟ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಧ್ಯಯನ ಮಹಾಪ್ರಬಂಧ, ೨೦೦೨, ಪು.ಸಂ. ೩

೩೧. ಶಿವಚಿತ್ತಪ್ಪ ಕೆ. ಚೌಡೇಗೌಡ ಎಂ. ಮಹಿಳೆ ಮತ್ತು ಅಭಿವೃದ್ಧಿ, ಚಿನ್ಮಯ ಪ್ರಕಾಶನ, ಮೈಸೂರು, ೨೦೦೫

೩೨. ಶ್ರೀನಿವಾಸ ಎಚ್.ಕೊಪ್ಪಳ, ಮಹಿಳಾ ಸಬಲೀಕರಣ, ಆರ್ಥಿಕ ಅಭಿವೃದ್ಧಿ ಮತ್ತು ಸ್ಥಾನಮಾನಗಳು, ಶಿಕ್ಷಣ ಸೌಧ ಗದಗ, ವ್ಯಾ-೫ ಇಸ್ಯೂ-೧, ಜೂನ್ ೨೦೧೫, ಪು.ಸಂ. ೧೪

೩೩. ಶ್ರೀಮತಿ ಎಚ್.ಎಸ್. ಮತ್ತು ಇತರರು, ಮಹಿಳಾ ಆರ್ಥಿಕತೆ, ಮಹಿಳಾ ಅಧ್ಯಯನ ಕೇಂದ್ರ, ಪ್ರಸಾರಾಂಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೩೪. ಸ್ತ್ರೀಶಕ್ತಿ ಯೋಜನೆ, ರಾಜ್ಯ ಪುರಸ್ಕೃತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾ,ಖೆ ಬೆಂಗಳೂರು, ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆ ಬೆಂಗಳೂರು, ಪು.ಸಂ. ೧-೨

೩೫. ಹನುಮಂತರೆಡ್ಡಿ ವೈ, ಬಳ್ಳಾರಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಧಾರವಾಡ, ೨೦೦೮, ಪು.ಸಂ. ೧

೩೬. ಹಂದೆ ಕೆ.ಆರ್. ಶಿಕ್ಷಣ ಪರಿಚಯ ಜೀವನ ದರ್ಶನ, ವಿದ್ಯಾಶ್ರೀ ಪಬ್ಲಿಕೇಷನ್ಸ್, ಉಡುಪಿ, ೨೦೦೬

೩೭. ಹಾಲತಿ ಸೋಮಶೇಖರ್, ಮಹಿಳಾ ಚಳುವಳಿ: ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ, ವಿಸ್ಮಯ ಪ್ರಕಾಶನ, ಬೆಂಗಳೂರು, ೨೦೦೬

೩೮. ಹೆಗ್ಡಾಳ್ ಹುಲುಗಪ್ಪ, ದೈವಮೂಲ ವ್ಯಕ್ತಿ ಮತ್ತು ಸ್ಥಳನಾಮಗಳು: ಸಾಮಾಜೋಭಾಷಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ ೨೦೧೬, ಪು. ಸಂ. ೧೪೭-೧೪೮

೩೯. ಹೇಮಲತಾ ಎಚ್.ಎಮ್., ಮಹಿಳಾ ಸಶಕ್ತೀಕರಣ: ಒಂದು ಪರಿಕಲ್ಪನೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು ೨೦೧೬

೪೦. ಹೆಮಲತಾ ಎಚ್.ಎಮ್., ಮಹಿಳಾ ಅಧ್ಯಯನ, (೩), ಮಹಿಳೆ ಮತ್ತು ದುಡಿಮೆ ಮಹಿಳಾಭಿವೃದ್ಧಿ ಕಾರ್ಯನೀತಿ ಯೋಜನೆಗಳು, ಡಿ.ವಿ.ಕೆ. ಮೂರ್ತಿ, ಮೈಸೂರು ೨೦೦೬

ಪರಾಮರ್ಶನ ಗ್ರಂಥಗಳು(ಇಂಗ್ಲೀಷ್)

1. Archana singh, Types of SGH's and thir work, social welfare, February 2002, Vol. 48, No 11, P.No. 15
2. Alakananda Mookerjee, Rural women draw Shakti from setting up dairy cooperatives, Vikasini, January 2002, Vol 17, No. 1, P.No 37
3. Anitha panda, SHG: A Boon for many, the cooperator, December 2004, Vol 42, No 6 P.No 264-266
4. Anns J. women and the quality of life : One norm or two In Nussbaum, Martha and A sen (edited). The quality of life, Oxford university press, 1993, P.No. 280-296
5. Babita Agarwal, Rural women in Indian economey, A.B.D Publications Jaipur, 2008, P.No. 118
6. Bhanamathi S, self help Groups and Bank linkeges, Kisanworld, November 2005, Vol. 32, No. 11, P.No. 19
7. Barik B.B, and Vannan P.P, Promoting self Help Groups as Sub-System of credit Co-operatives, The Co-operator, Jannary 2001, vol 38, No. 7, P.No. 305-311
8. Suguna B, Empowerment of Rural women through Self Help Groups, Discovery Publishin House, New Delhi, 2006, P.No. 73
9. Bhart Dogra, Women Self Help Groups, Kurukshetra, March 2002, Vol. 50, No. 5, P.No. 40-42
10. Bhagya Lakshimi S. Women's Empowerment: Miles to go, yojan, August 2004, Vol. 48, P.No. 38-41
11. Bellary District census Hand book 2011, serice 30, Part XII-A, P.No. 52
12. Chiranjeevulu T. Empowering women through Self Help Groups, Kurushetra, Marach 2003, Vol. 51, No. 5, P.No. 16-19
13. Chittaranjan Mishra, SHGs in the Unorganized Garment sector: A case study of Madurai, Kuruksheta, July 2005, Vol. 53, No. 8, P.No. 43-46

14. Dipendra Banarjee, Micro-Financing, Southern Economist, February 2001, Vol. 39, No. 20, P.No. 19

15. Fredrick J, SHGs Gateway to success for rural women Entrepreneurs, Kisan world, September 2005, Vol. 32, No. 9, P.No. 60

16. Harijeet Ahluwalia, Empowerment of women : An Economic Agenda, Yojana, August 2000, Vol. 44, No.8. P.No. 33

17. Gurumoorthy T.R, Self Help Groups, Empower Rural women, Kurukshetra, February 2000, Vol 48, No. 5, P.No. 36

18. Ghosh D.K, NGO intervention in poverty alleviation, Kurukshetra, March 2001, Vol 49, No. 6, P.No. 2

19. Jaswant Singh, 2003-04 Budget speech on Union Minister of Finance and company Affairs, Southrn Economist, March 2003, Vol. 41, No. 22, P.No. 16

20. Joshi S.C. Micro-credit not charity, Social welfare, February 2007, Vol. 48, No. 32, P.No. 12

21. Kartik Das, Micro credit the Engine of Inclusive growth, Kurukshetra, July 2013, Vol. 61, No. 9, P.No. 12-13

22. Karl Marilee, women and Empowerment Participation and Decision-Making, Zed Books Ltd, London, 1995.

23. Kamath R.J, Rural development Activities, Southern Economist, November 2000, Vol. 39, No. 14, P.No. 19

24. Kala G.S, Economic Empowerment of women through Self Help Groups, Kisan world, November 2004, P.No. 264-266

25. Kamaraju S, Self Help Groups : Emerging Rural Enterprises, kisan world, August 2005, Vol. 32, No. 8, P.No. 25-26

26. Latiths Shivakumar N, Self Help Groups, social welfare, July 1995, Vol. 42, No. 4, P.No. 9

27. Latitha N and B.S. Nagarjun, Self Help Groups, in Rural Development, XII Edition, Himalaya publications, New Delhi 2002, P.No. 78

28. Leelavathy, SHG in a cream Layer for women's social status, proceedings of National Level symposium on Self Help Groups : A silent Revolution, Arulmigu Palaniandavar Arts college for women, Palani March 2004

29. Loganathan P, SHGs and Bank Linkages, kisan world, April 2004, Vol. 31, No. 4, P.No. 24-26
30. Mani Singh C.H., Self Help Groups-Some organizational Aspects, The co-operator, May 2001, Vol. 38, No. 11, P.No. 497-499
31. Mohanm S, Micro-credit and Empowerment of women: Role of NGOs, Yojana, February 2006, Vol. 68, No. 4, P.No. 29
32. Nagayya D, Micro-finance for Self Help Groups, Kurukshetra, 2006, Vol. 48, No. 11, P.No. 10
33. Niranjan, Status of women and family welfare Kanishka Publishers Distributers, New Delhi, 2000
34. Nirmal V, K Sham Bhat and P. Bhuvaneshwari, SHGs for poverty Alleviation in pondicherry, Journal of Rural Development, June 2004, Vol. 23, No. 2, P.No. 203-215
35. Om Raj Singh, Role of NGO's in fortering Self Help Groups, Kurukshetra, February 2003, vol 51, No. 4, P.No. 33-35
36. Ojha R.K. Self Help Groups, and rural Employment, yojana, May 2001, vol. 45, P.No. 20
37. Patel A.R. Rural credit system, Kurukshetra, January 2001, Vol. 49, No. 4, P.No. 17
38. Prasant srangi, Self Help Groups, Kurukshetra, February 2003, vol. 51, No. 14, P.No. 30-32
39. Prema parande, Economic Empowerment of women, Southern Economist, March 2005, Vol. 43, No. 21, P. No. 7
40. Preethi Chandrasekar, Mahalir thil, upgrades SHG's Hindu Publiction, November 2002, Vol. 18, P.No. 5.
41. Prem Singh Dahiya, N.K. Pandey and Anshuman Karol, Socio-Economic Upliftment through Self Help Groups, in solan District of Himachal Pradesh, Journal of Agricultural Development and policy, Jan-Jun 2002, Vol 14, No. 1, p.No. 10-18
42. Rajeswari M and Sumangalai P, women Entrepreneurs A scan on their problems and prospects in women Entrepreneurship: Issues and strategies, Kanishka Publishers, New Delhi 1999

43. Rajeev I.N, An alternative approach to micro credit linkages : An exploration in to SHG Federation, Journa of Karnataka studies, May 2005, April 2006, Prasarang, Kannada University Hampi, Vol. 12, No. 2 and Vo. 3, No. 1. P.No. 133-165
44. Rao V.M. women Self Help Groups, profiles from Andhra Pradesh and Karnataka Kurukshetra, April 2002, Vol. 50, No. 6, P.No. 26
45. Rajamohan S, Activities of Self Help Groups in Virudhunagar District: A Study, Tamil Nadu Journal of co-operation, April 2003, Vol. 3, No. 6, P.No. 15
46. Rajeshwari V. New Gereration co-operatives through Self Help Groups Tamil Nadu Journal of co-operation (TNJC) August 2003, Vol. 3, No. 6, P.No. 15
47. Raghavendra K, Self Help Groups Linage Banking : Challenges of Trining-Role played by Nationl centre, Land Bank Journal, March 2003, Vol. 41, No. 4, P.No. 71-76
48. Rahul Sarania and Dr. Sharabanti Maity, Self Help Groups and Financial Inclusion A study in Baksa district of Assan, Internationl Journal of Humanities and social science studies, A pee-reviewek Bi-momthly Bi-Lingual Research Journal, Vol I, essne III, November 2014, P.No. 138
49. Rasheda Bhagat, India Interior, the Hindu, July 16, 2004, P.No. 4
50. Ramakrishnan R.V. SHG-Bank linkage, Economic and politically weekly, Apil 2005, Vol. 40, No. 17, P.No. 1720
51. Ramakrishnan T, Online payment facility to give a boost to SHg's, the Hindu, October 7, 2005
52. Report of Department of women and child development, Ministry of Human Resource development, Economic Empowermtnt of women, Yojana, August 2001, Vol. 45, P.No. 69
53. Rosappu K, and K.Kalyana sundari, Economic Independence through self help groups, Proceeding of National Level symposium on self help groups: A silent Revolution, Arulmigu palaniandavar Arts college for women, palani, March 2004
54. Sabyasachi Das, self help groups, and micro credit synergic Integration, Kurukshetra, August 2003, Vol. 51, No. 10, P.No. 25-30

55. Sanjoy Ray, Linking self help groups, under SGSY Scheme with coopertives, prospects and concerns, The cooperator, October 2004, Vol. 42, No. 4, P.No. 128-131
56. Satya sundaram, Voluntary Action for rural Development, southern Economist, December 2005, Vol. 41, No. 15, P.No. 36
57. Sakkunthalai A, and Ramakrishnan, Socio-economic Empowerment of women, kisan world, July 2006, Vol. 33, No. 7, P.No. 31
58. Shanti G, and C.Dhanalakshmi, case study of women Empowerment through self help groups in Gobichetti palayam Block, Erode District, cooperation, August 2004, Vol. 4, No. 10, P.No. 23-25
59. Sivasubramanian M.N, credit-based poverty alleviation programme innovative approach, Kuruskhetra, November 1999, Vol. 48, No. 2, P.No. 37
60. Sivaramakrishnan K, Poverty Allieviation through self help groups, Tamil Nadu Journal of cooperator, March 2003, Vol. 3 3, No. 5, P.No. 9
61. Sheik Mohammed M. self help groups, for the success of women entrepreneurs, kisan world, March 2004, Vol. 31, No. 3, P.No. 30-31
62. Shashi Kumar, Rural socilogy, Vidyanidhi Prakashama, 2017, P.No. 125
63. Snch Lata Tandom, self help New mantra for Empowerment, social world, October 2001, Vol. 48, No. 23, P.No. 30
64. Suman Krishna Kant, women's Empowerment and Mntnal cooperation in the Family, social welfare, April 2001, vol. 48, No. 12, P.No. 3
65. Subramanian S, Rural Development and Tribal Aspiration in Tripura, Kurudshetra, January 2001, Vol. 49, No. 4, P.No. 22
66. Suguna B, self help groups, Vikasini, October 2002, Vol. 17, No. 4, P.No. 11
67. Sundar I, and Asokan R, performance of co-operative banks in Financing women self help groups, co-operative perspective, January 2004, Vol. 2004, No. 4, P.No. 5-26
68. Suguna B, Empowerment of rural women through self help groups, Discovery publishing House, NewDelhi, 2006, P.No. 73
69. Subhasini Muthu Krishnan, Effective Marketing strategies for women self help groups, proceedings of the State Level symposium on socio-Economic Impact of

SHG on women P.S.G.R. Krishnammal college for women, coimbalore, February 2005

70. Senthi Vadivoo K, and Sekar V, self help groups: A Movement for women Empowerment, kisan world, July 2004, P.No. 13-14
71. Sorubarani P, and Thenmozhi G, self help groups: Gateway to women Empowerment, coopertion, December 2004, P.No. 10-12
72. Tamas Fisher and M.S. Sriram Biyand micro credit (putting development bank into micro-Finance) Vistara publications, New Delhi, 2002, P.No. 23
73. Tripathy K.K, self Help Gorups, kurukshetra, June 2004, Vol. 52, No.8, P.No. 40-43.
74. Usha Rao J, women in a developing society Ashish publishing House, New Delhi, 2007
75. Vasanth kannabiran, Marketing self Help Managing poverty EPW, August 2005, Vol. 40, No. 34, P.No. 3716
76. Vijay D Kulakarni, Empowerment of women through self Help Gorups, Ashwatha, October 2000, June 2001, Vol.1, No.4, P.No. 32-36
77. Villi C, self Help Gorups: micro enterprises (Some Issues, challenges, Alternatives), coopertion, July 2003, Vol. 3, No. 9, P.No. 20-24
78. Veluraj R, SHGs an alternative approach to empower rural women, Tamil Nadu Journal of coopertion, June 2001, Vol 1, No. 8, P.No. 18
79. Venkatachalam A and Jeyaprakash A, self Help Gorups, in dindigul destrict, kisan world, October 2004, Vol. 31, No. 10, P.No. 29-30
80. Velu suresh kumar, women Empowerment: Success through self Help Gorups, kisan world November 2005, Vol. 32, No. 11, P.No. 31

1. WWW.new nic. in. pdg. P.No. 3
2. https:// WWW. Ifad. org the role played be Ifad by aloysius, P. Fernandez pdf, P.No. 8
3. https://en. wikipedia.org/wiki/Self help groups
4. https://en. wikipedia.org/wiki/Bellary
5. www Bellary district census 2011, pdf, P.No. 02
6. www directorate of census operactions karnataka, Village analysis, 2011, pdf. P.No. 24
7. www directorate of census operactions karnataka, 2011, pdf, P.No. 26
8. https://en wikipedia. org/wiki/Hospet
9. www wikipedia.org/wiki/Village map in Karnataka, Bellary

ಸ್ತ್ರೀಶಕ್ತಿ ಗುಂಪಿನ ಸದಸ್ಯರ ಮಾಹಿತಿ

ಸದಸ್ಯರ ಹೆಸರು	ವಯಸ್ಸು	ಜಾತಿ	ಗುಂಪಿನನ ಹೆಸರು	ಗ್ರಾಮದ ಹೆಸರು
೧ ಪಾರತ್ವಮ್ಮ	೬೦	SC	ಶ್ರೀಪಾರ್ವತಿ ಸ್ತ್ರೀಶಕ್ತಿ ಸ್ವ–ಸಹಾಯ ಸಂಘ	ಸಣಾಪುರ
೨ ಚಲುವಾದಿ ಈರಮ್ಮ ವಿಧವೆ	೪೯	SC	ಶ್ರೀ ಭುವನೇಶ್ವರಿ ಸ್ವ–ಸಹಾಯ ಗುಂಪು	ಇಟಗಿ
೩ ಟಿ.ಜಡೆಮ್ಮ	೫೦	SC	ಮಾರೆಮ್ಮ ಸ್ವ–ಸಹಾಯ ಗುಂಪು	ನಂ.೨ ಮುದ್ದಾಪುರ
೪ ಎಸ್.ಶಾಂತಮ್ಮ	೩೮	SC	ಮಾರೆಮ್ಮ ಸ್ವ–ಸಹಾಯ ಗುಂಪು	ನಂ.೨ ಮುದ್ರಾಪುರ
೫ ಜಯಮ್ಮ	೪೦	SC	ಶ್ರೀ ಮಹಿಮೈಶ್ವರ್ಯ ಸ್ವ–ಸಹಾಯ ಗುಂಪು	ಸಣಾಪುರ
೬ ಆದಿಲಕ್ಷ್ಮಿ	೨೧	SC	ಶ್ರೀ ಮಹಿಮೈಶ್ವರ್ಯ ಸ್ವ–ಸಹಾಯ ಗುಂಪು	ಸಣಾಪುರ
೭ ಲಕ್ಷ್ಮಿ	೪೦	ST	ಶ್ರೀ ಮಹಿಮೈಶ್ವರ್ಯ ಸ್ವ–ಸಹಾಯ ಗುಂಪು	ಸಣಾಪುರ
೮ ಮಾಣಿಕ್ಯಮ್ಮ	೩೨	SC	ಶ್ರೀ ಮಹಿಮೈಶ್ವರ್ಯ ಸ್ವ–ಸಹಾಯ ಗುಂಪು	ಸಣಾಪುರ
೯ ಯಲ್ಲಕ್ಕ (ವಿಧವೆ)	೩೮	ST	ಶ್ರೀ ಪ್ರಿಯಾಂಕ ಸ್ತ್ರೀಶಕ್ತಿ ಸ್ವ–ಸಹಾಯ ಗುಂಪು	ಸಣಾಪುರ
೧೦ ಸ್ವಾತಿ	೨೫	SC	ಶ್ರೀ ಪ್ರಿಯಾಂಕ ಸ್ತ್ರೀಶಕ್ತಿ ಸ್ವ–ಸಹಾಯ ಗುಂಪು	ಸಣಾಪುರ
೧೧ ಚಿಟ್ಟಮ್ಮ	೩೦	ST	ಶ್ರೀ ಜ್ಯೋತಿ ಸ್ವ–ಸಹಾಯ ಗುಂಪು	ಬಸವೇಶ್ವರ ಕ್ಯಾಂಪು
೧೨ ಹಂಪಮ್ಮ	೬೦	SC	ಶ್ರೀ ಜ್ಯೋತಿ ಸ್ವ–ಸಹಾಯ ಗುಂಪು	ಕೊಂಡಯ್ಯ ಕ್ಯಾಂಪು
೧೩ ಮಹಾಲಕ್ಷ್ಮಿ	೩೦	SC	ಶ್ರೀ ಜ್ಯೋತಿ ಸ್ವ–ಸಹಾಯ ಗುಂಪು	ಕೊಂಡಯ್ಯ ಕ್ಯಾಂಪು
೧೪ ಮಲಿಗೆಮ್ಮ (ದೇವದಾಸಿ)	೨೮	SC	ಲಕ್ಷ್ಮಿ ಸ್ವ–ಸಹಾಯ ಗುಂಪು	ನಂ.೨ ಮುದ್ದಾಪುರ
೧೫ ಯಲ್ಲಮ್ಮ (ದೇವದಾಸಿ)	೬೦	SC	ಲಕ್ಷ್ಮಿ ಸ್ವ–ಸಹಾಯ ಗುಂಪು	ನಂ.೨ ಮುದ್ದಾಪುರ
೧೬ ಅಂಜೆಮ್ಮ	೨೮	SC	ಅಕ್ಕಮಹಾದೇವಿ ಸ್ವ–ಸಹಾಯ ಗುಂಪು	ನಂ.೨ ಮುದ್ದಾಪುರ
೧೭ ಹುಸೇನಮ್ಮ (ವಿಧವೆ)	೪೬	ST	ಶ್ರೀ ವಾಲ್ಮೀಕಿ ಸ್ವ–ಸಹಾಯ ಗುಂಪು	ಬಸವೇಶ್ವರ ಕ್ಯಾಂಪು
೧೮ ಸುಶೀಲಮ್ಮ	೩೮	ST	ಶ್ರೀ ವಾಲ್ಮೀಕಿ ಸ್ವ–ಸಹಾಯ ಗುಂಪು	ಬಸವೇಶ್ವರ ಕ್ಯಾಂಪು

ಸದಸ್ಯರ ಹೆಸರು	ವಯಸ್ಸು	ಜಾತಿ	ಗುಂಪಿನ ಹೆಸರು	ಗ್ರಾಮದ ಹೆಸರು
೧೯ ವರಲಕ್ಷ್ಮಿ	೩೨	ST	ಶ್ರೀಪಿಯಾಂಕ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಣಾಪುರ
೨೦ ಸುಜಾತ	೩೦	ST	ಶ್ರೀಪಿಯಾಂಕ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಣಾಪುರ
೨೧ ಕಾವ್ಯ	೨೯	ST	ಶ್ರೀ ಲಕ್ಷ್ಮೀ ಮಹಿಳಾ ಸ್ವ-ಸಹಾಯ ಗುಂಪು	ಸಣಾಪುರ
೨೨ ಪಾರ್ವತಿ	೨೫	ST	ಶ್ರೀ ಲಕ್ಷ್ಮೀ ಮಹಿಳಾ ಸ್ವ-ಸಹಾಯ ಗುಂಪು	ಅರಳಿಹಳ್ಳಿ
೨೩ ಸಾವಿತ್ರಿ	೨೨	ST	ಶ್ರೀ ಲಕ್ಷ್ಮೀ ಮಹಿಳಾ ಸ್ವ-ಸಹಾಯ ಗುಂಪು	ಅರಳಿಹಳ್ಳಿ
೨೪ ರಾಜಲಕ್ಷ್ಮಿ	೨೬	ST	ಶ್ರೀ ಲಕ್ಷ್ಮೀ ಮಹಿಳಾ ಸ್ವ-ಸಹಾಯ ಗುಂಪು	ಅರಳಿಹಳ್ಳಿ
೨೫ ಉರುಕುಂದಮ್ಮ ವಿ. (ವಿಧವೆ)	೪೦	ST	ಶ್ರೀ ವಾಲ್ಮೀಕಿ ಸ್ವ-ಸಹಾಯ ಗುಂಪು	ಬಸವೇಶ್ವರ ಕ್ಯಾಂಪು
೨೬ ರುಬುಕಮ್ಮ	೩೦	ST	ಶ್ರೀ ಸೃಷ್ಟಿ ಮಹಿಳಾ ಸ್ವ-ಸಹಾಯ ಗುಂಪು	ಸಾಣಾಪುರ
೨೭ ಸುಂಕಮ್ಮ(ದೇವದಾಸಿ)	೪೨	SC	ಶ್ರೀ ಸೃಷ್ಟಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಾಣಾಪುರ
೨೮ ಚಿಟ್ಟಮ್ಮ	೪೦	ST	ಶ್ರೀ ಸೃಷ್ಟಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಾಣಾಪುರ
೨೯ ಈಶ್ವರಮ್ಮ (ವಿಧವೆ)	೪೫	SC	ಶ್ರೀ ಸೃಷ್ಟಿ ಮಹಿಳಾ ಸ್ವ-ಸಹಾಯ ಸಂಘ	ಸಾಣಾಪುರ
೩೦ ಹನುಮಂತಮ್ಮ(ವಿಧವೆ)	೬೦	ST	ಶ್ರೀ ಸೃಷ್ಟಿ ಮಹಿಳಾ ಸ್ವ-ಸಹಾಯ ಸಂಘ	ಬಸವೇಶ್ವರಕ್ಯಾಂಪು
೩೧ ಲಕ್ಷ್ಮಿ	೪೩	ST	ಶ್ರೀ ಶ್ರೇಷ್ಠ ಸ್ವ-ಸಹಾಯ ಸಂಘ	ಕೊಂಡಯ್ಯ ಕ್ಯಾಂಪು
೩೨ ರೇಣುಕ	೩೫	SC	ಶ್ರೀ ನಂದಿನಿ ಸ್ವ-ಸಹಾಯ ಸಂಘ	ಕೊಂಡಯ್ಯಕ್ಯಾಂಪು
೩೩ ಕೆ.ಲಕ್ಷ್ಮಿ	೩೦	SC	ಶ್ರೀ ನಂದಿನಿ ಸ್ವ-ಸಹಾಯ ಸಂಘ	ಕೊಂಡಯ್ಯಕ್ಯಾಂಪು
೩೪ ಹನುಮಕ್ಕ(ದೇವದಾಸಿ)	೪೦	SC	ಶ್ರೀ ಅಪರ್ಣ ಸ್ವ-ಸಹಾಯ ಸಂಘ	ಕೊಂಡಯ್ಯಕ್ಯಾಂಪು
೩೫ ಪುಷ್ಪಾ	೨೭	ST	ಶ್ರೀ ಅಪರ್ಣ ಸ್ವ-ಸಹಾಯ ಸಂಘ	ಕೊಂಡಯ್ಯಕ್ಯಾಂಪು
೩೬ ಹುಸೇನಮ್ಮ	೩೦	SC	ಡಾ.ಬಿ.ಆರ್.ಅಂಬೇಡ್ಕರ್ ಮಹಿಳಾ ಸ್ವ-ಸಹಾಯ ಗುಂಪು	ಸಣಾಪುರ
೩೭ ಎಚ್.ದುರುಗಮ್ಮ(ವಿಧವೆ)	೪೫	SC	ಡಾ.ಬಿ.ಆರ್.ಅಂಬೇಡ್ಕರ್ ಮಹಿಳಾ ಸ್ವ-ಸಹಾಯ ಗುಂಪು	ಸಣಾಪುರ

ಸದಸ್ಯರ ಹೆಸರು	ವಯಸ್ಸು	ಜಾತಿ	ಗುಂಪಿನ ಹೆಸರು	ಗ್ರಾಮದ ಹೆಸರು
೩೮ ಹುಲಿಗೆಮ್ಮ	೩೬	ST	ಡಾ.ಬಿ.ಆರ್.ಅಂಬೇಡ್ಕರ್ ಮಹಿಳಾ ಸ್ವ-ಸಹಾಯ ಗುಂಪು	ಸಣಾಪುರ
೩೯ ವರಲಕ್ಷ್ಮಿ ಎಚ್.	೩೨	SC	ಡಾ.ಬಿ.ಆರ್.ಅಂಬೇಡ್ಕರ್ ಮಹಿಳಾ ಸ್ವ-ಸಹಾಯ ಗುಂಪು	ಸಣಾಪುರ
೪೦ ಜ್ಯೋತಿ	೨೬	SC	ಡಾ.ಬಿ.ಆರ್.ಅಂಬೇಡ್ಕರ್ ಸ್ತ್ರೀಶಕ್ತಿ ಗುಂಪು	ಸಣಾಪುರ
೪೧ ಸುಲೋಚನ	೨೫	ST	ಶ್ರೀವಿದ್ಯಾ ಸರಸ್ವತಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಣಾಪುರ
೪೨ ರಂಗಮ್ಮ	೪೨	SC	ಶ್ರೀವಿದ್ಯಾ ಸರಸ್ವತಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಣಾಪುರ
೪೩ ತಾಯಮ್ಮ	೩೫	ST	ಜೇನಗೂಡು ಮಹಿಳಾ ಸ್ವ-ಸಹಾಯ ಸಂಘ	ಸಣಾಪುರ
೪೪ ಪ್ರಮೀಳಮ್ಮ	೪೨	ST	ಜೇನಗೂಡು ಮಹಿಳಾ ಸ್ವ-ಸಹಾಯ ಸಂಘ	ಸಣಾಪುರ
೪೫ ಹೊನ್ನೂರಮ್ಮ(ವಿಧವೆ)	೪೦	SC	ಜೇನಗೂಡು ಮಹಿಳಾ ಸ್ವ-ಸಹಾಯ ಸಂಘ	ಸಣಾಪುರ
೪೬ ಎಲಿಷ್‌ಪತಿ(ವಿಧವೆ)	೪೨	ST	ಜೇನಗೂಡು ಮಹಿಳಾ ಸ್ವ-ಸಹಾಯ ಸಂಘ	ಸಣಾಪುರ
೪೭ ಸುಶೀಲ	೩೮	SC	ಶ್ರೀಪ್ರಿಯಾಂಕ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಣಾಪುರ
೪೮ ಮಲ್ಲಮ್ಮ (ವಿಧವೆ)	೪೩	ST	ಶ್ರೀಪ್ರಿಯಾಂಕ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಣಾಪುರ
೪೯ ಶಾರದಾ	೩೮	ST	ಶ್ರೀವಿದ್ಯಾ ಸರಸ್ವತಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಣಾಪುರ
೫೦ ಹನುಮಂತಮ್ಮ	೩೮	ST	ಶ್ರೀವಿದ್ಯಾ ಸರಸ್ವತಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಣಾಪುರ
೫೧ ನೀಲಮ್ಮ	೨೫	ST	ನರ್ಮದಾ ಸ್ವ-ಸಹಾಯ ಗುಂಪು	ನಂ.೨ ಮುದ್ದಾಪುರ
೫೨ ಎಸ್. ಹನುಮಂತಿ	೪೦	ST	ನರ್ಮದಾ ಸ್ವ-ಸಹಾಯ ಗುಂಪು	ನಂ.೨ ಮುದ್ದಾಪುರ
೫೩ ಯಂಕಟಮ್ಮ(ವಿಧವೆ)	೫೦	ST	ನರ್ಮದಾ ಸ್ವ-ಸಹಾಯ ಗುಂಪು	ನಂ.೨ ಮುದ್ದಾಪುರ
೫೪ ಸಿ.ಗಂಗಮ್ಮ	೪೭	ST	ಶ್ರೀ ಭೀಮಾಂಜಿಕ ಸ್ವ-ಸಹಾಯ ಗುಂಪು	ಇಟಗಿ
೫೫ ದೇವದಾಸಿ ಹುಲಿಗೆಮ್ಮ (ದೇವದಾಸಿ)	೨೫	SC	ಶ್ರೀ ನಿಧಿ ಮಹಿಳಾ ಸ್ವ-ಸಹಾಯ ಗುಂಪು	ಇಟಗಿ

ಸದಸ್ಯರ ಹೆಸರು	ವಯಸ್ಸು	ಜಾತಿ	ಗುಂಪಿನ ಹೆಸರು	ಗ್ರಾಮದ ಹೆಸರು
೫೬ ಭೀಮಮ್ಮ	೫೩	SC	ಶ್ರೀ ಲಕ್ಷ್ಮೀ ಮಹಿಳಾ ಸ್ವ-ಸಹಾಯ ಗುಂಪು	ಅರಳಿಹಳ್ಳಿ
೫೭ ನಾಗಲಕ್ಷ್ಮಿ	೩೮	ST	ಶ್ರೀ ಲಕ್ಷ್ಮೀ ಮಹಿಳಾ ಸ್ವ-ಸಹಾಯ ಗುಂಪು	ಅರಳಿಹಳ್ಳಿ
೫೮ ಉರುಕುಂದಮ್ಮ	೩೨	ST	ಶ್ರೀ ಲಕ್ಷ್ಮೀ ಮಹಿಳಾ ಸ್ವ-ಸಹಾಯ ಗುಂಪು	ಅರಳಿಹಳ್ಳಿ
೫೯ ಈರಮ್ಮ	೨೫	ST	ಶ್ರೀ ಸ್ವಾತಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಣಾಪುರ
೬೦ ಪಾರ್ವತಮ್ಮ(ವಿಧವೆ)	೩೫	SC	ಶ್ರೀವಿದ್ಯಾ ಸರಸ್ವತಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಣಾಪುರ
೬೧. ಸುಮಂಗಳ	೪೨	SC	ಶ್ರೀವಿದ್ಯಾ ಸರಸ್ವತಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಣಾಪುರ
೬೨ ರಾಜೇಶ್ವರಿ	೨೪	SC	ಶ್ರೀವಿದ್ಯಾ ಸರಸ್ವತಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಣಾಪುರ
೬೩ ಭುವನೇಶ್ವರಿ	೨೮	SC	ಜೇನಗೂಡು ಮಹಿಳಾ ಸ್ವ-ಸಹಾಯ ಗುಂಪು	ಸಣಾಪುರ
೬೪ ಯಲ್ಲಮ್ಮ (ವಿಧವೆ)	೩೦	SC	ಜೇನಗೂಡು ಮಹಿಳಾ ಸ್ವ-ಸಹಾಯ ಗುಂಪು	ಸಣಾಪುರ
೬೫ ಹನುಮಕ್ಕ	೩೮	ST	ಶ್ರೀ ಸ್ವಾತಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಣಾಪುರ
೬೬ ಪ್ರಮೀಳ	೪೦	ST	ಶ್ರೀ ಸ್ವಾತಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ಸಣಾಪುರ
೬೭ ಎಂ. ಗಂಗಮ್ಮ	೩೨	ST	ಸ್ವರ್ಣಜಯಂತಿ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೬೮ ಪ್ರಮೀಳಾ	೨೭	ST	ಸ್ವರ್ಣಜಯಂತಿ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೬೯ ಎಸ್. ಭಾಗ್ಯ	೨೫	SC	ಸ್ವರ್ಣಜಯಂತಿ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೭೦ ಅಂಜೀನಮ್ಮ(ವಿಧವೆ)	೫೧	ST	ಊರಮ್ಮದೇವಿ ಸ್ವ-ಸಹಾಯ ಸಂಘ	ಹಳೇಗರಗ
೭೧ ಕಾಳಮ್ಮ(ವಿಧವೆ)	೪೫	ST	ಸಿದ್ಧರೂಢ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೭೨ ಧರ್ಮಮ್ಮ(ವಿಧವೆ)	೪೨	SC	ಸಿದ್ಧರೂಢ ಸ್ವ-ಸಹಾಯ ಸಂಘ	ಜಿ.ನಾಗಲಾಪುರ

ಸದಸ್ಯರ ಹೆಸರು	ವಯಸ್ಸು	ಜಾತಿ	ಗುಂಪಿನ ಹೆಸರು	ಗ್ರಾಮದ ಹೆಸರು
೭೩ ಎನ್.ಹನುಮಂತಮ್ಮ	೪೧	ST	ಸಿದ್ಧರೂಢ ಸ್ವ–ಸಹಾಯ ಸಂಘ	ಜಿ.ನಾಗಲಾಪುರ
೭೪ ಗೌರಮ್ಮ (ವಿಧವೆ)	೩೬	SC	ಸುಮಂಗಳಿ ಸ್ವ–ಸಹಾಯ ಸಂಘ	ಜಿ.ನಾಗಲಾಪುರ
೭೫ ಎಚ್.ಕೆ.ನಾಗರತ್ನಮ್ಮ (ವಿಧವೆ)	೫೫	ST	ಸುಮಂಗಳಿ ಸ್ವ–ಸಹಾಯ ಸಂಘ	ಜಿ.ನಾಗಲಾಪುರ
೭೬ ಸುಲೋಚನ	೩೬	SC	ಸುಮಂಗಳಿ ಸ್ವ–ಸಹಾಯ ಸಂಘ	ಜಿ.ನಾಗಲಾಪುರ
೭೭ ಸುಮಿತ್ರಮ್ಮ	೩೮	SC	ಕಿತ್ತೂರು ಚೆನ್ನಮ್ಮ ಸ್ವ–ಸಹಾಯ ಸಂಘ	ಬ್ಯಾಲಕುಂದಿ
೭೮ ಉಚ್ಚಂಗೆಮ್ಮ(ವಿಧವೆ)	೪೦	SC	ಕಿತ್ತೂರು ಚೆನ್ನಮ್ಮ ಸ್ವ–ಸಹಾಯ ಸಂಘ	ಬ್ಯಾಲಕುಂದಿ
೭೯ ನಿಂಗಮ್ಮ	೪೫	ST	ಮಾರಿಕಾಂಬೆ ಸ್ವ–ಸಹಾಯ ಸಂಘ	ಗರಗ
೮೦ ಬಸಮ್ಮ(ದೇವದಾಸಿ)	೬೦	SC	ಮಾರಿಕಾಂಬೆ ಸ್ವ–ಸಹಾಯ ಸಂಘ	ಗರಗ
೮೧ ನಿರ್ಮಲ	೪೦	SC	ಮಾರಿಕಾಂಬೆ ಸ್ವ–ಸಹಾಯ ಸಂಘ	ಗರಗ
೮೨ ಸುಬ್ಬಮ್ಮ	೪೨	ST	ಸುಮಂಗಳಿ ಸ್ವ–ಸಹಾಯ ಗುಂಪು	ಜಿ.ನಾಗಲಾಪುರ
೮೩ ಪ್ರಮೀಳ	೩೦	ST	ಸುಮಂಗಳಿ ಸ್ವ–ಸಹಾಯ ಗುಂಪು	ಜಿ.ನಾಗಲಾಪುರ
೮೪ ರಾಜಮ್ಮ	೪೪	ST	ಸುಮಂಗಳಿ ಸ್ವ–ಸಹಾಯ ಗುಂಪು	ಜಿ.ನಾಗಲಾಪುರ
೮೫ ಸುವಾಸಿನಿ	೨೫	ST	ಸುಮಂಗಳಿ ಸ್ವ–ಸಹಾಯ ಗುಂಪು	ಜಿ.ನಾಗಲಾಪುರ
೮೬ ರಾಧ	೨೯	ST	ಕಿತ್ತೂರು ಚೆನ್ನಮ್ಮ ಸ್ವ–ಸಹಾಯ ಗುಂಪು	ಬ್ಯಾಲಕುಂದಿ
೮೭ ನೀಲಮ್ಮ(ವಿಧವೆ)	೪೩	ST	ಕಿತ್ತೂರು ರಾಣಿಚೆನ್ನಮ್ಮ ವೈಟಪ್ ಮಹಿಳಾ ಸ್ವ–ಸಹಾಯ ಗುಂಪು	ಜಿ.ನಾಗಲಾಪುರ
೮೮ ರೇಣುಕ	೨೬	SC	ಕಿತ್ತೂರು ರಾಣಿಚೆನ್ನಮ್ಮ ವೈಟಪ್ ಮಹಿಳಾ ಸ್ವ–ಸಹಾಯ ಗುಂಪು	ಜಿ.ನಾಗಲಾಪುರ
೮೯ ನಿಂಗಮ್ಮ ವಿ.(ವಿಧವೆ)	೪೩	ST	ಕಿತ್ತೂರು ರಾಣಿಚೆನ್ನಮ್ಮ ವೈಟಪ್ ಮಹಿಳಾ ಸ್ವ–ಸಹಾಯ ಗುಂಪು	ಜಿ.ನಾಗಲಾಪುರ
೯೦ ಆಲಮ್ಮ (ದೇವದಾಸಿ)	೪೭	ST	ಕಿತ್ತೂರು ರಾಣಿಚೆನ್ನಮ್ಮ ವೈಟಪ್ ಮಹಿಳಾ ಸ್ವ–ಸಹಾಯ ಗುಂಪು	ಜಿ.ನಾಗಲಾಪುರ
೯೧ ಹನುಮಂತಮ್ಮ	೩೦	SC	ಮರಿಯಮ್ಮದೇವಿ ಸ್ವ–ಸಹಾಯ ಗುಂಪು	ಜಿ.ನಾಗಲಾಪುರ

ಸದಸ್ಯರ ಹೆಸರು	ವಯಸ್ಸು	ಜಾತಿ	ಗುಂಪಿನ ಹೆಸರು	ಗ್ರಾಮದ ಹೆಸರು
೯೨ ಶಾರದಮ್ಮ ಎಚ್. (ವಿಧವೆ)	೪೫	SC	ಮರಿಯಮ್ಮದೇವಿ ಸ್ವ-ಸಹಾಯ ಗುಂಪು	ಜಿ.ನಾಗಲಾಪುರ
೯೩ ವಿ.ಸುಂಕಮ್ಮ	೩೫	SC	ಮರಿಯಮ್ಮದೇವಿ ಸ್ವ-ಸಹಾಯ ಗುಂಪು	ಜಿ.ನಾಗಲಾಪುರ
೯೪ ಗಂಗಮ್ಮ	೨೮	SC	ಮರಿಯಮ್ಮದೇವಿ ಸ್ವ-ಸಹಾಯ ಗುಂಪು	ಜಿ.ನಾಗಲಾಪುರ
೯೫ ಹನುಮಕ್ಕ	೪೦	SC	ಹುಲಿಗೆಮ್ಮ ದೇವಿ ಸ್ವ-ಸಹಾಯ ಸಂಘ	ಗರಗ
೯೬ ದುರುಗಮ್ಮ	೩೦	SC	ಹುಲಿಗೆಮ್ಮ ದೇವಿ ಸ್ವ-ಸಹಾಯ ಸಂಘ	ಗರಗ
೯೭ ಪದ್ಮಾವತಿ	೫೫	ST	ಹುಲಿಗೆಮ್ಮ ದೇವಿ ಸ್ವ-ಸಹಾಯ ಸಂಘ	ಗರಗ
೯೮ ಇಂದ್ರಮ್ಮ	೩೫	ST	ಹುಲಿಗೆಮ್ಮ ದೇವಿ ಸ್ವ-ಸಹಾಯ ಸಂಘ	ಗರಗ
೯೯ ಸಾಕಮ್ಮ (ವಿಧವೆ)	೩೫	SC	ಇಂದಿರಾ ಗಾಂಧಿ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೦೦ ಅಂಜಿನಮ್ಮ(ದೇವದಾಸಿ)	೪೭	ST	ಇಂದಿರಾ ಗಾಂಧಿ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೦೧ ಲಕ್ಷ್ಮಿದೇವಿ	೨೯	SC	ಇಂದಿರಾ ಗಾಂಧಿ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೦೨ ಪಿ.ಪಾಲಮ್ಮ	೩೫	ST	ಸ್ನೇಹ ಮಹಿಳಾ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೦೩ ಡಿ.ಹಂಪಮ್ಮ (ವಿಧವೆ)	೪೫	ST	ಸ್ನೇಹ ಮಹಿಳಾ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೦೪ ರಮಾದೇವಿ	೨೮	SC	ಮರಿಯಮ್ಮದೇವಿ ಸ್ವ-ಸಹಾಯ ಗುಂಪು	ಜಿ.ನಾಗಲಾಪುರ
೧೦೫ ಸುಶೀಲ	೩೦	SC	ಮರಿಯಮ್ಮದೇವಿ ಸ್ವ-ಸಹಾಯ ಗುಂಪು	ಜಿ.ನಾಗಲಾಪುರ
೧೦೬ ರಾಮಕ್ಕ	೪೪	SC	ಮರಿಯಮ್ಮದೇವಿ ಸ್ವ-ಸಹಾಯ ಗುಂಪು	ಜಿ.ನಾಗಲಾಪುರ
೧೦೭ ಯಲ್ಲಕ್ಕ	೪೮	SC	ಹುಲಿಗೆಮ್ಮದೇವಿ ಸ್ವ-ಸಹಾಯ ಗುಂಪು	ಗರಗ
೧೦೮ ವಸಂತಮ್ಮ	೩೧	SC	ಹುಲಿಗೆಮ್ಮದೇವಿ ಸ್ವ-ಸಹಾಯ ಗುಂಪು	ಗರಗ

ಸದಸ್ಯರ ಹೆಸರು	ವಯಸ್ಸು	ಜಾತಿ	ಗುಂಪಿನ ಹೆಸರು	ಗ್ರಾಮದ ಹೆಸರು
೧೦೯ ಡಿ.ಪಾಪಮ್ಮ (ವಿಧವೆ)	೩೮	ST	ಸ್ನೇಹ ಮಹಿಳಾ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೧೦ ದುರುಗಮ್ಮ	೪೦	SC	ಭುವನೇಶ್ವರಿ ಸ್ವ-ಸಹಾಯ ಸಂಘ	ಗರಗ
೧೧೧ ಬಸಮ್ಮ (ವಿಧವೆ)	೪೫	SC	ಭುವನೇಶ್ವರಿ ಸ್ವ-ಸಹಾಯ ಸಂಘ	ಗರಗ
೧೧೨ ನಿರ್ಮಲ	೨೨	ST	ಉಡಸಲಮ್ಮದೇವಿ ಸ್ವ-ಸಹಾಯ ಸಂಘ	ಬ್ಯಾಲಕುಂದಿ
೧೧೩ ನಾಗರತ್ನಮ್ಮ	೨೬	SC	ಉಡಸಲಮ್ಮದೇವಿ ಸ್ವ-ಸಹಾಯ ಸಂಘ	ಬ್ಯಾಲಕುಂದಿ
೧೧೪ ಲಕ್ಷ್ಮಕ್ಕ	೩೫	ST	ಚೇತನ ಸ್ವ-ಸಹಾಯ ಸಂಘ	ಬ್ಯಾಲಕುಂದಿ
೧೧೫ ನರಸಮ್ಮ	೨೮	SC	ಚೇತನ ಸ್ವ-ಸಹಾಯ ಸಂಘ	ಬ್ಯಾಲಕುಂದಿ
೧೧೬ ತಾಯಮ್ಮ	೨೧	ST	ಲಕ್ಷ್ಮೀ ಸ್ವ-ಸಹಾಯ ಸಂಘ	ಗರಗ
೧೧೭ ಸಾವಿತ್ರಮ್ಮ	೩೯	ST	ಲಕ್ಷ್ಮೀ ಸ್ವ-ಸಹಾಯ ಸಂಘ	ಗರಗ
೧೧೮ ವಿ.ನಿಂಗಮ್ಮ (ವಿಧವೆ)	೪೬	SC	ದುರ್ಗಾದೇವಿ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೧೯ ಸೋಮವ್ವ	೫೦	ST	ದುರ್ಗಾದೇವಿ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೨೦ ಗಂಗಮ್ಮ	೩೦	SC	ದುರ್ಗಾದೇವಿ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೨೧ ಲಕ್ಷ್ಮಿದೇವಿ	೩೫	SC	ಸರಸ್ವತಿ ಮಹಿಳಾ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೨೨ ಸೋಮಕ್ಕ(ವಿಧವೆ)	೪೫	ST	ಸರಸ್ವತಿ ಮಹಿಳಾ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೨೩ ರುದ್ರಮ್ಮ ಪಿ.(ವಿಧವೆ)	೪೨	ST	ಸರಸ್ವತಿ ಮಹಿಳಾ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೨೪ ರೇಣುಕ	೩೨	SC	ಆಶಾ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೨೫ ಮಲ್ಲಮ್ಮ	೩೮	ST	ಸುಮಂಗಳಿ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೨೬ ನಿಂಗಮ್ಮ	೩೨	ST	ಮರಿಯಮ್ಮದೇವಿ ಸ್ವ-ಸಹಾಯ ಸಂಘ	ಜಿ.ನಾಗಲಾಪುರ
೧೨೭ ಶೇಖಮ್ಮ	೨೫	SC	ಕೊಟ್ಟೂರೇಶ್ವರ ಸ್ವ-ಸಹಾಯ ಗುಂಪು	ರಾಂಪುರ
೧೨೮ ದೇವಮ್ಮ(ದೇವದಾಸಿ)	೩೫	SC	ಕೊಟ್ಟೂರೇಶ್ವರ ಸ್ವ-ಸಹಾಯ ಗುಂಪು	ರಾಂಪುರ

ಸದಸ್ಯರ ಹೆಸರು	ವಯಸ್ಸು	ಜಾತಿ	ಗುಂಪಿನ ಹೆಸರು	ಗ್ರಾಮದ ಹೆಸರು
೧೨೯ ಗಂಗಮ್ಮ (ವಿಧವೆ)	೬೦	ST	ಕೊಟ್ಟೂರೇಶ್ವರ ಸ್ವ-ಸಹಾಯ ಗುಂಪು	ರಾಂಪುರ
೧೩೦ ಗೌರಮ್ಮ	೪೦	SC	ಕೊಟ್ಟೂರೇಶ್ವರ ಸ್ವ-ಸಹಾಯ ಗುಂಪು	ರಾಂಪುರ
೧೩೧ ಎಂ.ಈರಮ್ಮ (ವಿಧವೆ)	೫೫	SC	ಶ್ರೀ ಮಾರುತಿ ಸ್ವ-ಸಹಾಯ ಗುಂಪು	ರಾಂಪುರ
೧೩೨ ಆನಂದಮ್ಮ	೩೨	ST	ಶ್ರೀ ಮಾರುತಿ ಸ್ವ-ಸಹಾಯ ಗುಂಪು	ರಾಂಪುರ
೧೩೩ ಟಿ.ಮಾರೆಮ್ಮ(ವಿಧವೆ)	೪೦	SC	ಶ್ರೀ ಮಾರುತಿ ಸ್ವ-ಸಹಾಯ ಗುಂಪು	ರಾಂಪುರ
೧೩೪ ತಿಮ್ಮಕ್ಕ (ದೇವದಾಸಿ)	೬೫	SC	ಶ್ರೀ ಮಾರುತಿ ಸ್ವ-ಸಹಾಯ ಗುಂಪು	ರಾಂಪುರ
೧೩೫ ಪಾರ್ವತಿ	೩೫	ST	ಶ್ರೀ ಮಾರುತಿ ಸ್ವ-ಸಹಾಯ ಗುಂಪು	ರಾಂಪುರ
೧೩೬ ಪಾರ್ವತಮ್ಮ(ವಿಧವೆ)	೬೦	ST	ಆಂಜನೇಯ ಶ್ರೀಶಕ್ತಿ ಸ್ವ-ಸಹಾಯ ಗುಂಪು	ರಾಂಪುರ
೧೩೭ ಸಾವಿತ್ರಮ್ಮ	೪೭	ST	ಆಂಜನೇಯ ಶ್ರೀಶಕ್ತಿ ಸ್ವ-ಸಹಾಯ ಗುಂಪು	ರಾಂಪುರ
೧೩೮ ಗೀತಮ್ಮ (ದೇವದಾಸಿ)	೪೯	ST	ಆಂಜನೇಯ ಶ್ರೀಶಕ್ತಿ ಸ್ವ-ಸಹಾಯ ಗುಂಪು	ರಾಂಪುರ
೧೩೯ ವಿಶಾಲಕ್ಷಿ(ವಿಧವೆ)	೪೦	ST	ಆಂಜನೇಯ ಶ್ರೀಶಕ್ತಿ ಸ್ವ-ಸಹಾಯ ಗುಂಪು	ರಾಂಪುರ
೧೪೦ ಮಾಗಮ್ಮ(ದೇವದಾಸಿ)	೪೨	SC	ಆಂಜನೇಯ ಶ್ರೀಶಕ್ತಿ ಸ್ವ-ಸಹಾಯ ಗುಂಪು	ರಾಂಪುರ
೧೪೧ ಎಚ್.ಹುಲಿಗೆಮ್ಮ	೩೬	SC	ಭುವನೇಶ್ವರಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ರಾಂಪುರ
೧೪೨ ಎಸ್.ಚಂದ್ರಮ್ಮ	೨೩	SC	ಭುವನೇಶ್ವರಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ರಾಂಪುರ
೧೪೩ ಕೆ.ಚೆನ್ನಬಸಮ್ಮ	೩೫	SC	ಭುವನೇಶ್ವರಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ರಾಂಪುರ
೧೪೪ ಸಂಪಮ್ಮ(ದೇವದಾಸಿ)	೩೮	SC	ಭುವನೇಶ್ವರಿ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ರಾಂಪುರ
೧೪೫ ಪಕ್ಕೀರಮ್ಮ	೪೮	ST	ಶ್ರೀಭೀಮಾಂಬಿಕ ಸ್ವ-ಸಹಾಯ ಗುಂಪು	ಬೋರನಹಳ್ಳಿ

ಸದಸ್ಯರ ಹೆಸರು	ವಯಸ್ಸು	ಜಾತಿ	ಗುಂಪಿನ ಹೆಸರು	ಗ್ರಾಮದ ಹೆಸರು
೧೪೬ ಎಚ್. ಬಸಮ್ಮ (ದೇವದಾಸಿ)	೩೫	ST	ಶ್ರೀಭೀಮಾಂಬಿಕ ಸ್ವ-ಸಹಾಯ ಗುಂಪು	ಬೋರನಹಳ್ಳಿ
೧೪೭ ಹೊನ್ನೂರಮ್ಮ	೩೫	ST	ಆದರ್ಶ ಸ್ವ-ಸಹಾಯ ಗುಂಪು	ರಾಂಪುರ
೧೪೮ ಸರಸ್ವತಿ	೨೭	SC	ಆಂಜನೇಯ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ರಾಂಪುರ
೧೪೯ ಜ್ಯೋತಿ	೨೯	SC	ಆಂಜನೇಯ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ರಾಂಪುರ
೧೫೦ ಲಕ್ಷ್ಮಿ ಎಂ.	೩೦	SC	ಆಂಜನೇಯ ಸ್ತ್ರೀಶಕ್ತಿ ಸ್ವ-ಸಹಾಯ ಗುಂಪು	ರಾಂಪುರ
೧೫೧ ಭಾಗ್ಯಮ್ಮ	೩೦	SC	ಶ್ರೀ ಭೀಮಾಂಬಿಕ ಸ್ವ-ಸಹಾಯ ಗುಂಪು	ಬೋರನಹಳ್ಳಿ
೧೫೨ ಶಾರದಮ್ಮ	೪೧	SC	ಶ್ರೀ ಭೀಮಾಂಬಿಕ ಸ್ವ-ಸಹಾಯ ಗುಂಪು	ಬೋರನಹಳ್ಳಿ
೧೫೩ ಬುಜ್ಜಮ್ಮ(ವಿಧವೆ)	೪೮	ST	ಆದರ್ಶ ಸ್ವ-ಸಹಾಯ ಗುಂಪು	ರಾಂಪುರ
೧೫೪ ಹನುಮಕ್ಕ	೫೦	SC	ಆದರ್ಶ ಸ್ವ-ಸಹಾಯ ಗುಂಪು	ರಾಂಪುರ
೧೫೫ ಯರ್ರಮ್ಮ	೪೫	SC	ಆದರ್ಶ ಸ್ವ-ಸಹಾಯ ಗುಂಪು	ರಾಂಪುರ
೧೫೬ ನಾಗಮ್ಮ (ವಿಧವೆ)	೬೩	ST	ಮಹೇಶ್ವರಿ ಸ್ವ-ಸಹಾಯ ಗುಂಪು	ಬೋರನಹಳ್ಳಿ
೧೫೭ ಕ್ರಿಷ್ಣಮ್ಮ	೩೨	ST	ಭಕ್ತ ಕನಕದಾಸ ಸ್ವ-ಸಹಾಯ ಸಂಘ	ಸುಟ್ಟಕೋಡಿಹಳ್ಳಿ
೧೫೮ ತಿರುಮಲಮ್ಮ	೩೦	ST	ಭಕ್ತ ಕನಕದಾಸ ಸ್ವ-ಸಹಾಯ ಸಂಘ	ಸುಟ್ಟಕೋಡಿಹಳ್ಳಿ
೧೫೯ ಪಾರ್ವತಿ	೩೫	ST	ಮೂಗಬಸವೇಶ್ವರ ಮಹಿಳಾ ಸ್ವ-ಸಹಾಯ ಗುಂಪು	ರಾಂಪುರ
೧೬೦ ಈಶ್ವರಮ್ಮ (ವಿಧವೆ)	೪೮	ST	ಮೂಗಬಸವೇಶ್ವರ ಮಹಿಳಾ ಸ್ವ-ಸಹಾಯ ಗುಂಪು	ರಾಂಪುರ
೧೬೧ ನಾರಾಯಣಮ್ಮ (ದೇವದಾಸಿ)	೫೦	SC	ಮೂಗಬಸವೇಶ್ವರ ಮಹಿಳಾ ಸ್ವ-ಸಹಾಯ ಗುಂಪು	ರಾಂಪುರ
೧೬೨ ತಿರಕಮ್ಮ (ವಿಧವೆ)	೪೨	SC	ಬಸವೇಶ್ವರ ಸ್ತ್ರೀಶಕ್ತಿ ಸಂಘ	ರಾಂಪುರ
೧೬೩ ಭಾಗ್ಯ	೨೮	SC	ಬಸವೇಶ್ವರ ಸ್ತ್ರೀಶಕ್ತಿ ಸಂಘ	ರಾಂಪುರ
೧೬೪ ಮಾರಮ್ಮ	೩೮	SC	ಬಸವೇಶ್ವರ ಸ್ತ್ರೀಶಕ್ತಿ ಸಂಘ	ರಾಂಪುರ
೧೬೫ ಯಂಕಮ್ಮ	೫೪	SC	ಬಸವೇಶ್ವರ ಸ್ತ್ರೀಶಕ್ತಿ ಸಂಘ	ರಾಂಪುರ
೧೬೬ ಮಹಾಲಿಂಗಮ್ಮ	೫೪	ST	ಊರಮ್ಮದೇವಿ ಮಹಿಳಾ ಸ್ವ-ಸಹಾಯ ಸಂಘ	ರಾಂಪುರ

ಸದಸ್ಯರ ಹೆಸರು	ವಯಸ್ಸು	ಜಾತಿ	ಗುಂಪಿನ ಹೆಸರು	ಗ್ರಾಮದ ಹೆಸರು
೧೬೭ ಸಾವಿತ್ರಿ (ವಿಧವೆ)	೪೨	ST	ಊರಮ್ಮದೇವಿ ಮಹಿಳಾ ಸ್ವ-ಸಹಾಯ ಸಂಘ	ರಾಂಪುರ
೧೬೮ ನಿಂಬಕ್ಕ	೩೮	ST	ದುರ್ಗಾಂಬಿಕ ಸ್ವ-ಸಹಾಯ ಸಂಘ	ರಾಂಪುರ
೧೬೯ ನಿಂಗಮ್ಮ	೪೦	ST	ದುರ್ಗಾಂಬಿಕ ಸ್ವ-ಸಹಾಯ ಸಂಘ	ರಾಂಪುರ
೧೭೦ ಬಸಂತಮ್ಮ(ವಿಧವೆ)	೬೫	SC	ನಿತ್ಯೋತ್ಸವ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ಜಾಗಟಗೆರೆ
೧೭೧ ಇಂಡಿ ಮಹಾಕಾಳಮ್ಮ	೪೦	SC	ನಿತ್ಯೋತ್ಸವ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ಜಾಗಟಗೆರೆ
೧೭೨ ಓಬಕ್ಕ	೪೦	ST	ಗಾಯತ್ರಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ರಾಂಪುರ
೧೭೩ ನಾಗಮ್ಮ	೪೦	ST	ಆದರ್ಶ ಸ್ವ-ಸಹಾಯ ಗುಂಪು	ರಾಂಪುರ
೧೭೪ ಎಂ.ಸುಧಾ	೩೦	ST	ಆದರ್ಶ ಸ್ವ-ಸಹಾಯ ಗುಂಪು	ರಾಂಪುರ
೧೭೫ ಬೋರಮ್ಮ	೨೯	ST	ಆದರ್ಶ ಸ್ವ-ಸಹಾಯ ಗುಂಪು	ರಾಂಪುರ
೧೭೬ ಗಾಯತ್ರಿ	೨೭	ST	ಭಕ್ತಿ ಕನಕದಾಸ ಸ್ವ-ಸಹಾಯ ಸಂಘ	ರಾಂಪುರ
೧೭೭ ದುರ್ಗಾ	೨೫	ST	ಭಕ್ತಿ ಕನಕದಾಸ ಸ್ವ-ಸಹಾಯ ಸಂಘ	ರಾಂಪುರ
೧೭೮ ಲಕ್ಷ್ಮಿ	೨೯	ST	ಗಾಯತ್ರಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ರಾಂಪುರ
೧೭೯ ರತ್ನ (ವಿಧವೆ)	೪೫	ST	ಗಾಯತ್ರಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ರಾಂಪುರ
೧೮೦ ದುರ್ಗಮ್ಮ (ವಿಧವೆ)	೪೦	SC	ಗಾಯತ್ರಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ರಾಂಪುರ
೧೮೧ ಮಂಗಳಮ್ಮ	೩೫	SC	ಗಾಯತ್ರಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ರಾಂಪುರ
೧೮೨ ಗೌರಮ್ಮ	೩೮	SC	ಗಾಯತ್ರಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ರಾಂಪುರ
೧೮೩ ಸರೋಜಮ್ಮ	೩೨	SC	ಗಾಯತ್ರಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ರಾಂಪುರ
೧೮೪ ರುದ್ರಮ್ಮ (ವಿಧವೆ)	೪೬	ST	ಅಕ್ಕಮಹಾದೇವಿ ಸ್ತ್ರೀಶಕ್ತಿ ಸಂಘ	ಕೊಂಚಿಹಳ್ಳಿ

ಸದಸ್ಯರ ಹೆಸರು	ವಯಸ್ಸು	ಜಾತಿ	ಗುಂಪಿನ ಹೆಸರು	ಗ್ರಾಮದ ಹೆಸರು
೧೮೫ ಸಿದ್ದಮ್ಮ	೪೦	ST	ಅಕ್ಕಮಹಾದೇವಿ ಮಹಿಳಾ ಸ್ವ-ಸಹಾಯ ಸಂಘ	ಕೊಂಬಿಹಳ್ಳಿ
೧೮೬ ಹನುಮಕ್ಕ ಎಂ.	೫೦	SC	ನಿತ್ಯೋತ್ಸವ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ಜಾಗಟಗೆರೆ
೧೮೭ ಬಸಕ್ಕ	೪೨	ST	ವಾಣಿ ವಿಳಾಸ ಸ್ತ್ರೀಶಕ್ತಿ ಸಂಘ	ಚಿರತಗುಂಡು
೧೮೮ ಮಾರಕ್ಕ ಕೆ.	೪೦	SC	ವಾಣಿ ವಿಳಾಸ ಸ್ತ್ರೀಶಕ್ತಿ ಸಂಘ	ಚಿರತಗುಂಡು
೧೮೯ ಜಯಮ್ಮ	೩೭	SC	ವಾಣಿ ವಿಳಾಸ ಸ್ತ್ರೀಶಕ್ತಿ ಸಂಘ	ಚಿರತಗುಂಡು
೧೯೦ ವಿಶಾಲಮ್ಮ	೫೦	ST	ಇಂದಿರಾ ಸ್ತ್ರೀಶಕ್ತಿ ಸಂಘ	ಚಿರತಗುಂಡು
೧೯೧ ತೊಳಸೆಮ್ಮ (ವಿಧವೆ)	೫೦	SC	ಇಂದಿರಾ ಸ್ತ್ರೀಶಕ್ತಿ ಸಂಘ	ಚಿರತಗುಂಡು
೧೯೨ ಅಂಜಿನಮ್ಮ	೩೫	ST	ಇಂದಿರಾ ಸ್ತ್ರೀಶಕ್ತಿ ಸಂಘ	ಚಿರತಗುಂಡು
೧೯೩ ಪಾರ್ವತಿ	೪೦	ST	ಶ್ರೀ ಮಾರಿಕಾಂಬ ಸ್ವ-ಸಹಾಯ ಸಂಘ	ಚಿರತಗುಂಡು
೧೯೪ ಸೂರಮ್ಮ	೪೮	ST	ಶ್ರೀ ಮಾರಿಕಾಂಬ ಸ್ವ-ಸಹಾಯ ಸಂಘ	ಚಿರತಗುಂಡು
೧೯೫ ಪಾಪಮ್ಮ(ದೇವದಾಸಿ)	೪೩	ST	ಶ್ರೀ ಮಾರಿಕಾಂಬ ಸ್ವ-ಸಹಾಯ ಸಂಘ	ಚಿರತಗುಂಡು
೧೯೬ ಮಲ್ಲಮ್ಮ	೩೭	SC	ಅನ್ನಪೂರ್ಣೇಶ್ವರಿ ಸ್ವಯಂಸಿದ್ಧ ಸ್ವ-ಸಹಾಯ ಸಂಘ	ಚಿರತಗುಂಡು
೧೯೭ ಬೊಮ್ಮಕ್ಕ (ದೇವದಾಸಿ)	೬೦	SC	ಅನ್ನಪೂರ್ಣೇಶ್ವರಿ ಸ್ವಯಂಸಿದ್ಧ ಸ್ವ-ಸಹಾಯ ಸಂಘ	ಚಿರತಗುಂಡು
೧೯೮ ಆದಿಲಕ್ಷ್ಮಿ	೪೧	SC	ಮಾರಿಕಾಂಬ ಸ್ವ-ಸಹಾಯ ಸಂಘ	ಕೊಂಬಿಹಳ್ಳಿ
೧೯೯ ಗೌರಮ್ಮ	೪೩	SC	ಮಾರಿಕಾಂಬ ಸ್ವ-ಸಹಾಯ ಸಂಘ	ಕೊಂಬಿಹಳ್ಳಿ
೨೦೦ ಗಂಗಮ್ಮ	೨೯	SC	ಮಾರಿಕಾಂಬ ಸ್ವ-ಸಹಾಯ ಸಂಘ	ಕೊಂಬಿಹಳ್ಳಿ
೨೦೧ ಎಚ್.ಲಕ್ಷ್ಮಿ	೩೩	SC	ದುರ್ಗಾಂಬಿಕ ಮಹಿಳಾ ಸ್ವ-ಸಹಾಯ ಸಂಘ	ಕೊಂಬಿಹಳ್ಳಿ
೨೦೨ ಲಕ್ಷ್ಮಮ್ಮ	೪೫	SC	ದುರ್ಗಾಂಬಿಕ ಮಹಿಳಾ ಸ್ವ-ಸಹಾಯ ಸಂಘ	ಕೊಂಬಿಹಳ್ಳಿ
೨೦೩ ಸಿ.ಬೋರಮ್ಮ	೩೦	ST	ಅನ್ನಪೂರ್ಣೇಶ್ವರಿ ಸ್ವಯಂಸಿದ್ಧ ಸ್ವ-ಸಹಾಯ ಸಂಘ	ಚಿರತಗುಂಡು
೨೦೪ ಕೆ.ಮಲ್ಲಮ್ಮ	೪೪	SC	ಶ್ರೀಶೈಲ ಸ್ತ್ರೀಶಕ್ತಿ ಸಂಘ	ಗುಡ್ಡದಬೋರಯ್ಯನಹಟ್ಟಿ
೨೦೫ ಗುಂಡಮ್ಮ	೪೨	ST	ಶ್ರೀಶೈಲ ಸ್ತ್ರೀಶಕ್ತಿ ಸಂಘ	ಗುಡ್ಡದಬೋರಯ್ಯನಹಟ್ಟಿ
೨೦೬ ಪಾಲಮ್ಮ (ವಿಧವೆ)	೫೨	ST	ಶ್ರೀಶೈಲ ಸ್ತ್ರೀಶಕ್ತಿ ಸಂಘ	ಗುಡ್ಡದಬೋರಯ್ಯನಹಟ್ಟಿ

ಸದಸ್ಯರ ಹೆಸರು	ವಯಸ್ಸು	ಜಾತಿ	ಗುಂಪಿನ ಹೆಸರು	ಗ್ರಾಮದ ಹೆಸರು
೨೦೭ ಬೊಸೆಮಲ್ಲಮ್ಮ	೪೦	SC	ಶ್ರೀರೇಣುಕ ಸ್ತ್ರೀಶಕ್ತಿ ಮಹಿಳಾ ಸಂಘ	ಗುಡ್ಡದಬೋರಯ್ಯನಹಟ್ಟಿ
೨೦೮ ಕೆ.ಎಂ.ಪೆದ್ದಮ್ಮ	೩೫	SC	ಶ್ರೀರೇಣುಕ ಸ್ತ್ರೀಶಕ್ತಿ ಮಹಿಳಾ ಸಂಘ	ಗುಡ್ಡದಬೋರಯ್ಯನಹಟ್ಟಿ
೨೦೯ ಶ್ರೀದೇವಿ	೨೩	SC	ಶ್ರೀರೇಣುಕ ಸ್ತ್ರೀಶಕ್ತಿ ಮಹಿಳಾ ಸಂಘ	ಗುಡ್ಡದಬೋರಯ್ಯನಹಟ್ಟಿ
೨೧೦ ರಾಮಕ್ಕ (ವಿಧವೆ)	೫೫	SC	ಮಾರಿಕಾಂಬ ಸ್ವ-ಸಹಾಯ ಸಂಘ	ಕೊಂಬಿಹಳ್ಳಿ
೨೧೧ ಮಂಜಮ್ಮ (ವಿಧವೆ)	೫೦	SC	ಮಾರಿಕಾಂಬ ಸ್ವ-ಸಹಾಯ ಸಂಘ	ಕೊಂಬಿಹಳ್ಳಿ
೨೧೨ ದ್ಯಾಮಕ್ಕ(ದೇವದಾಸಿ)	೪೦	SC	ಮಾರಿಕಾಂಬ ಸ್ವ-ಸಹಾಯ ಸಂಘ	ಕೊಂಬಿಹಳ್ಳಿ
೨೧೩ ತಾಯಮ್ಮ	೩೬	SC	ಜ್ಯೋತಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ಚಿರತಗುಂಡು
೨೧೪ ಬೋರಮ್ಮ	೫೦	ST	ಜ್ಯೋತಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ಚಿರತಗುಂಡು
೨೧೫ ಓಬಮ್ಮ	೩೪	SC	ಶ್ರೀ ಜ್ಯೋತಿ ಸ್ತ್ರೀಶಕ್ತಿ ಮಹಿಳಾ ಸಂಘ	ಗುಡ್ಡದ ಬೋರಯ್ಯನಹಟ್ಟಿ
೨೧೬ ಬೋರಮ್ಮ	೨೯	ST	ಶ್ರೀ ಜ್ಯೋತಿ ಸ್ತ್ರೀಶಕ್ತಿ ಮಹಿಳಾ ಸಂಘ	ಗುಡ್ಡದ ಬೋರಯ್ಯನಹಟ್ಟಿ
೨೧೭ ಶರಣಮ್ಮ	೩೪	SC	ಶ್ರೀ ಜ್ಯೋತಿ ಸ್ತ್ರೀಶಕ್ತಿ ಮಹಿಳಾ ಸಂಘ	ಗುಡ್ಡದ ಬೋರಯ್ಯನಹಟ್ಟಿ
೨೧೮ ಚನ್ನಮ್ಮಾ	೩೨	SC	ಶ್ರೀ ಜ್ಯೋತಿ ಸ್ತ್ರೀಶಕ್ತಿ ಮಹಿಳಾ ಸಹಾಯ ಸಂಘ	ಚಿರತಗುಂಡು
೨೧೯ ಪೀಲಿ ಬೋರಮ್ಮ (ದೇವದಾಸಿ)	೪೯	ST	ಚನ್ನಮಾಜಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ಚಿರತಗುಂಡು
೨೨೦ ಮಲ್ಲಮ್ಮ	೪೬	ST	ಚನ್ನಮಾಜಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ಚಿರತಗುಂಡು
೨೨೧ ಗಂಗಮ್ಮ	೫೧	ST	ಇಂದಿರಾ ಸ್ತ್ರೀಶಕ್ತಿ ಸಂಘ	ಚಿರತಗುಂಡು
೨೨೨ ಪಾಪಮ್ಮ(ವಿಧವೆ)	೬೦	ST	ಇಂದಿರಾ ಸ್ತ್ರೀಶಕ್ತಿ ಸಂಘ	ಚಿರತಗುಂಡು
೨೨೩ ಬೋರಮ್ಮ	೬೦	ST	ಇಂದಿರಾ ಸ್ತ್ರೀಶಕ್ತಿ ಸಂಘ	ಚಿರತಗುಂಡು
೨೨೪ ಮಲ್ಲಮ್ಮ	೬೦	ST	ಶ್ರೀ ಮಾರಿಕಾಂಬ ಸ್ವ-ಸಹಾಯ ಸಂಘ	ಚಿರತಗುಂಡು

ಸದಸ್ಯರ ಹೆಸರು	ವಯಸ್ಸು	ಜಾತಿ	ಗುಂಪಿನ ಹೆಸರು	ಗ್ರಾಮದ ಹೆಸರು
೨೨೫ ಕಮಲಮ್ಮ	೪೦	ST	ಶ್ರೀ ಮಾರಿಕಾಂಬ ಸ್ವ-ಸಹಾಯ ಸಂಘ	ಚಿರತಗುಂಡು
೨೨೬ ಜೆ.ಗಂಗಮ್ಮ	೫೯	ST	ಚನ್ನಮಾಜಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘ	ಚಿರತಗುಂಡು
೨೨೭ ಶಿವಮ್ಮ (ದೇವದಾಸಿ)	೨೫	ST	ವಿದ್ಯಾವತಿ ಸ್ತ್ರೀಶಕ್ತಿ ಸಂಘ	ಕೊಂಬಿಹಳ್ಳಿ
೨೨೮ ತಿಮ್ಮಕ್ಕ (ವಿಧವೆ)	೪೦	SC	ವಿದ್ಯಾವತಿ ಸ್ತ್ರೀಶಕ್ತಿ ಸಂಘ	ಕೊಂಬಿಹಳ್ಳಿ
೨೨೯ ಹೊನ್ನೂರಮ್ಮ (ವಿಧವೆ)	೫೦	SC	ವಿದ್ಯಾವತಿ ಸ್ತ್ರೀಶಕ್ತಿ ಸಂಘ	ಕೊಂಬಿಹಳ್ಳಿ
೨೩೦ ಓಬ್ಬಕ್ಕ	೪೦	ST	ವಿದ್ಯಾವತಿ ಸ್ತ್ರೀಶಕ್ತಿ ಸಂಘ	ಕೊಂಬಿಹಳ್ಳಿ
೨೩೧ ತಾಯಮ್ಮ	೫೫	ST	ವಿದ್ಯಾವತಿ ಸ್ತ್ರೀಶಕ್ತಿ ಸಂಘ	ಕೊಂಬಿಹಳ್ಳಿ
೨೩೨ ಗೊಂಚಕ್ಕ	೩೦	SC	ವಿದ್ಯೆ ಸ್ತ್ರೀಶಕ್ತಿ ಸಂಘ ಸ್ವ-ಸಹಾಯ ಸಂಘ	ಚಿರತಗುಂಡು
೨೩೩ ನಿಂಗಮ್ಮ	೬೦	ST	ವಿದ್ಯೆ ಸ್ತ್ರೀಶಕ್ತಿ ಸಂಘ ಸ್ವ-ಸಹಾಯ ಸಂಘ	ಚಿರತಗುಂಡು
೨೩೪ ಲಕ್ಷ್ಮೀ	೪೧	SC	ವಿದ್ಯೆ ಸ್ತ್ರೀಶಕ್ತಿ ಸಂಘ ಸ್ವ-ಸಹಾಯ ಸಂಘ	ಚಿರತಗುಂಡು
೨೩೫ ಆರ್.ರತ್ನಮ್ಮ	೩೫	SC	ದುರ್ಗಾಂಬಿಕ ಮಹಿಳಾ ಸ್ವ-ಸಹಾಯ ಸಂಘ	ಕೊಂಬಿಹಳ್ಳಿ
೨೩೬ ದೊಡ್ಡಮಲಿಯಮ್ಮ (ವಿಧವೆ)	೫೬	SC	ದುರ್ಗಾಂಬಿಕ ಮಹಿಳಾ ಸ್ವ-ಸಹಾಯ ಸಂಘ	ಕೊಂಬಿಹಳ್ಳಿ
೨೩೭ ಹಿರಿಯಕ್ಕ	೪೭	SC	ದುರ್ಗಾಂಬಿಕ ಮಹಿಳಾ ಸ್ವ-ಸಹಾಯ ಸಂಘ	ಕೊಂಬಿಹಳ್ಳಿ
೨೩೮ ಓ ಕೆಂಗಮ್ಮ	೨೫	ST	ಓನಕಿ ಓಬವ್ವ ಸ್ತ್ರೀಶಕ್ತಿ ಸಂಘ	ಚಿರತಗುಂಡು
೨೩೯ ತಾಯಮ್ಮ	೩೧	SC	ಓನಕಿ ಓಬವ್ವ ಸ್ತ್ರೀಶಕ್ತಿ ಸಂಘ	ಚಿರತಗುಂಡು
೨೪೦ ಪಿ. ಅಂಜಿನಮ್ಮ	೨೫	ST	ಪ್ರಗತಿ ಸ್ತ್ರೀಶಕ್ತಿ ಸಂಘ	ಚಿರತಗುಂಡು

ಸ್ತ್ರೀಶಕ್ತಿ ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಮಾಹಿತಿ

ಸಂಘದ ಸದಸ್ಯರಲ್ಲದವರ ಹೆಸರು	ವಯಸ್ಸು	ಜಾತಿ	ಗ್ರಾಮದ ಹೆಸರು
೧ ತಿಮ್ಮಕ್ಕ	೬೦	ST	ಸಣಾಪುರ
೨ ಕವಿತ	೩೨	ST	ಸಣಾಪುರ
೩ ಸುಬ್ಬಲಕ್ಷ್ಮಿ (ವಿಧವೆ)	೪೦	ST	ಸಣಾಪುರ
೪ ಅಪರ್ಣ	೩೦	ST	ಸಣಾಪುರ
೫ ವೆಂಕಟಲಕ್ಷ್ಮಿ	೨೯	ST	ಬಸವೇಶ್ವರ ಕ್ಯಾಂಪು
೬ ವಾಣಿ	೨೫	ST	ಬಸವೇಶ್ವರ ಕ್ಯಾಂಪು
೭ ದೇವಿ ಎನ್.	೨೦	ST	ಸಣಾಪುರ
೮ ಹುಲಿಗೆಮ್ಮ	೨೫	ST	ಸಣಾಪುರ
೯ ಸುವರ್ಣ	೨೫	SC	ಸಣಾಪುರ
೧೦ ಜ್ಯೋಸ್ನ	೨೫	SC	ಸಣಾಪುರ
೧೧ ಅಕಮ್ಮ	೩೧	SC	ಸಣಾಪುರ
೧೨ ಕೃಷ್ಣವೇಣಿ	೪೦	ST	ಕೊಂಡಯ್ಯಕ್ಯಾಂಪು
೧೩ ಪುಲ್ಲಮ್ಮ	೨೮	ST	ಕೊಂಡಯ್ಯಕ್ಯಾಂಪು
೧೪ ಭಾಗ್ಯಲಕ್ಷ್ಮಿ	೩೯	SC	ಕೊಂಡಯ್ಯಕ್ಯಾಂಪು
೧೫ ರುದ್ರಮ್ಮ (ವಿಧವೆ)	೪೫	SC	ಕೊಂಡಯ್ಯಕ್ಯಾಂಪು
೧೬ ಜಯಮ್ಮ	೩೫	SC	ನಂ.೨. ಮುದ್ದಾಪುರ
೧೭ ವಿರುಪಮ್ಮ	೪೫	SC	ನಂ.೨. ಮುದ್ದಾಪುರ
೧೮ ಬಸಮ್ಮ ಎಂ. (ವಿಧವೆ)	೩೫	ST	ನಂ.೨. ಮುದ್ದಾಪುರ
೧೯ ಓಬಳಮ್ಮ (ದೇವದಾಸಿ)	೬೦	ST	ನಂ.೨. ಮುದ್ದಾಪುರ
೨೦ ಸುವರ್ಣಮ್ಮ	೩೦	ST	ನಂ.೨. ಮುದ್ದಾಪುರ
೨೧ ಓಬಕ್ಕ	೪೨	SC	ಕೊಂಡಯ್ಯಕ್ಯಾಂಪು
೨೨ ರಾಮಕ್ಕ	೪೪	SC	ಕೊಂಡಯ್ಯಕ್ಯಾಂಪು
೨೩ ಬಸಮ್ಮ	೫೦	SC	ಇಟಗಿ
೨೪ ಅಂಜೇನಮ್ಮ	೪೦	SC	ಇಟಗಿ
೨೫ ಮಾರೆಕ್ಕ	೪೨	SC	ನಂ.೨. ಮುದ್ದಾಪುರ
೨೬ ಈರಮ್ಮ	೫೮	SC	ಇಟಗಿ
೨೭ ಕೆ. ಈರಮ್ಮ	೪೮	SC	ಇಟಗಿ

ಸಂಘದ ಸದಸ್ಯರಲ್ಲದವರ ಹೆಸರು	ವಯಸ್ಸು	ಜಾತಿ	ಗ್ರಾಮದ ಹೆಸರು
೨೮ ರಮ್ಯ	೨೯	ST	ಇಟಗಿ
೨೯ ರಾಮುಲಮ್ಮ	೪೨	ST	ಬಸವೇಶ್ವರ ಕ್ಯಾಂಪು
೩೦ ಗಂಗಮ್ಮ (ವಿಧವೆ)	೪೫	ST	ಬಸವೇಶ್ವರ ಕ್ಯಾಂಪು
೩೧ ಲಕ್ಷ್ಮಿ ಬಿ.	೩೫	ST	ಬಸವೇಶ್ವರ ಕ್ಯಾಂಪು
೩೨ ದೇವಮ್ಮ (ವಿಧವೆ)	೩೦	SC	ಅರಳಿಹಳ್ಳಿ
೩೩ ಅಂಬಮ್ಮ (ದೇವದಾಸಿ)	೫೮	SC	ಅರಳಿಹಳ್ಳಿ
೩೪ ಬಸಮ್ಮ (ದೇವದಾಸಿ)	೪೦	ST	ಅರಳಿಹಳ್ಳಿ
೩೫ ಸವಿತ	೨೭	ST	ಅರಳಿಹಳ್ಳಿ
೩೬ ಪದ್ಮಾವತಿ	೨೮	ST	ಸಣಾಪುರ
೩೭ ನರಸಮ್ಮ ಎಂ.	೩೬	ST	ಸಣಾಪುರ
೩೮ ವೇದಾವತಿ	೨೫	ST	ಸಣಾಪುರ
೩೯ ಮಾಲಿನಿದೇವಿ	೪೦	ST	ಸಣಾಪುರ
೪೦ ಮಂಗಮ್ಮ	೫೦	SC	ಸಣಾಪುರ
೪೧ ಲಕ್ಷ್ಮಿದೇವಿ	೩೭	ST	ಸಣಾಪುರ
೪೨ ಈರಮ್ಮ (ವಿಧವೆ)	೨೫	ST	ಕೊಂಡಯ್ಯಕ್ಯಾಂಪು
೪೩ ಮಂಜುಳ	೨೬	ST	ಕೊಂಡಯ್ಯಕ್ಯಾಂಪು
೪೪ ಜ್ಯೋತಿ	೨೨	SC	ನಂ.೨ ಮುದ್ದಾಪುರ
೪೫ ರುದ್ರಮ್ಮ	೪೮	ST	ನಂ.೨ ಮುದ್ದಾಪುರ
೪೬ ಆಶಾ	೨೭	ST	ನಂ.೨ ಮುದ್ದಾಪುರ
೪೭ ವಾಣಿ	೨೯	ST	ನಂ.೨ ಮುದ್ದಾಪುರ
೪೮ ಸವಿತಾ	೨೬	ST	ನಂ.೨ ಮುದ್ದಾಪುರ
೪೯ ಈಶ್ವರಮ್ಮ	೩೪	ST	ನಂ.೨ ಮುದ್ದಾಪುರ
೫೦ ಶಾಂತಮ್ಮ (ದೇವದಾಸಿ)	೩೨	SC	ನಂ.೨ ಮುದ್ದಾಪುರ
೫೧ ವೆಂಕಟಲಕ್ಷ್ಮಿ	೪೧	SC	ಇಟಗಿ
೫೨ ಸುಶೀಲಮ್ಮ	೩೮	SC	ಇಟಗಿ
೫೩ ರಾಜೇಶ್ವರಿ	೪೮	SC	ಇಟಗಿ
೫೪ ಪದ್ಮಾವತಿ ಪಿ.	೨೬	ST	ಇಟಗಿ
೫೫ ಶ್ರೀದೇವಿ	೨೨	SC	ಇಟಗಿ
೫೬ ಸುಮಂಗಳಮ್ಮ	೫೬	SC	ಇಟಗಿ

ಸಂಘದ ಸದಸ್ಯರಲ್ಲದವರ ಹೆಸರು	ವಯಸ್ಸು	ಜಾತಿ	ಗ್ರಾಮದ ಹೆಸರು
೫೭ ಯಲ್ಲಮ್ಮ (ವಿಧವೆ)	೫೦	SC	ಇಟಗಿ
೫೮ ಶಾರದ	೩೨	SC	ಅರಳಿಹಳ್ಳಿ
೫೯ ಅನ್ನಪೂರ್ಣ (ವಿಧವೆ)	೩೦	SC	ಅರಳಿಹಳ್ಳಿ
೬೦ ಭುವನೇಶ್ವರಿ	೨೦	SC	ಅರಳಿಹಳ್ಳಿ
೬೧ ವಾಣಿಶ್ರೀ	೪೨	ST	ಅರಳಿಹಳ್ಳಿ
೬೨ ಭೀಮಲಿಂಗಮ್ಮ (ದೇವದಾಸಿ)	೪೦	ST	ಗರಗ
೬೩ ಸುವರ್ಣ	೨೮	ST	ಗರಗ
೬೪ ಪದ್ಮಾವತಿ (ವಿಧವೆ)	೪೫	ST	ಗರಗ
೬೫ ಸುಬ್ಬಮ್ಮ	೩೨	SC	ಗರಗ
೬೬ ತಿಮಲಕ್ಕ (ದೇವದಾಸಿ)	೩೫	SC	ಗರಗ
೬೭ ಲಕ್ಷ್ಮಿ ಪಿ.	೨೬	SC	ಗರಗ
೬೮ ಮಲ್ಲಮ್ಮ (ವಿಧವೆ)	೪೦	SC	ಹಳೇಗರಗ
೬೯ ತಿಮ್ಮಕ್ಕ	೩೫	SC	ಹಳೇಗರಗ
೭೦ ಕಾವೇರಮ್ಮ	೩೦	SC	ಹಳೇಗರಗ
೭೧ ತಿರಕಮ್ಮ (ವಿಧವೆ)	೨೯	ST	ಹಳೇಗರಗ
೭೨ ಗಂಗಮ್ಮ	೩೪	ST	ಹಳೇಗರಗ
೭೩ ಇಂದು	೩೬	ST	ಹಳೇಗರಗ
೭೪ ಸರಸ್ವತಿ	೩೫	SC	ಜಿ.ನಾಗಲಾಪುರ
೭೫ ಪೆದ್ದಕ್ಕ (ವಿಧವೆ)	೩೯	SC	ಜಿ.ನಾಗಲಾಪುರ
೭೬ ಮಾರಕ್ಕ	೨೯	SC	ಜಿ.ನಾಗಲಾಪುರ
೭೭ ವೆಂಕಟಲಕ್ಷ್ಮಿ (ವಿಧವೆ)	೪೬	ST	ಜಿ.ನಾಗಲಾಪುರ
೭೮ ಯರ್ರಮ್ಮ (ದೇವದಾಸಿ)	೪೮	ST	ಜಿ.ನಾಗಲಾಪುರ
೭೯ ಶಾತಂಮ್ಮ	೩೭	ST	ಜಿ.ನಾಗಲಾಪುರ
೮೦ ಲಕ್ಕವ್ವ	೨೮	SC	ಜಿ.ನಾಗಲಾಪುರ
೮೧ ನಾಗಮ್ಮ	೩೫	SC	ಬ್ಯಾಲಕುಂದಿ
೮೨ ಗೀತಾ	೨೭	SC	ಬ್ಯಾಲಕುಂದಿ
೮೩ ತಾಯಮ್ಮ (ದೇವದಾಸಿ)	೪೫	SC	ಬ್ಯಾಲಕುಂದಿ
೮೪ ರೇಣುಕ ಎಚ್.	೨೮	ST	ಬ್ಯಾಲಕುಂದಿ
೮೫ ಜ್ಯೋತಿ ಎಸ್	೩೪	ST	ಬ್ಯಾಲಕುಂದಿ

ಸಂಘದ ಸದಸ್ಯರಲ್ಲದವರ ಹೆಸರು	ವಯಸ್ಸು	ಜಾತಿ	ಗ್ರಾಮದ ಹೆಸರು
೮೬ ವಿ.ರೇಖಾ	೩೨	ST	ಬ್ಯಾಲಕುಂದಿ
೮೭ ಎಚ್.ಕೆ. ಆಶಾ	೩೬	SC	ಗರಗ
೮೮ ಎ.ಮಲ್ಲಮ್ಮ	೩೪	ST	ಗರಗ
೮೯ ಬಿ. ಸರೋಜ	೩೦	ST	ಗರಗ
೯೦ ನಾಗರತ್ನ (ವಿಧವೆ)	೪೨	ST	ಗರಗ
೯೧ ರಾಮಕ್ಕ (ವಿಧವೆ)	೪೮	SC	ಗರಗ
೯೨ ಸಿದ್ದಮ್ಮ (ದೇವದಾಸಿ)	೫೧	SC	ಗರಗ
೯೩ ಈರಮ್ಮ (ವಿಧವೆ)	೪೮	SC	ಜಿ.ನಾಗಲಾಪುರ
೯೪ ಬಸಮ್ಮ	೩೫	SC	ಜಿ.ನಾಗಲಾಪುರ
೯೫ ತಿರುಪತೆಮ್ಮ(ವಿಧವೆ)	೪೦	SC	ಜಿ.ನಾಗಲಾಪುರ
೯೬ ಯಂಕಮ್ಮ (ವಿಧವೆ)	೫೦	SC	ಜಿ.ನಾಗಲಾಪುರ
೯೭ ನಿಂಗಮ್ಮ	೪೫	SC	ಬ್ಯಾಲಕುಂದಿ
೯೮ ತಿರುಪತಮ್ಮ (ವಿಧವೆ)	೫೧	ST	ಹಳೇಗರಗ
೯೯ ಬಸಮ್ಮ (ದೇವದಾಸಿ)	೫೧	SC	ಹಳೇಗರಗ
೧೦೦ ಹನುಮಂತಮ್ಮ	೩೨	ST	ಜಿ.ನಾಗಲಾಪುರ
೧೦೧ ಶಿವಮ್ಮ	೨೬	ST	ಜಿ.ನಾಗಲಾಪುರ
೧೦೨ ಮಂಜುಳ	೨೨	ST	ಹಳೇಗರಗ
೧೦೩ ಮಾರಕ್ಕ	೨೫	ST	ಹಳೇಗರಗ
೧೦೪ ಪಾಲಮ್ಮ	೩೫	ST	ಬ್ಯಾಲಕುಂದಿ
೧೦೫ ಯಂಕಮ್ಮ (ವಿಧವೆ)	೪೭	ST	ಹಳೇಗರಗ
೧೦೬ ದುರುಗಮ್ಮ ಎಚ್. (ವಿಧವೆ)	೪೦	ST	ಹಳೇಗರಗ
೧೦೭ ಎಚ್. ನಿಂಗಮ್ಮ (ದೇವದಾಸಿ)	೩೨	SC	ಹಳೇಗರಗ
೧೦೮ ಪಾರ್ವತಿ	೨೯	ST	ಹಳೇಗರಗ
೧೦೯ ಲಕ್ಷ್ಮಿ	೪೩	SC	ಜಿ.ನಾಗಲಾಪುರ
೧೧೦ ಕಲಾವತಿ	೨೫	ST	ಹಳೇಗರಗ
೧೧೧ ಚಂದ್ರಕಲಾ	೩೧	ST	ಹಳೇಗರಗ
೧೧೨ ಬಸಮ್ಮ ಕೆ.	೩೩	ST	ಹಳೇಗರಗ
೧೧೩ ರೇವತಿ ಎಚ್.(ವಿಧವೆ)	೨೮	SC	ಹಳೇಗರಗ
೧೧೪ ಪಾಲಮ್ಮ (ವಿಧವೆ)	೪೨	ST	ಹಳೇಗರಗ

ಸಂಘದ ಸದಸ್ಯರಲ್ಲದವರ ಹೆಸರು	ವಯಸ್ಸು	ಜಾತಿ	ಗ್ರಾಮದ ಹೆಸರು
೧೧೫ ದುರುಗಮ್ಮ (ವಿಧವೆ)	೪೫	SC	ಹಳೇಗರಗ
೧೧೬ ನಾಗಮ್ಮ	೫೦	ST	ಬ್ಯಾಲಕುಂದಿ
೧೧೭ ಮಾರೆಮ್ಮ (ವಿಧವೆ)	೫೪	ST	ಬ್ಯಾಲಕುಂದಿ
೧೧೮ ಲಕ್ಕಮ್ಮ (ವಿಧವೆ)	೩೮	SC	ಬ್ಯಾಲಕುಂದಿ
೧೧೯ ಹನುಮಕ್ಕ	೪೬	SC	ಬ್ಯಾಲಕುಂದಿ
೧೨೦ ಸತ್ಯಮ್ಮ ಆರ್. (ವಿಧವೆ)	೫೬	SC	ಬ್ಯಾಲಕುಂದಿ
೧೨೧ ಹಂಪಮ್ಮ	೪೫	SC	ಬ್ಯಾಲಕುಂದಿ
೧೨೨ ಒಲೇಶಮ್ಮ	೪೮	SC	ಚಿರತಗುಂಡು
೧೨೩ ಕಾಳಮ್ಮ	೩೭	SC	ಚಿರತಗುಂಡು
೧೨೪ ಮಳಿಯಮ್ಮ (ದೇವದಾಸಿ)	೪೦	SC	ಚಿರತಗುಂಡು
೧೨೫ ಓಬಳಮ್ಮ	೩೯	ST	ಚಿರತಗುಂಡು
೧೨೬ ಹನುಮಕ್ಕ	೫೨	SC	ಚಿರತಗುಂಡು
೧೨೭ ಚೆನ್ನಮ್ಮ	೪೫	ST	ಚಿರತಗುಂಡು
೧೨೮ ಪಾಲಮ್ಮ	೩೭	ST	ಚಿರತಗುಂಡು
೧೨೯ ಮಾರಕ್ಕ ಜಿ. (ವಿಧವೆ)	೨೫	ST	ಚಿರತಗುಂಡು
೧೩೦ ಟಿ. ದುರುಗಮ್ಮ (ದೇವದಾಸಿ)	೪೮	SC	ಕೊಂಬಿಹಳ್ಳಿ
೧೩೧ ಮಲ್ಲಕ್ಕ ಸಿ	೪೫	SC	ಕೊಂಬಿಹಳ್ಳಿ
೧೩೨ ಜಯಮ್ಮ	೩೫	ST	ಕೊಂಬಿಹಳ್ಳಿ
೧೩೩ ಹೊನ್ನೂರಮ್ಮ	೫೦	ST	ಕೊಂಬಿಹಳ್ಳಿ
೧೩೪ ತಿಮ್ಮಕ್ಕ	೪೦	ST	ಚಿರತಗುಂಡು
೧೩೫ ಓರಿಯಕ್ಕ	೪೭	ST	ಚಿರತಗುಂಡು
೧೩೬ ದುರುಗಮ್ಮ	೫೦	ST	ಚಿರತಗುಂಡು
೧೩೭ ತಾಯಮ್ಮ	೩೦	SC	ಕೊಂಬಿಹಳ್ಳಿ
೧೩೮ ತಿಪ್ಪಕ್ಕ ಸಿ.(ದೇವದಾಸಿ)	೪೫	SC	ಕೊಂಬಿಹಳ್ಳಿ
೧೩೯ ಬೋರಕ್ಕ	೫೦	ST	ಕೊಂಬಿಹಳ್ಳಿ
೧೪೦ ಚನ್ನಬಸಮ್ಮ	೪೨	ST	ಕೊಂಬಿಹಳ್ಳಿ
೧೪೧ ಒಬಕ್ಕ ಆರ್.	೪೦	ST	ಕೊಂಬಿಹಳ್ಳಿ
೧೪೨ ವಿರುಪಮ್ಮ	೪೫	SC	ಕೊಂಬಿಹಳ್ಳಿ
೧೪೩ ಸಣ್ಣಮಲ್ಲಮ್ಮ ಸಿ. (ವಿಧವೆ)	೪೭	SC	ಕೊಂಬಿಹಳ್ಳಿ

ಸಂಘದ ಸದಸ್ಯರಲ್ಲದವರ ಹೆಸರು	ವಯಸ್ಸು	ಜಾತಿ	ಗ್ರಾಮದ ಹೆಸರು
೧೪೪ ಪಾಲಮ್ಮ	೨೮	SC	ಗುಡ್ಡದ ಬೋರಯ್ಯನ ಹಟ್ಟಿ
೧೪೫ ಮಾರೆಮ್ಮ ಎಚ್.	೪೮	SC	ಗುಡ್ಡದ ಬೋರಯ್ಯನ ಹಟ್ಟಿ
೧೪೬ ಪಾಲಮ್ಮ ಸಿ.ಕೆ.	೫೧	SC	ಗುಡ್ಡದ ಬೋರಯ್ಯನ ಹಟ್ಟಿ
೧೪೭ ದೊಡ್ಡ ಬೋರಮ್ಮ	೫೨	SC	ಗುಡ್ಡದ ಬೋರಯ್ಯನ ಹಟ್ಟಿ
೧೪೮ ವೆಂಕಟಲಕ್ಷ್ಮಿ	೪೯	ST	ಗುಡ್ಡದ ಬೋರಯ್ಯನ ಹಟ್ಟಿ
೧೪೯ ಸಾವಿತ್ರಿ	೨೮	SC	ಗುಡ್ಡದ ಬೋರಯ್ಯನ ಹಟ್ಟಿ
೧೫೦ ಬೊಮ್ಮಮ್ಮ	೪೮	ST	ಗುಡ್ಡದ ಬೋರಯ್ಯನ ಹಟ್ಟಿ
೧೫೧ ಭಾಗ್ಯಮ್ಮ	೩೮	ST	ಗುಡ್ಡದ ಬೋರಯ್ಯನ ಹಟ್ಟಿ
೧೫೨ ಶ್ರೀದೇವಿ	೨೪	ST	ಗುಡ್ಡದ ಬೋರಯ್ಯನ ಹಟ್ಟಿ
೧೫೩ ಮಂಜಮ್ಮ (ದೇವದಾಸಿ)	೪೦	SC	ಚಿರತಗುಂಡು
೧೫೪ ಸುಮಿತ್ರಮ್ಮ	೫೦	SC	ಚಿರತಗುಂಡು
೧೫೫ ರಾಮಕ್ಕ	೫೫	SC	ಚಿರತಗುಂಡು
೧೫೬ ಮಲ್ಲಮ್ಮ (ದೇವದಾಸಿ)	೬೦	SC	ಚಿರತಗುಂಡು
೧೫೭ ಬೋರಮ್ಮ (ವಿಧವೆ)	೪೦	SC	ಚಿರತಗುಂಡು
೧೫೮ ದ್ಯಾಮಕ್ಕ	೪೦	SC	ಚಿರತಗುಂಡು
೧೫೯ ಕೊಲ್ಲಮ್ಮ (ವಿಧವೆ)	೪೫	SC	ಕೊಂಬಿಹಳ್ಳಿ
೧೬೦ ಮೀನಾಕ್ಷಿ	೨೦	SC	ಕೊಂಬಿಹಳ್ಳಿ
೧೬೧ ಗೌರಮ್ಮ	೪೦	ST	ಕೊಂಬಿಹಳ್ಳಿ
೧೬೨ ತಿಪ್ಪಮ್ಮ (ದೇವದಾಸಿ)	೬೦	SC	ಕೊಂಬಿಹಳ್ಳಿ
೧೬೩ ಬೋರಮ್ಮ	೨೯	ST	ಕೊಂಬಿಹಳ್ಳಿ
೧೬೪ ಏಕಾಂತಮ್ಮ (ವಿಧವೆ)	೫೨	ST	ಕೊಂಬಿಹಳ್ಳಿ
೧೬೫ ರೇಣುಕಮ್ಮ	೨೮	ST	ಗುಡ್ಡದ ಬೋರಯ್ಯನ ಹಟ್ಟಿ
೧೬೬ ಮಾರಮ್ಮ	೫೧	ST	ಗುಡ್ಡದ ಬೋರಯ್ಯನ ಹಟ್ಟಿ
೧೬೭ ಮಂಜಮ್ಮ	೪೦	SC	ಕೊಂಬಿಹಳ್ಳಿ
೧೬೮ ಬೋರಮ್ಮ	೪೦	SC	ಕೊಂಬಿಹಳ್ಳಿ
೧೭೦ ಕೊಲ್ಲಮ್ಮ	೪೫	SC	ಚಿರತಗುಂಡು
೧೭೧ ಗಂಗಮ್ಮ	೪೨	SC	ಚಿರತಗುಂಡು
೧೭೨ ಲಲಿತಮ್ಮ	೨೨	SC	ಕೊಂಬಿಹಳ್ಳಿ

ಸಂಘದ ಸದಸ್ಯರಲ್ಲದವರ ಹೆಸರು	ವಯಸ್ಸು	ಜಾತಿ	ಗ್ರಾಮದ ಹೆಸರು
೧೭೩ ಸಾಕಮ್ಮ (ವಿಧವೆ)	೪೫	ST	ಗುಡ್ಡದ ಬೋರಯ್ಯನ ಹಟ್ಟಿ
೧೭೪ ಸಣ್ಣಕ್ಕ (ದೇವದಾಸಿ)	೪೨	ST	ಗುಡ್ಡದ ಬೋರಯ್ಯನ ಹಟ್ಟಿ
೧೭೫ ನೀಲಮ್ಮ	೨೨	SC	ಗುಡ್ಡದ ಬೋರಯ್ಯನ ಹಟ್ಟಿ
೧೭೬ ಕೆ.ಮಲ್ಲಮ್ಮ	೪೪	ST	ಗುಡ್ಡದ ಬೋರಯ್ಯನ ಹಟ್ಟಿ
೧೭೭ ಗುಂಡಮ್ಮ (ವಿಧವೆ)	೪೨	ST	ಗುಡ್ಡದ ಬೋರಯ್ಯನ ಹಟ್ಟಿ
೧೭೮ ಚನ್ನಮ್ಮ	೪೯	ST	ಗುಡ್ಡದ ಬೋರಯ್ಯನ ಹಟ್ಟಿ
೧೭೯ ಪೆದ್ದಮ್ಮ	೩೫	ST	ಗುಡ್ಡದ ಬೋರಯ್ಯನ ಹಟ್ಟಿ
೧೮೦ ಬೋರಮ್ಮ	೩೧	ST	ಗುಡ್ಡದ ಬೋರಯ್ಯನ ಹಟ್ಟಿ
೧೮೧ ಶ್ರೀದೇವಿ	೨೩	ST	ಗುಡ್ಡದ ಬೋರಯ್ಯನ ಹಟ್ಟಿ
೧೮೨ ಭಾಗ್ಯಮ್ಮ	೩೮	ST	ಗುಡ್ಡದ ಬೋರಯ್ಯನ ಹಟ್ಟಿ
೧೮೩ ನಾಗಲಕ್ಷ್ಮಿ	೨೮	ST	ರಾಂಪುರ
೧೮೪ ದ್ಯಾವಮ್ಮ	೪೨	SC	ರಾಂಪುರ
೧೮೫ ಸುಜಾತ	೩೬	ST	ರಾಂಪುರ
೧೮೬ ಜ್ಯೋತಿ	೩೫	ST	ರಾಂಪುರ
೧೮೭ ರೇಣುಕಮ್ಮ	೪೨	SC	ರಾಂಪುರ
೧೮೮ ಜಡೆಮ್ಮ	೪೦	SC	ರಾಂಪುರ
೧೮೯ ವೆಂಕಟಮ್ಮ	೫೦	SC	ರಾಂಪುರ
೧೯೦ ಈರಮ್ಮ	೫೨	ST	ಸುಂಕದಕಲ್ಲು
೧೯೧ ಅನಿತ	೩೧	SC	ಸುಂಕದಕಲ್ಲು
೧೯೨ ಶಾಂತಮ್ಮ ಎಚ್.	೪೫	SC	ಸುಂಕದಕಲ್ಲು
೧೯೩ ಅಂಬಿಕಾ	೨೮	ST	ಸುಂಕದಕಲ್ಲು
೧೯೪ ಉಮಾದೇವಿ	೪೬	ST	ಸುಂಕದಕಲ್ಲು
೧೯೫ ಸುಬ್ಬಮ್ಮ	೪೨	SC	ಸುಂಕದಕಲ್ಲು
೧೯೬ ಶಂಕ್ರಮ್ಮ	೩೮	ST	ಜಾಗಟಗೆರೆ
೧೯೭ ಶಾರದಮ್ಮ	೩೦	ST	ಜಾಗಟಗೆರೆ
೧೯೮ ಯಲ್ಲಮ್ಮ	೪೨	SC	ಜಾಗಟಗೆರೆ
೧೯೯ ಶ್ವೇತಾ	೩೦	SC	ಜಾಗಟಗೆರೆ
೨೦೦ ಹುಲಿಗೆಮ್ಮ	೪೯	SC	ಜಾಗಟಗೆರೆ
೨೦೧ ರಂಗಮ್ಮ	೪೯	SC	ಸುಟ್ಟಕೋಡಿಹಳ್ಳಿ

ಸಂಘದ ಸದಸ್ಯರಲ್ಲದವರ ಹೆಸರು	ವಯಸ್ಸು	ಜಾತಿ	ಗ್ರಾಮದ ಹೆಸರು
೨೦೨ ತಿಪ್ಪಕ್ಕ	೫೦	ST	ರಾಂಪುರ
೨೦೩ ಬಸಮ್ಮ	೫೫	ST	ರಾಂಪುರ
೨೦೪ ರತ್ನಮ್ಮ	೩೫	ST	ಜಾಗಟಗೆರೆ
೨೦೫ ಜಯಮ್ಮ	೪೦	ST	ಜಾಗಟಗೆರೆ
೨೦೬ ಓಬಕ್ಕ	೪೫	ST	ಜಾಗಟಗೆರೆ
೨೦೭ ಬಸಮ್ಮ (ದೇವದಾಸಿ)	೨೮	ST	ಸುಟ್ಟಕೋಡಿಹಳ್ಳಿ
೨೦೮ ಶರಣಮ್ಮ	೪೮	ST	ಸುಟ್ಟಕೋಡಿಹಳ್ಳಿ
೨೦೯ ಜಯಮ್ಮ	೪೮	SC	ಸುಟ್ಟಕೋಡಿಹಳ್ಳಿ
೨೧೦ ಸೀತಮ್ಮ	೪೫	SC	ಸುಟ್ಟಕೋಡಿಹಳ್ಳಿ
೨೧೧ ರಾಘಮ್ಮ	೩೮	SC	ಬೋರನಹಳ್ಳಿ
೨೧೨ ಸುಶೀಲಮ್ಮ	೪೦	SC	ಬೋರನಹಳ್ಳಿ
೨೧೩ ಶರಣಮ್ಮ	೫೧	SC	ರಾಂಪುರ
೨೧೪ ಓಬಲಮ್ಮ	೪೬	SC	ರಾಂಪುರ
೨೧೫ ಕಲ್ಲಮ್ಮ	೪೦	SC	ರಾಂಪುರ
೨೧೬ ಭಾಗ್ಯಮ್ಮ	೨೪	ST	ರಾಂಪುರ
೨೧೭ ನಾಗರತ್ನಮ್ಮ	೨೬	SC	ರಾಂಪುರ
೨೧೮ ಕೊಟ್ರೇಶಮ್ಮ (ವಿಧವೆ)	೩೦	ST	ಸುಂಕದಕಲ್ಲು
೨೧೯ ಅಂಜಿನಮ್ಮ	೩೪	SC	ಸುಂಕದಕಲ್ಲು
೨೨೦ ಶಿವಮ್ಮ	೪೦	SC	ಸುಂಕದಕಲ್ಲು
೨೨೧ ಶಾರದಮ್ಮ	೫೨	ST	ಸುಂಕದಕಲ್ಲು
೨೨೩ ಜ್ಯೋತಿ.ಕೆ. (ವಿಧವೆ)	೩೦	ST	ಸುಂಕದಕಲ್ಲು
೨೨೪ ಪಾರ್ವತಿ	೩೮	ST	ಸುಂಕದಕಲ್ಲು
೨೨೫ ನಿಂಗಮ್ಮ (ದೇವದಾಸಿ)	೪೦	SC	ಜಾಗಟಗೆರೆ
೨೨೬ ರೇಣುಕಮ್ಮ	೪೦	ST	ಜಾಗಟಗೆರೆ
೨೨೮ ರೇಣುಕ	೩೨	ST	ಜಾಗಟಗೆರೆ
೨೨೯ ಭೀಮಕ್ಕ (ವಿಧವೆ)	೪೮	ST	ಜಾಗಟಗೆರೆ
೨೩೦ ಹನುಮಕ್ಕ ಎಚ್.	೩೦	SC	ಜಾಗಟಗೆರೆ
೨೩೧ ದ್ರಾಕ್ಷಾಯಿಣಿ	೨೯	ST	ಜಾಗಟಗೆರೆ
೨೩೨ ಹನುಮಂತಿ (ವಿಧವೆ)	೫೫	ST	ಸುಟ್ಟಕೋಡಿಹಳ್ಳಿ

ಸಂಘದ ಸದಸ್ಯರಲ್ಲದವರ ಹೆಸರು	ವಯಸ್ಸು	ಜಾತಿ	ಗ್ರಾಮದ ಹೆಸರು
೨೩೩ ವನ್ನಮ್ಮ	೪೦	SC	ಸುಟ್ಟಕೋಡಿಹಳ್ಳಿ
೨೩೪ ಲಲಿತ (ವಿಧವೆ)	೨೦	ST	ಸುಟ್ಟಕೋಡಿಹಳ್ಳಿ
೨೩೫ ಹುಲಿಗೆಮ್ಮ	೨೪	SC	ಸುಟ್ಟಕೋಡಿಹಳ್ಳಿ
೨೩೬ ಲಕ್ಷ್ಮಿ	೨೦	ST	ಸುಟ್ಟಕೋಡಿಹಳ್ಳಿ
೨೩೭ ರಾಮವ್ವ	೬೦	ST	ಬೋರನಹಳ್ಳಿ
೨೩೮ ಸಣ್ಣಕ್ಕ	೪೨	SC	ರಾಂಪುರ
೨೩೯ ಉದ್ಲಕ್ಕ	೪೫	SC	ಸುಂಕದಕಲ್ಲು
೨೪೦ ಮಲ್ಲಮ್ಮ	೪೪	SC	ಸುಟ್ಟಕೋಡಿಹಳ್ಳಿ

ಸ್ತ್ರೀಶಕ್ತಿ ಗುಂಪುಗಳು-ಪರಿಶಿಷ್ಟ ಮಹಿಳೆಯರ ಆರ್ಥಿಕ ಸ್ಥಿತಿಗತಿ
[ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ]
ಗುಂಪಿಗೆ ಸೇರಿದ ಪರಿಶಿಷ್ಟ ಮಹಿಳೆಯರ ಪ್ರಶ್ನಾವಳಿ

I. ವೈಯಕ್ತಿಕ ಮಾಹಿತಿ

1. ಗುಂಪಿನ ಸದಸ್ಯೆ ಹೆಸರು
2. ನಿಮ್ಮ ವಯಸ್ಸು
   1) 20ರಿಂದ 30 2) 31ರಿಂದ 40 3) 41ರಿಂದ 50 4) 51ರಿಂದ 60
3. ಜಾತಿ
   1) ಪ.ಜಾತಿ 2) ಪ.ಪಂಗಡ
4. ಉಪಜಾತಿ
5. ಧರ್ಮ
   1) ಹಿಂದೂ 2) ಮುಸ್ಲಿಂ 3) ಕ್ರಿಶ್ಚಿಯನ್ 4) ಇತರೆ
6. ವೈವಾಹಿಕ ಸಂಬಂಧ
   1) ವಿವಾಹಿತೆ 2) ಅವಿವಾಹಿತೆ 3) ವಿವಾಹ ವಿಚ್ಛೇದನ 4) ದೇವದಾಸಿ 5) ವಿಧವೆ
7. ಕುಟುಂಬದ ವಿಧ
   1) ವಿಭಕ್ತ ಕುಟುಂಬ 2) ಅವಿಭಕ್ತ ಕುಟುಂಬ

II. ಗುಂಪಿನ ಮಾಹಿತಿ

8. ಗ್ರಾಮ ಪಂಚಾಯತಿಯ ಹೆಸರು
9. ಊರಿನ ಹೆಸರು
10. ತಾಲೂಕಿನ ಹೆಸರು
11. ಗುಂಪಿನ ಹೆಸರು
12. ಗುಂಪಿನ ನಾಯಕಿಯರ ಹೆಸರು
13. ಗುಂಪಿನ ಸದಸ್ಯರ ಸಂಖ್ಯೆ
14. ಪ್ರಾರಂಭವಾದ ವರ್ಷ
15. ನೀವು ಯಾವ ವರ್ಷದಲ್ಲಿ ಸದಸ್ಯತ್ವವನ್ನು ಪಡೆದಿದ್ದೀರಾ
16. ಸಂಘಕ್ಕೆ ಸೇರಲು ಪ್ರೋತ್ಸಾಹಿಸಿದವರು ಯಾರು.
    1) ಅಂಗನವಾಡಿ ಕಾರ್ಯಕರ್ತೆಯರು 2) ಗ್ರಾಮ ಪಂಚಾಯಿತಿ ಸದಸ್ಯರು
    3) ಲೋಕಲ್ ಲೀಡರ್ಸ್ 4) ಎನ್‌ಜಿಓ ಸದಸ್ಯರು 5) ಇತರೆ
17. ಉಳಿತಾಯವನ್ನು ವಾರಕ್ಕೊಮ್ಮೆ / ತಿಂಗಳಿಗೊಮ್ಮೆ ಮಾಡುತ್ತೀರಾ
    1) ವಾರಕ್ಕೊಮ್ಮೆ 2) ತಿಂಗಳಿಗೊಮ್ಮೆ
18. ಎಷ್ಟು ಉಳಿತಾಯ ಮಾಡುತ್ತೀರಾ
19. ಸಂಘಕ್ಕೆ ಒಟ್ಟು ಉಳಿತಾಯ ಎಷ್ಟು
20. ಸಂಘದ ಒಟ್ಟು ಸಾಲ ಎಷ್ಟು

III.ಪರಿಶಿಷ್ಟ ಮಹಿಳೆಯರ ಸಮಾಜಿಕ ಸ್ಥಾನಮಾನ

A. ಸಾಮಾಜಿಕ ಸ್ಥಾನಮಾನ :

1) ಮನೆ

21. ಮೇಲ್ಜಾತಿಯವರ ಮನೆಯೊಳಗೆ ನಿಮಗೆ ಪ್ರವೇಶ ವಿದೆಯೇ
    1) ಹೌದು 2) ಇಲ್ಲ.

2) ಸಂಭೋಧಿಸುವುದು

22. ಮೇಲ್ಜಾತಿಯವರು ನಿಮ್ಮನ್ನು ಹೇಗೆ ಸಂಬೋಧಿಸುತ್ತಾರೆ.
    1) ಎಸ್.ಸಿ. ಅ) ಏಕವಚನ ಆ) ಬಹುವಚನ

2) ಎಸ್.ಟಿ ಇ) ಏಕವಚನ ಈ) ಬಹುವಚನ

3) ದೇವಾಲಯ

23. ನಿಮಗೆ ದೇವಸ್ಥಾನದ ಒಳಗೆ ಪ್ರವೇಶ ವಿದೆಯೇ
    1) ಎಸ್.ಸಿ ಅ) ಹೌದು ಆ) ಇಲ್ಲ
    2) ಎಸ್.ಟಿ ಇ) ಹೌದು ಈ) ಇಲ್ಲ
24. ಸಾರ್ವಜನಿಕ ಬಾವಿಯಲ್ಲಿ ನೀರು ತರಲು ಬಿಡುತ್ತಾರೆಯೇ
    1) ಹೌದು 2) ಇಲ್ಲ.
25. ನಿಮ್ಮ ಬಟ್ಟೆಗಳನ್ನು ಅಗಸರು (ಮಡಿವಾಳರು) ಹೊಗೆಯುತ್ತಾರೆಯೇ
    1) ಎಸ್.ಸಿ ಅ) ಹೌದು ಆ) ಇಲ್ಲ
    2) ಎಸ್.ಟಿ ಇ) ಹೌದು ಈ) ಇಲ್ಲ

B. ಸಾಮಾಜಿಕ ಅಭಿವೃದ್ಧಿ :

A. ಶಿಕ್ಷಣ :

26. ಶಿಕ್ಷಣದ ಮಾಹಿತಿ
    1) ಅನಕ್ಷರತೆ 2) ಅಕ್ಷರಜ್ಞಾನ 3) ಪೂರ್ವ ಪ್ರಾಥಮಿಕ (1 ರಿಂದ 5)
    4) ಹಿರಿಯ ಪ್ರಾಥಮಿಕ (6 ರಿಂದ 8) 5) ಪ್ರೌಢಶಿಕ್ಷಣ (9 ರಿಂದ 10)
    6) ಪದವಿಪೂರ್ವ 7) ಪದವಿ.

27. ಗುಂಪಿನ ಮೂಲಕ ಶಿಕ್ಷಣ ಪಡೆದಿದ್ದೀರಾ.
    1) ಹೌದು 2) ಇಲ್ಲ

B. ಆರೋಗ್ಯ

A. ಸಾಂಸ್ಥಿಕ ಹೆರಿಗೆ

28. ನೀವು ಹೆರಿಗೆ ಎಲ್ಲಿ ಮಾಡಿಸುತ್ತೀರಿ
    1) ಮನೆಯಲ್ಲಿ 2) ಸರಕಾರಿ ಆಸ್ಪತ್ರೆಯಲ್ಲಿ 3) ಖಾಸಗಿ ಆಸ್ಪತ್ರೆಯಲ್ಲಿ
29. ಯಾವ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸುತ್ತೀರಾ.
    1) ಸರ್ಕಾರಿ ಆಸ್ಪತ್ರೆ 2) ಖಾಸಗಿ ಆಸ್ಪತ್ರೆ.

B. ಆರೋಗ್ಯದ ತಪಾಸಣೆ

30. ಯಾವ ಆಸ್ಪತ್ರೆಯಲ್ಲಿ ನೀವು ತಪಾಸಣೆ ಮಾಡಿಸುತ್ತೀರಿ.
    1) ಸರಕಾರಿ ಆಸ್ಪತ್ರೆ 2) ಖಾಸಗೀ ಆಸ್ಪತ್ರೆ

C. ಆಹಾರ:

31. ನಿಮಗೆ ಪಡಿತರ ಚೀಟಿ ಇದೆಯೇ
    1) ಹೌದು 2) ಇಲ್ಲ.
32. ಹೌದಾದರೆ
    1) ಬಿ.ಪಿ.ಎಲ್ 2) ಎ.ಪಿ.ಎಲ್ 3) ಅಂತ್ಯೋದಯ

D. ವಸತಿ :

33. ಮನೆ ಇದೆಯೇ
    1) ಇದೆ 2) ಇಲ್ಲ.
34. ಮನೆಯ ಸ್ವರೂಪ
    1) ಗುಡಿಸಲು 2) ಮಣ್ಣಿನ ಮನೆ 3) ಶೀಟಿನ ಮನೆ 4) ಆರ್.ಸಿ.ಸಿ. ಮನೆ
35. ಸ್ನಾನಗೃಹ ಇದೆಯೇ
    1) ಇದೆ 2) ಇಲ್ಲ.
36. ನಿಮ್ಮ ಮನೆಯಲ್ಲಿ ಶೌಚಾಲಯ ಇದೆಯೇ
    1) ಇದೆ 1) ಇಲ್ಲ.
37. ಇಲ್ಲವಾದರೆ
    1) ವೈಯಕ್ತಿಕ ಶೌಚಾಲಯ 2) ಸಮುದಾಯ ಶೌಚಾಲಯ 3) ಬಯಲು ಶೌಚಾಲಯ

38. ಇಲ್ಲವಾದರೆ ಏಕೆ

1) ಸ್ಥಳದ ಕೊರತೆ 2) ಹಣದ ಕೊರತೆ 3) ಇತರೆ ಕಾರಣಗಳು.

39. ಕುಡಿಯುವ ನೀರಿನ ಮೂಲ ಯಾವುದು

1) ವೈಯಕ್ತಿಕ ನಲ್ಲಿಗಳು 2) ಸಾರ್ವಜನಿಕ ನಲ್ಲಿಗಳು/ಟ್ಯಾಂಕುಗಳು

40. ಮನೆಯಿಂದ ಕುಡಿಯುವ ನೀರು ಎಷ್ಟು ದೂರದಲ್ಲಿದೆ.

41. ನಿಮ್ಮ ಊರಿನಲ್ಲಿ ಕುಡಿಯುವ ನೀರಿನ ಗುಣಮಟ್ಟ ಹೇಗಿದೆ.

1) ಉತ್ತಮ 2) ತೃಪ್ತಿಕರ 3) ಶೋಚನೀಯ.

42. ದಿನನಿತ್ಯ ನಿಮಗೆ ಸಿಗುವ ನೀರಿನ ಪ್ರಮಾಣ ಎಷ್ಟು (ಲೀಟರ್ ಗಳಲ್ಲಿ)

43. ಪ್ರತಿದಿನ ನಿಮ್ಮ ಕುಟುಂಬಕ್ಕೆ ಬೇಕಾಗುವಷ್ಟು ನೀರು ಸಿಗುತ್ತದೆಯೇ

1) ಹೌದು 2) ಇಲ್ಲ

IV. ಆರ್ಥಿಕ ವಿವರ :

B. ಆದಾಯಕ್ಕೆ ಸಂಬಂಧಿಸಿದ ಮಾಹಿತಿ.

44. ನಿಮ್ಮ ಕುಟುಂಬಕ್ಕೆ ಯಾವ ಮೂಲಗಳಿಂದ ಆದಾಯ ಬರುತ್ತದೆ

1) ಕೂಲಿ 2) ಟೈಲರಿಂಗ್ 3) ಹೈನುಗಾರಿಕೆ 4) ಹೋಟೆಲ್ 5) ಸಣ್ಣ ವ್ಯಾಪಾರ(ತರಕಾರಿ ಮಾರುವುದು, ಸಣ್ಣ ಅಂಗಡಿ)

45. ನಿಮ್ಮ ಕುಟುಂಬ ಹೊಂದಿದ ಆಸ್ತಿ

1) ಎತ್ತುಗಳು 2) ಹಸುಗಳು 3) ಎಮ್ಮೆಗಳು 4) ಮೇಕೆಗಳು 5) ಕುರಿಗಳು 6) ಕೋಳಿಗಳು

46. ನೀವು ದಿನಬಳಕೆಯ ವಸ್ತುಗಳು ಯಾವುವು

1) ಮಂಚ 2) ಟೇಬಲ್ 3) ಕುರ್ಚಿ 4) ಟಿ.ವಿ 5) ಗಡಿಯಾರ 6) ಮಿಕ್ಸಿ 7) ಗ್ಯಾಸ್ ಸ್ಟವ್ 8) ಬಟ್ಟೆ ಹೊಲಿಯುವ ಯಂತ್ರ 9) ಮೋಟರ್ ಸೈಕಲ್ 10) ಸೈಕಲ್ 11) ಫ್ರಿಜ್ಜ್

47. ನೀವು ಅಡಿಗೆ ಮಾಡಲು ಬಳಸುವ ಇಂಧನ ಯಾವುದು

1) ಎಲ್.ಪಿ.ಜಿ. 2) ಉರುವಲು ಕಟ್ಟಿಗೆ 3) ಸೀಮೆಎಣ್ಣೆ ಸ್ಟವ್ 4) ವಿದ್ಯುತ್ ಸ್ಟವ್

48. ನಿಮ್ಮ ಮನೆಗೆ ಯಾವ ರೀತಿಯ ವಿದ್ಯುತ್ ಸಂಪರ್ಕ ಇದೆ.

1) ನಾವೇ ತೆಗೆದುಕೊಂಡಿದ್ದು 2) ಸರ್ಕಾರಿ ಯೋಜನೆಯಲ್ಲಿ ಪಡೆದಿದ್ದು

C. ಗುಂಪಿನ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿ.

49. ನಿಮ್ಮ ಗುಂಪು ಯಾವ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡಿದೆ.

1) ಪ್ರಗತಿ ಕೃಷ್ಣ ಬ್ಯಾಂಕು
2) ಸಿಂಡಿಕೇಟ್ ಬ್ಯಾಂಕು
3) ಸ್ಟೇಟ್ ಬ್ಯಾಂಕ್ ಆಫ್ ಮೈಸೂರು
4) ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್

50. ಬ್ಯಾಂಕುಗಳಿಂದ ಎಷ್ಟು ಸಾಲ ತೆಗೆದುಕೊಂಡಿದ್ದೀರಿ.

1) 1000 ರಿಂದ 5000 2) 5001 ರಿಂದ 10000 3) 10001 ರಿಂದ 15000
4) 15001 ರಿಂದ 20000 5) 20001 ರಿಂದ 25000 6) 25000ಕ್ಕಿಂತ ಮೇಲ್ಪಟ್ಟು

51. ನೀವು ತೆಗೆದುಕೊಂಡಿರುವ ಸಾಲಕ್ಕೆ ಬ್ಯಾಂಕು ಎಷ್ಟು ಬಡ್ಡಿ ದರವನ್ನು ವಿಧಿಸುತ್ತದೆ.

1) 2 ರೂ 2) 2.50 ಪೈಸೆ

52. ಬ್ಯಾಂಕುಗಳಿಂದ ಪಡೆದುಕೊಂಡ ಸಾಲವನ್ನು ಯಾವುದಕ್ಕೆ ವಿನಿಯೋಗಿಸುತ್ತಿರಾ

1) ಮಕ್ಕಳ ಶಿಕ್ಷಣಕ್ಕಾಗಿ 2) ಮನೆಯ ದಿನನಿತ್ಯ ಖರ್ಚಿಗಾಗಿ 3) ಹೈನುಗಾರಿಕೆ 4) ಸಣ್ಣ ವ್ಯಾಪಾರಕ್ಕಾಗಿ
5) ಕುಟುಂಬದ ಸಾಲದ ಮರುಪಾವತಿಗಾಗಿ

53. ಬ್ಯಾಂಕುಗಳು ನೀಡುವ ಸಾಲ ನಿಮ್ಮ ವ್ಯಾಪಾರ ವಹಿವಾಟುಗಳ ನಿರೀಕ್ಷೆಯನ್ನು ಪೂರೈಸುತ್ತದೆಯೇ

1) ಹೌದು 2) ಇಲ್ಲ.

54. ನಿಮ್ಮ ಗುಂಪು ಯಾವುದಾದರೂ ಆರ್ಥಿಕ ಚಟುವಟಿಕೆಗಳನ್ನು ಮಾಡಿದೆಯೇ

1) ಹೌದು 2) ಇಲ್ಲ.

...ನ್ನದ ಹೆಸರು	ಉತ್ಪಾದನೆಯ ಪ್ರಮಾಣ	ಉತ್ಪನ್ನಗಳ ಮೌಲ್ಯ(ರೂ ಗಳಲ್ಲಿ)	ಉತ್ಪಾದನೆಯ ವೆಚ್ಚ (ರೂ ಗಳಲ್ಲಿ)	ಒಟ್ಟು ನಿವ್ವಳ ಆದಾಯ (ರೂ ಗಳಲ್ಲಿ

V. ರಾಜಕೀಯ ಸಬಲೀಕರಣ

...ಸ್ಥೆಗಳಿಗೆ ಸದಸ್ಯತ್ವದ ಕುರಿತು ಮಾಹಿತಿ.

...ವುದಾದರೂ ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಪಡೆದಿದ್ದೀರಾ

...ಹೌದು 2) ಇಲ್ಲ.

...ರೆ

...ಭಾವಹಿಸುವಿಕೆಯ ಕುರಿತು ಮಾಹಿತಿ.

...ಯಿಸಲು ಭಾಗವಹಿಸಿದ್ದೀರಾ

...ದು 2) ಇಲ್ಲ.

... ಪ್ರಚಾರದಲ್ಲಿ ಭಾಗವಹಿಸಿದ್ದೀರಾ

...ದು 2) ಇಲ್ಲ.

...ಯಲ್ಲಿ ಸ್ಪರ್ಧಿಸಲು ಇಚ್ಚಿಸಿದ್ದೀರಾ

...ದು 2) ಇಲ್ಲ.

...ಗಳಲ್ಲಿ ಭಾಗವಹಿಸಿದ್ದೀರಾ

...ದು 2) ಇಲ್ಲ.

...ಅಭಿವೃದ್ಧಿಯಲ್ಲಿ ರಾಜಕೀಯ ಪಾಲ್ಗೊಳ್ಳುವಿಕೆ

...ಹೌದು 2) ಇಲ್ಲ.

...ಅರಿವಿಗೆ ಸಂಬಂಧಿಸಿದ ಮಾಹಿತಿ.

... ಪಂಚಾಯತಿಯಲ್ಲಿ ಸದಸ್ಯರು ಎಷ್ಟು

... ಪಂಚಾಯತಿಯ ಅಧ್ಯಕ್ಷರು ಯಾರು

... ಯಾವ ಕ್ಷೇತ್ರಕ್ಕೆ ಬರುತ್ತದೆ

... ಯಾರು

... ಯಾರು

...ನಮಂತ್ರಿ ಯಾರು

ಮಾಹಿತಿದಾರರ ಸಹಿ.

ಸ್ತ್ರೀಶಕ್ತಿ ಗುಂಪುಗಳು–ಪರಿಶಿಷ್ಟ ಮಹಿಳೆಯರ ಆರ್ಥಿಕ ಸ್ಥಿತಿಗತಿ

[ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ]

ಗುಂಪಿಗೆ ಸೇರದ ಪರಿಶಿಷ್ಟ ಮಹಿಳೆಯರ ಪ್ರಶ್ನಾವಳಿ

I.ವೈಯಕ್ತಿಕ ಮಾಹಿತಿ

1. ಗ್ರಾಮ ಪಂಚಾಯತಿಯ ಹೆಸರು
2. ಗ್ರಾಮದ ಹೆಸರು
3. ತಾಲೂಕಿನ ಹೆಸರು
4. ನಿಮ್ಮ ಹೆಸರು
5. ನಿಮ್ಮ ವಯಸ್ಸು

    1) 20ರಿಂದ 30 2) 31ರಿಂದ 40 3) 41ರಿಂದ 50 4) 51ರಿಂದ 60

6. ಜಾತಿ 1) ಪ.ಜಾತಿ 2) ಪ.ಪಂಗಡ
7. ಉಪಜಾತಿ
8. ಧರ್ಮ 1) ಹಿಂದೂ 2) ಮುಸ್ಲಿಂ 3) ಕ್ರಿಶ್ಚಿಯನ್ 4) ಇತರೆ
9. ವೈವಾಹಿಕ ಸಂಬಂಧ 1) ವಿವಾಹಿತೆ 2) ಅವಿವಾಹಿತೆ 3) ವಿವಾಹ ವಿಚ್ಛೇದನ 4) ದೇವದಾಸಿ 5) ವಿಧವೆ
10. ಕುಟುಂಬದ ವಿಧ 1) ವಿಭಕ್ತ ಕುಟುಂಬ 2) ಅವಿಭಕ್ತ ಕುಟುಂಬ

II.ಪರಿಶಿಷ್ಟ ಮಹಿಳೆಯರ ಸಮಾಜಿಕ ಸ್ಥಾನಮಾನ

A. **ಸಾಮಾಜಿಕ ಸ್ಥಾನಮಾನ :**

1) ಮನೆ

21. ಮೇಲ್ಜಾತಿಯವರ ಮನೆಯೊಳಗೆ ನಿಮಗೆ ಪ್ರವೇಶ ವಿದೆಯೇ

    1) ಹೌದು 2) ಇಲ್ಲ.

2) ಸಂಭೋಧಿಸುವುದು

22. ಮೇಲ್ಜಾತಿಯವರು ನಿಮ್ಮನ್ನು ಹೇಗೆ ಸಂಬೋಧಿಸುತ್ತಾರೆ.

1) ಎಸ್.ಸಿ. ಅ) ಏಕವಚನ ಆ) ಬಹುವಚನ

2) ಎಸ್.ಟಿ ಇ) ಏಕವಚನ ಈ) ಬಹುವಚನ

3) ದೇವಾಲಯ

23. ನಿಮಗೆ ದೇವಸ್ಥಾನದ ಒಳಗೆ ಪ್ರವೇಶ ವಿದೆಯೇ

1) ಎಸ್.ಸಿ ಅ) ಹೌದು ಆ) ಇಲ್ಲ

2) ಎಸ್.ಟಿ ಇ) ಹೌದು ಈ) ಇಲ್ಲ

24. ಸಾರ್ವಜನಿಕ ಬಾವಿಯಲ್ಲಿ ನೀರು ತರಲು ಬಿಡುತ್ತಾರೆಯೇ

1) ಹೌದು 2) ಇಲ್ಲ.

25. ನಿಮ್ಮ ಬಟ್ಟೆಗಳನ್ನು ಅಗಸರು (ಮಡಿವಾಳರು) ಹೊಗೆಯುತ್ತಾರೆಯೇ

1) ಎಸ್.ಸಿ ಅ) ಹೌದು ಆ) ಇಲ್ಲ

2) ಎಸ್.ಟಿ ಇ) ಹೌದು ಈ) ಇಲ್ಲ

B. ಸಾಮಾಜಿಕ ಅಭಿವೃದ್ಧಿ :

A. ಶಿಕ್ಷಣ :

26. ಶಿಕ್ಷಣದ ಮಾಹಿತಿ

1) ಅನಕ್ಷರತೆ 2) ಅಕ್ಷರಜ್ಞಾನ 3) ಪೂರ್ವ ಪ್ರಾಥಮಿಕ (1 ರಿಂದ 5)

4) ಹಿರಿಯ ಪ್ರಾಥಮಿಕ (6 ರಿಂದ 8) 5) ಪ್ರೌಢಶಿಕ್ಷಣ (9 ರಿಂದ 10)

6) ಪದವಿಪೂರ್ವ 7) ಪದವಿ.

27. ಗುಂಪಿನ ಮೂಲಕ ಶಿಕ್ಷಣ ಪಡೆದಿದ್ದೀರಾ.

1) ಹೌದು 2) ಇಲ್ಲ

B. ಆರೋಗ್ಯ

A. ಸಾಂಸ್ಥಿಕ ಹೆರಿಗೆ

28. ನೀವು ಹೆರಿಗೆ ಎಲ್ಲಿ ಮಾಡಿಸುತ್ತೀರಿ

1) ಮನೆಯಲ್ಲಿ 2) ಸರಕಾರಿ ಆಸ್ಪತ್ರೆಯಲ್ಲಿ 3) ಖಾಸಗಿ ಆಸ್ಪತ್ರೆಯಲ್ಲಿ

29. ಯಾವ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸುತ್ತೀರಾ.

1) ಸರ್ಕಾರಿ ಆಸ್ಪತ್ರೆ 2) ಖಾಸಗಿ ಆಸ್ಪತ್ರೆ.

B. ಆರೋಗ್ಯದ ತಪಾಸಣೆ

30. ಯಾವ ಆಸ್ಪತ್ರೆಯಲ್ಲಿ ನೀವು ತಪಾಸಣೆ ಮಾಡಿಸುತ್ತೀರಿ.

1) ಸರಕಾರಿ ಆಸ್ಪತ್ರೆ 2) ಖಾಸಗೀ ಆಸ್ಪತ್ರೆ

C. ಆಹಾರ:

B. ಆರೋಗ್ಯದ ತಪಾಸಣೆ

30. ಯಾವ ಆಸ್ಪತ್ರೆಯಲ್ಲಿ ನೀವು ತಪಾಸಣೆ ಮಾಡಿಸುತ್ತೀರಿ.

1) ಸರಕಾರಿ ಆಸ್ಪತ್ರೆ 2) ಖಾಸಗೀ ಆಸ್ಪತ್ರೆ

C. ಆಹಾರ:

31. ನಿಮಗೆ ಪಡಿತರ ಚೀಟಿ ಇದೆಯೇ

1) ಹೌದು 2) ಇಲ್ಲ.

32. ಹೌದಾದರೆ

1) ಬಿ.ಪಿ.ಎಲ್ 2) ಎ.ಪಿ.ಎಲ್ 3) ಅಂತ್ಯೋದಯ

D. ವಸತಿ :

33. ಮನೆ ಇದೆಯೇ

1) ಇದೆ 2) ಇಲ್ಲ.

34. ಮನೆಯ ಸ್ವರೂಪ

1) ಗುಡಿಸಲು 2) ಮಣ್ಣಿನ ಮನೆ 3) ಶೀಟಿನ ಮನೆ 4) ಆರ್.ಸಿ.ಸಿ. ಮನೆ

35. ಸ್ನಾನಗೃಹ ಇದೆಯೇ

1) ಇದೆ 2) ಇಲ್ಲ.

36. ನಿಮ್ಮ ಮನೆಯಲ್ಲಿ ಶೌಚಾಲಯ ಇದೆಯೇ

1) ಇದೆ 1) ಇಲ್ಲ.

37. ಇಲ್ಲವಾದರೆ

1) ವೈಯಕ್ತಿಕ ಶೌಚಾಲಯ 2) ಸಮುದಾಯ ಶೌಚಾಲಯ 3) ಬಯಲು ಶೌಚಾಲಯ

38. ಇಲ್ಲವಾದರೆ ಏಕೆ

1) ಸ್ಥಳದ ಕೊರತೆ 2) ಹಣದ ಕೊರತೆ 3) ಇತರೆ ಕಾರಣಗಳು.

39. ಕುಡಿಯುವ ನೀರಿನ ಮೂಲ ಯಾವುದು

1) ವೈಯಕ್ತಿಕ ನಲ್ಲಿಗಳು 2) ಸಾರ್ವಜನಿಕ ನಲ್ಲಿಗಳು/ಟ್ಯಾಂಕುಗಳು

40. ಮನೆಯಿಂದ ಕುಡಿಯುವ ನೀರು ಎಷ್ಟು ದೂರದಲ್ಲಿದೆ.

41. ನಿಮ್ಮ ಊರಿನಲ್ಲಿ ಕುಡಿಯುವ ನೀರಿನ ಗುಣಮಟ್ಟ ಹೇಗಿದೆ.

1) ಉತ್ತಮ 2) ತೃಪ್ತಿಕರ 3) ಶೋಚನೀಯ.

42. ದಿನನಿತ್ಯ ನಿಮಗೆ ಸಿಗುವ ನೀರಿನ ಪ್ರಮಾಣ ಎಷ್ಟು (ಲೀಟರ್ ಗಳಲ್ಲಿ)

43. ಪ್ರತಿದಿನ ನಿಮ್ಮ ಕುಟುಂಬಕ್ಕೆ ಬೇಕಾಗುವಷ್ಟು ನೀರು ಸಿಗುತ್ತದೆಯೇ

1) ಹೌದು 2) ಇಲ್ಲ

III. ಆರ್ಥಿಕ ವಿವರ :

A. ಆದಾಯಕ್ಕೆ ಸಂಬಂಧಿಸಿದ ಮಾಹಿತಿ.

45. ನಿಮ್ಮ ಕುಟುಂಬಕ್ಕೆ ಯಾವ ಮೂಲಗಳಿಂದ ಆದಾಯ ಬರುತ್ತದೆ

1) ಕೂಲಿ 2) ಟೈಲರಿಂಗ್ 3) ಹೈನುಗಾರಿಕೆ 4) ಹೋಟೆಲ್ 5) ಸಣ್ಣ ವ್ಯಾಪಾರ(ತರಕಾರಿ ಮಾರುವುದು. ಸಣ್ಣ ಅಂಗಡಿ)

46. ಕುಟುಂಬದ ಸಾಲದ ಮೂಲ

1) ಸಂಬಂಧಿಕರು 2) ಹಣದ ಲೇವಾ ದೇವಿಗಾರರು 3) ಜಮೀನ್ದಾರರು 4) ವಾಣಿಜ್ಯ ಬ್ಯಾಂಕುಗಳು

5) ಇತರೆ ಸಂಸ್ಥೆಗಳು

47. ನೀವು ತೆಗೆದುಕೊಂಡ ಸಾಲವನ್ನು ಯಾವುದಕ್ಕೆ ವಿನಿಯೋಗಿಸಿದ್ದೀರಾ

1) ಮಕ್ಕಳ ಶಿಕ್ಷಣಕ್ಕಾಗಿ 2) ಮನೆಯ ದಿನನಿತ್ಯ ಖರ್ಚಿಗಾಗಿ 3) ಹಬ್ಬ ಹರಿದಿನಗಳಿಗಾಗಿ

4) ಕುಟುಂಬದ ಸಾಲದ ಮರುಪಾವತಿಗಾಗಿ 5) ಮಕ್ಕಳ ಮದುವೆಗಾಗಿ

47. ನಿಮ್ಮ ಕುಟುಂಬ ಹೊಂದಿದ ಆಸ್ತಿ

1) ಎತ್ತುಗಳು 2) ಹಸುಗಳು 3) ಎಮ್ಮೆಗಳು 4) ಮೇಕೆಗಳು 5) ಕುರಿಗಳು 6) ಕೋಳಿಗಳು

48. ನೀವು ದಿನಬಳಕೆಯ ವಸ್ತುಗಳು ಯಾವುವು

1) ಮಂಚ 2) ಟೇಬಲ್ 3) ಕುರ್ಚಿ 4) ಟಿ.ವಿ 5) ಗಡಿಯಾರ 6) ಮಿಕ್ಸಿ 7) ಗ್ಯಾಸ್ ಸ್ಟವ್ 8) ಬಟ್ಟೆ ಹೊಲಿಯುವ ಯಂತ್ರ 9) ಮೋಟರ್ ಸೈಕಲ್ 10) ಸೈಕಲ್ 11) ಫ್ರಿಜ್ಜ್

49. ನೀವು ಅಡಿಗೆ ಮಾಡಲು ಬಳಸುವ ಇಂಧನ ಯಾವುದು

1) ಎಲ್.ಪಿ.ಜಿ. 2) ಉರುವಲು ಕಟ್ಟಿಗೆ 3) ಸೀಮೆಎಣ್ಣೆ ಸ್ಟವ್ 4) ವಿದ್ಯುತ್ ಸ್ಟವ್

50. ನಿಮ್ಮ ಮನೆಗೆ ಯಾವ ರೀತಿಯ ವಿದ್ಯುತ್ ಸಂಪರ್ಕ ಇದೆ.

1) ನಾವೇ ತೆಗೆದುಕೊಂಡಿದ್ದು 2) ಸರ್ಕಾರಿ ಯೋಜನೆಯಲ್ಲಿ ಪಡೆದಿದ್ದು

IV. ರಾಜಕೀಯ ಸಬಲೀಕರಣ

A. ಸ್ಥಳೀಯ ಸಂಸ್ಥೆಗಳಿಗೆ ಸದಸ್ಯತ್ವದ ಕುರಿತು ಮಾಹಿತಿ.

56. ನೀವು ಯಾವುದಾದರೂ ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಪಡೆದಿದ್ದೀರಾ

1) ಹೌದು 2) ಇಲ್ಲ.

57. ಹೌದಾದರೆ

B. ರಾಜಕೀಯ ಭಾಗವಹಿಸುವಿಕೆಯ ಕುರಿತು ಮಾಹಿತಿ.

58. ಮತ ಚಲಾಯಿಸಲು ಭಾಗವಹಿಸಿದ್ದೀರಾ

61. ಗ್ರಾಮ ಸಭೆಗಳಲ್ಲಿ ಭಾಗವಹಿಸಿದ್ದೀರಾ

1) ಹೌದು 2) ಇಲ್ಲ.

62. ಗ್ರಾಮದ ಅಭಿವೃದ್ಧಿಯಲ್ಲಿ ರಾಜಕೀಯ ಪಾಲ್ಗೊಳ್ಳುವಿಕೆ

1) ಹೌದು 2) ಇಲ್ಲ.

C. ರಾಜಕೀಯ ಅರಿವಿಗೆ ಸಂಬಂಧಿಸಿದ ಮಾಹಿತಿ.

63. ಈಗಿನ ಗ್ರಾಮ ಪಂಚಾಯತಿಯಲ್ಲಿ ಸದಸ್ಯರು ಎಷ್ಟು

64. ಈಗಿನ ಗ್ರಾಮ ಪಂಚಾಯತಿಯ ಅಧ್ಯಕ್ಷರು ಯಾರು

65. ನಿಮ್ಮ ಊರು ಯಾವ ಕ್ಷೇತ್ರಕ್ಕೆ ಬರುತ್ತದೆ

66. ನಿಮ್ಮ ಕ್ಷೇತ್ರದ ಶಾಸಕರು ಯಾರು

67. ರಾಜ್ಯದ ಮುಖ್ಯಮಂತ್ರಿ ಯಾರು

68. ಭಾರತ ದೇಶದ ಪ್ರಧಾನಮಂತ್ರಿ ಯಾರು

ಮಾಹಿತಿದಾರರ ಸಹಿ.



ಕನ್ನಡ ವಿಶ್ವವಿದ್ಯಾಲಯ

ಅಭಿವೃದ್ಧಿ ಅಧ್ಯಯನ ವಿಭಾಗ